ಶ್ರೀಮದ್ ವೀರಶೈವ ಮಹಾ ಮಠಸ್ಥಾಪನಾಚಾರ್ಯಾಃ

ಶ್ರೀ ಜಗದ್ಗುರು ಪಂಚಾಚಾರ್ಯ ದರ್ಶನ



Q2:332
33L2

श्री जगद्गुरु पंचाचार्य दर्शन

SRI JAGADGURU PANCHACHARYA DARSHANA

CHIGATERI MILLS

Post Box No. 2

DAVANGERE - 1 (INDIA)

Manufacturers and
Exporters of Fine
Quality Cotton Yarn

Q2;332 7842
33L2

A N Rajashree & others
ed

Sri Jagadgurupancha-
Charya darshan

Q2:332
33L2

7842

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

* * * * *

Please return this volume on or before the date last stamped
Overdue volume will be charged 1/- per day.

9.12.22		

Shri Chandrahas Karur

ಗುರುರ್ಬ್ರಹ್ಮಾ ಗುರುರ್ವಿಷ್ಣುಃ।
ಗುರುರ್ದೇವೋ ಮಹೇಶ್ವರಃ॥
ಗುರುಃ ಸಾಕ್ಷಾತ್ ಪರಬ್ರಹ್ಮ।
ತಸ್ಮೈ ಶ್ರೀ ಗುರವೇನಮಃ॥

ವೀರಶೈವ ಮಹಾಮತ ಸ್ಥಾಪನಾಚಾರ್ಯ ಶ್ರೀ ಜಗದ್ಗುರು ಪಂಚ ಪೀಠಾಧಿಪತಿಗಳು



ಶ್ರೀಕಾಶೀ ಜಗದ್ಗುರು ಶ್ರೀ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು. ಶ್ರೀ ಶ್ರೀಶೈಲ ಜಗದ್ಗುರು ಶ್ರೀ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು. ಶ್ರೀ ಹಿಮವತ್ಕೇದಾರ ಜಗದ್ಗುರು ಶ್ರೀ ಶ್ರೀ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಯವರು. ಶ್ರೀಮದುಜ್ಜಯಿನೀ ಜಗದ್ಗುರು ಶ್ರೀ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀಮದ್ರಂಭಾಪುರೀ ಜಗದ್ಗುರು ಶ್ರೀ ಶ್ರೀ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು



ಶ್ರೀ ಜಗದ್ಗುರು
ಪಂಚಾಚಾರ್ಯ ದರ್ಶನ

ಶ್ರೀ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ ಸಮಿತಿ
ಮಹಂತರ ಮಠ
ಬೆಂಗಳೂರು-೨
1972

ಶ್ರೀ ಜಗದ್ಗುರು ಪಂಚಾಚಾರ್ಯ ದರ್ಶನ — 1972

* * *

ಪ್ರಕಾಶಕರು :
ಶ್ರೀ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಸಹಸ್ರ ಕುಂಭಾಭಿಷೇಕ ಸ್ವಾಗತ ಸಮಿತಿ
ಮಹಂತರ ಮಠ : ಚಿಕ್ಕಪೇಟೆ : ಬೆಂಗಳೂರು-೨

* * *

ಮುಖಚಿತ್ರ ಶಿಲ್ಪಿ : ಶ್ರೀ ಎಂ. ಎಸ್. ಪುರುಷೋತ್ತಮ ರಾವ್, ಬೆಂಗಳೂರು
ಪಡಿಯಚ್ಚು ತಯಾರಕರು :
ಪ್ರೀಮಿಯರ್ ಸ್ಟುಡಿಯೋಸ್, ಮದ್ರಾಸ್, ಷಣ್ಮುಗಂ ಪ್ರೋಸೆಸ್ ಸ್ಟುಡಿಯೋ, ಬೆಂಗಳೂರು
ಸೂಪರ್ ಪ್ರೋಸೆಸ್ ಸ್ಟುಡಿಯೋ, ಬೆಂಗಳೂರು

* * *

Q2:332
33L2

ಮುದ್ರಕರು :
ಶ್ರೀ ಎಂ. ಎಚ್. ಕೌಜಲಗಿ
ಬೃಂದಾವನ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ. ಲಿ., ಬೆಂಗಳೂರು - 4

* * *

ಲೇಖನಗಳ ಹಕ್ಕುಗಳು ಆಯಾ ಲೇಖಕರಿಗೆ ಸೇರಿದ್ದು
ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು, ಸಿದ್ಧಾಂತಗಳು ಆಯಾ ಲೇಖಕರದು

* * *

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7942

ಬೆಲೆ : ಐದು ರೂಪಾಯಿಗಳು

* * *

ಸಂಪಾದಕ ಮಂಡಲಿ :

ಅಧ್ಯಕ್ಷರು :
ಆಸ್ಥಾನ ವಿದ್ವಾನ್ ಪಂಡಿತರತ್ನಂ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ

ಸದಸ್ಯರು :
ಶ್ರೀ ಶ್ರೀ ಸೋಮಶೇಖರ ಸ್ವಾಮಿಗಳು
ಶ್ರೀ ಎ. ಹೆಚ್. ಶಿವಾನಂದಸ್ವಾಮಿ, MLC
ಶ್ರೀ ಡಿ. ರೇಣುಕಾಚಾರ್ಯ
ಶ್ರೀ ಟಿ. ಎಂ. ಶಿವಣ್ಣ
ಶ್ರೀ ಎ. ಎನ್. ರಾಜಶೇಖರಪ್ಪ
ಶ್ರೀ ಜಿ. ತೋಂಟದಪ್ಪ
ಶ್ರೀ ಜಿ. ಆರ್. ಶ್ರೀಕಂಠಪ್ಪ
ಶ್ರೀ ಎಸ್. ರುದ್ರಪ್ಪ
ಶ್ರೀ ಕೆ. ಎನ್. ವಿಶ್ವೇಶ್ವರಯ್ಯ

* * *

ಸಂಪಾದಕ - ಕಾರ್ಯದರ್ಶಿ :
ಶ್ರೀ ಎಂ. ವಿ. ಗುರುಬಸಪ್ಪ ಶೆಟ್ಟಿ

ಸಂಪಾದಕೀಯ ಮಂಡಲಿ



ಕುಳಿತಿರುವವರು : ಎಡದಿಂದ ಬಲಕ್ಕೆ ಸರ್ವಶ್ರೀ ಟಿ. ಸಿ. ಶ್ರೀಕಂಠಪ್ಪ-ಕಾರ್ಯದರ್ಶಿ, ಆಸ್ಥಾನ ವಿದ್ವಾನ್ ಪಂಡಿತರತ್ನಂ ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ-ಅಧ್ಯಕ್ಷರು. ಕೆ. ಎಂ. ನಂಜಪ್ಪ ಸ್ವಾಗತ ಸಮಿತಿ ಅಧ್ಯಕ್ಷರು,
ಶ್ರೀ ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು. ಸಿ. ವೀರಭದ್ರಯ್ಯ-ಪ್ರಧಾನ ಕಾರ್ಯದರ್ಶಿ, ಎನ್. ಆರ್. ರೇಣುಕಾರಾಧ್ಯರು-ಕೋಶಾಧಿಕಾರಿ, ಬಿ. ಎಸ್. ಮರಿಯಪ್ಪ-ಕಾರ್ಯದರ್ಶಿ
ನಿಂತಿರುವವರು ; ಸರ್ವಶ್ರೀ ಎಸ್. ರುದ್ರಪ್ಪ, ಜಿ. ತೋಟದಪ್ಪ, ಡಿ. ರೇಣುಕಾಚಾರ್ಯ ಎಂ. ವಿ. ಗುರುಬಸಪ್ಪ ಶೆಟ್ಟಿ ಸಂಪಾದಕ-ಕಾರ್ಯದರ್ಶಿ, ಎ. ಎನ್. ರಾಜಶೇಖರಪ್ಪ,ಜಿ. ಆರ್. ಶ್ರೀಕಂಠಪ ಟಿ. ಎಂ. ಶಿವಣ್ಣ.

Contribute Generously
FOR THE DEFENCE OF
OUR MOTHERLAND

We accept your contributions for the
NATIONAL DEFENCE FUND
AT ALL OUR BRANCHES ALL OVER INDIA

CANARA BANK
Head Office : **BANGALORE-2**

Over
600
Branches
and
Offices
all over India

ವಿಷಯಸೂಚಿ

	ಲೇಖಕರು	ಪುಟ
1. ಕಲ್ಪತರು	ಹಿ. ಮಾ. ನಾಗಯ್ಯ	
2. ಕರುಣಾಳು ಬಾ ಬೆಳಕೆ	ಎಂ. ವಿ. ಗುರುಬಸಪ್ಪಶೆಟ್ಟಿ	5
3. ಧರ್ಮೋರಕ್ಷತಿ ರಕ್ಷಿತಃ	ಕೆ. ಎಂ. ನಂಜಪ್ಪ	9
4. ಪ್ರಸ್ತಾವನೆ	ಬಿ. ಶಿವಮೂರ್ತಿ ಶಾಸ್ತ್ರಿ	10
5. ನಕ್ಷತ್ರ ಮಾಲಿಕಾ ಸ್ತೋತ್ರಮ್	ಶ್ರೀ ಶ್ರೀ ರಂಭಾಪುರಿ ಜಗದ್ಗುರುಗಳು	11
6. ಸಂದೇಶಗಳು		15
7. ಪಂಚ ಪೀಠಗಳ ಪರಿಚಯ		25
8. ಪಂಚಾಚಾರ್ಯ ಪ್ರಶಸ್ತಿ	ಹೆಚ್. ವ್ಹಿ. ನಾರಾಯಣ ಶಾಸ್ತ್ರಿ	43
9. ಸಫಲತೆ	ಡಿ. ರೇಣುಕಾಚಾರ್ಯ	45
10. ಮೂಡಿಬಂದ ಮಹತ್ವ।	ಸಿ. ವೀರಭದ್ರಯ್ಯ	65
11. ಸಹಸ್ರ ಕುಂಭಾಭಿಷೇಕ ಪ್ರಭಾವ	ಆರ್. ಹೆಚ್. ವೀರಭದ್ರಯ್ಯ ಸ್ವಾಮಿಗಳು	69
12. ಪಂಚ ಸಾದಾಖ್ಯ ತತ್ವಗಳ ನಿರ್ಣಯ	ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು	73
13. ಆಧುನಿಕ ಸಾಹಿತ್ಯಕ್ಕೆ ವೀರಶೈವರ ಕೊಡುಗೆ	ಓ. ಎನ್. ಲಿಂಗಣ್ಣಯ್ಯ	77
14. ವಚನ ಸಾಹಿತ್ಯದ ಮಹತ್ವ	ಜೇರಿಗೆ ಕಟ್ಟೆ ಬಸಪ್ಪ	81
15. ಶೈವ ದರ್ಶನಗಳಲ್ಲಿ ವೀರಶೈವರ ಸ್ಥಾನ	ಎಂ. ಜಿ. ನಂಜುಂಡಾರಾಧ್ಯ	85
16. ವೀರಶೈವ ರಾಜ ಮನೆತನ	ಬಿ. ಶಿವಮೂರ್ತಿ ಶಾಸ್ತ್ರಿ	95
17. ಸಿದ್ಧಾಂತ ಶಿಖಾಮಣಿ-ಶಿವಯೋಗಿ ಶಿವಾಚಾರ್ಯ	ಡಿ. ರೇಣುಕಾಚಾರ್ಯ	103
18. ಜಗದ್ಗುರು ಶ್ರೀ ರೇಣುಕಾಚಾರ್ಯರ ಸಾಹಿತ್ಯ	ಜಿ. ವಿ. ಶಿವಸ್ವಾಮಿ	113
19. ಕಾಶ್ಮೀರ ಶೈವ-ವೀರಶೈವ ಸೂಕ್ಷ್ಮ ಪರಿಚಯ	ಡಾ. ಜಿ. ರುದ್ರಪ್ಪ	119
20. ಶ್ರೀ ನಿಜಗುಣ ಶಿವಯೋಗಿ	ಪಂಡಿತ ಷಣ್ಮುಖಯ್ಯ	123
21. ವಿಶ್ವಶಾಂತಿಗೆ ಧರ್ಮದ ಮಾರ್ಗದರ್ಶನ	ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು	129
22. ವೀರಶೈವ: ಪ್ರಾಚೀನತೆ, ಪ್ರಗತಿ	ಡಾ॥ ಸಾ. ಶಿ. ಮರುಳಯ್ಯ	133
23. ವೀರಶೈವ ಭಾಷ್ಯಗಳು	ಡಾ॥ ಸಿದ್ಧಪ್ಪಾರಾಧ್ಯ	136
24. ಶ್ರೀ ಪಂಡಿತಾರಾಧ್ಯರು—ಶ್ರೀಶೈಲ ಕ್ಷೇತ್ರ	ಶ್ರೀ ಭೊ. ಜೂಗಪ್ಪ	147
25. ಶ್ರೀ ರಂಭಾಪುರಿ ಜಗದ್ಗುರುಗಳ ಶಿವಪೂಜೆ ಸಮೀಕ್ಷೆ	ಶ್ರೀಮತಿ ಸುಲೋಚನಾದೇವಿ ಆರಾಧ್ಯ	153
26. ಸದ್ಧರ್ಮ ಪೀಠಾಧೀಶ್ವರರು	ಶಿವಪ್ರಕಾಶ ಶಿವಾಚಾರ್ಯಸ್ವಾಮಿಗಳು	161
27. ವೀರಶೈವ ಧರ್ಮಪೀಠಗಳ ಪುರಾತನತ್ವ	ಶಂಕರಾರಾಧ್ಯ	165

		ಲೇಖಕರು	ಪುಟ
28.	ಅಷ್ಟಾವರ್ಣ	ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು	169
29.	ವೇದಕಾಲದ ಶಿವಾನುಭವ ಧರ್ಮ	ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು	179
30.	ಜಗದ್ಗುರು ಪಂಚಾಚಾರ್ಯರೇ ವೀರಶೈವ ಮತಸ್ಥಾಪಕರು	ಪಂಚಾಕ್ಷರ ಸ್ವಾಮಿಗಳು	183
31.	ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆ	ಚಂದ್ರ ಶೇಖರ ಶಾಸ್ತ್ರಿ	187
32.	ಲಂಕೆಯಲ್ಲಿ ಶ್ರೀ ರೇಣುಕಾಶ್ರಮ	ವೀರಯ್ಯ ಶಾಸ್ತ್ರಿ	191
33.	ಪಂಚಾಚಾರ್ಯರ ಪರಂಪರೆ	ಕೆ. ಜಯಸ್ವಾಮಿ	195
34.	ವೀರಶೈವ ಮತೋತ್ಪತ್ತಿ	ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು	199
35.	ಶಿವಾದ್ವೈತ ಮತ ಹಾಗೂ ಮತಾಚಾರ್ಯರು	ರೇಣುಕ ಶಿವಾಚಾರ್ಯರು	205
36.	ಜಗದ್ಗುರು ರೇಣುಕಾಚಾರ್ಯ ಲಿಂಗಾವತಾರ	ಬಸವರಾಜಯ್ಯ	213
37.	ಮರುಳಾರಾಧ್ಯರ ಜೀವನ ಚರಿತ್ರೆ	ಶಿವರುದ್ರ ಸ್ವಾಮಿ	219
38.	ಪಂಚ ಕ್ಷೇತ್ರಗಳು	ಶಾಮಲಾದೇವಿ ಉಮಾಪತಿ	223
39.	ನಮ್ಮ ಶಿಕ್ಷಣ ಕ್ರಮ	ಬಿ. ಎಸ್. ಮರಿಯಪ್ಪ	229
40.	ವೀರಶೈವ ಸಂಸ್ಕೃತಿಯ ಸಂದೇಶ	ಹೆಚ್. ಜಿ. ಶಿವಣ್ಣ	234
41.	ಪಂಚಾಕ್ಷರಿ ಮಂತ್ರದ ಸ್ವರೂಪ	ಕೆ. ಎಸ್. ವಿರೂಪಾಕ್ಷಯ್ಯ	239
42.	ಮುಕ್ತಿ ಮಂದಿರದ ಮಹರ್ಷಿ	ಸೋಮ ಕುಮಾರ	243
43	ವೀರಶೈವ ಸಮಾಜದ ಸಂಘಟನೆ	ಶ್ರೀ ರೇಣುಕ ದೇವರು	247
44	ಜಗದ್ಗುರು ಶ್ರೀ ರೇಣುಕಾಚಾರ್ಯ ಕಾಲೇಜಿನ ಹಿನ್ನೆಲೆ	– –	251
45	ಜಗದ್ಗುರು ಶ್ರೀ ರೇಣುಕಾಚಾರ್ಯ ಕಾಲೇಜು	– –	257
46	ಓ. ತಾಯಿ ತ್ರಿಶೂಲಿ ಕಾಪಾಲಿ	ವೈ. ಎಂ. ಶ್ರೀಕಂಠಯ್ಯ	259
47	ಸಮರ್ಪಣೆ	ಬಿ. ಎಸ್. ಚಂದ್ರಕಲಾ	261
48	Veerasaivism in Tamil Nadu	Nagaraja Manigar	263
49	ಸಮಾಜವಾದ ವೀರಶೈವರ ತತ್ವ	ಎ. ಎಚ್. ಶಿವಾನಂದಸ್ವಾಮಿ	267
50	ಸಮಾಜವಾದ ಏಕೆ	ಶ್ರೀ ಸಿ. ಎಂ. ಎಸ್. ಶಾಸ್ತ್ರೀ	271
51	ಶ್ರೀ ಉಜ್ಜಯಿನಿ ಸದ್ಧರ್ಮ ಪೀಠ	ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು	275
52	ವೀರಶೈವ ಧರ್ಮ ವಿಶ್ವಧರ್ಮ	ಟಿ. ಆರ್. ಚನ್ನಪ್ಪ	279
53	ಶ್ರೀಶೈಲ ಕ್ಷೇತ್ರ ಮತ್ತು ಶ್ರೀಶೈಲ ಜಗದ್ಗುರು ಪೀಠ	ಪಂ॥ ಚಂದ್ರಶೇಖರ ಶಾಸ್ತ್ರೀ ಕಾವ್ಯತೀರ್ಥ	283

ಕಲ್ಪತರು

ನಾನು ಹೊತ್ತಿಹ ನನ್ನ ಈ ಪುಟ್ಟದೇಹದೊಳು
ಮಣ್ಣು, ಗಾಳಿಯು, ಬೆಂಕಿ, ನೀರು, ಆಕಾಶಗಳು;
ಮೇಳವಿಸಿ ಮಾರ್ಪೊಳೆದು ಬಣ್ಣ ಬದಲಾಗಿಹವು
ನನ್ನ ಕಾಣುವ ಕಣ್ಣು ನನ್ನ ಕಾಣದೆ ಇಹವು !!!

ಮಣ್ಣಿರಲು ಧೂಳಿಲ್ಲ! ನೀರಿರಲು ತಂಪಿಲ್ಲ!
ಬೆಂಕಿ ಇದೆ ಸುಡುತಿಲ್ಲ! ಗಾಳಿ ಇದೆ ಬೀಸಲ್ಲ!
ಆಕಾಶವಿದೆ ಇಲ್ಲಿ-ಬಯಲೆನ್ನುವಂತಿಲ್ಲ!!
ಈ ಕಥೆಯು ಬಹು ಸೊಗಸು, ಹೇಳಿದರೆ ತಿಳಿಯಲ್ಲ!!

ಈ ಎಲ್ಲ ತತ್ವದಲಿ ತುಂಬಿಹುದು ಓಂಕಾರ
ಆದರಿಂದಲೇ ನಾನು ಈ ಜಗದಿ ಸಾಕಾರ
ಇದಕೆಲ್ಲ ನೀನೊಬ್ಬ, ಓ ಶಿವನೆ ಪರತೇಜ,
ಇಟ್ಟಿರುವೆ ಎನ್ನೊಳಗೆ ಭಾವವೆನ್ನುವ ಬೀಜ!

ಇದು ಮೊಳೆತು ಸಸಿಯಾಗಿ, ಸಸಿ ಬೆಳೆದು ಮರವಾಗಿ
ಭುವಿಯ ಭಾವುಕರಿಂಗೆ ಸುರ ಕಲ್ಪ ತರುವಾಗಿ
ನಾನು ನಿನ್ನಯ ತೇಜದೊಳು ಬಂದು ಬೆರೆದಾಗ
ನಿನ್ನ ಕುರುಹಾಗಲ್ಲೈ ಈ ಕಲ್ಪತರುವಾಗ!!

—ಹಿ. ಮ. ನಾ.

ಕರುಣಾಳು ಬಾ ಬೆಳಕೆ....

ವಿಜ್ಞಾನ ವಿಜಯದ ವೈಜಯಂತಿಯನ್ನು ಚಂದ್ರ ಬತೇರಿಯಲ್ಲಿ ಏರಿಸಿ, ಬ್ರಹ್ಮಾಂಡದ ಇತರೆ ದೂರ ದೂರದ ಗ್ರಹಗಳತ್ತಲೂ ಕೈಚಾಚಿರುವ, 'ವಾಮನ ಮಾನವ', ಧರ್ಮವೇದಿಕೆಯಲ್ಲಿ ನಿಂತು ಶಾಂತಿ, ಸಹ ಬಾಳ್ವೆಯ ನೆಮ್ಮದಿಯ ನಿಶಾನೆ ಹಿಡಿದು, ಮುಗಿಲಿನೆತ್ತರಕ್ಕೂ ಏರಲಾರದೆ ಪರಿತಪಿಸುತ್ತಿರುವುದು, ಸತ್ಯವಾದರೂ ಸೋಜಿಗ. ಅಣುವನ್ನು ವಿಭು ಮಾಡಿ, ಚಿಟಿಕೆ ಹಾರಿಸುವುದರಲ್ಲಿಯೇ ಭೂಮಂಡಲವನ್ನು ಪುಡಿಪುಡಿ ಮಾಡಬಲ್ಲ ದೈತ್ಯ ಶಕ್ತಿಯನ್ನು ಸಾಧಿಸಿಕೊಂಡಿರುವ ಆಧುನಿಕ ಅತಿಮಾನವ ಪೃಥ್ವಿಯಲ್ಲಿ ಉಭಯಕುಶಲೋಪರಿ ವಿನಿಮಯಕ್ಕೆ, ಬದುಕಿ ಬದುಕಿಸುವ ಶಾಂತಿಮಂತ್ರ ಶ್ರವಣಕ್ಕೆ ಕಿವುಡಾಗಿದ್ದಾನೆ. ವಿಜ್ಞಾನದ ವಿಜಯ, ಸಂಶೋಧನೆಯ ಸತ್ಫಲ ಮನುಕುಲದ ಕುಶಲಕ್ಕೆ ವಿನಿಯೋಗಿಸಲು ಮೊಂಡಾಟ ನಡೆಸಿದ್ದಾನೆ; ಪ್ರಕೃತಿಯೊಡನೆಯೇ ಪೈಪೋಟಿಗೆ ನಿಂತಿದ್ದಾನೆ; ನರನು, ನರನ ಸುಲಿದಿದ್ದಾನೆ; ನುಡಿಯೇ ಕಿಡಿಯಾಗಿ, ಮಾತೆತ್ತಿದರೂ ಸಮರ ಕಹಳೆ ಕೂಗಿಸಿ, 'ನರಮೇಧ' ಕ್ಕೆ ಅಣಿಯಾಗುತ್ತಿದ್ದಾನೆ. ಈ ಬಲಪ್ರದರ್ಶನದ ಸಂತೆಯಲ್ಲಿ ಧರ್ಮ ಮೂಲೆಗುಂಪಾಗಿದೆ; ಈ ಗದ್ದಲದ ಅಬ್ಬರದಲ್ಲಿ ಶಾಂತಿಯ ಕರೆ, ಸಹಜೀವನದ ಮೊರೆ ಅಡಗಿ ಕುಳಿತಿದೆ. ಈ ಪೈಶಾಚಿಕ ಕುರುಕ್ಷೇತ್ರದಲ್ಲಿ ಮಾನವಕುಲ ನಿರ್ನಾಮವಾದರೆ, ಈ ಭುವಿಯಲ್ಲಿ ಉಳಿಯುವವರಾರು?— ಈ ಮಹಾ ಪ್ರಳಯಕ್ಕೆ ಆಹ್ವಾನವೇಕೆ?

ಜಗತ್ತಿನಲ್ಲಿ ಮುಸುಕಿರುವ ಈ ಮಬ್ಬಿನಲ್ಲಿ ಮತ್ತೆ ಶಾಂತಿಯ ಅರುಣೋದಯವಾಗಿ, ಮಾನವನನ್ನು ಮಾನವ್ಯದತ್ತ, ಶಾಂತಿಪಥದತ್ತ ಕರೆದೊಯ್ಯುವ ಕರುಣಾಳು ಬೆಳಕೊಂದು ಧರೆಗೆ ಅವತರಿಸಬೇಕಾಗಿದೆ. ಶಾಂತಿಪ್ರಿಯ ಮಾನವರೆಲ್ಲ ಈ ಕರುಣಾಳು ಬೆಳಕಿನ ಅವತರಣಕ್ಕೆ ಅನವರತ ಹಾರೈಸುವುದು ಸಹಜವಾಗಿದೆ.

ಇದೀಗ ನಿಮ್ಮ ಕೈಲಿರುವ 'ಶ್ರೀ ಪಂಚಾಚಾರ್ಯ ದರ್ಶನ' ಉತ್ಸವ ಸಮಿತಿಯವರು ನಡೆಸಿದ ಪಂಚ ಜಗದ್ಗುರುಗಳ ಅಡ್ಡ ಪಾಲಕಿ ಉತ್ಸವ, ಸಹಸ್ರ ಕುಂಭಾಭಿಷೇಕ ಕಾರ್ಯಕ್ರಮ ಇವುಗಳೆಲ್ಲವೂ—ಮನುಕುಲದ ನೆಮ್ಮದಿ, ವಿಶ್ವಶಾಂತಿ, ಭಾರತ ಕಲ್ಯಾಣ ಹಾಗೂ ಕರುಣಾಳು ಬೆಳಕಿನ ಉದಯಕ್ಕೆ ಪೂರಕವಾಗಿಯೇ ನಡೆಯಿತು. ಧರ್ಮ ಜಾಗೃತಿಗಾಗಿ ಈ ಧರ್ಮೋತ್ಸವಗಳು; ಶಾಂತಿ ಸ್ಥಾಪನೆಗಾಗಿ ಪೂಜಾದಿ ದೈವೀಕಲಾಪಗಳು.

ಧರ್ಮಜಾಗೃತಿಯ ಈ ಐತಿಹಾಸಿಕ ಸಂದರ್ಭದ ಶಾಶ್ವತ ಸವಿನೆನಪಿಗಾಗಿ ಪ್ರಕಟಗೊಂಡಿರುವ ಈ ವಿಸ್ತಾರ ಗ್ರಂಥ ಶಾಂತಿಪ್ರಿಯರಿಗೆ, ಜ್ಞಾನಪಿಪಾಸುಗಳಿಗೆ, ಧರ್ಮಪ್ರವರ್ತಕರಿಗೆ ಸುಪ್ರಿಯವಾಗುವುದರಲ್ಲಿ ಸಂಶಯವೇ ಇಲ್ಲ. ವಿವೇಚನೆ, ಶ್ರಮ, ಸಾಹಸಗಳ ಭೂಮಿಕೆಯಲ್ಲಿ ಮೈತಳೆದು ಬಂದಿರುವ ಈ ಗ್ರಂಥ "ಆಂಗ್ಲೈಯ ಗುರುಕುಲ" ವಾಗಿದ್ದು, ಜ್ಞಾನ ಲೋಕಕ್ಕೊಂದು ಬೆಳಕಿಂಡಿಯಾಗಿ ಮೂಡಿದೆಯೆಂದರೆ ಖಂಡಿತ ಉತ್ಪ್ರೇಕ್ಷೆಯಾಗದು.

ಈ ಮಹಾಕಾರ್ಯಕ್ಕೆ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ವೀರಭದ್ರಯ್ಯನವರು ಮತ್ತು ಅವರ ಸಂಗಡಿಗರು ಹೆಜ್ಜೆ ಹೆಜ್ಜೆಗೂ ನೀಡಿದ ಸಹಕಾರ, ಗ್ರಂಥದ ಯಶಸ್ಸಿನ ಪ್ರಥಮ ಸೋಪಾನ. ಸ್ಮರಣ ಸಂಚಿಕೆಯ ಅಧ್ಯಕ್ಷ ಆಸ್ಥಾನ ವಿದ್ವಾನ್, ಪಂಡಿತ ರತ್ನಂ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಪಾಂಡಿತ್ಯ ಪೂರ್ಣ ಮಾರ್ಗದರ್ಶನ ನಮಗೆ ಮಹೋಪಕಾರ ಮಾಡಿದೆ. ಲೇಖನಗಳ ಪರಿಷ್ಕಾರದಲ್ಲಿ ವಿದ್ವಾಂಸರಾದ ಶ್ರೀ ಡಿ. ರೇಣುಕಾಚಾರ್ಯರು ಮತ್ತು ಶ್ರೀ ಜೀರಿಗೆ ಕಟ್ಟೆ ಬಸವಪ್ಪನವರು ನೀಡಿದ ನೆರವು ಸ್ಮರಣೀಯ.

ಗ್ರಂಥದ ವಿನ್ಯಾಸ, ಅಲಂಕರಣ, ಮುದ್ರಣದ ಒಪ್ಪಓರಣಗಳ ಬಗ್ಗೆ ಸಂಪಾದಕರೊಡನೆ ಸತತ ಸಹಕರಿಸಿದ ಸಾಹಿತಿ, ಪತ್ರಕರ್ತ ಶ್ರೀ ವೈ. ಸು. ಶೇಷಗಿರಿರಾಯರ ಸೇವೆ ಉಲ್ಲೇಖನಾರ್ಹ.

ಅತ್ಯಲ್ಪ ಕಾಲದಲ್ಲಿ ಈ ಸ್ಮರಣ ಸಂಚಿಕೆಯನ್ನು ಅಂದಚಂದದಿಂದ ಅಚ್ಚುಮಾಡಿಕೊಟ್ಟ, ಬೆಂಗಳೂರಿನ ಬೃಂದಾವನ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈವೇಟ್ ಲಿ., ನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀಮಾನ್ ಎಂ. ಎಚ್. ಕೌಜಲಗಿಯವರು, ಫೋರ್‌ಮನ್ ಶ್ರೀ ಎ. ನರಸಿಂಹಯ್ಯನವರು ಮತ್ತು ಮುದ್ರಣಾಲಯದ ಎಲ್ಲ ಕಾರ್ಮಿಕ ಬಂಧುಗಳ ಶ್ರದ್ಧಾಪೂರಿತ ಶ್ರಮ ಸ್ಮರಣೀಯ.

'ಶ್ರೀ ಪಂಚಾಚಾರ್ಯ ದರ್ಶನ' ಉದ್ಗ್ರಂಥವಾಗಿ ಉಳಿಯುಲು ಸರ್ವದೃಷ್ಟಿಗಳಿಂದಲೂ ಶ್ರಮಿಸಿ ಧನ್ಯನಾಗಿದ್ದೇನೆ. ಆ ಧನ್ಯತೆ ನಿಮ್ಮಲ್ಲಿಯೂ ಮೂಡಿದರೆ ನಾನು ಕೃತಕೃತ್ಯ.

ಬೆಂಗಳೂರು
7–1–1972

ಎಂ ಸಿ ಗುರುಬಸಪ್ಪಶೆಟ್ಟಿ.
ಸಂಪಾದಕ-ಕಾರ್ಯದರ್ಶಿ

ಸ್ಥಾಪನೆ: 1963 ಫೋನ್ ನಂ: 244

ತುಮಕೂರು ಗ್ರೈನ್ ಮರ್ಚೆಂಟ್ಸ್
ಕೋ-ಆಪರೇಟಿವ್ ಬ್ಯಾಂಕ್ ಲಿ.,
ತುಮಕೂರು

ಅಧಿಕೃತ ಷೇರು ಬಂಡವಾಳ	ರೂ.	10,00,000=00
ವಸೂಲಾಗಿರುವ ಷೇರು ಮೊಬಲಗು ...	ರೂ.	6,17,700=00
ಡಿಪಾಜಿಟ್‌ಗಳು	ರೂ.	36,83,834=52
ರಿಜರ್ವ್ ಫಂಡ್ ಮತ್ತು ಇತರೆ ಫಂಡ್‌ಗಳು	ರೂ.	3,27,000=00
ನಿವ್ವಳ ಆದಾಯ ತಾರೀಖು 30-6-1971ರ ವರೆಗೆ ...	ರೂ.	1,61,999=03

ವಿವಿಧ ಡಿಪಾಜಿಟ್‌ಗಳ ಮೇಲೆ ಬಡ್ಡಿಯ ದರಗಳು.

- ★ ಕರೆಂಟ್ ಡಿಪಾಜಿಟ್ ಮೇಲೆ ಶೇ 1%ರಂತೆ
- ★ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ ಮೇಲೆ ಶೇ 5%ರಂತೆ
- ★ ಫಿಕ್ಸೆಡ್ ಡಿಪಾಜಿಟ್ ಮೇಲೆ ಶೇ 6%ರಿಂದ 8%ರ ವರೆಗೆ
- ★ ಕಾಲ್ ಡಿಪಾಜಿಟ್ ಮೇಲೆ (ಏಳು ದಿವಸಗಳ ವಾಯಿದೆ ಡಿಪಾಜಿಟ್) ಶೇ 5%ರಂತೆ
- ★ ಜಯಲಕ್ಷ್ಮಿ ಸೇವಿಂಗ್ಸ್ ಸ್ಕೀಮ್‌ಗೆ ಶೇ 2%ರಿಂದ 4%ರ ವರೆಗೆ

ಎಲ್ಲಾ ವಿಧವಾದ ಬ್ಯಾಂಕಿಂಗ್ ವ್ಯವಹಾರಗಳನ್ನೂ ನಡೆಸಲಾಗುತ್ತದೆ.

ಎ.ಕೆ.ಎ. ಪಾರ್ಶ್ವನಾಥ್
ಅಧ್ಯಕ್ಷರು

ಡಿ. ಎಸ್. ಕಾಂತರಾಜಯ್ಯನವರು
ಉಪಾಧ್ಯಕ್ಷರು

ಪಿ.ಜಿ. ಶ್ರೀನಿವಾಸಶೆಟ್ಟಿ
ಕೋಶಾಧಿಕಾರಿ

ಟಿ.ಎಸ್. ಸಿದ್ದಪ್ಪ ಮತ್ತು ಎನ್.ಆರ್. ಜಗದೀಶ್
ಕಾರ್ಯದರ್ಶಿಗಳು

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಸಹಸ್ರ ಕುಂಭಾಭಿಷೇಕ ಸ್ವಾಗತಸಮಿತಿ ಮತ್ತು ಉಪಸಮಿತಿಗಳ ಸದಸ್ಯರುಗಳು.

ಸ್ವಾಗತ ಸಮಿತಿ

ಶ್ರೀಗಳಾದ

ಕೆ. ಎಂ. ನಂಜಪ್ಪನವರು ಮಾಜಿ ಮೇಯರ್	ಅಧ್ಯಕ್ಷರು
ಡಿ. ಬಿ. ಎಸ್. ಗುರುಸಿದ್ದಪ್ಪ ಶೆಟ್ಟರು	ಉಪಾಧ್ಯಕ್ಷರು
ಯಜಮಾನ್ ಕೆಂಚಪ್ಪನವರು	"
ಪಿ. ಶಿವಶಂಕರ್‌ರವರು	"
ಜಿ. ಸಾಂಬಶಿವಯ್ಯನವರು	"
ಆರ್. ಚಂದ್ರಶೇಖರಯ್ಯನವರು	"
ಎ. ಹೆಚ್. ಶಿವಾನಂದ ಸ್ವಾಮಿಗಳು, ಎಂ.ಎಲ್.ಸಿ.	"
ಡಿ. ಎಂ. ಶಂಕರಪ್ಪನವರು	"
ಜಿ. ಮಹಾದೇವಪ್ಪನವರು, ದಾವಣಗೆರೆ	"
ಸಿ. ವೀರಭದ್ರಯ್ಯನವರು	ಪ್ರಧಾನ ಕಾರ್ಯದರ್ಶಿಗಳು
ಟಿ. ಸಿ. ಶ್ರೀಕಂಠಪ್ಪನವರು	ಕಾರ್ಯದರ್ಶಿಗಳು
ಬಿ. ಎಸ್. ಮರಿಯಪ್ಪನವರು	"
ಎನ್. ಆರ್. ರೇಣುಕಾರಾಧ್ಯರು	ಕೋಶಾಧಿಕಾರಿಗಳು

ಕಾರ್ಯಕಾರಿ ಸಮಿತಿ ಸದಸ್ಯರುಗಳು

ಶ್ರೀಗಳಾದ

ಉಮೇಶರುದ್ರ (ದೇಶದ ಶೆಟ್ಟರು)
ಜಿ. ಚನ್ನಸೋಮಣ್ಣನವರು
ಜಿ. ಆರ್. ಶ್ರೀಕಂಠಪ್ಪನವರು
ಎ. ಆರ್. ರೇವಣ್ಣಸಿದ್ದಪ್ಪನವರು
ಎ. ಎನ್. ರಾಜಶೇಖರಪ್ಪನವರು
ಕೆ. ಎನ್. ಗುಬ್ಬಣ್ಣನವರು
ಎಸ್. ರುದ್ರಾರಾಧ್ಯರು
ಟಿ. ಎಂ. ಶಿವಣ್ಣನವರು
ಎನ್. ಆರ್. ಜಗದೀಶಾರಾಧ್ಯರು, ತುಮಕೂರು
ಕೆ. ಬಕ್ಕಯ್ಯನವರು, ದಾವಣಗೆರೆ

ಶ್ರೀಗಳಾದ

ಬಿ. ಎಸ್. ಶಂಕರಪ್ಪಶೆಟ್ಟರು
ಎನ್. ಸಿ. ಸಿದ್ದಲಿಂಗಪ್ಪನವರು
ಜಿ. ಚಿದಾನಂದ ಮೂರ್ತಿಗಳು, ತುಮಕೂರು
ಟಿ. ಎಸ್. ಸಿದ್ದಪ್ಪನವರು, ತುಮಕೂರು
ಪಿ. ಎನ್. ಸುಬ್ಬರಾಯಪ್ಪನವರು, ಮೈಸೂರು
ಎಸ್. ಎಂ. ರುದ್ರಪ್ಪನವರು, ಮೈಸೂರು
ಪಿ. ಸದಾನಂದರವರು, ಮೈಸೂರು
ಸಾಸಲು ಗಂಗಾಧರಪ್ಪನವರು, ತಿಪಟೂರು
ಜಿ. ಕರಿಸಿದ್ದಯ್ಯನವರು, ತಿಪಟೂರು
ಬಿ. ಪಿ. ಬಸಪ್ಪಶೆಟ್ಟರು, ಆಲ್ದೂರು
ಜಿ. ವಿ. ಎಸ್. ಮರುಳಯ್ಯನವರು, ಶಿವಮೊಗ್ಗ
ಎ. ಎಂ. ಬಸವೇಗೌಡರು, ಚಿಕ್ಕಮಗಳೂರು
ಸಿ. ಎಂ. ಎಸ್. ಶಾಸ್ತ್ರಿಗಳು, ಚಿಕ್ಕಮಗಳೂರು
ಸಿ. ಆರ್. ನಿರ್ವಾಣಪ್ಪ ಶೆಟ್ಟರು, ಚಿಕ್ಕಮಗಳೂರು
ಶ್ರೀ ಶಿವಸ್ವಾಮಿಯವರು, ತುಮಕೂರು
ಎಂ. ಕೊಟ್ಟೂರ್ ಬಸವಯ್ಯನವರು, ಚಿತ್ರದುರ್ಗ
ಶರಣಗೌಡರು ಇನಾಂದಾರ್, ಗುಲ್ಬರ್ಗ
ಬಿ. ಎನ್. ಗುರುನಂಜುಂಡಪ್ಪನವರು, ಕೋಲಾರ
ಬಿ. ಎಸ್. ನಂಜುಂಡಪ್ಪನವರು, ಬಂಗಾರಪೇಟೆ

ಅರ್ಥ ಸಮಿತಿ

ಶ್ರೀಗಳಾದ

ಕೆ. ಎಂ. ನಂಜಪ್ಪನವರು
ಎ. ಹೆಚ್. ಶಿವಾನಂದ ಸ್ವಾಮಿಯವರು
ಸಿ. ವೀರಭದ್ರಯ್ಯನವರು
ಟಿ. ಸಿ. ಶ್ರೀಕಂಠಪ್ಪನವರು
ಎನ್. ಆರ್. ರೇಣುಕಾರಾಧ್ಯರು
ಬಿ. ಎಸ್. ಮರಿಯಪ್ಪನವರು

ಶ್ರೀಗಳಾದ

ಜಿ. ಆರ್. ಶ್ರೀಕಂಠಪ್ಪನವರು
ಟಿ. ಎಂ. ಶಿವಣ್ಣನವರು
ಎ. ಎನ್. ರಾಜಶೇಖರಪ್ಪನವರು
ಕೆ. ಎನ್. ವಿಶ್ವೇಶ್ವರಯ್ಯನವರು
ಕೆ. ಬಕ್ಕಯ್ಯನವರು

ಆಹಾರ ಮತ್ತು ವಸತಿ ಸಮಿತಿ

ಶ್ರೀಗಳಾದ

ಯಜಮಾನ್ ಕೆಂಚಪ್ಪನವರು—ಸಂಚಾಲಕರು
ಜಿ. ತೋಟದಪ್ಪನವರು
ಬಿ. ಆರ್. ರೇಣುಕರವರು
ಡಿ. ಬಿ. ವೀರಣ್ಣನವರು
ಸಿ. ವೀರಭದ್ರಯ್ಯನವರು
ಬಿ. ಎಸ್. ಮರಿಯಪ್ಪನವರು
ಎ. ಎನ್. ರಾಜಶೇಖರಪ್ಪನವರು
ಎನ್. ರಾಜಶೇಖರಯ್ಯನವರು
ಹೆಚ್. ಜಿ. ಶಿವಣ್ಣನವರು

ಪೂಜಾ ಸಮಿತಿ

ಶ್ರೀಗಳಾದ

ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು (ಸಂಚಾಲಕರು)
ಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು
ಶ್ರೀ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು
ಶ್ರೀ ರೇಣುಕಶಿವಾಚಾರ್ಯ ಸ್ವಾಮಿಗಳು
ಜಿ. ತೋಟದಪ್ಪನವರು
ಎಸ್. ವಿಶ್ವನಾಥಪ್ಪನವರು
ಕೆ. ಎನ್. ಗುಬ್ಬಣ್ಣನವರು
ಎಸ್. ಆರ್. ಚಂದ್ರಣ್ಣನವರು

ಶ್ರೀಗಳಾದ

ಟಿ. ಆರ್. ಚೆನ್ನಪ್ಪನವರು (ಶೀತ)
ಕೆ. ಎಸ್. ವಿರೂಪಾಕ್ಷಯ್ಯನವರು
ಕೆ. ಸಿ. ಪುಟ್ಟಪ್ಪನವರು
ಟಿ. ಎಸ್. ರೇವಣಸಿದ್ಧಪ್ಪನವರು

ಉತ್ಸವ ಸಮಿತಿ

ಶ್ರೀಗಳಾದ

ಟಿ. ಆರ್. ರಾಜಶೇಖರಯ್ಯನವರು (ಸಂಚಾಲಕರು)
ಎಸ್. ಎಂ. ವೀರಭದ್ರಯ್ಯನವರು
ಯಜಮಾನ್ ಕೆಂಚಪ್ಪನವರು
ಕೆ. ಎಸ್. ವಿರೂಪಾಕ್ಷಯ್ಯನವರು
ಟಿ. ಕೆ. ಮಲ್ಲಣ್ಣನವರು
ಟಿ. ಸಿ. ಶ್ರೀಕಂಠಪ್ಪನವರು
ಆರ್. ಗಂಗಪ್ಪನವರು
ಸಂಗನಾಳಮಠ ಪಂಚಾಕ್ಷರಯ್ಯನವರು

ಪ್ರಚಾರ ಸಮಿತಿ

ಶ್ರೀಗಳಾದ

ಸಿ. ವೀರಭದ್ರಯ್ಯನವರು
ಜಿ. ರುದ್ರಯ್ಯನವರು
ಬಿ. ಎಸ್. ಮರಿಯಪ್ಪನವರು
ಎ. ಎನ್. ರಾಜಶೇಖರಪ್ಪನವರು
ಎಂ. ವಿ. ಗುರುಬಸಪ್ಪ ಶೆಟ್ಟಿಯವರು
ಜಿ. ಆರ್. ಶ್ರೀಕಂಠಪ್ಪನವರು
ಕೆ. ಎನ್. ವಿಶ್ವೇಶ್ವರಯ್ಯನವರು
ಎನ್. ಆರ್. ರೇಣುಕಾರಾಧ್ಯರು
ಟಿ. ಸಿ. ಶ್ರೀಕಂಠಪ್ಪನವರು

ಧರ್ಮೋ ರಕ್ಷತಿ ರಕ್ಷಿತಃ

ಭಾರತ ಧರ್ಮಭೂಮಿ. ಇಲ್ಲಿನ ವಿಚಾರ, ಆಚಾರ, ನಡೆ ನುಡಿಗಳೆಲ್ಲಕ್ಕೂ ಧರ್ಮವೇ ಆಧಾರ, ಬುನಾದಿ. ಭಾರತೀಯರಿಗೆ ಬಹುಶಃ ಧರ್ಮದಲ್ಲಿರುವಷ್ಟು ನಂಬಿಕೆ ಬೇರೆ ಯಾವುದರ ಬಗೆಗೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇದು ನಮ್ಮ ಸಂಸ್ಕೃತಿ; ಪರಂಪರೆ.

ಧರ್ಮಕ್ಕೆ ವಿಸ್ತಾರವಾದ ಅರ್ಥವಿದೆ. ಮಹಾಪ್ರಬಂಧಗಳಲ್ಲಿಯೂ ಇದರ ಅರ್ಥವ್ಯಾಪ್ತಿಯನ್ನು ವಿವರಿಸುವುದು ಕಷ್ಟವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಧರ್ಮವು ಮಾನವನನ್ನು ಶಾಂತಿಯುತ ಸಹಬಾಳ್ವೆಗೆ ಪ್ರೇರೇಪಿಸುತ್ತದೆ; ಅವನನ್ನು ಉನ್ನತ ವಿಚಾರದಲ್ಲೂ, ಉತ್ತಮ ವಿಹಾರದಲ್ಲೂ ಲೀನನನ್ನಾಗಿ ಮಾಡಲು ಮಾರ್ಗದರ್ಶಿಯಾಗುತ್ತದೆ. ಇದನ್ನೇ ನಾವು 'ಮಾನವ ಧರ್ಮ' ಎಂದು ಗುರುತಿಸಬಹುದು.

ಇಂದು ಇಡೀ ವಿಶ್ವದಲ್ಲಿಯೇ ಸರ್ವನಾಶದ ಸಮರದ ಕಾರ್ಮೋಡ ಕವಿದು, ನರನು ನರನ ಸುಲಿದು, ದ್ವೇಷಾಸೂಯೆಯ ಬೆಂಕಿ ಹತ್ತಿ ಉರಿಯುತ್ತಿದೆ. ಈ ಅನಿಷ್ಟ ಪರಿಹಾರವಾಗಿ, ವಿಶ್ವದ ದಿಗಂತದಲ್ಲಿ ಶಾಂತಿಯ ರವಿ ಉದಯಿಸಿ, ಶಾಂತಿಯುತ ಸಹಬಾಳ್ವೆಯ ಕಿರಣ ಪಸರಿತವಾಗಬೇಕಾಗಿದೆ. ಬದುಕಿ, ಬದುಕಿಸುವ ನೆಮ್ಮದಿಯ ನೆರಳಿನಲ್ಲಿ ವಾಸಿಸುವ 'ಮಾನವ ಧರ್ಮ' ಪುನರುಜ್ಜೀವನಗೊಳ್ಳಬೇಕಾಗಿದೆ. "ಯಾರು ಧರ್ಮವನ್ನು ರಕ್ಷಿಸುತ್ತಾರೆಯೋ ಅವರನ್ನು ಧರ್ಮ ರಕ್ಷಿಸುತ್ತದೆ" ಎಂಬ ಸುಭಾಷಿತ ವಾಣಿಯಂತೆ ನಾವು ಇಂದು ಕಂಗೆಟ್ಟ ವಿಶ್ವದಲ್ಲಿ ಖಿಲವಾಗುತ್ತಿರುವ ಧರ್ಮವನ್ನು ರಕ್ಷಿಸಿ, ಧರ್ಮದಿಂದ ನಮ್ಮ ರಕ್ಷಣೆಯನ್ನು ಪಡೆಯಬೇಕಾಗಿದೆ.

ನಾವು ಈ ಮಹೋದ್ದೇಶದಿಂದಲೇ ಬೆಂಗಳೂರು ಮಹಾನಗರದಲ್ಲಿ ವೀರಶೈವಮತಸ್ಥಾಪಕರುಗಳಾದ ಪಂಚಪೀಠಾಧೀಶ್ವರರನ್ನು ಆಹ್ವಾನಿಸಿ, ಸಹಸ್ರ ಕುಂಭಾಭಿಷೇಕ, ರುದ್ರಯಾಗ ಹಾಗೂ ಸಕಲ ಧರ್ಮ ಸಮ್ಮೇಳನವನ್ನು ನಿಯೋಜಿಸಿದ್ದೇವೆ. ಅದರ ಅಂಗವಾಗಿ ಈ ಬೃಹತ್ ಸ್ಮರಣ ಸಂಚಿಕೆಯನ್ನು ಪ್ರಕಟಿಸಿದ್ದೇವೆ.

ಶಾಂತಿಪ್ರಿಯರಿಗೆ, ಜ್ಞಾನಪಿಪಾಸುಗಳಿಗೆ, ಸಾಹಿತ್ಯಾಭ್ಯಾಸಿಗಳಿಗೆ ಈ ಗ್ರಂಥ ಪ್ರಿಯವಾಗುವುದೆಂಬ ನಂಬಿಕೆ ನನಗಿದೆ.

ಕೆ. ಎಂ. ನಂಜಪ್ಪ
ಅಧ್ಯಕ್ಷರು

ಪ್ರಸ್ತಾವನೆ

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಪಟ್ಟಣಕ್ಕೆ ವೀರಶೈವ ಮತಾಚಾರ್ಯರಾದ ರಂಭಾಪುರಿ ವೀರ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು, ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರರಾಗಿರುವ ಶ್ರೀ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀಶೈಲ ಶೂನ್ಯ ಸಿಂಹಾಸನಾಧೀಶ್ವರರಾಗಿರುವ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಕಾಶಿ ಜ್ಞಾನ ಸಿಂಹಾಸನಾಧೀಶ್ವರರಾಗಿರುವ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರರಾಗಿರುವ ಶ್ರೀ ಶಾಂತಲಿಂಗ ದೇಶಿಕ ಶಿವಾಚಾರ್ಯ ಮಹಾಸ್ವಾಮಿಗಳು, ಈ ಪಂಚಪೀಠಾಧೀಶ್ವರರು ದಿ॥ 7–1–1972ರಂದು ಬೆಂಗಳೂರು ಪಟ್ಟಣಕ್ಕೆ ಭಕ್ತಮಂಡಲಿಯ ಪ್ರಾರ್ಥನೆಯ ಮೇರೆಗೆ ಸಂದರ್ಶನವೀಯುವುದು ನಿಜಕ್ಕೂ ಮಂಗಳ ಪ್ರದವಾದ ಸಂದರ್ಭವೇ ಸರಿ. ಈ ಅಪೂರ್ವವಾದ ಸಂದರ್ಭದಲ್ಲಿ ಪೂಜ್ಯ ಪಂಚ ಜಗದ್ಗುರುಗಳ ಸನ್ನಿಧಿಗೆ ಒಂದು ಸಾಹಿತ್ಯರೂಪವಾದ ಸ್ಮರಣ ಸಂಚಿಕೆಯನ್ನು ಮಾಡಿ ಅರ್ಪಿಸದೇಕೆಂಬ ಬಯಕೆ ಸ್ವಾಗತ ಸಮಿತಿಯವರಿಗೆ ಉಂಟಾಯಿತು. ಅವರು ಅದಕ್ಕಾಗಿ ಒಂದು ಸಂಪಾದಕ ಮಂಡಲಿಯನ್ನು ಗೊತ್ತು ಮಾಡಿದರು. ಆ ಸಂಪಾದಕ ಮಂಡಲಿಯವರು ತಮಗೆ ದೊರೆತ ಸ್ವಲ್ಪ ಅವಕಾಶದಲ್ಲಿಯೇ ಸಮಾಜದ ಮಠಾಧಿಪತಿಗಳು, ವಿದ್ವಾಂಸರು ಮತ್ತು ಸಹೃದಯರನ್ನು ಪ್ರಾರ್ಥಿಸಿ ಹಲವು ಲೇಖನಗಳನ್ನು ಸಂಗ್ರಹಿಸಿದರು. ಈ ಮೊದಲು ಪ್ರಕಟವಾಗಿರುವಂತೆ, ವಾದಗ್ರಸ್ತವಲ್ಲದಿರುವ, ಪ್ರಮಾಣ ಭೂತವಾದ ಧಾರ್ಮಿಕ ನಂಬಿಕೆಗಳಿಂದ ಒಡಗೂಡಿದ ಲೇಖನಗಳನ್ನು ಸಂಗ್ರಹಿಸಿ, " ಶ್ರೀ ಜಗದ್ಗುರು ಪಂಚಾಚಾರ್ಯ ದರ್ಶನ " ಎಂಬ ಹೆಸರಿನಿಂದ ಸಂಬಂಧಪಟ್ಟ ಸುಂದರ ಚಿತ್ರಗಳೊಂದಿಗೆ ಈ ಸಂಚಿಕೆಯನ್ನು ಸಿದ್ಧಗೊಳಿಸಿರುತ್ತಾರೆ.

ನಾವು ಕೇಳಿದ ಕೂಡಲೆ ಪೀಠಾಭಿಮಾನಿಗಳಾದ ಹಲವು ಮಂದಿ ವಿದ್ವಾಂಸರು ಲೇಖನಗಳನ್ನು ಬರೆದುಕೊಟ್ಟು, ಈ ಸಂಚಿಕೆಯು ಈಗ ಬೆಳಕಿಗೆ ಬರಲು ನೆರವಾಗಿದ್ದಾರೆ. ವೀರಶೈವ ಮತ ಚರಿತ್ರೆಯನ್ನೂ, ಪಂಚಪೀಠಗಳ ಪರಂಪರೆಯನ್ನೂ ಹಲವಾರು ಮಹತ್ವ ಸಂಗತಿಗಳನ್ನೂ ತಿಳಿಯಲು ಈ ಸಂಚಿಕೆಯು ವಾಚಕರಿಗೆ ನೆರವಾಗುವುದೆಂದು ನಂಬುತ್ತೇವೆ. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಎಂ. ನಂಜಪ್ಪನವರು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ. ವೀರಭದ್ರಯ್ಯನವರು ಸಹಕಾರ್ಯದರ್ಶಿಗಳಾದ ಶ್ರೀ ಬಿ. ಎಸ್. ಮರಿಯಪ್ಪನವರು, ಕೋಶಾಧಿಕಾರಿಗಳಾದ ಶ್ರೀ ಎನ್. ಆರ್. ರೇಣುಕಾರಾಧ್ಯರು ಮತ್ತು ಸದಸ್ಯರು ಸಂಪಾದಕ ಮಂಡಲಿಗೆ ಬೇಕಾದ ಎಲ್ಲ ನೆರವನ್ನೂ ಕೊಟ್ಟು, ಸಹಕರಿಸಿರುತ್ತಾರೆ. ಅದಕ್ಕಾಗಿ ಸಂಪಾದಕ ಮಂಡಲಿಯ ಪರವಾಗಿ ಎಲ್ಲರನ್ನೂ ಹಾರ್ದಿಕವಾಗಿ ವಂದಿಸುತ್ತೇನೆ.

ಸಂಪಾದಕ ಮಂಡಲಿಯ ಸಂಪಾದಕ-ಕಾರ್ಯದರ್ಶಿಗಳಾದ ಶ್ರೀ ಎಂ. ವಿ. ಗುರುಬಸಪ್ಪಶೆಟ್ಟರು (' ಮಲೆನಾಡು ' ಸಂಪಾದಕರು), ಪ್ರಮುಖ ಸದಸ್ಯರಾದ ಶ್ರೀ ಡಿ. ರೇಣುಕಾಚಾರ್ಯ ರವರು ಈ ಸಂಚಿಕೆಯನ್ನು ಉತ್ತಮಪಡಿಸುವ ವಿಷಯದಲ್ಲಿ ಬಹಳವಾಗಿ ಪ್ರಯತ್ನಿಸಿರುತ್ತಾರೆ. ಕಾರಣ, ಅವರುಗಳನ್ನು ಈ ಸಂದರ್ಭದಲ್ಲಿ ನಾನು ಮನಃಪೂರ್ವಕವಾಗಿ ಶ್ಲಾಘಿಸುತ್ತೇನೆ.

ಇಂತು ಸಂಪಾದಕ ಮಂಡಳಿಯ
ಅಧ್ಯಕ್ಷ

ಬಿ. ಶಿವಮೂರ್ತಿಶಾಸ್ತ್ರಿ

ಶ್ರೀ ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ
ಶಿವಾಚಾರ್ಯ ಮಹಾಸ್ವಾಮಿ ವಿರಚಿತಂ

ಸಕಲಶಾಸ್ತ್ರ ಸುಪ್ರಸಿದ್ಧ ಶ್ರೀಮದ್ವೀರಶೈವ ಮತಸ್ಥಾಪಕ ಜಗದಾದಿ ಪಂಚ ಜಗದ್ಗುರು
ಪಂಚಾಚಾರ್ಯಾಃ ಪ್ರಸೀದಂತು

ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯ ಜಗದಾದಿ ಪರಮ ಜಗದ್ಗುರು ಪಂಚಾಚಾರ್ಯ ಪ್ರಾತಃಸ್ಮರಣ ನಕ್ಷತ್ರಮಾಲಿಕಾ ಸ್ತೋತ್ರಮ್

ಶ್ರೀ ಶಂಭುಫಾಲ ನಯನಾನಲ ಸಂಭವಾಯ।
ದುರ್ದಾಂತ ದಕ್ಷ ಮಖವೈಭವ ಸಂಹರಾಯ।
ಭದ್ರಾತ್ಮನೇ ಭಯಭಿದೇ ಭುಜಸಾರಶಾಲಿ।
ಶ್ರೀ ವೀರಭದ್ರ ಗಣಪಾಯ ನಮೋಸ್ತು ತುಭ್ಯಂ॥

ಪ್ರಾತರ್ನಮಾಮಿ ಸತತಂ ಶಿವತತ್ವರೂಪಂ।
ಶ್ರೀಮಜ್ಜಗದ್ಗುರು ದಯಾನಿಧಿ ರೇಣುಕಾರ್ಯಂ।
ಶ್ರೀ ವೀರಶೈವ ಮತ ಮೂಲಮನೇಕ ಲೀಲಂ।
ಸೋಮೇಶಲಿಂಗಭವಮಾಶ್ರಿತ ಲೋಕಪಾಲಂ॥

ಪ್ರಾತರ್ಭಜಾಮಿ ಸತತಂ ಕೃತಪಾಪನಾಶಂ।
ಸಿದ್ಧೇಶ ಸಂಭವ ಜಗದ್ಗುರು ದಾರುಕಾರ್ಯಂ।
ಸಂಸಾರಸಾಗರ ಸಮುತ್ತರಣ ಪ್ಲವಂ ಶ್ರೀ।
ಲಿಂಗಾಂಗಸಂಗ ವಿಧಿಬೋಧಕ ಮೀಶಕಾಶಂ॥

ಪ್ರಾತಸ್ತವೀಮ ಸತತಂ ಶಿವಕಾಯಮೇಕೋ।
ರಾಮಂ ಜಗದ್ಗುರುಮುದಾರ ಗುಣಾಭಿರಾಮಂ।
ಶ್ರೀ ಭೀಮನಾಥ ಶಿವಲಿಂಗ ಸಮುದ್ಭವಂ ಶ್ರೀ।
ಲಿಂಗಾಂಗಸಂಗ ವಿಧಿಬೋಧಕ ಮೀಶಕಾಶಂ॥

ಪ್ರಾತಃ ಸ್ಮರಾಮಿ ಹೃದಿ ಸಂತತ ಮೀಶರೂಪಂ।
ಶ್ರೀಮಜ್ಜಗದ್ಗುರು ಮಹಾಗಿರಿ ಪಂಡಿತಾರ್ಯಂ।
ಶ್ರೀ ಮಲ್ಲಿಕಾರ್ಜುನ ಭವಂ ಭವತಾಪ ಶಾಂತ್ಯೈ॥
ಭಕ್ತಾವನೈಕ ನಿರತಂ ಭುವನ ಪ್ರಸಿದ್ಧಂ॥

ಪ್ರಾತಃ ಸದೈವ ವಿಬುಧಾನತ ಪಾದ ವಿಶ್ವಾ।
ರಾಧ್ಯಂ ಜಗದ್ಗುರು ಮಪಾರದಯಾ ಸಮುದ್ರಂ।
ಧ್ಯಾಯೇಽಖಿಲಾಮಯ ಹರಂ ಧೃತದಿವ್ಯ ದೇಹಂ।
ವಿಶ್ವೇಶ ಲಿಂಗಭವಮಾರ್ತಜನಾರ್ಚನಾಶಂ॥

ಪಶ್ಯಾಮಿ ಸಂತತಮಹಂ ಪರಮ ಪ್ರಕಾಶಂ।
ರುದ್ರಾಕ್ಷಭಸ್ಮ ಶಿವಲಾಂಛನ ಶೋಭಮಾನಂ।
ಬ್ರಹ್ಮಾಂಡ ಮೋಹನಕರಂ ಶಿವಭಾವಪೂರ್ಣಂ।
ರೂಪಂ ತ್ರಿತಾಪಹರ ಪಂಚ ಜಗದ್ಗುರೂಣಾಂ॥

ಗಾತ್ರಂ ಸ್ಪೃಶಾಮಿ ಸತತಂ ಸ್ಥಿತ ಮಂತ್ರ ಜಾತಂ।
ಸ್ಫೀತಪ್ರಭಾ ಪಟಲ ಪಂಚಜಗದ್ಗುರೂಣಾಂ।
ಸ್ವಚ್ಛೋಲ್ಲಸತ್ ಸ್ಫಟಿಕಮಂಡಲ ಸನ್ನಿಕಾಶಂ।
ಆಪ್ಯಾಯಕಂ ಯದಮೃತಾದಧಿಕಂ ಶ್ರಿತಾನಾಂ॥

ಪ್ರಾತರ್ವದಾಮಿ ಶುಭನಾಮ ಜಗದ್ಗುರೂಣಾಂ।
ಸಾನಂದ ಮುಖ್ಯ ಮುನಿಪುಂಗವ ಗೀಯಮಾನಂ।
ಯತ್ಪ್ರಾದತೋ ದಿವಿಜ ಮಾನವ ದಾನವಾನಾಂ।
ಸರ್ವಾಪದಾವಲಿರಲಂ ಪ್ರಶಮಂ ಪ್ರಯಾತಿ॥

ಪ್ರಾತರ್ಯಜಾಮಿ ಜಗತೀ ಗುರುಪಾದಯುಗ್ಮಂ।
ಪಂಕೇರುಹಾಭವಮಲಂ ನಿಜಶಾಂತಿ ಸದ್ಮ।
ಪದ್ಮೋದ್ಭವಾದ್ಯಮರವಾರ ಕಿರೀಟ ರತ್ನ।
ದಿವ್ಯ ಪ್ರಭಾ ಭರಣ ರಂಜಿತಮಾತ್ಮ ಶಕ್ತ್ಯಾ॥

ಜಿಘ್ರಾಮಿ ಸಂತತಮಹಂ ನಿಜಭಕ್ತಿ ಭಾವಾ।
ನಿರ್ಮಾಲ್ಯ ಪುಷ್ಪಮಪಿ ಪಂಚ ಜಗದ್ಗುರೂಣಾಂ।
ಚಿಂತಾಮಣೇಃ ಸುರತರೋಃ ಸುರಕಾಮಧೇನೋಃ।
ಯದ್ದಾತುಮರ್ಹತಿ ಫಲಂ ಪರಮಪ್ರಶಾಂತಂ॥

ಪ್ರಾತಃ ಪಿಬಾಮಿ ಭವರೋಗ ಮಮೌಷಧಂ ಶ್ರೀ।
ಪಾದೋದಕಂ ಪರಮಪಂಚ ಜಗದ್ಗುರೂಣಾಂ।
ಯತ್ಪಾನತೋ ನಿಖಿಲ ಜನ್ಮ ಸಮರ್ಜಿತಾನಿ।
ತ್ರೈಕಾಲಿಕಾನಿ ದುರಿತಾನಿ ಶಮಂ ಪ್ರಯಾಂತಿ॥

ಸೇವೇನಿಶಂ ಸಕಲ ತತ್ವ ವಿಶುದ್ಧಿ ಹೇತುಂ।
ಶುದ್ಧಾತಿಶುದ್ಧಿಕರ ಪಂಚ ಜಗದ್ಗುರೂಣಾಂ।
ಶುದ್ಧಂ ಪ್ರಸಾರಮಪಿ ಸಿದ್ಧಮಥಪ್ರಸಿದ್ಧಂ।
ಶುದ್ಧಾತ್ಮನಾಂ ಸುಲಭ ಮದ್ಭುತ ಭಾಗ್ಯ ಭೂಮಿಂ॥

ನಿತ್ಯಂ ವಸಾಮಿ ನಿರಿಷೇ ನಿಜದಿವ್ಯ ಧಾಮ್ನಿ।
ಸಚ್ಚಿತ್ಸುಖಾತ್ಮನಿ ಜಗದ್ಗುರು ಸನ್ನಿಧಾನೇ।
ಯತ್ಸೇವನೇನ ಸುಧಿಯೋಽಧಿಕ ಮಾವಹಂತಿ।
ಕೈವಲ್ಯತಃ ಸುಖಮನಂತ ಗುಣ ಪ್ರಧಾನಂ॥

ಯದ್ಧ್ಯಾನಮಂತಕ ಭಯಾರ್ತ ಜನಾವಲೀನಾ।
ಮುದ್ಧಾರಣೈಕ ನಿರತಂ ಸ್ವಯಮೇವ ಸತ್ಯಂ।
ತತ್ಪಾದುಕಾದ್ವಯುಜಸ್ರಮುರುಪ್ರಭಾವಂ।
ಮೇ ಮಸ್ತಕೇ ಭವತು ಭಕ್ತಿ ಭರಾನತಸ್ಯ।

ವಾಯುರ್ಯದಂಗ ಪರಿವೇಷ್ಟನ ಪಾವನಾತ್ಮಾ।
ಶೈವೀಕಲಾ ಕಣಗಣಾನ್ ಪರಿತಃ ಪ್ರಸಾರ್ಯ।
ಸಂಪಾವಯನ್ನಖಿಲ ಲೋಕಮಪಾರ ಭಕ್ತ್ಯಾ।
ತದ್ವಾಯು ವೀಚಿಷು ಮದೀಯ ತನುಂ ಧುನೋಮಿ॥

ದೃಷ್ಟಿಃ ಸುಕೋಮಲತರಾ ಭವತಾಪದತ್ತ।
ಕಷ್ಟಾಪಹ್ಯಾಮೃತ ಮಯೀ ವಿಮಲಾ ಯದೀಯಾ।
ಶಿಷ್ಯಾವನೈಕ ನಿಪುಣಾ ನಿಜಶಾಂತಿ ದಾನಾತ್।
ಸಾಮಹ್ಯಮಸ್ತು ಸತತಂ ಶುಭ ದಾನಶೀಲಾ॥

ಯತ್ಪಾದ ಪಂಕಜ ರಜಃ ಪರಿಪೂತಮಾರಾತ್।
ದೂರೀಕರೋತಿ ದುರಿತಂ ಪರಮಾದರೇಣ।
ಸಂಸಾರ ತಾಪ ಹರಣೇ ಭವತಾಪದಗ್ಧಃ।
ತಸ್ಮಿನ್ನುಶಾಮ್ಯವಿರತಂ ಶಿವಸೌಖ್ಯ ಸೀಮ್ನಿ॥

ಏಷಾಂ ನಿತಾಂತ ಸುಭಗಾ ಕರುಣಾ ಗುರೂಣಾಂ
ಭಕ್ತಾವನಸ್ಯ ಸುರಲೋಕ ಧುನೀ ವಧುರ್ಯಾ।
ಸಾಮಹ್ಯಮಸ್ತು ಸತತಂ ಶರಣಾಗತಸ್ಯ।
ದುರ್ಗಂ ಸ್ಮರಾದಿರಿಪು ದುರ್ಗಮಮಪ್ರಮೇಯಂ॥

ನಿಖಿಲ ನಿಗಮ ವಾರಸ್ತ್ರೈಕ ಕಂಠಾದ್ಪ್ರವೀತಿ।
ಸ್ಫುಟಮಿತಿ ನಹಿವಸ್ತು ಶ್ರೀಗುರೋಶ್ರೇಷ್ಠಮಸ್ತಿ।
ಸುರವರಮುನಿದೈತ್ಯಾಃ ಶ್ರೀಗುರೋಃ ಸೇವಯೈವ।
ಸ್ಥಿರಪದ ಸುಖಸಿದ್ಧಿ ಲೇಭಿರೇ ನಾತ್ರಶಂಕಾ॥

ಇಹಸುಖ ಪರ ಮುಕ್ತೀ ದ್ವೇಫಲೇ ಮಾನವಾನಾಂ।
ಗುರುಮುಖ ಕಮಲಶ್ರೀ ಬೋಧ ಲಭ್ಯೇಚತೇಽಪಿ।
ಗುರುರಪಿ ಪರಿಚರ್ಯಾಭಾವತಃ ಸ್ಯಾತ್ಪ್ರಸನ್ನಃ।
ನಜಗತಿ ಗುರುಸೇವಾ ಹೀನತೋ ಮಂದ ಭಾಗ್ಯಃ॥

ಸಕಲ ಜಗತಿ ಪೂರ್ಣಃ ಶ್ರೀ ಪರಂಜ್ಯೋತಿರಾತ್ಮಾ।
ಸದಪಿ ನಹಿ ಮುಮುಕ್ಷೋ ಗೋಚರಸ್ಯಾತ್ಸ್ವಯಂ ಸಃ॥
ಸ್ಥಿರತರಗುರುಭಕ್ತ್ಯಾ ತುಷ್ಯತಿ ಶ್ರೀ ಮಹೇಶಃ।
ತದನು ಕಿಮುಜನಾನಾಂ ದುರ್ಲಭಂ ವಸ್ತು ಲೋಕೇ॥

ಯೇ ಪಾರ್ವತೀ ರಮಣ ಪಂಚ ಮುಖಾಬ್ಜ ಜಾತಾ।
ಯೈಃ ಸ್ಥಾಪಿತಾ ಭುವಿಮತಂ ವರವೀರಶೈವಂ।
ತೇಷಾಮನುಗ್ರಹ ವಶಾತ್ ಸಕಲೇಷ್ಟಸಿದ್ಧಿ।
ಭೂರ್ಯಾದಿತಿ ಪ್ರಥಿತಮೇವ ಜಗದ್ಗುರೂಣಾಂ॥

ಸರ್ವಾರ್ಥ ಸಿದ್ಧಿಕರ ಪಂಚ ಜಗದ್ಗುರೂಣಾಂ।
ಸಂಸೇವನಂ ಸಕಲ ಜನ್ಮಸು ಸರ್ವಕಾಲಂ।
ಸರ್ವತ್ರ ಸಂವಸತು ಮೇ ಹೃದಿವಾಚಿ ಕಾಯೇ।
ಸದ್ಭಾವನಾ ಪರವಶಸ್ಯ ವಿಮೂಢ ಬುದ್ಧೇಃ॥

ಶ್ರೀ ಮುಕ್ತಿ ಮಂದಿರ ನಿವಾಸ ತರಂಗ ಭಕ್ತ್ಯಾ।
ಗಂಗಾಧರೇಣ ಗುಣರತ್ನ ಗಣೋಜ್ವಲೇನ।
ನಮ್ರಾಂತರೇಣ ರಚಿತಾನುಚಿತಾರಕಾಲಿಃ।
ಪಕ್ವಾಂತರೇಣ ಪಠತಾಂ ಪ್ರದದಾತಿ ಪುಣ್ಯಂ।॥

ಪದ್ಯಾನಿ ಹೃದ್ಯಾನಿ ಜಗದ್ಗುರೂಣಾಂ।
ಯೇ ಶುದ್ಧ ಭಾವೇನ ಪಠಂತ್ಯನನ್ಯಾಃ।
ತೇ ಯಾಂತಿ ಭುಕ್ತಿ ಭುವಿ ಸತ್ಯಮೀಶ।
ಸಾಯುಜ್ಯಮಂತೇ ಶ್ರುತಿ ಸಿದ್ಧಮೇತತ್॥

ಹರಗುರು ನಿಜಭೇದಾ ಭಾವತಃ ಶುದ್ಧ ಭಕ್ತ್ಯಾ।
ತದುಭಯ ಪದಸೇವಾ ಸಪ್ತ ಚಿತ್ತಾಂಬುಜಾತಃ।
ವ್ಯರಚಯಮಿದಮಾತ್ಮ ಶ್ರೀ ಶ್ರೇಯಸೇ ಭೂಯಸೇಹಂ॥
ಸುರನರ ಮುನಿಗೇಯಂ ಸ್ತೋತ್ರಮಾನಂದ ಕಾಯಂ।

ಇತಿ ಶ್ರೀ ರಂಭಾಪುರೀ ವೀರ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಮಹಾರಾಜ
ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ವಿರಚಿತಂ ಸಕಲ ಶಾಸ್ತ್ರ ಸುಪ್ರಸಿದ್ಧ ವೀರಶೈವ ಮಹಾಮತ ಸ್ಥಾಪನಾ
ಚಾರ್ಯ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಾತಃಸ್ಮರಣೀಯ ನಕ್ಷತ್ರ ಮಾಲಿಕಾ ಸ್ತೋತ್ರಂ ಸಮಾಪ್ತಂ

* * *

With best wishes from :

SREE SHANKARA
TEXTILE MILLS LIMITED,

Post Box No. 3, DAVANGERE-1

Manufacturers and Exporters of

BEST QUALITY COTTON YARN IN COUNTS FROM 10s TO 80s, BOTH WARP AND WEFT, IN HANKS AND ON CONES

PHONE : 6
GRAMS : JAYADEVA

Sri Jagadguru Renukacharya Education Society

Race Course Road, — Bangalore-9.

Offers its humble respects to

PANCHAPEETHADHIPATHIS

1. H. H. Srimath Rambhapuri Veerasimhasanadheeswara Sri 1008 Jagadguru Prasanna Renuka Veera Gangadhara Sivacharya Mahaswamiji of Balehonnur Mutt,
2. H. H. Srimath Ujjaini Saddharma Simhasanadheeswara Sri 1008 Jagadguru Siddheswara Shivacharya Mahaswamiji of Ujjaini Mutt.
3. H. H. Srimath Vairagyasimhasanadheeswara Sri 1008 Jagadguru Shanthalinga Sivacharya Mahaswamiji of Kedara Mutt,
4. H. H. Srimath Giriraja Surya Simhasanadheeswara Sri 1008 Jagadguru Vageesha Panditharadhya Sivacharya Mahaswamiji of Srisaila Mutt.
5. H. H. Srimath Gnanasimhasanadheeswara Sri 1008 Jagadguru Visweswara Sivacharya Mahaswamiji of Kasi Mutt.

On the occasion of

ADDAPALAKI MAHOTHSAVA OF PANCHAPEETHADHIPATHIS

AND

"SAHASRA KUMBHABHISHEKA"

in the Capital City of Bangalore.

Permanent patron: Sri Jagadguru Rambhapuri Mutt.

President:	*Vice Presidents:*	*Treasurer*	*Secretary;*
Sri P. Siva Shankar	Sri Yajaman Kenchappa Sri. D.B.S. Gurusiddappa	Sri. K. N. Gubbanna	Sri. K. M. Jagadeesa Sastry

Administrative Officers:

Sri. B. Channabasappa, Sri. H. K. Shanthaveerappa, Sri. G. S. Rajasekharan

Under the Patronage of H. H. Sri Jagadguru of Rambhapuri Mutt, Sri Jagadguru Renukacharya Education Society, is imparting useful knowledge to the needy students in the faculties of Science, Arts, Law and Commerce through its three premier Colleges :—

1. Sri Jagadguru Renukacharya College of Science & Arts,
   Estd: 1945. Principal: Sri S. Mahalingappa. Student strength: 1320.
2. Sri Jagadguru Renukacharya College of Law,
   Estd: 1963. Principal: Sri P. Siva Shankar. Student strength: 1446.
3. Sri Jagadguru Renukacharya Evening College of Commerce,
   Estd: 1965. Principal: Sri H. H. Basavaraj. Student strength: 1194.

The Society is proud to announce that it has been serving the cause of education with great dedication for over 25 years.

WISH THE FUNCTION A GLORIOUS SUCCESS

SREE SHIVAKUMARA SWAMIGALU
SREE SIDDAGANGA MUTT
TUMKUR DIST

ಬೆಂಗಳೂರು ನಗರ ಪ್ರಮುಖರು ಮತ್ತು ಸಮಾಜ ಮುಖಂಡರುಗಳ ಪರಿಶ್ರಮದ ಪರಿಣಾಮವಾಗಿ ನಗರದಲ್ಲಿ ಪ್ರಥಮ ಬಾರಿಗೆ ಏರ್ಪಾಡಾಗಿರುವ ವೀರಶೈವ ಪಂಚ ಪೀಠಾಧೀಶ್ವರರಾದ ಜಗದ್ಗುರುಗಳೈವರ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಶ್ರೀ ಬಾಳೇಹೊನ್ನೂರು ಜಗದ್ಗುರುಗಳ ಸಹಸ್ರ ಕುಂಭಾಭಿಷೇಕೋತ್ಸವಗಳ ವಿಷಯ ಅರಿಕೆಯಾಗಿ ಅತೀವ ಹರ್ಷವಾಗಿರುತ್ತದೆ. ಸಮಾಜದಲ್ಲಿ ಹಾಗೂ ಸಾರ್ವಜನಿಕರಲ್ಲಿ ಧರ್ಮಶ್ರದ್ಧೆ ಮತ್ತು ದೈವಭಕ್ತಿಗಳನ್ನು ಮೂಡಿಸುವ ಘನತರ ಉದ್ದೇಶಸಾಧನೆಗಾಗಿ ವ್ಯವಸ್ಥೆಗೊಂಡಿರುವ ಈ ಮಂಗಳ ಮಹೋತ್ಸವಗಳ ಸವಿನೆನಪಿಗಾಗಿ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಲು ಸಂಕಲ್ಪಿಸಿರುವುದು ಮೆಚ್ಚುಗೆಯ ಸಂಗತಿಯಾಗಿದೆ. ಸಂಚಿಕೆಯು ಸರ್ವಾಂಗ ಸುಂದರವಾಗಿ ಹೊರಬಂದು ಸಂಸ್ಮರಣೀಯ ಗ್ರಂಥವಾಗಿ ಚಿರಕಾಲ ಬಾಳಿ ಬೆಳಗುವಂತೆ ಪರಶಿವನು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಇತಿ,
ಶ್ರೀ ಶಿವಕುಮಾರ ಸ್ವಾಮಿಗಳು
ಶ್ರೀ ಸಿದ್ಧಗಂಗಾ ಕ್ಷೇತ್ರ

14-11-1971



Dr. S. Radhakrishnan sends his best wishes for the Addapalaki Mahothsava of Jagadguru Panchapeethadhipathis of Rambhapuri, Ujjaini, Kedara, Srishaila and Kashi and the "Sahasra Kumbhabhisheka" which are to be celebrated at Bangalore from the 13th to 16th December, 1971.



The President thanks you for your letter of the 23rd November, 1971, informing him that you are publishing a Souvenir entitled to " Shri Jagadguru Panchacharya Darshana". He sends his best wishes.



Dr. D. C. Pavate

GOVERNOR OF PUNJAB

I am glad to know that the Addapalaki Mahothsava of Jagadguru Panchapeethadipathis is going to take place for four days commencing from the 13th of December. The world peace is a worthy cause for which the spiritual heads of any religion should strive and I am happy that this cause is uppermost in the minds of the Veerashaiva religious heads. I send my greetings and good wishes for your success.



The Governor is glad to learn that Sahasra Kumbabhishekham has been arranged to be held in connection with the ensuing visit of Pancha Jagadgurujis of Balehonnur, Ujjain, Kedar, Srisaila and Varanasi to Bangalore. I am desired to convey his good wishes for the success of the functions organised on this occasion.



T. K. TUKOL
VICE-CHANCELLOR
BANGALORE UNIVERSITY

I am happy that Jagadguru Panchapeethadipathis are meeting in Bangalore in the middle of December 1971 to pray for world peace. This is an unique occasion of great religious value. The devotees and the public should utilize the opportunity for enlightenment and spiritual experience.

I wish your function all success.

ನೆಚ್ಚಿನ ಪ್ರಧಾನಿ



'ಭಾರತ ರತ್ನ' ಇಂದಿರಾ ಗಾಂಧಿ

ರಾಜ್ಯದ ಮಾಜಿ ಮುಖ್ಯಮಂತ್ರಿ



ಶ್ರೀ ವಿರೇಂದ್ರಪಾಟೀಲ್

Our Pranamams to
Pancha Jagadgurus

A. KARIBASAPPA & COMPANY

Merchants & Commission Agents

Kaipet : : DAVANGERE - 1

ಓಂ ಸತ್ಯಂ....ಶಿವಂ....ಸುಂದರಂ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

D. B. S. Gurusiddappa Charities Trust

ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀ ಜಗದ್ಗುರು ಪಂಚ
ಪೀಠಾಧೀಶ್ವರರುಗಳಾದ ಶ್ರೀಮದ್ ರಂಭಾಪುರಿ, ಶ್ರೀ ಉಜ್ಜಯಿನಿ
ಶ್ರೀ ಹಿಮವತ್ಕೇದಾರ ಶ್ರೀ ಶ್ರೀಶೈಲ ಮತ್ತು ಶ್ರೀ ಕಾಶೀ
ಜಗದ್ಗುರುಗಳಿಗೆ ಭಕ್ತಿಪೂರ್ವಕ ... ಸ್ವಾಗತ .... ಸುಸ್ವಾಗತ

ಸ್ವಾಗತ ಕೋರುವವರು;
ಶ್ರೀ ದೊಡ್ಡ ಬಸವಣ್ಣನವರ ಸಿದ್ದಪ್ಪನವರಮಗ ಗುರುಸಿದ್ದಪ್ಪ ಮತ್ತು ಪುತ್ರಪೌತ್ರರು

D.B.S. GURUSIDDAPPA

ಡಿ. ಬಿ. ಎಸ್. ಗುರುಸಿದ್ದಪ್ಪ ಧರ್ಮದ ಟ್ರಸ್ಟ್

ವಿವಾಹಾದಿ ಶುಭಕಾರ್ಯಗಳಿಗೆ ಉಪಯುಕ್ತವಾದ ಸುಸಜ್ಜಿತ
ಶ್ರೀ ಡಿ. ಬಿ. ಎಸ್. ಗುರುಸಿದ್ದಪ್ಪ — ಪುಟ್ಟಮ್ಮ ಕಲ್ಯಾಣ ಮಂದಿರ
IV ನೇ ಮೈನ್‌ರೋಡ್, (ಜೈನ್ ಟೆಂಪಲ್ ರೋಡು), ಗಾಂಧಿನಗರ, ಬೆಂಗಳೂರು–9. ಫೋನ್: 74833
ಬೆಂಗಳೂರು ನಾಗರೀಕರಿಗೊಂದು ಅಲ್ಪ ಕಾಣಿಕೆ
ಕಲ್ಯಾಣ ಮಂದಿರ ನಿರ್ಮಾಪಕರು: ಶ್ರೀ ಡಿ. ಬಿ. ಎಸ್. ಗುರುಸಿದ್ದಪ್ಪ ಪುತ್ರ ಪೌತ್ರರು
ನಗರದ ಸೇವಾಕಾಂಕ್ಷಿಗಳು

ಶ್ರೀಮದ್ರಂಭಾಪುರೀ ಜಗದ್ಗುರು ಶ್ರೀ ಶ್ರೀ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು

ಪಂಚ ಜಗದ್ಗುರು

ಪೀಠಗಳು

(ಸಂಕ್ಷಿಪ್ತ ಪರಿಚಯ)



- ★ ಶ್ರೀ ರಂಭಾಪುರಿ
- ★ ಶ್ರೀ ಉಜ್ಜಯಿನಿ
- ★ ಶ್ರೀ ಕೇದಾರ
- ★ ಶ್ರೀ ಶ್ರೀಶೈಲ
- ★ ಶ್ರೀ ಕಾಶಿ

॥ ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು ॥

ಜೀಯಾಚ್ಛ್ರೀ ರೇಣುಕಾಚಾರ್ಯಃ ಶಿವಾಚಾರ್ಯ ಶಿಖಾಮಣಿಃ ।
ಯೋವೀರಶೈವ ಸಿದ್ಧಾಂತಂ ಸ್ಥಾಪಯಾಮಾಸಭೂತಲೇ ॥

ಶ್ರೀಮದ್ರಂಭಾಪುರೀ ಪೀಠದ ಪರಿಚಯ

ಶ್ರೀಮತ್ಪರಶಿವನ ಸದ್ಯೋಜಾತ ಮುಖದಿಂದ ಉದಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಭೂಲೋಕದಲ್ಲಿ ಕೊಲ್ಲಿಪಾಕಿ ಶ್ರೀ ಸೋಮನಾಥ ಲಿಂಗದಿಂದ ಅವತರಿಸಿ ಮಾನವರಿಗೆ ಚತುರ್ವಿಧ ಪುರುಷಾರ್ಥಗಳು ಲಭಿಸುವ ಸಲುವಾಗಿ ವೇದಾಗಮೋಪನಿಷತ್, ಶೃತಿ, ಸೂತ್ರ ಪುರಾಣಾಂತರ್ಗತ ಶಿವಾದ್ವೈತ ಸಿದ್ಧಾಂತ ಪ್ರತಿಪಾದಿತವಾದ ವೀರಶೈವ ಧರ್ಮತತ್ವವನ್ನು ಶ್ರೀ ಅಗಸ್ತ್ಯಾದಿ ಮಹಾಮುನಿಗಳಿಗೆ ಬೋಧಿಸಿ ಭರತ ಖಂಡದಲ್ಲೆಲ್ಲಾ ಸಂಚರಿಸಿ ಈ ಶಿವತತ್ವವನ್ನು ಪ್ರಚಾರಮಾಡಿ ಇತರ ದೇಶಗಳಲ್ಲಿಯೂ ಶಿವತತ್ವವನ್ನು ಬೋಧಿಸಿ ವಿಶ್ವದ ಬಹು ಭಾಗವನ್ನು ಶಿವಮಯವನ್ನಾಗಿ ಮಾಡಿರುತ್ತಾರೆ. ಈಗಲೂ ಆಯಾ ದೇಶಗಳಲ್ಲಿ ಕಾಣುತ್ತಿರುವ ಶಿವಾಲಯಗಳೂ, ಶಿವಲಾಂಛನದ ವಿಗ್ರಹಗಳೂ ಮತ್ತು ಶಿಲಾ ಶಾಸನಗಳೂ ಇದಕ್ಕೆ ಆಧಾರವಾಗಿರುತ್ತವೆ.

ಈ ರೀತಿ ವೀರಶೈವ ಧರ್ಮವು ಮಾನವರ ಜನ್ಮಸಾರ್ಥಕತೆಗೆ ಬೋಧಿಸಲ್ಪಟ್ಟು ಮುಂದೆಯೂ ಸಹ ಮುಂಬರುವ ಜನಾಂಗಕೆ ತಿಳಿಯಲನುಕೂಲವಾಗುವಂತೆ ಧರ್ಮಪ್ರಚಾರ ನಡೆಸುವ ಸಲುವಾಗಿ ಕನ್ನಡನಾಡಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪವಿತ್ರ ಪುಣ್ಯತೀರ್ಥಗಳಲ್ಲೊಂದಾದ ಭದ್ರಾನದೀ ಬಳಿ ಗುರುಪೀಠವನ್ನು ಸ್ಥಾಪಿಸಿದರು. ದೇಶದ ಗ್ರಾಮ, ನಗರಗಳಲ್ಲಿಯೂ ಸಹ ಅರ್ಹರಾದಂತಹವರಿಗೆ ಶಿವದೀಕ್ಷಾ ಸಂಸ್ಕಾರವನ್ನು ನೀಡಿ, ಉಪಾಚಾರ್ಯರನ್ನು ನೇಮಿಸಲು ಉಪಮಠಗಳನ್ನೂ ಸ್ಥಾಪಿಸಿದರು.

ಈ ಉಪಮಠಗಳಿಗೆಲ್ಲಾ ಕೇಂದ್ರವಾಗಿ ಶ್ರೀಮದ್ರಂಭಾಪುರೀ ವೀರಸಿಂಹಾಸನ ಸಂಸ್ಥಾನ ಪೀಠವು ರಾರಾಜಿಸುತ್ತಿದೆ.

ಈ ಮಹಾ ಸಂಸ್ಥಾನದ ಆಡಳಿತ ಬಾಹುಲ್ಯದಿಂದ ಜನಸಾಂದ್ರತೆ ಹೆಚ್ಚಿ ಕಡೆಗೆ ಬಾಳೆಹೊನ್ನೂರು ಗ್ರಾಮವಾಗಿ ಪರಿಣಮಿಸಿರುತ್ತೆಂದು ತಿಳಿದು ಬಂದಿರುತ್ತೆ.

ಈ ಮಹಾಪೀಠದ ಸ್ಥಾಪನೆಯ ಕಾಲವು ಬಹು ಪುರಾತನವಾಗಿ ಸಹಸ್ರಾರು ವರುಷಗಳು ಕಳೆದಿರುವುದರಿಂದ ಐತಿಹಾಸಿಕವಾಗಿ ಕಾಲಮಾನವನ್ನು ಗುರ್ತಿಸಲು ಸಾಧ್ಯವಿಲ್ಲವಾದರೂ ಆಯಾ ಕಾಲಗಳಲ್ಲಿ ನಡೆದ ಪರಧರ್ಮಗಳ ಉತ್ಥಾನದಿಂದಾದ ಅಂದೋಳನಗಳನ್ನು ಮತ್ತು ಆಯಾ ಕಾಲದ ರಾಜಕೀಯ ಪರಿವರ್ತನೆಗಳನ್ನು ವೀಕ್ಷಿಸಿದರೂ ಈ ಪೀಠವು ಸನಾತನವೆಂದು ಸ್ಪಷ್ಟವಾಗಿ ಕಾಣುತ್ತದೆ.

ಶ್ರೀಮದ್‌ರೇಣುಕಾಚಾರ್ಯ ಭಗವತ್ಪಾದರವರು ಈ ವೀರಶೈವ ಧರ್ಮತತ್ವವನ್ನು ಪ್ರಚಾರ ಮಾಡುವ ಕಾಲದಲ್ಲಿ ಭರತಖಂಡದ ಹಾಗೂ ಹೊರಗಿನ ದೇಶದ ರಾಜಮಹಾರಾಜರುಗಳು ಈ ವೀರಶೈವ ಮತಾವಲಂಬಿಗಳಾದರು. ಈ ವಿಚಾರಗಳು ಅನೇಕ ಪುರಾಣ ಗ್ರಂಥಗಳಿಂದ ಕಂಗೊಳಿಸುತ್ತಿವೆ.

ಹೀಗೆಯೇ ಮೈಸೂರು ಮಹಾರಾಜರ ವಂಶದ ರಾಜ್ಯಸ್ಥಾಪನೆಯ ಮೂಲ ಕರ್ತೃ ಯದುರಾಯರ ಕಾಲದಿಂದಲೂ ವೀರಶೈವ ಗುರುಗಳ ಕೃಪಾಶೀರ್ವಾದಕ್ಕೊಳಪಟ್ಟಿರುವವರಾಗಿರುವುದು ಚರಿತ್ರಾರ್ಹವಾಗಿರುತ್ತೆ.

ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯ ಭಗವತ್ಪಾದರವರು ಈ ಶ್ರೀಮದ್ರಂಭಾಪುರೀ ಪೀಠವನ್ನು ಸ್ಥಾಪಿಸಿ ವೀರಶೈವ ಸಾಮ್ರಾಜ್ಯವನ್ನು ಏಕಮುಖವಾಗಿ ಬಹುಕಾಲ ಸುಲಲಿತವಾಗಿ ನಡೆಸಿಕೊಂಡುಬಂದು ನಂತರ ಶ್ರೀ ರುದ್ರಮುನಿಶಿವಾಚಾರ್ಯರಿಗೆ ಈ ವೀರಸಿಂಹಾಸನದ ಪಟ್ಟಾಧಿಕಾರವನ್ನು ಕೊಟ್ಟು ಸೋಮನಾಥಲಿಂಗದಲ್ಲಿಯೇ ಐಕ್ಯರಾದರು. ತದನಂತರ ಬಂದ ಪಟ್ಟಾಧೀಶ್ವರರೂ ಬಹುಕಾಲ ತಮ್ಮ ಶಿವಯೋಗದ ತಪಃ ಪ್ರಭಾವದಿಂದ ಒಂದೇ ಸಮನಾಗಿ ವೀರಶೈವ ಧರ್ಮ ಪ್ರಚಾರವನ್ನು ನಡೆಸಿಕೊಂಡು ಉಪಾಚಾರ್ಯರಿಗಿದ್ದ ತೊಂದರೆಗಳನ್ನು ನಿವಾರಿಸಿ ಧರ್ಮಪ್ರಚಾರ ಮುಂದುವರಿಯುವಂತೆ ಮಾಡಿ ಕ್ರಮತಪ್ಪದೆ ಅಧರ್ಮಿಗಳಿಗೆ ಶಿಕ್ಷೆಯನ್ನು ವಿಧಿಸಿ ಪ್ರಾಯಶ್ಚಿತ್ತಗಳಿಂದ ಅವರನ್ನು ಉದ್ಧರಿಸುತ್ತಿದ್ದರು.

ಕಾಲಕಳೆದಂತೆಲ್ಲಾ ಕಲಿಕಾಲದ ಪ್ರಭಾವದಿಂದ ರಾಜರಾಜರುಗಳ ಯುದ್ಧಗಳಿಂದಾಗಿ ರಾಜ್ಯಗಳು ಆಗಾಗ್ಗೆ ಛಿದ್ರಛಿದ್ರವಾಗಿ ಸಮಾಜವು ಏಕಮುಖವಾಗಿ ನಿಲ್ಲದೆ ಬಹುಮುಖವಾಗಿ ಧರ್ಮಪ್ರಚಾರವು ಕುಂದುತ್ತಾ ಬಂದು ಆಗಿನ ಪೀಠಾಧೀಶ್ವರರೂ ಅಷ್ಟು ಶಕ್ತರಾಗದೆ ತಮ್ಮ ಪೀಠವನ್ನು ಮಾತ್ರ ಕಾಪಾಡಿಕೊಂಡು ಬಂದರು. ಅನೇಕ ಉಪಾಚಾರ್ಯ ಮಠಗಳೂ ನಶಿಸಿದವಲ್ಲದೆ ಹಲವು ಸ್ವತಂತ್ರವಾಗಿ ಮನಬಂದಂತೆ ನಡೆಯತೊಡಗಿದವು.

ಈ ಕಾಲದಲ್ಲಿ ಬಸವಾದಿ ಪ್ರಮಥರು ಉದ್ಭವಿಸಿ ಈ ವೀರಶೈವ ಧರ್ಮದ ತತ್ವಗಳನ್ನು ಪ್ರಚಾರ ಮಾಡಿ ಈ ಮತದ ವೈಶಿಷ್ಟ್ಯವನ್ನು ಹೆಚ್ಚಿಸಿದರು. ಆ ಕಾಲದಲ್ಲೂ ಈ ಪಂಚಪೀಠಗಳು ಬಹುತರವಾಗಿ ವೀರಶೈವ ಸಮಾಜೋದ್ಧಾರಕ್ಕಾಗಿ ದುಡಿದಿರುವುದು ಪುರಾಣೇತಿಹಾಸಗಳಿಂದ ದೃಢಪಡುತ್ತೆ.

ಶ್ರೀ ರಂಭಾಪುರಿ ಮಹಾ ಸಂಸ್ಥಾನದ ಹಿಂದಿನ
ಪೀಠಾಧೀಶ್ವರರಾದ ಲಿಂ॥ ಶ್ರೀ ಶ್ರೀ ಶಿವಾನಂದ
ರಾಜೇಂದ್ರ ಶಿವಾಚಾರ್ಯ ಮಹಾ ಸ್ವಾಮಿಗಳು



ಮೈಸೂರು ಮಹಾರಾಜರವರಾದ ಕೈ॥ ಶ್ರೀಮನ್ನಾಲ್ವಡಿ
ಕೃಷ್ಣರಾಜ ಒಡೆಯರ್‌ರವರು ಬಾಳೆಹೊನ್ನೂರು ಪೀಠಕ್ಕೆ
ದಯಮಾಡಿಸಿ ಲಿ॥ ಜಗದ್ಗುರು ಶಿವಾನಂದ ರಾಜೇಂದ್ರ
ಶಿವಾಚಾರ್ಯರವರನ್ನು ಸಂದರ್ಶಿಸಿದ ಸಂದರ್ಭದ ಚಿತ್ರ

ಈ ಪೀಠದ ೧೧೪ ನೇ ಪೀಠಾಧೀಶ್ವರರಾದ ಚಂದ್ರಶೇಖರದೇಶಿಕೇಂದ್ರ ಶಿವಾಚಾರ್ಯರ ಕಾಲದಲ್ಲಿ ಆಗಿನ ಶ್ರೀಮನ್ಮಹಾರಾಜರಾದ ಶ್ರೀ ಚಾಮರಾಜ ಒಡೆಯರ್ ಮಹಾಪ್ರಭುಗಳೂ ತಾ॥ 21–12–1885 ರಂದು ಈ ಮಠಕ್ಕೆ ಭೇಟಿ ಕೊಟ್ಟು ಪಟ್ಟಾಧೀಶ್ವರರಿಂದ ತೀರ್ಥಪ್ರಸಾದವನ್ನು ಸ್ವೀಕರಿಸಿರುತ್ತಾರೆ. ಹಾಗೇಯೇ ತಾ॥ 30–11–1931 ರಂದು ಹಿಂದಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ತಾ॥ 16–2–1941 ರಂದು ಮಹಾರಾಜ ಶ್ರೀ ಜಯ ಚಾಮರಾಜ ಒಡೆಯರ್ ರವರು ಈ ಪೂಜ್ಯ ಮಠಕ್ಕೆ ಭೇಟಿ ಕೊಟ್ಟು ತೀರ್ಥಪ್ರಸಾದವನ್ನು ಸ್ವೀಕರಿಸಿರುತ್ತಾರೆ. ಇತ್ತೀಚೆಗೆ ದೇಶದಲ್ಲಿ ಪ್ರಜಾಪ್ರಭುತ್ವ ನೆಲೆಗೊಂಡನಂತರವೂ ಮಾನ್ಯ ಮುಖ್ಯ ಮಂತ್ರಿ ಮತ್ತು ಮಂತ್ರಿಗಳೂ ಈ ಮಠಕ್ಕೆ ಭೇಟಿ ಕೊಟ್ಟು ತಮ್ಮ ಭಕ್ತಿ ಭಾವವನ್ನು ವ್ಯಕ್ತಪಡಿಸಿರುತ್ತಾರೆ.

ಈ ಪೀಠದ ೧೧೭ ನೇ ಪೀಠಾಧೀಶ್ವರರು ಶ್ರೀ ಶ್ರೀ ೧೦೦೮ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯರ ಕಾಲದಲ್ಲಿ ಶ್ರೀ ಕಾಶೀ ಕ್ಷೇತ್ರದ ಜ್ಞಾನಸಿಂಹಾಸನ ಪೀಠದಲ್ಲಿ ಪಂಚ ಪೀಠಾಚಾರ್ಯರ ಸಮ್ಮೇಳನ ತಾ॥ 21–1–1918ರಲ್ಲಿ ನಡೆದು ವೀರಶೈವ ಸಮಾಜದ ಸುಧಾರಣೆಯ ಬಗ್ಗೆ ಉತ್ತಮವಾದ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಿದರು.

ನಂತರ ಈ ಪೀಠದ ಪ್ರಭಾವವು ಕೊಂಚಕಾಲ ಕುಂದಿ ಈ ಪೀಠದ ಪಟ್ಟಾಧಿಕಾರಕ್ಕೆ ಚುನಾಯಿಸುವ ವಟುಗಳ ವಿಚಾರದ ಬಗ್ಗೆ ಸಮಾಜದಲ್ಲಿ ಭಿನ್ನಾಭಿಪ್ರಾಯ ಬಂದು ಕೊನೆಗೆ ಶ್ರೀ ಶೃಂಗೇರಿ ಪೀಠಾಧೀಶ್ವರರ ಸಹಕಾರದಿಂದಲೂ, ಆಗಿನ ಶ್ರೀ

ನಾಲ್ವಡಿ ಕೃಷ್ಣರಾಜ ಒಡೆಯರ್ ಮಹಾಪ್ರಭುಗಳ ಆಶ್ರಯದಿಂದಲೂ, ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರರು ಶ್ರೀ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಯವರ ತಪಃ ಪ್ರಭಾವದಿಂದಲೂ, ಮತ್ತು ವೇ|| ಪಂಡಿತ ಕಾಶೀನಾಥ ಶಾಸ್ತ್ರಿಗಳ ಪ್ರಭಾವದಿಂದಲೂ, ಅಭಿನವರೇಣುಕ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಯವರು ೧೧೮ನೇ ಪಟ್ಟಾಧೀಶ್ವರರಾಗಿ ಬಂದರು. ಇವರ ಅಧಿಕಾರಾಡಳಿತದಲ್ಲಿ ಸಂಸ್ಥಾನದ ಸಕಲ ವಿಧ ಕಾರ್ಯಕಲಾಪಗಳು ಸಾಂಗವಾಗಿ ಜರುಗಿಸಲ್ಪಟ್ಟವು. ಕರ್ನಾಟಕ ದೇಶದಲ್ಲಿ ಸಂಚರಿಸಿ ಈ ವೀರಶೈವ ಸಮಾಜದ ಮೂಲ ಪಂಚ ಗುರುಪೀಠಗಳನ್ನು ಮತ್ತು ವೀರಶೈವ ಧರ್ಮದ ನಿಜ ಸ್ವರೂಪವನ್ನು ಭಕ್ತಮಂಡಲಿಗೆ ತಿಳಿಯಪಡಿಸಿ ಈ ಪುರಾತನ ಗುರುಪೀಠಗಳನ್ನು ಬೆಳಕಿಗೆ ತಂದರು.....ಮೈಸೂರು ಮಹಾರಾಜ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ರವರೂ ಈ ಜಗದ್ಗುರುಗಳವರನ್ನು ಮೈಸೂರಿಗೆ ಬರಲು ಆಹ್ವಾನಿಸಿ ರಾಜಧಾನಿಯಲ್ಲಿ ಸಕಲ ರಾಜ ಬಿರುದಾವಳಿಗಳ ಸಮೇತ ಮಹಾ ಗೌರವದಿಂದ ಅರಮನೆಗೆ ಬಿಜಯಂಗೈಸಿಕೊಂಡು ಪಾದಪೂಜೆ ನಡೆಸಿ ತೀರ್ಥಪ್ರಸಾದಿಗಳನ್ನು ಭಕ್ತಿಯಿಂದ ಸ್ವೀಕರಿಸಿ ಗುರುಕಾಣಿಕೆಯನ್ನು ಸಮರ್ಪಿಸಿ ಫಲಾಶೀರ್ವಾದಗಳನ್ನು ಪಡೆದು ಆತ್ಮಾನಂದಭರಿತರಾದರು.



ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯ ಭಗವತ್ಪಾದರವರು ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯ ಭಗವತ್ಪಾದರವರಿಗೆ ವೀರ ಸಿಂಹಾಸನದ ಪಟ್ಟಾಧಿಕಾರವನ್ನು ಅನುಗ್ರಹಿಸುತ್ತಿರುವುದು.

ಪಂಚಪೀಠಗಳ ಸರ್ವತೋಮುಖವಾದ ಅಭಿವೃದ್ಧಿಗೆ ಅವಿಶ್ರಾಂತವಾಗಿ ದುಡಿದ ಲಿಂ|| ಪಂಡಿತ ಕಾಶೀನಾಥ ಶಾಸ್ತ್ರಿಗಳು.

ಇವರ ಕಾಲದಲ್ಲಿ ಇವರ ತಪಃ ಪ್ರಭಾವಕ್ಕೆ ತಲೆಬಾಗಿ ಬೆಂಗಳೂರು ಸಿಟಿ ನಿವಾಸಿಗಳಾದ ಶ್ರೀ ಬಳ್ಳಪ್ಪನವರು ತಮ್ಮ ಮತ್ತು ತಮ್ಮ ಪೂರ್ವಜರ ಪುಣ್ಯಾರ್ಥಪ್ರದವಾಗಿ ತಮಗಿದ್ದ ಸುಮಾರು 2 ಲಕ್ಷ ರೂ. ಬೆಲೆ ಬಾಳುವ ಮನೆಗಳು ಮತ್ತು ಅಂಗಡಿಗಳನ್ನು ಶ್ರೀ ಗುರುವಿನ ಪಾದಕ್ಕೆ ದಾನವಾಗಿ ಅರ್ಪಿಸಿದರು. ಶ್ರೀ ಗುರುಗಳು ಈ ದಾನವನ್ನು ಸ್ವೀಕರಿಸಿ ಈ ಬೆಂಗಳೂರು ಸಿಟಿಯ ವೀರಶೈವ ಸಮಾಜದವರನ್ನೇ ಟ್ರಸ್ಟಿಗಳನ್ನಾಗಿ ನಿಯಮಿಸಿ ಈ ಸ್ವತ್ತುಗಳಿಂದ ತೃಪ್ತಿಕರವಾಗಿ ಸಂಸ್ಕೃತ ವಿದ್ಯೆಯನ್ನು ಅಭ್ಯಾಸಿಸುವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಏರ್ಪಡಿಸಬೇಕೆಂದು ತೀರ್ಮಾನಿಸಿ ಈ ಸ್ವತ್ತುಗಳನ್ನು ಟ್ರಸ್ಟಿಗಳ ಸುಫರ್ದಿಗೆ ಬಿಟ್ಟುಕೊಟ್ಟರು. ಇದರಂತೆ ಈಗಲೂ ಇದು ಮಹಂತರ ಮಠದಲ್ಲಿ ಸಂಸ್ಕೃತ ವಿದ್ಯಾರ್ಥಿಗಳಿಗೆ ಆಶ್ರಯವಾಗಿ ನಡೆದುಕೊಂಡು ಬರುತ್ತಿದೆ.

ತಮ್ಮ ರಂಭಾಪುರೀ ಪೀಠದ ಬೃಹನ್ಮಠವು ಶಿಥಿಲವಾಗಿರಲು ವಿಶೇಷ ಧನ ವ್ಯಯದಿಂದ ಭವ್ಯವಾದ ಬೃಹನ್ಮಠವನ್ನು ಜೀರ್ಣೋದ್ಧಾರ ಮಾಡಿ ಶಾಶ್ವತಗೊಳಿಸಿ ಕೀರ್ತಿಶಾಲಿಗಳಾದರು. ಇವರು ತಮ್ಮ ಅಧಿಕಾರ ಕಾಲಮಾನದಲ್ಲಿ ನಡೆದ ದಸರ ಮಹೋತ್ಸವ

ವರ್ಧಂತಿ, ಉತ್ಸವ ಇನ್ನಿತರೆ ಮಹೋತ್ಸವಗಳ ಸಮಯದಲ್ಲಿ ಪಂಡಿತರಿಗೂ, ಶಾಸ್ತ್ರಿಗಳಿಗೂ, ಕೀರ್ತನೆಕಾರರರಿಗೂ. ಸಿಪಾಯಿಗಳಿಗೂ, ವಾದ್ಯಕಾರರಿಗೂ, ಕಲಾಕೌಶಲ್ಯಗಳುಳ್ಳವರಿಗೂ, ವಿದ್ವಾಂಸರಿಗೂ. ಆವರ ಯೋಗ್ಯತಾನುಸಾರವಾಗಿ ಸನ್ಮಾನ ಮಾಡಿ ವಸ್ತ್ರಾಭರಣ, ಪ್ರಶಸ್ತಿ, ಪದಕಾದಿಗಳನ್ನಿತ್ತು ಗೌರವಿಸಿ ವಿದ್ವತ್‌ಪ್ರಿಯರೆನಿಸಿ ಪ್ರಖ್ಯಾತಿಪಡೆದು ಚಿರಸ್ಮರಣೀಯರಾದರು.



ಅನಾಯಕತ್ವದಲ್ಲಿದ್ದ ಶ್ರೀಮದ್ರಂಭಾಪುರೀ ಪೀಠಕ್ಕೆ ಅರ್ಹರಾದ ಗುರುಪೀಠಾಭಿಮಾನಿಗಳನ್ನು ಪೀಠಾಧಿಕಾರಿಗಳಾಗಿ ಆರಿಸುವ ವಿಚಾರದಲ್ಲಿ ವೀರಶೈವ ಸಮಾಜದಲ್ಲಿ ವಿರೋಧ ವ್ಯಕ್ತಪಡಲು ಅದನ್ನು ತೊಡೆದು ಹಾಕುವುದಕ್ಕಾಗಿ ತಮ್ಮ ಉಜ್ಜಯಿನೀ ಪೀಠವನ್ನು ತ್ಯಜಿಸಿ ಬುಕ್ಕಾಂಬುಧಿ ಗಿರಿಯಲ್ಲಿ ಘೋರ ಶಿವಯೋಗ ತಪೋಮಗ್ನರಾಗಿರುವ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾ ಸ್ವಾಮಿಯವರು.

ತರುವಾಯ ಎಲ್ಲ ಕಾರ್ಯಗಳೂ ಇವರ ಸಂಕಲ್ಪದಂತೆ ನಡೆದವು.

ಇವರ ಕಾಲಾವಧಿಯಲ್ಲಿ ಶ್ರೀಮದುಜ್ಜಯಿನೀ ಸದ್ಧರ್ಮ ಪೀಠದ ಪಟ್ಟಾಧಿಕಾರವನ್ನು ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರಿಗೆ ಕೊಟ್ಟು ಅನುಗ್ರಹಿಸಿದರು. ಮತ್ತು ಇವರು ಕಾಶೀಕ್ಷೇತ್ರಕ್ಕೆ ದಯಮಾಡಿಸಿ ಕಾಶೀ ಕ್ಷೇತ್ರದ ಜ್ಞಾನಸಿಂಹಾಸನ ಪೀಠದ ಪಟ್ಟಾಧಿಕಾರವನ್ನು ಹಿಂದಿನ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಯವರಿಗೆ ಕೊಟ್ಟು ಅನುಗ್ರಹಿಸಿದರು.

ಈ ಮಹಾಸ್ವಾಮಿಯವರು ಸಂಚಾರಾರ್ಥವಾಗಿ ಬೆಂಗಳೂರು ಕ್ಯಾಂಪಿನಲ್ಲಿದ್ದಾಗ ದೇಹಾಲಸ್ಯ ತಲೆ ದೋರಲಾಗಿ ತಮ್ಮ ಪೀಠದ ಪಟ್ಟಾಧಿಕಾರವನ್ನು ಆಗ ಬೆಂಗಳೂರು ಸಿಟಿ ಚಿಕ್ಕಪೇಟೆ ಶ್ರೀ ಮಹಂತರು ಮಠದ ಪಟ್ಟಾಧ್ಯಕ್ಷರಾಗಿದ್ದ ಪಾಲಿಕೊಪ್ಪದ ಬೃಹನ್ಮಠಾಧ್ಯಕ್ಷ ಗಂಗಾಧರ ಶಿವಾಚಾರ್ಯರಿಗೆ ವಹಿಸತಕ್ಕದ್ದೆಂದು ವಿಲ್‌ಬರಿಸಿ ರಿಜಿಸ್ಟರ್ ಮಾಡಿಸಿ ತಾ॥ 1-8-1946 ರಂದು ಶಿವೈಕ್ಯರಾದರು.

ಈಗಿನ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಯವರು ಶ್ರೀ ಮದುಜ್ಜಯಿನೀ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರಿಂದ ತಾ॥ 2-5-1947 ರಂದು ಶ್ರೀಮದ್‌ರಂಭಾಪುರೀ ಮಠದ ಪೀಠಾಧಿಕಾರವನ್ನು ಪಡೆದು ಭಕ್ತೋದ್ಧಾರ ಕಾರ್ಯದಲ್ಲಿ ನಿರತರಾಗಿರುತ್ತಾರೆ.

ಇವರ ಶಿವಪೂಜಾವೈಭವವು ಅತಿಮಹತ್ವದ್ದಾಗಿದ್ದು ಹಿಂದೆ, ಮುಂದೆಂದೂ, ಯಾರಿಂದಲೂ ನಡೆಯಲಾರದೆಂಬ ವಿಷಯವು ಕರ್ಣಾಟಕದ ಭಕ್ತಾದಿಗಳ ಮನೆಮಾತಾಗಿ, ಇವರ ಪೂಜಾ ವ್ಯವಸ್ಥೆ ತಿಳಿದಾಗ ಭಕ್ತಾದಿಗಳು ತಾನು ಮುಂದು ನಾನು ಮುಂದು ಎಂದು ಜನರ ಗುಂಪು ಅಧಿಕವಾಗಿ ಕೂಡುತ್ತದೆ.

ಈ ನವೀನ ಕಾಲದಲ್ಲಿ ವೀರಶೈವರಲ್ಲಿ ಸಾಮೂಹಿಕ ಲಿಂಗಪೂಜಾ ವೈಭವವನ್ನು ನೋಡಿದರೆ ಎಂತಹ ನಾಸ್ತಿಕನಿಗೂ ಶಿವ ಪೂಜಾ ಮನಸ್ಸು ಉಂಟಾಗುತ್ತದೆ.

ಇವರು ದೇಶ ಸಂಚಾರದಲ್ಲೆಲ್ಲಾ ಸಹಸ್ರ ಕುಂಭಾಭಿಷೇಕದ ಪೂರ್ವಕ ಶಿವಪೂಜಾ ವೈಭವವನ್ನಾಚರಿಸಿ ಭಕ್ತಮಂಡಲಿಗೆ ಶಿವಯೋಗಾನಂದವನ್ನು ಉಣಬಡಿಸುತ್ತಿದ್ದಾರೆ. ಇದರಿಂದ ಇವರಿಗೆ ವರ್ಷಾಕಾಲವೂ ಬಿಡುವಿಲ್ಲದೆ ಭಕ್ತರ ಆಹ್ವಾನಗಳು ಅಧಿಕವಾಗುತ್ತಿವೆ.

ಇವರು ಧಾರವಾಡ ಜಿಲ್ಲೆಯಲ್ಲಿ ಮುಕ್ತಿಮಂದಿರ ಧರ್ಮಕ್ಷೇತ್ರವನ್ನು ಸ್ಥಾಪಿಸಿ ಶ್ರಾವಣ ಮಾಸ ಮತ್ತು ಶಿವರಾತ್ರಿಗಳಲ್ಲಿ ಜಾತ್ರೆ ನಡೆಯುವಂತೆ ವ್ಯವಸ್ಥೆಮಾಡಿರುತ್ತಾರೆ.

ಭಾರತದ ಹಿಂದಿನ ರಾಷ್ಟ್ರಪತಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಶ್ರೀ ರಂಭಾಪುರಿ ಜಗದ್ಗುರು ಶ್ರೀ ಶ್ರೀ ಗಂಗಾಧರ ಶಿವಾಚಾರ್ಯ ಮಹಾ ಸ್ವಾಮಿಯವರ ದರ್ಶನಾಶೀರ್ವಾದ ಪಡೆದುದು.

ಇವರ ಸ್ವಾಧೀನದಲ್ಲಿದ್ದ ಬೆಂಗಳೂರು ಸಿಟಿಯ ಸುಮಾರು 10 ಲಕ್ಷ ರೂ. ಬೆಲೆ ಬಾಳುವ ಭಾರಿ ಬಂಗಲೆಯನ್ನು ಟ್ರಸ್ಟ್ ಕಮಿಟಿಯನ್ನು ನಿಯಮಿಸಿ ಈ ಕಮಿಟಿಗೆ ಬಿಟ್ಟುಕೊಟ್ಟು ಶ್ರೀ ಜಗದ್ಗುರು ರೇಣುಕಾಚಾರ್ಯ ಎಜುಕೇಷನ್ ಸೊಸೈಟಿಯೆಂಬ ಹೆಸರಿನಿಂದ ಲಾ, ಆರ್ಟ್ಸ್, ಸೈನ್ಸ್, ಕಾಮರ್ಸ್ ಕಾಲೇಜುಗಳು ನಡೆಸಲ್ಪಡುತ್ತಾ ಸುಮಾರು 4-5 ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ದಾಯಕವಾಗಿ ವಿದ್ಯಾದಾನ ನಡೆಸಲ್ಪಡುತ್ತಿದೆ. ಇವರ ಈ ಸ್ತುತ್ಯ ಕಾರ್ಯದಿಂದ ಬಾಳೆಹೊನ್ನೂರು ಶ್ರೀಮದ್‌ರಂಭಾಪುರೀ ವೀರಸಿಂಹಾಸನ ಪೀಠವು ಆಚಂದ್ರಾರ್ಕವಾಗಿ ನಿಂತ ಕೀರ್ತಿ ಈ ಮಹಾಸ್ವಾಮಿಯವರದಾಗಿರುತ್ತೆ.

ಈ ಭಗವತ್ಪಾದರವರಿಂದ ಇನ್ನೂ ಹೆಚ್ಚಿನ ಮಹತ್ಕಾರ್ಯಗಳು ಭಕ್ತೋದ್ಧಾರಕ್ಕಾಗಿ ನಡೆಯಲ್ಪಡುವುದೆಂದು ಭಕ್ತ ಮಂಡಲಿಯು ಎದುರುನೋಡುತ್ತಿದೆ.

ಶಿವಂ ಭೂಯಾತ್



ಶ್ರೀಮದುಜ್ಜಯಿನೀ ಜಗದ್ಗುರು ಶ್ರೀ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು

॥ ಶ್ರೀ ಜಗದ್ಗುರು ದಾರುಕಾಚಾರ್ಯಃ ಪ್ರಸೀದತು ॥

ಶ್ರೀ ಉಜ್ಜಯನಿ ಪೀಠದ ಪರಿಚಯ

ಶ್ರೀ ಶಿವಾಗಮೋಕ್ತದಂತೆ ಪರಶಿವನ ವಾಮದೇವ ಮುಖೋಧ್ಭೂತರಾಗಿ ಭಾರತದ ಜ್ಯೋತಿರ್ಲಿಂಗಗಳಲ್ಲೊಂದಾದ ಉತ್ತರ ಹಿಂದೂಸ್ಥಾನದ ಕಾಲಿಕಾ ಉಜ್ಜಯಿನಿ ವಟವೃಕ್ಷ ಸಿದ್ಧೇಶ್ವರ ಲಿಂಗದಿಂದ ಜಗದ್ಗುರು ಮರುಳಾರಾಧ್ಯರು ಆವಿರ್ಭವಿಸಿ ಅಲ್ಲಿ ಶಿವಾದ್ವೈತ ಸಿದ್ಧಾಂತ ಪ್ರಚಾರಕ್ಕಾಗಿ ಸದ್ಧರ್ಮ ಸಿಂಹಾಸನದ ಪೀಠವನ್ನು ಸ್ಥಾಪಿಸಿದರು. ಇಲ್ಲಿ ನೂರಾರು ಪೀಠಾಧಿಕಾರಿಗಳಾಗಿ ಪರಧರ್ಮೀಯರ ಉಪಟಳದಿಂದ ಆಗಿನ ಪೀಠಾಧಿಕಾರಿಗಳಾಗಿದ್ದ ಜ॥ ಮರುಳಾರಾಧ್ಯರು ಜ॥ ರೇವಣ ಸಿದ್ಧೇಶ್ವರರ ಅಪ್ಪಣೆ ಮೇರೆಗೆ ತಮ್ಮ ಪೀಠವನ್ನು ದಕ್ಷಿಣ ದೇಶಕ್ಕೆ ಒಯ್ದು ಕಲ್ಯಾಣದ ಸೋಮೇಶ್ವರನ ಸಹಾಯದಿಂದ ಬಳ್ಳಾರಿ ಜಿಲ್ಲಾ ಕೊಟ್ಟೂರು ಬಳಿ ಆ ಧರ್ಮಪೀಠವನ್ನು ಸುಮಾರು ಕ್ರಿ. ಶ. 1054 ರಲ್ಲಿ ಸ್ಥಾಪಿಸಿದರು. ನಂತರ ಈ ಸ್ಥಳವೇ ಉಜ್ಜಯಿನಿ ಎಂದು ಸಂಬೋಧಿಸಿ ಸದ್ಧರ್ಮ ಸಿಂಹಾಸನದ ಮೂಲಪೀಠವಾಯಿತು. ಈ ವಿಚಾರಗಳು ಆಗಮಗಳಿಂದಲೂ ಮತ್ತು ಹೂಲಿಯ ನಂದೀಶ ಕವಿಯು ರಚಿಸಿದ "ಮರುಳಾರಾಧ್ಯ ವಿಜಯ ಕಾವ್ಯ" ದಲ್ಲಿಯೂ ವ್ಯಕ್ತಪಡುತ್ತೆ.

ಈ ಉಜ್ಜಯಿನಿಯ ಮರುಳಸಿದ್ಧೇಶ್ವರ ದೇವಸ್ಥಾನದ ರಚನೆ ಶಿಥಿಲವಾದ ಮಹಾದ್ವಾರದ ಉಪ್ಪರಿಗೆ ಮತ್ತು ಕೆಲವು ಅವಶೇಷಗಳು ಅಲ್ಲಿ ಹೂಳಿರುವ ನೆಲಮನೆಯ ಶಿವಲಿಂಗ, ಶಿಲಾಲೇಖ ಇವುಗಳನ್ನು ಶೋಧಿಸಿದಲ್ಲಿ ಈ ಪೀಠವು ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದಿನದೆಂದು ನಿರ್ಣಯಿಸಲ್ಪಟ್ಟಿರುತ್ತೆ. ಈ ಪೀಠಕ್ಕೆ 109 ಜನ ಪೀಠಾಧೀಶ್ವರರಾಗಿ ಹೋಗಿರುವರೆಂದು ತಿಳಿದುಬರುವುದು.

ಈ ಗುರುಪರಂಪರೆಯಲ್ಲಿ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳವರು 103 ನೆಯ ಪೀಠಾಧೀಶ್ವರರಾಗಿ ಬಂದು ಮಹಾಸಂಸ್ಥಾನದ ಆಡಳಿತವನ್ನು ಭಕ್ತ ಮಂಡಲಿಯವರ ಶ್ರೇಯೋಭಿವೃದ್ಧಿಗಾಗಿ ವಿಸ್ತರಿಸಿ ಬಹಳ ದಕ್ಷತೆಯಿಂದಲೂ, ತಮ್ಮ ಶಿವಯೋಗ ತಪಃಪ್ರಭಾವದಿಂದಲೂ ಪೀಠವನ್ನು ಉನ್ನತ ಸ್ಥಿತಿಗೆ ತಂದರು. ಇವರು ಶಿವಪೂಜಾಧುರಂಧರರಾಗಿ ಆಗಾಗ್ಗೆ ದೇಶದಲ್ಲಿ ಸಂಚರಿಸಿ ಭಕ್ತರಿಗೆ ಧರ್ಮೋಪದೇಶ ಮಾಡುತ್ತಾ, ವೀರಶೈವ ಧರ್ಮಸಾಮ್ರಾಜ್ಯಪರಿಪಾಲನೆ ಮಾಡುತ್ತಿದ್ದು ಕೀರ್ತಿಶೇಷರಾಗಿ ಕೆಲವು ಕಾಲಾನಂತರ ಲಿಂಗೈಕ್ಯರಾದರು.

ಇವರ ತರುವಾಯ 104 ನೇ ಶ್ರೀ ಜಗದ್ಗುರು ಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಧೀಶ್ವರರಾಗಿ ಈ ವೀರಶೈವ ಧರ್ಮಸಾಮ್ರಾಜ್ಯವನ್ನು ಹಿಂದಿನವರಂತೆ ನಡೆಸಿಕೊಂಡು ಶಿವಪೂಜಾನಂದಲೋಲರಾಗಿ ಪೀಠದ ಗೌರವವನ್ನು ಹೆಚ್ಚಿಸಿ, ಭಕ್ತವೃಂದಕ್ಕೆ ಅಚ್ಚುಮೆಚ್ಚಿನವರಾಗಿ ಕೆಲವು ಕಾಲಾನಂತರ ಶಿವೈಕ್ಯರಾದರು.

ಇವರ ತರುವಾಯ 105ನೆಯವರಾಗಿ ಶ್ರೀ ಶ್ರೀ 1008 ಜಗದ್ಗುರು ಗುರುಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಧೀಶ್ವರರಾಗಿ ಬಂದರು. ಇವರೂ ಪದ್ಧತಿ ಪ್ರಕಾರ ದೇಶದಲ್ಲಿ ಸಂಚರಿಸಿ ಭಕ್ತಾದಿಗಳಿಗೆ ಧರ್ಮೋಪದೇಶ ಮಾಡುತ್ತಾ ಕೆಲವು ಕಾಲ ಕಳೆದ ನಂತರ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕ್ ಮಂಗಾಪುರ ಎಂಬ ಗ್ರಾಮದಲ್ಲಿ ಶಿವೈಕ್ಯರಾದರು.

ಇವರ ತರುವಾಯ 106ನೆಯವರಾಗಿ ಶ್ರೀ ಜಗದ್ಗುರು ಮರುಳಸಿದ್ಧ ಶಿವಾಚಾರ್ಯ ಮಹಾಸ್ವಾಮಿಯವರು ಪೀಠಾಧೀಶ್ವರರಾಗಿ ಬಂದರು. ಇವರು ತುಂಬಾ ವಿದ್ಯಾವಂತರೂ, ವಾಗ್ಮಿಗಳೂ, ಧೈರ್ಯಶಾಲಿಗಳೂ, ಆಗಿದ್ದರಲ್ಲದೆ ಶಿವಾನುಭವ ಶಾಸ್ತ್ರ ನಿಪುಣರಾಗಿ "ಶಿಷ್ಯಸಂತಾಪ ಹರಣ" "ಶಿವಾನುಭವ", " ಪತಂಜಲಿ ಯೋಗಶಾಸ್ತ್ರ " ಎಂಬ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಹೀಗೆ ಕೆಲಕಾಲ ಇವರು ಅಧಿಕಾರ ನಡೆಸುತ್ತಾ ತಮ್ಮ ಪೀಠದ ಆಡಳಿತವನ್ನು ಅಭಿವೃದ್ಧಿಗೆ ತರಬೇಕೆಂದಾಲೋಚಿಸಿ ತುಂಬರಗುದ್ದಿ ಗ್ರಾಮದ ಶ್ರೀ ವಿರೂಪಾಕ್ಷ ಶಾಸ್ತ್ರಿಗಳಿಗೆ ಸ್ಥಿರಪಟ್ಟಾಧಿಕಾರವನ್ನೂ ಬಂಗಾರನಾಯಕಾನಹಳ್ಳಿ ಶ್ರೀ ಸಿದ್ಧಲಿಂಗಾರ್ಯರೆಂಬುವರಿಗೆ ಚರಪಟ್ಟಾಧಿಕಾರವನ್ನೂ ವಹಿಸಿದರು. ಕೆಲವು ಕಾಲಾನಂತರ ಹೊಟ್ಟೂರು ನಗರದಲ್ಲಿ ಶಿವೈಕ್ಯರಾದರು.

ಇವರ ತರುವಾಯ ಇವರ ಸಂಕಲ್ಪದಂತೆ ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ಶ್ರೀ ಜಗದ್ಗುರು ಚನ್ನಬಸವ ಶಿವಾಚಾರ್ಯರೆಂಬ ನಾಮಾಂಕಿತದಿಂದ ಈ ಪೀಠದ 107ನೇ ಸ್ಥಿರ ಪಟ್ಟಾಧ್ಯಕ್ಷರಾದರು. ಇವರು ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಪಂಡಿತರೂ. ಮೇಧಾವಿಗಳೂ, ಸಮಾಜೋದ್ಧಾರಕಾರ್ಯದಲ್ಲಿ ಉತ್ಸುಕತೆಯುಳ್ಳವರೂ ಆಗಿದ್ದರು.

ತರುವಾಯ ಹರಪನಹಳ್ಳಿ ಪ್ರಾಂತ್ಯ ಸಂಚಾರದಲ್ಲಿದ್ದು ಬಳ್ಳಾರಿಯಲ್ಲಿ ಜರುಗಿದ 5ನೇ ಅಖಿಲಭಾರತ ವೀರಶೈವ ಮಹಾ ಸಭೆಗೆ ದಯಮಾಡಿಸಿ ಮಾರ್ಗಮಧ್ಯೆ ಕಡೆಕೊಳ್ಳ ಎಂಬ ಗ್ರಾಮದಲ್ಲಿ ವೀರಶೈವ ಸಮಾಜದ ದುರ್ದೈವದಿಂದ ಆಕಸ್ಮಾತ್ ಲಿಂಗೈಕ್ಯರಾದರು.

ಹಿಂದಿನ ಪೀಠಾಧೀಶ್ವರರಾದ
ಲಿ॥ ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯ
ಮಹಾ ಸ್ವಾಮಿಗಳು.



ಈಗಿನ ಜಗದ್ಗುರುಗಳವರ ಹಿಂದಿನವರಾದ ಶ್ರೀಮದ್
ಉಜ್ಜಯಿನಿ ಪೀಠದ ಸದ್ಧರ್ಮ ಸಿಂಹಾಸನಾಧೀಶ್ವರ
ಲಿಂ॥ ಸಿದ್ಧಲಿಂಗ ಶಿವಾಚಾರ್ಯ ಮಹಾ ಸ್ವಾಮಿಯವರು
ತಮ್ಮ ಆತ್ಮೀಯ ಶಿಷ್ಯರಾದ ಲಿಂ॥ ಪಂಡಿತ ಕಾಶೀನಾಥ
ಶಾಸ್ತ್ರಿಗಳೊಂದಿಗೆ ಆಸನಾರೂಢರಾಗಿರುವುದು.

ಇವರ ತರುವಾಯ ಈ ಪೀಠದ ಚರಪಟ್ಟಾಧ್ಯಕ್ಷರಾಗಿದ್ದ ಹಿರೇಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯರೇ ಈ ಪೀಠದ 108ನೇ ಪೀಠಾಧೀಶ್ವರರಾಗಿ ಬೆಳಗಿದರು. ಇವರು ಕನ್ನಡ ಮತ್ತು ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸರಾಗಿ ತರ್ಕ, ವೇದಾಂತ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ಬಲ್ಲಿದರಾಗಿದ್ದರು. ಇವರಲ್ಲಿ ಜಿತೇಂದ್ರಿಯತ್ವವೂ ಶಿವಪೂಜಾನಿಷ್ಠೆಯೂ, ದಿವ್ಯಜ್ಞಾನವೂ, ತಪೋಬಲವೂ ಪ್ರಬಲವಾಗಿ ಮಹಾ ಶಿವಯೋಗಿಗಳೆಂದು ಪ್ರಖ್ಯಾತಗೊಂಡು ಶಾಪಾನುಗ್ರಹ ಸಮರ್ಥರಾಗಿದ್ದರು.

ಈ ಮಹಾನುಭಾವರು ಶ್ರೀ ಜಗದ್ಗುರು ಪಂಚಮಹಾ ಪೀಠಗಳನ್ನು ಜಗತ್ತಿನಲ್ಲಿ ಪ್ರಕಾಶಕ್ಕೆ ತರಬೇಕೆಂದೂ ಗುರುವರ್ಗದವರು ಸುಧಾರಿಸಿ ಪ್ರಸಿದ್ಧಿಗೆ ಬರಬೇಕೆಂದೂ, ವೀರಶೈವ ಸಮಾಜಾಭಿವೃದ್ಧಿಯಾಗಿ ಧರ್ಮ, ನೀತಿ, ಭಕ್ತಿ, ಶ್ರದ್ಧೆಗಳು ಬೆಳೆಯಬೇಕೆಂದೂ ಹಗಲಿರಳೂ ಅತ್ಯಂತ ಕಳಕಳಿಯಿಂದ ಪ್ರಯತ್ನಿಸುತ್ತಿದ್ದರು. ಇವರ ಪ್ರಯತ್ನಕ್ಕೆ ಅನುಕೂಲವಾಗಿ ನಾಗನೂರು ಬೃಹನ್ಮಠದ ವೇ॥ ಪಂಡಿತ ಕಾಶಿನಾಥ ಶಾಸ್ತ್ರಿಗಳವರು ಕಾರ್ಯದಕ್ಷರಾಗಿ ನಿಂತರು. ಬಹುಕಾಲದಿಂದಲೂ ಕರ್ಣಾಟಕ ಪ್ರಾಂತ್ಯಕ್ಕೆ ಆಗಮಿಸದೇ ಇದ್ದ ಶ್ರೀಹಿಮವತ್ ಕೇದಾರ ಪೀಠದ ಜಗದ್ಗುರು ವಿಶ್ವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಬರಮಾಡಿಕೊಂಡು ಅವರ ಉತ್ಸವಾದಿಗಳಿಗೆ ನಾನಾ ರೀತಿಯಿಂದ ಸಹಾಯ ನೀಡಿ ವೀರಶೈವ ಜಗತ್ತಿಗೆ ಈ ಪಂಚಮಹಾ ಪೀಠಗಳೇ ಮೂಲ ಪೀಠಗಳೆಂದು ತೋರಿಸಿಕೊಟ್ಟರು. ಈ ರೀತಿ ಇತರ ನಾಲ್ಕು ಗುರು ಪೀಠಗಳ ಮೇಲೆಯೂ ಪೂರ್ಣಾಭಿಮಾನವಿಟ್ಟುಕೊಂಡು ಅವುಗಳ ಆಗು ಹೋಗುಗಳ ವಿಚಾರದಲ್ಲಿ ತುಂಬಾ ಎಚ್ಚರಿಕೆಯಿಂದ ಕಾರ್ಯಭಾರ ನಡೆಸಿ ಪೀಠಗಳ ಕೀರ್ತಿಯನ್ನು ಸರ್ವತ್ರ ಬೆಳಗಿಸಿದರು.

ಸಮಾಜೋದ್ಧಾರಕ್ಕಾಗಿ ಬಳ್ಳಾರಿಯಲ್ಲಿ ವಿದ್ಯಾವರ್ಧಕ ಸಂಘ ಸ್ಥಾಪನೆಮಾಡಿದರು. ಕೊಟ್ಟೂರಲ್ಲಿ ಶ್ರೀ ದಾರುಕಾಚಾರ್ಯ ಸಂಸ್ಕೃತ ಪಾಠಶಾಲಾ ಸ್ಥಾಪಿಸಿದರು. ಉಜ್ಜಯಿನೀ ಮಠವನ್ನು 30–40 ಸಹಸ್ರ ರೂಪಾಯಿ ವೆಚ್ಚದಿಂದ ಜೀರ್ಣೋದ್ಧಾರ ಮಾಡಿ ಭವ್ಯವಾದ ಶಿಲಾಮಠವನ್ನು ನಿರ್ಮಾಣಮಾಡಿದರು. ಉಜ್ಜಯನೀ ಮಹಾ ಸಂಸ್ಥಾನದಲ್ಲಿ ಧಾರ್ಮಿಕ ವಿದ್ಯಾಭಿ

ವೃದ್ಧಿಗಾಗಿ ಮಹಾ ವಿದ್ಯಾಪೀಠ (ಸಂಸ್ಕೃತ ಕಾಲೇಜು) ಸ್ಥಾಪಿಸಲು 60–70 ಸಹಸ್ರ ರೂಪಾಯಿಗಳ ನಿಧಿಯನ್ನು ಕೂಡಿಸಿದ್ದರು.

ಈ ಕಾಲದಲ್ಲಿ ಶ್ರೀಮದ್ರಂಭಾಪುರೀ ಪೀಠದ ಜಗದ್ಗುರುಗಳವರಾದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಪೀಠದ ಮುಂದಿನ ಪೀಠಾಧೀಶ್ವರರನ್ನು ನಿಯಮಿಸಲು ಸಾಧ್ಯವಾಗದೆ ಶಿವೈಕ್ಯರಾದ್ದರಿಂದ ಈ ಪೀಠದ ಪಟ್ಟಾಧಿಕಾರಿಗಳನ್ನು ಆರಿಸುವ ಬಗ್ಗೆ ಸಮಾಜದಲ್ಲಿ ಬಹುವಿಧವಾದ ಭಿನ್ನಾಭಿಪ್ರಾಯವೊದಗಿ 4–5 ವರ್ಷಗಳು ಶ್ರೀಮದ್ರಂಭಾಪುರೀ ಪೀಠಕ್ಕೆ ಪೀಠಾಧೀಶ್ವರರೇ ಇಲ್ಲದೆ ಅನಾಯಕತ್ವವೊದಗಲಾಗಿ, ಈ ಪಟ್ಟಾಧೀಶ್ವರರನ್ನು ಚುನಾಯಿಸುವ ಕಾರ್ಯಕ್ಕೆ ಪಂಡಿತ ಕಾಶೀನಾಥ ಶಾಸ್ತ್ರಿಗಳವರನ್ನು ನಿಯಮಿಸಿ ತಾವು ಬುಕ್ಕಾಂಬುಧಿ ಬಳಿ ಪುಣ್ಯಗಿರಿಯಲ್ಲಿ ಕಠಿಣತರವಾದ ತಪವನ್ನಾಚರಿಸಿ ಶಿವಯೋಗದಿಂದಿದ್ದು ಕೊನೆಯಲ್ಲಿ ತಮ್ಮ ಸಂಕಲ್ಪದ ವಟುವನ್ನೇ ಈ ವೀರಪೀಠದ ಪಟ್ಟಾಧೀಶ್ವರರನ್ನಾಗಿ ಮಾಡಿ ತಮ್ಮ ಅಮೃತಹಸ್ತದಿಂದ ಪಟ್ಟಾಧಿಕಾರವನ್ನು ಕೊಟ್ಟು ಚರಿತ್ರಾರ್ಹರಾದರು.

ತಮ್ಮ ಸಂಸ್ಥಾನ ಮಠದಲ್ಲಿ ಪದ್ಧತಿಯಂತೆ ಶ್ರೀ ಮರುಳ ಸಿದ್ಧೇಶ್ವರ ರಥೋತ್ಸವ ಮತ್ತು ದೇವಾಲಯ ಶಿಖರದ ತೈಲ ಧಾರಾಭಿಷೇಕಾದಿ ಮಹೋತ್ಸವಗಳನ್ನು ವರ್ಷಂಪ್ರತಿ ನಡೆಸುತ್ತಿದ್ದರಲ್ಲದೆ ಜಾತ್ರೆಯ ಕಾಲದಲ್ಲಿ "ಸದ್ಧರ್ಮ ಪರಿಷತ್" ನಡೆಯಲು ಏರ್ಪಡಿಸಿ ಕಾರ್ಯಕ್ರಮಗಳು ಪೂರ್ಣವಾದ ಬಳಿಕ, ಪಂಡಿತರಿಗೂ, ವಿದ್ವಾಂಸರಿಗೂ, ಕೀರ್ತನಕಾರರಿಗೂ, ಗವಾಯಿಗಳಿಗೂ, ವಾದ್ಯಗಾರರಿಗೂ ಸನ್ಮಾನಗಳನ್ನಿತ್ತು ಸಂತೈಸುತ್ತಿದ್ದರು.

ಇವರು ದೇಶದಲ್ಲಿ ಸಂಚರಿಸುತ್ತಿದ್ದಾಗಲೂ ಮತ್ತು ಪೀಠದಲ್ಲಿ ಇರುವಾಗಲೂ ಭಕ್ತಾದಿಗಳಲ್ಲದೆ ಇತರ ಮತಾವಲಂಬಿಗಳೂ ಸಹ ಇವರ ದರ್ಶನಕ್ಕೆ ಬಂದು ವಂದಿಸಿ, ಪೂಜಿಸಿ, ಸದ್ಬೋಧ ಶ್ರವಣ ಮಾಡಿ, ಫಲಾಶೀರ್ವಾದ ಪಡೆದುಕೊಳ್ಳುತ್ತಿದ್ದರು. ಈ ಸದ್ಗುರುವಿನ ಕೃಪೆಯಿಂದ ಎಷ್ಟೋ ಜನರ ರೋಗಗಳು ನಿವಾರಣೆಯಾಗಿವೆ. ಸಂತಾನಾಪೇಕ್ಷೆಯಿದ್ದವರು ಸಂತಾನ ಪಡೆದರು. ಹಲವರು ತಮ್ಮ ಕಷ್ಟಗಳಿಂದ ಪಾರಾಗಿ ಸುಖಶಾಂತಿ ಪಡೆದರು. ಹೀಗೆ ಬಹು ಜನರು ಇಷ್ಟಾರ್ಥ ಹೊಂದಿ ಈ ಮಹಾ ಶಿವಯೋಗಿಗಳು ಅಣಿಮಾದಿ ಅಷ್ಟಸಿದ್ಧಿಗಳುಳ್ಳವರೆಂತಲೂ ಸಾಕ್ಷಾತ್ ಪರಶಿವಾವತಾರಿಗಳೆಂತಲೂ ಕೊಂಡಾಡುತ್ತಿದ್ದರು.

ಶ್ರೀ ಕಾಶೀ ಕ್ಷೇತ್ರದ ಶ್ರೀಮದ್‌ಜ್ಞಾನ ಸಿಂಹಾಸನ ಪೀಠದಲ್ಲಿ 1918ನೇ ಇಸ್ವಿಯಲ್ಲಿ ಇವರ ಪ್ರಯತ್ನದಂತೆ ಪಂಚಾಚಾರ್ಯರ ಸಮ್ಮೇಳನ ನಡೆದು ಇವರ ಪೂರ್ಣ ಪ್ರಭಾವದಿಂದ ಸಮ್ಮೇಳನವು ಯಶಸ್ವಿಯಾಗಿ ನಡೆಯಿತು.

ಈ ರೀತಿ ಈ ಸದ್ಧರ್ಮ ಪೀಠವು ಪ್ರಕಾಶಕ್ಕೆ ಬಂದು ಇವರನಂತರ ಈಗಿನ ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರು ಪಟ್ಟಾಧೀಶ್ವರರಾಗಿ ಬಂದು ವೀರಶೈವ ಸಾಮ್ರಾಜ್ಯ ಸಂಸ್ಥಾನಾಡಳಿತವನ್ನು ನಡೆಸುತ್ತಿದ್ದಾರೆ.

ಈ ಜಗದ್ಗುರುಗಳವರು ಕನ್ನಡ, ಸಂಸ್ಕೃತ ವಿದ್ಯಾ ವಿಶಾರದರಾಗಿರುತ್ತಾರೆ. ಇವರು ಹಿಂದಿನವರಂತೆ ಪೀಠದ ಆಡಳಿತ ನಡೆಸಿಕೊಂಡು ಶಿವಯೋಗಾನಂದದಲ್ಲಿ ಲೋಲರಾಗಿರುತ್ತಾರೆ.

ಇವರು ತಾ॥ 7–7–1940 ರಂದು ಶ್ರೀಶೈಲ ಸೂರ್ಯ ಸಿಂಹಾಸನಕ್ಕೆ ಈಗಿನ ಶ್ರೀ ಶ್ರೀ ಶ್ರೀ 1008 ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಯವರಿಗೆ ಪಟ್ಟಾಧಿಕಾರ ಅನುಗ್ರಹಿಸಿದರು.

ತಾ॥ 2–5–1947 ರಂದು ಶ್ರೀಮದ್ರಂಭಾಪುರೀ ವೀರಪೀಠದ ಪಟ್ಟಾಧಿಕಾರವನ್ನು ಈಗಿನ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನರೇಣುಕ ವೀರ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಯವರಿಗೆ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಮಹಾಸ್ವಾಮಿಯವರೊಂದಿಗೆ ನೆರವೇರಿಸಿದರು.

ಸನ್ 1948 ನೇ ವರುಷದಲ್ಲಿ ಕಾಶೀ ಕ್ಷೇತ್ರದ ಜ್ಞಾನ ಸಿಂಹಾಸನ ಪೀಠದ ಪಟ್ಟಾಧಿಕಾರವನ್ನು ಈಗಿನ ಶ್ರೀ ಶ್ರೀ ಶ್ರೀ 1008 ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರೊಡನೆ ಅನುಗ್ರಹಿಸಿರುತ್ತಾರೆ.

ಇವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಶ್ರೀ ಮುಕ್ತಿ ಮಂದಿರ ಧರ್ಮ ಕ್ಷೇತ್ರದಲ್ಲಿ 1950 ನೇ ವರ್ಷದಲ್ಲಿ ನಡೆಸಿದ ಚತುರಾಚಾರ್ಯರ ಸಮ್ಮೇಳನಕ್ಕೆ ದಯಮಾಡಿಸಿ ಗುರುಪೀಠಗಳ ಐಕ್ಯತೆಯನ್ನು ಬಲಗೊಳಿಸಿದರು.

ತಾ॥ 11–5–1966 ರಂದು ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ವಾಗೀಶ ಪಂಡಿತಾರಾಧ್ಯ ಮಹಾಸ್ವಾಮಿಯವರು ಗುಂತುಕಲ್ಲಿನ ತಮ್ಮ ಖಾಸಾ ಪೀಠದಲ್ಲಿ ತಮ್ಮ ರಜತೋತ್ಸವದ ಬಗ್ಗೆ ಏರ್ಪಡಿಸಿದ್ದ ಚತುರಾಚಾರ್ಯರ ಸಮ್ಮೇಳನದಲ್ಲೂ ಭಾಗವಹಿಸಿದ್ದರು.

ಪುನಃ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಶ್ರೀ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಏರ್ಪಡಿಸಿದ್ದ ಪಂಚಾಚಾರ್ಯರ ಸಮ್ಮೇಳನಕ್ಕೂ ದಯಮಾಡಿಸಿ ಭಕ್ತ ಮಂಡಲಿಗೆ ಸದ್ಧರ್ಮೋಪದೇಶಮಾಡಿ ಹರಸಿದರು.

ಇಂದಿಗೂ ದೇಶ ಮಧ್ಯದಲ್ಲಿ ಧರ್ಮೋಪದೇಶ ನಡೆಸುತ್ತಾ ಭಕ್ತಮಂಡಲಿಗೆ ಜ್ಞಾನ ತೃಪ್ತಿಯನ್ನುಂಟುಮಾಡುತ್ತಿದ್ದಾರೆ.

ಶುಭ ಸಮಾಪ್ತಿ

॥ ಶ್ರೀ ಜಗದ್ಗುರು ಏಕೋರಾಮ ಶಿವಾಚಾರ್ಯಃ ಪ್ರಸೀದತು ॥

ಶ್ರೀ ಕೇದಾರ ಪೀಠದ ಪರಿಚಯ

ಶ್ರೀ ಶಿವಾಗಮೋಕ್ತಿಯಂತೆ ಪರಶಿವನ ತತ್ಪುರುಷ ಮುಖೋದ್ಭವರಾಗಿ ಜ್ಯೋತಿರ್ಲಿಂಗಗಳಲ್ಲೊಂದದಾ ಶ್ರೀ ಹಿಮವತ್‌ಕೇದಾರ ದ್ರಾಕ್ಷಾರಾಮ ರಾಮನಾಥ ಲಿಂಗದಿಂದಾವಿರ್ಭವಿಸಿದ ಶ್ರೀ ಜಗದ್ಗುರು ಏಕೋರಾಮ ಶಿವಾಚಾರ್ಯರು ಶಿವಾದ್ವೈತಸಿದ್ಧಾಂತ ಪ್ರತಿಪಾದಿತವಾದ ವೀರಶೈವಧರ್ಮ ತತ್ವವನ್ನು ದೇಶದಲ್ಲಿ ಪ್ರಚಾರ ಮಾಡಲು ಹಿಮವತ್ ಕೇದಾರದಲ್ಲಿ ವೈರಾಗ್ಯ ಸಿಂಹಾಸನವನ್ನು ಸ್ಥಾಪನೆ ಮಾಡಿದರು.

ಈ ಪೀಠವು ಉತ್ತರ ಪ್ರದೇಶ ರಾಜ್ಯದ ಚಮೋಲಿ ಜಿಲ್ಲೆಯ ಹಿಮಾಲಯ ಪರ್ವತದಮೇಲೆ. ಸಹಸ್ರಾರು ಅಡಿಗಳ ಎತ್ತರದಲ್ಲಿ ಇರುತ್ತೆ. . ಪಾಂಡವರ ಅಭಿಮನ್ಯುವಿನ ಮೊಮ್ಮಗನಾದ ಜನಮೇಜಯ ಭೂಪಾಲನು ತನ್ನ ಕಾಲದಲ್ಲಿ ಆಗಿನ ಈ ವೈರಾಗ್ಯ ಪೀಠಾಧೀಶ್ವರರಾಗಿದ್ದ ಜಗದ್ಗುರು ಆನಂದಲಿಂಗ ಜಂಗಮರೆಂಬ ಶಿವಯೋಗಿಗಳ ಸನ್ನಿಧಿಯಲ್ಲಿ ಶ್ರೀ ಕೇದಾರ ಕ್ಷೇತ್ರವನ್ನು ದಾನ ವಾಗಿ ಸಲ್ಲಿಸಿ ಒಂದು ಮಹತ್ವಪೂರ್ಣವಾದ ದಾನಶಾಸನವನ್ನು ಬರೆದುಕೊಟ್ಟಿದ್ದಾನೆ. ಇದರಲ್ಲಿ ಯುಧಿಷ್ಠಿರ ಶಕೆ 89ನೆಯ ಪ್ಲವಂಗ ನಾಮ ಸಂವತ್ಸರವೆಂದು ಬರೆಯಲಾಗಿದೆ. ಸುಮಾರು ಮೂರು ಸಾವಿರದ ಒಂದು ನೂರು ವರುಷಗಳ ಪೂರ್ವದಲ್ಲಿ ಮಹಾತ್ಮರಾದ ಭೂಕುಂಡಲಿಂಗ ಶಿವಯೋಗೀಶ್ವರರು ಕೇದಾರ ಪೀಠವನ್ನು ಅಲಂಕರಿಸಿದ್ದರೆಂದು 'ಗಢವಾಲಕ ಇತಿಹಾಸ' ಎಂಬ ಗ್ರಂಥದಿಂದ ವ್ಯಕ್ತವಾಗುತ್ತದೆ.

ಈ ಪೀಠಾಧೀಶ್ವರರು ಬೇಸಗೆ ಕಾಲದಲ್ಲಿ ಮಾತ್ರ ಕೇದಾರದಲ್ಲಿರುವರು. ಚಳಿಗಾಲದಲ್ಲಿ ಹಿಮದ ತೊಂದರೆಯಿಂದ 'ಉಖಾ 'ಮಠಕ್ಕೆ ಬಂದು ವಾಸಮಾಡುವರು. ಹಿಂದೆ, ಅನಿರುದ್ಧನ ಪತ್ನಿ ಉಷಾದೇವಿಯು ಈ ಗುರುಪೀಠದಲ್ಲಿ ವಾಸ ವಾಗಿದ್ದು ಈ ಮಠವನ್ನು ಭಕ್ತಿಯಿಂದ ಕಟ್ಟಿಸಿಕೊಟ್ಟಿರುವಳು. ಇದರಿಂದ ಈ ಮಠವು ಉಷಾಮಠ' ಮತ್ತು "ಉಖಾ ಮಠ "ವೆಂದು ಕರೆಯಲ್ಪಡುತ್ತಿದೆ.

ಈ ಪೀಠಕ್ಕೆ ಬರುವ ಸ್ವಾಮಿಗಳಿಗೆ ಅಲ್ಲಿಯ ಸರ್ಕಾರದಿಂದ "ರಾವಲ್" ಎಂಬುದು ಬಿರುದು ಅನೂಚಾನವಾಗಿ ಬಂದಿದೆ. ಚತುರ್ವರ್ಣದವರೂ ಮೊದಲಿನಿಂದ ಈ ಪೀಠಕ್ಕೆ ಶಿಷ್ಯರಾಗಿದ್ದರಲ್ಲದೇ ೧೪೨ ಗ್ರಾಮಗಳು ಜಹಗೀರು ಇರುವುದು. ಈ ಪೀಠಕ್ಕೆ, ಉದಯ ಪುರ, ಗ್ವಾಲಿಯರ್, ಟೆಹರಿ, ಪಾಟಿಯಾಲ, ನೇಪಾಳ ಮೊದಲಾದ ಮಹಾರಾಜರುಗಳು ಇಂದಿಗೂ ಪ್ರತಿವರುಷ ಭಕ್ತಿಯಿಂದ ಕಾಣಿಕೆಯನ್ನು ಅರ್ಪಿಸುತ್ತಿರುವರು. ಈ ಪೀಠಾಚಾರ್ಯರು ದೇಶ ಸಂಚಾರ ಹೊರಟಾಗ ಗುರಗಳ ಪ್ರವೇಶ ಕಾಲಕ್ಕೆ (72) ಬಿರುದಾವಳಿಗಳೊಡನೆ ಉತ್ಸವ ಮಾಡಿಸಿ ಪೋಲೀಸ್ ಸಿಬ್ಬಂದಿ ಕೊಟ್ಟು ಅಪಾಯವಾಗದಂತೆ ನೋಡಿಕೊಳ್ಳಲು ಆಗಿನ ಸರ್ಕಾರದವರು ಹುಕುಂ ಕೊಟ್ಟಿದ್ದರು, ತಮಗೆ ಸೇರಿದ ಗ್ರಾಮಗಳು ಸರ್ವ ವರ್ಣದವರ ಮೇಲೂ ದಂಡ, ಖಂಡನ ಪ್ರಾಯಶ್ಚಿತ್ತ, ಶುದ್ಧತ್ವಾದಿಗಳನ್ನು ಮಾಡಲಿಕ್ಕೆ ಅಧಿಕಾರ ಹೊಂದಿದ್ದರು. ಈ ಪೀಠದಲ್ಲಿ ಪ್ರಾಚೀನ ಕಾಲದ ರಾಜ ಮಹಾರಾಜರುಗಳು ಕೊಟ್ಟಿರತಕ್ಕ ಭೂದಾನವರ್ಷಾಶನಗಳ ದಾಖಲೆಗಳು ಬಹಳವಾಗಿರುತ್ತವೆ.

ಶ್ರೀ ಕೇದಾರ ಪೀಠಕ್ಕೆ ಪ್ರಾಚೀನ ಕಾಲದಿಂದಲೂ ೩೯೧ ಜನ ಆಚಾರ್ಯರು ಪೀಠಾಧೀಶ್ವರರಾಗಿದ್ದರೆಂದು ಹಿಂದಿನ ದಾಖಲೆ ಗಳಿಂದ ತಿಳಿದುಬರುತ್ತದೆ. ಈ ಗುರು ಪರಂಪರೆಯಲ್ಲಿ ಅನೇಕ ಶಿವಯೋಗಿಗಳು ಮಹಿಮಾ ಶಾಲಿಗಳಿಗಾಗಿ ಹೋಗಿರುವರು.

ಶ್ರೀ ಹಿಮವತ್ಕೇದಾರ ಜಗದ್ಗುರು ಶ್ರೀ ಶ್ರೀ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು

ಈ ಪರಂಪರೆಯಲ್ಲಿ ಈಚಿನ ೨೦ನೆಯ ಜಗದ್ಗುರು ವಿಶ್ವಲಿಂಗ ಶಿವಾಚಾರ್ಯರ ಕಾಲದಲ್ಲಿ ಆರ್ಥಿಕ ತೊಂದರೆಗೀಡಾಗಿ ಸುಮಾರು ಸಹಸ್ರಾರು ರೂಪಾಯಿಗಳವರೆಗಿನ ಸಾಲಗಾರರಾಗಿ ತೊಂದರೆಗೀಡಾದಾಗ ಶ್ರೀಮದುಜ್ಜಯಿನಿ ಸದ್ಧರ್ಮ ಪೀಠಾಧೀಶ್ವರ ಜಗದ್ಗುರು ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಈ ಸನ್ನಿಧಿಯವರನ್ನು ತಮ್ಮ ಪೀಠಕ್ಕೆ ಬರಮಾಡಿಕೊಂಡು ಲಿಂ॥ ಪಂಡಿತ ವೇ॥ ಕಾಶೀನಾಥಶಾಸ್ತ್ರಿಗಳ ಜೊತೆಯಲ್ಲಿ ಕರ್ಣಾಟಕದಲ್ಲಿ ಸಂಚಾರ ನಡೆಸಿ ಧನ ಸಹಾಯ ಮಾಡಿಕೊಟ್ಟು ಇವರ ಕಷ್ಟ ಪರಿಸ್ಥಿತಿಯನ್ನು ಹೋಗಲಾಡಿಸಿದರು. ಇವರು 1919ನೇ ಇಸ್ವಿಯಲ್ಲಿ ಬೀರೂರಿನಲ್ಲಿ ನಡೆದ ವೀರಶೈವ ಮಹಾಸಭೆಗೂ ದಯಮಾಡಿಸಿ ಮಹಾಕಾರ್ಯವನ್ನು ನೆರವೇರಿಸಿ ಈ ಪ್ರಾಂತ್ಯದಲ್ಲೇ ಸಂಚಾರ ನಡೆಸುತ್ತಾ ತಾ॥ ೧೫–೭–೧೯೨೧ ರಂದು ಉಜ್ಜಯಿನಿ ಪೀಠದಲ್ಲಿಯೇ ಶಿವೈಕ್ಯರಾದರು.

ಶ್ರೀ ಹಿಮತ್ ಕೇದಾರ ಪೀಠದ ಹಿಂದಿನ
ಪೀಠಾಧೀಶ್ವರರಾದ ಲಿ॥ ಶ್ರೀ ಶ್ರೀ
ಜಗದ್ಗುರು ನೀಲಕಂಠ ಶಿವಾಚಾರ್ಯ
ಮಹಾ ಸ್ವಾಮಿಗಳು

ಈ ಜಗದ್ಗುರುಗಳವರಿಂದ ಬರೆಯಲ್ಪಟ್ಟ ವಿಲ್ ಪ್ರಕಾರ ನೀಲಕಂಠಲಿಂಗ ಶಿವಾಚಾರ್ಯರು ತಾರೀಖು ೧–೧೦–೧೯೨೧ ನೆಯ ದಿವಸ ಶ್ರೀ ಕೇದಾರ ಪೀಠದ ಪಟ್ಟಾಧಿಕಾರಿಗಳಾಗಿ ಈ ಪೀಠದ ೨೧ನೇ ಜಗದ್ಗುರುಗಳಾದರು. ಇವರು ಧಾರವಾಡ ಜಿಲ್ಲಾ ಕಲ್ಲೇದೇವರೆಂಬ ಗ್ರಾಮದ ಬೃಹನ್ಮಠಾಧ್ಯಕ್ಷರಾಗಿದ್ದರು. ಇವರು ಚಿಕ್ಕ ವಯಸ್ಸಿನವರಲ್ಲಿದ್ದಾಗಲೇ ಕಾಶೀ ಕ್ಷೇತ್ರಕ್ಕೆ ಹೋಗಿ ವಿದ್ಯಾಭ್ಯಾಸ ಮಾಡಿ ಕನ್ನಡ ಸಂಸ್ಕೃತ, ಇಂಗ್ಲೀಷ್, ಹಿಂದಿ, ಮರಾಠಿ, ಪಹಾಡಿ, ಇತ್ಯಾದಿ, ಭಾಷೆಗಳನ್ನು ಅರಿತವರೂ, ವ್ಯವಹಾರ ಕುಶಲರೂ, ಆಯುರ್ವೇದ ವಿದ್ಯಾವಿಶಾರದರೂ ಆಗಿದ್ದರು. ಇವರು ಸುಂದರ ಸುದೃಢ ಶರೀರವುಳ್ಳವರಾಗಿದ್ದು ಒಳ್ಳೆಯ ವಾಗ್ಮಿಗಳಾಗಿದ್ದರು. ಆಗಿನ ಕಾಶೀಪೀಠದ ಜಗದ್ಗುರು ಶಿವಲಿಂಗ ಶಿವಾಚಾರ್ಯರ ಅಪ್ಪಣೆ ಮೇರೆಗೆ ಕೇದಾರಕ್ಕೆ ಹೋಗಿ ಪೀಠಾಧಿಕಾರವನ್ನು ಪಡೆದರು. ಪಂಡಿತರು ತಮ್ಮ ಸಮಸ್ತ ಸಿಬ್ಬಂದಿಯೊಡನೆ ಉತ್ತರ ಪ್ರದೇಶ ಮತ್ತು ಕರ್ಣಾಟಕ ಪ್ರಾಂತ್ಯಗಳಲ್ಲಿ ಸಂಚರಿಸಿ ಭಕ್ತ ಮಂಡಳಿಗೆ ಧರ್ಮೋಪದೇಶ ಮಾಡುತ್ತಾ ವಿಪುಲವಾಗಿ ಧನಸಂಗ್ರಹಿಸಿ ಮಠಕ್ಕೊದಗಿದ್ದ ಸಾಲದ ತೊಂದರೆಯನ್ನು ಪರಿಹರಿಸಿದರಲ್ಲದೇ ಹೇರಳವಾಗಿ ಸುವರ್ಣ ರಜತ, ರತ್ನಾಭರಣಾದಿಗಳನ್ನು ಸಂಗ್ರಹಿಸಿದರು. ಇವರು ದೇಶದ ಸಂಚಾರ ಸಮಯದಲ್ಲಿ ಹೊಸಪೇಟೆ, ಬಳ್ಳಾರಿ, ಮುಂತಾದ ಸ್ಥಳಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿದರು. ಹಾಗೂ ತಮ್ಮ ಉಷಾ ಮಠದಲ್ಲಿ ಕೂಡ ಆಯುರ್ವೇದ ವಿದ್ಯಾಲಯವನ್ನೂ ಹೈಸ್ಕೂಲನ್ನೂ ಸ್ಥಾಪಿಸಿದರು. ಅಲ್ಲದೆ, ತಮ್ಮ ಸಾಮ್ರಾಜ್ಯಡಾಳಿತವನ್ನು ವಿಸ್ತರಿಸಿ ಈ ಅಡಳಿತವು ಸುಲಲಿತವಾಗಿ ನಡೆಯಲನುಕೂಲವಾಗುವಂತೆ ಧಾರವಾಡ ಜಿಲ್ಲಾ ತಿಮ್ಮಾಪುರ ಗ್ರಾಮದ ಹಿರೇಮಠದ ಗುರುವಂಶದಲ್ಲಿ ಜನ್ಮಿಸಿದ ವೇ॥ ಶಿವಮೂರ್ತಿ ಶಾಸ್ತ್ರಿಗಳವರಿಗೆ ತಮ್ಮ ಮಠಕ್ಕೆ ಚರಪಟ್ಟಾಧಿಕಾರವನ್ನು ಅನುಗ್ರಹಿಸಿ ಶ್ರೀ ಚಿದ್ಘನಲಿಂಗ ಶಿವಾಚಾರ್ಯರೆಂದು ನಾಮಕರಣ ಮಾಡಿದರು. ಇವರು ಜಿತೇಂದ್ರಿಯರೂ, ವಿದ್ಯಾವಂತರೂ, ಹಾಗೂ ಶಾಂತಮೂರ್ತಿಗಳೂ ಆಗಿದ್ದರು. ಇವರು ಹೊರಗಿನ ಸಾಮ್ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಾ, ತಮ್ಮ ಸಕಲ ಬಿರುದಾವಳಿಗಳೊಡನೆ ಕರ್ನಾಟಕದಲ್ಲಿ ಸಂಚರಿಸಿ ಬಂದು ಅಲ್ಪ ಕಾಲದಲ್ಲಿಯೇ ಕೇದಾರಪೀಠದಲ್ಲಿ

ತಾ॥ ೧೬–೨–೧೯೪೨ ರಂದು ಶಿವೈಕ್ಯರಾದರು. ಆನಂತರ ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯರೇ ಪೀಠದ ಅಧಿಕಾರವನ್ನು ನಡೆಯುಸುತ್ತಿದ್ದು ಇವರೂ ತಾರೀಖು ೨೩–೪–೧೯೪೫ ರಂದು ಲಿಂಗೈಕ್ಯರಾದರು.

ಇವರ ತರುವಾಯ ಈಗಿನ ಶ್ರೀ ಶ್ರೀ ಶ್ರೀ ೧೦೦೮, ಜಗದ್ಗುರು ಶ್ರೀ ಕೇದಾರನಾಥರಾವಲ್, ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಯವರು ಶ್ರೀ ಕೇದಾರ ಕ್ಷೇತ್ರದ ಉಖಾ ಮಠದಲ್ಲಿ ತಾರೀಖು ೧೦–೬–೧೯೬೬ ರಂದು ಸದರಿ ಕಮಿಟಿಯವರ ಸಮಕ್ಷಮ ಈಗಿನ ಶ್ರೀ ಕಾಶಿ ಜ್ಞಾನ ಪೀಠಾಧೀಶ್ವರರು ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರು ಮತ್ತು ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರವರಿಂದ ಪೀಠಾಧಿಕಾರವನ್ನು ಪಡೆದು ಶ್ರೀ ಕೇದಾರ ಕ್ಷೇತ್ರದ ವೈರಾಗ್ಯ ಸಿಂಹಾಸನ ಪೀಠಾಧೀಶ್ವರರಾಗಿರುತ್ತಾರೆ.

ಈಗ ಈ ಮಹಾನುಭಾವರು ಕಳೆದ 20 ವರ್ಷಗಳಿಂದ ಅನಾಯಕತ್ವದಲ್ಲಿದ್ದ ಈ ಪೀಠವನ್ನು ಎದೆಗುಂದದೆ ಬಹಳ ಕಷ್ಟತರದಿಂದ ಜೀರ್ಣೋದ್ಧಾರ ಮಾಡುತ್ತಿರುವರಲ್ಲದೆ ಪೀಠದಲ್ಲಿ ಪೂರ್ವದಿಂದ ನಡೆದುಕೊಂಡು ಬರುತ್ತಿದ್ದ ವಿದ್ಯಾಲಯಗಳನ್ನೂ ಮತ್ತು ಪೂಜಾ ಉತ್ಸವಗಳನ್ನೂ ಮಾಮೂಲಿನಂತೆ ನಡೆಸುತ್ತಿದ್ದಾರೆ ಮತ್ತು ದೇಶದಲ್ಲಿ ಸಂಚಾರ ಮಾಡಿ ಭಕ್ತಮಂಡಳಿಗೆ ಧರ್ಮೋಪದೇಶ ಮಾಡುತ್ತಾ ಪೀಠದ ಕೀರ್ತಿಯನ್ನು ಬೆಳಗುತ್ತಿದ್ದಾರೆ.

ಶುಭ ಸಮಾಪ್ತಿ

॥ ಶ್ರೀ ಜಗದ್ಗುರು ಪಂಡಿತಾರಾಧ್ಯಃ ಪ್ರಸೀದತು ॥

ಶ್ರೀ ಶ್ರೀಶೈಲ ಪೀಠದ ಪರಿಚಯ

ಶ್ರೀ ಶಿವಾಗಮ ವಾಣಿಯಂತೆ ಪರಶಿವನ ಅಘೋರಮುಖೋದ್ಭೂತರಾಗಿ ಭಾರತದ ಜ್ಯೋತಿರ್ಲಿಂಗಗಳಲ್ಲೊಂದಾದ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದ ಜಗದು ರು ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಯವರು ಉದಯಿಸಿ ಶಿವಾದ್ವೈತ ಸಿದ್ಧಾಂತ ಪ್ರತಿಪಾದಿತದ ವೀರಶೈವ ಧರ್ಮಪ್ರಚಾರಕ್ಕಾಗಿ ಶ್ರೀಶೈಲ ಕ್ಷೇತ್ರದಲ್ಲಿ ಸೂರ್ಯಸಿಂಹಾಸನ ಪೀಠವನ್ನು ಸ್ಥಾಪಿಸಿದರು.



ಶ್ರೀಶೈಲದ ಹಿಂದಿನ ಪೀಠಾಧೀಶ್ವರರಾದ ಲಿಂ॥
ಶ್ರೀ ಶ್ರೀ ಭಿಕ್ಷಾವರ್ತಿ ನಾಗಲೂಟಿ ವೀರಭದ್ರ
ಶಿವಾಚಾರ್ಯ ಮಹಾಸ್ವಾಮಿಗಳು

ಅಂದಿನಿಂದ ಈ ಪೀಠಕ್ಕೆ ಅನೇಕಾನೇಕ ಪೀಠಾಧೀಶ್ವರರಾಗಿ ಈ ಪೀಠದ ಘನತೆಯನ್ನು ಹೆಚ್ಚಿಸಿಕೊಂಡು ಆಂಧ್ರ, ತಮಿಳುನಾಡುಗಳಲ್ಲೆಲ್ಲಾ ಹೆಚ್ಚು ಹೆಚ್ಚಾಗಿ ಭಕ್ತಮಂಡಲಿಯನ್ನು ಪಡೆದು ವೀರಶೈವ ಧರ್ಮ ಪ್ರಚಾರ ಮಾಡಿದರು. ಐತಿಹಾಸಿಕವಾಗಿ ಹಿಂದೆ ಆಗಿ ಹೋದ ಪೀಠಾಧೀಶ್ವರರ ಪರಂಪರೆ ಕ್ರಮವಾಗಿ ಲಭ್ಯವಿಲ್ಲವಾದರೂ ಹಲಕೆಲವು ಪುರಾಣ ಗ್ರಂಥಗಳಿಂದಲೂ ಹಾಗೂ ಇತರ ದಾಖಲೆಗಳಿಂದಲೂ ಹಲವಾರು ಪೀಠಾಚಾರ್ಯರ ಹೆಸರುಗಳು ಗೋಚರವಾಗುತ್ತವೆ. ಅಂದರೆ ಸ್ಕಾಂದಪುರಾಣಾಂತರ್ಗತ ಶಂಕರ ಸಂಹಿತೆಯ 85ನೇ ಅಧ್ಯಾಯದಲ್ಲಿ ಶ್ರೀಶೈಲದಲ್ಲಿ ಮಹಾಶಿವಯೋಗಿಯಾದ ಸದಾನಂದ ಶಿವಾಚಾರ್ಯರೆಂಬ ಜಗದ್ಗುರುವು



ಶ್ರೀ ಶ್ರೀಶೈಲ ಜಗದ್ಗುರು ಶ್ರೀ ಶ್ರೀ ನಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು

ಪೀಠಾಧೀಶ್ವರರಾಗಿದ್ದರೆಂದು ವ್ಯಾಸಮಹರ್ಷಿಯು ಹೇಳಿರುತ್ತಾನೆ. ಆದರಿಂದ ಈ ಪೀಠವು ಎಷ್ಟು ಪುರಾತನವಾದುದೆಂಬುದು ವ್ಯಕ್ತವಾಗುತ್ತೆ. ಕ್ರಿ. ಶ. 940 ರಲ್ಲಿ ಕೃಷ್ಣಾನದಿಯ ತೀರದಲ್ಲಿನ ವರೆಯೂರ ಪಟ್ಟಣದ ರಾಜನಾಗಿದ್ದ ನನ್ನೆಚೋಡದೇವನೆಂಬ ರಾಜನು ಮಹಾಕವಿಯಾಗಿದ್ದು ಆಂಧ್ರ "ಕುಮಾರ ಸಂಭವ" ಎಂಬ ಗ್ರಂಥವನ್ನು ರಚಿಸಿ ತನ್ನ ವಂಶಗುರುಗಳಾಗಿದ್ದ ಶ್ರೀಶೈಲ ಪೀಠಾಧಿಪತಿಗಳಾದ ಜಂಗಮ ಮಲ್ಲಿಕಾರ್ಜುನ ಶಿವಾಚಾರ್ಯರ ಸನ್ನಿಧಿಯಲ್ಲಿ ಸಮರ್ಪಿಸಿದ್ದಾನೆ. ಈ ಗ್ರಂಥವನ್ನು ರಾಜಮಹೇಂದ್ರ ನಗರದ ಶ್ರೀಮಾನ್ ಎಂ. ರಾಮಕೃಷ್ಣ, ಕೆ.ವಿ. ಎಂ. ಎ. ಅವರು ಮುದ್ರಿಸಿ ಪ್ರಕಟಿಸಿದ್ದಾರೆ. ಆದರಲ್ಲಿನ ಒಂದು ಪದ್ಯ ಈ ರೀತಿ ಇದೆ.

ಕಂದ॥
ಸದ್ಗುರುಡನಜನುನಬಲ ಜ ।
ಗದ್ಗುರುನಕುಸಂತಕೋಪಕಾರಿಕಿ ಮುನಿವಿ ।
ದ್ವದ್ಗುರುನಕು ಕವಿಬುಧಹಿತ ।
ಮದ್ಗುರು ನಕಪಾರ ಧರ್ಮ ಮತಿಕಿನ್ ರತಿಕಿನ್॥ 60 ॥

ಅರ್ಥ :— ಸದ್ಗುರುವೂ, ಅಖಿಲಜಗದ್ಗುರುವೂ, ಸಂತತೋಪಕಾರಿಯೂ, ಮುನಿಗುರುವೂ, ವಿದ್ವದ್ಗುರುವೂ, ಕವಿಬುಧ ಗುರುವೂ, ಮದ್ಗುರುವೂ, ಅಪಾರಧರ್ಮಮತಿಯೂ ಆದ ಜಂಗಮಮಲ್ಲಿಕಾರ್ಜುನನಿಗೆ ನನ್ನ ಕೃತಿ ಸಲ್ಲಲಿ ಎಂದಿರುತ್ತೆ.



ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಉತ್ತರ ಮಹಾದ್ವಾರದ ಕೋಟೆಯ ಗೋಡೆಯ
ಮೇಲೆ ಶ್ರೀಶೈಲ ಜಗದ್ಗುರು ಭಗವತ್ಪಾದರವರು ಚತುರಾಚಾರ್ಯರನ್ನು ವಾದ್ಯಸಮೇತ
ಸ್ವಾಗತಿಸುತ್ತಿರುವ ದೃಶ್ಯವನ್ನು ಚಿತ್ರಿಸಿರುವ ಪುರಾತನ ಶಿಲಾಪ್ರತಿಮೆಗಳು

ಇಂತಿಂತಹ ಪೀಠಾಧೀಶ್ವರರಿಂದ ಅಲಂಕರಿಸಿದ ಪೀಠ ಎಷ್ಟು ಪುರಾತನವಾಗಿ ಬಂದಿದೆ ಮತ್ತು ಎಷ್ಟು ಮಹತ್ವದಿಂದ ಕೂಡಿದೆ ಎನ್ನುವುದು ಗೋಚರವಾಗುತ್ತೆ. ಈ ಪೀಠವು ಆಗಾಗ್ಗೆ ಕಷ್ಟಕಾರ್ಪಣ್ಯಗಳಿಗೆ ಸಿಕ್ಕಿ, ನೈಸರ್ಗಿಕವಾಗಿ ವರ್ಷಾದ್ಯಂತವೂ ಪರ್ವತದ ಮೇಲೆ ವಾಸವಾಗಿರುವುದು ಸಾಧ್ಯವಾಗದೆ ಪೀಠಾಚಾರ್ಯರು ಬೇರೆ ಬೇರೆ ಸ್ಥಳಗಳಲ್ಲಿ ಇರಬೇಕಾದ ಸಂದರ್ಭ ಒದಗಿದ್ದರಿಂದ ಆಗಾಗ್ಗೆ ಈ ಪೀಠದ ಆಡಳಿತಕ್ಕೆ ಕುಂದುಂಟಾಗುತ್ತಿತ್ತು. ಈ ರೀತಿ ಕಷ್ಟಸ್ಥಿತಿಯಲ್ಲಿಯೇ ಪರಂಪರೆಯ ಪೀಠಾಚಾರ್ಯರಾಗಿ ಬಂದವರಲ್ಲಿ ಜಗದ್ಗುರು ಭಿಕ್ಷಾವೃತ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಶಿವಪೂಜಾಧುರಂಧರರೂ, ತಪೋನಿಷ್ಠರೂ ಆಗಿದ್ದರು.

ಇವರ ತರುವಾಯ ಶ್ರೀ ಜಗದ್ಗುರು ನಾಗಲೂಟಿ ಭಿಕ್ಷಾವೃತ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾರೋಹಣಮಾಡಿದರು. ಇವರು ಯೋಗಬಲನಿಷ್ಠರೂ, ಸತ್ವಶೀಲರೂ ಆಗಿ ಈ ಪೀಠದ ಘನತೆಗೌರವಗಳನ್ನು ಕಾಪಾಡುತ್ತಾ 30–32 ವರುಷಗಳವರೆಗೂ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿ ಶಿಷ್ಯೋದ್ಧಾರಕಾರ್ಯವನ್ನು ನೆರವೇರಿಸಿದರು.



ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದ ಗೋಪುರ

ಶ್ರೀ ಕಾಶೀ ಕ್ಷೇತ್ರದ ಜ್ಞಾನ ಸಿಂಹಾಸನದ ಪೀಠದಲ್ಲಿ 1918ನೇ ವರುಷ ನಡೆದ ಪಂಚಾಚಾರ್ಯರ ಸಮ್ಮೇಳನಕ್ಕೆ ದಯಮಾಡಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಿದರು. ಇವರ ಪೀಠದ ವಿಚಾರದಲ್ಲಿ ವಿರೋಧಿಗಳು ಉದ್ಭವಿಸಿ ಇವರೊಡನೆ ಧೈರ್ಯಗೆಡದೆ ತಮ್ಮ ತಪೋಬಲದಿಂದ ಇವರುಗಳು ತಂದೊಡ್ಡಿದ ಉಪಟಳಗಳನ್ನು ನಿಗ್ರಹಿಸಿ ಪೀಠದ ಕೀರ್ತಿಯನ್ನು ಬೆಳಗಿಸಿದರು. ಅನಂತರ ಇವರು ವೃದ್ಧಾಪ್ಯದಿಂದ ನಿತ್ರಾಣರಾದಾಗ್ಯೂ ಶ್ರೀಮದುಜ್ಜಯಿನೀ ಪೀಠಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯರ ಸಲಹೆಯಂತೆ ಇವರ ಸಮ್ಮುಖದಲ್ಲಿ ತಮ್ಮ ಗುಂತಕಲ್ಲು ಮಠದಲ್ಲಿ ಮುದೇನೂರು ಮಠದ ಬೃಹ್ಮನ್ಮಠಾಧ್ಯಕ್ಷ ಪಂ॥ ವಾಗೀಶ ಶಿವಾಚಾರ್ಯರಿಗೆ ತಾ॥ 7–7–1940 ರಂದು ವಿಧ್ಯುಕ್ತವಾಗಿ ತಮ್ಮ ಉತ್ತರಾಧಿಕಾರವನ್ನು ಅನುಗ್ರಹಿಸಿದರು. ನಂತರ ತಾ॥ 31–7–1940ರಂದು ಶಿವೈಕ್ಯರಾದರು.

ಈ ರೀತಿ ಪಟ್ಟಾಧಿಕಾರಿಗಳಾದ ಈಗಿನ ಶ್ರೀ ಶ್ರೀ ಶ್ರೀ 1008 ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಯವರು ಸಾಹಿತ್ಯ, ವೇದಾಂತ, ಆಯುರ್ವೇದ ಮೊದಲಾದ ಶಾಸ್ತ್ರಗಳಲ್ಲಿ ಘನಪಾಂಡಿತ್ಯ ಹೊಂದಿರುವವರಲ್ಲದೆ ಆಶುಕವಿಗಳೂ, ಶಿವಪೂಜಾನಂದಶೀಲರೂ, ಒಳ್ಳೆಯ ವಾಗ್ಮಿಗಳೂ, ಕನ್ನಡ ತೆಲುಗು, ಸಂಸ್ಕೃತ ಭಾಷಾ ಪಂಡಿತರೂ ಆಗಿರುತ್ತಾರೆ.

ಇವರು ಈ ಪೀಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ನಂತರ ಹಿಂದಿನ ಪೀಠದ ವಿರೋಧಿಗಳ ಉಪಟಳ ಉಲ್ಬಣವಾಗಿ ಬಹಳ ಕಾಲ ಸಿವಿಲ್ ಕೋರ್ಟು, ಹೈಕೋರ್ಟುಗಳ ವ್ಯವಹಾರದಲ್ಲಿಯೇ ನಿರತರಾಗಬೇಕಾಯಿತು. ಆದರೂ ಮಹಾಸ್ವಾಮಿ



ಶ್ರೀಕಾಶೀ ಜಗದ್ಗುರು ಶ್ರೀ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು

ಯವರು ಹಿಮ್ಮೆಟ್ಟದೆ ಧೈರ್ಯದಿಂದ ಎದುರಿಸಿ ತಮ್ಮ ತಪೋಬಲದಿಂದ ಕೋರ್ಟು ವ್ಯವಹಾರಗಳನ್ನೆಲ್ಲಾ ಜಯಿಸಿ ಪೀಠದ ಘನತೆಯನ್ನು ಹೆಚ್ಚಿಸಿದರು.

ಇವರು ಆಂಧ್ರ, ಕರ್ಣಾಟಕ, ಮಹಾರಾಷ್ಟ್ರಗಳಲ್ಲಿ ಸಂಚರಿಸಿ ಭಕ್ತಮಂಡಲಿಗೆ ಧರ್ಮೋಪದೇಶ ನೀಡುತ್ತಿದ್ದಾರೆ. ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದ ಪೂಜಾಕಾರ್ಯಗಳೂ ಇವರ ಪರಿವಾರದ ಸ್ವಾಧೀನದಲ್ಲೇ ಇರುತ್ತವೆ. ಮಹಾಶಿವರಾತ್ರಿಯ ದಿನ ಇವರ ಅಡ್ಡಪಲ್ಲಕ್ಕಿ ಮಹೋತ್ಸವವು ಬಹು ವಿಜೃಂಭಣೆಯಿಂದ ಶ್ರೀಶೈಲದಲ್ಲಿ ನಡೆಸಲ್ಪಡುತ್ತಿದೆ. ಶಿವರಾತ್ರಿ ಯಾತ್ರೆಗಾಗಿ ಶ್ರೀಶೈಲಕ್ಕೆ ಬರುವ ಯಾತ್ರಾರ್ಥಿಗಳಿಗೂ ಶ್ರೀಶೈಲದಲ್ಲಿ ಹಾಗೂ ಆತ್ಮಕೂರಿನಲ್ಲಿರುವ ಇವರ ಶಾಖಾ ಪೀಠದಲ್ಲಿ ಉಚಿತ ಊಟ ವಸತಿಗಳನ್ನು ಏರ್ಪಡಿಸಿ ಲಕ್ಷಾಂತರ ಮಂದಿಗೆ ದಾಸೋಹ ನೀಡುತ್ತಿದ್ದಾರೆ; ಆಂಧ್ರ ಪ್ರದೇಶದಲ್ಲಿ ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಆತ್ಮಕೂರಿನಲ್ಲಿ ಹೊಸದಾಗಿ ಭವ್ಯ ಕಟ್ಟಡವನ್ನು ಯಾತ್ರಾರ್ಥಿಗಳ ವಸತಿಗಾಗಿ ಕಟ್ಟಿಸಿರುತ್ತಾರೆ. ಶ್ರೀಶೈಲ ಪರ್ವತದ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದೊಳಗೆ ಬೆಂಗಳೂರು ಸಿಟಿಯ ಗಣ್ಯ ವರ್ತಕರ ಸಹಾಯದಿಂದ ಶ್ರೀ ಮಲ್ಲಿಕಾರ್ಜುನಪ್ಪನವರ ಮುಂದಾಳುತ್ವದಲ್ಲಿ ಭವ್ಯವಾದ ಗುರುಪೀಠದ ಮಂದಿರವನ್ನು ಕಟ್ಟಿಸಿ ಇದರಲ್ಲಿ ಮೂಲ ಜಗದ್ಗುರು ಪಂಡಿತಾರಾಧ್ಯರ ಲಿಂಗೋದ್ಭವ ಶಿಲಾಮೂರ್ತಿಯನ್ನು ಪ್ರತಿಷ್ಠಿಸಿ ಸಮಾಜದ ಘನತೆಯನ್ನು ಹೆಚ್ಚಿಸಿರುತ್ತಾರೆ. ದೇವಸ್ಥಾನದ ಹೊರಭಾಗದಲ್ಲಿ ಲಕ್ಷಾಂತರ ದ್ರವ್ಯ ಖರ್ಚುಮಾಡಿ ಬಹು ವಿಶಾಲವೂ ಭವ್ಯವೂ ಆದ ವೀರಶೈವ ಧರ್ಮಛತ್ರವನ್ನು ನಿರ್ಮಿಸಿರುತ್ತಾರೆ. ತಮ್ಮ ಪೂರ್ವಾಶ್ರಮದ ಹರಿಹರನಗರದಲ್ಲಿ ಆರ್ಟ್ಸ್, ಸೈನ್ಸ್, ಕಾಲೇಜನ್ನು ನಿರ್ಮಿಸಿ ನಡೆಸುತ್ತಿದ್ದಾರೆ. ಗುಂತಕಲ್ಲಿನ ತಮ್ಮ ಪೀಠದ ಮಠವನ್ನೂ ಹೊಸದಾಗಿ ಮತ್ತಷ್ಟು ಭವ್ಯವಾಗಿರುವಂತೆ ಕಟ್ಟಿಸಿ ಶಾಶ್ವತಗೊಳಿಸಿದ್ದಾರೆ. ಅಲ್ಲದೆ, ಪಾಳು ಬಿದ್ದಿದ್ದ ಮಠದ ಪಕ್ಕದ ಜಮೀನುಗಳಲ್ಲಿ ವಾಸದ ಕಟ್ಟಡಗಳನ್ನು ಕಟ್ಟಿಸಿ ಪೀಠದ ವರಮಾನವನ್ನು ಹೆಚ್ಚಿಸಿರುತ್ತಾರೆ.

ಈ ಕಟ್ಟಡಗಳೆಲ್ಲಾ ಪೂರ್ತಿಯಾದ ತಕ್ಷಣದಲ್ಲಿಯೇ ತಮ್ಮ ಪೀಠಾಧಿಕಾರದ ರಜತೋತ್ಸವವನ್ನು ಬಹು ವಿಜೃಂಭಣೆಯಿಂದ ಚತುರಾಚಾರ್ಯರನ್ನು ಆಹ್ವಾನಿಸಿ ವಿದ್ವತ್ ಸಭೆಗಳನ್ನು ನಡೆಸಿ ಬಂದಿದ್ದ ಲಕ್ಷಾಂತರ ಮಂದಿ ಭಕ್ತ ಮಂಡಲಿಗೆ ಧರ್ಮೋಪದೇಶ ನೀಡಿದರು.

ಈ ರೀತಿ ನಿರಂತರವೂ ಭಕ್ತಮಂಡಲಿಯ ಹಾಗೂ ವೀರಶೈವ ಸಮಾಜದವರ ಶ್ರೇಯೋಭಿವೃದ್ಧಿಗಾಗಿ ಶಿವಪೂಜಾ ತಪೋನಿಷ್ಠರಾಗಿ ಅನಂತ ಸೌಕರ್ಯಗಳನ್ನೊದಗಿಸಿ ಶಾಶ್ವತಗೊಳಿಸುತ್ತಿರುವ ಈ ಮಹಾನುಭಾವರ ಕಾಲದಲ್ಲಿ ಜೀವಿಸುತ್ತಿರುವ ನಾವುಗಳೇ ಧನ್ಯರೆಂದು ತಿಳಿದರೆ ಅತಿಶಯೋಕ್ತಿಯಲ್ಲವೆಂದು ಹೇಳಬೇಕಾಗಿದೆ.

ಸತ್ಯಂ ಶಿವಂ ಸುಂದರಂ

॥ ಶ್ರೀ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯಃ ಪ್ರಸೀದತು ॥

ಶ್ರೀ ಕಾಶಿ ಪೀಠದ ಪರಿಚಯ

ಶ್ರೀ ಶಿವಾಗಮೋಕ್ತದಂತೆ ಪರಶಿವನ ಈಶಾನ ಮುಖೋದ್ಭವರಾಗಿ ಭಾರತದ ಜ್ಯೋತಿರ್ಲಿಂಗಗಳಲ್ಲೊಂದಾದ ಕಾಶೀ ಕ್ಷೇತ್ರದ ವಿಶ್ವನಾಥ ಲಿಂಗದಿಂದ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯರು ಅವಿರ್ಭವಿಸಿ ಶಿವಾದ್ವೈತ ಸಿದ್ಧಾಂತ ಪ್ರತಿಪಾದಿತವಾದ ವೀರಶೈವ ಧರ್ಮವನ್ನು ದೇಶದಲ್ಲಿ ಪ್ರಚಾರ ಮಾಡಲು ಕಾಶೀ ಕ್ಷೇತ್ರದಲ್ಲಿ ಜ್ಞಾನಸಿಂಹಾಸನ ಪೀಠವನ್ನು ಸ್ಥಾಪಿಸಿದರು. ಈ ಪೀಠವು ಕಾಶಿಯಲ್ಲಿರತಕ್ಕ ಪುರಾತನ ಸ್ಮಾರಕಗಳಿಂದಲೂ ತುಂಬಾ ಪೂರ್ವದ್ದಾಗಿದೆ. ಸತ್ಯಹರಿಶ್ಚಂದ್ರನ ಮಗ ಲೋಹಿತಾಶ್ವನಿಗೆ ಯಾವ ಸ್ಥಳದಲ್ಲಿ ಸರ್ಪ ಕಚ್ಚಿತೋ ಆ ಸ್ಥಳವೂ ಈ ಪೀಠಕ್ಕೆ ಸೇರಿದ್ದಾಗಿದೆ. ಈ ಮಠವು ಶಿವಲಿಂಗಗಳಿಂದ ತುಂಬಿ ಹೋಗಿದೆ.

ಇದಲ್ಲದೆ, ಕಾಶೀ ರಾಜನಾದ ಜಯನಂದ ದೇವನು ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನದ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ವಿಕ್ರಮ ಸವಂತ್ ಕ್ರಿ॥ ಶ॥ 574ರಲ್ಲಿ ಗಂಗಾನದಿಯ ತೀರದಲ್ಲಿ ಸ್ವಲ್ಪ ಭೂಮಿಯನ್ನು ದಾನವಾಗಿ ಸಲ್ಲಿಸಿದ್ದಾನೆ. ಈ ದಾನಪತ್ರದ ತಾಮ್ರ ಶಾಸನವು ಈಗಲೂ ಪೀಠದಲ್ಲಿದ್ದು ಸರ್ಕಾರದಿಂದ ಅಂಗೀಕರಿಸಲ್ಪಟ್ಟಿರುತ್ತೆ. ಇದರೊಂದಿಗೆ ಹಿಂದಿನ ರಾಜಮಹಾರಾಜರುಗಳು ಮತ್ತು ಮೊಗಲ್ ಚಕ್ರವರ್ತಿಗಳಾಗಿದ್ದ ಹುಮಾಯೂನ್, ಅಕ್ಬರ್, ಜಹಂಗೀರ್, ಷಹಜಹಾನ್, ಔರಂಗ್‌ಜೇಬ್, ಮಹಮದ್ ಷಾ ಇವರುಗಳು ಪೀಠಕ್ಕೆ ಬರೆದು ಕೊಟ್ಟಿರುವ ದಾನ ಪತ್ರಗಳೂ ಇದ್ದು ಇವುಗಳೆಲ್ಲಾ ಸತ್ಯವಾದವುಗಳೆಂದು ಹೈಕೋರ್ಟಿನಿಂದ ಒಪ್ಪಿಗೆಯಾಗಿರುತ್ತೆ. ಹಿಂದಿನ ನಮ್ಮ ಮೈಸೂರು ಮಹಾರಾಜರುಗಳೂ ಈ ಪೀಠಕ್ಕೆ ದಾನ ನೀಡಿದ

ದಾನ ಶಾಸನವಿರುತ್ತೆ. ಈ ಮಠದಲ್ಲಿರುವ ಪ್ರಾಚೀನ ಶಿಲಾಶಾಸನ ಹಾಗೂ ತಾಮ್ರಪಟಗಳಿಂದ ಈ ಪೀಠವು ಬಹಳ ಪುರಾತನವಾದುದೆಂದು ವ್ಯಕ್ತವಾಗುತ್ತದೆ.

ಲಿಂ॥ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಕಾಶೀನಾಥಶಾಸ್ತ್ರಿಗಳವರ
ಪ್ರಯತ್ನದಿಂದ ಪಂಚ ಮಹಾ ಪೀಠಾಚಾರ್ಯರ ಸಮ್ಮೇಳನ ಶ್ರೀ
ಕಾಶೀ ಕ್ಷೇತ್ರದಲ್ಲಿ ನಡೆದಾಗಿನ ಚಿತ್ರ

ಮೊದಲನೆಯವರು
ಉಜ್ಜಯಿನಿ ಪೀಠದ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ
ಮಹಾಸ್ವಾಮಿಯವರು

ಎರಡನೆಯವರು :
ಶ್ರೀ ಹಿಮವತ್‌ಕೇದಾರ ಪೀಠದ ಜಗದ್ಗುರು
ವಿಶ್ವಲಿಂಗ ಶಿವಾಚಾರ್ಯ ಮಹಾಸ್ವಾಮಿಯವರು

ಮೂರನೆಯವರು :
ಶ್ರೀಮದ್ರಂಭಾಪುರೀ ಪೀಠದ ಜಗದ್ಗುರು
ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಯವರು

ಈ ಪುರಾತನ ಪೀಠದಲ್ಲಿ ಆಗಿಹೋದ ಪೀಠಾಧೀಶ್ವರರ ಪರಂಪರೆ ಕ್ರಮಬದ್ಧವಾಗಿ ದೊರೆತಿಲ್ಲವಾದ್ದರಿಂದ ದೊರೆತಷ್ಟು ಆಧಾರದ ಪ್ರಕಾರ ಎಂಬತ್ತೈದು ಪೀಠಾಧೀಶ್ವರರನ್ನು ಗುರುತಿಸಿ ದಾಖಲೆ ಮಾಡಿರುತ್ತೆ.

ಈ ಗುರು ಪರಂಪರೆಯಲ್ಲಿ 81ನೆಯವರು ಜಗದ್ಗುರು ರಾಜೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರು. ಇವರು ಶಿವಯೋಗ ಸಂಪನ್ನರೂ ಘನವಿದ್ವಾಂಸರೂ, ಶಾಪಾನುಗ್ರಹ ಸಮರ್ಥರೂ ಆಗಿ ಜಗದ್ವಂದ್ಯರಾಗಿದ್ದರು. ಇವರು ತಮ್ಮ ತಪೋಬಲದಿಂದ ಆಗಿನ ಕಾಲದ ಯೋಗಿ ಮಂಡಲದಲ್ಲಿ ಅಗ್ರಸ್ಥಾನ ಪಡೆದಿದ್ದರು. 1911ನೇ ಇಸವಿಯಲ್ಲಿ ಪಂಚಮ ಜಾರ್ಜ್‌ರವರಿಗೆ ಪಟ್ಟಾಭಿಷೇಕವಾಗುವ ಶುಭ ಸನ್ನಿವೇಶದಲ್ಲಿ ಹಿಂದೂಸ್ಥಾನದ ಪ್ರಸಿದ್ಧ ಕ್ಷೇತ್ರವಾದ ಕಾಶಿಯಲ್ಲಿ ಓರ್ವ ಸುಪ್ರಸಿದ್ಧ ಯೋಗಿಯ ಮಹೋತ್ಸವವನ್ನು ನೆರವೇರಿಸಬೇಕೆಂದು ಇಂಡಿಯಾ ಸರ್ಕಾರದವರು ನಿರ್ಣಯಮಾಡಿದ್ದರು. ಆಗ ಭಾರತದ ಪ್ರಮುಖರ ಕೋರಿಕೆಯಂತೆ ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯ ಮಹಾ ಸ್ವಾಮಿಗಳವರೇ ಅರ್ಹರೆಂದು ತೀರ್ಮಾನಿಸಿ ಇವರ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಸಿದರು. ಇದು ವೀರಶೈವ ಸಮಾಜಕ್ಕೇ ಅಸಾಧಾರಣ ಗೌರವವನ್ನು ನೀಡುವ ಸಂಗತಿಯಾಗಿದೆ.

ಇವರ ನಂತರ 82ನೇ ಜಗದ್ಗುರು ಶಿವಲಿಂಗ ಶಿವಾಚಾರ್ಯರು ಈ ಜ್ಞಾನ ಪೀಠದ ಪಟ್ಟಾಧಿಕಾರಿಗಳಾದರು. ಇವರು ತರ್ಕಶಾಸ್ತ್ರದಲ್ಲಿ ಅದ್ವಿತೀಯ ಪಂಡಿತರಾಗಿದ್ದರು. ತಮ್ಮ ಬುದ್ಧಿ ಕುಶಲತೆಯಿಂದ ಮಹಾಪೀಠವನ್ನು ಅಭಿವೃದ್ಧಿಗೆ ತಂದರು. ತಮ್ಮ ಜಂಗಮವಾಡಿ ಮಠದಲ್ಲೇ ದಕ್ಷಿಣ ದೇಶದಿಂದ ಬಂದ ವಿದ್ಯಾರ್ಥಿಗಳಿಗೆ ಆಶ್ರಯಕೊಟ್ಟು, ಅನ್ನೋದಕಗಳಿಗೆ ವ್ಯವಸ್ಥೆ ಮಾಡಿ ಪ್ರೇಮದಿಂದ ವಿದ್ಯಾಭ್ಯಾಸ ಮಾಡಿಸುತ್ತಿದ್ದರು.

ಇದರಿಂದ ವೀರಶೈವ ವಿದ್ಯಾರ್ಥಿಗಳ ಪ್ರೌಢ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಈ ಜ್ಞಾನ ಪೀಠವು ಕೇಂದ್ರವಾಗಿ ಪರಿಣಮಿಸಿತು. ಇಲ್ಲಿ ಈ ಸಂಸ್ಕೃತ ಪ್ರೌಢ ವಿದ್ಯಾಭ್ಯಾಸ ಪೂರೈಸಿದ ಅನೇಕಾನೇಕ ವಿದ್ಯಾರ್ಥಿಗಳು ಶ್ರೀ ಗುರುಪೀಠಗಳಿಗೆ ಜಗದ್ಗುರುಗಳಾಗಿಯೂ ಅನೇಕರು ವಿರಕ್ತ ಮಠಗಳ ಅಧ್ಯಕ್ಷರಾಗಿಯೂ ಬಹುಜನರು ಶಾಸ್ತ್ರವೇತ್ತರೂ ಕವಿಗಳೂ ಪಂಡಿತರೂ ಶಿವ ಕೀರ್ತನಕಾರರೂ ಆಗಿ ಬೆಳಗುತ್ತಿದ್ದಾರೆ.

ಈ ಪೀಠಾಚಾರ್ಯರು 1918ರಲ್ಲಿ ಪಂಚಪೀಠಾಧೀಶ್ವರರನ್ನು ತಮ್ಮ ಜ್ಞಾನ ಪೀಠಕ್ಕೆ ಬರಮಾಡಿಕೊಂಡು ಸಮ್ಮೇಳನ ನಡೆಸಿ ಸಮಾಜೋದ್ಧಾರಕ್ಕೆ ಕಾರಣಕರ್ತರಾದರು. ಈ ಪೀಠವು ಈಗಲೂ ಜಂಗಮವಾಡಿ ಮಠವೆಂದು ಪ್ರಸಿದ್ಧಿ ಹೊಂದಿ ವೀರಶೈವ ಯಾತ್ರಿಕರಿಗೆ ತವರು ಮನೆಯಂತಿದೆ. ಈ ಮಹಾಸ್ವಾಮಿಯವರು 30 ವರುಷಗಳವರೆಗೆ ಪೀಠಾಧೀಶ್ವರರಾಗಿದ್ದು ದೇಹಾಲಸ್ಯ ಪ್ರಾಪ್ತವಾಗಲು ಶ್ರೀಪಂಚಾಕ್ಷರ ಶಿವಾಚಾರ್ಯರಿಗೆ ಪೀಠಾಧಿಕಾರವನ್ನು ಅನುಗ್ರಹಿಸಿ ತಾ॥ 21–4–1952 ರಂದು ಶಿವೈಕ್ಯರಾದರು.

ಈ ರೀತಿ 82ನೆಯ ಪಟ್ಟಾಧ್ಯಕ್ಷರಾದ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು ಹಿಂದಿನಿಂದ ಜಂಗಮವಾಡಿ ಮಠದಲ್ಲೇ ಇದ್ದುಕೊಂಡು ಸಂಸ್ಕೃತ ವಿದ್ಯಾಭ್ಯಾಸ ಮಾಡಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರು. ಅಲ್ಲದೆ, ಆಚಾರವಿಚಾರಗಳಲ್ಲಿ ನಿಷ್ಠರಾಗಿ

ಶಿವಯೋಗದಲ್ಲಿ ಆಸಕ್ತರಾಗಿ ಸದ್ಗುಣಸಂಪನ್ನರಾಗಿದ್ದರು. ಇವರು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಬಹಳವಾಗಿ ಶ್ರಮಿಸುತ್ತಿದ್ದರು. ಇವರ 12 ವರುಷಗಳ ಆಳ್ವಿಕೆಯ ನಂತರ ದೇಹಾಲಸ್ಯ ಒದಗಲು ಇದೇ ಪೀಠಾಶ್ರಯದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಘನಪಾಂಡಿತ್ಯವುಳ್ಳವರೂ, ನೈಷ್ಠಿಕ ಬ್ರಹ್ಮಚಾರಿಗಳೂ, ಕುಲಶೀಲಾದಿ, ಸದ್ಗುಣ ಸಂಪನ್ನರೂ ಆದ ನೈಜಾಂ ಸ್ಟೇಟಿನ ಚಿದರೆ ಗ್ರಾಮದ ಪಂಡಿತ ವೇ॥ ವೀರಭದ್ರ ಶಾಸ್ತ್ರಿಗಳವರನ್ನು ತಮ್ಮ ಉತ್ತರಾಧಿಕಾರಕ್ಕೆ ಯೋಗ್ಯರೆಂದು ಆರಿಸಿ ವಿಲ್‌ದಸ್ತೈವೇಜನ್ನು ಬರೆಯಿಸಿ ತಾ॥ 28–4–1944 ರಂದು ಶಿವೈಕ್ಯರಾದರು.

ಈ ರೀತಿ ಪೀಠಾಧೀಶ್ವರರಾಗಿ ಚುನಾಯಿತರಾದ ಪಂಡಿತ ವೇ॥ ವೀರಭದ್ರ ಶಾಸ್ತ್ರಿಗಳವರು ಜನ್ಮ ಬಾಲಕವಿಗಳಾಗಿದ್ದು ನಂತರ ಸಕಲಶಾಸ್ತ್ರ ಪಾರಂಗತರಾಗಿ, ಕಾವ್ಯತೀರ್ಥ, ವೇದತೀರ್ಥ, ಸಾಂಖ್ಯತೀರ್ಥ, ಸರ್ವದರ್ಶನ ತೀರ್ಥ, ಇತ್ಯಾದಿ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರಲ್ಲದೆ ಆಗಿನ ದೇಶದ ಮಹಾ ಮಹಾ ಪಂಡಿತೋತ್ತಮರಿಂದ ವಿದ್ಯಾನಿಧಿ, ವಿದ್ಯಾವಾಚಸ್ಪತಿ, ಮೊದಲಾದ ಬಿರುದುಗಳನ್ನು ಪಡೆದಿದ್ದರು. ಅವರು ತೆಲುಗು, ಕನ್ನಡ, ಇಂಗ್ಲೀಷ್. ಮರಾಠಿ, ಹಿಂದೀ, ಮೊದಲಾದ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಈ ಎಲ್ಲಾ ಭಾಷೆಗಳಲ್ಲಿಯೂ ಅಸ್ಖಲಿತವಾಗಿ ಭಾಷಣಮಾಡುತ್ತಿದ್ದು ಲೋಕವಂದ್ಯರಾಗಿದ್ದರು. ಪ್ರಾಚೀನ ಕಾಲದ ಶಾಸನಗಳನ್ನು ಓದುವುದರಲ್ಲಿ ಅದ್ಭುತ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರು ಮತ್ತು ಅಶೋಕನ ಕಾಲದ, ಲಿಪಿಯನ್ನು ಸಹ ನಿರರ್ಗಳವಾಗಿ ಓದುತ್ತಿದ್ದರು. ಇವರ ವಿದ್ವತ್ತಿಗೆ ತಕ್ಕಂತೆ ಧೈರ್ಯ, ಸಾಹಸ ಮೊದಲಾದ ಗುಣಗಳಿಂದ ಕೂಡಿದ್ದರು.

ನಂತರ ಇವರು ನೇಪಾಳ ಪ್ರಾಂತಗಳಿಗೆ ಹೋಗಿದ್ದು ಗಂಗೋತ್ರಿ, ಯಮುನೋತ್ರಿ, ಕೇದಾರನಾಥ ಬದರೀನಾಥ, ಪಶುಪತಿ ನಾಥ ಮುಂತಾದ ತೀರ್ಥಯಾತ್ರೆಯನ್ನು ಮಾಡಿ ಬಂದು ಸಿಕಂದರಾಬಾದ್ ಪಟ್ಟಣದಲ್ಲಿ " ವಿಭೂತಿ " ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಪವಿತ್ರ ಸಿದ್ಧಾಂತವನ್ನು ತೆಲುಗು ದೇಶದಲ್ಲಿ ಪ್ರಚಾರ ಮಾಡುತ್ತಾ, ವಿದ್ಯಾ, ಸಂಸ್ಕೃತಿ ಶಿವಧರ್ಮ, ಪಂಚಾಚಾರ್ಯರ ಪ್ರಭಾವಗಳನ್ನು ವಿಶ್ವತೋಮುಖವಾಗಿ ಹರಡಿದರು. ಶಿವಧರ್ಮಗ್ರಂಥಗಳನ್ನೂ ಲೇಖನಗಳನ್ನೂ ಆಂಧ್ರ, ಇಂಗ್ಲೀಷ್, ಭಾಷೆಗಳಲ್ಲಿ ಬರೆದು ಆಂಧ್ರ ದೇಶದ ಶೈವ ವೀರಶೈವರಿಗೆ ಮಹೋಪಕಾರ ಮಾಡಿದರು ಮತ್ತು ತಮ್ಮ ಮಠದಲ್ಲಿ " ಶೈವ ಭಾರತೀ ಭವನ " ಎಂಬ ಪುಸ್ತಕಾಲಯವನ್ನು ಸ್ಥಾಪಿಸಿದರು. ಈ ರೀತಿ ತಮ್ಮ ವಿದ್ವತ್ ಪ್ರೌಢಿಮೆಯಿಂದ ತಮ್ಮದೇ ಆದ ವೀರಶೈವ ಸೂಜದ ಹಾಗೂ ದೇಶೋದ್ಧಾರದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದರಲ್ಲದೆ ಮತ್ತಾವ ಸ್ವಾಭಿಮಾನವೂ ಇವರಿಗಿರಲಿಲ್ಲ. .

ಶ್ರೀ ಕಾಶೀ ಪೀಠದ ಹಿಂದಿನ ಪೀಠಾಧಿಪತಿಗಳಾದ
ಲಿಂ॥ ಶ್ರೀ ಶ್ರೀ ವೀರಭದ್ರ ಶಿವಾಚಾರ್ಯ
ಮಹಾ ಸ್ವಾಮಿಗಳವರು

ತಾ॥ 27–9–1944 ರಂದು ಶ್ರೀಮದ್ರಂಭಾಪುರೀ ಜಗದ್ಗುರುಗಳವರಿಂದ ಕಾಶೀ ಕ್ಷೇತ್ರದ ಇಂತಹ ಸುಪ್ರಸಿದ್ಧ ವ್ಯಕ್ತಿಯು ಜ್ಞಾನ ಸಿಂಹಾಸನ ಪೀಠದ ಪಟ್ಟಾಧಿಕಾರವನ್ನು ಪಡೆದು 84ನೆಯ ಪಟ್ಟಾಧೀಶ್ವರರಾಗಿ ಶ್ರೀ ಶ್ರೀ ಶ್ರೀ 1008 ಜಗದ್ಗುರು ವೀರಭದ್ರ ಶಿವಾಚಾರ್ಯ ಭಗವತ್ಪಾದರೆಂದು ಕರೆಯಲ್ಪಟ್ಟರು.

ಇವರು ಪಟ್ಟಾಧಿಕಾರಿಗಳಾದ ನಂತರ ಪಂಚಪೀಠಗಳ ಸ್ಥಿತಿಗತಿಗಳ ಮೇಲೆ ಗಮನವಿಟ್ಟು ಆಗ ತುಂಬಾ ಕಷ್ಟದಲ್ಲಿದ್ದ ಕೇದಾರ ಪೀಠಕ್ಕೆ ಧನ ಸಹಾಯ ಮಾಡಿ ಕಷ್ಟ ಸ್ಥಿತಿಯನ್ನು ಹೋಗಲಾಡಿಸಿದರು. ಸಮಾಜ ಸುಧಾರಣೆಗಾಗಿ ವಿವಿಧ ಭಾಷೆಗಳಲ್ಲಿ ಉತ್ತಮ ವೀರಶೈವ ಗ್ರಂಥಗಳ ಪ್ರಕಟಣೆ, ವಿದ್ವಾಂಸರಿಂದ ಗ್ರಂಥ ಪರಿಶೋಧನೆ, ಧರ್ಮ ಚರಿತೆಯ ನಿರ್ಮಾಣ, ವೀರಶೈವ ವಿಶ್ವಕೋಶದ ಸಂಕಲನ, ಧಾರ್ಮಿಕ ಮಹಾಸಭೆ. ಯೋಗಾಶ್ರಮ, ಗುರುಕುಲಾಶ್ರಮ ಸ್ಥಾಪನೆ ಮುಂತಾದ ಮಹತ್ತರ ಕಾರ್ಯಗಳನ್ನು ನೆರವೇರಿಸಬೇಕೆಂದು ಸಂಕಲ್ಪ ಮಾಡಿದ್ದರು. ಹತಭಾಗ್ಯರಾದ ವೀರಶೈವರ ದುರ್ದೈವದಿಂದ ಇವರಿಗೆ ದೇಹಾಲಸ್ಯವಾಗಿ ಕೇವಲ ನಾಲ್ಕು ವರುಷ ಮಾತ್ರ ಅಧಿಕಾರಾರೂಢರಾಗಿದ್ದು ತಾ॥ 25-1-1948ರಲ್ಲಿ ತಮ್ಮ 40ನೆಯ ವರುಷದಲ್ಲಿ ಶಿವೈಕ್ಯರಾದರು.



ಶ್ರೀಮದ್ರಂಭಾಪುರೀ ಪೀಠದ ವೀರ ಸಿಂಹಾಸನಾಧೀಶ್ವರ ಕೈ॥ ಶಿವಾನಂದ
ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಯವರು ಶ್ರೀ ಕಾಶೀ
ಕ್ಷೇತ್ರ ಪೀಠದ ಜ್ಞಾನ ಸಿಂಹಾಸನ ಪಟ್ಟಾಧಿಕಾರದಲ್ಲಿ–
ಪಟ್ಟಾಧಿಕಾರಿಗಳಾದ ಲಿಂ॥ ಜಗದ್ಗುರು ವೀರಭದ್ರ
ಶಿವಾಚಾರ್ಯ ಮಹಾಸ್ವಾಮಿಗಳವರಿಗೆ
ಕಿರೀಟಧಾರಣ ಮಾಡುತ್ತಿರುವುದು

ಇವರು ತಮ್ಮ ಅಂತ್ಯಕಾಲದಲ್ಲಿ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕ್ ಮದಗ ಮಾಸೂರು ಗ್ರಾಮದ ಹಿರೇ ಮಠದ ಈಗಿನ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಉರುಪ್ ಜಯಗುರು ಶಿವಾಚಾರ್ಯ ಎಂಬುವರನ್ನು ಪೀಠದ ಉತ್ತರಾಧಿಕಾರಿಗಳನ್ನಾಗಿ ಮಾಡಿ ಮರಣ ಶಾಸನವನ್ನು ಬರೆದು ರಿಜಿಸ್ಟರ್ ಮಾಡಿಸಿದ್ದರು.

ಇದರಂತೆ ಶ್ರೀ ವಿಶ್ವೇಶ್ವರ ಶಿವಾಚಾರ್ಯರು ಶಾ॥ ಶಕೆ 1870ನೇ ಸರ್ವಧಾರಿ ನಾಮ ಸಂವತ್ಸರದ ಕಾರ್ತೀಕ ಶು॥ 13 ಶುಭ ಮುಹೂರ್ತದಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರು ಶ್ರೀ ಶ್ರೀ 1008 ಪ್ರಸನ್ನರೇಣುಕ ವೀರಗಂಗಾಧರಶಿವಾಚಾರ್ಯ ಮಹಾಸ್ವಾಮಿಯವರು ಮತ್ತು ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರುಗಳಿಂದ ಈ ಜ್ಞಾನ ಪೀಠಾಧಿಕಾರವನ್ನು ಸ್ವೀಕರಿಸಿ 85ನೇ ಜ್ಞಾನಪೀಠಾಧೀಶ್ವರರಾಗಿರುತ್ತಾರೆ.

ಇವರು ತಮ್ಮ ಪೀಠಾಶ್ರಯದಲ್ಲಿಯೇ ವಿದ್ಯಾಭ್ಯಾಸ ನಡೆಸಿ ಕನ್ನಡ, ಸಂಸ್ಕೃತ ವಿದ್ಯಾ ವಿಶಾರದರಾಗಿ ಗುರುತ್ವ ಶೋಭಿತ ಸಕಲ ಸದ್ಗುಣಗಳಿಂದ ಕೂಡಿದವರಾಗಿ ಪೀಠದ ಮತ್ತು ವೀರಶೈವ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಹಿಂದಿನ ಜಗದ್ಗುರುಗಳವರ ಸಂಕಲ್ಪದಂತೆ ಅವರ ಎಲ್ಲಾ ಕಾರ್ಯಕ್ರಮಗಳನ್ನೂ ಮುಂದುವರಿಸುತ್ತಿದ್ದಾರೆ. ಪಂಚಮಹಾ ಪೀಠಗಳವರು ಆಗಾಗ್ಗೆ ಒಂದೆಡೆ ಸೇರಿ ಸಮಾಜಾಭಿವೃದ್ಧಿ ಕಾರ್ಯವನ್ನು ನಡೆಸಲು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಾಚರಣೆಗೆ ತರುತ್ತಿದ್ದಾರೆ.

ಇವರು ತಮ್ಮ ಪ್ರಾಂತ್ಯದಲ್ಲಿಯೂ ಮತ್ತು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿಯೂ ಸಂಚರಿಸಿ ಧರ್ಮೋಪದೇಶ ಮಾಡುತ್ತಾ ಪಂಚಮಹಾ ಪೀಠಗಳ ಮಹತ್ವವನ್ನು ಪ್ರಕಟಪಡಿಸುತ್ತಿದ್ದಾರೆ. ಪೂನಾ ಮೊದಲಾದ ಕಡೆ ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯಗಳನ್ನು ನಡೆಸುತ್ತಿದ್ದಾರೆ. ತಮ್ಮ ಪೀಠದ ಕಟ್ಟಡಗಳನ್ನು ಜೀರ್ಣೋದ್ಧಾರಮಾಡಿ ಶಾಶ್ವತಗೊಳಿಸಿದ್ದಾರೆ. ಅಲ್ಲದೆ. ಭಕ್ತಾದಿಗಳಿಗೆ ತುಂಬಾ ಆಶ್ರಯದಾತರಾಗಿದ್ದಾರೆ.

ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಮುತ್ತಿನಕಂತೆ ಮಠ

ಪಂಚಾಚಾರ್ಯ ಪ್ರಶಸ್ತಿ:

೧

ಕೈಲಾಸಾಧಿಪವಕ್ತ್ರ ಪಂಚಕ ಸಮುದ್ಭೂತಾಧರಾ ಭೂತಯೇ !
ಲಿಂಗೇಭ್ಯೋಭುವನಂಗತಾಃ ಪರಶಿವಾದ್ವೈತ ಪ್ರತಿಷ್ಠಾಪಕಾಃ॥

ಪಂಚಾಚಾರ್ಯ ಸುನಾಮಧೇಯ ಮಹಿತಾಶ್ಶ್ರೀ ಮಜ್ಜಗದ್ದೇಶಿಕಾಃ
ಜೀಯಾಸುಃ ಸ್ಥಲಷಟ್ಕ ವಿಶ್ರುತ ಶಿವಾಚಾರ್ಯೈಕ ಜೀವಾತವಃ

೨

ಆಚಾರಪಂಚಕಯುತಾವರಣಾಷ್ಟಕೇನ
ಸಂಭೂಷಿತಂ ಶಿವಮತಂ ಪ್ರತಿಪಾದಯಂತಃ॥

ಪಂಚಾನನಾಃ ಕುಮತವಾದಿ ಮಹಾಗಜಾನಾಂ
ಪಂಚಪ್ರಭೂತ ಯಶಸೋ ಮುನಯೋ ಜಯಂತಿ॥

೩

ಏತದ್ವಿಶ್ವಂ ಧಾರ್ಯತೇ ಪಂಚಭೂತೈಃ
ಪಂಚಪ್ರಾಣೈಃ ಪ್ರಾಣಿವರ್ಗಸ್ಯ ದೇಹಃ॥

ಆರ್ಷಂತೇಜಃ ಪಂಚಭಿರ್ವೀತಿಹೋತ್ರೈಃ
ಪಂಚಾಚಾರ್ಯೈರ್ಭೂತಲೇ ಮೋಕ್ಷಮಾರ್ಗಃ॥

೪

ಆವಿರ್ಭೂತಃ ಪ್ರಥಿತಮಹಿಮಾ ಕೊಲ್ಲಿಪಾಕೀಶಲಿಂಗಾತ್
ಸೋಮೇಶಾಖ್ಯಾಜ್ಜಗತಿ ವಿದಿತೋ ರೇಣುಕಾಚಾರ್ಯನಾಮ್ನಾ

ರಂಭಾಪುರ್ಯಾಂ ವರಗುರುಮಠೇವೀರ ಸಿಂಹಾಸನಾಖ್ಯಂ
ಚಕ್ರೇ ಪೀಠಂ ಜಯತಿ ಗುರು ರಾಡ್ಧರ್ಮ ಸಂರಕ್ಷಣಾಯ॥

೫

ಗಂಗಾಧರ ಶಿವಾಚಾರ್ಯಃ ವೀರ ಪೂರ್ವೋ ಜಗದ್ಗುರುಃ
ತಸ್ಮಿನ್ಸಿಂಹಾಸನೇ ಭಾತಿ ಗಗನೇ ಭಾಸ್ಕರೋ ಯಥಾ॥

೬

ಶ್ರೀಮದ್ವಟ ಕ್ಷೇತ್ರ ವಿರಾಜಮಾನಾತ್
ಸಿದ್ಧೇಶ್ವರಾಲ್ಲಿಂಗವರಾದ್ಧರಣ್ಯಾಂ

ಅವಾತರದ್ದಾರುಕ ಯೋಗಿವರ್ಯಃ
ವಿದಾರಕೋನಾಸ್ತಿಕ ದುರ್ಮತಸ್ಯ

೭

ದಾರುಕಯೋಗಿವರೇಣ್ಯೋ। ಸ ಜಯತಿ ಲೋಕೇ ಶಿವಾಚಾರ್ಯಃ
ಉಜ್ಜಯಿನೀಪುರಮಧ್ಯೇ। ಯಶ್ಚಕ್ರೇ ಧರ್ಮಹರಿಪೀಠಮ್॥

೮

ಸಿದ್ಧೇಶ್ವರ ಶಿವಾಚಾರ್ಯಸ್ವಾಮಿವರ್ಯಃ ಪ್ರಕಾಶತೇ
ಧರ್ಮಸಿಂಹಾಸನೇರಮ್ಯೇ ಪರಮೇಷ್ಠೀವ ಪುಷ್ಕರೇ

೯

ಏಕೋರಾಮಾರಾಧ್ಯಃ। ದ್ರಾಕ್ಷಾರಾಮಾಭಿದೇಕ್ಷೇತ್ರೇ
ಶ್ರೀರಾಮನಾಥ ಲಿಂಗಾತ್ ಸಂಭೂತೋಭೂಜ್ಜಗನ್ಮಾನ್ಯಃ

೧೦

ವೈರಾಗ್ಯ ಸಿಂಹಪೀಠಂ ಹಿಮವತ್ಕೇದಾರ ಪುಣ್ಯಭೂಮೌ ಯಃ
ಚಕ್ರೇಽತರ್ಕಿತ ಮಹಿಮಾ ಷಟ್ಸ್ಥಲಸಿದ್ಧಾಂತ ದೇಶಿಕೋ
ಜಯತಿ

೧೧

ಶಾಂತಲಿಂಗ ಶಿವಾಚಾರ್ಯ ದೇಶಿಕೇಂದ್ರೋ ದಿವಾಕರೇ
ವೈರಾಗ್ಯ ಸಿಂಹಪೀಠಾಖ್ಯ ಪೂರ್ವಪರ್ವತ ಮಸ್ತಕೇ

೧೨

ವಿರಾಜತಿ ತಮಸ್ಸರ್ವಂ ನಜಾನೇ ಕುತ್ರವಾಗತಂ॥
ಮನ್ಯೇನಾಸ್ತಿಕ ಘೂಕಾಸ್ತು ಕಾಂದಿಶೀಕಾ ಭಯಾಕುಲಾ:॥

೧೩

ಶ್ರೀಶೈಲಾಚಲ ಮಲ್ಲಿಕಾರ್ಜುನ ಮಹಾಲಿಂಗಾದ್ಬಹಿರ್ನಿರ್ಗತಃ
ಲೀಲಾಮಾನುಷವಿಗ್ರಹ: ಪರಶಿವ: ಮಾಹಾತ್ಮ್ಯ ವಾರಾಂನಿಧಿ

ಪೀಠಂಧರ್ಮಸುರಕ್ಷಣಾಯ ಕೃತವಾನ್ ಶ್ರೀ ಸೂರ್ಯಸಿಂಹಾಸನಂ
ಸೋಽಯಂ ಪಂಡಿತ ದೇಶಿಕೋ ವಿಜಯತೇ ಯೋಗೀಂದ್ರ ಚೂಡಾ
ಮಣಿಃ

೧೪

ವಾಗೀಶಯೋಗೀಶ್ವರ ಪಂಡಿತೇಂದ್ರಃ।
ಶ್ರೀಸೂರ್ಯ ಸಿಂಹಾಸನ ಮಂಡಿತೋಽದ್ಯ॥

ಅನ್ವರ್ಥತಾಂ ಪ್ರಾಪಯತಿ ಸ್ವನಾಮ್ನಃ
ವಿದ್ಯಾಸುಸುರ್ವಾಸ್ವಪಿ ಪಾರದೃಶ್ವಾ॥

೧೫

ಪ್ರಬೋಧಯತಿ ವಾಗೀಶಃ ದೇವೇಶಂ ಮಲ್ಲಿಕಾರ್ಜುನಂ।
ಸುಪ್ರಭಾತಸ್ತವೈರ್ನಿತ್ಯಂ ವಾಗೀಶಶ್ಶಂಕರಂ ಯಥಾ॥

೧೬

ಶ್ರೀ ವಿಶ್ವನಾಥ ವರಲಿಂಗ ವಿನಿರ್ಗತೋಽಭೂತ್
ಆರಾಧ್ಯ ನಾಮ ಮಹಿತಃ ಖಲು ವಿಶ್ವಪೂರ್ವಃ

ಸೋಽಯಂ ಚಕಾರ ಶುಭ ಜಂಗಮ ವಾಟಿಕಾಯಾಂ
ಜ್ಞಾನಾಭಿಧಾನ ಕಲಿತಂ ಮೃಗರಾಜ ಪೀಠಮ್॥

೧೭

ತಸ್ಮಿನ್ ಮಹಾಸಿಂಹಪೀಠೇ ವಿಶ್ವಾರಾಧ್ಯೋ ಜಗದ್ಗುರುಃ
ಪ್ರವಿಭಾತ್ಯಾಶ್ರಿತಾನಾಂಯಃ ಛಾತ್ರಾಣಾಂ ಕಲ್ಪ ಪಾದಪಃ ॥

೧೮

ಜಯತು ಜಯತು ಲೋಕೇ ಪಂಚಭಿರ್ದೇಶಿಕೇಂದ್ರೈಃ
ಪರಮಶಿವ ಮುಖಾಂಭೋಜಾತ ಜಾತೈಃಪ್ರವೃತ್ತಂ॥

ಸಕಲ ವಿಹಿತ ಪಂಚಾಚಾರ ಸನ್ಮಾರ್ಗ ನಿಷ್ಠಂ
ಭುವನ ಮಹಿತಮೇತಚ್ಛಾಂಭವಾದ್ವೈತ ತತ್ತ್ವಂ

೧೯

ಜೀಯಾನ್ಮಹೇಶ್ವರೋ ದೇವಃ
ಜೀಯಾದ್ಧರ್ಮಸ್ಸನಾತನಃ।

ಜಗದ್ಧಿತಕರೀ ಜೀಯಾತ್
ಪಂಚಾಚಾರ್ಯ ಪರಂಪರಾ॥

ಉಭಯ ಭಾಷಾ ಪಂಡಿತ ವಿದ್ವಾನ್
ಎಚ್. ವಿ. ನಾರಾಯಣ ಶಾಸ್ತ್ರೀ
ಸಹಾಯಕ ಸಂಪಾದಕ
ಕನ್ನಡ ನಿಘಂಟು ಕಾರ್ಯಾಲಯ
ಕ. ಸಾ. ಪರಿಷತ್ತು, ಬೆಂಗಳೂರು–18.

ಶ್ರೀ ಜಗದ್ಗುರು ಪಂಚಾಚಾರ್ಯರ
ಸನ್ನಿಧಾನಂಗಳಲ್ಲಿ
ಭಕ್ತಿಪೂರಿತವಾದ ಪ್ರಣಾಮಗಳನ್ನು ಅರ್ಪಿಸಿ
ಈ ಸುಸಂದರ್ಭದಲ್ಲಿ
ನಮ್ಮನ್ನು
ಆಶೀರ್ವದಿಸಬೇಕೆಂದು ಕೋರುವ

ವಿಕೋರಾಂ ಅಂಡ್ ಕಂಪನಿ
ಸಾದರಪತ್ರಪ್ಪ ಲೇನ್, ಬೆಂಗಳೂರು-2

ಡಿಸ್ಟ್ರಿಬ್ಯೂಟರ್ಸ್: ಕಿರ್ಲೋಸ್ಕರ್ ಆಯಿಲ್ ಎಂಜಿನ್‌ಗಳು, ಆಯಿಲ್ ಎಂಜಿನ್ ಪಂಪ್‌ಸೆಟ್ಟುಗಳು ಮತ್ತು ಇವುಗಳ ಬಿಡಿಭಾಗಗಳು.

ಆರ್. ಪಿ. ಸಿ. ಕಂಪನಿ
306, ಆರ್. ಪಿ. ಸಿ. ಬಿಲ್ಡಿಂಗ್, ಹಳೇ ತರಗುಪೇಟೆ, ಬೆಂಗಳೂರು-2 ಎ.

ಸಫಲತೆ

ನಿನ್ನುದಯ ಜಗದುದಯ ನಿನ್ನೋಟ ಜಗದೋಟ
ನಿನ್ನಿರವು ಜಗದಿರವು ನಿನ್ನರಿವು ಜಗದಾವು
ಚೇತನಕೆ ಚೇತನನೆ ಓ ಶಕ್ತಿ ಶಿವನೇ!
ಬಹುವಾಗಿ ಬೆಳಗುತಿದೆ ನಿನ್ನ ರಂಜಿಪ ನೋಟ
ಮರುಳ ನಾನಾಗಿರುವೆ ಅಂತು ನಿನ್ನಯ ಮಾಟ
ಪಳವಾತು ನುಡಿಯುತಿದೆ ನಿನ್ನ ಲೀಲೆಯಿದೆಂದು
ಇದು ನಿನಗೆ ಸಂತಸವೆ ಭವಮಾಲೆ ತಂದು
ಉಲಿಯುತಿದೆ ನಲಿಯುತಿದೆ ನಿನ್ನ ಶಕ್ತಿಯು ನೋಡೆ
ಮರೆಸುತಿದೆ ಎನ್ನನ್ನು ನಿಜದಿಂದ ನಾಡೆ
ಹಿಡಿದಿರುವೆ ಎನ್ನನ್ನು ಮಾಯಜಾಲವ ಬೀಸಿ
ಥಳಥಳಿಪ ಮನವೊಲಿಪ ರತ್ನಗಳ ಹಾಸಿ
ವಂಚಿಸಿಹೆ ನೀನೆನಗೆ ಸಂತಸವು ನಿನಗಾಯ್ತು
ವಂಚಕನೆ ನೀನಾಗಿ ಬಂಧನವು ಎನಗಾಯ್ತು

ಬಿಡುಗಡೆಯು ಆವಾಗ ಓ ಜ್ಞಾನ ರವಿಯೇ?
ನಿನ್ನ ಕರುಣೆಯ ಬೇರು ಸುಜ್ಞಾನ ಕವಿಯೇ!
ಆಗೆನ್ನ ಭಕ್ತಿಯಿಂ ಬಂಧಿಸುವೆ ನಿನ್ನನ್ನು
ಜಗದಗಲ ಎದೆಯಾಗಿ ಮುಗಿಲಗಲ ಮನವಾಗಿ
ರಸವೆಲ್ಲ ಕಸವಾಗಿ ಇಸವೆಲ್ಲ ಅಮರ್ದಾಗಿ
ಎದೆಯುರಳಿ ಮನವಿಂದು ನಿನ್ನ ತಾಸದಿ ಸೇರಿ
ಎನ್ನೊಳಗೆ ನೀನಾಗಿ ನಿನ್ನೊಳಗೆ ನಾನಾಗಿ
ಎರಡಿಲ್ಲದೊಂದಾಗಿ ಮೇಳೈಸಿ ನಿನ್ನಪ್ಪಿ
ನಿಬ್ಬೆರಗಿನೊಳು ನಿಂದು ಏನೊಂದು ಅರಿಯದೆಯೆ
ಉಕ್ಕಿ ಹರಿಯಲಿ ನಿನ್ನ ಆನಂದ ರಸಧಾರೆ
ಸಫಲತೆಯ ಪಡೆಯುವೆನು ಕುಡಿದದನು ಮನವಾರೆ
ಓ ಜ್ಞಾನ ರವಿಯೇ! ಸುಜ್ಞಾನ ಕವಿಯೇ!
ನಿನ್ನ ಕಾರುಣ್ಯದಿಂದೆನಗೆ ಸ್ವಾರಾಜ್ಯ ಪದವಿ!

ಡಿ. ರೇಣುಕಾಚಾರ್ಯ,
ಬೆಂಗಳೂರು.

Head Office : KOLAR
Gram : HANUMAN

Grams : PEEYESEL
Phone : 6, (Resi. 7)
Mills : Phone : 148

P. S. Lakshminarayan Setty Bros. (Regd.)

Dealers & Commission Agents in

Food Grains, Pulses & Jaggery

1ST CROSS, CORONATION ROAD, BANGARAPET.

Prop. SHRI HANUMAN TRANSPORTS

Shri Hanuman Rice & Dall Mills

- MANUFACTURERS AND SUPPLIERS OF FOOD GRAINS & PULSES
- TO THE KOLAR GOLD FIELDS MINING UNDERTAKING SOCIETIES,
- THE BHARAT EARTH MOVERS LTD., AND ALL LEADING SOCIETIES

Our Respects
To
Pancha
Peethadhipatis

AGRO
INDUSTRIES
CORPORATION
DAVANGERE

Our Salutations
To
Pancha Jagadgurus ...

•

NEW VINODA EXHIBITORS
TUMKUR

ಸ್ವಾಗತ ಸಮಿತಿಯ ಅಧ್ಯಕ್ಷರು



ಶ್ರೀ ಕೆ. ಎಂ. ನಂಜಪ್ಪ

ಮಾಜಿ ಮೇಯರ್

ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ

ಶ್ರೀ ಸಿ. ವೀರಭದ್ರಯ್ಯ

ಸ್ವಾಗತ ಸಮಿತಿ ಉಪಾಧ್ಯಕ್ಷರು

ಶ್ರೀ ಡಿ. ಬಿ. ಎಸ್. ಗುರುಸಿದ್ದಪ್ಪ ಶೆಟ್ಟರು

ಶ್ರೀ ಪಿ. ಶಿವಶಂಕರ್

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7842

ಸ್ವಾಗತ ಸಮಿತಿ ಉಪಾಧ್ಯಕ್ಷರು



ಶ್ರೀ ಜಿ. ಸಾಂಬಶಿವಯ್ಯ



ಶ್ರೀ ಡಿ. ಎಂ. ಶಂಕರಪ್ಪ

ಸ್ವಾಗತ ಸಮಿತಿ ಉಪಾಧ್ಯಕ್ಷರು



ಶ್ರೀ ಎ. ಹೆಚ್. ಶಿವಾನಂದಸ್ವಾಮಿ, M.LC



ಶ್ರೀ ಆರ್. ಚಂದ್ರಶೇಖರಯ್ಯ

ಸ್ವಾಗತ ಸಮಿತಿಯ ಕಾರ್ಯದರ್ಶಿಗಳು



ಶ್ರೀ ಟಿ ಸಿ. ಶ್ರೀಕಂತಪ್ಪ

ಶ್ರೀ ಬಿ. ಎಸ್. ಮರಿಯಪ್ಪ

ಸ್ವಾಗತ ಸಮಿತಿ ಕೋಶಾಧಿಕಾರಿ

ಶ್ರೀ ಎಸ್. ಆರ್. ರೇಣುಕಾರಾಧ್ಯ

ಸ್ಮರಣ ಸಂಚಿಕೆ ಸಂಪಾದಕ-ಕಾರ್ಯದರ್ಶಿ

ಶ್ರೀ ಎಂ. ವಿ. ಗುರುಬಸಪ್ಪ ಶೆಟ್ಟಿ

ಸ್ಮರಣ ಸಂಚಿಕೆ ಸಂಪಾದಕ ಮಂಡಲಿ ಅಧ್ಯಕ್ಷರು

ಆಸ್ಥಾನ ವಿದ್ವಾನ್, ಪಂಡಿತರತ್ನಂ, ಪದ್ಮಶ್ರೀ
ಬಿ. ಶಿವಮೂರ್ತಿ ಶಾಸ್ತ್ರೀ

ಸ್ವಾಗತ ಸಮಿತಿ ಕಾರ್ಯಕಾರಿ ಮಂಡಲಿ ಸದಸ್ಯರು



ಶ್ರೀ ಟಿ. ಎಂ. ಶಿವಣ್ಣ



ಎ. ಎನ್. ರಾಜಶೇಖರಪ್ಪ

ಸ್ವಾಗತಸಮಿತಿ ಕಾರ್ಯಕಾರೀ ಮಂಡಲಿ ಸದಸ್ಯರು



ಶ್ರೀ ಜಿ. ತೋಟದಪ್ಪ

ಶ್ರೀ ಜಿ. ಆರ್. ಶ್ರೀಕಂಠಪ್ಪ

ಸ್ವಾಗತ ಸಮಿತಿ ಸದಸ್ಯರುಗಳು



ಶ್ರೀ ಸಿ. ಎಂ. ಎಸ್. ಶಾಸ್ತ್ರೀ


T. R. Rajasekharaiah

ಶ್ರೀ ಟಿ. ಆರ್. ರಾಜಶೇಖರಯ್ಯ
ಸಂಚಾಲಕ - ಉತ್ಸವ ಸಮಿತಿ

ಸ್ವಾಗತ ಸಮಿತಿ ಕಾರ್ಯಕಾರಿ ಮಂಡಲಿ ಸದಸ್ಯರುಗಳು



ಶ್ರೀ ಕೆ. ಎನ್. ವಿಶ್ವೇಶ್ವರಯ್ಯ

ಶ್ರೀ ಕೆ. ಬಕ್ಕಯ್ಯ



ಶ್ರೀ ಡಿ. ರೇಣುಕಾಚಾರ್ಯ,
ಸ್ಮರಣ ಸಂಚಿಕೆ ಸದಸ್ಯರು.



ಶ್ರೀ ಕೆ. ಎಲ್. ಶಿವಪ್ಪ



ಶ್ರೀ ಜಿ. ಕರಿಸಿದ್ದಯ್ಯ

ಸ್ವಾಗತ
ಸಮಿತಿ
ಸದಸ್ಯರುಗಳು



ಶ್ರೀ ಎ. ಆರ್. ರೇವಣಸಿದ್ದಪ್ಪ



ಶ್ರೀ ಬಿ. ಪಿ. ಬಸಪ್ಪಶೆಟ್ಟಿ



ಶ್ರೀ ಎನ್. ಸಿ. ಸಿದ್ದಲಿಂಗಪ್ಪ

ಶ್ರೀ ಸಿ. ಆರ್. ನಿರ್ವಾಣಪ್ಪ ಶೆಟ್ಟಿ



ಶ್ರೀ ಜಿ. ಚನ್ನಸೋಮಣ್ಣ

ಶ್ರೀ ಕೆ. ಎನ್. ಗುಬ್ಬಣ್ಣ

ಸ್ವಾಗತ ಸಮಿತಿ ಸದಸ್ಯರುಗಳು



ಶ್ರೀ ಉಮೇಶರುದ್ರ

ಶ್ರೀ ಎ. ಎಂ. ಬಸವೇಗೌಡ, ಚಿಕ್ಕಮಗಳೂರು



ಶ್ರೀ ಎಸ್. ಎಂ. ರುದ್ರಪ್ಪ, ಮೈಸೂರು



ಶ್ರೀ ಜಿ. ಎಸ್. ಮರುಳಯ್ಯ, ಶಿವಮೊಗ್ಗ



ಶ್ರೀ ಎನ್. ಆರ್ ಜಗದೀಶ್, ತುಮಕೂರು

ಶ್ರೀ ಸಾಸಲು ಗಂಗಾಧರಪ್ಪ, ತಿಪಟೂರು

ಸ್ವಾಗತ
ಸಮಿತಿ
ಸದಸ್ಯರು

ಶ್ರೀ ಪಿ. ಸದಾನಂದ್, ಮೈಸೂರು

ಶ್ರೀ ಕೊಟ್ಟೂರು ಬಸವಯ್ಯ, ಚಿತ್ರದುರ್ಗ


ಶ್ರೀ ಪಿ. ಎಸ್. ಸುಬ್ಬರಾಯಪ್ಪ, ಮೈಸೂರು


ಶ್ರೀ ಎಸ್. ರುದ್ರಪ್ಪ


ಶ್ರೀ ಸಿದ್ದಪ್ಪ, ತುಮಕೂರು


ಶ್ರೀ ಬಿ. ಎಸ್. ನಂಜುಂಡಪ್ಪ, ಬಂಗಾರುಪೇಟೆ



ಶ್ರೀ ಮದ್ರಂಭಾಪುರಿ ಪೀಠದ ಹಿಂದಿನ ಜಗದ್ಗುರುಗಳಾದ ಲಿಂ॥ ಶ್ರೀ ಶ್ರೀ ಶ್ರೀ ಶಿವಾನಂದ ರಾಜೇಂದ್ರ
ಶಿವಾಚಾರ್ಯ ಮಹಾಸ್ವಾಮಿಗಳು.

ಪುದಚೇರಿ ಲೆಪ್ಟಿನೆಂಟ್ ಗೌರ್ನರ್

ಶ್ರೀ ಬಿ. ಡಿ. ಜತ್ತಿ

ಸ್ವಾಗತ ಸಮಿತಿ ಉಪಾಧ್ಯಕ್ಷರು



ಶ್ರೀ ಯಜಮಾನ್ ಕೆಂಚಪ್ಪನವರು.

ಉತ್ಸವದ
ಉಪಸಮಿತಿಗಳು

ಶ್ರೀ ಟಿ. ಆರ್. ಚನ್ನಪ್ಪ (ಶೀತ)
ಪೂಜಾ ಸಮಿತಿ ಸದಸ್ಯ



ಶ್ರೀ ಹೆಚ್. ಜಿ. ಶಿವಣ್ಣ
ಆಹಾರ ವಸತಿ ಉಪಸಮಿತಿ ಸದಸ್ಯ



ಶ್ರೀ ಕೆ. ಸಿ. ಪುಟ್ಟಪ್ಪ
ಪೂಜಾ ಸಮಿತಿ ಸದಸ್ಯ

ಶ್ರೀ ಸಾಗನಾಳಮಠ್ ಪಂಚಾಕ್ಷರಯ್ಯ
ಉತ್ಸವ ಸಮಿತಿ ಸದಸ್ಯ

ಶ್ರೀ ಎಸ್. ಎಂ. ವೀರಭದ್ರಯ್ಯ
ಆಹಾರ ವಸತಿ ಉಪಸಮಿತಿ ಸದಸ್ಯ



ಶ್ರೀ ಎಸ್. ವಿಶ್ವನಾಥಪ್ಪ
ಪೂಜಾ ಸಮಿತಿ ಸದಸ್ಯ

ಉತ್ಸವದ ಉಪಸಮಿತಿಗಳು

ಶ್ರೀ ಶರಣಗೌಡ ಇನಾಂದಾರ್



ಶ್ರೀ ಬಿ. ಎಸ್. ಶಂಕರಪ್ಪ ಶೆಟ್ಟಿ

ಶ್ರೀ ಬಿ. ಆರ್. ರೇಣುಕ



ಶ್ರೀ ಎಸ್. ಆರ್. ಚಂದ್ರಣ್ಣ



ಶ್ರೀ ಎನ್. ರಾಜಶೇಖರಯ್ಯ





ಶ್ರೀ ಸಿ. ವೀರಭದ್ರಯ್ಯನವರು

'ತೇನ ವಿನಾ ತೃಣಮಪಿ ನ ಚಲತಿ ......'

– ಪರಶಿವನ ಆಜ್ಞೆ ಇಲ್ಲದೆ, ಒಂದು ಹುಲ್ಲು ಕಡ್ಡಿಯೂ ಸಹ ಚಲಿಸದು. ಈ ಮಾತು ಅಕ್ಷರಶಃ ಸತ್ಯ. ಯಾವ ಕಾರ್ಯಕ್ಕೇ ಆಗಲಿ ಜನಬಲ, ಧನಬಲವಿದ್ದರೂ ದೈವಬಲವಿಲ್ಲದಿದ್ದರೆ ಏನೂ ನಡೆಯುವುದಿಲ್ಲ. 'ಅವನ' ಆಜ್ಞೆಯಾದರೆ ಸಾಕು, ಶಿವಪ್ರೇರಣೆಯಾದರೆ ಸರಿ ಎಲ್ಲವೂ ಸುಲಲಿತವಾಗಿ ಸಾಗುತ್ತದೆ.

ಈ ತತ್ವಕ್ಕೆ ನಮ್ಮ ಇಂದಿನ ಮಹಾ ಉತ್ಸವಗಳೇ ದೃಷ್ಟಾಂತ. ಅವನ ಆಜ್ಞೆಯಾಯಿತು. ಶಿವಪ್ರೇರಣೆ ದೊರಕಿತು. ಎಲ್ಲವೂ ಸುಸೂತ್ರವಾಯಿತು.

ಶಿವಪ್ರೇರಣೆಯಾಗದೆ ಏನೂ ಸಾಧ್ಯವಿಲ್ಲವೆಂಬ ತತ್ವಕ್ಕೆ ನಮ್ಮ ಈ ಮಹಾ ಉತ್ಸವದ ಹಿನ್ನೆಲೆಯನ್ನು ನಿರೂಪಿಸುವುದು ಈ ಸಂದರ್ಭದಲ್ಲಿ ವಿಹಿತವಾಗಿದೆ. ಇದರ ಹಿನ್ನೆಲೆಯೂ ಸ್ವಾರಸ್ಯವಾಗಿದೆ.

ಮೂಡಿ ಬಂದ ಮಹತ್ವ

(ಮಹೋತ್ಸವದ ಕಲ್ಪನೆ–ಅನುಷ್ಠಾನದ ನಿರೂಪಣೆ)

ಇದನ್ನು ನಾನು ನಮ್ಮ ಸಮಾಜಬಾಂಧವರ ಅವಗಾಹನೆಗೆ ತರಲು ಬಯಸುತ್ತೇನೆ.

ದೈವ ಭಕ್ತಿ-ಗುರುಭಕ್ತಿಗಳಿಂದ ಪ್ರೇರಿತನಾಗಿ ನಾನು ಈ ಕೆಲಸದಲ್ಲಿ ತೊಡಗಿರುವ ವಿಚಾರ ಬಲ್ಲವರಿಗೆಲ್ಲಾ ಪರಿಚಿತವಾಗಿದೆ. ಕಳೆದ ವರ್ಷ ಶ್ರೀಮದ್ ರಂಭಾಪುರಿ ಜಗದ್ಗುರುಗಳವರು ಬೆಂಗಳೂರಿನ ಶ್ರೀ ಮಹಂತರ ಮಠದಲ್ಲಿ ಬಿಡಾರ ಮಾಡಿ ಧನುರ್ಮಾಸದ ಪೂಜಾ ಕೈಂಕರ್ಯವನ್ನು ಕೈಗೊಂಡಿದ್ದರು. ಈ ಸುಯೋಗವನ್ನು ಕಳೆದುಕೊಳ್ಳಲು ಸಾಧ್ಯವೆ? ನಾನು ಮತ್ತು ನನ್ನ ಕೆಲವು ಮಂದಿ ಗೆಳೆಯರು ಗುರುದರ್ಶನಕ್ಕೆ ತೆರಳಿದೆವು. ನಮಗೇನೋ ಗುರುಗಳ ದರ್ಶನವಾಯಿತು. ಆದರೆ ಸ್ಥಳಾವಕಾಶ ಸಾಕಷ್ಟು ಇಲ್ಲದಿದ್ದುದರಿಂದ ಸಾವಿರಾರು ಮಂದಿ ಭಕ್ತರಿಗೆ ಆ ಪುಣ್ಯದ ನೋಟ ದುರ್ಲಭವಾಯಿತು. ಭಕ್ತವೃಂದಕ್ಕೆ ನಿರಾಶೆಯಾಯಿತು. ಇದು ಆಸ್ತಿಕನಾದ ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿಬಿಟ್ಟಿತು.

ತರುವಾಯ ಇದೇ ಸಂಗತಿಯ ಬಗ್ಗೆ ನಾನು ಮತ್ತು ನನ್ನ ಸ್ನೇಹಿತರು ಕುಳಿತು ದೀರ್ಘ ಸಮಾಲೋಚನೆ ನಡೆಸಿದೆವು. ಅನಂತರ ಶ್ರೀ ಸನ್ನಿಧಿಯವರ ಸಂದರ್ಶನ ಪಡೆದು ಇನ್ನೊಂದು ಪೂಜಾ ಕಾರ್ಯಕ್ರಮಕ್ಕೆ ಪ್ರಾರ್ಥಿಸಿಕೊಂಡೆವು. ನಮ್ಮ ಧರ್ಮಶ್ರದ್ಧೆಯನ್ನು ಗ್ರಹಿಸಿದ ಸನ್ನಿಧಿಯವರು ನಮ್ಮ ಅಹವಾಲಿಗೆ ಆಶೀರ್ವಾದ ನೀಡಿದರು.

ಉತ್ಸವದ ಉಪಸಮಿತಿಗಳು



ಶ್ರೀ ಶರಣಗೌಡ ಇನಾಂದಾರ್



ಶ್ರೀ ಬಿ. ಎಸ್. ಶಂಕರಪ್ಪ ಶೆಟ್ಟಿ



ಶ್ರೀ ಬಿ. ಆರ್. ರೇಣುಕ



ಶ್ರೀ ಎಸ್. ಆರ್. ಚಂದ್ರಣ್ಣ



ಶ್ರೀ ಎನ್. ರಾಜಶೇಖರಯ್ಯ



ಶ್ರೀ ಆರ್. ಗಂಗಪ್ಪ



ಶ್ರೀ ಸಿ. ವೀರಭದ್ರಯ್ಯನವರು

'ತೇನ ವಿನಾ ತೃಣಮಪಿ ನ ಚಲತಿ ......'

– ಪರಶಿವನ ಆಜ್ಞೆ ಇಲ್ಲದೆ, ಒಂದು ಹುಲ್ಲು ಕಡ್ಡಿಯೂ ಸಹ ಚಲಿಸದು. ಈ ಮಾತು ಅಕ್ಷರಶಃ ಸತ್ಯ. ಯಾವ ಕಾರ್ಯಕ್ಕೇ ಆಗಲಿ ಜನಬಲ, ಧನಬಲವಿದ್ದರೂ ದೈವಬಲವಿಲ್ಲದಿದ್ದರೆ ಏನೂ ನಡೆಯುವುದಿಲ್ಲ. 'ಅವನ' ಆಜ್ಞೆಯಾದರೆ ಸಾಕು, ಶಿವಪ್ರೇರಣೆಯಾದರೆ ಸರಿ ಎಲ್ಲವೂ ಸುಲಲಿತವಾಗಿ ಸಾಗುತ್ತದೆ.

ಈ ತತ್ವಕ್ಕೆ ನಮ್ಮ ಇಂದಿನ ಮಹಾ ಉತ್ಸವಗಳೇ ದೃಷ್ಟಾಂತ. ಅವನ ಆಜ್ಞೆಯಾಯಿತು. ಶಿವಪ್ರೇರಣೆ ದೊರಕಿತು. ಎಲ್ಲವೂ ಸುಸೂತ್ರವಾಯಿತು.

ಶಿವಪ್ರೇರಣೆಯಾಗದೆ ಏನೂ ಸಾಧ್ಯವಿಲ್ಲವೆಂಬ ತತ್ವಕ್ಕೆ ನಮ್ಮ ಈ ಮಹಾ ಉತ್ಸವದ ಹಿನ್ನಲೆಯನ್ನು ನಿರೂಪಿಸುವುದು ಈ ಸಂದರ್ಭದಲ್ಲಿ ವಿಹಿತವಾಗಿದೆ. ಇದರ ಹಿನ್ನಲೆಯೂ ಸ್ವಾರಸ್ಯವಾಗಿದೆ.

ಮೂಡಿ ಬಂದ ಮಹತ್ವ

(ಮಹೋತ್ಸವದ ಕಲ್ಪನೆ-ಅನುಷ್ಠಾನದ ನಿರೂಪಣೆ)

ಇದನ್ನು ನಾನು ನಮ್ಮ ಸಮಾಜಬಾಂಧವರ ಅವಗಾಹನೆಗೆ ತರಲು ಬಯಸುತ್ತೇನೆ.

ದೈವ ಭಕ್ತಿ-ಗುರುಭಕ್ತಿಗಳಿಂದ ಪ್ರೇರಿತನಾಗಿ ನಾನು ಈ ಕೆಲಸದಲ್ಲಿ ತೊಡಗಿರುವ ವಿಚಾರ ಬಲ್ಲವರಿಗೆಲ್ಲಾ ಪರಿಚಿತವಾಗಿದೆ. ಕಳೆದ ವರ್ಷ ಶ್ರೀಮದ್ ರಂಭಾಪುರಿ ಜಗದ್ಗುರುಗಳವರು ಬೆಂಗಳೂರಿನ ಶ್ರೀ ಮಹಂತರ ಮಠದಲ್ಲಿ ಬಿಡಾರ ಮಾಡಿ ಧನುರ್ಮಾಸದ ಪೂಜಾ ಕೈಂಕರ್ಯವನ್ನು ಕೈಗೊಂಡಿದ್ದರು. ಈ ಸುಯೋಗವನ್ನು ಕಳೆದುಕೊಳ್ಳಲು ಸಾಧ್ಯವೆ? ನಾನು ಮತ್ತು ನನ್ನ ಕೆಲವು ಮಂದಿ ಗೆಳೆಯರು ಗುರುದರ್ಶನಕ್ಕೆ ತೆರಳಿದೆವು. ನಮಗೇನೋ ಗುರುಗಳ ದರ್ಶನವಾಯಿತು. ಆದರೆ ಸ್ಥಳಾವಕಾಶ ಸಾಕಷ್ಟು ಇಲ್ಲದಿದ್ದುದರಿಂದ ಸಾವಿರಾರು ಮಂದಿ ಭಕ್ತರಿಗೆ ಆ ಪುಣ್ಯದ ನೋಟ ದುರ್ಲಭವಾಯಿತು. ಭಕ್ತವೃಂದಕ್ಕೆ ನಿರಾಶೆಯಾಯಿತು. ಇದು ಆಸ್ತಿಕನಾದ ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿಬಿಟ್ಟಿತು.

ತರುವಾಯ ಇದೇ ಸಂಗತಿಯ ಬಗ್ಗೆ ನಾನು ಮತ್ತು ನನ್ನ ಸ್ನೇಹಿತರು ಕುಳಿತು ದೀರ್ಘ ಸಮಾಲೋಚನೆ ನಡೆಸಿದೆವು. ಅನಂತರ ಶ್ರೀ ಸನ್ನಿಧಿಯವರ ಸಂದರ್ಶನ ಪಡೆದು ಇನ್ನೊಂದು ಪೂಜಾ ಕಾರ್ಯಕ್ರಮಕ್ಕೆ ಪ್ರಾರ್ಥಿಸಿಕೊಂಡೆವು. ನಮ್ಮ ಧರ್ಮಶ್ರದ್ಧೆಯನ್ನು ಗ್ರಹಿಸಿದ ಸನ್ನಿಧಿಯವರು ನಮ್ಮ ಅಹವಾಲಿಗೆ ಆಶೀರ್ವಾದ ನೀಡಿದರು.

ಇದು ನನ್ನ ಪುಣ್ಯ ವಿಶೇಷವೋ, ನಮ್ಮ ಪೂರ್ವೀಕರ ಹರಕೆಯೋ ಅಥವ ಶ್ರಿ ರೇಣುಕರ ಆಶೀರ್ವಾದವೋ ನನಗೆ ತಿಳಿಯದು. ನನ್ನ ಸ್ನೇಹಿತರುಗಳಾದ ಸರ್ವಶ್ರೀ ಟಿ. ಸಿ. ಶ್ರೀಕಂಠಪ್ಪ, ಎನ್. ಆರ್. ರೇಣುಕಾರಾಧ್ಯ, ಎ. ಎನ್. ರಾಜಶೇಖರಪ್ಪ, ಜಿ. ಆರ್. ಶ್ರೀಕಂಠಪ್ಪ, ಜಿ. ತೋಟದಪ್ಪ, ಟಿ. ಎಂ. ಶಿವಣ್ಣ ಇವರುಗಳ ಸಂಪೂರ್ಣ ಸಹಕಾರಗಳಿಂದ ಬೆಂಗಳೂರಿನ ಕುಚಲಾಂಬ ಕಲ್ಯಾಣ ಮಂದಿರದಲ್ಲಿ ಜಗದ್ಗುರುಗಳ ಶಿವಪೂಜಾ ಕಾರ್ಯಕ್ರಮ ಫಲಿಸಿತು.

ಜಗದ್ಗುರುಗಳ ಶಿವಪೂಜಾ ವೈಭವವನ್ನು ಸಹಸ್ರಾರು ಮಂದಿ ಭಕ್ತರು ನಿರಾಯಾಸದಿಂದ ದರ್ಶಿಸಿದರು. ಶಿವಪೂಜಾ ಕಲಾಪಗಳು ಕೈಲಾಸದ ಪ್ರತಿರೂಪವೇನೋ ಎಂಬಂತೆ ವಿಜೃಂಭಿಸಿತು.

ವಿಸರ್ಜಿತ ಸರ್ಕಾರದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ ಈ ಪೂಜೆಯಲ್ಲಿ ಭಾಗವಹಿಸಿ ಸಂತಸಪಟ್ಟರು.

ಜಗದ್ಗುರುಗಳ ಸಂದೇಶ

ಪೂಜಾ ಕಾರ್ಯಕ್ರಮಗಳು ಮುಕ್ತಾಯಗೊಂಡವು. ಸಮಾರಂಭದ ಅಂತ್ಯದಲ್ಲಿ ಶ್ರೀ ಸನ್ನಿಧಿಯವರು

"ನಿಮ್ಮ ಧರ್ಮಶ್ರದ್ಧೆ, ಆಸ್ತಿಕತೆ, ಧಾರ್ಮಿಕ ಉತ್ಸಾಹ ಅನುಕರಣೀಯವಾಗಿದೆ. ನೀವೆಲ್ಲ ಸಮರ್ಥರು. ವಿಶ್ವಶಾಂತಿಗಾಗಿ, ಮಾನವ ಧರ್ಮದ ಉದ್ಧಾರಕ್ಕಾಗಿ ಈ ಕಲ್ಯಾಣ ನಗರದಲ್ಲಿ ಸಹಸ್ರ ಕುಂಭಾಭಿಷೇಕ ಮತ್ತು ಮಹಾ ರುದ್ರಾಭಿಷೇಕವನ್ನು ವ್ಯವಸ್ಥೆ ಮಾಡಿರಿ"

—ಎಂದು ನನಗೂ ಮತ್ತು ನನ್ನ ಸ್ನೇಹಿತರುಗಳಿಗೂ ಅಪ್ಪಣೆ ದಯಪಾಲಿಸಿದರು.

ಜಗದ್ಗುರುಗಳ ಸಂದೇಶ, ಜನ್ಮ ಜನ್ಮಾಂತರಗಳ ಪುಣ್ಯ ವಿಶೇಷ. ಇದು ಶಿವನಾಜ್ಞೆಯೇ ಸರಿ. ಬೆಟ್ಟದಂತಹ ಕಾರ್ಯ; ನಮ್ಮ ಚೈತನ್ಯ. ಆದರೂ ನನ್ನ ಮನಸ್ಸಿನಲ್ಲಿ ಏನೋ ಭಯ.

ಪೂಜ್ಯಪಾದಂಗಳ ಸಂದೇಶ. ವಿಶ್ವ ಶಾಂತಿಗಾಗಿ, ಮಾನವ ಕಲ್ಯಾಣಕ್ಕಾಗಿ ಕೈಂಕರ್ಯ. ನಮ್ಮಲ್ಲೋ ಯಾವುದೋ ಅಲೌಕಿಕ ಶಕ್ತಿ ಮೂಡಿತು. ಯಾವುದೋ ದಿವ್ಯ ಚೈತನ್ಯ ನಮ್ಮ ಕೈ ಹಿಡಿದು ಮುನ್ನಡೆಸಿತು.

ನಾನು ಮೊದಲೇ ತಿಳಿಸಿರುವ ಗೆಳೆಯರು ಹಾಗೂ ಶ್ರೀ ಡಿ.ಬಿ.ಎಸ್. ಗುರುಸಿದ್ದಪ್ಪ ಸೆಟ್ಟರು, ಶ್ರಿ ಎನ್.ಸಿ. ಸಿದ್ಧಲಿಂಗಪ್ಪನವರು, ಯಜಮಾನ್ ಕೆಂಚಪ್ಪನವರು, ಶ್ರಿ ಕೆ. ಎಂ. ನಂಜಪ್ಪನವರು, ಶ್ರಿ ಎ.ಆರ್. ರೇವಣ ಸಿದ್ದಪ್ಪನವರು ಶ್ರಿ ಕೆ.ಎನ್. ಗುಬ್ಬಣ್ಣನವರು ಹಾಗೂ ಸಮಾಜದ ಮುಖಂಡರುಗಳೊಡನೆ ಜಗದ್ಗುರುಗಳ ಸಂದೇಶದ ಬಗ್ಗೆ ಸಮಾಲೋಚನೆ ನಡೆಸಿದೆ. ತರುವಾಯ ಇದೇ ಗೆಳೆಯರ ಕೂಟ ಶ್ರೀ ಮುತ್ತಿನಕಂತೆ ಮಠಾಧೀಶ್ವರರಾದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಸಿ, ಕಲ್ಯಾಣ ನಗರವಾದ ಬೆಂಗಳೂರಿನ ಇತಿಹಾಸದಲ್ಲಿ ಕಂಡು ಕೇಳದಿರುವಂತಹ ಅತ್ಯಂತ ವೈಭವಯುತವಾದ ಅಡ್ಡಪಲ್ಲಕ್ಕಿ ಉತ್ಸವವನ್ನು ನಡೆಸಲು ಸರ್ವಾನುಮತದ ನಿರ್ಧಾರಕ್ಕೆ ಬರಲಾಯಿತು. ಇದೇ ಸಂದರ್ಭದಲ್ಲಿ ಜಗದ್ಗುರುಗಳ ಪೀಠಾರೋಹಣದ ರಜತ ಮಹೋತ್ಸವವನ್ನೂ ಆಚರಿಸಲು ತೀರ್ಮಾನಿಸಿದೆವು.

ಮಹತ್ತರ ಕಾರ್ಯಕ್ರಮ

ಗುರುಭಕ್ತಿಯ ಸೇವೆಯ ಕಾರ್ಯ ಅಕ್ಷಯವಾದುದೆಂಬುದಕ್ಕೆ ನಮ್ಮ ಸಭೆಯಲ್ಲಾದ ಇನ್ನೊಂದು ನಿರ್ಧಾರವೇ ನಿದರ್ಶನ. ಬೆಂಗಳೂರಿನ ಧಾರ್ಮಿಕ ಚರಿತ್ರೆಗೇ ಪ್ರಪ್ರಥಮ ದಾಖಲೆಯಾಗುವಂತಹ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಸುವ ಸಮಯದಲ್ಲಿಯೇ ವೀರಶೈವ ಮಹಾಮತ ಸ್ಥಾಪನಾಚಾರ್ಯರುಗಳಾದ ಶ್ರೀ ಉಜ್ಜಯಿನಿ, ಶ್ರೀ ಹಿಮವತ್ಕೇದಾರ, ಶ್ರೀ ಶ್ರೀಶೈಲ ಮತ್ತು ಶ್ರೀ ಕಾಶಿ ಪೀಠಗಳ ಸಿಂಹಾಸನಾಧೀಶ್ವರರುಗಳನ್ನೂ ಆಮಂತ್ರಿಸಿ ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವವನ್ನೂ, ಸಹಸ್ರ ಕುಂಭಾಭಿಷೇಕವನ್ನೂ ಹಾಗೂ ಮಹಾ ರುದ್ರಾಭಿಷೇಕಗಳೊಡನೆ ಸರ್ವಧರ್ಮ ಸಮ್ಮೇಳನ, ವಿದ್ವತ್ ಸಭೆಗಳನ್ನು ಜಗತ್ಪ್ರಸಿದ್ಧವಾದ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ನಡೆಸಲು ಸಂಕಲ್ಪಿಸಲಾಯಿತು.

ಗುರುವಿನ ಅನುಗ್ರಹ

ನಾವು ಜಗದ್ಗುರು ಶ್ರಿ ರಂಭಾಪುರಿ ಸಿಂಹಾಸನಾಧೀಶ್ವರರ ಸಂದರ್ಶನ ಪಡೆದು ನಮ್ಮ ಸಂಕಲ್ಪವನ್ನು ಬಿನ್ನೈಸಿಕೊಂಡೆವು. ಸನ್ನಿಧಿಯವರು ನಮಗೆ ಅನುಗ್ರಹಿಸಿ ಕಾರ್ಯೋನ್ಮುಖರಾಗಲು ಅಪ್ಪಣೆ ಕೊಟ್ಟು ಆಶೀರ್ವದಿಸಿದರು. ನಮಗೆ ಆಗ ನೂರು ಆನೆಯ ಬಲ ಬಂದು, ಗುರು ಭಕ್ತಿಯ ಶಕ್ತಿಯೇ ಕೈದೀವಿಗೆಯಾಗಿ ನಮಗೆ ಮಾರ್ಗದರ್ಶನ ಮಾಡುತ್ತಿರುವಂತೆ ಬೋಧೆಯಾಯಿತು.

ನಾನು ಮತ್ತು ನನ್ನ ಸನ್ಮಿತ್ರರು ಕರ್ತವ್ಯಶೀಲರಾದೆವು. ನಮ್ಮ ಸಂಕಲ್ಪವನ್ನೂ ಜಗದ್ಗುರುಗಳ ಅಪ್ಪಣೆಯನ್ನೂ ಉಳಿದ ನಾಲ್ಕು ಪೀಠಗಳ ಸಿಂಹಾಸನಾಧೀಶ್ವರರ ಸನ್ನಿಧಿಗಳಲ್ಲಿ ಅರಿಕೆ ಮಾಡಿಕೊಂಡೆವು. ನಮ್ಮ ಸುಯೋಗ, ಬೆಂಗಳೂರಿನ ಭಾಗ್ಯ. ಯಾವ ಅಡ್ಡಿ ಆತಂಕಗಳೂ ಆಗದೇ ಶ್ರೀ ಉಜ್ಜಯಿನಿ, ಶ್ರೀ ಹಿಮವತ್ಕೇದಾರ, ಶ್ರೀ ಶ್ರೀಶೈಲ, ಶ್ರೀ ಕಾಶೀ ಪೀಠಾಧೀಶ್ವರರುಗಳಿಂದ ಪುಣ್ಯ ಸಮ್ಮತಿಯ ಆಶೀರ್ವಾದಗಳು ದೊರಕಿದವು. ನಮ್ಮ ಆನಂದಕ್ಕೆ ಪಾರವೇ ಇಲ್ಲ. ಎಲ್ಲರೂ ಭಕ್ತಿಯ ಆವೇಶದಿಂದ ಹಿಗ್ಗಿದೆವು,

ಸಂಕಲ್ಪ ಸಿದ್ಧಿಗೆ ಶಿವಾನುಗ್ರಹ

ಪಂಚ ಪೀಠಾಧಿಪತಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ನೆರವೇರಿಸುವ ನಮ್ಮ ಸಂಕಲ್ಪ ಸಿದ್ಧಿಗೆ ಶಿವಾನುಗ್ರಹವೇ ದೊರಕಿತೆಂದು ಹೇಳಿದರೆ ಉತ್ಪ್ರೇಕ್ಷೆಯಾಗುವುದಿಲ್ಲ.

ಈ ಮಹಾಕಾರ್ಯವನ್ನು ಸುವ್ಯವಸ್ಥೆಯಿಂದ ಅನುಷ್ಠಾನಕ್ಕೆ ತರಲು ನಗರದ ಪ್ರತಿಷ್ಠಿತ ಗಣ್ಯರು ಹಾಗೂ ನನ್ನ ಗೆಳೆಯರನ್ನೊಳಗೊಂಡ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಸ್ನೇಹಿತರುಗಳೂ ಹಿರಿಯರೂ ಅತ್ಯಂತ ಹೊಣೆಗಾರಿಕೆಯ ಪ್ರಧಾನ ಕಾರ್ಯದರ್ಶಿಯ ಪಟ್ಟವನ್ನು ನನಗೇ ಕಟ್ಟಿದರು. ಸ್ನೇಹಿತರ ಅಭಿಮಾನ, ಹಿರಿಯರ ಹರಕೆ, ನನ್ನ ಪುಣ್ಯದಿಂದ ಹೆಚ್ಚು ಗುರು ಸೇವೆ ಮಾಡಬಹುದಾದ ಆ ಕಾರ್ಯವನ್ನು ಅತ್ಯಂತ ವಿಧೇಯನಾಗಿ ಒಪ್ಪಿಕೊಂಡೆ.

ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿಉತ್ಸವ, ಸಹಸ್ರ ಕುಂಭಾಭಿಷೇಕ, ಮಹಾರುದ್ರಾಭಿಷೇಕ – ಕಾರ್ಯಕ್ರಮಗಳು ಸಾಮಾನ್ಯವಾದ ಕಲಾಪವೇ? ಈ ಸೇವಾರಥವನ್ನು ಎಳೆಯಲು ಎಲ್ಲರೂ ಹಗ್ಗ ಹಿಡಿಯಬೇಕು. ಜನ ಸಹಕಾರ, ಧನಬಲವೂ ಬೇಕು. ಈ ಪ್ರಶ್ನೆಯನ್ನು ಗೆಳೆಯರೊಡನೆ ಸಮಾಲೋಚಿಸಿ ಸಮಗ್ರ ಕರ್ನಾಟಕದ ಸಮಸ್ತ ಜಿಲ್ಲೆಗಳಿಗೂ ಭೇಟಿಕೊಟ್ಟು, ವೀರಶೈವ ಬಾಂಧವರನ್ನು ಸಂಧಿಸಿ ಸಹಕಾರಕೋರಿದೆವು. ಗುರುಸೇವೆಗೆ ಸಹಕಾರ ಬಾರದಿದ್ದೀತೆ?

ನಮ್ಮ ಪ್ರವಾಸದಲ್ಲಿ ತುಮಕೂರಿನಲ್ಲಿ ಶ್ರೀಯುತರುಗಳಾದ ಎನ್. ಆರ್. ಜಗದೀಶಾರಾಧ್ಯರು, ಚಿದಾನಂದಪ್ಪನವರು, ಟಿ. ಎಸ್. ಸಿದ್ದಪ್ಪನವರು, ಶಿವಸ್ವಾಮಿಯವರು, ಅತ್ತಿ ರೇವಣ್ಣನವರು, ಆರ್.ಎಸ್. ಆರಾಧ್ಯರು, ಶ್ರೀ ಬಿ.ಪಿ. ಗಂಗಾಧರ್‌ಅವರು, (ಮಾಜಿ ಶಾಸನಸಭೆಯ ಸದಸ್ಯರು) ಎಂ. ಸಂಗಪ್ಪನವರು, ಶಿವಮೊಗ್ಗದಲ್ಲಿ ಜಿ.ವಿ.ಎಸ್. ಮರುಳಯ್ಯನವರು. ದಾವಣಗೆರೆಯಲ್ಲಿ ಶ್ರೀಯುತರುಗಳಾದ ಎ. ಎಚ್. ಶಿವಾನಂದಸ್ವಾಮಿಯವರು, ಎಂ.ಎಲ್. ಸಿ. ಕೆ. ಬಕ್ಕಯ್ಯನವರು, ಮೈಸೂರಿನಲ್ಲಿ ಶ್ರೀಯುತರುಗಳಾದ ಪಿ. ಎನ್. ಸುಬ್ಬರಾಯಪ್ಪನವರು, ಪಿ. ಸದಾನಂದರು, ನಂಜುಂಡಸ್ವಾಮಿಯವರು ನಾಗಣ್ಣನವರು, ಗುರುದಾಸಪ್ಪನವರು, ಚಿಕ್ಕಮಗಳೂರಿನಲ್ಲಿ ಶ್ರೀಯುತರುಗಳಾದ ಬಿ. ಪಿ. ಬಸಪ್ಪ ಸೆಟ್ಟರು, ಸಿ.ಎಂ.ಎಸ್. ಶಾಸ್ತ್ರಿಗಳು, ಎ. ಎಂ. ಬಸವೇಗೌಡರು, ನಿರ್ವಾಣಪ್ಪ ಸೆಟ್ಟರು ಮುಂತಾದವರು ಮತ್ತು ಬೆಂಗಳೂರಲ್ಲಿ ಶ್ರೀಯುತರುಗಳಾದ ಡಿ.ಬಿ. ಎಸ್. ಗುರುಸಿದ್ದಪ್ಪ ಸೆಟ್ಟರು. ಯಜಮಾನ್ ಕೆಂಚಪ್ಪನವರು, ಟಿ. ಸಿ. ಶ್ರೀಕಂಠಪ್ಪನವರು ಮತ್ತು ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು-ಇವರ ಹಾಗೂ ಇನ್ನಿತರ ಊರುಗಳ ವೀರಶೈವ ಬಾಂಧವರ ನೆರವು ದೊರಕಿತು, ಜನಬಲ ಸಿಕ್ಕಿತು. ಈ ಸಂದರ್ಭದಲ್ಲಿ ಶ್ರೀ ಬಿ.ಎಸ್. ಮರಿಯಪ್ಪನವರ ಸೇವೆಯನ್ನಂತೂ ಮರೆಯುವ ಹಾಗಿಲ್ಲ. ಮಹೋತ್ಸವವು ನಿರೀಕ್ಷೆಯನ್ನೂ ಮೀರಿ ಯಶಸ್ವಿಯಾಗಿದೆ. ಲಕ್ಷಾಂತರ ಆಸ್ತಿಕರು ಜಗದ್ಗುರುಗಳ ದರ್ಶನ ಭಾಗ್ಯದಿಂದ ಸಂಪ್ರೀತರಾಗಿದ್ದಾರೆ. ಪಂಚಪೀಠಾಧಿಪತಿಗಳ ಪಾದ ಸ್ಪರ್ಶದಿಂದ ಕಲ್ಯಾಣ ನಗರಿಯೂ ಪುನೀತವಾಗಿದೆ. ಇದೆಲ್ಲ ವಿವಿಧ ಸಮಿತಿಗಳ ಪರಸ್ಪರ ಸೌಜನ್ಯ, ನಗರದ ನಾಗರಿಕರ ಸಹಕಾರ, ಉತ್ಸವ ಸಮಿತಿಯ ಕಚೇರಿಯ ಕೆಲಸಗಳನ್ನು ನಡೆಸುವುದರಲ್ಲಿ ದೊರೆತ ಶ್ರೀ ಡಿ. ರೇಣುಕಾಚಾರ್ಯರ ಶ್ರೀ ಎಸ್. ರುದ್ರಪ್ಪನವರ ಶ್ರೀಶಂಕರಾಧ್ಯರ ಹಾಗೂ ಶ್ರೀ ವಿ. ಕೆ. ಮಲ್ಲಣ್ಣನವರ ನೆರವು, ಶಿವಾನುಗ್ರಹದ ಹಾಗೂ ಪಂಚ ಪೀಠಾಧೀಶ್ವರರ ಆಶೀರ್ವಾದದ ಬಲ.

ಉಪಯುಕ್ತ ಸ್ಮರಣ ಸಂಚಿಕೆ

ಈ ಮಹೋತ್ಸವದ ಸವಿನೆನಪಿನಲ್ಲಿ ವಿದ್ವತ್ಪೂರ್ಣವಾದ, ಸಂಗ್ರಹಯೋಗ್ಯವಾದ ಸ್ಮರಣ ಸಂಚಿಕೆಯನ್ನು ಪ್ರಕಟಿಸಬೇಕೆಂಬ ನಮ್ಮ ತೀರ್ಮಾನವು ಸರ್ವದೃಷ್ಟಿಗಳಿಂದಲೂ ಫಲಪ್ರದವಾಗಿದೆ. ಆಸ್ಥಾನ ವಿದ್ವಾನ್, ಪಂಡಿತರತ್ನಂ, ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರು ಈ ಸ್ಮರಣ ಸಂಚಿಕೆಯ ಸಂಪಾದಕ ಮಂಡಲಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಲೆನಾಡು ಪತ್ರಿಕೆಯ ಸಂಪಾದಕ, ಬೆಸ್ಟ್ ಇನ್‌ಸ್ಟಿಟ್ಯೂಟ್ ವಿದ್ಯಾಶಾಲೆಯ ಶರಣ ಶ್ರೀ ಎಂ. ವಿ. ಗುರುಬಸಪ್ಪ ಶೆಟ್ಟರು ಸ್ಮರಣಸಂಚಿಕೆ ಸಮಿತಿಯ ಸಂಚಾಲಕರಾಗಿ ಹಾಗೂ ಶ್ರೀ ಡಿ. ರೇಣುಕಾಚಾರ್ಯರು ಲೇಖನಗಳ ಪರಿಶೋಧನೆ ಮತ್ತು ಮುದ್ರಣ ಕಾರ್ಯಗಳ ಜವಾಬ್ದಾರಿಯನ್ನು ವಹಿಸಿ ಹಗಲಿರುಳು ಶ್ರಮಿಸಿ ಸಂಚಿಕೆಯನ್ನು ಸರ್ವಾಂಗ ಸುಂದರವಾಗಿ ಮಾಡಿ ಗುರುಕೃಪೆಗೆ ಪಾತ್ರರಾಗಿದ್ದಾರೆ.

ತಾ॥ 13–12–1971 ರಂದು ನಡೆಯಬೇಕಾಗಿದ್ದ ಉತ್ಸವ ಕಾರ್ಯವು ದೇಶದಲ್ಲುಂಟಾದ ತುರ್ತು ಪರಿಸ್ಥಿತಿಯನ್ನು ಗಮನಿಸಿ ಶ್ರೀ ರಂಭಾಪುರಿ ಜಗದ್ಗುರುಗಳವರ ಆದೇಶದ ಮೇರೆಗೆ ಸಮಿತಿಯುವರಿಂದ ಮುಂದೂಡಲ್ಪಟ್ಟು, ತಾ॥ 7–1–1972ರಲ್ಲಿ ನಡೆಯುವಂತಾಗಿರುವುದು ನಮ್ಮ ಸುದೈವ.

ಎಲ್ಲರಿಗೂ ನಮನ

ನನ್ನ ಯಾವ ಜನ್ಮದ ಸುಕೃತವೋ, ಈ ಮಹಾ ಉತ್ಸವದ ಪ್ರಧಾನಕಾರ್ಯದರ್ಶಿಯಾಗಿ ವಹಿಸಿದ ಸೇವೆಯನ್ನು ನಿರ್ವಂಚನೆಯಿಂದ ನಿರ್ವಹಿಸಿರುವ ತೃಪ್ತಿ ನನ್ನ ಮನಸ್ಸಿನಲ್ಲಿ ಮೂಡಿದೆ. ದೇವರ ಸೇವೆಯಲ್ಲಿ, ಗುರುಸೇವಾ ಕೈಂಕರ್ಯದಲ್ಲಿ ಎಂದೆಂದಿಗೂ "ಎನಗಿಂತ ಕಿರಿಯರಿಲ್ಲ". ಈ ಮಹತ್ಕಾರ್ಯದಲ್ಲಿ ನನಗೆ ನೆರವು, ಮಾರ್ಗದರ್ಶನ ನೀಡಿದ ಸಕಲರಿಗೂ ನನ್ನ ಮನಃಸಾಕ್ಷಿಯ ನಮನ.

GRAMS: VACO

PHONE: 72529 & 74279

With Best Compliments From:

V. Annaiyappa & Co.

65, SILVER JUBILEE PARK ROAD,
BANGALORE-2

Distributors for

- **Messrs. Travancore Titanium Products Limited**
  for Titanium Dioxide
- **Messrs. Cromelite (India) Private Limited**
  for Cromelite Tru Tone Steel Folding Furniture
- **Messrs. T. T. KRISHNAMACHARI & Co.**
  for Idets
- **Messrs. T. T. N. & Company**
  for Spredasil Silicon Spray
- **Messrs. Narasu & Company**
  for Barytes and Soap-Stone Powder
- **JOIN VACO EASY PAYMENT SCHEMES**

Ask for Free Illustrated Booklet.

ಸಹಸ್ರ ಕುಂಭಾಭಿಷೇಕ ಪ್ರಭಾವವು

ಆರ್. ಹೆಚ್. ವೀರಭದ್ರಯ್ಯಸ್ವಾಮಿ
ಬಾಳೆಹೊನ್ನೂರು

ಯಾರು ಶಿವಭಜನ, ಪೂಜನ, ಶಿವಕಥಾ ಶ್ರವಣಗಳನ್ನು ಭಕ್ತಿಯಿಂದ ಮಾಡುವರೋ ಅವರು ಧನ್ಯರು, ಶಿವಚಿನ್ಹಗಳಾದ ಭಸ್ಮರುದ್ರಾಕ್ಷಿಗಳನ್ನು ಧರಿಸುವರೋ ಅವರ ಜನ್ಮ ಪಾವನ, ಶ್ರೀರುದ್ರ ಪ್ರಭಾವವು ಅಸಾಧಾರಣವಾದುದು, ಶಿವ ಪ್ರೇಮಿಗಳು ಶ್ರೀ ರುದ್ಯಾಧ್ಯಾಯ ಪೂರ್ವಕವಾಗಿ ಯಾರು ಶಿವನಿಗೆ ಅಭಿಷೇಕ ಮಾಡುವರೋ ಅವರ ಪಾತಕಗಳು ನಷ್ಟವಾಗುವುವಲ್ಲದೆ ಕಾಲಮೃತ್ಯು ಅಪಮೃತ್ಯುಗಳು ದೂರಾಗುವವು. ಆದುದರಿಂದ ಶ್ರೀ ರುದ್ರಾಭಿಷೇಕದ ಪದ್ಧತಿಯು ಶಿವಪ್ರೇಮಿಗಳಲ್ಲಿ ಅಬಾಧಿತವಾಗಿ ನಡೆಯುತ್ತ ಬರುತ್ತಲಿದೆ. ಭಸ್ಮರುದ್ರಾಕ್ಷಿ ಹಾಗೂ ಶ್ರೀರುದ್ರ ಪ್ರಭಾವದ ಬಗ್ಗೆ ಈ ಮುಂದಿನ ಕಥೆಯು ಉಕ್ತವಾಗಿದೆ.

ಕಾಶ್ಮೀರ ದೇಶದಲ್ಲಿ ಭದ್ರಸೇನನೆಂಬ ರಾಜನು ಧರ್ಮ, ನೀತಿಗಳನ್ನು ಮೀರದೆ ರಾಜ್ಯವನ್ನು ಆಳುತ್ತಿದ್ದನು. ಆತನಿಗೆ ತಕ್ಕ ಮಂತ್ರಿಯು ಸಹಕಾರಿಯಾಗಿದ್ದನು. ರಾಜನು, ಸತ್ಯಪ್ರಿಯನೂ, ಪ್ರಜಾವತ್ಸಲನೂ, ಶಾಸ್ತ್ರನಿಷ್ಠನೂ, ಗುರುದೇವತಾ ತತ್ಪರನೂ, ಆಗಿದ್ದನು. ಅವನಿಗೆ ಆತನ ಪುಣ್ಯ ಪ್ರಭಾವದಿಂದ ಅನುಕೂಲೆಯಾದ ಹೆಂಡತಿಯೂ ದೊರೆತಿದ್ದಳು. ಭದ್ರಸೇನನು ಉದಾರಿಯಾಗಿದ್ದುದಲ್ಲದೆ ಪರಾಕ್ರಮಿಯೂ ಆಗಿದ್ದನು. ಗೃಹಸ್ಥಾಶ್ರಮಕ್ಕೆ ಮೊದಲನೆಯ ಫಲವು ಸಂತಾನ, ರಾಜ ಪ್ರಧಾನಿಗಳೀರ್ವರಿಗೂ ಪುತ್ರಸಂತಾನವೇ ಇರಲಿಲ್ಲ. ಅವರು ಅನೇಕ ಶುಭ ವ್ರತಗಳನ್ನು ಆಚರಿಸಿದರು. ತತ್ಪ್ರಭಾವದಿಂದ ಉಭಯರಿಗೂ ಪುತ್ರಸಂತಾನವಾಯಿತು. ರಾಜಪುತ್ರನ ಹೆಸರು ಸುಧರ್ಮ, ಮಂತ್ರಿಕುಮಾರನ ಹೆಸರು ತಾರಕ. ಉಭಯ ಕುಮಾರರೂ ನಿಸ್ಸೀಮ ಶಿವಭಕ್ತರು. ಯಾವಾಗಲೂ ಶಿವಧ್ಯಾನಾಸಕ್ತರು. ಬಾಲಕರಾದರೋ ಯಾವಾಗಲೂ ಪ್ರೇಮಾಂತಃಕರಣವುಳ್ಳವರೂ, ವೈರಾಗ್ಯಶೀಲರೂ ಆಗಿದ್ದರು. ಲೌಕಿಕ ವ್ಯವಹಾರದಲ್ಲಿ ಅನಾಸಕ್ತರಾಗಿದ್ದರು. ಲೌಕಿಕ ಜನರ ಸಹವಾಸವು ಅವರಿಗೆ ರುಚಿಸುತ್ತಿರಲಿಲ್ಲ. ಮಾತಾಪಿತೃಗಳು ಪುತ್ರವಾತ್ಸಲ್ಯದಿಂದ ಅಮೂಲ್ಯಗಳಾದ ವಸ್ತ್ರಾಲಂಕಾರಗಳನ್ನು ಧರಿಸಿದರೂ ಅವುಗಳನ್ನು ಪ್ರೀತಿಸದೆ, ಪರಿತ್ಯಜಿಸಿ ಭಸ್ಮರುದ್ರಾಕ್ಷಿಗಳನ್ನು ಧರಿಸಿಕೊಂಡು ಏಕಾಂತವಾಸಿಗಳಾಗಿ ಶಿವಲೀಲೆಗಳನ್ನು ಕೇಳುತ್ತಾ, ಶಿವನಾಮಾವಳಿಯನ್ನು ಉಚ್ಚರಿಸುತ್ತಾ,

ಶಿವಪೂಜಾವಲೋಕನ ತತ್ಪರರಾಗಿರುತ್ತಿದ್ದರು. ಈ ಕುಮಾರರ ಈ ಬಗೆಯ ವೈರಾಗ್ಯ ವೃತ್ತಿಯನ್ನು ನೋಡಿ ರಾಜ ಪ್ರಧಾನಿಗಳೀರ್ವರಿಗೂ ಪರಮಾಶ್ಚರ್ಯವಾಯಿತು. ಇವರು ವಸ್ತ್ರಾಲಂಕಾರಗಳನ್ನು ಏಕೆ ಪ್ರೀತಿಸುವುದಿಲ್ಲ? ಭಸ್ಮ ರುದ್ರಾಕ್ಷಿ ಮುಂತಾದವುಗಳನ್ನೇ ಏಕೆ ಪ್ರೀತಿಸುತ್ತಾರೆ? ಎಂಬ ಆಲೋಚನೆಯು ಉದ್ಭವಿಸಿತು, ಈ ಬಗೆಯ ವೃತ್ತಿಯಿಂದ ರಾಜ ಮಂತ್ರಿಗಳೀರ್ವರೂ ಚಿಂತಾಕ್ರಾಂತರಾಗುತ್ತಿದ್ದರು. ಮತ್ತು ಉಭಯ ಬಾಲಕರ ವೃತ್ತಿಯು ಸುಧಾರಿಸುವ ಬಗ್ಗೆ ಯಾವ ಉಪಾಯವನ್ನು ಯೋಜಿಸಬೇಕು ಎಂದು ಯಾವಾಗಲೂ ವಿವೇಚಿಸುತ್ತಿದ್ದರು.

ಇಷ್ಟರಲ್ಲಿ ರಾಜ ಮಂತ್ರಿಗಳ ಸೌಭಾಗ್ಯ ಸೂರ್ಯೋದಯವಾದಂತೆ ಮಹಾ ಮಹಿಮಾಶಾಲಿಯಾದ ಪರಾಶರ ಮುನಿಯು ಮನೆಗೆ ಬಂದನು. ಪರಾಶರನು ವ್ಯಾಸನ ತಂದೆಯು, ಭದ್ರಸೇನ ಮಹಾರಾಜನ ವಂಶಗುರುವು. ರಾಜ ಪ್ರಜರು ಅಕಸ್ಮಾತ್ತಾಗಿ ಆಗಮಿಸಿದ ಪರಾಶರರನ್ನು ಭಕ್ತಿಭಾವ ಭರಿತರಾಗಿ ಸ್ವಾಗತಿಸಿ ಸನ್ಮಾನಿಸಿದರು. ತ್ರಿಕಾಲಜ್ಞಾನಿಯಾದ ಪರಾಶರನಿಗೆ ತಮ್ಮ ಮಕ್ಕಳ ವಿಚಾರವಾಗಿ ಎಲ್ಲವೂ ತಿಳಿದಿರಬಹುದೆಂದು ಭಾವಿಸಿ ತಮ್ಮ ಮನೋವ್ಯಥೆಯನ್ನು ವ್ಯಕ್ತಗೊಳಿಸುತ್ತಾ ಪೂಜ್ಯರೇ! ನಮ್ಮ ಮಕ್ಕಳೀರ್ವರೂ ವೈರಾಗ್ಯಶೀಲರಾಗಿರುವರು. ರಾಜೋಪಭೋಗಗಳನ್ನು ತೊರೆದು ಭಸ್ಮರುದ್ರಾಕ್ಷಿಗಳನ್ನು ಧರಿಸಿಕೊಂಡು ಯಾವಾಗಲು ಏಕಾಂತವಾಸಿಗಳಾಗಿ ಶಿವಧ್ಯಾನಾಸಕ್ತರಾಗಿರುತ್ತಾರೆ, ಮೌನದಿಂದಿರುತ್ತಾರೆ. ಇವರು ಹೇಗೆ ರಾಜ್ಯವನ್ನಾಳಬಹುದು? ಎಂದು ನಮಗೆ ಬಹಳ ಚಿಂತೆಯಾಗಿದೆ ಎಂದು ಹೇಳಿ ಉಭಯ ಕುಮಾರರನ್ನು ಕರೆತಂದು ಪರಾಶರನ ಎದುರಿಗೆ ನಿಲ್ಲಿಸಿದರು. ಇಬ್ಬರೂ ಸೂರ್ಯಚಂದ್ರರಂತೆ ತೇಜಸ್ವಿಗಳಾಗಿದ್ದರು. ಅವರನ್ನು ನೋಡಿ ಪರಾಶರನು ಸಂತೋಷಪಟ್ಟು ಅವರ ಪೂರ್ವಚರಿತ್ರೆಯನ್ನು ಜ್ಞಾನದೃಷ್ಟಿಯಿಂದ ತಿಳಿದು ಹೇಳಿದನು, ಅದೇನೆಂದರೆ :—

ಪ್ರಾಚೀನ ಕಾಲದಲ್ಲಿ ಕಾಶ್ಮೀರದೊಳಗೆ ನಂದಿಗ್ರಾಮ ವೆಂಬ ಪಟ್ಟಣವಿದ್ದಿತು, ಆ ಪಟ್ಟಣದಲ್ಲಿ ಮಹಾನಂದಾ ಎಂಬ ಶಿವಭಕ್ತಾಂಗನೆಯು ವಾಸಮಾಡುತ್ತಿದ್ದಳು. ಆಕೆಗೆ ಅಪಾರ ಸಂಪತ್ತು ಇದ್ದಿತು. ಗಜಾಶ್ವಾದಿಗಳು ಅವಳ ಮನೆಯಲ್ಲಿದ್ದವು. ಯಾವಾಗಲೂ ಅನ್ನದಾನವು ನಡೆಯುತ್ತಿದ್ದಿತು, ಆಕೆಯು ಸಂಗೀತ ಶಾಸ್ತ್ರ ಕೋವಿದೆ, ನೃತ್ಯಕಲಾ ನಿಪುಣೆ, ಸೋಮವಾರ, ಪ್ರದೋಷ, ಶಿವರಾತ್ರಿ ಮುಂತಾದ ವ್ರತಗಳನ್ನು ನಿಯಮದಿಂದ ನಡೆಸುತ್ತಿದ್ದಳು. ಯಾಚಕರಿಗೆ ತೃಪ್ತಿಯಾಗುವಂತೆ ದಾನಮಾಡುತ್ತಿದ್ದಳು. ಅವಳು ಪ್ರೀತಿಗಾಗಿ ಕೋಳಿ, ಕೋತಿಗಳನ್ನು ಸಾಕಿದ್ದಳು. ಅವುಗಳ ಕಂಠಗಳಲ್ಲಿ ರುದ್ರಾಕ್ಷಿಗಳನ್ನು ಕಟ್ಟಿದ್ದಳು, ಅವುಗಳಿಗೆ ನೃತ್ಯವನ್ನು ಕಲಿಸಿದ್ದಳು, ಮನೆಯಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದಳು. ಆ ಕೋಳಿ, ಕೋತಿಗಳನ್ನು ಯಾವಾಗಲೂ ಶಿವಲಿಂಗದ ಸಮೀಪದಲ್ಲಿಯೇ ಇರುವಂತೆ ವ್ಯವಸ್ಥೆಗೊಳಿಸಿದ್ದಳು. ನಿತ್ಯದಲ್ಲಿಯೂ ನಡೆಯುತ್ತಿದ್ದ ಶಿವಲೀಲಾಮೃತ ಶ್ರವಣವನ್ನು ಕೋಳಿ, ಕೋತಿಗಳೂ ಕೇಳುತ್ತಿದ್ದವು, ಮಹಾನಂದೆಯು ಶಿವನ ಮುಂದೆ ನೃತ್ಯಗಾಯನಗಳನ್ನು ಮಾಡುತ್ತಿರುವಾಗ ಕೋತಿ, ಕೋಳಿಗಳೂ ಕುಣಿಯುತ್ತಿದ್ದವು. ಈ ಕ್ರಮದಿಂದ, ಕೋತಿ-ಕೋಳಿಗಳಿಗೆ ಶಿವ ಭಜನೆಯು ಘಟಿಸುತ್ತಿದ್ದಿತು, ಹೀಗಿರುತ್ತಿರಲು ಮಹಾನಂದೆಯ ಭಕ್ತಿಪರೀಕ್ಷೆಗಾಗಿ ಶಿವನು ಬಂದನು. ವೇಷಧಾರಿಯಾದ ಶಿವನು ಮಹಾನಂದೆಯ ಭಕ್ತಿಪರೀಕ್ಷೆಗಾಗಿ ಮನೆಯು ಬೆಂಕಿಯಿಂದ ಉರಿಯುವಂತೆ ಮಾಡಿದನು. ಈ ಸಮಯದಲ್ಲಿ ಗಾಬರಿಗೊಂಡ ಮಹಾನಂದೆಯು ಕೋಳಿ, ಕೋತಿಗಳ ಕಂಣಿಗಳನ್ನು ಕತ್ತರಿಸಿದಳು. ಅವು ವನಕ್ಕೆ ಓಡಿಹೋದವು. ಪುಣ್ಯಪ್ರಭಾವದಿಂದ ಆ ಕೋಳಿ, ಕೋತಿಗಳೇ ಈಗ ನಿಮಗೆ ಪುತ್ರರಾಗಿ ಜನಿಸಿರುವುವು, ಆಗಿನ ಸಂಸ್ಕಾರ ಬಲದಿಂದ ಇವರಿಗೆ ವೈರಾಗ್ಯವೂ ಶಿವಭಕ್ತಿಯೂ ಉಂಟಾಗಿರುವವು. ಇವರು ಮುಂದೆ ಬಹುದಿವಸ ರಾಜ್ಯವನ್ನಾಳುವರು. ಶಿವಭಕ್ತಿ ಪ್ರಚಾರವನ್ನು ಮಾಡುವರು. ಆದರೆ ಇವರಿಗೆ ೧೨ ವರ್ಷ ಮಾತ್ರ ಆಯುಷ್ಯವಿರುವುದು, ಈ ದಿನದಿಂದ 7ನೇ ದಿವಸಕ್ಕೆ ಇವರ ಆಯುಷ್ಯವು ಪೂರ್ಣವಾಗುವುದು. ಈ ಮೃತ್ಯುವನ್ನು ದಾಟಿದರೆ ಇವರಿಗೆ ದೀರ್ಘಾಯುಸ್ಸು ಉಂಟು. ಎಂಬ ಮಾತನ್ನು ಕೇಳಿದೊಡನೆಯೇ ರಾಜ ಪ್ರಧಾನಿ ಮುಂತಾದವರಿಗೆ ಅಪಾರ ದುಃಖವಾಯಿತು, ಅವರು ಕೂಡಲೇ ಮೂರ್ಛಿತರಾದರು, ಈ ಮೃತ್ಯು ನಿವಾರಣೆಗೆ ಏನು ಮಾಡಬೇಕೆಂದು ರಾಜನು ಅರಿಕೆ ಮಾಡಲು, ಶ್ರೀ ಶಿವನ ಲಿಂಗಕ್ಕೆ ರುದ್ರಾಭಿಷೇಕವನ್ನು ಮಾಡಿಸಿ ತೀರ್ಥವನ್ನು ಬಾಲಕರಿಗೆ ಪ್ರೋಕ್ಷಿಸಿದರೆ ಮೃತ್ಯುವು ದೂರವಾಗುವದೆಂದು ಪರಾಶರನು ಹೇಳಿದನು. ಮತ್ತು ರುದ್ರಾಭಿಷೇಕದ ಪ್ರಭಾವವನ್ನು ಬೋಧಿಸಿದನು, ರಾಜನು ಅಪಾರ ಧನವ್ಯಯದಿಂದ ಎಲ್ಲ ಸಿದ್ಧತೆಯನ್ನು ಮಾಡಿಸಿದನು. ಶ್ರೀರುದ್ರಪಾಠಕ್ಕೆ ತಕ್ಕವರಾದ ಅನೇಕರನ್ನು ಕರೆಯಿಸಲಾಯಿತು. ಒಂದು ಸಹಸ್ರಕುಂಭಗಳನ್ನು ವಿಧಿಪ್ರಕಾರವಾಗಿ ಸ್ಥಾಪಿಸಿ ಅವುಗಳಲ್ಲಿ ಗಂಗಾಜಲವನ್ನು ತುಂಬಿ ಮಾವಿನ ಚಿಗುರನ್ನು ಹಾಕಿ ಅಲಂಕರಿಸಿದರು, ಗೊತ್ತುಮಾಡಿದ ದಿನದಲ್ಲಿ ಅಂದರೆ ಆ ಬಾಲಕರ ಆಯುಷ್ಯವು ಪೂರ್ಣವಾಗುವ ದಿವಸದಲ್ಲಿ ಶ್ರೀ ಶಿವಲಿಂಗಕ್ಕೆ ಸಹಸ್ರ ಕುಂಭಾಭಿಷೇಕವು ಮಹಾವೈಭವದಿಂದ ನೆರವೇರಿತು. ಮೃತ್ಯುವಿನ ಆಕ್ರಮಣದಿಂದ ಬಾಲಕರು ಹೊತ್ತಿಗೆ ಸರಿಯಾಗಿ ಮೂರ್ಛಿತರಾಗಿ ಮಲಗಿದರು: ಶ್ರೀ ರುದ್ರಾಭಿಷೇಕದ ತೀರ್ಥವನ್ನು ಪ್ರೋಕ್ಷಿಸಲು ಬಾಲಕರು ಚೈತನ್ಯಗೊಂಡು ಎದ್ದು ಕುಳಿತರು, ಮೂರ್ಛಿತರಾದಾಗ ಅವರಿಗಾದ ಯಮಬಾಧೆಯನ್ನು, ಶಿವದೂತರಿಂದ ಯಮನಸೋಲನ್ನು ಆ ಬಾಲಕರ ಮುಖದಿಂದ ಕೇಳಿದ ರಾಜ ಮುಂತಾದವರು ಆಶ್ಚರ್ಯಚಕಿತರಾಗಿ

ಸಂತಸಗೊಂಡು ಶ್ರೀರುದ್ರಮಹಿಮೆಯನ್ನೂ ಪರಾಶರನ ಸತ್ವವನ್ನೂ ಕೊಂಡಾಡಿದರು. ಅನೇಕ ದಾನಗಳನ್ನು ಮಾಡಿದರು. ಶಿಷ್ಯರಿಂದೊಡಗೂಡಿದ ಪರಾಶರನಿಗೆ ಅಪಾರ ದಕ್ಷಿಣೆಯನ್ನಿತ್ತರು. ಯಾಚಕರಿಗೆ ಹೊರಲಾರದಷ್ಟು ಧನವನ್ನು ನೀಡಿದರು. ಆ ಆನಂದದ ಸಮಯದಲ್ಲಿ ದೇವರ್ಷಿಗಳಾದ ನಾರದರು ಆಗಮಿಸಿ ತಾವು ಪ್ರತ್ಯಕ್ಷವಾಗಿ ನೋಡಿದ ಯಮನ ಸೋಲನ್ನೂ ಶಿವದೂತರ ಮಹಿಮೆನ್ನೂ ವರ್ಣಿಸಿದರು. ಆಗ ಎಲ್ಲರ ಮೈಯಲ್ಲಿ ರೋಮಾಂಚನವಾಯಿತು. ಜಯಧ್ವನಿಯನ್ನು ಮಾಡಿದರು. ಬಾಲಕರಿಗೆ ಹತ್ತು ಸಾವಿರ ವರ್ಷಗಳ ಆಯುಷ್ಯವಿದೆ ಎಂದು ಆಶೀರ್ವದಿಸಿದರು. ರಾಜಪ್ರಧಾನಿಗಳು ಪುತ್ರರೊಡನೆ ಹರ್ಷಭರಿತರಾಗಿ ಕಾಲವನ್ನು ಕಳೆಯುತ್ತಿದ್ದರು.

ಶ್ರೀ ರುದ್ರ ಪ್ರಭಾವ, ಸಹಸ್ರಕುಂಭಾಭಿಷೇಕ ಮಹಿಮೆಯನ್ನರಿತು ಶಿವಭಕ್ತಿತತ್ಪರರಾಗಿ ಶಿವನನ್ನು ಪೂಜಿಸಿ ಪೂಜೆಯನ್ನು ನೋಡಿ ಮಾಡಿ, ಮಾಡಿಸಿ, ಧನ್ಯರಾಗಬೇಕು. ಶಿವಪ್ರೇಮಿಗಳಿಗೆ ಇದು ಅಕ್ಷಯ ನಿಧಿಯಾಗಿರುವುದು, ಸ್ಕಾಂದ ಪುರಾಣಾಂತರ್ಗತವಾದ ಸಹಸ್ರಕುಂಭಾಭಿಷೇಕದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಸಮಸ್ತ ಸನ್ಮಂಗಳಾನಿ ಭವಂತು.

ಮಾನವಧರ್ಮಕ್ಕೆ ಜಯವಾಗಲಿ
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ
ವಂದೇ ಜಗದ್ಗುರು ಪಂಚಾಚಾರ್ಯಾನ್

ಪಂಚ ಜಗದ್ಗುರುಗಳಿಗೆ ನಮ್ಮ ಹಾರ್ದಿಕ ಶರಣು

KOPPAM R. RAMA REDDY M. RAMA REDDY
ಕೊಪ್ಪಂ ಆರ್. ರಾಮರೆಡ್ಡಿ ಎಂ. ರಾಮರೆಡ್ಡಿ
Mandy Merchants and Commission Agents
NEW THARAGUPET :: BANGALORE-2

Phone: 24043

ಪಂಚ
ಜಗದ್ಗುರುಗಳಿಗೆ
ನಮ್ಮ
ಪ್ರಣಾಮಗಳು

★

ಸಿ. ವೀರಭದ್ರಯ್ಯ ಅಂಡ್ ಸನ್ಸ್

ಕ್ಯಾನ್‌ವಾಸಿಂಗ್ ಏಜೆಂಟ್ಸ್

254 ಹಳೆ ತರಗುಪೇಟೆ : : ಬೆಂಗಳೂರು

ತಂತಿ : ಅಮರಜ್ಯೋತಿ

ಫೋನ್ : ಕಚೇರಿ–75738
ನಿವಾಸ –23149



ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು

ಮುತ್ತಿನಕಂತೆ ಮಠ

ಪಂಚ ಸಾದಾಖ್ಯ ತತ್ವಗಳ ನಿರ್ಣಯ

ವೀರಶೈವ ಸಿದ್ಧಾಂತದ ಬಗ್ಗೆ ಅಪಾರ ಅಧ್ಯಯನ ಚಿಂತನೆ ನಡೆಸಿರುವ ಶ್ರೀ ಸೋಮಶೇಖರ ಶಿವಾರ್ಯ ಸ್ವಾಮಿಗಳು ತರ್ಕಶಾಸ್ತ್ರದಲ್ಲಿ ಉದ್ದಾಮ ಪಂಡಿತರಾಗಿದ್ದಾರೆ. ಅವರ ವಿದ್ವತ್ತೆಗೆ ಈ ಲೇಖನವೇ ಪ್ರತ್ಯಕ್ಷ ಸಾಕ್ಷಿಯಾಗಿದೆ. ಶ್ರೀ ಸ್ವಾಮಿಗಳು ಬೆಂಗಳೂರಿನ ಮುತ್ತಿನಕಂತೆ ಮಠದ ಪಟ್ಟಾಧ್ಯಕ್ಷರು. ಇವರ ಪಾಂಡಿತ್ಯವನ್ನು ಮೆಚ್ಚಿದ ಶ್ರೀ ಶ್ರೀ ಶ್ರೀಶೈಲ ಜಗದ್ಗುರುಗಳವರು ಇವರಿಗೆ 'ಶಿವಾದ್ವೈತ ಭಾಸ್ಕರ' ಎಂಬ ಬಿರುದನ್ನು ದಯಪಾಲಿಸಿದ್ದಾರೆ.

ಜಯತ್ಯಖಂಡ ಜಗದಾದಿ ಗುರುಃ ಸಾಕ್ಷಾತ್ ಸದಾಶಿವ ಏವ ॥

—ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಆದಿ ಗುರು ಸದಾಶಿವನೇ. ಸತ್ಯ, ಶಾಂತಾ, ಸದಾನಂದ ಈ ಮೂರು ಶಿವನ ಆನಂದ ಮಯವಾದ ಸ್ವರೂಪಗಳು. ಇವುಗಳಿಂದಲೇ ಪಂಚಸಾದಾಖ್ಯ ತತ್ವಗಳು ಉನ್ಮೇಷಣವಾದವು. ಅವು ಯಾವುವೆಂದರೆ,-ಶಿವ, ಶಕ್ತಿ, ಸದಾಶಿವ, ಶುದ್ಧವಿದ್ಯಾ, ಈಶ್ವರ, ಇವು ಸದಾಶಿವನ ಸಾದಾಖ್ಯ ತತ್ವಗಳು. ಈ ತತ್ವಗಳು ಭೂತ, ಭವಿಷ್ಯತ್, ವರ್ತಮಾನ ಮೂರು ಕಾಲಗಳಲ್ಲಿಯೂ ಅವಿನಾಶವಾಗಿ ಇರತಕ್ಕಂತಹ ಮಹಾತತ್ವಗಳು. ಈಶ್ವರನ ಮಹಾಶಕ್ತಿಯಿಂದ ಅಂದರೆ, ಆತ್ಮನಃ ಸಕಾಶಾತ್ ಆಕಾಶಃ, ಆಕಾಶಾದ್ವಾಯುಃ, ವಾಯೋಃ ಅಗ್ನಿಃ. ಅಗ್ನೇಃ ಆಪಃ ಅದ್ಭ್ಯಃ ಪೃಥಿವೀ ಪೃಥಿವ್ಯಾಂ ಓಷಧಯಃ, ಓಷದಿಭ್ಯೋ ಅನ್ನಂ, ಅನ್ನಾದ್ರೇತಃ ರೇತಸಃ ಪುರುಷಃ... ಇತ್ಯಾದಿ ಉಪನಿಷತ್ತಿನ ಮಂತ್ರಗಳನ್ನು ನಾವು ನೋಡುವುದಾದರೆ ಆತ್ಮನಿಂದ ಆಕಾಶವು, ಆಕಾಶದಿಂದ ವಾಯುವು, ವಾಯುವಿನಿಂದ ಅಗ್ನಿಯು, ಅಗ್ನಿಯಿಂದ ನೀರು, ನೀರಿನಿಂದ ಪೃಥ್ವಿಯು, ಪೃಥ್ವಿಯಿಂದ ಓಷಧಿಗಳು, ಓಷಧಿಗಳಿಂದ ಅನ್ನವು, ಅನ್ನದಿಂದ ರೇತಸ್ಸು, ರೇತಸ್ಸಿನಿಂದ ಪುರುಷನೂ ಉನ್ಮೇಷರಾದರು. ಅಂದರೆ ಪರಮಾತ್ಮನು ಮಹಾಮಾನವನನ್ನು ತನ್ನಿಚ್ಛೆಯಂತೆ ನಿರ್ಮಾಣ ಮಾಡಿದನು. ಇದಾದ ನಂತರ ಮಹಾತತ್ವ ಭೂಯಿಷ್ಠವಾದಂತಹ ಪಂಚಾಚಾರ್ಯರ ಉಗಮವು ಆಯಿತು. ಈ ಉಗಮಕ್ಕೆ ಕಾರಣ ಬ್ರಹ್ಮನಿಗೆ ಪರಶಿವನು 'ನಿನ್ನಿಂದ ಜಗತ್ತು ಹೊರಹೊಮ್ಮಲಿ' ಎಂದು ಹೇಳಿದಾಗ ಬ್ರಹ್ಮನಿಗೆ ಜಗತ್ತಿನ ವಿಷಯವು ಗೊತ್ತೇ ಇರಲಿಲ್ಲ. ಆದಕ್ಕಾಗಿ ನನ್ನಿಂದ ಜಗತ್ತು ಹೊರಹೊಮ್ಮಬೇಕಾಗಿದ್ದರೆ ನಾನು ಆ ವಿಷಯದಲ್ಲಿ ಅನಭಿಜ್ಞನಾಗಿದ್ದೇನೆ ಎಂದು ಹೇಳಲಾಗಿ ಪರಶಿವನು ತನ್ನ ಪಂಚ ಮುಖಗಳಿಂದ ಪಂಚ ಗಣಾಧೀಶ್ವರರನ್ನು ಪಂಚ ಸಾದಾಖ್ಯ ತತ್ವಗಳಿಂದ ಉನ್ಮೇಷಣಗೊಳಿಸಿದನು. ಅವರೇ ಪಂಚಾಚಾರ್ಯರು. ಪಂಚಾಚಾರ್ಯರೇ ಪಂಚ ಸಾದಾಖ್ಯ ತತ್ವಗಳಿಗೆ ಕಾರಣೀಭೂತರು. ಮುಂದೆ ಪರಶಿವನಿಂದ ಈ ಜಗತ್ತು ಹೊರಹೊಮ್ಮಬೇಕಾಗಿದ್ದರೆ ಮಾನವನಿಗೆ ಸಕಲ ಸೌಕಾರ್ಯಾರ್ಥವಾಗಿ ಆಕಾಶ, ವಾಯು, ಅಗ್ನಿ, ಪೃಥ್ವಿ, ಜಲ, ಇವುಗಳನ್ನು ಲೋಕ ಕಲ್ಯಾಣಾರ್ಥವಾಗಿ ಹೊರಹೊಮ್ಮಿಸಿದನು. ಹೇಗೆಂದರೆ,—ಸ್ಕಾಂದ ಪುರಾಣದಲ್ಲಿ ಹೇಳಿದಂತೆ—

ಶಿವಾತ್ ಸತ್ಯಪರಾನಂದ ಪ್ರಕಾಶೈಕ ಸ್ವಲಕ್ಷಣಾತ್ ।
ಆವಿರ್ಭೂತಮಿದಂ ಸರ್ವಂ ಚೇತನಾಚೇತನಾತ್ಮಕಂ ॥

ಪರಶಿವನಿಂದಲೇ ಈ ಚರಾಚರಾತ್ಮಕವಾದ ಪ್ರಪಂಚವು ಹೊರ ಹೊಮ್ಮಿತು. ಇದೆಲ್ಲವೂ ಪಂಚಭೂತಾತ್ಮಕವಾದ ಎಲ್ಲಾ ಪ್ರಾಣಿಗಳ ಅನುಕೂಲಕ್ಕಾಗಿಯೇ ಪರಮಾತ್ಮನು ನಿತ್ಯಸುಂದರನಾಗಿ ಎಲ್ಲ ಮಾನವರ ಏಳಿಗೆಗೆ ಕಾರಣೀಭೂತನಾದನು. ಇಂತಹ ಪರಶಿವನೇ ತನ್ನ ಸ್ವಪ್ರೋಕ್ತಿಯಿಂದ "ತಸ್ಮಾತ್ ಚ ತಸ್ಮಾತ್ ಚ ಗಿರಿಜೆ ಮದಾದಿ ಸರ್ವಲೋಕಾನಾಮ್ ಜಗದ್ಗುರು ವರೋತ್ತಮಾಃ" ಇವರು ನನ್ನಿಂದಲೇ ಉಗಮವಾಗಿ ಈ ಈರೇಳು ಜಗತ್ತಿಗೆ ಕಾರಣೀಭೂತರು ಮತ್ತು ಜಗದ್ಗುರುಗಳು ಎಂದು ಸ್ಪಷ್ಟವಾಗಿ ಪರಶಿವನೇ ಪಾರ್ವತಿಗೆ ಅಪ್ಪಣೆ ಮಾಡಿರುತ್ತಾನೆ. ಅಂದಮೇಲೆ ಇಂತಹ ಪಂಚಸಾದಾಖ್ಯ ತತ್ವಗಳಿಗೆ ಒಡೆಯರಾಗಿರತಕ್ಕಂತಹ ಪಂಚ ಜಗದ್ಗುರುಗಳೇ ವಿಶ್ವದ ವಿಖ್ಯಾತ ಜಗದ್ಗುರುಗಳು. ಕೇವಲ ಇವರು ವೀರಶೈವರಿಗೆ ಮಾತ್ರ ಜಗದ್ಗುರುಗಳಲ್ಲ. ಇವರು ತತ್ವಾಧಿಕಾರಿಗಳು. ಅವು ಯಾವುವೆಂದರೆ, ಪೃಥಿವ್ಯಾದಿ ಪಂಚ ತತ್ವಗಳಿಗೆ. ಈ ಪಂಚಾಚಾರ್ಯರೇ ತತ್ವಾಧಿಕಾರಿಗಳಾಗಿರುತ್ತಾರೆ. ಎಲ್ಲಾ ಪ್ರಾಣಿಗಳಿಗೂ ಪಂಚ ಭೂತಾತ್ಮಕವಾಗಿರುವಂತಹ ತತ್ವಗಳು ಆವಶ್ಯಕ. ಅಂದರೆ ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಈ ಐದು ತತ್ವಗಳು ಯಾರಿಗೆ ಬೇಡ? ಸಕಲ ಚರಾಚರಾತ್ಮಕವಾದ ಪ್ರಪಂಚದ ಎಲ್ಲಾ ಪ್ರಾಣಿಗಳಿಗೂ ಬೇಕಾಗಿರುವುದರಿಂದ ಮಾನವನಿಗೆ ಈ ಪಂಚತತ್ವಗಳು ಎಷ್ಟರಮಟ್ಟಿಗೆ ಆವಶ್ಯಕವೋ ಈ ಪಂಚ ಮಹಾಚಾರ್ಯರೂ ಅಷ್ಟೇ ಆವಶ್ಯಕರಾಗಿದ್ದಾರೆ.

ಪರಶಿವನು ನಮಗೆ ಮಹಾ ಆಪ್ತನಾಗಿರುತ್ತಾನೆ. ಅಂತಃ ಮಹಾ ಆಪ್ತನಾಗಿರತಕ್ಕಂಥ ಪರಶಿವನ ವಾಣಿಯ ಮೇರೆಗೆ ಪಂಚಸಾದಾಖ್ಯ ತತ್ವಗಳೇ ತತ್ವಗಳಾಗಿರುತ್ತವೆ. "ತತ್ವ" ಎಂಬಲ್ಲಿ ಮೂರು ಅಂಶಗಳಿವೆ. ತತ್, ತ್ವಂ, ಅಸಿ. ತತ್ ಎಂದರೆ ಸಕಲ ಕಲ್ಯಾಣ ಭೂಯಿಷ್ಠವಾಗಿರತಕ್ಕಂತಹ ಪರಮಾತ್ಮನನ್ನು ತಿಳಿಯತಕ್ಕಂತಹ ಮಹಾಮಾನವನು ತ್ವಂ ಅಂದರೆ ನೀನು, ಅಸಿ ಅಂದರೆ ಆಗಿದ್ದೀಯೆ. ಅ ಎಂಬಲ್ಲಿ ಅಸಭೂವಿ ಎಂಬ ಧಾತುವಿನಿಂದ ಉತ್ಪನ್ನವಾಯಿತು. ಆದುದರಿಂದ ಆ ತತ್ತ್ವಭೂಯಿಷ್ಠವಾಗಿರತಕ್ಕಂಥ ಪರಶಿವನನ್ನು ತಿಳಿಯಬೇಕಾದರೆ ತತ್ವಾರ್ಥಿಯಾಗಿರತಕ್ಕಂಥ ಈ ಮಹಾ ಮಾನವನಿಂದಲೇ ಸಾಧ್ಯ. ಈ ಮಹಾ ಮಾನವನಿಗೆ ಈ ಪಂಚಾಚಾರ್ಯರೇ ಜಗದಾಚಾಯರಾಗಿರುತ್ತಾರೆ. ಅಂದರೆ ಜಗತಃ ಸಂಸಾರಿ ಆತ್ಮಜಾತ ಎಂಬ ಶ್ರುತಿಯಂತೆ ಈ ಜಗತ್ತು ಆತ್ಮನಿಂದಲೇ ಹುಟ್ಟಿತು. ಕೊನೆಗೆ ಆತ್ಮನಲ್ಲಿಯೇ ಬೆರೆತು ಹೋಗುತ್ತದೆ. ಆದುದರಿಂದಲೇ ಈ ಪಂಚ ಮಹಾ ಭೂತಗಳು ಈ ಮಹಾ ತತ್ವಗಳು ಎಲ್ಲಿಯತನಕ ಯಾವ ಮಾನವನಲ್ಲಿಯೇ. ಆಗಲಿ, ಯಾವ ಪ್ರಾಣಿಯಲ್ಲಿಯೇ ಆಗಲಿ ಇರುತ್ತವೆಯೋ ಅಲ್ಲಿಯ ತನಕ ಈ ಮಹಾಚಾರ್ಯರನ್ನು ಅವರ ಸ್ಮರಣೆಯನ್ನು ಮಾಡಲಿ ಮಾಡದೇ ಹೋಗಲಿ ಈ ಪಂಚಾಚಾರ್ಯರನ್ನು ಯಾವಜ್ಜೀವ ಜಗದ್ಗುರು ಎಂಬುದಾಗಿ ಹೇಳಬೇಕಾದುದು. ಎಂದು ಈ ಪಂಚ ತತ್ವಗಳು ಪ್ರಪಂಚದಲ್ಲಿ ಇರುವುದಿಲ್ಲವೋ ಅಂದೇ ಈ ಪಂಚಾಚಾರ್ಯರು ಇಲ್ಲವೆಂದು ತಿಳಿಯಬೇಕಾಗುತ್ತದೆ. ಇದು ಪರಮ ಆಸ್ತಿಕ ಮತವಾಗಿ ಇರುತ್ತದೆ. ಜಗತ್ತಿನಲ್ಲಿ ಪಂಚಾಚಾರ್ಯರು ನಮಗೆ ಗುರುಗಳು ಅಲ್ಲ ಎಂದರೆ ನಮಗೇನೂ ಹಾನಿಯುಂಟಾಗಲಾರದು. ಪಂಚಭೂತಗಳೇ ಇಲ್ಲವೆಂಬುದಾಗಿ ಹೇಳಿದಂತಾಗುತ್ತದೆ. ಎಲ್ಲಿಯ ತನಕ ಪಂಚಭೂತಗಳು ಬೇಕೋ ಅಲ್ಲಿಯ ತನಕ ಪಂಚಸಾದಾಖ್ಯ ತತ್ತಗಳೂ ಕೂಡ ಬೇಕು. ಪಂಚ ಸಾದಾಖ್ಯ ತತ್ವಗಳಿಗೆ ಒಡೆಯರಾದ ಈ ಪಂಚ ಮಹಾಚಾರ್ಯರ ಅಸ್ತಿತ್ವವು ಆಕಾಶದಷ್ಟೇ ಅಗಲ, ಸಮುದ್ರದಷ್ಟೇ ಆಳ, ಸೂರ್ಯ ಚಂದ್ರರಷ್ಟೇ ಪ್ರಕಾಶಮಾನವಾದದ್ದು. ಆತ್ಮನಷ್ಟೇ ನಿತ್ಯವಾದದ್ದು. ಅಂತೆಯೇನೇ ಆಕಾಶವು ವಾಯುವಿನಲ್ಲಿ ಸೇರಿ ವಾಯು ತೇಜಸ್ಸಿನಲ್ಲಿ ಸೇರಿ ಅಪ್ಪು ಪೃಥ್ವಿಯಲ್ಲಿ ಸೇರಿ ಪೃಥ್ವಿಯು ಆತ್ಮನಲ್ಲಿ ಸೇರುತ್ತದೆ. ಇವುಗಳು ಪರಶಿವನ ನಿವೃತ್ತಿ ಕಲಾವಿಶೇಷವಾಗಿರುತ್ತವೆ. ಒಂದನ್ನು ಬಿಟ್ಟು ಒಂದು ಇರದೆ ಎಲ್ಲವೂ ಆತ್ಮನಲ್ಲಿ ಲೀನವಾಗುತ್ತವೆ. ಆತ್ಮನ ವಿಕಾಸವೇ ಜಗದುನ್ಮೇಷಣವು, ಜಗದುನ್ಮೇಷಣವೇ ಪಂಚ ಸಾದಾಖ್ಯ ತತ್ವಗಳು. ಹೇಗೆಂದರೆ :

"ನಮಃ ಪರಬ್ರಹ್ಮವಪುಷೇ ಪಂಚಬ್ರಹ್ಮರೂಪಾಯ" ಈ ಪಂಚಬ್ರಹ್ಮರೇ ಪಂಚಾಚಾರ್ಯರಾಗಿರುತ್ತಾರೆ. ಇವರು ಕೇವಲ ಮಾನವರಿಗೇನೇ ಅಲ್ಲದೆ ತಿರಿಯಕ್ ಪ್ರಾಣಿಗಳೆಲ್ಲಕ್ಕೂ ಕೂಡ ಮಹಾ ಗುರುವಾಗಿರುತ್ತಾರೆ. ಕನ್ನಡ ನಾಡಿನಲ್ಲಿ ವಚನಕಾರರು ಕೂಡ "ಶಿವಪಥವನರಿವಡೆ ಗುರುಪಥವೇ ಮೊದಲು" ಎಂಬುದಾಗಿ ಹೇಳಿದ್ದಾರೆ. ಹೇಗೆಂದರೆ "ಅಪ್ರತ್ಯಕ್ಷೇ ಮಹಾದೇವಃ ಸರ್ವೇಷಾಂ ಆತ್ಮಮಾಯಯಾ। ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಸಿದ್ಧಯೇ॥ ಅಂದರೆ ಎಲ್ಲಾ ಪ್ರಾಣಿಗಳಲ್ಲಿಯೂ ಕೂಡ ಮಾನವನು ಬುದ್ಧಿವಂತ ಪ್ರಾಣಿಯಾಗಿರುತ್ತಾನೆ. ಅದಕ್ಕಾಗಿ ಸದಾಶಿವನು ತನ್ನ ಆತ್ಮನ ಪ್ರಾಕಾಶದಿಂದ ಗುರುರೂಪವನ್ನು ಧರಿಸಿ ಸಕಲ ಪ್ರಾಣಿಗಳಿಗೆ ಲೇಸನ್ನು ಬಯಸುತ್ತಾನೆ. ಪರಮಾಪ್ತನಾಗಿರತಕ್ಕಂತಹ ಪರಶಿವನೇ ಅಪ್ಪಣೆ ಕೊಡಿಸಿರುವುದರಿಂದ ಪರಮಾಪ್ತ ಎಂದರೆ ಯಥಾರ್ಥವನ್ನು ನುಡಿಯುವವನಾಗಿರುತ್ತಾನೆ. ಅನಾಪ್ತನಾರೆಂದು ಕೇಳಿದರೆ "ಅಗ್ನಿನಸಿಂಚೇತ್" ಅಗ್ನಿಯಿಂದ ಅರ್ಥಾತ್ ಬೆಂಕಿಯಿಂದ ಸೇಚನ ಕೆಲಸವು ಲೋಕದಲ್ಲಿ ಅಪ್ರಸಿದ್ಧವಾಗಿರುತ್ತದೆ. ಸೇಚನ ಕೆಲಸವು ನಿರೀನಲ್ಲಿದೆ. ಇದು ಆಬಾಲವೃದ್ಧರಿಗೂ ಗೊತ್ತಿರುವ ಮಾತಾಗಿರುತ್ತದೆ. ವಾಕ್ಯದಲ್ಲಿ ಎರಡು ವಿಧ. ಲೌಕಿಕ ವೈದಿಕವೆಂದು; ಲೌಕಿಕವೆಂದರೆ, ಯಾವನಾದರೊಬ್ಬ ಮಾನವನು ತಾನು ನೋಡಿದ ವಸ್ತುವನ್ನು ಹೇಳಿದಾಗ ಅಂದರೆ "ನದ್ಯಾಃ ತೀರೇ ಪಂಚಫಲಾನಿ ಸಂತಿ" ಎಂದು ಹೇಳಿದಾಗ ನಾವು ಆ ನದೀ ತೀರದಲ್ಲಿ ಐದು ಹಣ್ಣುಗಳನ್ನು ಕಂಡಾಗ ಮಾತ್ರ ಅದು ಲೋಕದಲ್ಲಿ ನಿಜ

ವಾಗುತ್ತದೆ. ಇಲ್ಲದೇ ಇದ್ದ ಪಕ್ಷದಲ್ಲಿ ಅದು ಸುಳ್ಳಾಗಿ ಪರಿಗಣಿಸಲ್ಪಡುತ್ತದೆ. ವೈದಿಕವಂತು ಶೈವಾಗಮಗಳಲ್ಲಿ ಪ್ರಸಿದ್ಧವಾಗಿದೆ. ಆಗಮಗಳ ವಾಕ್ಯವೇ "ವೇದ್ಃ ಶಿವಃ, ಶಿವೋ ವೇದಾಃ" ಅಂದರೆ ವೇದವಾಙ್ಮಯದಲ್ಲಿ ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಗೆ ಜಗದುನ್ಮೇಷಣ ಕ್ರಮವನ್ನು ಹೇಳುವುದಕ್ಕೆ ಮುಂಚೆಯೇನೇ ಪಂಚ ಸಾದಾಖ್ಯ ತತ್ತ್ವಗಳು ಇದ್ದಾವೆ. ಇದರಲ್ಲಿ 1) "ಪೃಥ್ವೀ" ತತ್ತ್ವಕ್ಕೆ ಜಗದ್ಗುರು ರೇಣುಕಾಚಾರ್ಯರು ಅಧಿಕಾರಿಯಾಗಿರುತ್ತಾರೆ. 2) "ಅಪ್, ತತ್ವಕ್ಕೆ ಅಂದರೆ ನೀರಿಗೆ ಅಧಿಕಾರಿಗಳು ದಾರುಕಾಚಾರ್ಯರು ಆಗಿರುತ್ತಾರೆ. "ತೇಜ" ತತ್ತ್ವಕ್ಕೆ ಜಗದ್ಗುರು ವಿಶ್ವಾರಾಧ್ಯರು ಅಧಿಕಾರಿಗಳಾಗಿರುತ್ತಾರೆ. ವಾಯುಃ ತತ್ತ್ವಕ್ಕೆ ಪಂಡಿತಾರಾಧ್ಯರು ಅಧಿಕಾರಿಗಳಾಗಿರುತ್ತಾರೆ. ಆಕಾಶ ತತ್ತ್ವಕ್ಕೆ ಏಕೋರಾಮಾರಾಧ್ಯರು ಅಧಿಕಾರಿಗಳಾಗಿರುತ್ತಾರೆ. ಸಾಮಾನ್ಯವಾಗಿ ಕನ್ನಡ ನಾಡಿನಲ್ಲಿ ಒಂದು ಗಾದೆಯು ಇದೆ. ಅದೇನೆಂದರೆ,-ಬಾಳೆಹೊನ್ನೂರು ದವಲತ್ ಪೀಠ ಎಂಬುದಾಗಿಯೂ, ಉಜ್ಜಯಿನಿ ಪೀಠಕ್ಕೆ ಸಂಪತ್ ಪೀಠ ಎಂಬುದಾಗಿಯೂ ಕಾಶಿ ಪೀಠಕ್ಕೆ ವಿದ್ವತ್ ಪೀಠ ಎಂಬುದಾಗಿಯೂ, ಶ್ರೀಶೈಲ ಪೀಠಕ್ಕೆ ವಿಪಶ್ಚತ್ ಪೀಠ ಎಂಬುದಾಗಿಯೂ, ಕೇದಾರ ಪೀಠಕ್ಕೆ ಹುಕುಮತ್ ಪೀಠವೆಂತಲೂ ಗಾದೆ ಇರುತ್ತದೆ. ಅಂದರೆ ಪರಶಿವನ ಆತ್ಮನ ವಿಕಾಸ ಸ್ವರೂಪವೇ ಅವರೂತ್ತ ರೂಪವಾಗಿ ಈ ಜಗತ್ತು ಉನ್ವೇಷಣವಾಯಿತು. ಹೇಗೆಂದರೆ:— "ಸದೇವ ಸೌಮ್ಯ ಇದಮೇವ ಅಗ್ರ ಆಸೀತ್" ಈ ಉಪನಿಷತ್ ವಾಕ್ಯವನ್ನು ಪರಿಶೀಲನೆ ಮಾಡುವುದಾದರೆ ಸಂಸ್ಕೃತದಲ್ಲಿ ಏವ ಶಬ್ದವು ಇತರ ವ್ಯವಚ್ಛೇದಾರ್ಥಕವಾಗಿ ಇರುತ್ತದೆ.ಅಂದರೆ ಶಿವನಲ್ಲದೆ ಮತ್ತೆ ಯಾರೂ ಇರಲಿಲ್ಲವೆಂದು ಅರ್ಥವಾಯಿತು. ಅಂತಹ ಪರಶಿವನ ಇಚ್ಛೆಯೇ ಸಾದಾಖ್ಯ ತತ್ವಗಳು. ಆ ತತ್ರಗಳಿಗೆ ಈ ಜಗದಾಚಾರ್ಯರೇನೇ ಕಾರಣೀಭೂತರಾಗಿರುತ್ತಾರೆ. ಕೇವಲ ಈ ಜಗತ್ತಿನ ಮಾನವರಿಗಾಗಿಯೆ ಗುರುಗಳಲ್ಲ ಸಕಲ ಚರಾಚರಾತ್ಮಕವಾಗಿರತಕ್ಕಂಥ ಎಲ್ಲಾ ಪ್ರಾಣಿಗಳಿಗೂ ತತ್ವಾಧಿಕಾರಿಗಳಾಗಿರುತ್ತಾರೆ. ಹೇಗೆಂದರೆ – ನಮ್ಮ ಶಿವನು ಜಗವನ್ನು ಸೃಷ್ಟಿಸಲೂ ಬಲ್ಲ, ಜಗದ ಎಲ್ಲಾ ವಸ್ತುಗಳಲ್ಲಿಯು ಸೇರಲೂ ಬಲ್ಲ, ಇವೆಲ್ಲಕ್ಕೂ ಕೂಡ ಅತೀತನಾಗಿಯೂ ಇರಬಲ್ಲ. ಹೇಗೆಂದರೆ ಎಲ್ಲಾ ಒಡವೆಗಳಿಗೂ ಕೂಡ ಸುವರ್ಣವೇ ಕಾರಣವಾಗಿರುತ್ತದೆ. ಸುವರ್ಣ ಬಿಟ್ಟು ಒಡವೆ ಇಲ್ಲ, ಒಡವೆಯನ್ನು ಬಿಟ್ಟು ಸುವರ್ಣವೂ ಇಲ್ಲ.

OUR OBEISANCES TO
JAGADGURU PANCHACHARYAS

K. RAGHUNATHA CHETTY & SONS
Art Silk & Cotton Cloth Manufacturers & Merchants
156, Moongappadi Street,
GUGAI, SALEM - 6.

With best compliments from

WE WELCOME WITH
MOST RESPECTS
JAGADGURU PANCHA
PEETHADHIPATIS ......

SRI ADINARAYANA TRADING CO.,
MANDI MERCHANTS AND COMMISSION AGENTS
140, OLD TARAGUPET :: BANGALORE-2

Phone: Office: 70124
Res: 71253

Grams: 'ADINACO'



ವಿದ್ಯಾ ವಿಭೂಷಣ
ಶ್ರೀ ಓ. ಎನ್. ಲಿಂಗಣ್ಣಯ್ಯನವರು

ಆಧುನಿಕ ಸಾಹಿತ್ಯಕ್ಕೆ ವೀರಶೈವರ ಕೊಡುಗೆ

ಕನ್ನಡದಲ್ಲಿ ವೀರಶೈವ ಸಾಹಿತ್ಯ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿರುತ್ತದೆ. ಕ್ರಿ.ಶ. 1920 ರಿಂದ ಕನ್ನಡದಲ್ಲಿ ಆಧುನಿಕ ಸಾಹಿತ್ಯ ಯುಗ ಪ್ರಾರಂಭವಾಯಿತೆಂದು ಹೇಳಬಹುದು. ಈ ಐವತ್ತು ವರ್ಷಗಳ ಅವಧಿಯಲ್ಲಿ ವೀರಶೈವ ಪಂಡಿತ ಪ್ರಕಾಂಡರೂ, ವಿದ್ವಾಂಸರೂ, ಕವಿವರರೂ, ಲೇಖಕರೂ, ವಾಗ್ಮಿಗಳೂ, ಕೀರ್ತನಕಾರರೂ, ಕಲಾವಿದರೂ ಆಧುನಿಕ ಕನ್ನಡ ಸಾಹಿತ್ಯಕ್ಕೆ ವಿಶೇಷ ರೀತಿಯ ಕೊಡುಗೆಯನ್ನು ಸಲ್ಲಿಸಿರುತ್ತಾರೆ. ವಿವಿಧ ಪ್ರಕಾರದ ಸಾಹಿತ್ಯವನ್ನು ಸೃಷ್ಟಿಸಿರುತ್ತಾರೆ. ಗದ್ಯ, ಪದ್ಯ, ನಾಟಕ, ಕಾದಂಬರಿ, ಕಾವ್ಯ, ಕಥೆ, ಆತ್ಮಚರಿತ್ರೆ, ವಿಮರ್ಶೆ, ಇತಿಹಾಸ, ಧಾರ್ಮಿಕ, ಸಾಮಾಜಿಕ, ಗ್ರಂಥಸಂಪಾದನೆ, ಅನುವಾದ ಮೊದಲಾದ ಅನೇಕ ವಿಚಾರಗಳಲ್ಲಿ ವೀರಶೈವರು ಕನ್ನಡ ಆಧುನಿಕ ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿರುತ್ತಾರೆ. ವೀರಶೈವ ಶಾಸ್ತ್ರ ಗ್ರಂಥಗಳನ್ನು ಕನ್ನಡದಲ್ಲಿ ಜನಪ್ರಿಯವಾಗುವಂತೆ ಬರೆದವರಲ್ಲಿ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳೂ, ಆಸ್ಥಾನ ವಿದ್ವಾನ್ ಸಿರಸಿ ಗುರುಶಾಂತ ಶಾಸ್ತ್ರಿಗಳೂ, ಉಮಚಗಿ ಶ್ರೀ ಶಂಕರ ಶಾಸ್ತ್ರಿಗಳೂ ಅಗ್ರಮಾನ್ಯರಾಗಿರುತ್ತಾರೆ. ಪಗಡದಿನ್ನಿ ಶ್ರೀ ಬಸವರಾಜ ಶಾಸ್ತ್ರಿಗಳೂ, ಪಂಡಿತ ಶ್ರೀ ನಾಗಭೂಷಣ ಶಾಸ್ತ್ರಿಗಳೂ ಡಾ॥ ಜಿ. ಮರುಳಸಿದ್ದಯ್ಯನವರೂ, ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯರೂ, ಆಸ್ಥಾನವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರೂ ಸಂಸ್ಕೃತದಲ್ಲಿರುವ ವೀರಶೈವ ಗ್ರಂಥಗಳನ್ನು ಸಂಶೋಧಿಸಿ, ವಿದ್ವತ್ಪೂರ್ಣವಾದ ವ್ಯಾಖ್ಯಾನಗಳನ್ನು ಬರೆದು ಕನ್ನಡ ಭಾಷೆಗೆ ಮಹೋಪಕಾರ ಮಾಡಿದ್ದಾರೆ. ವಿದ್ವಾನ್ ತಾವರೆಕೆರೆ ಶ್ರೀ ವಿರೋಚನ ಶರ್ಮರೂ, ವಿದ್ವಾನ್ ಕೆ. ಎಂ. ರಾಜಶೇಖರ ಶಾಸ್ತ್ರಿಗಳೂ, ವಿದ್ವಾನ್ ಶ್ರೀ ಬಿ. ರಾಜಶೇಖರಯ್ಯನವರೂ, ವಿದ್ವಾನ್ ಹೊಸಮತದ ಗುರುಶಾಂತಸ್ವಾಮಿಗಳೂ ಕನ್ನಡ ಸಾಹಿತ್ಯವನ್ನು ನಾನಾ ಮುಖವಾಗಿ ಬೆಳೆಯಿಸುತ್ತಿದ್ದಾರೆ. ಆಸ್ಥಾನವಿದ್ವಾನ್ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಅನೇಕ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ, ಪರಿಷ್ಕರಿಸಿ; ವಿಮರ್ಶಿಸಿ ಪ್ರಕಟಿಸಿರುತ್ತಾರೆ. "ಶರಣ ಸಾಹಿತ್ಯ" ಮಾಸ ಪತ್ರಿಕೆಯ ಸಂಪಾದಕರಾಗಿ ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಎಲ್ಲ ಮತಧರ್ಮ ಸಂಬಂಧವಾದ ವಿಚಾರಗಳನ್ನೂ ವಿಮರ್ಶಿಸಿ, ವಿವೇಚಿಸಿ ಲೇಖನಗಳನ್ನು ಬರೆದಿರುತ್ತಾರೆ. "ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ" ಎಂಬ ಅವರ ಗ್ರಂಥಗಳು ವಿಚಾರ ಪೂರ್ಣವಾಗಿವೆ. ಇವರು ಉತ್ತಮ

ಶ್ರೀ ಓ. ಎನ್. ಲಿಂಗಣ್ಣಯ್ಯನವರು ಕನ್ನಡನಾಡಿನ ಖ್ಯಾತ ಸಾಹಿತಿಗಳು. ಸರ್ಕಾರದ ಉನ್ನತ ನೌಕರಿಯಲ್ಲಿದ್ದರೂ, ಸರ್ಕಾರದ ಸೇವೆಯೊಡನೆಯೇ ವಿಪುಲ ಸಾಹಿತ್ಯ ಸೇವೆ ಮಾಡಿರುವ ನಿರಂತರ ಕಾರ್ಯಶೀಲರು. ಸಾಹಿತ್ಯದ ಎಲ್ಲ ಪ್ರಾಕಾರಗಳಲ್ಲಿಯೂ ಕೃತಿಗಳನ್ನು ರಚಿಸಿರುವ ಶ್ರೀಯುತರು ಉದ್ದಾಮ ಭಾಷಣಗಾರರು. 'ಓದಿನ ಅಯ್ಯನವರ ಮನೆತನ' ಎಂಬ ಖ್ಯಾತ ಪರಂಪರೆಗೆ ಸೇರಿದ ಇವರು ಸಂಸ್ಕೃತ, ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಪ್ರೌಢಿಮೆ ಗಳಿಸಿದ್ದಾರೆ. ಅಸಿಸ್ಟೆಂಟ್ ಕಮೀಷನರಾಗಿ ನಿವೃತ್ತರಾಗಿರುವ ಶ್ರೀ ಲಿಂಗಣ್ಣಯ್ಯನವರು ವಿಶ್ರಾಂತ ಜೀವನವನ್ನು ಸಾಹಿತ್ಯಕೃಷಿಗೆ ಮೀಸಲು ಮಾಡಿದ್ದಾರೆ.

ಭಾಷಣಕಾರರು ಮತ್ತು ಕೀರ್ತನಕಾರರು. ಸೀತಕಲ್ಲು ಶ್ರೀ ಎಸ್. ಜಿ. ರೇಣುಕಾರಾಧ್ಯರೂ, ಶ್ರೀ ಶಿವಲಿಂಗಯ್ಯ, ಹಿರೇಮಠ ಅವರೂ, ಶ್ರೀ ಮಹದೇವ ಶಾಸ್ತ್ರಿಗಳೂ ತಮ್ಮ ಕೀರ್ತನೆಗಳಿಂದ ವೀರಶೈವ ಧರ್ಮ, ಸಂಸ್ಕೃತಿಗಳನ್ನು ಪ್ರಚಾರ ಮಾಡುತ್ತಾ ಆಧುನಿಕ ಕನ್ನಡ ಸಾಹಿತ್ಯದ ಕೀರ್ತಿಯನ್ನು ನಾಡಿನಲ್ಲಿ ಬೆಳಗುತ್ತಿದ್ದಾರೆ. ಶ್ರೀ ಬಿ. ಪುಟ್ಟಸ್ವಾಮಯ್ಯನವರು ಪೌರಾಣಿಕ ಮತ್ತು ಐತಿಹಾಸಿಕ ಕಥಾವಸ್ತುಗಳನ್ನು ಆಧರಿಸಿ ರಂಗಭೂಮಿಯ ಮೇಲೆ ಪ್ರದರ್ಶನಯೋಗ್ಯವಾದ ಅನೇಕ ಉತ್ತಮ ನಾಟಕಗಳನ್ನು ರಚಿಸಿ ಆಧುನಿಕ ಕನ್ನಡದ ನಾಟಕ ಸಾಹಿತ್ಯವನ್ನು ಮತ್ತು ರಂಗಭೂಮಿಯ ಗಾಂಭೀರ್ಯವನ್ನು ಅಭಿವೃದ್ಧಿಪಡಿಸಿರುತ್ತಾರೆ. ಇವರು ಬರೆದಿರುವ 'ಷಹಜಾಹಾನ್, ಗೌತಮಬುದ್ಧ, ಕುರುಕ್ಷೇತ್ರ, ದಶಾವತಾರ' ಮೊದಲಾದ ನಾಟಕಗಳು ರಂಗಭೂಮಿಯ ಕೀರ್ತಿಕಿರಣಗಳಂತಿವೆ. ಇವರ ಶೈಲಿ ತೇಜಃಪುಂಜವಾಗಿದೆ. ಇವರು ಉತ್ತಮ ಗದ್ಯ ಲೇಖಕರು. ಜೀರಗೆ ಶ್ರೀ ಕಟ್ಟಿ ಬಸವಪ್ಪನವರು "ಶ್ರೀ ಕಟ್ಟಿಯ ಬಸವೇಶ್ವರ" ಎಂಬ ಅಂಕಿತದಿಂದ ಅನೇಕ ವಚನಗಳನ್ನು ರಚಿಸಿ ವೀರಶೈವ ವಚನ ವಾಙ್ಮಯವಲ್ಲರಿಯನ್ನು ಮತ್ತೆ ಪಲ್ಲವಿಸುವಂತೇ ಮಾಡಿರುತ್ತಾರೆ. ಆಧುನಿಕ ವಚನ ವಾಙ್ಮಯಕ್ಕೆ ಇವರು ಮೊದಲನೆಯವರಾಗಿರುತ್ತಾರೆ. ಶ್ರೀ ಟಿ. ಎನ್. ಮಲ್ಲಪ್ಪನವರು ಪ್ರಸಿದ್ಧ ವಿಚಾರಶೀಲರು ಮತ್ತು ವಿಮರ್ಶಕರು. ವೀರಶೈವ ಧರ್ಮವನ್ನು ಐತಿಹಾಸಿಕ ದೃಷ್ಟಿಯಿಂದ ವಿಮರ್ಶಿಸಿ ಇವರು "ವೀರಶೈವದ ಉಗಮ ಮತ್ತು ಪ್ರಗತಿ" ಎಂಬ ಉದ್ದಾಮ ಗ್ರಂಥವನ್ನು ರಚಿಸಿರುತ್ತಾರೆ. ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರೆಂದರೆ ಕ್ರಿಯಾ ಶಕ್ತಿ ಪಂಡಿತರೆಂದು ಶ್ರೀ ಮಲ್ಲಪ್ಪನವರು ವಿಮರ್ಶಿಸಿ ಪಾಂಡಿತ್ಯಪೂರ್ಣ ಪ್ರಬಂಧವನ್ನು ಬರೆದು ಆಧುನಿಕ ಕನ್ನಡ ಸಾಹಿತ್ಯದ ಅಂತರ್ದೃಷ್ಟಿಯನ್ನು ಬೆಳಗಿಸಿರುತ್ತಾರೆ. ಶ್ರೀ ಜೆ. ರುದ್ರಪ್ಪನವರು ಕಾಶ್ಮೀರ ಶೈವಧರ್ಮವನ್ನು ಆಳವಾಗಿ ಅಭ್ಯಾಸ ಮಾಡಿ, ಐತಿಹಾಸಿಕ ದೃಷ್ಟಿಯಿಂದ ವಿಮರ್ಶಿಸಿ ವಿದ್ವತ್ಪೂರ್ಣವಾದ ಗ್ರಂಥಗಳನ್ನು ರಚಿಸಿ ಕನ್ನಡ ಸಾಹಿತ್ಯದ ಸಿರಿಯನ್ನು ಹೆಚ್ಚಿಸಿದ್ದಾರೆ. ಶ್ರೀ ರುದ್ರಪ್ಪನವರ ಅಗಾಧವಾದ ಪಾಂಡಿತ್ಯವನ್ನು ಮೆಚ್ಚಿ, ಪಂಜಾಬ್ ವಿಶ್ವವಿದ್ಯಾನಿಲಯದವರು ಅವರಿಗೆ ಗೌರವಪದವೀ ಪ್ರಶಸ್ತಿಯನ್ನಿತ್ತು ಮನ್ನಣೆ ಮಾಡಿರುತ್ತಾರೆ. ಡಾ॥ ಆರ್. ಸಿ. ಹಿರೇಮಠ್ ಅವರು ಅನೇಕ ಪ್ರಾಚೀನ ವೀರಶೈವ ಗ್ರಂಥಗಳನ್ನು ಸಂಪಾದಿಸಿ, ಸಂಶೋಧಿಸಿ, ಪರಿಷ್ಕರಿಸಿ, ವಿಮರ್ಶಿಸಿ, ತುಲನಾತ್ಮಕ ದೃಷ್ಟಿಯಿಂದ ವಿವೇಚಿಸಿ, ಪಾಂಡಿತ್ಯಪೂರ್ಣಟೀಕೆಗಳನ್ನು ಬರೆದು, ಧಾರವಾಡ ಕರ್ಣಾಟಕ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಕಟಿಸಿ, ಆಧುನಿಕ ಕನ್ನಡ ಸಾಹಿತ್ಯ ಭಂಡಾರವನ್ನು ಸಮೃದ್ಧಗೊಳಿಸಿರುತ್ತಾರೆ. ಇವರು ಉದ್ದಾಮ ಪಂಡಿತರು. ಈ ವಿಶ್ವವಿದ್ಯಾನಿಲಯದ ಆಶ್ರಯ ಬಲದಿಂದ ಶ್ರೀ ವೃಷಭೇಂದ್ರಸ್ವಾಮಿ ಶ್ರೀ ಬಿ. ಸಿ. ಜವಳಿ, ಶ್ರೀ ಮಲ್ಲೇದೇವರು, ಶ್ರೀ ಜಿ. ಎಂ. ಉಮಾಪತಿಶಾಸ್ತ್ರಿ, ಶ್ರೀ ಚನ್ನವೀರ ಕಣವಿ, ಶ್ರೀ ಎಸ್. ಎಸ್. ಮಾಳವಾಡ, ಡಾ॥ ಸುಂಕಾಪುರ ಮೊದಲಾದ ಅನೇಕ ಘನವಿದ್ವಾಂಸರು ಸರ್ವೋತ್ತಮ ರೀತಿಯಲ್ಲಿ ಅಧ್ಯಯನ ಮಾಡಿ ವಿಚಾರಪರಿಪ್ಲುತವಾದ ಗ್ರಂಥಗಳನ್ನು ರಚಿಸಿ ಆಧುನಿಕ ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಹುಬ್ಬಳ್ಳಿ ಮೂರು ಸಾವಿರ ಮಠದ ಶ್ರೀ ಗಂಗಾಧರ ರಾಜ ಯೋಗೀಂದ್ರ ಮಹಾಸ್ವಾಮಿಗಳೂ ಮೈಸೂರಲ್ಲಿ ಸುತ್ತೂರು ವೀರಸಿಂಹಾಸನದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳೂ ವಿದ್ವಾಂಸರಿಗೆ ಆಶ್ರಯವಿತ್ತು ಅನೇಕ ಪ್ರಾಚೀನ ಗ್ರಂಥಗಳನ್ನು ಬೆಳಕಿಗೆ ತರುತ್ತಿದ್ದಾರೆ. ವಿದ್ಯಾವಿಭೂಷಣ ಶ್ರೀ ಓ. ಎನ್. ಲಿಂಗಣ್ಣಯ್ಯನವರು ಮೈಸೂರು ರಾಜಮನೆತನದ "ಮುಮ್ಮಡಿ ಶ್ರೀ ಕೃಷ್ಣ ರಾಜೇಂದ್ರ ಒಡೆಯರು" ಮತ್ತು "ಮಹಾರಾಣಿ ಲಕ್ಷ್ಮಮ್ಮಣ್ಣಿಯವರು" ಎಂಬ ರಾಜ ಜೀವನ ಚರಿತ್ರೆಗಳನ್ನು ಬರೆದು ಮೈಸೂರು ಅರಮನೆಯ ಆಶ್ರಯದಿಂದ ಪ್ರಕಟಿಸಿರುತ್ತಾರೆ. ಇವರು ಅರಮನೆಯಿಂದ ರಾಜಪಾರಿತೋಷಿಕವನ್ನು ಪಡೆದಿರುತ್ತಾರೆ. "ಜಂಗಮವಿಜಯ" ಮತ್ತು "ತಪಃಫಲ" ಎಂಬ ಎರಡು ನಾಟಕಗಳನ್ನು ಸರಳ ರಗಳೆಯಲ್ಲಿ ಬರೆದಿರುತ್ತಾರೆ. ಇವರು ಬರೆದಿರುವ "ಪೆದ್ದಭಟ್ಟಪುರಾಣ" "ಶೂನ್ಯಸಿಂಹಾಸನ" ಮತ್ತು "ದಕ್ಷಿಣ ಮೈಲಾರ ಲಿಂಗೇಶ್ವರನ ವಚನಗಳು" "ಶ್ರೀ ವಿದ್ಯಾರಣ್ಯರು" ಎಂಬ ಗದ್ಯ ಕೃತಿಗಳು ವಿಚಾರಪೂರ್ಣವಾಗಿವೆ. ಇವರು ಉತ್ತಮ ಭಾಷಣಕಾರರರು ಮತ್ತು ಗದ್ಯ ಲೇಖಕರು.

ಆಸ್ಥಾನವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು ಸಂಸ್ಕೃತ ವಿದ್ವಾಂಸರು. ಇವರು ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. "ಅಭಿನವಕಾಳಿದಾಸ ಬಸವಪ್ಪ ಶಾಸ್ತ್ರಿ" ಮತ್ತು ಗುಬ್ಬಿ ತೋಟದಪ್ಪನವರು" ಇವರ ಜೀವನ ಚರಿತ್ರೆಗಳನ್ನು ಬರೆದಿರುತ್ತಾರೆ. ಸಂಸ್ಕೃತ ಕವಿಗಳ ಜೀವನ ಪರಿಚಯ ಕೃತಿಗಳನ್ನೂ, "ಶಿವನಸೋಲು" ಎಂಬ ಸರಳ ರಗಳೆಯ ಕಾವ್ಯಕೃತಿಯನ್ನೂ ರಚಿಸಿರುತ್ತಾರೆ. "ಪೂರ್ವ ಪ್ರಯೋಗ ರತ್ನ" ಮೊದಲಾದ ವೀರಶೈವ ಧಾರ್ಮಿಕ ಗ್ರಂಥಗಳು ವೈದಿಕ ವಿದ್ವಾಂಸರಿಗೆ ಮಾರ್ಗದರ್ಶಕ ಗ್ರಂಥಗಳಾಗಿವೆ. ಇವರು ಮೈಸೂರು ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಶಕ್ತಿವಿಶಿಷ್ಟಾದ್ವೈತ ಪ್ರಾಧ್ಯಾಪಕರಾಗಿರುತ್ತಾರೆ. ಇವರು ಅನೇಕ ಸಂಶೋಧನಾತ್ಮಕ ಮತ್ತು ವಿದ್ವತ್ಪೂರ್ಣ ಕೃತಿಗಳನ್ನೂ ಲೇಖನಗಳನ್ನೂ ಬರೆದಿರುತ್ತಾರೆ. ಶ್ರೀ ಎಸ್. ಎಸ್. ಭೂಸನೂರುಮಠ ಅವರು ಮಹಾ ಪಂಡಿತರು. ಅವರು "ಶೂನ್ಯ ಸಂಪಾದನೆಯನ್ನು ಪರಿಷ್ಕರಿಸಿ, ಪ್ರಕಟಿಸಿ ಕನ್ನಡ ಸಾರಸ್ವತ ಸಂಪತ್ತನ್ನು ಹೆಚ್ಚಿಸಿರುತ್ತಾರೆ. ಮಾದನಹಳ್ಳಿ ಮಠದ ಶ್ರೀ ಗುರುದೇವಾರಾಧ್ಯರು "ಶ್ರೀ ಕೃಷ್ಣರಾಜ ವಿಲಾಸ" ಎಂಬ ಚಂಪೂಕಾವ್ಯವನ್ನು ರಚಿಸಿ ಮೈಸೂರು ಅರಮನೆಯಿಂದ ಸಂಭಾವಿತರಾಗಿದ್ದಾರೆ. ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಅವರು 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ಎಂಬ

ಬೃಹದ್ಗ್ರಂಥವನ್ನು ಬರೆದು ರಾಷ್ಟ್ರಗೌರವವನ್ನು ಪಡೆದಿರುತ್ತಾರೆ. 'ಶರಣರ ಅನುಭವ ಸಾಹಿತ್ಯ' 'ವಚನಗಳಲ್ಲಿ ವೀರಶೈವ ಧರ್ಮ' ಮೊದಲಾದ ಮಹತ್ವಪೂರ್ಣ ಗ್ರಂಥಗಳನ್ನು ಇವರು ಪ್ರಕಟಿಸಿರುತ್ತಾರೆ. ಡಾ|| ಪ್ರಭುಶಂಕರ್ ಅವರ ಕನ್ನಡದಲ್ಲಿ ಭಾವಗೀತೆ' ಗ್ರಂಥ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿದೆ. ಡಾ|| ಎಲ್. ಬಸವರಾಜು ಅವರು "ಅಲ್ಲಮನ ವಚನಗಳು". 'ದೇವರ ದಾಸಿಮಯ್ಯನ ವಚನಗಳು' ಮೊದಲಾದ ಅನೇಕ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ, ವಚನವಾಙ್ಮಯಕ್ಕೆ ನವಚೇತನವನ್ನುಂಟುಮಾಡಿದ್ದಾರೆ. ಈ ಮೂವರೂ ಶ್ರೇಷ್ಠ ವಿದ್ವಾಂಸರು; ಸಮರ್ಥ ವಿಮರ್ಶಕರು, ಸಂಶೋಧಕರು ಮತ್ತು ಆಧುನಿಕ ವೀರಶೈವ ಸಾಹಿತ್ಯದಲ್ಲಿ ಅಲ್ಲಮ, ಬಸವಣ್ಣ ಮತ್ತು ಚನ್ನಬಸವಣ್ಣನವರಂತಿದ್ದಾರೆ. ಶ್ರೀ ಎಚ್. ಎಂ. ಚನ್ನಯ್ಯ ಅವರೂ ಶ್ರೀ ಬಿ. ಎಸ್. ಚಂದ್ರಯ್ಯ ಅವರೂ ತರುಣ ಲೇಖಕರೂ ಗ್ರಂಥಕರ್ತರೂ ಆಗಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಡಾ|| ಜಿ. ಶಿವರುದ್ರಪ್ಪನವರು ಪ್ರಬುದ್ಧ ವಿದ್ವಾಂಸರೂ, ಸಾಹಿತಿಗಳೂ ಉತ್ತಮ ಗ್ರಂಥಕರ್ತರೂ, ಕವಿಹೃದಯರೂ ಆಗಿರುತ್ತಾರೆ. ಅವರ ವಿಚಾರಪೂರ್ಣವಾದ ವಿಮರ್ಶೆಯಿಂದ ಕನ್ನಡ ಸಾಹಿತ್ಯಕ್ಕೆ ನವಶಕ್ತಿ ಬರುತ್ತಿದೆ. ಡಾ|| ಚಿದಾನಂದ ಮೂರ್ತಿಯವರು ಶಾಸನಸಾಹಿತ್ಯ ವಿಮರ್ಶಕರೂ. ಉತ್ತಮ ಲೇಖಕರೂ ಗ್ರಂಥಕರ್ತರೂ ಆಗಿರುತ್ತಾರೆ. ಶ್ರೀ ಸಿ. ಮಹದೇವಪ್ಪನವರು ಗ್ರಂಥಸಂಪಾದಕರೂ, ವಿಮರ್ಶಕರೂ, ಲೇಖಕರೂ ಆಗಿರುತ್ತಾರೆ. ಈ ಮೂವರೂ ವಿಶ್ವವಿದ್ಯಾನಿಲಯದಲ್ಲಿ ವೀರಶೈವ ಸಾಹಿತ್ಯದಲ್ಲಿ "ಪಂಡಿತತ್ರಯ"ರಾಗಿರುತ್ತಾರೆ. ಶ್ರೀಯುತರಾದ ಎಸ್. ಮರುಳಯ್ಯನವರೂ, ಸಿ. ಸುಂದರೇಶನ್ ಅವರೂ ಟಿ. ಬಿ. ಬಸವರಾಜಯ್ಯನವರೂ, ಮಾ. ನಾ. ನಂಜಪ್ಪನವರೂ ಪಂಡಿತ ಚನ್ನಪ್ಪ ಎರೆಸೀಮೆಯವರೂ, ಗೊ. ರು. ಚನ್ನಬಸವಪ್ಪನವರೂ ಪಂಡಿತ ಎಂ. ಮಲ್ಲಪ್ಪನವರೂ ಕನ್ನಡ ಭಾಷೆಗೆ ಅಮೋಘವಾದ ಸೇವೆ ಸಲ್ಲಿಸುತ್ತಿದ್ದಾರೆ. ನಿಡುಮಾಮಿಡಿ ಗೂಳೂರು ಶ್ರೀ ಶೈಲಪೀಠದ ಪೂಜ್ಯ "ಜ.ಚ.ನಿ." ಅವರು ಇದುವರೆಗೆ 108 ಆಧ್ಯಾತ್ಮಿಕ ಗ್ರಂಥಗಳನ್ನು ರಚಿಸಿ, ಕನ್ನಡ ಸಾಹಿತ್ಯವನ್ನು ಆಶೀರ್ವದಿಸಿರುತ್ತಾರೆ. ಇವರು ರಚಿಸಿರುವ "ಜೀವನಸಿದ್ಧಾಂತ" ಬೃಹದ್ಗ್ರಂಥದ ಆರು ಭಾಗಗಳು ಕನ್ನಡದಲ್ಲಿ ವೀರಶೈವ ಧರ್ಮದ ಅಸದೃಶ ಗ್ರಂಥರತ್ನಗಳಾಗಿವೆ. ಈ ಧರ್ಮ ಸಾಹಿತ್ಯ "ಷಣ್ಮುಖ ಸ್ವಾಮಿ"ಯಾಗಿ ರೂಪುಗೊಂಡಿದೆ. ಶ್ರೀಯುತರಾದ ಎಸ್. ಬಸವಾರಾಧ್ಯರು, ಕೆ. ಪಿ. ಶಿವಲಿಂಗಯ್ಯ, ಎಚ್. ಗಂಗಾಧರನ್, ಎಸ್. ನಂಜುಂಡಯ್ಯ, ಅಂಕಪ್ಪ, ಪಿ. ಬಸವಣ್ಣ. ಎನ್. ಎಸ್. ವೀರಪ್ಪ, ಗಂಗಪ್ಪ ವಾಲಿ, "ಸಿದ್ಧವೀರತನಯ", ಹೊಳಲು ಚಂದ್ರಶೇಖರಶಾಸ್ತ್ರಿ, ಎನ್.ಎಂ.ಕೆ. ಸೋಗಿ. ಮೊದಲಾದ ಅಸಂಖ್ಯಾತರು ಹಿರಿಯರೂ ಕಿರಿಯರೂ – ಕನ್ನಡದೇವಿಯ ಆರಾಧನೆಯಲ್ಲಿ ವಿವಿಧ ಸುಂದರ ಪುಷ್ಪ ಸದೃಶರಾಗಿದ್ದಾರೆ. ಶ್ರೀ ದೇವರಾಜ ಸರ್ಕಾರ್ ಅವರು ವಿಜ್ಞಾನ ಸಾಹಿತ್ಯವನ್ನು ಬರೆಯುತ್ತಿದ್ದಾರೆ. ಶ್ರೀಮತಿಯರಾದ ಜಯದೇವಿ ತಾಯಿ ಲಿಗಾಡೆ, ಶಾಂತಾದೇವಿ ಮಾಳವಾಡ, ಶ್ರೀಮತಿ ಚನ್ನವೀರ ಕಣವಿ, ಸರಸ್ವತೀದೇವಿ ಗೌಡರ, ಗು. ಶಂಕರಮ್ಮ ಮೊದಲಾದ ಅನೇಕ ಮಾನ್ಯ ಮಹಿಳೆಯರು ಗ್ರಂಥದ ರಚನೆ ಮಾಡುತ್ತಿದ್ದಾರೆ. ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರ ಸಿದ್ಧರಾಮ ಪುರಾಣ ಆಧುನಿಕ ಸಾಹಿತ್ಯದ ಅನರ್ಘ್ಯ ಕೊಡುಗೆಯಾಗಿದೆ. ಈ ಚಿಕ್ಕ ಲೇಖನದಲ್ಲಿ ಅಲ್ಪಕಾಲಾವಕಾಶದಲ್ಲಿ ಎಲ್ಲ ಗ್ರಂಥಕರ್ತರನ್ನೂ ನೆನೆಯಲು ಸಾಧ್ಯವಿಲ್ಲ. ಅದು ನನ್ನ ಜ್ಞಾನಾವರಣ. ಎಲ್ಲ ಲೇಖಕರೂ ಮಾನ್ಯರು.

ಇಷ್ಟಲ್ಲದೆ, 'ಶರಣಸಾಹಿತ್ಯ' 'ಪ್ರಸಾದ' 'ಸಿದ್ಧಗಂಗಾ' 'ಕುಮಾರ "ದರ್ಶನ" ' ಪರಿಪೂರ್ಣ' ' ಸದ್ಧರ್ಮಪ್ರಭಾ' 'ಪಂಚಾಚಾರ್ಯ ಪ್ರಭಾ' 'ನವಸಂದೇಶ' 'ಕಲ್ಯಾಣ ಕಿರಣ' 'ಸಾವಧಾನ' 'ಅಮರವಾಣಿ' 'ಮಲೆನಾಡು' 'ಶಿವಾನುಭವ' ಮೊದಲಾದ ಅನೇಕ ವಾರಪತ್ರಿಕೆಗಳೂ, ಮಾಸ ಪತ್ರಿಕೆಗಳೂ, ತ್ರೈಮಾಸಿಕ ಪತ್ರಿಕೆಗಳೂ ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಸಮಾಜದಲ್ಲಿ ಪ್ರಚಾರ ಮಾಡುತ್ತ ಸಂಘಟನೆಯನ್ನು ಸಾಧಿಸುತ್ತಿವೆ. ಇವು ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಸಾಧಾರಣ ಕೊಡುಗೆಯನ್ನು ಧಾರೆಯೆರೆಯುತ್ತಿವೆ.

ಶಿವಂಭೂಯಾತ್

ನುಡಿ ಮುತ್ತುಗಳು

ನೀತಿಯು ಆಧ್ಯಾತ್ಮ ಜೀವನದ ತಳಹದಿ.

ಮೌನದ ಶಕ್ತಿಯ ಇದಿರಿನಲ್ಲಿ ಮಾತುಗಳು ಮೂಕಭಾವ ತಾಳುವುವು.

ಎಲ್ಲಾ ಕಾಲಗಳಲ್ಲಿಯೂ ಸತ್ಕರ್ಮಗಳನ್ನೇ ಆಚರಿಸಿರಿ.

Our Respectful
Welcome to
Jagadguru Pancha
Peethadhipatis

Mysore Industrial Supplies

28, Silver Jubilee Park Road

Post Box No. 6559

BANGALORE-2

— ವಚನ ಸಾಹಿತ್ಯದ ಮಹತ್ವ —


ವಚನಶಾಸ್ತ್ರಾಚಾರ್ಯ
ಶ್ರೀ ಜೀರಗೆ ಕಟ್ಟಿ ಬಸವಪ್ಪನವರು

ವಚನಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಗಳಿಸಿದೆ. ಅದು ಕಾದಂಬರಿಯಲ್ಲ, ಕಥೆಯಲ್ಲ, ಇತಿಹಾಸವಲ್ಲ, ಪುರಾಣವಲ್ಲ, ಕವನವಲ್ಲ, ಕೀರ್ತನೆಯಲ್ಲ. ಅದು ಮಾನವನ ಇಡಿಯ ಜೀವನಕ್ಕೆ ಸಂಬಂಧಪಟ್ಟ ಒಂದು ಉತ್ಕೃಷ್ಟ ಕೈಪಿಡಿ. ವ್ಯಕ್ತಿಯ ವಿವಿಧ ರೂಪರೇಷೆಗಳನ್ನೂ, ಗುಣಧರ್ಮಗಳನ್ನೂ, ಕ್ರಿಯಾಲೋಚನೆಗಳನ್ನೂ ಪ್ರತಿಬಿಂಬಿಸಿ ತೋರಿಸಿ ವ್ಯಕ್ತಿಯ ಉತ್ತಮ ಬಾಳ್ವೆಗೆ ಮಾರ್ಗದರ್ಶನ ಮಾಡುವ ಒಂದು ದಿವ್ಯ ಪರುಷಮಣಿ. ಶರಣರು ಮಾನವನ ಮೇಲಣ ಅಪಾರ ಕರುಣೆಯಿಂದ ಈಶ್ವರ - ಜೀವ - ಜಗತ್ತುಗಳ ಪರಸ್ಪರವಾದ ಸಂಬಂಧವನ್ನು ವಿಮರ್ಶೆಮಾಡಿ ಮಾನವನ ಸುಖಮಯವಾದ, ಸಂಪದ್ಭರಿತವಾದ, ಸೌಭಾಗ್ಯ ಮಿಳಿತವಾದ - ಜೀವನದ ದಾರಿಯನ್ನು ನಿರೂಪಿಸಲು ಅವಶ್ಯವಾದ ತನು - ಮನ - ಧನಗಳ ಸಂಪಾದನೆಯ ಮತ್ತು ವಿನಿಯೋಗದ ಒಂದು ಮಹತ್ವದ ಶಾಸ್ತ್ರವನ್ನು ರಚಿಸಿ ಜಗತ್ತಿಗೆ ನೀಡಿರುತ್ತಾರೆ. ಈ ಮಹತ್ವದ ಶಾಸ್ತ್ರವೇ ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾಗಿರುವ ಪೂರ್ಣ ವಸ್ತು.

ವಚನಸಾಹಿತ್ಯವು ಹಲವು ವಿಶಿಷ್ಟ ಲಕ್ಷಣಗಳಿಂದ ಕೂಡಿರುತ್ತದೆ. ಮೊದಲನೆಯದಾಗಿ - ಶ್ರೀಸಾಮಾನ್ಯನಿಗೂ ತಿಳಿಯುವಂಥ ಮಾತನಾಡುವ ಕನ್ನಡ ಭಾಷೆಯಲ್ಲಿ ವಚನಸಾಹಿತ್ಯ ನಿರ್ಮಾಣವಾಗಿದೆ. ಶರಣರು ಕನ್ನಡ ಭಾಷೆಯನ್ನು ಪವಿತ್ರವಾದ ದೇವಭಾಷೆಯಾಗಿ ಪರಿವರ್ತಿಸಿದ್ದಾರೆ. ಆತ್ಮ ಪರಮಾತ್ಮರುಗಳ ಸಂಬಂಧವನ್ನು ಅತ್ಯಂತ ಸ್ಪಷ್ಟವಾದ, ನಿರ್ದಿಷ್ಟವಾದ, ತರ್ಕಬದ್ಧವಾದ ಮತ್ತು ವಿಜ್ಞಾನಸಮ್ಮತವಾದ ವಿಧಿವಿಧಾನಗಳಲ್ಲಿ ಯಾವ ಸಂದೇಹಗಳಿಗೂ ಎಡೆಗೊಡದಂತೆ ನಿರೂಪಿಸಿದ್ದಾರೆ. ಧರ್ಮ, ಅರ್ಥ, ಕಾಮ, ಮೋಕ್ಷಗಳ ಅರ್ಥ, ಅನ್ವಯ ಹಾಗೂ ಅನುಷ್ಠಾನಗಳನ್ನು ಅತ್ಯಂತ ಸುಂದರವಾದ ರೀತಿಯಲ್ಲಿ ಪಂಡಿತ ಪಾಮರರಿಗೂ, ಬಾಲವೃದ್ಧರಿಗೂ, ಸ್ತ್ರೀಪುರುಷರಿಗೂ ಹಿಡಿಸುವಂತೆ ವಿಮರ್ಶಿಸಿದ್ದಾರೆ. ಎರಡನೆಯದಾಗಿ, ಶರಣರು ವಚನ ಸಾಹಿತ್ಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಅನುಕೂಲಿಸುವಂತೆ ಗದ್ಯ ಶೈಲಿಯಲ್ಲಿ ರಚಿಸಿದ್ದಾರೆ. ಗದ್ಯವಾಕ್ಯಗಳು ಪ್ರಾಥಮಿಕ ಶಾಲೆಯ ಪಾಠಗಳಂತೆ ನಿರರ್ಗಳವಾಗಿ ಹರಿಯುತ್ತವೆ. ಮೂರ

ಶ್ರೀಮಾನ್ ಜೀರಗೆ ಕಟ್ಟಿ ಬಸವಪ್ಪನವರ ಹೆಸರನ್ನು ಕೇಳದ ಕನ್ನಡಿಗರೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಬಹುಮುಖ ಪ್ರತಿಭೆಯ ಶ್ರೀಯುತರು ವೀರಶೈವ ಸಾಹಿತ್ಯ, ರಾಜಕಾರಣ, ಪತ್ರಿಕೋದ್ಯಮ, ಸಮಾಜಸೇವೆ ಮೊದಲಾದ ನಾನಾ ರಂಗಗಳಲ್ಲಿ ನಿಷ್ಕಾಮ ಸೇವೆ ಸಲ್ಲಿಸಿ ಜನಪ್ರಿಯ ವ್ಯಕ್ತಿಗಳಾಗಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪರಿಣತರಾಗಿರುವ ಶ್ರೀ ಬಸವಪ್ಪನವರು ಉದ್ದಾಮ ವಾಗ್ಮಿಗಳು. ಸ್ನೇಹಶೀಲರೂ, ಸದಾ ಹಸನ್ಮುಖಿಗಳೂ, ಸಾತ್ವಿಕರೂ ಆದ ಶ್ರೀಯುತರು ಈಗ "ದರ್ಶನ" ಎಂಬ ಪ್ರಗತಿಪರ ಪತ್ರಿಕೆಯ ಸಂಪಾದಕರಾಗಿ ಸಮಾಜದ ಉತ್ಕರ್ಷಕ್ಕೆ ಶ್ರಮಿಸುತ್ತಿದ್ದಾರೆ. ಶ್ರೀಯುತರಿಂದ ನಾಡು, ನುಡಿ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದಾಗಿದೆ.

ನೆಯದಾಗಿ ಶರಣರು ವಚನಸಾಹಿತ್ಯದಲ್ಲಿ ಬೇಸರವಾಗದಂತೆ ಮತ್ತು ನೆನಪಿನಲ್ಲಿಟ್ಟುಕೊಳ್ಳಲು ಅನುಕೂಲವಾಗುವಂತೆ ಪದ್ಯದ ಸೌಂದರ್ಯವನ್ನು ಗದ್ಯದಲ್ಲಿ ಅಳವಡಿಸಿ ಒಂದು ಸೊಬಗಿನ ಮೋಹಕ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ನಾಲ್ಕನೆಯದಾಗಿ ವಚನಸಾಹಿತ್ಯದ ಮಾತುಗಳು ಪುಟಗಟ್ಟಲೆ ಓಡುವ ದೀರ್ಘ ಪ್ರಬಂಧಗಳಲ್ಲ. ಅವುಗಳನ್ನು ಶರಣರು ಸೂತ್ರರೂಪದಲ್ಲಿ ರಚಿಸಿ ಪ್ರತಿಯೊಂದು ವಚನವೂ ಚಿಕ್ಕ ಚಿಕ್ಕ ವಾಕ್ಯಗಳಿಂದ ಕೂಡಿದ್ದು, ಪರಿಪೂರ್ಣಅರ್ಥವನ್ನು ನೀಡಿ, ಒಂದೊಂದು ಮಹತ್ವದ ಸಿದ್ಧಾಂತವನ್ನು ಪ್ರಕಟಿಸುವಂತೆ ಮಾಡಿದ್ದಾರೆ. ಐದನೆಯದಾಗಿ ವಚನಸಾಹಿತ್ಯ ಕೇವಲ ಸುಭಾಷಿತಗಳ ಸಂಕಲನವಾಗಿರದೆ ಒಂದು ಪರಿಪೂರ್ಣ ಆಧಾರಭೂತ ಅನುಭವವೇದ್ಯ ಸಾರಸ್ವತ ತತ್ವಶಾಸ್ತ್ರವಾಗಿದೆ. ಈ ಶಾಸ್ತ್ರಕ್ಕೆ ಮೃಡದರ್ಶನ, ಶಿವಯೋಗ, ಶಕ್ತಿವಿಶಿಷ್ಟಾದ್ವೈತ, ದ್ವೈತಾದ್ವೈತ, ಷಟ್‌ಸ್ಥಲಸಿದ್ಧಾಂತ, ಲಿಂಗಾಂಗಸಾಮರಸ್ಯ, ಶೂನ್ಯ ಸಂಪಾದನೆ ಇತ್ಯಾದಿ ಶೀರ್ಷಿಕೆಗಳು ಉಂಟಾಗಿರುತ್ತವೆ.

ವಚನಸಾಹಿತ್ಯದ ಉಗಮ ಯಾವಾಗ ಆಯಿತೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಬಾರದಿದ್ದರೂ ಬಸವಾದಿ ಪ್ರಮಥರಿಗೂ ಹಿಂದೆ ವಚನಸಾಹಿತ್ಯರಚನೆ ಪ್ರಾರಂಭವಾಗಿತ್ತೆಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಕಾಶ್ಮೀರ, ಆಂಧ್ರ, ತಮಿಳುನಾಡು ಮೊದಲಾದ ಪ್ರದೇಶಗಳ ಶೈವಸಂತರೂ, ಅನುಭಾವಿಗಳೂ, ಆಚಾರ್ಯರೂ, ನಾಯನಾರರೂ ವಚನಸಾಹಿತ್ಯಕ್ಕೆ ಹಿನ್ನೆಲೆಯನ್ನು ಒದಗಿಸಿರುವುದು ಕಂಡುಬರುತ್ತದೆ. "ಆದ್ಯರ ಅರವತ್ತು ವಚನಂಗಳಿಗೆ" ಎಂಬ ವಚನ ವಾಕ್ಯದಲ್ಲಿ ಈ ಹಿನ್ನೆಲೆಯ ನೆನಪು ಸಿಕ್ಕುತ್ತದೆ. ಪಂಚಾಚಾರ್ಯರಲ್ಲಿ ಪ್ರಸಿದ್ಧರಾದ ರೇಣುಕರು ಮತ್ತು ಮರುಳಸಿದ್ಧರು ವಚನಗಳನ್ನು ರಚಿಸಿರುವರೆಂದು ಪ್ರತೀತಿ ಇದೆ. ರೇಣುಕರು "ಬಹು ದೊಡ್ಡದೀ ಜನ್ಮ ಜಂಬೂದ್ವೀಪಾಂತರದಿ" ಎಂಬಿವೇ ಮೊದಲಾದ ಹಾಡುಗಬ್ಬಗಳನ್ನು "ರೇವಗೀಪುರದ ಶ್ರೀ ಸಿದ್ಧಲಿಂಗೇಶ" ಎಂಬ ಅಂಕಿತದಲ್ಲಿ ಬರೆದಿರುವುದಾಗಿ ಡಾ॥ ರಾ. ದ. ರಾನಡೆ ಅವರು ತಮ್ಮ "Pathway to God in Kannada Literature" ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಪ್ರಸಿದ್ಧ ವಚನಕಾರರಾದ ಶಿವಯೋಗಿ ಸಿದ್ಧರಾಮೇಶ್ವರರು ರೇಣುಕರನ್ನು ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ. ದೇವರ ದಾಸಿಮಯ್ಯನವರು ಬಸವಣ್ಣನವರ ಹಿಂದಿನ ವಚನಕಾರರಲ್ಲಿ ಪ್ರಸಿದ್ಧರೆಂಬುದು ಈಗಾಗಲೇ ಸಿದ್ಧಾಂತವಾಗಿದೆ. ಕಾಶ್ಮೀರದ ಶಿವಶರಣೆ ಲಲ್ಲೇಶ್ವರಿ ಎಂಬುವರು ವಚನರೂಪದ ಸಾಹಿತ್ಯವನ್ನು ಬರೆದಿದ್ದಾರೆಂಬುದನ್ನು ಡಾ॥ ಜೆ. ರುದ್ರಪ್ಪನವರು ಪರಿಶೋಧಿಸಿ ಪ್ರಕಟಿಸಿರುತ್ತಾರೆ. ತಮಿಳುನಾಡಿನ ನಾಯನಾರರು ರಚಿಸಿರುವ ತೇವಾರಗಳೂ ಸಹ ಶರಣರ ವಚನಸಾಹಿತ್ಯಕ್ಕೆ ಹಿನ್ನೆಲೆಯಾಗಿರುತ್ತವೆ. ಈ ರೀತಿಯಾಗಿ ವಚನಸಾಹಿತ್ಯದ ಉಗಮವನ್ನು ನಾವು ಬಸವಾದಿ ಪ್ರಮಥರಿಗೆ ಹಿಂದೆಯೇ ಕಾಣಬಹುದಾಗಿದೆ. ಬಸವಾದಿ ಪ್ರಮಥರು ಮುಂದೆ ಈ ಹಿಂದಿನ ವಚನ ಸಾಹಿತ್ಯವನ್ನು ಹರಿತಗೊಳಿಸಿ ಪರಿಪೂರ್ಣ ಮಾಡಿದರು. "ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ಸೊರೆ! ತೆರೆಯಂತೆ ಆದ್ಯರ ವಚನವಿರಲು ಬೇರೆ ಬಾವಿಯ ತೋಡಿ ಉಪ್ಪು ನೀರೀಂಟುವನ ವಿಧಿಯಂತೆ ಆಯಿತ್ತೆನ ಮತಿ ಕೂಡಲಸಂಗಮ ದೇವಾ!" ಎಂಬ ಬಸವಣ್ಣನವರ ವಚನ ಗೀತೆಯು ವಚನಸಾಹಿತ್ಯದ ಉಗಮ ಮತ್ತು ಪ್ರಗತಿಗಳನ್ನು ಸೂಚಿಸುವುದಾಗಿದೆ.

ವಚನಸಾಹಿತ್ಯದಲ್ಲಿ ಪ್ರತಿಪಾದಿತವಾದ ಜೀವನ ಸಿದ್ಧಾಂತದ ಅನಂತ ಅಂಶಗಳಲ್ಲಿ ಕೆಲವನ್ನು ಮಾತ್ರ ಉದಾಹರಣಾರ್ಥವಾಗಿ ಇಲ್ಲಿ ಷಟ್ಸ್ಥಲಾನುಕ್ರಮದಲ್ಲಿ ನಮೂದಿಸಿ ಈ ಲೇಖನವನ್ನು ಪರಿಸಮಾಪ್ತಿಗೊಳಿಸಬಹುದಾಗಿದೆ.

೧ ಭಕ್ತಸ್ಥಲದ ಒಂದು ಅಂಶ — ದಾರಿದ್ರ್ಯ ನಿರ್ಮೂಲನ (Eradication of poverty) :

"ದರಿದ್ರ ಸಿರಿವಂತನ ನೆನೆದೊಡೆ ಸಿರಿವಂತನಾಗಬಲ್ಲನೇ?", "ಬೇಡಲಾಗದು ಭಕ್ತ", "ಬೇಡುವ ಗುಣ ಅಮಳೇಶ್ವರ ಲಿಂಗಕ್ಕೆ ದೂರ", "ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು! ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು! ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು!", "ಕಾಯಕವೇ ಕೈಲಾಸ"—ಇತ್ಯಾದಿ.

೨ ಮಾಹೇಶ್ವರ ಸ್ಥಲದ ಒಂದು ಅಂಶ—ಅಜ್ಞಾನ ನಿವಾರಣ (Liquidation of ignorance) :

"ಆಡಿಕೊಂಡಾರೆಂದು ಅಂಜಲದೇಕೆ? ನಾಸ್ತಿಕರಾದೇವೆಂದು ನಾಚಲದೇಕೆ? ಏನನೂ ಅರಿಯೆವೆಂದು ಮೌನಗೊಂಡಿರಲೇಕೆ? ಕೂಡಲ ಸಂಗಮ ದೇವರ ಮುಂದೆ ದಂದಣ - ದತ್ತಣ ಎನ್ನಿ!", "ನುಡಿದರೆ ಮುತ್ತಿನ ಹಾರದಂತಿರಬೇಕು! ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ! ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು! ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು!", "ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು! ವಿಚಾರವೆಂಬ ಹೂವಾಯಿತ್ತು! ಆಚಾರವೆಂಬ ಕಾಯಾಯಿತ್ತು! ನಿಷ್ಪತ್ತಿಯೆಂಬ ಹಣ್ಣಾಯಿತ್ತು! ನಿಷ್ಪತ್ತಿಯೆಂಬ ಹಣ್ಣು ತೊಟ್ಟು, ಬಿಟ್ಟು, ಕಳಚಿ ಬೀಳುವಲ್ಲಿ ತನಗೆ ಬೇಕೆಂದು ಎತ್ತಿಕೊಂಡ ಕೂಡಲ ಸಂಗಮ ದೇವ!", "ನೋಟವೇ ಕೂಟ, ಕೂಟವೇ ಪ್ರಾಣ, ಪ್ರಾಣವೇ ಏಕ, ಏಕವೇ ಸಮರಸ, ಸಮರಸವೇ ಲಿಂಗ, ಲಿಂಗವೇ ಪರಿಪೂರ್ಣ, ಪರಿಪೂರ್ಣವೇ ಪರಬ್ರಹ್ಮ, ಪರಬ್ರಹ್ಮವೇ ತಾನು!"—ಇತ್ಯಾದಿ.

೩ ಪ್ರಸಾದಿ ಸ್ಥಲದ ಒಂದು ಅಂಶ—ಸಂಪದ ಸಮ ವಿನಿಯೋಗ (Equal distribution of wealth) :

"ಸೋಹಂ ಎಂಬುದು ಅಂತರಂಗದ ಮದ! ಶಿವೋಹಂ ಎಂಬುದು ಬಹಿರಂಗದ ಮದ! ಈ ದ್ವಂದ್ವವ ಅಳಿದು ದಾಸೋಹಂ ಎಂದೆನಿಸಯ್ಯಾ—ಕಪಿಲ ಸಿದ್ಧಮಲ್ಲಿಕಾರ್ಜುನಾ!", "ದಾಸೋಹವಿಲ್ಲದೆ ತನ ಒಡಲ ಹೊರೆವವನು ಸದ್ಭಕ್ತರೊಳಗೆ ಸಲ್ಲ! ಅವನಿಗೆ ಪ್ರಸಾದವಿಲ್ಲ! ಪ್ರಸಾದವಿಲ್ಲದೆ ಮುಕ್ತಿಯಿಲ್ಲ!" "ಶುದ್ಧ ಪ್ರಸಾದ ಗುರುವಿನದು! ಸಿದ್ಧಪ್ರಸಾದ ಲಿಂಗದದು! ಪ್ರಸಿದ್ಧ ಪ್ರಸಾದ ಜಂಗಮದದು!"—ಇತ್ಯಾದಿ.

೪ ಪ್ರಾಣಲಿಂಗಿ ಸ್ಥಲದ ಒಂದು ಅಂಶ—ಜಾತ್ಯಾತೀತ ಸಮಾಜ ನಿರ್ಮಾಣ (Creation of a class-less society) :

"ದೇವ ದೇವ—ಭಿನ್ನಪವ ಅವಧಾರು! ವಿಪ್ರ ಮೊದಲು ಶ್ವಪಚಕಡೆಯಾಗಿ ಭಕ್ತರಾದವರನೆಲ್ಲ ಒಂದೇ ಎಂಬೆ!", "ವ್ಯಾಸ ಬೇಡ, ವಸಿಷ್ಠ ಡೊಂಬ, ದೂರ್ವಾಸ ಮಚ್ಚಿಗ, ಕೌಂಡಿನ್ಯ ನಾಯಿಂದ, ಅಗಸ್ತ್ಯ ಕುಂಬಾರ, ಕಶ್ಯಪ ಕಮ್ಮಾರ, ಮಾರ್ಕಂಡೇಯ ಮಾದಿಗ, ಸಾಂಖ್ಯ ಹೊಲೆಯ! ಇಂತಪ್ಪ ಋಷಿ ಜನಂಗಳೆಲ್ಲ ಗುರು ಕಾರುಣ್ಯವಂ ಪಡೆದು, ವಿಭೂತಿ ರುದ್ರಾಕ್ಷಿಗಳಂ ಧರಿಸಿ, ಶಿವಲಿಂಗಾರ್ಚನೆಯಂ ಮಾಡಿ, ತೀರ್ಥ ಪ್ರಸಾದಗಳಂ ಕೊಂಡು, ನಡೆ ನುಡಿ ಸತ್ಯಶುದ್ಧವಾಗಿ ಕುಲಶ್ರೇಷ್ಠರೆಂದೆನಿಸಿಕೊಂಡರು!", "ಲಿಂಗಸ್ಥಲವನರಿದವನೇ ಕುಲಜನು!" ಇತ್ಯಾದಿ.

೫ ಶರಣ ಸ್ಥಲದ ಒಂದು ಅಂಶ—ವ್ಯಕ್ತಿಸ್ವಾತಂತ್ರ್ಯ ಸ್ಥಾಪನ (Establishment of individual liberty) :

"ಅಂದಿಂಗೆ ಎಳೆಯ ನೀನು, ಹಳೆಯ ನಾನು!", "ನಂಬಿ ಕರೆದೊಡೆ ಓ ಎನ್ನನೇ ಶಿವನು?", "ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕವಿರೋಧಿ! ಆರಿಗೂ ಅಂಜುವನಲ್ಲ!", "ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೇ?", "ಸತ್ಯವ ನುಡಿವುದೇ ದೇವಲೋಕ! ಮಿಥ್ಯವ ನುಡಿವುದೇ ಮರ್ತ್ಯ ಲೋಕ!", "ಆಯಾ ಎಂದೊಡೆ ಸ್ವರ್ಗ! ಎಲವೋ ಎಂದೊಡೆ ನರಕ!", "ತನ್ನ ತಾ ಅರಿದವಂಗೆ ಅರಿವೇ ಗುರು", "ಹಿರಿದು ಕಿರಿದೆಂಬ ಶಬ್ದ ಅಡಗಿದರೆ ಆತನೇ ಶರಣ"—ಇತ್ಯಾದಿ.

೬ ಐಕ್ಯ ಸ್ಥಲದ ಒಂದು ಅಂಶ—ವಿಶ್ವಶಾಂತಿ ಪಾಲನ (Maintenance of world peace) :

"ಬ್ರಹ್ಮಪದವಿಯನೊಲ್ಲೆ! ವಿಷ್ಣುಪದವಿಯ ನೊಲ್ಲೆ! ರುದ್ರಪದವಿಯನೊಲ್ಲೆ! ಸದ್ಭಕ್ತರ ಪಾದವನರಿದಿಪ್ಪ, ಮಹಾಪದವಿಯ ನೋದನೆ ಕರುಣಿಸಾ!", "ಎನಗಿಂತ ಕಿರಿಯರಿಲ್ಲ, ಭಕ್ತರಿಗಿಂತ ಹಿರಿಯರಿಲ್ಲ!"—ಇತ್ಯಾದಿ.

ಈ ಮೇಲೆ ಕಂಡ ಅಂಶಗಳು ವಚನಸಾಹಿತ್ಯದಲ್ಲಿ ಪ್ರತಿಪಾದಿತವಾದ ಅನಂತ ಅಂಶಗಳಲ್ಲಿ ಕೆಲವು ಮಾತ್ರ. ವಚನಸಾಹಿತ್ಯದ ಎಲ್ಲ ಅಂಶಗಳನ್ನು ಅವಲೋಕಿಸಿ ಅದರ ಮಹತ್ವವನ್ನು ಅರಿತು ಅದರಿಂದ ತಮ್ಮ ನಿತ್ಯ ಜೀವನದಲ್ಲಿ ಪೂರ್ಣ ಪ್ರಯೋಜನವನ್ನು ಪಡೆಯಬೇಕಾದರೆ ಮಾನವರು ವಚನಸಾಹಿತ್ಯವನ್ನು ಕೂಲಂಕಷವಾಗಿ ಅಭ್ಯಾಸಮಾಡಬೇಕು.

ನುಡಿಮುತ್ತುಗಳು

ಆತ್ಮಾನಾತ್ಮ ವಿಚಾರ ಮಾಡಿರಿ, ಸ್ವಸ್ವರೂಪವನ್ನು ಅರಿಯಿರಿ.
ದೇಹಕ್ಕೆ ಆಹಾರ ಬೇಕೇ ಬೇಕು. ಅದರಂತೆಯೇ ಆತ್ಮಕ್ಕೆ ಪ್ರಾರ್ಥನೆ
ಅತ್ಯಾವಶ್ಯಕ.

ಸ್ವಾರ್ಥರಹಿತ ಸೇವೆಯೇ ಬಾಳುವೆಯ ಸಾರ.
ವಿಶ್ವಪ್ರೇಮವೇ ಮನುಷ್ಯನ ಜೀವನಾಧಾರ.
ಭಗವಂತನನ್ನು ಸಮದೃಷ್ಟಿ ಮತ್ತು ಸಮಚಿತ್ತ ಎಂಬ
ಪುಷ್ಪಗಳಿಂದ ಆರಾಧಿಸಿ.

With best
compliments
from:

**Alembic Glass
Industries
Limited**

WHITEFIELD (DIST: BANGALORE)

ಶೈವ ದರ್ಶನಗಳಲ್ಲಿ ವೀರಶೈವದ ಸ್ಥಾನ

ಲೇಖಕರು :
ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು
ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಪ್ರಾಧ್ಯಾಪಕರು, ಸಂಸ್ಕೃತ ಕಾಲೇಜು,
ಮೈಸೂರು.

★

"ಶೈವ ದರ್ಶನಗಳಲ್ಲಿ ವೀರಶೈವದ ಸ್ಥಾನ" ಕುರಿತು ವಿಚಾರ ಪೂರಿತವಾಗಿ ವಿದ್ವತ್ ಲೇಖನ ಬರೆದಿರುವ ಶ್ರೀ ಎಂ.ಜಿ. ನಂಜುಂಡಾರಾಧ್ಯರು ಮೈಸೂರಿನ ಮಹಾರಾಜರ ಸಂಸ್ಕೃತ ಕಾಲೇಜಿನಲ್ಲಿ ಶಕ್ತಿ ವಿಶಿಷ್ಟಾದ್ವೈತ ವೇದಾಂತದ ಪ್ರಾಧ್ಯಾಪಕರಾಗಿದ್ದಾರೆ. ಉತ್ತಮ ವಾಗ್ಮಿಗಳೂ, ವಿದ್ವಾಂಸರೂ, ಸಂಶೋಧಕರೂ ಆದ ಶ್ರೀಯುತರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ, ವೀರಶೈವದ ಬಗ್ಗೆ ಶ್ರೀಯುತರು ಅಧಿಕಾರ ವಾಣಿಯಿಂದ ಮಾತನಾಡಬಲ್ಲ, ಬರೆಯಬಲ್ಲ ಸಮರ್ಥರು.

ಧರ್ಮಕ್ಷೇತ್ರವೆಂದು ಪ್ರಸಿದ್ಧವಾದ ಭಾರತವರ್ಷದಲ್ಲಿ ತಲೆ ಎತ್ತಿದ ಧಾರ್ಮಿಕ ಪಂಥಗಳಲ್ಲಿ ಶೈವ ಪಂಥ ಬಹು ಪುರಾತನ. ಜಗತ್ತಿನ ಸೃಷ್ಟಿ ಸ್ಥಿತಿ ಮತ್ತು ಪ್ರಳಯಾದಿ ಕೃತ್ಯಗಳಿಗೆ ಕಾರಣನಾದವನು ಶಿವ. ಅವನ ಪ್ರತೀಕ ಲಿಂಗ. ಎಲ್ಲ ಶೈವ ಪಂಥಗಳಲ್ಲಿಯೂ ಲಿಂಗಾರಾಧನೆಗೇ ಪ್ರಾಧಾನ್ಯ. ಇಂಥ ಲಿಂಗ ಮತ್ತು ಅವುಗಳ ಉಪಾಸನೆಯು ಪ್ರಾಗೈತಿಹಾಸಿಕ ಕಾಲದಿಂದಲೂ ಜಗತ್ತಿನಲ್ಲಿ ಪ್ರಚಾರದಲ್ಲಿದೆಯೆಂದು ವಿದ್ವಾಂಸರು ಊಹಿಸಿದ್ದಾರೆ.

ವೇದಕಾಲಕ್ಕಿಂತಲೂ ಹಿಂದಿನದೆಂದು ತಿಳಿದುಬಂದಿರುವ ಮೊಹೆಂಜೋದಾರೋ ಪರಿಶೋಧನೆಯಲ್ಲಿ ದೊರೆತಿರುವ ಹತ್ತು ವಿಧವಾದ ಲಿಂಗಗಳು ಮತ್ತು ವೃಷಭ ಮೊದಲಾದ ಶೈವ ಕಲಾ ಕೃತಿಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಮೇಲೆ ಕಂಡ ಲಿಂಗಗಳಲ್ಲಿ ಕೆಲವು ಪೀಠಾದಿಗಳ ಮೇಲೆ ಸ್ಥಾಪಿಸತಕ್ಕವು ಮತ್ತೆ ಕೆಲವು ಶರೀರದ ಮೇಲೆ ಧರಿಸತಕ್ಕವೂ ಇವೆ.

ಶೈವ ಧರ್ಮವನ್ನು ಪ್ರಸ್ತಾಪಿಸುವ ಗ್ರಂಥಗಳಲ್ಲಿ ಶ್ವೇತಾಶ್ವತರ. ಕೈವಲ್ಯ, ಮಹಾನಾರಾಯಣ ಮತ್ತು ಅಥರ್ವ ಶಿರಸ್ಸು ಮುಂತಾದ ಉಪನಿಷತ್ತುಗಳು ಮುಖ್ಯ. ಯಜುರ್ವೇದದಲ್ಲಿ ಬರುವ ರುದ್ರಾಧ್ಯಾಯ ಪ್ರಕರಣವು ಶಿವಾರಾಧನೆಯೇ ಆಗಿದೆ. ಶೈವಧರ್ಮಪ್ರತಿಪಾದಕವಾದ ಆಗಮಗಳು ಮತ್ತು ಶಿವಪುರಾಣಗಳಲ್ಲಿ ಅನೇಕ ಶೈವ ಪ್ರಭೇದಗಳು ಕಂಡುಬರುತ್ತವೆ. ಇವುಗಳಲ್ಲಿ ಪ್ರಾಸಂಗಿಕವಾಗಿ ಜೀವಾತ್ಮ ಪರಮಾತ್ಮರಿಗೆ ಸ್ವ-ಸ್ವಾಮಿ ಭಾವ, ಭೇದ–ಭಾವ, ಶೇಷ-ಶೇಷಿಭಾವ ಮುಂತಾದವು ಸೂಚಿತವಾಗಿವೆ. ಶಿವಸರ್ವೋತ್ತಮತ್ವವೂ ಅಲ್ಲಲ್ಲಿ ಕಂಡುಬರುತ್ತದೆ. "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥುಃ", "ಏಕೋ ನಾರಾಯಣಃ", "ಏಕೋ ದೇವಃ ಸರ್ವ ಭೂತೇಷು ಗೂಢಃ" ಮುಂತಾದ ಶ್ರುತಿವಾಕ್ಯಗಳು ಈ ಅರ್ಥವನ್ನು ಸಮರ್ಥಿಸುತ್ತವೆ.

ಶೈವ, ವೈಷ್ಣವ, ಶಾಕ್ತ, ಕೌಮಾರ ಮತ್ತು ಗಾಣಾಪತ್ಯ ಮುಂತಾದ "ಭಾಗವತ" ಮತಗಳಿಗೂ ಕೂಡ ಉಪನಿಷತ್ತುಗಳೇ ಆಧಾರ ಎಂದು ಆಯಾ ದರ್ಶನಗಳಲ್ಲಿ ಹೇಳಿದೆ.

"ಭಾಗ" ಶಬ್ದಕ್ಕೆ ಶ್ರೀ, ಶಕ್ತಿ, ಕಾಮ, ಯೋನಿ, ಮಾಹಾತ್ಮ್ಯ, ಸೂರ್ಯ ಮುಂತಾದ ಅರ್ಥಗಳಿರುವುದರಿಂದ ಭಾಗವತತ್ವವು ಸಾಮಾನ್ಯವಾಗಿ ಎಲ್ಲ ಭಕ್ತಿಮತಗಳಿಗೂ ಅನ್ವಯಿಸುತ್ತದೆ. ಪತಂಜಲಿಯ ವ್ಯಾಕರಣ ಮಹಾಭಾಷ್ಯದಲ್ಲಿ ತ್ರಿಶೂಲಧಾರಿಗಳಾದ ಶೈವಭಾಗವತರ ಉಲ್ಲೇಖವಿದೆ. ಬೌದ್ಧಾಗಮಗಳಲ್ಲಿ ಇಸ್ಸಿರಿಯ, ಧಮ್ಮ, ಸಿರಿ, ಕಾಮ, ಪಯತನ, ಯಶ ಎಂಬ ಷಡ್ಗುಣ ವಿಶಿಷ್ಟನಾದ ಬುದ್ಧನು "ಭಗವತ್" ಶಬ್ದವಾಚ್ಯನಾಗಿದ್ದಾನೆ. ಜಗದ್ಯೋನಿ ಎನಿಸಿರುವ ಆದಿಶಕ್ತಿಯು "ಭಗವತಿ" ಎಂದು ಕರೆಯಲ್ಪಟ್ಟಿದ್ದಾಳೆ.

ವೈದಿಕ ಯುಗ ಪ್ರಸಿದ್ಧವಾದ ಶ್ರದ್ಧೆ ಮತ್ತು ಉಪಾಸನಾದಿಗಳು ಪುರಾಣಯುಗದಲ್ಲಿ ಭಕ್ತಿಯೆನಿಸಿದವು. ಆದರೆ ಈ ಭಕ್ತಿಯು ವಿದೇಶೀಯರ ಸಂಪರ್ಕದಿಂದ ಉಂಟಾದುದಲ್ಲ. ಭಕ್ತಿಮಾರ್ಗವು ಪುರುಷ ಭಾವ ಪ್ರಧಾನವಾದದ್ದು. ಆದ್ದರಿಂದಲೇ ಈ ಭಾವನೆಯು ದ್ವೈತಾದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ, ದ್ವೈತ, ಅದ್ವೈತ, ವಿಶೇಷಾದ್ವೈತ, ಅಚಿಂತ್ಯ, ಭೇದಾಭೇದ ಮೊದಲಾದವುಗಳಲ್ಲಿ ಪ್ರವೇಶಿಸಿ ವಿವಿಧ ಮತ ಸ್ವರೂಪವನ್ನು ತಳೆಯಿತು.

ಶೈವದರ್ಶನ ಪ್ರಭೇದಗಳು

ಶೈವದರ್ಶನಗಳಲ್ಲಿ ಕಾಶ್ಮೀರ ಶೈವ, ಶುದ್ಧ ಶೈವ, ಲಾಕುಳ, ಕಾಳಾಮುಖ, ಶ್ರೀಕಂಠಸಂಪ್ರದಾಯ, ವಿಶೇಷಾದ್ವೈತ ಅಥವಾ ಶಕ್ತಿವಿಶಿಷ್ಟಾದ್ವೈತ ಮುಂತಾದ ಪ್ರಭೇದಗಳಿವೆ. ಇವುಗಳಲ್ಲಿ ಕಾಶ್ಮೀರ ಶೈವಕ್ಕೆ "ಪ್ರತ್ಯಭಿಜ್ಞಾ" ಎಂಬ ನಾಮಾಂತರವಿದೆ. ಕಾಶ್ಮೀರ ಶೈವರು ಅದ್ವೈತಿಗಳು. ಶುದ್ಧಶೈವರು ದ್ವೈತಿಗಳು. ಲಾಕುಳ, ಕಾಳಾಮುಖ ಮತ್ತು ಶ್ರೀಕಂಠ ಸಂಪ್ರದಾಯಗಳವರು ವಿಶಿಷ್ಟಾದ್ವೈತಿಗಳು. ಶ್ರೀಪತಿ ಪಂಡಿತಾರಾಧ್ಯರು ಹೇಳುವ ವಿಶೇಷಾದ್ವೈತವು ವೀರಶೈವ. ಶಕ್ತಿವಿಶಿಷ್ಟಾದ್ವೈತ, ಭೇದಾಭೇದ, ಷಟ್‌ಸ್ಥಲ ಮುಂತಾದ ಹೆಸರುಗಳಿಂದ ಈ ಸಿದ್ಧಾಂತವು ಪ್ರತಿಪಾದಿತವಾಗಿದೆ.

ಶೈವ ಪ್ರಭೇದಗಳನ್ನು ಕುರಿತು ಆಚಾರ್ಯ ರೇಣುಕರು

ಶೈವಂ ಪಾಶುಪತಂ ಸೋಮಂ ಲಾಕುಳಂ ಚೇತಿ ಭೇದತಃ ।
ತೇಷು ಶೈವಂ ಚತುರ್ಭೇದಂ ತಂತ್ರಂ ಸರ್ವವಿನಿಶ್ಚಿತಂ ।
ವಾಮಂಚ ದಕ್ಷಿಣಂ ಚೈವ ಮಿಶ್ರಂ ಸಿದ್ಧಾಂತ ಸಂಜ್ಞಿಕಂ ॥

ಎಂದು ಸೂಚಿಸಿದ್ದಾರೆ.

ಕೂರ್ಮ ಪುರಾಣದಲ್ಲಿ ಕಾಪಾಲ, ಲಾಕುಳ, ವಾಮ, ಭೈರವ, ಪಾಶುಪತವೆಂಬ ಐದು ಪ್ರಭೇದಗಳು ಕಾಣುತ್ತವೆ. ಕನ್ನಡನಾಡಿನ ಶಾಸನಗಳಲ್ಲಿ ಕಾಳಾಮುಖರು ಕಪಾಲಧಾರಿಗಳಲ್ಲ. ಸರ್ವದರ್ಶನ ಸಂಗ್ರಹದಲ್ಲಿ ಶೈವವು ಲಕುಲೀಶಪಾಶುಪತ, ಪ್ರತ್ಯಾಭಿಜ್ಞಾ ಮತ್ತು ರಸೇಶ್ವರವೆಂದು ಮೂರು ಬಗೆ ಉಕ್ತವಾಗಿದೆ.

ಆಧುನಿಕರು ಕೆಲವರು ಶಿವನು ಅನಾರ್ಯ ದೇವತೆಯೆಂದು ಭಾವಿಸಿ, ಅವನು ವೇದ ಪ್ರತಿಪಾದ್ಯನಾದ ರುದ್ರನಲ್ಲಿ ಐಕ್ಯಗೊಂಡನೆಂದು ಹೇಳುತ್ತಾರೆ. ಇವೆರಡರ ಸಮನ್ವಯವಾದ ಮೇಲೆಯೇ ಪೌರಾಣಿಕವಾದ ಶೈವ ಮತವು ಆವಿರ್ಭವಿಸಿತೆಂದು ಸಮರ್ಥಿಸುತ್ತಾರೆ. ನಾವು ಹಿಂದೆ ಹೇಳಿದ ವೇದಪೂರ್ವ ಮೊಹೆಂಜೋ ದಾರೋ ಸಂಶೋಧನೆಯಲ್ಲಿ ಶೈವ ಸಂಸ್ಕೃತಿಯ ಅವಶೇಷಗಳು ಇದಕ್ಕೆ ಪೋಷಕ. ಆದರೆ ಆಗಮೋಕ್ತವಾದ ಶೈವ ಸಂಸ್ಕೃತಿ ಹಾಗೂ ಅಲ್ಲಿ ಬರುವ ಶಿವನ ಪಂಚವಿಂಶತಿಲೀಲಾ ವಿಶೇಷಗಳು ಜಗತ್ ಸೃಷ್ಟಿಯ ಕಾಲದಿಂದಲೂ ವಿಕಾಸವಾದ ಮಾನವ ಜನಾಂಗದ ಹಂತಗಳನ್ನು ಪ್ರತಿಬಿಂಬಿಸುವುದರಿಂದಲೂ, ನಿಗಮಾಗಮಗಳಿಗೆ ಅನಾದಿಕಾಲದಿಂದ ನಿಕಟ ಸಂಬಂಧವು ಕಂಡುಬರುವುದರಿಂದಲೂ ಶೈವವು ಭಾರತೀಯ ಸಂಸ್ಕೃತಿಯ ಪ್ರತೀಕವೇ ಆಗಿದೆ.

ಶೈವಮತಗಳ ಮೂಲ ಭಕ್ತಿ. ವೈದಿಕಯುಗದ ಯಜ್ಞಕರ್ಮ ಸಾಧಕಗಳಾದ ಶ್ರದ್ಧೆ, ಉಪಾಸನೆಗಳೇ ಭಕ್ತಿರೂಪವಾಗಿ ಪರಿಣಮಿಸಿದವು. ವೇದದಲ್ಲಿ ಅಗ್ನಿಯ ಕ್ರೂರ ರೂಪವು ರುದ್ರನೆಂದೂ,ಸೌಮ್ಯ ರೂಪವು ಶಿವನೆಂದೂ ಹೇಳಿದೆ.[1] ಯಜ್ಞೇಶ್ವರನ ಜ್ವಾಲೆಗಳೇ ಕಾಳೀ ಕರಾಳೀ ಮುಂತಾಗಿ ಕರೆಯಲ್ಪಟ್ಟಿವೆ.[2] ಅಗ್ನಿರೂಪನಾದ ಶಿವ ದೇವತೆಗಳಲ್ಲಿ ಬ್ರಾಹ್ಮಣ. ಆದ್ದರಿಂದಲೇ ಅವನು ಬ್ರಾಹ್ಮಣ ದೇವತೆ.[3]

---

1 "ತ್ವಮಗ್ನೇ ರುದ್ರೋ ಅಸುರೋ ಮಹೋದಿವಃ"
"ಅವೋ ರಾಜಾನಮಧ್ವರಸ್ಯ ರುದ್ರಗ್ಂ ಹೋತಾರಗ್ಂ"
"ತ್ವಮಗ್ನೇ ಪ್ರಥಮೋ ಅಂಗಿರಾ ಋಷಿರ್ದೇವೋ ದೇವಾನಾಮ
ಭವಃ ಶಿವಃ ಸಖಾ ।
ತವವ್ರತೇ ಕವಯೋ ವಿದ್ಮನಾಪಸೋಽ ಜಾಯಂತ ಮರುತೋ
ಭ್ರಾಜದೃಷ್ಟಯಃ"
(ಋ. 1–71)

2 "ಕಾಲೀ ಕರಾಳೀ ಚ ಮನೋಜವಾ ಚ ।
ಸುಲೋಹಿತಾಯಾ ಚ ಸುಧೂಮ್ರವರ್ಣಾ "
ಸ್ಫುಲಿಂಗಿನೀ ವಿಶ್ವರೂಪೀ ಚ ದೇವೀ ।
ಲೀಲಾಯಮಾನಾ ಇತಿ ಸಪ್ತ ಜಿಹ್ವಾ ।
(ಮುಂಡಕೋಪನಿಷತ್.)

3 ಬ್ರಾಹ್ಮಣೋ ಭಗವಾನ್ ರುದ್ರಃ ಕ್ಷತ್ರಿಯಃ ಪರಮೋ ಹರಿಃ ।
ವೈಶ್ಯಃ ಕಮಲಗರ್ಭಶ್ಚ ವೃಷಲಃ ಪಾಕಶಾಸನಃ ॥
ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ.
"ಗುರುರಗ್ನಿಃ ದ್ವಿಜಾತೀನಾಂ ॥"
"ಅಗ್ನಿರ್ದೇವೋ ದ್ವಿಜನ್ಮನಾಂ॥"
"ತ್ವಂ ದೇವೇಷು ಬ್ರಾಹ್ಮಣೋಸ್ಮ್ಯಹಂ ಮನುಷ್ಯೇಷು ಬ್ರಾಹ್ಮಣಃ॥"
(ಮಂತ್ರಬ್ರಾಹ್ಮಣ)

ಇಲ್ಲಿ ಕೆಲವರು ಯಜ್ಞೋಪಯುಕ್ತ ಉತ್ತರಾರಣಿ ಅಥವಾ ಯೂಪದ ಪ್ರತೀಕವೇ ಶಿವಲಿಂಗವೆಂದೂ, ಯಜ್ಞಕುಂಡದಲ್ಲಿನ ರಕ್ಷೆಯೇ ಶೈವಲಾಂಛನವಾದ ಭಸ್ಮವೆಂದೂ ಹೇಳುತ್ತಾರೆ.

ಲಿಂಗದ ಸ್ವರೂಪವು ಶಿವಾಗಮಗಳಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ.

ಪೀಠಿಕಾ ಪರಮಾ ಶಕ್ತಿಃ ಲಿಂಗಂ ಸಾಕ್ಷಾತ್ ಪರಃ ಶಿವಃ ।
ಜ್ಞಾನಾತ್ಮಕಂ ಸರ್ವಗತಂ ಯೋಗಿನಾಂ ಹೃದಯಸ್ಥಿತಮ್ ॥
ಗೋಲಕಂ ಪರತತ್ತ್ವಂಚ ಚಿನ್ಮಯಂ ಚಿದ್ವಿಲಾಸಕಮ್ ।
ಶರಣ್ಯಂ ಸರ್ವತತ್ತ್ವಾನಾಂ ಲಿಂಗಾಕಾರೇಣ ವರ್ತತೇ ॥

ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ।
ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ।
ಹೃದಾ ಮನೀಷಾ ಮನಸಾಭಿಕ್ಲೃಪ್ತೋ ।
ಯ ಏತದ್ ವಿದುರಮೃತಾಸ್ತೇ ಭವಂತಿ ॥

(ಶ್ವೇತಾಶ್ವತರ 3-13)

ಮುಂತಾದ ಪ್ರಮಾಣಗಳಿಂದ ಪ್ರಾಣಿಗಳ ಹೃದಯದಲ್ಲಿರುವ ಶಕ್ತಿವಿಶಿಷ್ಟ ಪರಮಾತ್ಮನೇ ಶಿವಲಿಂಗವೆಂದು ಹೇಳುತ್ತಾರೆ. ಇದೇ ವಿಷಯವನ್ನು ಮಹಾ ಪಂಡಿತರಾದ ಅಪ್ಪಯ್ಯದೀಕ್ಷಿತರು—

“ಬ್ರಹ್ಮಮೀಮಾಂಸೆಯಲ್ಲಿ ಅಪರಿಚ್ಛನ್ನನಾದ ಪರಶಿವನು ಅಂಗುಷ್ಠಮಾತ್ರನಾಗಿರುವುದು ಹೇಗೆ ಎಂದು ಸಂದೇಹಿಸಿ “ಹೃದ್ಯಪೇಕ್ಷಯಾತು ಮನುಷ್ಯಾಧಿಕಾರತ್ವಾತ್” ಎಂಬ ಬ್ರಹ್ಮಸೂತ್ರದಲ್ಲಿ ಮಾನವ ಹೃದಯ ಕೋಶವು ಅಂಗುಷ್ಠದಷ್ಟಿರುವುದರಿಂದಲೂ, ಹೃದಯದಲ್ಲಿನ ಆಕಾಶವು ಅಂಗುಷ್ಠದಷ್ಟೇ ಇರುವುದರಿಂದಲೂ, ಶಾಸ್ತ್ರವು ಮನುಷ್ಯರಿಗಾಗಿಯೇ ಇರುವುದರಿಂದಲೂ, ಆ ಹೃದಯಾಕಾಶ ಪರಿಮಾಣವು ಲಿಂಗ ರೂಪದಲ್ಲಿರುವುದರಿಂದಲೂ ಅದು ಲಿಂಗ ರೂಪವೆಂದು ಸಮರ್ಥಿಸಲಾಗಿದೆ. ಅಂಗುಷ್ಠ ಪರಿಮಾಣವುಳ್ಳ ಹೃದಯ ಕಮಲ ಕೋಶವು ಲಿಂಗಾಕಾರವಾದ್ದರಿಂದ ಲಿಂಗ ರೂಪವು ಸಿದ್ಧಿಸಿತು.” (ಪಂಚರತ್ನಸ್ತುತಿ. ಪು.3)

ಇನ್ನು ಯಜ್ಞದಲ್ಲಿನ ರಕ್ಷೆಯೇ ಭಸ್ಮವೆಂಬ ವಾದವು ಸರಿಯಲ್ಲ. ಏಕೆಂದರೆ ಶುದ್ಧಸ್ಫಟಿಕವರ್ಣನಾದ ಪರಶಿವನ ಜ್ಞಾನರೂಪವಾದ ದೇಹಕಾಂತಿಯ ಸಂಕೇತವೇ ಭಸ್ಮವೆಂದು ವೀರಶೈವ ಆಚಾರ್ಯರು ಘೋಷಿಸಿದ್ದಾರೆ.

ಸಾಮಾನ್ಯವಾಗಿ ಶೈವಮತಗಳಲ್ಲಿ ವರ್ಣಾಶ್ರಮ ವಿಷಯಗಳು ಇಲ್ಲವೆಂದು ಹೇಳುವಂತಿಲ್ಲ. ಏಕೆಂದರೆ ಪಾಶುಪತ ಸೂತ್ರಗಳಲ್ಲಿ ಸ್ತ್ರೀಶೂದ್ರರಿಗೆ ಪಾಶುಪತ ದೀಕ್ಷಾಧಿಕಾರವಿಲ್ಲವೆಂದು ಹೇಳಿದೆ.

ಮೂತ್ರಪುರೀಷಂ ನಾವೇಕ್ಷೇತ,
ಸ್ತ್ರೀಶೂದ್ರಂ ನಾಭಿಭಾಷೇತ್.

ಉಪಸ್ಪೃಶ್ಯ ಪ್ರಾಣಾಯಾಮಂ ಕೃತ್ವಾ ರೌದ್ರೀಂ
ಗಾಯತ್ರೀಂ ಬಹು ರೂಪಾಂ ವಾಜಪೇತ್ ॥

(ಪಾಶುಪತ ಸೂತ್ರ, 1-13-14)

“ಪ್ರಣವೇನ ವಿನಾ ಮಂತ್ರಃ ಸ್ತ್ರೀ ಶೂದ್ರಾಣಾಂ ಪ್ರಸಾಧಕಃ ।
ಯದಿ ದದ್ಯಾತ್ ಸಪ್ರಣವಮುಭಯೋರ್ವಿತಥೋ ಭಾವೇತ್ ॥

(ಸೂಕ್ಷ್ಮತಂತ್ರ 3-26)

ಕೌಂಡಿನ್ಯ ಭಾಷ್ಯದಲ್ಲಿ –ಲಕುಲೇಶ್ವರನು ಬ್ರಾಹ್ಮಣ ಶರೀರ ಧರಿಸಿ, ಕಾಯಾವ ತರಣ ಕ್ಷೇತ್ರದಲ್ಲಿ ಆವಿರ್ಭವಿಸಿ, ಉಜ್ಜಯಿನಿಗೆ ಬರುತ್ತಾನೆ. ಅಲ್ಲಿ ಸ್ವಜಾತಿ, ಗೋತ್ರ ಶ್ರುತ ಅನ್ಯಣತ್ವಾದಿಗಳನ್ನು ನಿವೇದಿಸಿದ, ಶರಣಾಗತನಾದ ಕುಶಿಕನಿಗೆ ಪಾಶುಪತದೀಕ್ಷೆ ಕೊಡುತ್ತಾನೆ. ಇದರಿಂದ ವೇದಮಾರ್ಗದ ವರ್ಣತ್ರಯವಿಮುಕ್ತರಾದ ಬ್ರಾಹ್ಮಣರೇ ಅತ್ಯಾಶ್ರಮಿಗಳೆಂದು ಸಾಮಾನ್ಯವಾಗಿ ವೇದ್ಯವಾಗುತ್ತದೆ.

೧ ಲಾಕುಳ–ಪಾಶುಪತ–ಕಾಳಾಮುಖ ದರ್ಶನಗಳು

ವಿಷ್ಣುವಿನ ವಾಸುದೇವಾವತಾರದ ಸಮಯದಲ್ಲಿಯೇ ಶಿವನು ಲಗುಡಹಸ್ತನಾಗಿ ಕಾಯಾವರೋಹಣ ಕ್ಷೇತ್ರದಲ್ಲಿ ಬ್ರಾಹ್ಮಣ ವಂಶದಲ್ಲಿ ಹುಟ್ಟಿದನೆಂದು ವಾಯುಪುರಾಣ (ಅ. 23) ಲಿಂಗ ಪುರಾಣ (ಅ. 24) ಗಳಲ್ಲಿ ಹೇಳಿದೆ. ಕೌಂಡಿನ್ಯ ಭಾಷ್ಯದಲ್ಲಿ ಲಕುಲೀಶನ ಪ್ರಥಮ ಶಿಷ್ಯರು ಕೌಶಿಕ, ಗರ್ಗ, ಮಿತ್ರ, ಕಾರಣೀ ಎಂಬುವರು. ಪಾಂಚರಾತ್ರಮತ ಪ್ರತಿಸ್ಪರ್ಧಿಯಾಗಿ ಇಲ್ಲಿ ಪಂಚಾರ್ಥವಿದ್ಯೆಗಳು ಪ್ರತಿಪಾದಿತವಾಗಿವೆ.

ದರ್ಶನ ಸ್ವರೂಪ: ಇಲ್ಲಿ ಕಾರ್ಯ, ಕಾರಣ ಯೋಗ, ವಿಧಿ ಮತ್ತು ದುಃಖಾಂತ ಎಂದು ಪದಾರ್ಥಗಳು ಐದು. **ಕಾರ್ಯ** ಕೋಟಿಯಲ್ಲಿ ಪಶು, ವಿದ್ಯೆ, ಕಲೆಗಳು ಸೇರಿವೆ. ಸಿದ್ಧೇಶ್ವರನ ಹೊರತು ಉಳಿದ ಎಲ್ಲ ಚೇತನಗಳೂ ಪಶುಗಳು. “ದರ್ಶನಾತ್ ಪಾಶನಾಚ್ಚ ಪಶುಃ” ಎಂದು. ಪಶುಗಳಲ್ಲಿ ದೇವ, ಮನುಷ್ಯ, ತಿರ್ಯಕ್ ಎಂಬ ಭೇದಗಳಿವೆ. ವಿದ್ಯೆಯು ಉತ್ಪಾದ್ಯ, ಅನುಗ್ರಾಹ, ತಿರೋಭಾವ್ಯ, ಕಾಲ್ಪ್ಯ, ವಿಕಾರ್ಯ ಅಸ್ಪಂದಾದಿಗಳನ್ನು ಬೋಧಿಸುತ್ತದೆ. ಕಲೆಗಳು ಕಾರ್ಯಕಲೆ ಮತ್ತು ಕಾರಣಕಲೆ ಎಂದು ಎರಡು ವಿಧ. ಕಾರ್ಯಕಲೆಗಳು ಪೃಥಿವೀಮೊದಲಾದವು: ಕಾರಣಕಲೆಗಳು ಬುದ್ಧಿ ಮೊದಲಾದವು.

ಕಾರಣ ಪದಾರ್ಥವೇ ಪತಿ: “ಪಾತಿತಾನ್ ಪಶೂನ್” (ಪಶುಗಳನ್ನು ರಕ್ಷಿಸುವನು) ಎಂಬುದು ಅದರ ನಿರ್ವಚನ. ದುಃಖಾಂತ ರೂಪವಾದ ಮೋಕ್ಷಕ್ಕೆ ಪಶುಪತಿಯ ಅನುಗ್ರಹವೇ ಮುಖ್ಯ. ಜ್ಞಾನ, ವೈರಾಗ್ಯ, ಧರ್ಮ ಮೊದಲಾದವು ಪತಿಯ ಅನುಗ್ರಹ ಸಂಪಾದನೆಗೆ ಆವಶ್ಯಕ.

ಯೋಗ: ಆತ್ಮ ಮತ್ತು ಈಶ್ವರ ಸಂಯೋಗವೇ ಸಮಾಧಿ. ವಿಧಾಯಕೋಪಾಯಗಳು **ವಿಧಿ.** ಅವುಗಳಲ್ಲಿ ಕ್ರಾಥನ, ಸ್ಪಂದನ, ಮುಂಡನ, ಶೃಂಗಾರಣ, ಅವಿತತ್ಕರಣ, ಅವಿತದ್ಭಾಷಣಾದಿಗಳು ದ್ವಾರಗಳು, ಹಸಿತ, ಗೀತ, ನೃತ್ಯ, ಹುಡುಕ್ಕಾರ, ನಮಸ್ಕಾರ, ಜಪ್ಯ, ಉಪಹಾಸಾದಿಗಳು ವ್ರತಗಳು. ಇವುಗಳಿಂದ ಪಾಶುಪತ ವ್ರತಿಯು ಮಹಾದೇವನ ಗಣಗಳ ಪತಿಯಾಗುತ್ತಾನೆ. ಸಾಯುಜ್ಯವೆಂಬ ದುಃಖಾಂತವನ್ನು ಹೊಂದುತ್ತಾನೆ.

> ಶ್ಮಶಾನವಾಸೀ ಧರ್ಮಾತ್ಮಾ ಯಥಾ ಲಬ್ಧೋಪಜೀವಕಃ ।
> ಲಭತೇ ರುದ್ರ ಸಾಯುಜ್ಯಂ ಸದಾ ರುದ್ರಮನುಸ್ಮರೇತ್ ॥
>
> ಛಿತ್ವಾ ದೋಷಾಣಾಂ ಹೇತು ಜಾಲಸ್ಯ ಮೂಲಂ
> ಬುಧ್ಯಾ ಸಂಚಿಂತ್ಯ ಸ್ಥಾಪಯಿತ್ವಾ ಚ ರುದ್ರೇ ।
> ಏಕಃ ಕ್ಷೇಮಿಸನ್ ವೀತಶೋಕೋಽ ಪ್ರಮಾದ್ಧಿ
> ಗಚ್ಛೇತ್ ದುಃಖಾನಾಮಂತಮೀಶ ಪ್ರಸಾದಾತ್ ॥

ನ್ಯಾಯವೈಶೇಷಿಕಗಳ ಸೂತ್ರಕಾರರಾದ ಅಕ್ಷಪಾದ ಕಣಾದರು ಪಾಶುಪತರು. ಪಾಶುಪತರು ರಕ್ತವಸ್ತ್ರಧಾರಿಗಳು ಎಂದು ಬಾಣಕವಿ ವರ್ಣಿಸಿದ್ದಾನೆ.

ಉಜ್ಜಯಿನಿಯ ಮಹಾಕಾಳ ಪೂಜಕರು ಕಾಳಾಮುಖ ಪಾಶುಪತರು. ಅವರು ಲಕುಳೇಶ್ವರ ಸಂಪ್ರದಾಯದವರಾದ್ದರಿಂದ ಲಾಕುಳರೆಂದು ಹೆಸರು.

ಕಾಳಾಮುಖ ಪಾಶುಪತವು ಕೇವಲ ಭಾರತದಲ್ಲಿಯೇ ಅಲ್ಲದೆ ಕಾಂಬೋಡಿಯಾ, ಬೋರ್ನಿಯೋ, ಜಾವಾ ಮುಂತಾದ ದ್ವೀಪಾಂತರಗಳಲ್ಲಿಯೂ ವ್ಯಾಪಿಸಿತ್ತು. ಆಂಧ್ರ ಕರ್ನಾಟಕಗಳಲ್ಲಿದ್ದ ಪಾಶುಪತರು ರಾಜಗುರು ಪದವಿಯಲ್ಲಿಯೂ ಇದ್ದಂತೆ ಶಿಲಾಶಾಸನಗಳಿಂದ ವೇದ್ಯವಾಗುತ್ತದೆ.

೨ ಶುದ್ಧ ಶೈವದರ್ಶನ: ಈ ದರ್ಶನದ ಆಗಮಗಳಲ್ಲಿ ವಿದ್ಯಾ, ಕ್ರಿಯಾ ಮತ್ತು ಯೋಗ ಎಂಬ ಮೂರು ಪಾದಗಳಿವೆ. ವಿದ್ಯಾಪಾದದಲ್ಲಿ ಪತಿ, ಪಶು ಮತ್ತು ಪಾಶ ಎಂಬ ಮೂರು ಪದಾರ್ಥಗಳು.

ಪತಿ ಪರಮಶಿವ. ಅವನು ಸೃಷ್ಟಿ, ಸ್ಥಿತಿ, ಲಯ, ಮೋಕ್ಷ ಮತ್ತು ಗೋಪನ ಎಂಬ ಪಂಚಶಕ್ತಿವಿಶಿಷ್ಟ. ಅಜೇಶ್ವರನು ಪ್ರಪಂಚಕ್ಕೆ ಕೇವಲ ನಿಮಿತ್ತಕಾರಣ.

ಪಶು ಜೀವ; ಅಣುರೂಪ, ಕ್ಷೇತ್ರಜ್ಞ. ಜೀವರಲ್ಲಿ ವಿಜ್ಞಾನಾಕಲ, ಪ್ರಳಯಾಕಲ ಮತ್ತು ಸಕಲ ಎಂದು ಮೂರು ಬಗೆ.

ಪಾಶಗಳು ಮಲ, ಕರ್ಮ, ಮಾಯಾ ಮತ್ತು ರೋಧಕಶಕ್ತಿ ಎಂದು ನಾಲ್ಕು ಬಗೆ. ಸ್ವಾಭಾವಿಕ ಅಶುಚಿಗೆ ಮಲ ಎಂದು ಹೆಸರು. ಇದು ಜೀವನ ದೃಕ್ ಶಕ್ತಿ ಮತ್ತು ಕ್ರಿಯಾಶಕ್ತಿಗಳನ್ನು ಮರೆಮಾಡುವುದು. ಫಲಾಪೇಕ್ಷೆಯಿಂದ ಮಾಡುವ ಕ್ರಿಯೆ ಕರ್ಮ. ಇದು ಧರ್ಮಾಧರ್ಮ ರೂಪ. ಪ್ರಳಯ ಕಾಲದಲ್ಲಿ ಜಗತ್ತು ಯಾವುದರಲ್ಲಿ ಅಡಗುವುದೋ ಮತ್ತು ಸೃಷ್ಟಿ ಕಾಲದಲ್ಲಿ ಯಾವುದರಿಂದ ವ್ಯಕ್ತವಾಗುವುದೋ ಅದು ಮಾಯೆ. ಬಲಕ್ಕೆ ರೋಧಕ ಶಕ್ತಿ ಎಂದು ಹೆಸರು.

ಕ್ರಿಯಾಪಾದದಲ್ಲಿ ಮಂತ್ರ, ಜಪ. ಹೋಮ, ದೀಕ್ಷಾದಿಗಳು ನಿರೂಪಿತವಾಗಿವೆ. ಯೋಗಪಾದದಲ್ಲಿ ಮೂವತ್ತಾರು ತತ್ವಗಳು, ಅಣಿಮಾದಿ ಸಿದ್ಧಿಗಳು ಉಕ್ತವಾಗಿವೆ. ಈ ಮತಕ್ಕೆ ಹತ್ತು ಶೈವಾಗಮಗಳೂ, ಎಂಟು ರೌದ್ರಾಗಮಗಳೂ ಪ್ರಮಾಣ.

ಮತಪ್ರವರ್ತಕರು: ದ್ರವಿಡ ದೇಶದ ತಿರುನಾವಕ್ಕರ್, ತಿರುಜ್ಞಾನ ಸಂಬಂಧಿ, ಸುಂದರ ಮೂರ್ತಿ ನಾಯನಾರ್ ಮುಂತಾದವರು ಕ್ರಿ. ಶ. 7ನೆಯ ಶತಮಾನದಲ್ಲಿ ಈ ಮತಕ್ಕೆ ಪ್ರವರ್ತಕರಾದಂತೆ ತಿಳಿದುಬರುತ್ತದೆ. ಪಲ್ಲವ ಮಹೇಂದ್ರ, ಮಾರವರ್ಮ, ಕೂನ ಪಾಂಡ್ಯ ಮುಂತಾದವರು ಮೇಲೆ ಕಂಡ ಆಚಾರ್ಯರ ಉಪದೇಶದಿಂದ ಜೈನ ಮತವನ್ನು ಬಿಟ್ಟು ಶಿವಭಕ್ತರಾದಂತೆ ಹೇಳಲಾಗಿದೆ. 11ನೆಯ ಶತಮಾನದಲ್ಲಿ ತಿರುನೀಲಕಂಠ ಮಾಣಿಕ್ಯವಾಚಕರ್ ಮುಂತಾದವರಿಂದ ಶಿವಸ್ತೋತ್ರಗಳು ರಚಿತವಾಗಿವೆ. ಅವುಗಳ ಆಧಾರದ ಮೇಲೆ ಅರುಣನಂದಿ, ಅಘೋರ ಶಿವಾಚಾರ್ಯ, ಈಶಾನ ಶಿವಾಚಾರ್ಯ ಮುಂತಾದವರು ಪ್ರಕರಣ ಗ್ರಂಥಗಳನ್ನು, ವ್ಯಾಖ್ಯಾನಗಳನ್ನು ಬರೆದಿದ್ದಾರೆ.

೩ ಪ್ರತ್ಯಭಿಜ್ಞಾ ದರ್ಶನ: ಈ ದರ್ಶನದಲ್ಲಿ ಪರಶಿವನು ಸ್ವಾನನ್ಯಾಶಕ್ತಿಯಿಂದ ಪ್ರತಿಬಿಂಬದಂತೆ ಪ್ರಪಂಚವನ್ನು ಪ್ರಕಾಶಪಡಿಸುವನು. ಇಲ್ಲಿ ಕಾರಣ ಮತ್ತು ಕಾರ್ಯಗಳಿಗೆ ಅಭೇದವು ಅಂಗೀಕೃತವಾಗಿದೆ. ಆದರೂ ಅಣುಗಳು ಕಾರ್ಯ, ಮಲತ್ರಯದಿಂದ ಅಭಿವ್ಯಾಪ್ತನಾದ ಜೀವನು ಅಭೇದ ಜ್ಞಾನವನ್ನು ಮರೆಯುತ್ತಾನೆ. ಈ ಸಿದ್ಧಾಂತದಲ್ಲಿ ಶಿವಶಕ್ತಿಗಳು ಯದ್ಯಪಿ ಅಭಿನ್ನ ಆದರೂ ಸೃಷ್ಟಿಯ ಆದಿಯಲ್ಲಿ ಪರಶಿವನ ಇಚ್ಛಾಶಕ್ತಿಯಿಂದ ಮೊದಲು ಸ್ಪಂದವು ಹುಟ್ಟುತ್ತದೆ. ತರುವಾಯ ನಾದ, ನಾದದಿಂದ ಶಬ್ದ. ಅದರಿಂದ ಮಲವು ಹುಟ್ಟಿ ಸಂಸಾರ ಬಂಧದಲ್ಲಿ ಪರಿಣಮಿಸುತ್ತದೆ. ಕಡೆಯಲ್ಲಿ ಜೀವನು ಯೋಗಶಕ್ತಿಯಿಂದ ಮಲತ್ರಯ ವಿಮುಕ್ತನಾಗಿ ನಿಜ ಶಿವ ಸ್ವರೂಪವನ್ನು ಹೊಂದಿ ಐಕ್ಯನಾಗುತ್ತಾನೆ.

ಈ ಮತಕ್ಕೆ ವಸುಗುಪ್ತ ಕಲ್ಲಟರು ಕಂಡ ಶಿವ ಸೂತ್ರಗಳು ಪ್ರಮಾಣ. ತರುವಾಯ ಸೋಮಾನಂದ, ಅಭಿನವ ಗುಪ್ತ, ಉದಯಾಕರ ಮೊದಲಾದವರು ಈ ಶಾಸ್ತ್ರವನ್ನು ಬೆಳೆಸಿದರು. ಕಾಳಿದಾಸನು ಪ್ರತ್ಯಭಿಜ್ಞಾಶೈವನಿರಬಹುದೆಂದು ಅವನ ಅಭಿಜ್ಞಾನ

ಶಾಕುಂತಲದಿಂದ ಕಂಡು ಬರುತ್ತದೆ ಎಂದು ಕೆಲವರು ಹೇಳುತ್ತಾರೆ.

೪ **ಶೈವವಿಶಿಷ್ಟಾದ್ವೈತ:** ಶಕ್ತಿವಿಶಿಷ್ಟ ಪರಶಿವನೇ ಪರವಸ್ತು. ಇದರ ಮೂಲ ತತ್ವಗಳು ಕೆಲವು ಶೈವ ಪ್ರಭೇದಗಳಾದ ಶಾಕ್ತಮತಗಳಲ್ಲಿಯೂ ಅಂಗೀಕೃತವಾಗಿವೆ. ಶಾಕ್ತರು ಶಕ್ತಿರಹಿತ ಶಿವನು ಶವ ಸದೃಶನೆಂದು ಹೇಳಿ, ಶಕ್ತಿಗೆ ಪ್ರಾಧಾನ್ಯವನ್ನು ಹೇಳುತ್ತಾರೆ. ಶಂಕರಾಚಾರ್ಯರೂ ಸಹ

> ಶಿವಃ ಶಕ್ತ್ಯಾಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ ।
> (ಸೌಂದರ್ಯಲಹರೀ)

ಎಂದು ಹೇಳಿದ್ದಾರೆ.

ಶ್ವೇತ ಮುಂತಾದ ಪಾಶುಪತಾಚಾರ್ಯರ ಸಂಪ್ರದಾಯಕ್ಕೆ ಶ್ರೀಕಂಠ ಶಿವಾಚಾರ್ಯಕೃತ ಬ್ರಹ್ಮಮೀಮಾಂಸಾ ಭಾಷ್ಯವು ಪ್ರಮಾಣ. ಇವರು ವಿಕ್ರಮ ಚೋಳನ ಕಾಲದಲ್ಲಿದ್ದರು. ಚತುರ್ವೇದ ತಾತ್ಪರ್ಯ ಸಂಗ್ರಹವನ್ನು ಬರೆದಿರುವ ಹರದತ್ತ ಶಿವಾಚಾರ್ಯರು ಇವರ ಶಿಷ್ಯರು. ಇವರು ಚೋಳನ ಆಸ್ಥಾನದಲ್ಲಿ ಆಚಾರ್ಯ ರಾಮಾನುಜರ ಶಿಷ್ಯ ಕೂರೇಶನನ್ನು ಗೆದ್ದು ಶಿವಸರ್ವೋತ್ತಮತ್ವವನ್ನು ಸ್ಥಾಪಿಸಿದರು.

ಈ ಮತದಲ್ಲಿ ಶಿವನು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ ಕಾರಣ. ಹಿಂದಿನ ಶೈವಗಳಲ್ಲಿ ಕೇವಲ ನಿಮಿತ್ತ ಕಾರಣತ್ವವನ್ನು ಮಾತ್ರ ಶಿವನಿಗೆ ಹೇಳಿದೆ. ಆದ್ದರಿಂದ ಬ್ರಹ್ಮಸೂತ್ರಕಾರರು "ಪತ್ಯುರಸಾಮಂಜಸ್ಯಾತ್ (ಬ್ರ. ಸೂ. ೨.) ಎಂಬಲ್ಲಿ ಅಂಥ ಪಾಶುಪತವನ್ನು ನಿರಾಕರಿಸಿದ್ದಾರೆ. ಪರಶಿವನು ತನಗೆ ಅನನ್ಯವಾದ ಮಾಯಾಶಕ್ತಿವಿಶಿಷ್ಟ. ಚಿದಚಿದ್ವಸ್ತುಗಳು ಶರೀರ ಭಾವದಿಂದ ಶಿವನಲ್ಲಿ ಅಂತರ್ಭಾವವಾಗುತ್ತವೆ. ಮುಕ್ತಜೀವರು ಅಣುರೂಪದಿಂದ ಸಾಮರಸ್ಯ ಹೊಂದುತ್ತಾರೆ. ಶೈವ ವಿಶಿಷ್ಟಾದ್ವೈತ ಮತ್ತು ವೈಷ್ಣವ ವಿಶಿಷ್ಟಾದ್ವೈತಗಳಿಗೆ ಇರುವ ಸಾದೃಶ್ಯವು ಒಂದೇ. ಎರಡರಲ್ಲಿಯೂ ಸಾರೂಪ್ಯ ರೂಪವಾದ ಮುಕ್ತಿಯೇ ಅಂಗೀಕೃತವಾಗಿದೆ. ಶ್ರೀಕಂಠ ಶಿವಾಚಾರ್ಯರ ಬ್ರಹ್ಮಮೀಮಾಂಸಾ ದರ್ಶನಕ್ಕೆ 16ನೆಯ ಶತಮಾನದಲ್ಲಿದ್ದ ಅಪ್ಪಯ್ಯ ದೀಕ್ಷಿತರು "ಶಿವಾರ್ಕಮಣಿದೀಪಿಕಾ" ಎಂಬ ಬೃಹದ್ವ್ಯಾಖ್ಯಾನವನ್ನು ಬರೆದಿದ್ದಾರೆ.

೫ **ರಸೇಶ್ವರ ದರ್ಶನ:** ಶೈವರಲ್ಲಿ ಕೆಲವರು ಜೀವನು ಪರಶಿವನಿಂದ ಭಿನ್ನನೆಂದೂ, ಜೀವನ್ಮುಕ್ತಿಯು ಎಲ್ಲರಿಗೂ ಅಭಿಮತವೆಂದೂ ಹೇಳುತ್ತಾರೆ. ಜೀವನ್ಮುಕ್ತಿಗೆ ಶರೀರ ಸ್ಥೈರ್ಯವು ಮುಖ್ಯ. ಯದ್ಯಪಿ ಶರೀರವು ವಿನಾಶ ಹೊಂದುವುದಾದರೂ ಅದು ರಸಯೋಗದಿಂದ ಸ್ಥಿರವಾಗುವುದೆಂದು ಅವರು ಹೇಳುತ್ತಾರೆ. ಯೋಗಿಯು ರಸ ಸೇವನೆಯಿಂದ ಶರೀರ ಸ್ಥೈರ್ಯವನ್ನು ಸಂಪಾದಿಸಿ ಜೀವನ್ಮುಕ್ತಿಯನ್ನು ಅನುಭವಿಸಬಲ್ಲನು. ಜೀವನು ಸಂಸಾರದಶೆಯಲ್ಲಿರುವಾಗಲೇ ಇದೇ ಶರೀರದಲ್ಲಿ ಮುಕ್ತಿ ಸುಖವನ್ನು ಅನುಭವಿಸಬಲ್ಲನು. ಶರೀರವಿಲ್ಲದಲ್ಲಿ ಮುಕ್ತಿ ಸುಖವೆಲ್ಲಿ ಬರಬೇಕು. ? ಮುಕ್ತಿ ಬದುಕಿರುವಾಗಲೇ ಹೊರತು ಆಮೇಲೆ ಅಲ್ಲ. ಆದ್ದರಿಂದ ರಸದಿಂದ ದಿವ್ಯ ದೇಹವನ್ನು ಸಂಪಾದಿಸಿ, ಶಾಸ್ತ್ರಾಭ್ಯಾಸದಿಂದ ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡು ಪುರುಷಾರ್ಥವನ್ನು ಪಡೆಯಬೇಕು.

೬ **ವಿಶೇಷಾದ್ವೈತ–ಶಕ್ತಿವಿಶಿಷ್ಟಾದ್ವೈತ:** ಆಂಧ್ರ, ಕರ್ಣಾಟಕ ದೇಶಗಳಲ್ಲಿದ್ದ ಶುದ್ಧಾದ್ವೈತ, ಕಾಶ್ಮೀರ ಶೈವ, ಲಕುಲೀಶ, ಕಾಳಾಮುಖ, ಪಾಶುಪತ, ನಾಥಪಂಥ ಮತ್ತು ಶ್ರೀಕಂಠ ಮತಗಳು 12ನೆಯ ಶತಮಾನದಿಂದೀಚೆಗೆ ವಿಶೇಷಾದ್ವೈತವೆಂದು ಕರೆಯಲ್ಪಟ್ಟಿರುವ ವೀರಶೈವದಲ್ಲಿಯೇ ಅಂತರ್ಭಾವವಾದಂತೆ ಐತಿಹಾಸಿಕರು ಒಪ್ಪುತ್ತಾರೆ.

ಈ ಮತದ ಸಂಸ್ಥಾಪಕರು ಕಲಿಯುಗಾಚಾರ್ಯರೆನಿಸಿರುವ ರೇಣುಕಾದಿ ಪಂಚಾಚಾರ್ಯರು ಎಂದು ಶಿವಾಗಮಗಳಲ್ಲಿ ಹೇಳಿದೆ. ಇವರ ಸಿಂಹಾಸನಗಳು ಆಸೇತು ಶೀತಾಚಲದವರೆಗೆ ಹಬ್ಬಿರುವ ಭಾರತವರ್ಷದ ಪ್ರಸಿದ್ಧ ಶೈವಕ್ಷೇತ್ರಗಳೆನಿಸಿರುವ ಕೊಲ್ಲಿಪಾಕಿ, (ಆಂಧ್ರ ರಾಜ್ಯ) ಮಹಾಕಾಳ ಉಜ್ಜಯಿನಿ (ಮಧ್ಯ ಪ್ರದೇಶ) ಶ್ರೀಶೈಲ (ಆಂಧ್ರ) ಕಾಶಿ ಮತ್ತು ಹಿಮವತ್ಕೇದಾರಗಳಲ್ಲಿವೆ. ಮುಂದೆ ಇವುಗಳಲ್ಲಿನ ಮೊದಲು ಎರಡು ಎಂದರೆ ಕ್ರಮವಾಗಿ ರಂಭಾಪುರಿ (ಮೈಸೂರು ರಾಜ್ಯ–ಚಿಕ್ಕಮಗಳೂರು) ಉಜ್ಜಯಿನಿ (ಮೈಸೂರು ರಾಜ್ಯ–ಕೂಡಲಿಗಿ ತಾ.)ಗಳಿಗೆ ಸ್ಥಳಾಂತರಿಸಿದಂತೆ ತಿಳಿದುಬರುತ್ತದೆ. ಈ ಸಿಂಹಾಸನಗಳನ್ನು ಕ್ರಮವಾಗಿ (ರೇಣುಕಾಚಾರ್ಯರು) ವೀರ ಸಿಂಹಾಸನ(ದಾರುಕಾಚಾರ್ಯರು)ಧರ್ಮ ಸಿಂಹಾಸನ.(ಏಕೋರಾಮಾರಾಧ್ಯರು) ವೈರಾಗ್ಯ ಸಿಂಹಾಸನ. (ಪಂಡಿತಾರಾಧ್ಯರು) ಸೂರ್ಯ ಸಿಂಹಾಸನ (ವಿಶ್ವಾರಾಧ್ಯರು) ಜ್ಞಾನ ಸಿಂಹಾಸನ ಎಂದು ಕರೆಯಲಾಗಿದೆ. ಶೈವಾಗಮಗಳಲ್ಲಿ ಮೇಲೆ ಕಂಡ ಆಚಾರ್ಯರಲ್ಲಿ ಏಕಾಕ್ಷರ, ದ್ವ್ಯಕ್ಷರ, ಚತುರಕ್ಷರ. ಮತ್ತು ಪಂಚಾಕ್ಷರ ಎಂದು ಕೃತಯುಗದಲ್ಲಿಯೂ, ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರ್ವಕ್ತ್ರ ಮತ್ತು ಪಂಚವಕ್ತ್ರ ಎಂದು ತ್ರೇತಾಯುಗದಲ್ಲಿಯೂ, ರೇಣುಕ, ದಾರುಕ ಘಂಟಾಕರ್ಣ, ಧೇನುಕರ್ಣ ಮತ್ತು ವಿಶ್ವಕರ್ಣರೆಂದು ದ್ವಾಪರದಲ್ಲಿಯೂ ಇದ್ದಂತೆ ಹೇಳಿದೆ. ಇವೇ ಪವಿತ್ರನಾಮಗಳು ಪಾಲ್ಕುರಿಕೆ ಸೋಮನಾರಾಧ್ಯರ ಗಣಸಹಸ್ರನಾಮಾವಳಿಯಲ್ಲಿ ಸ್ಪಷ್ಟವಾಗಿ ಉಲ್ಲಿಖಿತವಾಗಿದೆ.

ದರ್ಶನ ಸ್ವರೂಪ: ಪೂರ್ವದಲ್ಲಿ ಅಗಸ್ತ್ಯಮಹರ್ಷಿಯು ಬರೆದ ವೈಯಾಸಿಕ ಸೂತ್ರವೃತ್ತಿಯನ್ನು ಅಧಿಕರಿಸಿ ಶ್ರೀಪತಿ ಪಂಡಿತಾರಾಧ್ಯರು (ಕ್ರಿ. ಶ. 11ನೇ ಶತಮಾನ) ಶ್ರೀಕರಭಾಷ್ಯ

ವನ್ನು ಬರೆದಿದ್ದಾರೆ. ಇದಲ್ಲದೆ ಈ ಸಿದ್ಧಾಂತ ಪ್ರತಿಪಾದಕವಾದ "ನೀಲಕಂಠ ಭಾಷ್ಯ" ವೊಂದಿದ್ದು ಅದರ ಕಾರಿಕಾರೂಪವಾದ "ಕ್ರಿಯಾಸಾರ"ವೆಂಬ ಗ್ರಂಥವನ್ನು ಕ್ರಿ. ಶ. 14ನೆಯ ಶತಮಾನದಲ್ಲಿದ್ದ ಮತ್ತೊಬ್ಬ ನೀಲಕಂಠ ಶಿವಾಚಾರ್ಯರು ಬರೆದಿದ್ದಾರೆ. ಮೇಲೆ ಕಂಡ ಮೂಲ ಭಾಷ್ಯಕಾರರಾದ ನೀಲಕಂಠ ಶಿವಾಚಾರ್ಯರು ಶಿರೋಲಿಂಗಧಾರಿ ಜಂಗಮಾಚಾರ್ಯರೆನಿಸಿ ಕ್ರಿ. ಶ. 8ನೆಯ ಶತಮಾನದಲ್ಲಿದ್ದ ಆಚಾರ್ಯ ಶಂಕರರೊಡನೆ ವಾದಿಸಿದುತೆ ಆನಂದಗಿರಿ ಕೃತ ಶಂಕರ ದಿಗ್ವಿಜಯದಿಂದ ವೇದ್ಯವಾಗುತ್ತದೆ. ಇದೆಲ್ಲಕ್ಕೆ ಕ್ರಿ. ಶ. 12ನೆಯ ಶತಮಾನದಲ್ಲಿದ್ದ ಸ್ವಪ್ರಭಾನಂದ ಶಿವಾಚಾರ್ಯರು ತಮ್ಮ ಶಿವಾದ್ವೈತ ಮಂಜರಿಯಲ್ಲಿಯೂ ಕ್ರಿ. ಶ. 17ನೆಯ ಶತಮಾನದವರಾದ ಮರಿತೋಂಟದಾರ್ಯರು ತಮ್ಮ ವೀರಶೈವಾನಂದ ಚಂದ್ರಿಕೆಯಲ್ಲಿಯೂ ಸಹ ಬ್ರಹ್ಮಸೂತ್ರದ ಚತುಸ್ಸೂತ್ರಿಗೆ ವೀರಶೈವ ಶಿದ್ಧಾಂತದ ಪರವಾಗಿ ವ್ಯಾಖ್ಯಾನ ಬರೆದಿದ್ದಾರೆ.

ಭಗವಾನ್ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಬೋಧಿಸಿದ ಏಕೋತ್ತರ ಶತಸ್ಥಲ ಬೋಧಕವಾದ ಸಿದ್ಧಾಂತ ಶಿಖಾಮಣಿ (ಕ್ರಿ. ಶ. 10 ಶತಮಾನಪೂರ್ವ) ಮತ್ತು ಈಶ, ಕೇನ, ಮುಂಡಕ, ಮಹಾನಾರಾಯಣ, ಸಿದ್ಧಾಂತಶಿಖಾ ಮುಂತಾದ ಉಪನಿಷತ್ತುಗಳಿಗೆ ಈ ಸಿದ್ಧಾಂತ ಪರವಾಗಿ ರಚಿಸಿರುವ ಉಪನಿಷತ್ ಭಾಷ್ಯಗಳು ಈ ಮತದ ಪ್ರಮಾಣ ಗ್ರಂಥಗಳೆನಿಸಿವೆ.

ಶ್ರೀಪತಿಪಂಡಿತಾರಾಧ್ಯರು ತಮ್ಮ ಭಾಷ್ಯಾರಂಭದಲ್ಲಿ ಈ ಸಿದ್ಧಾಂತ ಸ್ವರೂಪವನ್ನು ಹೀಗೆ ಸಂಗ್ರಹಿಸಿದ್ದಾರೆ.

> ಶ್ರುತ್ಯೈಕದೇಶ ಪ್ರಾಮಾಣ್ಯಂ ದ್ವೈತಾದ್ವೈತ ಮತಾದಿಷು ।
> ದ್ವೈತಾದ್ವೈತ ಮತೇ ಶುದ್ಧೇ ವಿಶೇಷಾದ್ವೈತ ಸಂಜ್ಞಕೇ
> ವೀರಶೈವೈಕ ಸಿದ್ಧಾಂತೇ ಸರ್ವ ಶ್ರುತಿ ಸಮನ್ವಯಃ ॥

ದ್ವೈತ ಮತ್ತು ಅದ್ವೈತ ಮತಗಳಲ್ಲಿ ಶ್ರುತಿಗಳ ಏಕ ದೇಶಕ್ಕೆ ಮಾತ್ರ ಪ್ರಾಮಾಣ್ಯವುಂಟು. ದ್ವೈತಾದ್ವೈತ ಅಥವಾ ಭೇದಾಭೇದವೆಂದು ಪ್ರಸಿದ್ಧವಾದ ವೀರಶೈವ ಸಿದ್ಧಾಂತದಲ್ಲಿ ಮಾತ್ರ ಎಲ್ಲ ಶ್ರುತಿಗಳಿಗೂ ಪ್ರಾಮಾಣ್ಯವುಂಟು.

ಮೇಲಾಗಿ ಶ್ರೀಪತಿ ಪಂಡಿತರು ತಾವು ಹೇಳುವ ವಿಶೇಷಾದ್ವೈತ. ಎಂಬ ಪದನಿರ್ವಚನವನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ.

> ವಿಶಬ್ದೇನೋಚ್ಯತೇ ಶಂಭುರ್ಹಂಸಹಂಸೇತಿ ಮಂತ್ರತಃ ।
> ಶೇಷಶಬ್ದೇನ ಶಾರೀರೋ ಯಥಾಗ್ನೇರಿತಿ ಮಂತ್ರತಃ
> ಅದ್ವೈತೇನ ಭವೇದ್ಯೋಗೋ ಯಥಾನದ್ಯ ಇತಿ ಶ್ರುತೇಃ ॥

ಎಂದು ಹೇಳಿ ಭಾಷ್ಯಕಾರರೇ ಈ ಕಾರಿಕೆಯನ್ನು ವಿವರಿಸಿದ್ದಾರೆ. "ವಿಶ್ವಶೇಷಶ್ಚ ವಿಶೇಷಾ; ವಿಶೇಷಯೋರದ್ವೈತಂ ವಿಶೇಷಾದ್ವೈತಂ" ಎಂದರೆ "ವಿ" ಎಂದರೆ ಪರಮಾತ್ಮ (ವಿಶ್ಚ ಕ್ಷುಷಿವ್ಯೋಮ್ನಿ ವಾತೇ ಪಾರಮಾತ್ಮಾನಿ ಪಾಕ್ಷಿಣಿ, ನಿಘಂಟು) ಜಗತ್ತಿಗೆ ಕಾರಣನಾದ ಪರಬ್ರಹ್ಮ. ಶೇಷ ಎಂದರೆ ಜೀವ, "ಯಥಾಗ್ನೇಃ ವಿಸ್ಫುಲಿಂಗಾಃ ಪ್ರಭವಂತಿ" ಮುಂತಾದ ಮಂತ್ರಗಳಲ್ಲಿ ಮತ್ತು "ಅಂಶೋನಾನಾವ್ಯಪದೇಶಾತ್" ಮುಂತಾದ ಸೂತ್ರಗಳಲ್ಲಿ ಜೀವನು ಶಿವನ ಅಂಶವೆಂದು ಹೇಳಿದೆ. ಆದ್ದರಿಂದ ಶಿವ–ಜೀವರಿಗೆ ಶೇಷ ಶೇಷಿಭಾವವು ವ್ಯಕ್ತವಾಗುತ್ತದೆ. "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂಗಚ್ಛಂತಿ" (ಮುಂಡಕ) ಎಂಬ ಶ್ರುತಿಯು ಶಿವಜೀವರಿಗೆ ನದೀಸಮುದ್ರ ನ್ಯಾಯದಿಂದ ಸಾಮರಸ್ಯವನ್ನು ಹೇಳುತ್ತದೆ. (ಶ್ರೀಕರ ಭಾಷ್ಯ 1–3–2)

ದರ್ಶನ ಸ್ವರೂಪ: ಈ ಸಿದ್ಧಾಂತದಲ್ಲಿ ಮುಕ್ತಿಗೆ ಸಾಧಕವಾದದ್ದು ಲಿಂಗ ಧಾರಣ. "ಅಮೃತಸ್ಯ ದೇವಧಾರಣೋ ಭೂಯಾಸಂ" ಎಂಬ ಶ್ರುತಿಯು ಮೋಕ್ಷಕ್ಕೆ ಲಿಂಗ ಧಾರಣಾತ್ಮಕವಾದ ಶಿವದೀಕ್ಷೆ ಅತ್ಯಾವಶ್ಯಕ ಎಂದು ಹೇಳಲಾಗಿದೆ. ಈ ಭಾಷ್ಯಾರಂಭದಲ್ಲಿಯೇ ಆಚಾರ್ಯರು ಅಥಶಬ್ದನಿರ್ವಚನವನ್ನು ಮಾಡುವಾಗ ಅಷ್ಟಾವರಣ, ಪಂಚಾಚಾರ ವಿಶಿಷ್ಟವಾದ ಷಟ್‌ಸ್ಥಲ ತತ್ತ್ವ ಜ್ಞಾನ ಸಾಧಕವಾದ ಲಿಂಗಧಾರಣಾತ್ಮಶಿವದೀಕ್ಷೆಯ ತರುವಾಯವೇ ಬ್ರಹ್ಮಾಜಿಜ್ಞಾಸಾಧಿಕಾರವು ಸಾಧಕನಿಗೆ ಬರುತ್ತದೆ ಎಂದು ಸಿದ್ಧಾಂತ ಮಾಡಿದ್ದಾರೆ.

ಪರಬ್ರಹ್ಮವು ಸೂಕ್ಷ್ಮ ಚಿದಚಿತ್ ಶಕ್ತಿವಿಶಿಷ್ಟ. ಜೀವನು ಸ್ಥೂಲ ಚಿದಚಿದ್ ಶಕ್ತಿವಿಶಿಷ್ಟ. ಉಭಯವಿಧ ಶಕ್ತಿಗಳಿಂದ ಕೂಡಿದ ಶಿವಜೀವರ ಅದ್ವೈತವೇ ಶಕ್ತಿ ವಿಶಿಷ್ಟಾದ್ವೈತ. (ಶಕ್ತಿಶ್ಚ ಶಕ್ತಿಶ್ಚ ಶಕ್ತೀ. ತಾಭ್ಯಾಂ ವಿಶಿಷ್ಟೌ ಜೀವೇಶೌ ಶಕ್ತಿ ವಿಶಿಷ್ಟೌ, ತಯೋಃ ಅದ್ವೈತಂ ಶಕ್ತಿ ವಿಶಿಷ್ಟಾದ್ವೈತಂ) ಎಂದು ಈ ಶಕ್ತಿ ವಿಶಿಷ್ಟಾದ್ವೈತ ಪದವನ್ನು ನಿರ್ವಚಿಸಲಾಗಿದೆ. ಶಿವನು ಸರ್ವಜ್ಞತ್ವವನ್ನು ಮತ್ತು ಸರ್ವಕರ್ತೃತ್ವರೂಪವಾದ ಸೂಕ್ಷ್ಮ ಚಿದಚಿತ್‌ಶಕ್ತಿವಿಶಿಷ್ಟ. ಶಿವಾಂಶನಾದ ಜೀವನಾದರೊ ಕಿಂಚಿಜ್ಞತ್ವ ಮತ್ತು ಕಿಂಚಿತ್ಕರ್ತೃತ್ವರೂಪ ಸ್ಥೂಲ ಶಕ್ತಿ ವಿಶಿಷ್ಟ. ಗುರು ಕೃಪಾ ಪಾತ್ರನಾದ ಜೀವನನ್ನೂ ಪಿಂಡ ಎಂದು ಕರೆಯಲಾಗಿದೆ. ಪುಣ್ಯಾಧಿಕನೂ, ಕ್ಷೀಣಪಾಪನೂ ಆದವನೇ ಪಿಂಡನೆನಿಸುವನು. ಇಂಥವನಲ್ಲಿ ಪರಶಿವನ ಕೃಪಾದೃಷ್ಟಿ ಬೀಳುತ್ತದೆ. ಅದಕ್ಕೆ "ಶಕ್ತಿಪಾತ"ವೆಂದು ಹೆಸರು. ಶಿವಭಕ್ತಿ, ಶಿವಜ್ಞಾನ, ಶಿವಶಾಸ್ತ್ರಗಳಲ್ಲಿ ಆಸಕ್ತಿ ಮತ್ತು ಭವಕ್ಕೆ ಕಾರಣವಾದ ಆಸುರೀ ಗುಣಗಳಲ್ಲಿ ವಿರಕ್ತಿ ಇರುವುದೇ ಶಕ್ತಿಪಾತದ ಹೆಗ್ಗುರುತು. "ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದ್ಗುರುಃ" ಎಂಬ ರೇಣುಕರ ಉಕ್ತಿಯಂತೆ ಸುಸಂಸ್ಕಾರಿಯಾದ ಸಾಧಕನು ಭಕ್ತಿ ಸಂಯೋಗದಿಂದ ಗುರು ಕಾರುಣ್ಯಕ್ಕೆ ಪಾತ್ರನಾಗಿ ಶಿವದೀಕ್ಷೆ ಪಡೆಯುತ್ತಾನೆ.

ಶಕ್ತಿಪಾತ ಉಂಟಾಗುವುದಕ್ಕೆ ಜಾತಿ ಮತ ಕೋಮುಗಳ ಪರಿವೆಯಿರುವುದಿಲ್ಲ.

ಬ್ರಹ್ಮಚಾರೀ ಗೃಹಸ್ಥೋವಾ ವಾನಪ್ರಸ್ಥೋ ಯತಿಸ್ತು ವಾ ।
ಬ್ರಾಹ್ಮಣಃ ಕ್ಷತ್ರಿಯೋವಾಪಿ ವೈಶ್ಯಃ ಶೂದ್ರ ಏವ ವಾ ॥
ಯಸ್ತು ಲಿಂಗಾಂಗ ಸಂಯುಕ್ತಃ ಸ ಏವಾತ್ಯಾಶ್ರಮೀ ಭವೇತ್ ॥

ಎಂದರೆ ಅತ್ಯಾಶ್ರಮ ವ್ರತಕ್ಕೆ, ಬ್ರಾಹ್ಮಣಾದಿ ಜಾತಿಗಳ ಅಥವಾ ಬ್ರಹ್ಮಚರ್ಯಾದಿ ಆಶ್ರಮಗಳ ಪರಿವೆ ಇರುವುದಿಲ್ಲ. ಶಿವದೀಕ್ಷೆಗೆ ಶಕ್ತಿಪಾತವೇ ಮುಖ್ಯ. ಶಿವಕೃಪಾದೃಷ್ಟಿಗೆ ಪವಿತ್ರನಾದವನೇ ಶಿವದೀಕ್ಷಾಧಿಕಾರಿ ಎಂದು ಹೇಳಲಾಗಿದೆ. ಅತ್ಯಾಶ್ರಮ ವ್ರತ, ಶಿರೋವ್ರತ, ಶಾಂಭವ ವ್ರತ, ಮತ್ತು ಮಹಾವ್ರತ ಎಂಬ ಹೆಸರುಗಳ ಆಜನ್ಮಲಿಂಗ ಧಾರಣ ವ್ರತಸ್ಥನಿಗೆ ಉಕ್ತವಾಗಿ ರುವುದಾಗಿ ಕೈವಲ್ಯ ಮುಂಡಕ, ಶ್ವೇತಾಶ್ವೇತರಾದಿ ಉಪನಿಷತ್ತುಗಳಲ್ಲಿ ಹೇಳಿದೆ.

ಈ ಸಿದ್ಧಾಂತದಲ್ಲಿ ಸ್ತ್ರೀಯರಿಗೂ ಲಿಂಗ ಧಾರಣವುಂಟು. ಆಜೀವ ಪರ್ಯಂತವೂ ಕೈಗೊಂಡ ಲಿಂಗಪೂಜಾ ಮಹಾವ್ರತಕೆ ಮಾತ್ರ ಜಾತಿ ಸೂತಕ, ಜನನ ಸೂತಕ, ರಜಸ್ಸೂತಕ, ಉಚ್ಛಿಷ್ಟ ಸೂತಕ ಮುಂತಾದ ಪಂಚಸೂತಕಗಳಿರುವುದಿಲ್ಲ.

ಈ ಸಿದ್ಧಾಂತದಲ್ಲಿ ಜಗತ್ತು ಸತ್ಯ, ಅದು ಅದ್ವೈತಿಗಳು ಹೇಳುವಂತೆ ಮಿಥ್ಯೆ ಅಲ್ಲ. ಸುವರ್ಣವು ತನ್ನ ಸುವರ್ಣತ್ವವನ್ನು ಕಳೆದುಕೊಳ್ಳದೆ ನಾನಾ ಬಗೆಯ ಆಭರಣಗಳಾಗಿ ಪರಿಣಾಮಹೊಂದುವಂತೆ ಶಕ್ತಿವಿಶಿಷ್ಟ ಶಿವನೇ ಚರಾಚರಾತ್ಮಕವಾದ ವಿಶ್ವವಾಗಿ ಪರಿಣಾಮಹೊಂದುವವನು ಎಂದು ಪ್ರತಿಪಾದಿಸಲಾಗಿದೆ. “ಬ್ರಹ್ಮಸ್ಯಾಂ ಪ್ರಜಾಯೇಯ (ತೈತ್ತಿರೀಯ) (ನಾನೇ ನಾನಾ ವಿಧ ಪ್ರಪಂಚವಾಗಿ ಪರಿಣಮಿಸುವೆನು). “ಯಥೋರ್ಣನಾಭಿಃ ಸೃಜತೇ ಗೃಹ್ಣತೇಚ (ಮುಂಡಕ) ಜೇಡರ ಹುಳು ತನ್ನ ಎಂಜಿಲಿನಿಂದ ಬಲೆ ರಚಿಸುವಂತೆ ಶಿವನು ತನ್ನ ಶಕ್ತಿ ಸಹಾಯದಿಂದ ಪ್ರಪಂಚ ರೂಪವಾಗಿ ಪರಿಣಮಿಸುವನು.

ಹೀಗೆ ಪ್ರವೃತ್ತಿ ಮಾರ್ಗದಲ್ಲಿ ಜಗತ್ ಸೃಷ್ಟಿಗೆ ಕಾರಣವಾದ ಶಿವಗತ ಶಕ್ತಿಯೇ ನಿವೃತ್ತಿ ಮಾರ್ಗದಲ್ಲಿ ಶಿವಾಂಶನಾದ ಜೀವನನ್ನು ಹೊಂದಿ ಭಕ್ತಿಯೆನಿಸುತ್ತದೆ. ಮುಂದೆ ಆಣವ, ಮಾಯಾ ಮತ್ತು ಕಾರ್ಮಮಲ ವಿಶಿಷ್ಟನಾದ ಜೀವನು ಶಿವದೀಕ್ಷೆಯಿಂದ ಮಲವಿಮುಕ್ತನಾಗುತ್ತಾನೆ. ಆಗಲೇ ಅವನು ಭಕ್ತನೆನಿಸುವನು. ಈ ಭಕ್ತಿಯು ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸ ಎಂದು ಆರುವಿಧ. ಸಾಧಕನ ಸಾಧನೆಯಿಂದ ಆರು ರೂಪಗಳನ್ನು ತಳೆದ ಭಕ್ತಿಯು ಅವನನ್ನು ಕ್ರಮವಾಗಿ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಹಂತಗಳಲ್ಲಿ ಕೊಂಡೊಯ್ದು ಲಿಂಗಾಂಗ ಸಾಮರಸ್ಯ ರೂಪ ಮೋಕ್ಷವನ್ನು ನೀಡುವುದೆಂಬುದೇ ಈ ಸಿದ್ಧಾಂತದ ಹೃದಯ.

ಈ ಬಗೆಯ ಸಾಧನೆಗೆ ಲಿಂಗ ಧಾರಣವು ಅಗತ್ಯ. ಗುರುವು ಶಿಷ್ಯನಿಗೆ ಧರಿಸುವ ಬಾಹ್ಯ ಪಂಚಸೂತ್ರ ಘಟಕ ಶಿವಲಿಂಗದಲ್ಲಿ ಸ್ಥಾಪಿಸುವ ಶಿವ ಕಲೆ ಸ್ಥಾವರ ಲಿಂಗಗಳಲ್ಲಿ ಸ್ಥಾಪಿಸುವ ಕೈಲಾಸ ಶಿವನ ಕಲೆಯಲ್ಲ, ಅದು ಶಿಷ್ಯನ ಹೃದಯ ಕೋಶದಲ್ಲಿರುವ ಚೈತನ್ಯಾತ್ಮಕ ಪ್ರಾಣಲಿಂಗ ಕಲೆ. ಮಾನವನ ಆಧಾರ, ಹೃದಯ ಮತ್ತು ಭ್ರೂಮಧ್ಯಗಳಲ್ಲಿ ಜ್ಯೋತಿರ್ಲಿಂಗವು ಯಾವಾಗಲೂ ಜಾಗೃತವಾಗಿರುವುದೆಂದು ಶಾಸ್ತ್ರಗಳು ಘೋಷಿಸಿವೆ. ಆ ಕಲೆಯನ್ನೇ ಗುರುವು ತನ್ನ ಯೋಗ ಶಕ್ತಿಯಿಂದ ದೃಷ್ಟಿಯೋಗದಿಂದ ಆಕರ್ಷಿಸಿ ಲಿಂಗದಲ್ಲಿ ಸ್ಥಾಪಿಸಿ ಅದನ್ನು ಅವನ ಕರಪೀಠದಲ್ಲಿ ಸ್ಥಾಪಿಸುತ್ತಾನೆ. ಮಗ್ಗೆಮಾಯಿದೇವರು ಈ ಸ್ಥಿತಿಯನ್ನು ಬಹು ಸುಂದರವಾಗಿ ನಿರೂಪಿಸಿದ್ದಾರೆ. ಒಂದು ಗೋವಿಗೆ ರೋಗ ಬರಲು ವೈದ್ಯನು ಗೋವಿನ ಹಾಲನ್ನೇ ಕರೆದು ಅದರಿಂದ ತುಪ್ಪ ಮಾಡಿ ಅದರ ಜೊತೆಗೆ ಔಷಧ ಸೇರಿಸಿ ಗೋವಿಗೆ ಕೊಟ್ಟು ಅದರ ಬೇನೆಯನ್ನು ಪರಿಹರಿಸುತ್ತಾನೆ. ಅದರಂತೆ ಭವರೋಗವೈದ್ಯನಾದ ಗುರು ಜೀವನಿಗೆ ಬಂದಿರುವ ಜನನ ಮರಣಾತ್ಮಕವಾದ ರೋಗವನ್ನು ಅದೇ ಶಿಷ್ಯನ ಹೃದಯಗತ ಶಿವಚೈತನ್ಯವನ್ನೇ ಹೊರತೆಗೆದು ಲಿಂಗದಲ್ಲಿ ಸ್ಥಾಪಿಸಿ, ಅದರ ಉಪಾಸನ, ಧ್ಯಾನಾದಿಗಳಿಂದ ಭವರೋಗವನ್ನು ಕಳೆಯುತ್ತಾನೆ. ಹೀಗೆ ಲಿಂಗ ಪೂಜಾನುಷ್ಠಾನ ಪರನಾದ ಸಾಧಕನು ಹಿಂದೆ ಹೇಳಿದ ಶ್ರದ್ಧಾ ನಿಷ್ಠಾ ಮುಂತಾದ ಭಕ್ತಿಪ್ರಬೇದಗಳಿಂದ ಲಭಿಸಿದ ಭಕ್ತಮಾಹೇಶ ಮುಂತಾದ ಸ್ಥಾನಗಳಲ್ಲಿ ಆತ್ಮವಿಕಾಸವನ್ನು ಹೊಂದಿ ಕಡೆಗೆ ಆರನೆಯ ಐಕ್ಯ ಸ್ಥಳದಲ್ಲಿ ಮಹಾಲಿಂಗದಲ್ಲಿ ನೀರು–ನೀರು ಬೆಂಕಿ-ಬೆಂಕಿಯಲ್ಲಿ ಸೇರುವಂತೆ ಸಮರಸಹೊಂದುವನೆಂದು ಹೇಳಲಾಗಿದೆ. ಆಚಾರ್ಯ ರೇಣುಕ ಭಗವತ್ಪಾದರು ಇಂಥ ಐಕ್ಯಸ್ಥಿತಿಯನ್ನು ಕುರಿತು

ಜಲೇ ಜಲಮಿವನ್ಯಸ್ತಂ ವಹ್ನೌವಹ್ನಿರಿವಾರ್ಪಿತಂ ।
ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ॥

ಎಂದು ಅಪ್ಪಣೆ ಮಾಡಿದ್ದಾರೆ.

ಈ ಬಗೆಯ ಸಿದ್ಧಿಗೆ ಸಾಧಕವಾಗಿ ಗುರು–ಲಿಂಗ-ಜಂಗಮ, ಭಸ್ಮ, ರುದ್ರಾಕ್ಷ, ಮಂತ್ರ, ತೀರ್ಥ ಮತ್ತು ಪ್ರಸಾದವೆಂಬ ಅಷ್ಟಾವರಣಗಳೂ, ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ ಮತ್ತು ಗಣಾಚಾರ ಎಂಬ ಪಂಚ ಆಚಾರಗಳೂ ಉಕ್ತವಾಗಿವೆ.

ಇಷ್ಟಲಿಂಗ ಧಾರಣದ ಸಮಯದಲ್ಲಿಯೇ ಗುರುವು ಶಿಷ್ಯನ ಸ್ಥೂಲ ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ಇಷ್ಟ ಪ್ರಾಣ ಮತ್ತು ಭಾವಲಿಂಗಗಳನ್ನು ಮತ್ತು ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳಲ್ಲಿ ಕ್ರಮವಾಗಿ ಆಚಾರಲಿಂಗ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮತ್ತು ಮಹಾಲಿಂಗಗಳನ್ನು ಸ್ಥಾಪಿಸುವುದರಿಂದ ಜೀವನು ಸ್ವೀಕರಿಸುವ ಪಂಚ ವಿಷಯಗಳು ಆಯಾ ಲಿಂಗಾರ್ಪಿತವಾಗಿ ಪ್ರಸಾದ ರೂಪವಾಗುತ್ತವೆ.

ಆಗ ಲಿಂಗವಂತನು ಲಿಂಗಭೋಗೋಪಭೋಗಿಯೆನಿಸಿ ಪ್ರಸಾದ ಕಾಯನಾಗಿ ಜೀವನ್ಮುಕ್ತನೆನಿಸುತ್ತಾನೆ.

> ಯತ್ಕರೋಷಿ ಯದಶ್ನಾತಿ ಯಜ್ಜುಹೋಷಿ ದದಾಸಿಯತ್ ।
> ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಮ್ ॥

ಎಂದು ಗೀತಾಚಾರ್ಯರು ಹೇಳಿರುವ ಸಾಧನ ಮಾರ್ಗವು ಇದನ್ನೇ ಪ್ರತಿಬಿಂಬಿಸುತ್ತದೆ. ಈ ಎಲ್ಲ ದೃಷ್ಟಿಗಳಿಂದಲೂ ವೀರಶೈವವು ಎಲ್ಲ ಶೈವ ದರ್ಶನಗಳಲ್ಲಿ ಮೂರ್ಧನ್ಯಪ್ರಾಯವಾಯಿತು. ಆದ್ದರಿಂದಲೇ ಎಲ್ಲ ಶೈವ ಪಂಥಗಳೂ ಈ ವೀರಶೈವದಲ್ಲಿಯೇ ಬಹುತೇಕ ಅಂತರ್ಭಾವವಾದದ್ದು.

With Best Compliments from :

SRI UDAYA PRINTERS

Prop: H. G. ADAVEESHAIAH
Quality Printers & Card Board Box Makers
No. 20, Hospital Road,
BANGALORE-2.

ಜಗದ್ಗುರು

ಪಂಚ ಪೀಠಾಧೀಶ್ವರರಿಗೆ

ನಮ್ಮ ಮಹಾ ಪ್ರಣಾಮ

ಅಶೋಕ್ ಟ್ರಾವೆಲ್ಸ್

ಆನಂದರಾವ್ ಸರ್ಕಲ್, ಬೆಂಗಳೂರು-೯

ಪ್ರತಿದಿನ ಕ್ಷೇತ್ರದರ್ಶನ ಪ್ರವಾಸಗಳು

(ಎ) ಮೈಸೂರು - ಶ್ರೀರಂಗಪಟ್ಟಣ - ಸಿ. ಹಿಲ್ಸ್ - ಪ್ರಕಾಶಮಾನವಾದ ಬೃಂದಾವನ
(ಬಿ) ಬೆಂಗಳೂರು ಕ್ಷೇತ್ರದರ್ಶನ - ಎಚ್.ಎಂ.ಟಿ. - ವಾಚ್ ಫ್ಯಾಕ್ಟರಿ-ಲಾಲ್‌ಬಾಗ್-ವಿಧಾನ ಸೌಧ
(ಸಿ) ನಂದಿ ಹಿಲ್ಸ್
(ಡಿ) ಬೇಲೂರು - ಹಳೇಬೀಡು - ಶ್ರವಣಬೆಳಗೊಳ

ಶಿವಮೊಗ್ಗ ಮತ್ತು ಜೋಗ್‌ಫಾಲ್ಸ್
ಹುಬ್ಬಳ್ಳಿ - ಬೆಳಗಾಂ - ಮದ್ರಾಸು - ಬಳ್ಳಾರಿ - ಹೊಸಪೇಟೆ
ದಾವಣಗೆರೆ - ಮಂಗಳೂರು - ಉಡುಪಿ - ಕುಂದಾಪುರ

ಫೋನ್: 27936

PHONE : 23466
RESI : 72552

V. KARIBASAPPA & SONS

IRON & STEEL MERCHANTS
NO. 2 & 3, SHANTHAPPA LANE, BANGALORE - 2.

⁂

Dealers in

THE TATA IRON & STEEL CO. LTD.
THE MYSORE IRON & STEEL LTD., BHADRAVATHI.

⁂

Stockists for

TATA AGRICO IMPLEMENTS

With
Best
Compliments
from

SREE GANAPATHI BRICKS AND TILE WORKS

ಶ್ರೀ ಗಣಪತಿ ಬ್ರಿಕ್ಸ್ ಅಂಡ್ ಟೈಲ್ ವರ್ಕ್ಸ್, ತುಮಕೂರು

B. H. ROAD : : TUMKUR

Manufacturers of :

HIGH-CLASS GANAPATHI BRAND TILES
APPROVED BY ALIPORE TEST HOUSE, GOVT. OF INDIA

Partners:

T. S. SREEKANTAPPA & SONS
Bheemasandra, Tumkur Dist., (Mysore State)

Phone : 439 (factory)

Grams : Shivakumar



ಆಸ್ಥಾನ ವಿದ್ವಾನ್, ಪಂಡಿತರತ್ನಂ, ಪದ್ಮಶ್ರೀ
ಬಿ. ಶಿವಮೂರ್ತಿ ಶಾಸ್ತ್ರಿಗಳು

ತಮ್ಮ ಪಾಂಡಿತ್ಯವನ್ನು ಅನೇಕ ಬಿರುದುಗಳನ್ನು ಗಳಿಸಿರುವ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳ ಹೆಸರನ್ನು ಕೇಳದ ಕನ್ನಡಿಗರೇ ಇಲ್ಲವೆಂದರೂ ಒಪ್ಪುತ್ತದೆ. ಅರಮನೆ-ಗುರುಮನೆಗಳಿಂದ ಸನ್ಮಾನಿತರಾಗಿ, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಾದ ಶ್ರೀ ಶಾಸ್ತ್ರಿಗಳು ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದ ಸಾಹಸಿಗಳು. ವೀರಶೈವ ಸಾಹಿತ್ಯ. ಸಂಶೋಧನಗಳಲ್ಲಿ ಪರಿಣತರು. 'ಕರಣ ಸಾಹಿತ್ಯ' ಮಾಸಿಕದ ಸಂಪಾದಕರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಾಡು ನುಡಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಶ್ರೀ ಶಾಸ್ತ್ರಿಗಳ ಬಹುಮುಖ ಸೇವೆಯನ್ನು ಸ್ಮರಿಸಿ ಕೇಂದ್ರ ಸರ್ಕಾರ ಅವರಿಗೆ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ವೀರಶೈವ ರಾಜಮನೆತನಗಳು

ವೀರಶೈವ ಧರ್ಮವು ವೇದಾಗಮಪ್ರಧಾನ ಧರ್ಮವೆನಿಸಿದೆ. ಪುರಾತನವಾದ ಶೈವಧರ್ಮದ ಅಂಗವಾಗಿ ಭರತಖಂಡದಲ್ಲಿ ಸಾವಿರಾರು ವರ್ಷಗಳಿಂದಲೂ ಬೆಳೆದುಬಂದಿದೆ. ಇಂದು ವೀರಶೈವರ ಅಸ್ತಿತ್ವವು ದಕ್ಷಿಣ ಭಾರತದಲ್ಲಿ ವಿಪುಲವಾಗಿ ಕಂಡುಬಂದರೂ, ಒಂದು ಕಾಲದಲ್ಲಿ ಈ ಮತವು ಭರತಖಂಡದಲ್ಲೆಲ್ಲಾ ಸಮಗ್ರ ಪ್ರಸಾರದಲ್ಲಿ ಇತ್ತೆಂಬುದಕ್ಕೆ ನಿದರ್ಶನವಿದೆ. ಹಿಮಾಲಯದ ಕೇದಾರ, ಉತ್ತರ ಭಾರತದ ಕಾಶಿ ಮತ್ತು ಪ್ರಯಾಗ, ಹಾಗೂ ನೇಪಾಳಗಳಲ್ಲಿ ವೀರಶೈವರ ಮಠಗಳಿವೆ. ದಕ್ಷಿಣದಲ್ಲಿ ಶ್ರೀಶೈಲ. ಉಜ್ಜಯಿನಿ. ರಂಭಾಪುರಿ, ಕುಂಭಕೋಣ. ತಿರುವಣ್ಣಾಮಲೈ, ಚಿದಂಬರಂ. ಬೊಮ್ಮನಪಾಳೆಯಂ. ಕಂಚಿ, ರಾಮೇಶ್ವರ. ಲಂಕಾ, ಕೀರುಮಲೈ ಮೊದಲಾದ ಕಡೆಗಳಲ್ಲಿ ಕೂಡ ವೀರಶೈವ ಮಠಗಳಿವೆ. ಕರ್ಣಾಟಕದಲ್ಲಿ. ಚಿತ್ರದುರ್ಗ. ಹುಬ್ಬಳ್ಳಿ. ಗದಗ. ಧಾರವಾಡ. ಬೆಂಗಳೂರು. ಸುತ್ತೂರು. ಸಿರಿಗೆರೆ, ಗೂಳೂರು, ತುಮಕೂರು. ಕಲ್ಬುರ್ಗಿ. ಕಲ್ಯಾಣ. ನಿಡುಸೂಸಿ. ಸೊಲ್ಲಾಪುರ. ದುಧನಿ. ಅಥಣಿ, ಹಾವೇರಿ. ಶಿವಗಂಗೆ. ಸಿದ್ಧಗಂಗೆ. ಕನಕಪುರ. ಉರುವಕೊಂಡ ಮೊದಲಾದ ಕಡೆಗಳಲ್ಲಿ ವಿಖ್ಯಾತ ಮಠಗಳಿವೆ. ಈ ಮಠಗಳೇ ಅಲ್ಲದೆ. ವೀರಶೈವ ವಿಭೂತಿಗಳಿಗೆ ಸಂಬಂಧಪಟ್ಟ ಸುಕ್ಷೇತ್ರಗಳು. ಸೊಲ್ಲಾಪುರ, ಕಲ್ಬುರ್ಗಿ. ಎಡೆಯೂರು. ಗುಬ್ಬಿ. ಮಾದೇಶ್ವರ. ಕೊಟ್ಟೂರು. ಮಹಾಲಿಂಗಪುರ. ಕುಪ್ಪೂರುಗದ್ದಿಗೆ. ರೇವಣ ಸಿದ್ಧೇಶ್ವರ ಬೆಟ್ಟ. ಇಂಗಳೇಶ್ವರ. ಮಾಸನೂರು. ಮುಂಗಳವಾಡ. ಸಿದ್ಧಗಿರಿ. ರೇಣಾವಿ ಮೊದಲಾದ ಕಡೆಗಳಲ್ಲಿ ವೀರಶೈವ ಕ್ಷೇತ್ರಗಳು ಪ್ರಸಿದ್ಧವಾಗಿವೆ. ಇದು ವೀರಶೈವ ಧರ್ಮದ ಚೈತನ್ಯಕ್ಕೆ. ಹಾಗೂ ಮಹತ್ವಕ್ಕೆ. ಒಂದು ಸ್ಪಷ್ಟ ನಿದರ್ಶನವಾಗಿದೆ.

ಯಾವುದೇ ಒಂದು ಮತ. ಧರ್ಮ ಸಾಹಿತ್ಯ ಹಾಗೂ ಸಂಸ್ಕೃತಿಯು ಅಭಿವೃದ್ಧಿಗೆ ಬರಬೇಕಾದರೆ ಅವಕ್ಕೆ ರಾಜಾಶ್ರಯವು ಬಹಳ ಅಗತ್ಯ. ಅಶೋಕನ ಉದಾರಾಶ್ರಯದಲ್ಲಿ ಬೌದ್ಧಧರ್ಮವು ಇಡೀ ಭಾರತದಲ್ಲಿ ಪಸರಿಸಿದುದನ್ನು ಇಲ್ಲಿ ನೆನಸಿಕೊಳ್ಳಬಹುದು. ವಿಜಯನಗರದ ರಾಜಾಶ್ರಯದಲ್ಲಿ ಹಿಂದೂಧರ್ಮವು ದಕ್ಷಿಣದಲ್ಲಿ ತಲೆಯೆತ್ತಿ ನಿಂತುದನ್ನು ಕೂಡ ಸ್ಮರಿಸಬಹುದು. ಕ್ರೈಸ್ತಧರ್ಮವು ಇಂಗ್ಲಿಷರ ರಾಜ್ಯಾಡಳಿತದಲ್ಲಿ. ಇಡೀ ಭಾರತದಲ್ಲಿ ಹರಡಿರುವುದನ್ನು ಸ್ಮರಿಸಬಹುದು. ಹಾಗೆಯೇ ವೀರಶೈವಧರ್ಮವು ಕರ್ಣಾಟಕ ಮತ್ತು ಆಂಧ್ರ ದೇಶಗಳಲ್ಲಿ ತಲೆಯೆತ್ತಿ ನಿಲ್ಲಲು ಇತಿ

ಹಾಸ ಪ್ರಸಿದ್ಧವಾದ ವೀರಶೈವ ರಾಜಮಹಾರಾಜರುಗಳ, ಅಮಾತ್ಯರ, ದಂಡನಾಯಕರ, ಪಾಳೆಯಗಾರರ, ದೇಸಾಯಿಗಳ ಉದಾರಾಶ್ರಯವು ಬಹುಮಟ್ಟಿಗೆ ಕಾರಣವೆಂದು ಚರಿತ್ರೆಯಿಂದ ನಾವು ಮನಗಾಣಬಹುದು. ಆಂಧ್ರದೇಶದ ಕಾಕತೀಯ ರಾಜ ಮನೆತನವು ವಿಜಯನಗರದ ಪ್ರೌಢ ದೇವರಾಯರು, ರಾಜಶೇಖರ ಮತ್ತು ವಿರೂಪಾಕ್ಷ ಮಹಾರಾಜರುಗಳು, ಕೆಳದಿ, ಸ್ವಾದಿ, ಬಿಳಗಿ, ಕೊಡಗು, ಬಿಜ್ಜಾವರ, ಹಾಗಲವಾಡಿ ಮೊದಲಾದ ಸಂಸ್ಥಾನಗಳ ರಾಜರುಗಳು, ಕೊಂಡಗುಳಿ ಕೇಶಿರಾಜ, ಬಸವೇಶ್ವರ, ಕೆರೆಯ ಪದ್ಮರಸ, ಲಕ್ಕಣ್ಣದಂಡೇಶ, ಮೊದಲಾದ ದಂಡನಾಯಕರು ಬಿಜ್ಜಾವರ, ಹಾಗಲವಾಡಿ, ಸಿರಸಂಗಿ, ವಂಟಮುರಿ ಮೊದಲಾದ ಸಂಸ್ಥಾನಾಧೀಶರು, ವೀರಶೈವ ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಗಳಿಗೆ ಕೊಟ್ಟಿರುವ ಪ್ರೋತ್ಸಾಹ ಅಪರಿಮಿತ ಎಂಬುದು ನೆನಪಿನಲ್ಲಿಡಬೇಕಾದ ಸಂಗತಿ. ಈ ವಿಷಯವನ್ನು ಕುರಿತು ಒಂದು ಸಂಗ್ರಹ ಪರಿಚಯಮಾಡಿಕೊಡುವುದೇ ಈ ಲೇಖನದ ಉದ್ದೇಶವಾಗಿದೆ.

ವೀರಶೈವ ರಾಜರ ಮತ್ತು ರಾಜಮನೆತನದ ಹೆಸರನ್ನು ಹೇಳುವಾಗ ಮೊಟ್ಟಮೊದಲಿಗೆ ಮಹಾ ಶರಣ, ಮಹಾದಂಡನಾಯಕ, ಮಹಾಕವಿ, ಕೊಂಡಗುಳಿ ಕೇಶಿರಾಜನ ಹೆಸರು ಜ್ಞಾಪಕಕ್ಕೆ ಬರುತ್ತದೆ. ಈತನು ಕಲ್ಯಾಣ ಪಟ್ಟಣದಲ್ಲಿ ಕ್ರಿ.ಶ. 1076ರಿಂದ 1126ರವರೆಗೆ ವೈಭವದಿಂದ ರಾಜ್ಯಭಾರಮಾಡಿದ. ಚಾಳುಕ್ಯ ವಿಕ್ರಮಾದಿತ್ಯನ (ಪೆರುಮಾಡಿರಾಯ) ಕಾಲದಲ್ಲಿ ಇವನು ಮಹಾದಂಡನಾಯಕನಾಗಿದ್ದಂತೆ ಪುರಾಣಗಳಿಂದಲೂ, ಶಾಸನಗಳಿಂದಲೂ ತಿಳಿದುಬಂದಿದೆ. ಈ ವಿಕ್ರಮಾದಿತ್ಯನು ಕರ್ಣಾಟಕದ ರಾಜರಲ್ಲಿ ಅತ್ಯಂತ ಶ್ರೇಷ್ಠನಾದವನು. ಇಮ್ಮಡಿ ಪುಲಿಕೇಶಿ, ಅಮೋಘವರ್ಷ ನೃಪತುಂಗ, ಹೊಯ್ಸಳ ವಿಷ್ಣುವರ್ಧನ, ಕಾಕತೀಯ ಪ್ರತಾಪರುದ್ರ, ವಿಜಯನಗರದ ಪ್ರೌಢ ದೇವರಾಯ ಮೊದಲಾದ ಚಕ್ರವರ್ತಿಗಳ ಮಾಲಿಕೆಯಲ್ಲಿ ಪ್ರಖ್ಯಾತನಾದವನು. ಇವನ ಪ್ರಚಂಡ ಪರಾಕ್ರಮವು ಹಿಮಾಲಯದಿಂದ ರಾಮೇಶ್ವರದವರೆಗೂ ಹಬ್ಬಿತ್ತೆಂಬುದಕ್ಕೆ ಚರಿತ್ರೆಯ ನಿದರ್ಶನವಿದೆ. ಬಿಲ್ಹಣನ "ವಿಕ್ರಮಾಂಕದೇವ ಚರಿತೆ" ಈತನ ಮಹತ್ವಕ್ಕೆ ಕೈದೀವಿಗೆಯಾಗಿದೆ. ಇಂತಹ ಚಕ್ರವರ್ತಿಯ ಆಸ್ಥಾನದಲ್ಲಿ ಈತನು ದಂಡನಾಯಕನಾಗಿದ್ದುದು ಗಮನಾರ್ಹ ಸಂಗತಿ. ಈತನನ್ನು ಕುರಿತಾದ ಒಂದು ಶಿಲಾಶಾಸನವು ಕೊಂಡಗುಳಿಯಲ್ಲಿ ಸಿಗುತ್ತದೆ. ಆ ಶಾಸನದಲ್ಲಿ ಈತನು ಕಲ್ಯಾಣದ ತ್ರಿಭುವನಮಲ್ಲ ವಿಕ್ರಮಾದಿತ್ಯನ ಆಸ್ಥಾನದಲ್ಲಿ ದಂಡನಾಯಕನಾಗಿದ್ದ ವಿಚಾರವು ಉಲ್ಲೇಖಿಸಲ್ಪಟ್ಟಿದೆ. ಗುಲ್ಬರ್ಗ ಜಿಲ್ಲಾ ಕೊಂಡಗುಳಿಯಲ್ಲಿ, ಅಂದರೆ ಕವಿಯ ಜನ್ಮಸ್ಥಳದಲ್ಲಿ ಚಕ್ರವರ್ತಿಯ ಕಲ್ಯಾಣಾರ್ಥವಾಗಿ ಈತನು ಕಟ್ಟಿಸಿದ ಸೋಮೇಶ್ವರ ದೇವಾಲಯದಲ್ಲಿ ಈ ಶಾಸನವು ನಿಲ್ಲಿಸಲ್ಪಟ್ಟಿದೆ. ಅದರಲ್ಲಿ ಈತನನ್ನು "ದಂಡನಾಯಕ ಕೇಶಿರಾಜ ಅರಸರು" ಎಂದು ಕರೆಯಲಾಗಿದೆ. ಈ ಶಾಸನವು ವಿಕ್ರಮಶಕ ಮೂವತ್ತುಮೂರನೇ ಸರ್ವಜಿತು ಸಂವತ್ಸರದ ಮಾರ್ಗಶಿರ ಅಮಾವಾಸ್ಯೆ ಸೋಮವಾರದಂದು ಸೂರ್ಯಗ್ರಹಣ ಕಾಲದಲ್ಲಿ ಸ್ಥಾಪಿಸಲ್ಪಟ್ಟಿದೆ. ಅಂದರೆ ಇದು ಕ್ರಿ.ಶ. 1109ರಲ್ಲಿ ಹಾಕಿದ ಶಾಸನ ಆಗುತ್ತದೆ. ಇದರಿಂದ ಕೊಂಡಗುಳಿ ಕೇಶಿರಾಜನು ಬಸವೇಶ್ವರನಿಗಿಂತ 60 ವರ್ಷ ಮೊದಲೇ ಕಲ್ಯಾಣದಲ್ಲಿ ಮಂತ್ರಿಯಾಗಿದ್ದ ವಿಷಯವು ಸ್ಪಷ್ಟಗೊಳ್ಳುತ್ತದೆ.

ಕೇಶಿರಾಜನು ಷಡಕ್ಷರ ಕಂದ, ಲಿಂಗಸ್ತೋತ್ರ ಕಂದ ಮೊದಲಾದವುಗಳನ್ನು ಬರೆದಿದ್ದಾನೆ. ಹರಿಹರ, ರಾಘವಾಂಕಾದಿ ಮಹಾಕವಿಗಳು ಕೂಡ ಈತನನ್ನು ತಮ್ಮ ಗಿರಿಜಾ ಕಲ್ಯಾಣ, ಹರಿಶ್ಚಂದ್ರ ಕಾವ್ಯಗಳಲ್ಲಿ ಸ್ಮರಿಸಿದ್ದಾರೆ. ಈತನು ಪವಾಡಪುರುಷನೂ, ಜಂಗಮಪ್ರಿಯನೂ ಆಗಿದ್ದಂತೆ ವೀರಶೈವ ಪುರಾಣಗಳಿಂದ ಅರಿವಾಗುತ್ತದೆ. ಹರಿಹರನು ತನ್ನ ರಘಟಾಕಾವ್ಯದಲ್ಲಿ 'ಕೊಂಡಗುಳಿ ಕೇಶಿರಾಜರಗಳೆ' ಎಂಬ ಕಾವ್ಯ ಬರೆದಿದ್ದಾನೆ.

ಬಾಗೇವಾಡಿಯ ಬಸವೇಶ್ವರನು ವೀರಶೈವ ಮತೋದ್ಧಾರಕರಲ್ಲಿ ಅಗ್ರಗಣ್ಯನಾಗಿದ್ದಾನೆ. ಈತನು ಬಾಗೇವಾಡಿಯಲ್ಲಿ ಹುಟ್ಟಿ, ಸಂಗಮದಲ್ಲಿ ಬೆಳೆದು, ಸಂಗಮನಾಥನ ಆದೇಶದಂತೆ ಮಂಗಳವಾಡದಲ್ಲಿ ಮಾಂಡಲಿಕ ಬಿಜ್ಜಳ ರಾಜನಲ್ಲಿ ಸುಮಾರು 1157ರಿಂದ 1162ರವರೆಗೂ, ಅನಂತರ ಬಿಜ್ಜಳನು ಕಲ್ಯಾಣದ ಚಕ್ರವರ್ತಿಯಾದ ಮೇಲೆ 1162ರಿಂದ 1167ರವರೆಗೂ ಮಹಾಮಂತ್ರಿಯಾಗಿದ್ದನು. ವೀರಶೈವ ಧರ್ಮಕ್ಕೂ, ಸಮಾಜಕ್ಕೂ ಬಸವೇಶ್ವರನು ಉಪಕಾರಮಾಡಿದ ಸಂಗತಿ ಲೋಕಪ್ರಸಿದ್ಧವಾಗಿದೆ. ಕವಿಗಳು ಈತನನ್ನು 'ವೀರಶೈವ ನಿರ್ಣಯ ಪರಮಾವತಾರ', ಭಕ್ತಿಯುಗದ ಆಚಾರ್ಯ, ಭಕ್ತಿ ಭಂಡಾರಿ, 'ವೀರಶೈವ ಹೃದಯ' ಎಂದು ಮೊದಲಾಗಿ ಕರೆದಿದ್ದಾರೆ. ಕೊಂಡಗುಳಿ ಕೇಶಿರಾಜನ ಅನಂತರ ಬಸವೇಶ್ವರನ ಹೆಸರು ಸ್ಮರಣಾರ್ಹವಾಗಿದೆ. ಈತನು ವೀರಶೈವ ವಿಭೂತಿಗಳಲ್ಲಿ ಅತ್ಯಂತ ಪ್ರಸಿದ್ಧನು. ಈತನ ಜೀವಮಾನ ಕಾಲ ಕ್ರಿ.ಶ. 1131 ರಿಂದ 1167. ಈತನು ಬಿಜಾಪುರ ಜಿಲ್ಲಾ ಬಾಗೇವಾಡಿಯಲ್ಲಿ ಮಾದರಸನ ಮಗನಾಗಿ ಹುಟ್ಟಿ, ಕೂಡಲ ಸಂಗಮದ ಕುಲಪತಿಗಳಾದ ಜಾತವೇದ ಮುನಿಗಳಲ್ಲಿ ವೇದ ವೇದಾಂಗಗಳನ್ನು ಅಧ್ಯಯನಮಾಡಿ, ಪ್ರಖ್ಯಾತ ವಿದ್ವಾಂಸನಾಗಿ, ಮುಂದೆ ಗುರುಗಳ ಅಪ್ಪಣೆಯಂತೆ ಮಂಗಳವಾಡಕ್ಕೆ ಬಂದು ಅಲ್ಲಿ ತನ್ನ ಸೋದರಮಾವನೂ, ಬಿಜ್ಜಳನ ಮಂತ್ರಿಯೂ ಆಗಿದ್ದ ಸಿದ್ದಣ್ಣ ಮಂತ್ರಿಯ ಆಶ್ರಯದಲ್ಲಿ ಬಳೆದು, ಬಿಜ್ಜಳನ ಮಂತ್ರಿಯಾಗಿ, ಅನಂತರ ಕಲುಚುರಿ ಬಿಜ್ಜಳನು ಕಲ್ಯಾಣದ ಚಕ್ರವರ್ತಿಯಾದ ಮೇಲೆ (1162) ಆತನ ಸಂಗಡ ಕಲ್ಯಾಣಕ್ಕೆ ಬಂದು, ತನ್ನ ಸೋದರಮಾವನಾದ ಬಲದೇವ ಮಂತ್ರಿಯ ನೆರವಿನಿಂದ ಸಾಮ್ರಾಜ್ಯದ ಮಹಾ ಮಂತ್ರಿಯಾಗಿದ್ದನು. ಆ ಕಾಲದಲ್ಲಿ ಅನುಭವ ಮಂಟಪದ ಸ್ಥಾಪನೆ, ಮಹಾಮನೆಯ ದಾಸೋಹ, ಹರಿಜನೋದ್ಧಾರ, ಅಹಿಂಸಾಧರ್ಮ ಪ್ರಚಾರ, ಕಾಯಕತತ್ವ ಪ್ರಚಾರ ಮೊದಲಾದವುಗಳನ್ನು ನಡೆಸಿ, ವೀರಶೈವ ಧರ್ಮೋದ್ಧಾರಕನೆನಿಸಿದನು. ಈತ

ನನ್ನು ಕುರಿತು ಕನ್ನಡ, ತೆಲುಗು, ತಮಿಳು, ಸಂಸ್ಕೃತ, ಮರಾಠಿ, ಹಿಂದಿ ಮೊದಲಾದ ಭಾಷೆಗಳಲ್ಲಿ ಪುರಾಣಗಳು ರಚನೆಯಾಗಿವೆ. ಅರ್ಜುನವಾಡವೇ ಮೊದಲಾದ ಕಡೆ ಈತನನ್ನು ಕುರಿತು ಹಲವು ಶಿಲಾಶಾಸನಗಳು ಕೂಡ ದೊರೆಯುತ್ತವೆ. “Basava is the heart of Veerasaivism” ಎಂದು ಆಧುನಿಕ ವಿದ್ವಾಂಸರು ಹೇಳಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ.

ಬಸವಣ್ಣನವರು ಕೈಗೊಂಡ ಪ್ರಚಂಡ ಚಳುವಳಿಯ ಫಲವಾಗಿ ವೀರಶೈವ ಧರ್ಮವು ಸಮಗ್ರ ಭರತಖಂಡದಲ್ಲಿ ಪ್ರಚುರಗೊಂಡಿತು. ವಿಶೇಷವಾಗಿ ಕಲ್ಯಾಣದ ಕ್ರಾಂತಿಯು ನೆರೆಯ ರಾಜ್ಯವಾದ ಆಂಧ್ರ ದೇಶದ ಮೇಲೆ ಮಿಗಿಲಾದ ಬಿಸಿಯನ್ನು ತಾಗಿಸಿತು.

ಆಂಧ್ರದೇಶದಲ್ಲಿ ಓರಂಗಲ್ಲಿನಲ್ಲಿ ಸ್ಥಾಪಿತವಾಗಿದ್ದ ಕಾಕತೀಯ ರಾಜ ಮನೆತನವು ಕಲ್ಯಾಣದ ಚಾಳುಕ್ಯರಾಜರಿಗೆ ಅಧೀನವಾಗಿತ್ತು. ದೇವಗಿರಿಯ ಯಾದವರು, ಹಳೇಬೀಡಿನ ಹೊಯ್ಸಳರು, ಮೊದಲಾದ ರಾಜ್ಯಗಳವರು ಚಾಳುಕ್ಯರ ಸಾಮಂತರಾಗಿದ್ದರು. 1167ರಲ್ಲಿ ಬಿಜ್ಜಳನು ಕೈಗೊಂಡ ಸಿಂಹಾಸನದ ಆಕ್ರಮಣದ ಅನಂತರ ದೇವಗಿರಿ, ಹಳೇಬೀಡು, ಓರುಂಗಲ್ಲು ಸ್ವತಂತ್ರವಾದವು. ಹಳೇಬೀಡು ಮತ್ತು ದೇವಗಿರಿಗಳು ಕರ್ನಾಟಕದ ಭಾಗಗಳೇ ಆಗಿದ್ದವು. ಓರುಂಗಲ್ಲು ಮಾತ್ರ ಆಂಧ್ರ ದೇಶಕ್ಕೇ ಸೇರಿದ್ದಿತು. ಕಲ್ಯಾಣದ ಕ್ರಾಂತಿಯು ಆಂಧ್ರಕ್ಕೆ ಪಸರಿಸಿದಾಗ ಅಲ್ಲಿ ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಮತ್ತು ಕೋಟಿಪಲ್ಲಾರಾಧ್ಯರು ಮೊದಲಾದ ಮಹಿಮಾಶಾಲಿಗಳ ಪ್ರಯತ್ನದ ಫಲವಾಗಿ, ಅನಂತರ ಆಂಧ್ರದಲ್ಲಿ ತಲೆಯೆತ್ತಿದ ಮಹಾಕವಿ ಪಾಲ್ಕುರಿಕೆ ಸೋಮನಾಥನ ಅಮೋಘ ಪಾಂಡಿತ್ಯ, ಪ್ರತಿಭೆಗಳ ಫಲವಾಗಿ ಮತ್ತು ಪಿಡುಪರ್ತಿ ಕವಿಗಳ ಮಹಾಕಾವ್ಯ ನಿರ್ಮಾಣಗಳ ಫಲವಾಗಿ ವೀರಶೈವ ಧರ್ಮವು ಪಸರಿಸಿತು. ಸುಕ್ಷೇತ್ರಗಳಾದ ಶ್ರೀಶೈಲ, ಕೊಲ್ಲಿಪಾಕಿಗಳು, ವೀರಶೈವ ಧರ್ಮದ ನೆಲೆವೀಡಾದವು. ಶ್ರೀಶೈಲವು ಮಲ್ಲಿಕಾರ್ಜುನ ಪಂಡಿತಾರಾಧ್ಯರಿಗೂ, ಕೊಲ್ಲಿಪಾಕಿಯು ರೇಣುಕಾರಾಧ್ಯರಿಗೂ ಜನ್ಮಸ್ಥಳ ಎಂಬ ಮಾತು ಶಿವಾಗಮ ಪ್ರಸಿದ್ಧವಾಗಿದೆ. ಈ ಧರ್ಮದ ಪ್ರಭಾವವು ಓರುಂಗಲ್ಲಿನಲ್ಲಿ ಆಳುತ್ತಿದ್ದ ಕಾಕತೀಯ ರಾಜರ ಮೇಲೆ ಉಂಟಾಯಿತು. ಅವರು ವೀರಶೈವ ಧರ್ಮವನ್ನು ಸ್ವೀಕರಿಸಿದರು. ಉದಾರಿಗಳೂ, ಪರಾಕ್ರಮಶಾಲಿಗಳೂ ಆದ ಆ ರಾಜರು ವೀರಶೈವ ಧರ್ಮಕ್ಕೂ ವಿದ್ವಾಂಸರಿಗೂ ಉದಾರಾಶ್ರಯವಿತ್ತರು. ಕಾಕತೀಯ ರಾಜ್ಯವು ಕ್ರಿ.ಶ. 1050ರಲ್ಲಿ ಓರುಂಗಲ್ಲಿನಲ್ಲಿ ಆರಂಭವಾಯಿತು. ಮೊದಲನೇ ಪ್ರೋಲ ರಾಜನು 1080ರವರೆಗೆ ರಾಜ್ಯಭಾರಮಾಡಿದನು. ಅನಂತರ ಚೇತರಾಜನು ಸಿಂಹಾಸನಕ್ಕೆ ಬಂದನು. ಅವನು 1115ರವರೆಗೆ ಅಧಿಕಾರ ನಡೆಸಿದನು. ಅನಂತರ ಎರಡನೇ ಪ್ರೋಲನು ಅಧಿಕಾರಕ್ಕೆ ಬಂದನು. ಅವನು 1158ರವರೆಗೆ ರಾಜ್ಯಭಾರಮಾಡಿದನು. ಪ್ರಾಯೇಣ ಈ ಕಾಲದಲ್ಲಿ ಎರಡನೇ ಪ್ರೋಲನು ತನ್ನ ಜೈನಧರ್ಮವನ್ನು ತೊರೆದು ವೀರಶೈವ ಧರ್ಮದಕಡೆ ಮನವಿತ್ತಂತೆ ಕಾಣುತ್ತದೆ. ತನ್ನ ಮೇಲೆ ದಂಡೆತ್ತಿಬಂದ ಕಲ್ಯಾಣದ ಮುಮ್ಮಡಿ ತೈಲಪನನ್ನು ಯುದ್ಧದಲ್ಲಿ ಸೋಲಿಸಿ ಕಡೆಗೆ ಅವನು ಚಕ್ರವರ್ತಿಯಾಗಿದ್ದ ಎಂಬ ದಾಕ್ಷಿಣ್ಯದಿಂದ ಆತನ ಪ್ರಾಣವನ್ನು ಉಳಿಸಿದ ಮಹಾ ಉದಾರಿ ಈತ. 1158ರಲ್ಲಿ ರುದ್ರದೇವನು ಕಾಕತೀಯ ಚಕ್ರವರ್ತಿಯಾದನು. ಈ ಕಾಲದಲ್ಲಿ ಬಸವಣ್ಣನವರು ಕಳಚುರಿ ಬಿಜ್ಜಳನ ಮಂತ್ರಿಯಾಗಿ ಕಲ್ಯಾಣ ರಾಜ್ಯದಲ್ಲಿ ತಕ್ಕಷ್ಟು ಹೆಸರು ಗಳಿಸಿದರು. ರುದ್ರದೇವನು 1158ರಿಂದ 1195ರವರೆಗೆ ಕಾಕತೀಯ ರಾಜ್ಯಭಾರವನ್ನು ನಡೆಸಿದನು. ಈ ಕಾಲವು ಕಲ್ಯಾಣದಲ್ಲಿ ಬಸವಣ್ಣನವರ ಕೀರ್ತಿಗೌರವಗಳನ್ನು ದಿಗಂತವಿಶ್ರಾಂತಗೊಳಿಸಿತ್ತು. ಮಲ್ಲಿಕಾರ್ಜುನ ಪಂಡಿತಾರಾಧ್ಯರುತಹ ಮಹಾ ವಿದ್ವಾಂಸರು ಬಸವಣ್ಣನವರ ಕ್ರಾಂತಿಗೆ ತಲೆದೂಗಿದರು. ಶಿವತತ್ವಸಾರಮು, ಗಣಸಹಸ್ರನಾಮಾವಳಿ, ಮೊದಲಾದ ಗ್ರಂಥಗಳು ಬಂದಿವೆ. ಇದೇ ಕಾಲದಲ್ಲಿ ಆಂಧ್ರದಲ್ಲಿ ಪಾಲ್ಕುರಿಕೆ ಸೋಮನಾಥನು ಜನಿಸಿ, ತೆಲುಗು, ಸಂಸ್ಕೃತ ಮತ್ತು ಕನ್ನಡದಲ್ಲಿ 36 ಗ್ರಂಥಗಳನ್ನು ಬರೆದು ವೀರಶೈವ ಧರ್ಮವನ್ನು ಗೌರೀಶಂಕರಕ್ಕೆ ಏರಿಸಿದನು. ಮಹಾರಾಜ ರುದ್ರದೇವನು ಪರಾಕ್ರಮಿಯೂ, ಶಿವಭಕ್ತ ಧುರಂಧರನೂ ಎನಿಸಿದ್ದನು. ಅವನ ಆಸಕ್ತಿಯ ಫಲವಾಗಿ ವೀರಶೈವ ಧರ್ಮವು ಆಂಧ್ರದೇಶದ ತುಂಬಾ ಹರಡಿತು. ಶ್ರೀಶೈಲ ಮತ್ತು ಕೊಲ್ಲಿಪಾಕಿಗಳಲ್ಲಿ ಅನೇಕ ವೀರಶೈವ ಮಠಗಳು ಸ್ಥಾಪನೆಯಾದುವು. ಇವನು 'ನೀತಿಸಾರ' ಎಂಬ ಗ್ರಂಥ ಬರೆದುತೆ ಆಂಧ್ರ ಸಾಹಿತ್ಯದಿಂದ ತಿಳಿದುಬಂದಿದೆ. 1195ರಲ್ಲಿ ರುದ್ರದೇವನು ಕಣ್ಮರೆಯಾದ ಮೇಲೆ ಮಹಾದೇವ ರಾಜನು ಸಿಂಹಾಸನವನ್ನು ಏರಿದನು. ಈತನು 1199ರವರೆಗೆ ರಾಜ. ಭಾರಮಾಡಿದನು. ಅನಂತರ ಗಣಪತಿದೇವನು ಕಾಕತೀಯ ಚಕ್ರವರ್ತಿಯಾದನು. ಇವನು 1199ರಿಂದ 1261ರವರೆಗೆ ಸಾಮ್ರಾಜ್ಯವನ್ನಾಳಿದನು. 62 ವರ್ಷಗಳ ಸುದೀರ್ಘವಾದ ಇವನ ಆಡಳಿತದಲ್ಲಿ ಅನ್ನಮಾಮಾತ್ಯಾ ಮೊದಲಾದ ವೀರಶೈವ ಮಂತ್ರಿಗಳ ಉದಾರಾಶ್ರಯದಲ್ಲಿ ಆಂಧ್ರ ದೇಶವೂ, ವೀರಶೈವ ಧರ್ಮವೂ ವಿಖ್ಯಾತಿಯನ್ನು ಪಡೆದುವು. ಗಣಪತಿದೇವನ ಅನಂತರ ಅವನ ಏಕಮಾತ್ರ ಪುತ್ರಿ 'ರುದ್ರಾಂಬಿಕೆ' ಸಾಮ್ರಾಜ್ಞಿಯಾದಳು. ಈಕೆ 'ಮಹಾರಾಣಿ ರುದ್ರಮ ದೇವಿ' ಎಂಬ ಹೆಸರಿನಿಂದ 1258ರಿಂದ 1299ರವರೆಗೆ, 38 ವರ್ಷಗಳ ಕಾಲ ರಾಜ್ಯಭಾರಮಾಡಿದಳು. ತಂದೆ ಗಣಪತಿದೇವ ಹಾಗೂ ಮಗಳು ರುದ್ರಾಂಬಿಕೆ ಇಬ್ಬರೂ ಕೂಡಿ ಆಂಧ್ರವನ್ನು ನೂರು ವರ್ಷಗಳ ಕಾಲ ಆಳಿದರೆಂಬುದು ಉಲ್ಲೇಖನಾರ್ಹ. ಈಕೆ ಮಹಾ ಪರಾಕ್ರಮಶಾಲಿನಿಯಾಗಿ ಅನೇಕ ಯುದ್ಧಗಳನ್ನು ನಡೆಸಿದ್ದಾಳೆ. ಭಾರತದ ಚರಿತ್ರೆಯಲ್ಲಿ ಇವಳಿಗೆ ಸಮಾನವಾಗಿ ರಾಜ್ಯಭಾರವನ್ನು ನಡೆಸಿದ ವೀರ ರಾಣಿ ಮತ್ತೊಬ್ಬ

ಇಲ್ಲವೆನ್ನಬಹುದು. ಕರ್ಣಾಟಕದಲ್ಲಿ ಪ್ರಸಿದ್ಧರಾಗಿರುವ ಕೆಳದಿಯ ರಾಣಿ ಚೆನ್ನಮ್ಮಾಜಿ. ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಮೊದಲಾದ ರಾಣಿಯರು ಇವಳ ಉಜ್ವಲ ಪರಂಪರೆಗೆ ಸೇರಿದವರು. ಮಹಾ ರಾಣಿ ರುದ್ರಮ ದೇವಿಯ ಅನಂತರ 1290ರಲ್ಲಿ ಪ್ರತಾಪರುದ್ರನು ಸಿಂಹಾಸನವನ್ನು ಏರಿ 1326ರವರೆಗೆ ರಾಜ್ಯಭಾರಮಾಡಿದನು.

ಕಾಕತೀಯ ರಾಜರು ರಾಜ್ಯಭಾರಮಾಡಿದ ಕಾಲದಲ್ಲಿ. ದಕ್ಷಿಣ ಭಾರತದಲ್ಲಿ ಒಳ್ಳೆಯ ವಾತಾವರಣವಿರಲಿಲ್ಲ. ದಕ್ಷಿಣದ ಹಿಂದೂ ರಾಜರು ತಮ್ಮ ತಮ್ಮಲ್ಲಿಯೇ ಹೊಡೆದಾಡುತ್ತಿದ್ದರು. ದೇವಗಿರಿಯ ಯಾದವರು, ಹಳೇಬೀಡಿನ ಹೊಯ್ಸಳರು ಒಂದೇ ಮನೆತನಕ್ಕೆ ಸೇರಿದವರಾದರೂ ರಾಜ್ಯಲೋಭದಿಂದ ಯುದ್ಧದ ಮೇಲೆ ಯುದ್ಧ ನಡೆಸುತ್ತಿದ್ದರು. ಕೃಷ್ಣಾನದಿಯ ಉತ್ತರ ಭಾಗ ಯಾದವರಿಗೂ, ದಕ್ಷಿಣ ಭಾಗ ಹೊಯ್ಸಳರಿಗೂ ಸೇರಿತ್ತು. ಓರಂಗಲ್ಲಿನ ಕಾಕತೀಯರಿಗೂ, ದೇವಗಿರಿಯ ಯಾದವರಿಗೂ ಹಲವಾರು ಯುದ್ಧಗಳು ಆದುವು. ಈ ಮಧ್ಯೆ ಕುಮ್ಮಟದ ಪರಾಕ್ರಮಿ ವೀರರಾಮನು ಅತ್ತ ಹೊಯ್ಸಳರ ಮೇಲೆ, ಇತ್ತ ಕಾಕತೀಯರ ಮೇಲೆ ಒಂದೇ ಸಮನೆ ಯುದ್ಧ ನಡೆಸುತ್ತಿದ್ದನು. ಹೀಗೆ 100 ವರ್ಷಗಳ ಕಾಲ ಹಿಂದೂ ರಾಜರು ಹೊಡೆದಾಡಿ ಹಣ್ಣುಹಣ್ಣಾಗಿ ಹೋಗಿದ್ದರು. ಈ ಪ್ರಸಂಗದಲ್ಲಿ ಉತ್ತರದಿಂದ ಬಂದ ಮುಸಲ್ಮಾನರ ಸೈನ್ಯವು ಮಲ್ಲಿಕಾಫರನ ನೇತೃತ್ವದಲ್ಲಿ ಓರುಂಗಲ್ಲನ್ನು 1326ರಲ್ಲಿ ನಾಶಮಾಡಿ, ಪ್ರತಾಪರುದ್ರನನ್ನು ಸೆರೆಹಿಡಿಯಿತು. ಅದೇ ಕಾಲದಲ್ಲಿ ದೇವಗಿರಿ, ಕುಮ್ಮಟದುರ್ಗ, ಹಳೇಬೀಡು ಈ ಎಲ್ಲ ಕನ್ನಡ ಅರಸರು ಮುಸಲ್ಮಾನರಿಗೆ ಸೋತು ಶರಣಾಗತರಾದರು.

ಓರಂಗಲ್ಲಿನ ಕಾಕತೀಯರ ಕಾಲದಲ್ಲಿ ಆಂಧ್ರದೇಶದಲ್ಲಿ ವೀರಶೈವ ಮಠಮಾನ್ಯಗಳು ಸ್ಥಾಪಿತವಾದುವು. ಮಲ್ಲಿಕಾರ್ಜುನ ಪಂಡಿತ, ಪಾಲ್ಕುರಿಕೆ ಸೋಮನಾಥ, ಶಿವದೇವಾರ್ಯ ಮೊದಲಾದವರು ವೀರಶೈವ ಧರ್ಮ ಪ್ರಚಾರಕ್ಕೆ ಕಂಕಣಕಟ್ಟಿದರು. ಮೊದಲನೇ ರುದ್ರದೇವನ ಕಾಲದಲ್ಲಿ ಮಹಾಕವಿ ರಾಘವಾಂಕನು ಹಂಪೆಯಿಂದ ಓರುಂಗಲ್ಲಿಗೆ ಹೋಗಿ ಪ್ರತಿವಾದಿಗಳನ್ನು ಜಯಿಸಿ, 'ವೀರೇಶ ಚರಿತ್ರ'ಯನ್ನು ಬರೆದು ಚಕ್ರವರ್ತಿಯಿಂದ ಸನ್ಮಾನಿತನಾದನು. ಕಾಕತೀಯ ಸಾಮ್ರಾಜ್ಯಕ್ಕೆ, ರಾಯಚೂರು. ಗುಲ್ಬರ್ಗ ಮತ್ತು ಬೀದರ ಜಿಲ್ಲೆಗಳು ಸೇರಿದ್ದುದನ್ನು ಈ ಭಾಗದ ಶಿಲಾಶಾಸನಗಳಿಂದ ಮನಗಾಣಬಹುದು. ಕಾಕತೀಯರು ಆಂಧ್ರ ಭಾಷೆಯಂತೆ ಕನ್ನಡಕ್ಕೂ ಪ್ರೋತ್ಸಾಹವಿತ್ತರೆಂಬ ವಿಷಯ ಇಲ್ಲಿ ಗಮನಾರ್ಹವಾಗಿದೆ.

ಕರ್ಣಾಟಕದಲ್ಲಿ ಸುವಿಖ್ಯಾತರಾದ ಹೊಯ್ಸಳ ರಾಜರು ಜೈನ, ವೈಷ್ಣವ ಮತಾವಲಂಬಿಗಳಾಗಿದ್ದರೂ, ವೀರಶೈವರಿಗೂ ಉದಾರಾಶ್ರಯವಿತ್ತಿದ್ದಾರೆ. ವೀರಶೈವ ಚರಿತ್ರೆಯಲ್ಲಿ ಖ್ಯಾತನಾದ ಕೆರೆಯ ಪದ್ಮರಸನು ವೀರಶೈವ ರಾಜ ಮನೆತನದಲ್ಲಿ ವಿಖ್ಯಾತನಾದವನು. ಇವನ ತಾತ ಸಕಲೇಶ ಮಾದರಸ, ಪ್ರಪಿತಾಮಹ ಶಿವಯೋಗಿ ಮಲ್ಲರಸ—ಇವರು 'ಕಲ್ಲುಕುರಿಕೆ' ಎಂಬಲ್ಲಿ ರಾಜ್ಯಭಾರಮಾಡುತ್ತಿದ್ದಂತೆ ತಿಳಿದುಬಂದಿದೆ. ಕೆರೆಯ ಪದ್ಮರಸನ ತಂದೆ ಮಾಯಿದೇವ. ಇವನು 'ಅಂಬೆ' ಎಂಬಲ್ಲಿ ರಾಜ್ಯಭಾರಮಾಡುತ್ತಿದ್ದನು. ಈ 'ಅಂಬೆ' ಮತ್ತು 'ಕಲ್ಲುಗುರಿಕೆ' ಗ್ರಾಮಗಳು ಎಲ್ಲಿವೆ ಎಂದು ನಮಗೆ ತಿಳಿದುಬಂದಿಲ್ಲ. ಇವನು ನರಸಿಂಹ ಬಲ್ಲಾಳನ ಕಾಲದಲ್ಲಿ ಹಳೇಬೀಡಿನಲ್ಲಿ ದಂಡನಾಯಕನಾಗಿದ್ದನು. ಇವನು ಕನ್ನಡದಲ್ಲಿ ದೀಕ್ಷಾಬೋಧೆ. ಸಂಸ್ಕೃತದಲ್ಲಿ ಸಾನಂದ ಚರಿತೆ ಬರೆದಿದ್ದಾನೆ. ಈತನ ಮಗ ಕುಮಾರ ಪದ್ಮರಸನು ಸಾನಂದ ಚರಿತೆಯನ್ನು ಕನ್ನಡಿಸಿದ್ದಾನೆ. ಸಂಸ್ಕೃತದ ಸಾನಂದ ಚರಿತೆ ಸಿಕ್ಕಿಲ್ಲ. ದೀಕ್ಷಾಬೋಧೆ ಮತ್ತು ಕನ್ನಡ ಸಾನಂದ ಚರಿತೆ ಅಚ್ಚಾಗಿಲ್ಲ. ಈತನ ವಂಶೀಯನಾದ ಪದ್ಮಣಾಂಕ ಕವಿಯು ಸುಮಾರು 1385ರಲ್ಲಿ ಪದ್ಮಣಾಂಕ ಚರಿತೆ ಎಂಬ ಗ್ರಂಥವನ್ನು ಬರೆದು ತಮ್ಮ ಹಿರಿಯರ ಹೆಸರನ್ನು ಸಾರ್ಥಕಗೊಳಿಸಿದ್ದಾನೆ. ವೀರಬಲ್ಲಾಳನ ಕಾಲದಲ್ಲಿ ಹರೀಶ್ವರನು ಹಳೇಬೀಡಿನ ಅರಮನೆಯಲ್ಲಿ ಕರಣಿಕನಾಗಿದ್ದನು. ಅವನ ಕವಿತಾ ಶಕ್ತಿ ಮತ್ತು ಮಹಿಮಾವಳಿಗಳನ್ನು ನೋಡಿ. ವೀರಬಲ್ಲಾಳನು (1173 ರಿಂದ 1220) ಹರೀಶ್ವರನನ್ನು ಗೌರವಿಸಿದನು. ಅವನು ಪಂಪಾ ಕ್ಷೇತ್ರದಲ್ಲಿ ನಿಂತು ಕಾವ್ಯರಚನೆಮಾಡುವಂತೆ ಪ್ರೋತ್ಸಾಹಿಸಿದನು. ರಾಘವಾಂಕನು ಹರಿಹರನ ಸೋದರಿಯ ಮಗನು. ಹೀಗೆ ಹರಿಹರ. ರಾಘವಾಂಕ, ಕೆರೆಯ ಪದ್ಮರಸ ಮತ್ತು ಕುಮಾರ ಪದ್ಮರಸರು ಹೊಯ್ಸಳ ಮತ್ತು ಕಾಕತೀಯ ರಾಜ್ಯಗಳಲ್ಲಿ ತಮ್ಮ ಪ್ರಭಾವ ಬೀರಿ ವೀರಶೈವ ಧರ್ಮಕ್ಕೆ ಹೆಚ್ಚಿನ ಕಾಂತಿ ಉಂಟುಮಾಡಿದರು. ಇಂತಹ ಮಹಾ ಕವಿಗಳಿಗೆ ಉದಾರಾಶ್ರಯವನ್ನು, ಉನ್ನತ ಸ್ಥಾನಮಾನವನ್ನು ಕೊಟ್ಟು, ಕಾಪಾಡಿದ ಹೊಯ್ಸಳ ರಾಜರನ್ನು ನಾವು ಕೃತಜ್ಞತೆಯಿಂದ ಸ್ಮರಿಸಬೇಕು.

ಹೊಯ್ಸಳರ ಅನಂತರ ವಿಜಯನಗರದ ಅರಸರ ಕಾಲದಲ್ಲಿ ವೀರಶೈವ ಧರ್ಮಕ್ಕೆ ಉದಾರಾಶ್ರಯ ಲಭಿಸಿತು. ಈ ರಾಜಮನೆತನದಲ್ಲಿ ಇಮ್ಮಡಿ ದೇವರಾಯನು ಬಹಳ ಪ್ರಸಿದ್ಧನಾದವನು. ಇವನು 1417ರಿಂದ 1447ರವರೆಗೆ ರಾಜ್ಯಭಾರಮಾಡಿದನು. ಇವನ ಆಸ್ಥಾನದಲ್ಲಿ ಲಕ್ಕಣ್ಣ ದಂಡೇಶ. ಜಕ್ಕಣ್ಣಾಚಾರ್ಯ. ವೀರಣ್ಣ ಒಡೆಯರು ಎಂಬ ವೀರಶೈವ ಅಧಿಕಾರಿಗಳಿದ್ದರು. ಚಕ್ರವರ್ತಿ ಸ್ವಯಂ ಲಿಂಗಧಾರಿಯಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿದನು ತನ್ನ ಮಗಳನ್ನು ವೀರಣ್ಣ ಒಡೆಯರಿಗೆ ಮದುವೆಮಾಡಿಕೊಟ್ಟನು ಇವನನ್ನು ಕುರಿತು "ಪ್ರೌಢ ದೇವರಾಯನ ಕಾವ್ಯ" ಎಂಬ ದೊಡ್ಡ ಗ್ರಂಥವೇ ಆಗಿದೆ. ಲಕ್ಕಣ್ಣ ದಂಡೇಶ. ಶಿವತತ್ವ ಚಿಂತಾಮಣಿ ಎಂಬ ಗ್ರಂಥ ಬರೆದಿದ್ದಾನೆ. ಇವನು ಬಸವೇಶ್ವರ, ಕೆರೆಯ ಪದ್ಮರಸ ಮತ್ತು ಕೊಂಡಗುಳಿ ಕೇಶಿರಾಜರಂತೆ ಕರ್ಣಾಟಕವನ್ನೂ. ವೀರಶೈವ ಧರ್ಮವನ್ನೂ ಉದ್ಧಾರಮಾಡಿದ ಮಹನೀಯನು. ಪ್ರೌಢದೇವರಾಯನ ಕಾಲದಲ್ಲಿ ಕಲ್ಲುಮಠದ ಪ್ರಭುದೇವ. ಚಾಮರಸ

ಅಷ್ಟಭಾಷಾಕವಿ ಚಂದ್ರಶೇಖರ, ಮಹಾಲಿಂಗ ದೇವ ಮೊದಲಾದ ಪ್ರಖ್ಯಾತ ವೀರಶೈವ ಕವಿಗಳು ಆಗಿ ಹೋಗಿದ್ದಾರೆ. ಕನ್ನಡದ ವಿಖ್ಯಾತ ಕವಿ ಕುಮಾರ ವ್ಯಾಸ, ಆಂಧ್ರದ ಕವಿ ಶ್ರೇಷ್ಠ ಶ್ರೀನಾಥ ಇವರೂ ಕೂಡ ಹೆಚ್ಚಿನ ಮನ್ನಣೆ ಗಳಿಸಿದ್ದಾರೆ. ಪ್ರೌಢದೇವ ರಾಯನ ಅನಂತರ ವಿಜಯನಗರದಲ್ಲಿ ರಾಜ್ಯಭಾರಮಾಡಿದ ಇವನ ಮಗ ಮಲ್ಲಿಕಾರ್ಜುನ, ಅನಂತರ ಸಿಂಹಾಸನವನ್ನು ಹತ್ತಿದ ಸೋದರ ಪುತ್ರ ವಿರೂಪಾಕ್ಷರೂ ಹೆಚ್ಚಿನ ಮನ್ನಣೆ ಗಳಿಸಿದ್ದರು. ಇದೇ ರಾಜರ ಕಾಲದಲ್ಲಿ ಸುಪ್ರಸಿದ್ಧ ಎಡಿಯೂರು ಸಿದ್ಧಲಿಂಗೇಶ್ವರರು 720 ಅಮರ ಗಣಂಗಳನ್ನು ಕೂಡಿಕೊಂಡು ಸಮಗ್ರ ಭಾರತದಲ್ಲಿ ಸಂಚರಿಸಿ ವೀರಶೈವ ಧರ್ಮವನ್ನು ಉದ್ಧರಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯವು 1565ರಲ್ಲಿ ಕೃಷ್ಣಾ ತೀರದ ರಕ್ಕಸತಂಗಡಿಯಲ್ಲಿ ನಾಶವಾದ ಮೇಲೆ, ಕರ್ನಾಟಕದಲ್ಲಿ ಹಲವು ಸಣ್ಣಪುಟ್ಟ ರಾಜರು ತಲೆಯೆತ್ತಿದರು. ಅವುಗಳಲ್ಲಿ ಮಲೆನಾಡಿನಲ್ಲಿ ಬಾಳಿ ಬದುಕಿದ ಕೆಳದಿಯ ರಾಜ್ಯವು ಪ್ರಮುಖವಾದುದು. ಚೌಡಪ್ಪ ನಾಯಕನು ಕ್ರಿ.ಶ. 1500 ರಲ್ಲಿ ಈ ರಾಜ್ಯ ಸ್ಥಾಪಿಸಿದನು. ಈ ರಾಜ್ಯದಲ್ಲಿ ಒಟ್ಟು 19 ಮಂದಿ ರಾಜರು ಆಳಿದರು. 1753ರಲ್ಲಿ ನವಾಬ್ ಹೈದರಾಲಿಖಾನ್ ಈ ರಾಜ್ಯವನ್ನು ನಾಶಮಾಡಿದನು. ಈ ಮನೆತನದಲ್ಲಿ ಸದಾಶಿವ ನಾಯಕ, ದೊಡ್ಡಸಂಕಣ್ಣ ನಾಯಕ, ವೆಂಕಟಪ್ಪ ನಾಯಕ, ಶಿವಪ್ಪ ನಾಯಕ, ರಾಣಿ ಚೆನ್ನಮ್ಮಾಜಿ, ಬಸವರಾಜ, ಬೂದಿ ಬಸವಪ್ಪ ನಾಯಕ ಇವರು ಪ್ರಸಿದ್ಧರು. ಕೆಳದಿಯ ಬಸವರಾಜನು "ಶಿವತತ್ವ ರತ್ನಾಕರ" ಎಂಬ ಒಂದು ವಿಶ್ವ ಕೋಶವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. "ಸುಭಾಷಿತ ಸುರದ್ರುಮ" ಮೊದಲಾದ ಗ್ರಂಥಗಳನ್ನ ರಚಿಸಿದ್ದಾನೆ. ವೆಂಕಟಪ್ಪ ನಾಯಕನು "ಕರ್ನಾಟಕ ಶಿವಗೀತೆ", ಗೀತ "ಗೌರೀವರ" ಎಂಬುವುಗಳನ್ನು ತಿರುಮಲ ಭಟ್ಟನೆಂಬ ಕವಿಯಿಂದ ಬರೆಸಿದ್ದಾನೆ. ಬೂದಿ ಬಸವಪ್ಪನಾಯಕನು ಮರಿತೋಂಟದಾರ್ಯ, ಮೌನಪ್ಪ ಪಂಡಿತ, ಷಡಕ್ಷರ ಮಂತ್ರಿ ಎಂಬುವರಿಗೆ ಉದಾರಾಶ್ರಯವಿತ್ತು ವೀರಶೈವಾನಂದ ಚಂದ್ರಿಕೆ ಮತ್ತು ಕೈವಲ್ಯಸಾರ, ವೀರಶೈವ ಧರ್ಮ ಶಿರೋಮಣಿ, ಗ್ರಂಥಗಳನ್ನು ಬರೆಸಿದ್ದಾನೆ. ಮೌನಪ್ಪ ಪಂಡಿತರಿಂದ "ವೀರಶೈವಾಚಾರ ಕೌಸ್ತುಭ" ಎಂಬ ಗ್ರಂಥ ಬರೆಸಿದ್ದಾನೆ. ಕೆಳದಿಯ ರಾಜರು ಕಾಲ ಸರ್ವಧರ್ಮದವರಿಗೂ ಉದಾರಾಶ್ರಯವಿತ್ತಿದ್ದಾರೆ. ಆದರೆ ಆ ಕಾಲದಲ್ಲಿ ವೀರಶೈವ ಮಠಮಾನ್ಯಗಳು ಬಹಳವಾಗಿ ಸ್ಥಾಪನೆಯಾದವು.

ಕೆಳದಿಯು ಮಲೆನಾಡಿನಲ್ಲಿ ಕಳೆಗೊಂಡಿದ್ದಾಗಲೇ, ಸ್ವಾದಿ, ಬಿಳಗಿ ಮತ್ತು ಕೊಡಗು ರಾಜ್ಯಗಳು ಆ ಮಲೆನಾಡಿನಲ್ಲಿ ಬೆಳಕಿಗೆ ಬಂದಿವೆ.

ಸ್ವಾದಿಯ ರಾಜರಲ್ಲಿ ಸದಾಶಿವರಾಯನು ಪ್ರಖ್ಯಾತನು. ಇವನು "ಪಂಚಶತ ನೀತಿಗಳು" ಎಂಬ ಗ್ರಂಥ ಬರೆದಿದ್ದಾನೆ. ಸ್ವಾದಿ ರಾಜ್ಯವು 1505ರಲ್ಲಿ ಅರಸಪ್ಪ ನಾಯಕನಿಂದ ಸ್ಥಾಪನೆಯಾಯಿತು. ಮುಂದೆ ರಾಮಚಂದ್ರ, ರಘುನಾಥ, ಮಧುಲಿಂಗ,ಸದಾಶಿವರಾಯ, ಬಸವಲಿಂಗ ಮತ್ತು ಇಮ್ಮಡಿ ಸದಾಶಿವ ಎಂಬುವವರು ಇಲ್ಲಿ ಅನುಕ್ರಮವಾಗಿ ರಾಜ್ಯಭಾರ ನಡೆಸಿದರು. ಇವರು ಬನವಾಸಿಯ ಮಧುಕೇಶ್ವರನ ಭಕ್ತರು. ಸ್ವಾದಿಯ ರಾಜ್ಯ ಮೆಣಸಿನ ಬೆಳೆಗೂ ಕೆಳದಿಯ ರಾಜ್ಯವು ಅಡಕೆ ಮತ್ತು ಏಲಕ್ಕಿ ಬೆಳೆಗೂ ಪ್ರಸಿದ್ಧವಾಗಿವೆ. ಬಿಳಗಿ ರಾಜ್ಯವು ಕಾರವಾರ ಜಿಲ್ಲಾ ಸಿದ್ದಾಪುರ ಪ್ರಾಂತ್ಯವನ್ನು ಒಳಗೊಂಡಿತ್ತು. ಕೊಡಗು ರಾಜ್ಯವು ಈಗಿನ ಕೊಡಗಿನ ಸುತ್ತುಮುತ್ತಣ ಪ್ರದೇಶವನ್ನೊಳಗೊಂಡಿತ್ತು. ಕೊಡಗಿನಲ್ಲಿ ಲಿಂಗರಾಜನು ಅತ್ಯಂತ ಪ್ರಸಿದ್ಧನು. "ಕೆಳದಿ ನೃಪ ವಿಜಯ", ಬಿಳಗಿ ಅರಸುಗಳ ವಂಶಾವಳಿ", "ರಾಜೇಂದ್ರನಾಮೆ", "ಶಿವತತ್ವರತ್ನಾಕರ" ಎಂಬ ಈ ಗ್ರಂಥಗಳಿಂದ ಮಲೆನಾಡಿನ ರಾಜ್ಯಗಳ ವಿಚಾರಗಳನ್ನು ತಿಳಿಯಬಹುದು. ತುಮಕೂರು ಜಿಲ್ಲೆಯಲ್ಲಿ 15 ಮತ್ತು 16ನೇ ಶತಮಾನಗಳಲ್ಲಿ ಮಧುಗಿರಿಯಲ್ಲಿ ಬಿಜ್ಜಾವರದ ರಾಜರು ಆಳಿ ಬಾಳಿದರು. ಇವರಲ್ಲಿ ಚಿಕ್ಕ ಭೂಪಾಲನು ಅತ್ಯಂತ ಪ್ರಸಿದ್ಧನು. ಇವನು ಸಂಸ್ಕೃತದಲ್ಲಿ "ಅಭಿನವ ಭರತ ಸಂಗ್ರಹ ಸಾರ" ಬರೆದಿದ್ದಾನೆ. ಈ ರಾಜನಿಗೆ ಮಹಾಕವಿ ವಿರಕ್ತ ತೋಂಟದಾರ್ಯನು ಗುರುವಾಗಿದ್ದನು. "ತೋಂಟದಾರ್ಯನ ಸಾಂಗತ್ಯ" ಎಂಬ ಗ್ರಂಥದಲ್ಲಿ ಈ ರಾಜರ ಚರಿತ್ರೆ ನಿರೂಪಿತವಾಗಿದೆ. "ಮಧುಗಿರಿ ಚರಿತ್ರೆ" ಎಂಬ ಗ್ರಂಥದಲ್ಲಿ ಕೂಡ ನಿರೂಪಿತವಾಗಿದೆ. ತುಮಕೂರು ಜಿಲ್ಲಾ ಹಾಗಲುವಾಡಿಯಲ್ಲಿ ಒಂದು ವೀರಶೈವ ರಾಜ ಮನೆತನವು ಆಗಿ ಹೋಯಿತು. ಬಿಜ್ಜಾವರದವರೂ ಇವರೂ ಸಮಕಾಲೀನರು.

ಕರ್ನಾಟಕದ ಗಡಿಗಳಲ್ಲಿ, ಬೇರಿಕೆ, ಸೂಳಗೆರೆ, ನೆಲ್ಮಾಳಂ, ಪುಂಗನೂರು, ಆನೆಕಲ್ಲು, ಮೊದಲಾದ ಕಡೆ ವೀರಶೈವ ರಾಜ ಮನೆತನಗಳು ಆಗಿ ಹೋಗಿವೆ. ಉತ್ತರ ಕರ್ನಾಟಕದಲ್ಲಿ ಒಂಟಿಮುರಿ, ಶಿರಸಂಗಿ, ಕಿತ್ತೂರು. ಬೆಳವಡಿ ಮೊದಲಾದ ಕೆಲವು ಪಾಳೆಯಪಟ್ಟುಗಳು ಆಳಿ ಬಾಳಿವೆ. ಹೀಗೆ ಕ್ರಿ.ಶ. 11ನೆಯ ಶತಮಾನದಿಂದ ಇಂದಿನವರೆಗೆ ವೀರಶೈವ ಸಮಾಜವು ತಲೆಯೆತ್ತಿ ನಿಂತಿರುವುದಕ್ಕೆ ಕರ್ನಾಟಕದಲ್ಲಿ ಆಗಿ ಹೋದ ಈ ವೀರಶೈವ ರಾಜರು, ದಂಡನಾಯಕರು, ಪಾಳೆಯಗಾರರು ಮೊದಲಾದವರು ಬಹು ಮುಖ್ಯ ಕಾರಣವೆಂದು ಹೇಳಬಹುದು. ವೀರಶೈವ ಮತ ಚರಿತ್ರೆ ಬರೆಯುವವರು. ವೀರಶೈವ ರಾಜರು ಮತ್ತು ಅವರ ಪರಂಪರೆಯನ್ನು ಕುರಿತು ಬರೆಯುವುದು ಬಹಳ ಅಗತ್ಯವಾಗಿದೆ.

With

best

compliments

from

DESHAMUDRE & SONS

Avenue Road :: BANGALORE-2

Authorised Dealers:
CHANDAN STEEL FURNITURE

Agents:
MYSORE SANDAL SOAPS

ಪಂಚ ಜಗದ್ಗುರುಗಳಿಗೆ ನಮ್ಮ ಪ್ರಣಾಮ

G. Mahadevappa & Sons

Cotton Merchants and Commission Agents

DAVANAGERE-1

ತಂತಿ: 'GANESAR'

ಫೋನ್ 131 ಕಚೇರಿ
2102 ನಿವಾಸ

ಜಿ. ಮಹದೇವಪ್ಪ ಅಂಡ್ ಸನ್ಸ್,
ಮರ್ಚಂಟ್ಸ್ ಆಂಡ್ ಕಮೀಷನ್ ಏಜೆಂಟ್ಸ್, ದಾವಣಗೆರೆ-1

ಪಂಚ ಜಗದ್ಗುರುಗಳ ದಿವ್ಯ ಸಮಾವೇಶ
ಸಮಾಜದ ಭವ್ಯ ನೆಮ್ಮದಿಗೆ ಸಂದೇಶ
ಸಂದರ್ಭಕ್ಕೆ ನಮ್ರ ಸಾಷ್ಟಾಂಗ ನಮನ

ತುಮಕೂರು
ಸೆಂಟ್ರಲ್ ಫೈನಾನ್ಸ್
ಕಾರ್ಪೋರೇಷನ್ (ರಿ.)

ಫಸ್ಟ್ ಮೈನ್ ರಸ್ತೆ ನ್ಯೂ ಮಂಡೀಪೇಟೆ ತುಮಕೂರು

ಸಿದ್ಧಾಂತ ಶಿಖಾಮಣಿ – ಶಿವಯೋಗಿ ಶಿವಾಚಾರ್ಯ

ಸಿದ್ಧಾಂತ ಶಿಖಾಮಣಿಯು ಶಿವಾದ್ವೈತ ಸಿದ್ಧಾಂತವನ್ನು ಅರ್ಥಾತ್ ಷಟ್‌ಸ್ಥಲ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಗ್ರಂಥಗಳಲ್ಲೆಲ್ಲಾ ಅತ್ಯಂತ ಪ್ರಾಚೀನವಾದುದು. ಇದರ ತರುವಾಯ ರಚಿತವಾದ ವೀರಶೈವ ಧಾರ್ಮಿಕ ಗ್ರಂಥಗಳ ಮೇಲೆ ಈ ಗ್ರಂಥವು ವಿಶೇಷ ಬೆಳಕನ್ನು ಚೆಲ್ಲಿದೆ ಹಾಗೂ ಅವುಗಳಿಗೆ ಮಾರ್ಗದರ್ಶನ ನೀಡಿದೆ. ಅರ್ವಾಚೀನ ವೀರಶೈವ ದರ್ಶನಕಾರರೆಲ್ಲರೂ ಇದರಿಂದ ಸ್ಫೂರ್ತಿಯನ್ನು ಪಡೆದಿರುವುದು ಮಾತ್ರವಲ್ಲದೆ ತಮ್ಮ ತಮ್ಮ ಗ್ರಂಥಗಳಲ್ಲಿ ಸಿದ್ಧಾಂತ ಶಿಖಾಮಣಿಯ ಶ್ಲೋಕಗಳನ್ನು ಸಂದರ್ಭೋಚಿತವಾಗಿ ಉಲ್ಲೇಖಿಸಿದ್ದಾರೆ. ಕ್ರಿ.ಶ. 1060 ರಲ್ಲಿ ಜೀವಿಸಿದ್ದ ಶ್ರೀಪತಿ ಪಂಡಿತರಿಂದ ರಚಿಸಲ್ಪಟ್ಟಿರುವ ಶ್ರೀಕರ ಭಾಷ್ಯದಲ್ಲಿಯೂ ಈ ಗ್ರಂಥದ ಶ್ಲೋಕಗಳು ಅನೇಕ ಕಡೆಗಳಲ್ಲಿ ಪ್ರಮಾಣಭೂತವಾಗಿ ಉದಾಹರಿಸಲ್ಪಟ್ಟಿವೆ. ಶ್ರೀಪತಿ ಪಂಡಿತರು ಅಥಾತೋ ಬ್ರಹ್ಮ ಜಿಜ್ಞಾಸಾ (೧ – ೧ – ೧) ಎಂಬ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯುವಲ್ಲಿ "ಪವಿತ್ರಂತೇ—ಇತಿ ಋಗ್ವೇದ ಮಂತ್ರಸ್ಯ ಸಿದ್ಧಾಂತ ಶಿಖಾಮಣೌ ಶ್ರೀ ರೇಣುಕಾಚಾರ್ಯೇಣ ಲಿಂಗಧಾರಣ ಪರತ್ವೇನ ನಿರ್ದೇಶಾತ್", "ಶ್ರೀ ರೇಣುಕ ಭಗವತ್ಪಾದಾಚಾರ್ಯೇಣಾಪಿ— "ಪಿಂಡತಾ ಪಿಂಡವಿಜ್ಞಾನಮಿತ್ಯಾರಭ್ಯ, ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ॥ ಇತ್ಯಂತೇನ ಸಿದ್ಧಾಂತ ಶಿಖಾಮಣೌ ತಸ್ಯೈವೋಪದೇಶಾತ್" ಇತ್ಯಾದಿ ವಾಕ್ಯಗಳನ್ನು ಉಲ್ಲೇಖಿಸಿ ಸಿದ್ಧಾಂತ ಶಿಖಾಮಣಿಯ ಪ್ರಾಶಸ್ತ್ಯವನ್ನು ಹೊರಗೆಡವಿದ್ದಾರೆ. ಶ್ರೀಕಂಠ ಶಿವಾಚಾರ್ಯರು ಕೂಡ ಅವಿಭಾಗಾಧಿಕರಣದ "ಅವಿಭಾಗೇನ ದೃಷ್ಟತ್ವಾತ್" ಎಂಬ ಬ್ರಹ್ಮ ಸೂತ್ರದ (೪– ೪– ೪) ಭಾಷ್ಯದಲ್ಲಿ ಸಿದ್ಧಾಂತ ಶಿಖಾಮಣಿಯ ಒಂಬತ್ತನೆಯ ಪರಿಚ್ಛೇದದಲ್ಲಿ ಬರುವ "ಮುಕ್ತಃ ಶಿವಸಮೋಭವೇತ್" ಎಂಬ ಶ್ಲೋಕವನ್ನು ಪ್ರಮಾಣಭೂತವಾಗಿ ಅಂಗೀಕರಿಸಿರುತ್ತಾರೆಂದ ಮೇಲೆ ಈ ಗ್ರಂಥದ ಘನತೆ ಗೌರವಗಳನ್ನು ಒತ್ತಿ ಹೇಳಬೇಕಾಗಿಯೇ ಇಲ್ಲ.

ವೀರಶೈವ ದರ್ಶನ ಗ್ರಂಥಗಳಿಗೆ ಶಿಖಾಮಣಿಪ್ರಾಯವಾಗಿರುವ ಇಂತಹ ಮೇರು ಕೃತಿಯನ್ನು ರಚಿಸಿದ ಶಿವಯೋಗಿ ಶಿವಾಚಾರ್ಯನು ಯಾವ ಊರಿನವನು, ಯಾವ ಕಾಲದಲ್ಲಿದ್ದನು ಎಂಬೀ ವಿಚಾರಗಳನ್ನು ತಿಳಿಯಲು ಸ್ವಾಭಾವಿಕವಾಗಿಯೇ ಕುತೂಹಲವುಂಟಾಗು



ಶ್ರೀ ಡಿ. ರೇಣುಕಾಚಾರ್ಯರು

ವೀರಶೈವಮತ ಸಂಸ್ಥಾಪಕರುಗಳಾದ ಪಂಚಪೀಠಗಳ ಬಗ್ಗೆ ಉತ್ಕಟ ಅಭಿಮಾನಿಗಳಾದ ದೊಡ್ಡಬಳ್ಳಾಪುರ ಮಹಂತಿನ ಮಠದ ಶ್ರೀ. ಡಿ. ರೇಣುಕಾಚಾರ್ಯರು ಸಂಸ್ಕೃತ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಉದ್ದಾಮ ಪಂಡಿತರು. ಶ್ರೀಯುತರು ಅನೇಕ ಗ್ರಂಥಗಳನ್ನು (ಗದ್ಯ-ಪದ್ಯ-ನಾಟಕ) ಬರೆದಿದ್ದಾರೆ. ಇವರ ಕೆಲವು ಪುಸ್ತಕಗಳು ಪಠ್ಯಪುಸ್ತಕಗಳೂ ಆಗಿದ್ದವು. ಸರ್ಕಾರದ ಭಾಷಾಂತರಕಾರರಾಗಿ ನಿವೃತ್ತರಾಗಿರುವ ಶ್ರೀ ರೇಣುಕಾಚಾರ್ಯರು ಉತ್ತಮ ಉಪನ್ಯಾಸಕರು ಸಂಪ್ರದಾಯಸ್ಥರು, ಸಾತ್ವಿಕರು, ಸದಾ ಹಸನ್ಮುಖಿಗಳೂ ಆಗಿರುತ್ತಾರೆ. ಶ್ರೀಯುತರಿಂದ ಕನ್ನಡನಾಡು ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದಾಗಿದೆ.

ತ್ತದೆ. ಆದರೆ ಈ ವಿಚಾರಗಳು ಈ ಗ್ರಂಥದಿಂದಾಗಲಿ ಮತ್ತಾವ ಗ್ರಂಥಗಳಿಂದಾಗಲಿ ತಿಳಿದು ಬರುವುದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಯಾವನೊಬ್ಬ ಕವಿಯ, ದಾರ್ಶನಿಕನ ಅಥವಾ ಮತ್ತಾವನೇ ಪ್ರಸಿದ್ಧ ಪುರುಷನ ಜೀವನ ಚರಿತ್ರೆಯನ್ನು ಅವನ ಸಮಕಾಲೀನರಾದ ಇತಿಹಾಸಜ್ಞರು ಬರೆದಿಡುವ ಪದ್ಧತಿಯು ಮೊದಲಿನಿಂದಲೂ ರೂಢಿಗೆ ಬಂದಿದೆ. ಆದರೆ ನಮ್ಮ ದೇಶದಲ್ಲಿ ಈ ಸಂಪ್ರದಾಯವು ರೂಢಿಯಲ್ಲಿಲ್ಲದೆ ಇರುವುದರಿಂದ ಇಲ್ಲಿನ ಅನೇಕ ಕವಿಗಳು, ದಾರ್ಶನಿಕರು ಮುಂತಾದವರುಗಳ ಜೀವನ ಚರಿತ್ರೆಗಳೇ ನಮಗೆ ಸರಿಯಾಗಿ ಗೊತ್ತಿಲ್ಲದಂತಾಗಿವೆ. ಇದು ನಮ್ಮ ದುರ್ದೈವ.

ಶಿವಯೋಗಿ ಶಿವಾಚಾರ್ಯನು ಜೀವಿಸಿದ್ದ ಕಾಲದ ವಿಚಾರದಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ಅಭಿಪ್ರಾಯ ಪಡುತ್ತಾರೆ. ಇಂತಹ ವಿಚಾರದಲ್ಲಿ ಸರಿಯಾದ ಸಾಧನಗಳಿಲ್ಲದೆ ಏಕಾಭಿಪ್ರಾಯವು ಒಡಮೂಡುವುದು ಕಷ್ಟ. ಈತನ ಕಾಲವನ್ನು ಗೊತ್ತುಮಾಡುವಲ್ಲಿ ನಮಗಿರುವ ಸಾಧನಗಳು ಎರಡು: ಒಂದು ಬಾಹ್ಯ ಸಾಧನ, ಇನ್ನೊಂದು ಆಂತರಿಕ ಸಾಧನ. ನಮಗೆ ದೊರೆಯುವ ಬಾಹ್ಯ ಸಾಧನವೆಂದರೆ ಶ್ರೀಪತಿ ಪಂಡಿತರ ಬ್ರಹ್ಮಸೂತ್ರ ಭಾಷ್ಯ. ಈ ಲೇಖನದ ಎರಡನೇ ಪ್ಯಾರಾದಲ್ಲಿ ಹೇಳಿರುವಂತೆ ಶ್ರೀಕರಭಾಷ್ಯದಲ್ಲಿ ಸಿದ್ಧಾಂತ ಶಿಖಾಮಣಿಯ ಶ್ಲೋಕಗಳು ಪ್ರಮಾಣಭೂತವಾಗಿ ಉದಾಹರಿಸಲ್ಪಟ್ಟಿರುವುದರಿಂದ ಸಿದ್ಧಾಂತಶಿಖಾಮಣಿಯು ಶ್ರೀಕರಭಾಷ್ಯಕ್ಕಿಂತಲೂ ಹಿಂದಿನದೆಂದು ಯಾರಾದರೂ ಒಪ್ಪುವ ಮಾತಾಗಿದೆ. ಶ್ರೀಪತಿ ಪಂಡಿತರು ಕ್ರಿ. ಶ. ೧೧೬೦ ರಲ್ಲಿ ಜೀವಿಸಿದ್ದರು, ಅವರು ಅನಂತಪಾಲನ ಆಸ್ಥಾನದಲ್ಲಿ ಗುರುವಾಗಿದ್ದರು. ಇದಕ್ಕೆ ವಿಜಯವಾಡದ ಶಾಸನವೇ ಆಧಾರವಾಗಿದೆ. ಈ ಕಾರಣದಿಂದ ಸಿದ್ಧಾಂತ ಶಿಖಾಮಣಿ ಗ್ರಂಥವು ಇದಕ್ಕಿಂತ ಹಿಂದಿನದಾಗಿರಬೇಕು. ಎಷ್ಟು ಹಿಂದಿನದೆಂಬುದು ಅನಿಶ್ಚಿತವಾಗಿದೆ. ಭಾಷ್ಯಕಾರರಿಗೆ ಈ ಗ್ರಂಥವು ಮಾರ್ಗದರ್ಶನ ನೀಡಬೇಕಾದರೆ ಮತ್ತು ಭಾಷ್ಯಕಾರರಿಗೆ ಇದರಲ್ಲಿ ಅಷ್ಟು ಗೌರವಬುದ್ಧಿ ಮೂಡಬೇಕಾದರೆ ಇದು ಅವರಿಗಿಂತಲೂ ಹಲವಾರು ಶತಮಾನಗಳಾದರೂ ಹಿಂದಿನದಾಗಿರಬೇಕು.

ಇನ್ನು ಆಂತರಿಕವಾಗಿ ನಮಗೆ ಯಾವ ಸಾಧನವೂ ದೊರೆಯುವುದಿಲ್ಲ. ಆದರೆ, ಗ್ರಂಥಕರ್ತರು ಸ್ವವಿಚಾರವನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ

> "ಯೇನ ರಕ್ಷಾವತೀ ಜಾತಾ ಶಿವಭಕ್ತಿಃ ಸನಾತನೀ ।
> ಬೌದ್ಧಾದಿ ಪ್ರತಿ ಸಿದ್ಧಾಂತ ಮಹಾಧ್ವಾಂತಾಂಶು ಮಾಲಿನಾ ॥"

ಎಂಬ ಶ್ಲೋಕವು ನಮ್ಮ ಕಣ್ಣಿಗೆ ಬೀಳುತ್ತದೆ. ಬೌದ್ಧಾದಿ ಪ್ರತಿಕೂಲ ಸಿದ್ಧಾಂತಗಳೆಂಬ ಮಹಾಂಧಕಾರಕ್ಕೆ ಸೂರ್ಯನಂತಿರುವ ಶಿವಯೋಗಿ ಶಿವಾಚಾರ್ಯನಿಂದ ಸನಾತನವಾದ ಶಿವಭಕ್ತಿಯು ರಕ್ಷಿಸಲ್ಪಟ್ಟಿತು ಎಂದು ಹೇಳಿರುವುದರಿಂದ ಈತನು ಬೌದ್ಧಮತವು ಉಚ್ಛ್ರಾಯಸ್ಥಿತಿಯಲ್ಲಿದ್ದ ಕಾಲದಲ್ಲಿ ಜೀವಿಸಿರಬಹುದೆಂದು ಧ್ವನಿತವಾಗುತ್ತದೆ. ಇದು ನಿಜವಾದ ಪಕ್ಷದಲ್ಲಿ ಇವನ ಕಾಲವು ಎರಡು ಸಾವಿರ ವರ್ಷಗಳಿಗಿಂತ ಹಿಂದಕ್ಕೆ ಹೋಗುತ್ತದೆ.

ಶಿವಯೋಗಿ ಶಿವಾಚಾರ್ಯನ ಪೂರ್ವಜರು ಶಿವಭಕ್ತಿ ಸಂಪನ್ನರೂ, ಶಿವಯೋಗಶಿಖಾಮಣಿಗಳೂ, ಪವಿತ್ರಾತ್ಮರೂ, ಶಿವಸ್ವರೂಪರೂ, ಶಿವಜ್ಞಾನ ಮಹೋದಧಿಗಳೂ ಆಗಿದ್ದರೆಂದು ಗ್ರಂಥಕರ್ತೃವೇ ಹೇಳಿಕೊಂಡಿರುವುದರಿಂದ ಈತನು ದಿವ್ಯವಾದ ಭವ್ಯವಾದ ಪರಂಪರೆಯುಳ್ಳವನೆಂದು ಅರ್ಥವಾಗುತ್ತದೆ. ಇವನ ವಂಶದವರೆಲ್ಲರೂ ಜ್ಞಾನಸಮುದ್ರರೇ ಆಗಿ ಅಧ್ಯಾತ್ಮ ಪಿಪಾಸುಗಳಿಗೆ ಜ್ಞಾನಾಮೃತವನ್ನು ಪಾನಮಾಡಿಸಿ ಅವರನ್ನು ಕೃತಾರ್ಥರನ್ನಾಗಿ ಮಾಡುತ್ತಿದ್ದರೆಂಬುದರಲ್ಲಿ ಲೇಶವೂ ಸಂದೇಹವಿಲ್ಲ.

ಇನ್ನು ಶಿವಯೋಗಿ ಶಿವಾಚಾರ್ಯನಾದರೋ ವೇದಾಗಮ ಪುರಾಣೇತಿಹಾಸಗಳಲ್ಲಿ ಕೋವಿದನೂ ಮಹಾ ಕೀರ್ತಿವಂತನೂ ಮಹಾ ಶಿವಾನುಭವಿಯೂ, ಅವಿರಾಳನಂದದಲ್ಲಿಯೇ ಮಗ್ನನಾದವನೂ ಆಗಿ ವೀರಶೈವ ಧರ್ಮಮಾರ್ಗ ಪ್ರಚಾರಕನಾಗಿ ಶಿವಭಕ್ತಿ ರಕ್ಷಕನಾಗಿದ್ದನು.

ಈತನು ಬರೆದಿರುವ ಸಿದ್ಧಾಂತಶಿಖಾಮಣಿಯು ಆದಿ ಜಗದ್ಗುರು ಶ್ರೀ ರೇಣುಕ ಭಗವತ್ಪಾದರವರು ಅಗಸ್ತ್ಯ ಮಹರ್ಷಿಗಳಿಗೆ ಬೋಧಿಸಿದ ಶಿವಸಿದ್ಧಾಂತವನ್ನು ಒಳಗೊಂಡಿದೆ. ಈ ಸಿದ್ಧಾಂತವಾದರೋ "ಪುರಾ ದೇವೇನ ಕಥಿತಂ ದೇವ್ಯೈ ತನ್ನಂದನಾಯಚ।" ಹಿಂದೆ ಶಿವನಿಂದ ಪಾರ್ವತಿಗೂ ಷಣ್ಮುಖನಿಗೂ ಉಪದಿಷ್ಟವಾಯಿತೆಂದು ತಿಳಿಸಿರುವುದರಿಂದ ಇದು ಬಹಳ ಪ್ರಾಚೀನವಾದುದೆಂದು ಸಿದ್ಧವಾಗುತ್ತದೆ. ಸಮಸ್ತ ಶೈವ ತಂತ್ರಗಳಲ್ಲಿ ಈ ವೀರಶೈವ ಮಹಾತಂತ್ರವು ಅತ್ಯಂತ ಶ್ರೇಷ್ಠವಾದುದಾಗಿ ಲೋಕದಲ್ಲಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದ ಪ್ರಖ್ಯಾತಗೊಂಡಿದೆಯೆಂದು ಗ್ರಂಥಕರ್ತೃವೇ ಹೇಳಿಕೊಂಡಿರುವುದು ಉತ್ಪ್ರೇಕ್ಷೆಯಿಂದಲ್ಲ, ಆತ್ಮಪ್ರಶಂಸೆಯಿಂದಲ್ಲ, ಕೇವಲ ಅದರ ಯೋಗ್ಯತೆಯ ದೃಷ್ಟಿಯಿಂದ. ಇದು ವೀರಶೈವ ದಾರ್ಶನಿಕ ಸಾಹಿತ್ಯದ ನಭೋಮಂಡಲದಲ್ಲಿ ಧ್ರುವತಾರೆಯಂತೆ ಕಂಗೊಳಿಸುತ್ತಿದೆ. ಇಂತಹ ಮಕುಟಪ್ರಾಯವಾದ ಗ್ರಂಥವನ್ನು ಮುಮುಕ್ಷುಗಳ ಹಿತಾರ್ಥವಾಗಿ ಬರೆದು ವೀರಶೈವರಿಗೆ ಕೊಡುಗೆಯಾಗಿ ಕೊಟ್ಟಿದ್ದಾನೆ ಶಿವಯೋಗಿ ಶಿವಾಚಾರ್ಯನು.

ಭಗವದ್ಗೀತೆಯು ಯಾವರೀತಿ ಕೃಷ್ಣಾರ್ಜುನರ ಸಂವಾದ ರೂಪವಾಗಿದ್ದು ಭಗವದ್ಗೀತೆಯೆಂದು ಕರೆಯಲ್ಪಟ್ಟಿದೆಯೋ ಆದೇ ರೀತಿ ಸಿದ್ಧಾಂತಶಿಖಾಮಣಿಯು ರೇಣುಕಾಗಸ್ತ್ಯ ಸಂವಾದ ರೂಪ

ವಾಗಿದ್ದು ರೇಣುಕಗೀತೆಯೆಂದು ಕರೆಯಲ್ಪಟ್ಟಿದೆ. ಕೃಷ್ಣಾರ್ಜುನರ ಸಂವಾದ ನಡೆದದ್ದು ರಣರಂಗದಲ್ಲಿ. ಅರ್ಜುನನಿಗೆ ಶೋಕ ಮೋಹಗಳಾವರಿಸಿ ದಿಕ್ಕುತೋರದಾಗಿದ್ದ ಸಂದರ್ಭದಲ್ಲಿ. ಎಲ್ಲೆಲ್ಲಿಯೂ ರಥಾಶ್ವಪದಾತಿ ದಳಗಳ ಸಪ್ಪಳದಿಂದ ಕೂಡಿದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ. ಆದರೆ ರೇಣುಕಾಗಸ್ತ್ಯರ ಸಂವಾದ ನಡೆದ ಸನ್ನಿವೇಶವೇ ಬೇರೆ. ಸಹ್ಯಾದ್ರಿ ಪರ್ವತದ ಸಾನುಪ್ರದೇಶ, ಗಗನಚುಂಬಿತ ಭೂರುಹಗಳಿಂದ ಕೂಡಿ ಪ್ರಕೃತಿಯ ಮಹೋನ್ನತವಾದ ಸೊಬಗಿನಿಂದ ಕಂಗೊಳಿಸುವ ಅಗಸ್ತ್ಯರ ತಪೋವನ. ಹೊರಗಿನ ಸದ್ದುಗದ್ದಲಗಳಿಗೆ ಅವಕಾಶವಿಲ್ಲವಾಗಿ ಎಲ್ಲೆಲ್ಲೂ ಮೌನ ಮುದ್ರೆಯನ್ನು ತಾಳಿದ ಘನಗಂಭೀರ ಪರಿಸ್ಥಿತಿ. ಇಂತಹ ಪ್ರಶಾಂತವಾದ ಹಾಗೂ ಪವಿತ್ರವಾದ ವಾತಾವರಣದಲ್ಲಿ ಶಿಷ್ಯನ ಸದಿಚ್ಛೆಯನ್ನು ದಿವ್ಯದೃಷ್ಟಿಯಿಂದ ತಿಳಿದು ಅವನನ್ನು ಉದ್ಧರಿಸುವುದಕ್ಕಾಗಿ ಗುರುವು ತಾನಾಗಿಯೇ ಶಿಷ್ಯನನ್ನು ಹುಡುಕಿಕೊಂಡು ಬಂದು ಆತನಿಗೆ ಬೋಧೆಮಾಡುವ ಅಪೂರ್ವ ಯೋಗವಿದು.

ಈ ಬೋಧೆಯು ಸಂವಾದರೂಪವಾಗಿರುವುದರಿಂದ ಬಹಿರಂಗವಾಗಿ ಮಾಡುವ ಭಾಷಣಗಳಂತೆ ಅಥವಾ ಪ್ರವಚನಗಳಂತೆ ಅಲ್ಲ. ಇಲ್ಲಿ ಇರುವವರು ಗುರುಶಿಷ್ಯರಿಬ್ಬರೇ. ಅವರಿಬ್ಬರ ಸಂಬಂಧ ನಿಕಟವಾಗಿದೆ. ಶಿಷ್ಯನ ಪ್ರಶ್ನೆಗಳಿಗೆ ಗುರುವಿನ ಉತ್ತರ, ಅಲ್ಲಲ್ಲಿ ಉದ್ಭವಿಸುವ ಸಂದೇಹಗಳಿಗೆ ಅಲ್ಲಲ್ಲಿಯೇ ಪರಿಹಾರ ಸೂಚಿಸುವುದು — ಹೀಗಿರುವುದರಿಂದ ಇಲ್ಲಿ ಸಹಜವಾಗಿಯೇ ಆತ್ಮೀಯತೆ ಬೆಳೆಯುತ್ತದೆ. ಇದರಿಂದ ಶಿಷ್ಯನು ಕೇಳುವ ಪ್ರಶ್ನೆಗಳಿಗೆ ಯೋಗಸಿದ್ಧನೂ ಜ್ಞಾನಸಿದ್ಧನೂ ಆದ ಗುರುವು ಕೊಡುವ ಉತ್ತರಗಳು ನೇರವಾಗಿ ಶಿಷ್ಯನ ಹೃದಯಕ್ಕೆ ನಾಟುತ್ತವೆ. ಅಗಸ್ತ್ಯರು ಕೇಳುವ ಪ್ರಶ್ನೆಗಳು, ಅವಕ್ಕೆ ಅವರು ಪಡೆಯುವ ಉತ್ತರಗಳು ಅಗಸ್ತ್ಯರಿಗೆ ಮಾತ್ರವೇ ಮೀಸಲಾಗಿಲ್ಲ ಭವದಲ್ಲಿ ಸಿಕ್ಕಿಕೊಂಡು ನರಳುತ್ತಿರುವ ಮುಮುಕ್ಷುಗಳಿಗೆಲ್ಲಾ ಸಂಬಂಧಪಟ್ಟಿವೆ.

ಅರ್ಜುನನು ಗೀತೆಯನ್ನೆಲ್ಲಾ ಕೇಳಿದ ಮೇಲೆ ಅವನ ಮೋಹವು ಅಳಿದು ಸಂದೇಹಗಳು ನಿವೃತ್ತಿಯಾಗಿ

> “ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ।
> ಸ್ಥಿತೋಸ್ಮಿಗತ ಸಂದೇಹಃ ಕರಿಷ್ಯೇ ವಚನಂ ತವ । ”

ಎಂದು ಹೇಳಿದಂತೆ ಅಗಸ್ತ್ಯರು ಕೂಡ ತಮಗೆ ರೇಣುಕರ ಬೋಧೆಯಿಂದುಂಟಾದ ಸಫಲತೆಯನ್ನು ಈರೀತಿ ಹೇಳಿಕೊಂಡಿದ್ದಾರೆ.

> “ ಅವತೀರ್ಣಮಿದಂ ಶಾಸ್ತ್ರಮನವದ್ಯಂ ತ್ವದಾನನಾತ್ ।
> ಶ್ರುತ್ವಾ ಮೇ ಮೋದತೇ ಚಿತ್ತಂ ಜ್ಯೋತಿಃ ಪಶ್ಯಚ್ಛಿವಾಭಿದಂ ॥
> ಅದ್ಯ ಮೇ ಸಫಲಂ ಜನ್ಮ ಗತೋ ಮೇ ಚಿತ್ತವಿಭ್ರಮಃ ।
> ಸಂಜಾತಾ ಪಾಶವಿಚ್ಛಿತ್ತಿಸ್ತಪಾಂಸಿ ಫಲಿತಾನಿ ಮೇ ॥
> ಇದಾನೀಮೇವ ಮೇ ಜಾತಂ ಮುನಿರಾಜತ್ವಮುತ್ತಮಂ ।
> ಇತಃಪರಂ ಮಯಾನಾಸ್ತಿ ಸದೃಶೋ ಭುವನತ್ರಯೇ ॥

ಭಗವದ್ಗೀತೆಯಲ್ಲಿ ಕೆಲವು ಶ್ಲೋಕಗಳಲ್ಲಿ ಕಂಡುಬರುವ ಛಾಯೆಯನ್ನು ಸಿದ್ಧಾಂತಶಿಖಾಮಣಿಯ ಶ್ಲೋಕಗಳಲ್ಲಿಯೂ ಕಾಣಬಹುದು. ಅಂತಹ ಕೆಲವು ಶ್ಲೋಕಭಾಗಗಳನ್ನು ಈ ಕೆಳಗೆ ಉದಾಹರಿಸಲಾಗಿದೆ.

> ‘ನಿರ್ಮಮೋ ನಿರಹಂಕಾರೋ ನಿರಸ್ತಕ್ಲೇಶಪಂಜರಃ । ”
> “ ಯದೃಚ್ಛಾಲಾಭಸಂತುಷ್ಟೋ ಭಸ್ಮ ನಿಷ್ಠೋ ಜಿತೇಂದ್ರಿಯಃ ।
> ‘ ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾಕ್ಷಮಾ ॥ ’
> ‘ ಸರ್ವೇಂದ್ರಿಯ ಸಮಾರೂಢೋಽಪಿ ಸರ್ವೇಂದ್ರಿಯ ವಿಹೀನವತ್ ”
> ‘ ಅಕರ್ತಾಽಹಮವೇತ್ತಾಽಹಮದೇಹೋಽಹಂ ನಿರಂಜನಃ ’
> ‘ಜ್ಞಾನೀ ಕರ್ಮಣಿರೂಢೋಽಪಿ ಲಿಪ್ಯತೇ ನಕ್ರಿಯಾಫಲೈಃ ’
> ‘ಜಿತಕಾಮಾ ಜಿತಕ್ರೋಧಾ ಮೋಹಗ್ರಂಥಿ ವಿಭೇದಿನಃ ’
> ‘ ಸಮಾಃ ಶತ್ರೌಚ ಮಿತ್ರೇಚ ಸಾಕ್ಷಾತ್ಕೃತ ಶಿವಾತ್ಮಕಾಃ ’
> ‘ ಗಚ್ಛಂಸ್ತಿಷ್ಠನ್ ಸ್ವಪನ್ವಾಽಪಿ ಜಾಗ್ರದ್ವಾಽಪಿ ಮಹಾಮತಿಃ “
> ‘ನಿರಸ್ತ ಸರ್ವವ್ಯಾಪಾರಶ್ಚಿತ್ರಂ ಸ್ವಪಿತಿ ಸಂಯಮೀ । ’

ಇದರಿಂದ ಭಗವದ್ಗೀತೆಯು ಮೊದಲೋ ಸಿದ್ಧಾಂತ ಶಿಖಾಮಣಿಯು ಮೊದಲೋ ಎಂಬ ವಾದವನ್ನು ಯಾರೂ ಎತ್ತಬೇಕಾಗಿಲ್ಲ. ಒಂದೇ ರೀತಿಯ ಅಭಿಪ್ರಾಯಗಳು ಅನೇಕರಲ್ಲಿ, ಅದರಲ್ಲೂ ಶ್ರೇಷ್ಠ ದಾರ್ಶನಿಕರಲ್ಲಿ ಕಂಡುಬರುವುದೇನೂ ಅಸಂಭವವಲ್ಲ. ಶ್ಲೋಕಗಳ ಸರಣಿಯಲ್ಲಾಗಲಿ ಅಭಿಪ್ರಾಯದಲ್ಲಾಗಲಿ ಸಮಾನತೆಯು ಕಂಡುಬಂದರೆ ಅದಕ್ಕೆ ಮಾನ್ಯತೆಯು ಹೆಚ್ಚುವುದೇ ಹೊರತು ಅನ್ಯಥಾ ಅಭಿಪ್ರಾಯಪಡುವುದಕ್ಕೆ ಎಡೆಯಿಲ್ಲ.

ಇವೆರಡು ಗ್ರಂಥಗಳಲ್ಲಿಯೂ ಸಾಧ್ಯಸಾಧನಗಳು ಬಹು ಸ್ಪಷ್ಟವಾಗಿ ಹಾಗೂ ಸುದೀರ್ಘವಾಗಿ ಪ್ರತಿಪಾದಿಸಲ್ಪಟ್ಟಿವೆ. ಭಗವದ್ಗೀತೆಯು ಉಪನಿಷತ್ತುಗಳ ಸಾರಸಂಗ್ರಹವಾದರೆ ಸಿದ್ಧಾಂತಶಿಖಾಮಣಿಯು ಸರ್ವಾಗಮಸಾರ ಸಂಗ್ರಹವಾಗಿದೆ. ಭಗವದ್ಗೀತೆಯು ಅನುಷ್ಟುಪ್ ಛಂದಸ್ಸಿನಲ್ಲಿದ್ದು ಮಧ್ಯೆ ಮಧ್ಯೆ ಕ್ವಚಿತ್ತಾಗಿ ವೃತ್ತಗಳೂ ಬಳಸಲ್ಪಟ್ಟಿರುವಂತೆ ಸಿದ್ಧಾಂತಶಿಖಾಮಣಿಯು ಕೂಡ ಅನುಷ್ಟುಪ್ ಶ್ಲೋಕಗಳಲ್ಲಿದ್ದು ಷಟ್‌ಸ್ಥಲಗಳಲ್ಲಿ ಪ್ರತಿಯೊಂದು ಸ್ಥಲದ ಹಾಗೂ ಕೆಲವು ಅವಾಂತರ ಸ್ಥಲಗಳ ಕೊನೆಯಲ್ಲಿ ವೃತ್ತಗಳು ಬಳಸಲ್ಪಟ್ಟಿವೆ. ಈ ವೃತ್ತಗಳಲ್ಲಿ ಆಯಾ ಸ್ಥಲದ ಲಕ್ಷಣಗಳನ್ನು ಅತಿ ಸಂಕ್ಷೇಪವಾಗಿ ನಿರೂಪಿಸಿರುವ ವೈಲಕ್ಷಣ್ಯವನ್ನೂ ಗಮನಿಸಬಹುದಾಗಿದೆ.

ಈ ಶಿವಾದ್ವೈತ ಸಿದ್ಧಾಂತವನ್ನು ಶ್ರವಣಮಾಡುವುದರಿಂದ ಸರ್ವರಿಗೂ ಪಾಪಕ್ಷಯವಾಗಿ ಪರಮಗತಿಯು ಪ್ರಾಪ್ತವಾಗುತ್ತದೆ

> “ ಏತಚ್ಛ್ರವಣ ಮಾತ್ರೇಣ ಸರ್ವೇಷಾಂ ಪಾಪಸಂಕ್ಷಯಃ । ”
> “ ಶೃಣೋತಿ ಶುದ್ಧ ಮನಸಾ ಸಯಾತಿ ಪರಮಾಂ ಗತಿಂ । ”

ಎಂಬ ಫಲಶ್ರುತಿಯೊಡನೆ ಗ್ರಂಥವು ಮುಕ್ತಾಯಗೊಳ್ಳುತ್ತದೆ.

ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿತವಾಗಿರುವ ಸಿದ್ಧಾಂತವು ಭೇದಾಭೇದಾತ್ಮಕವಾದುದು. "ಅನಾದ್ಯವಿದ್ಯಾ ಸಂಬಂಧಾತ್ತದಂಶೋ ಜೀವನಾಮಕಃ" ಎಂದು ಹೇಳಿರುವುದರಿಂದ ಶಿವಜೀವರಿಗೆ ಭೇದಾಭೇದವನ್ನು ಅಂಗೀಕರಿಸಿದೆ. ಶಿವನಿಗೂ ಶಿವಾಂಶಸಂಭೂತರಾದ ಜೀವರಿಗೂ ಅತ್ಯಂತಾಭೇದವನ್ನು ಹೇಳೋಣವೆಂದರೆ ಶಿವನಲ್ಲಿರುವ ಸರ್ವಜ್ಞತ್ವ, ಸರ್ವಕರ್ತೃತ್ವಾದಿಗಳನ್ನು ಜೀವನಿಗೂ ಹೇಳಬೇಕಾದೀತು. ಅತ್ಯಂತ ಭೇದವನ್ನು ಹೇಳೋಣವೆಂದರೆ ಜೀವನು ಚೇತನದ ಅಂಶವಾಗಿದ್ದರೂ ಕಾರ್ಯಗಳನ್ನು ನೆರವೇರಿಸದೆ ಜಡದಂತೆ ಸುಮ್ಮನಿರಬೇಕಾದೀತು. ಆದ್ದರಿಂದಲೇ ಶಿವಜೀವರಿಗೆ ಅಂಶಾಂಶಿ ಭೇದವನ್ನು ಒಪ್ಪಬೇಕಾಗುತ್ತದೆ.

'ಯಥಾ ಸುದೀಪ್ತಾತ್ಪಾವಕಾತ್ ವಿಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ।
ತಥಾಕ್ಷರಾದ್ವಿವಿಧಾಃ ಸೋಮ್ಯಭಾವಾಃ
ಪ್ರಜಾಯಂತೇ ತತ್ರ ಚೈವಾಪಯಂತಿ ॥ (ಮುಂ. ಉ. ೨-೧-೧)

ಅಗ್ನಿಯಿಂದ ಅದರ ಅಂಶಗಳಾಗಿ ಅನೇಕ ಕಿಡಿಗಳು ಹೇಗೆ ಆವಿರ್ಭವಿಸುತ್ತವೆಯೋ ಹಾಗೆಯೇ ಪರಬ್ರಹ್ಮದಿಂದ ತದಂಶಭೂತರಾದ ಅನೇಕಾನೇಕ ಜೀವರು ಆವಿರ್ಭವಿಸುತ್ತಾರೆ ಎಂದು ಶ್ರುತಿಯು ಹೇಳುತ್ತದೆ. "ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ" ಎಂಬ ಗೀತಾವಾಕ್ಯವೂ ಇದಕ್ಕೆ ಉಪಷ್ಟಂಭಕವಾಗಿದೆ. "ದ್ವಾಸುಪರ್ಣಾ" ಮೊದಲಾದ ದ್ವೈತಬೋಧಕ ಶ್ರುತಿಗಳಿಗೂ, 'ತತ್ತ್ವಮಸಿ,' 'ಅಹಂ ಬ್ರಹ್ಮಾಸ್ಮಿ' ಮೊದಲಾದ ಅದ್ವೈತಬೋಧಕ ಶ್ರುತಿಗಳಿಗೂ ಸಾಂಖ್ಯಾದಿ ಮತಗಳವರಂತೆ ಏಕದೇಶಪ್ರಾಮಾಣ್ಯವನ್ನು ಅಂಗೀಕರಿಸದೆ ಉಭಯ ಶ್ರುತಿಗಳಿಗೂ ಸಾಮರಸ್ಯವನ್ನು ಕಲ್ಪಿಸುವುದರ ಮೂಲಕ ಸಂಸಾರ ದಶೆಯಲ್ಲಿ ದ್ವೈತವನ್ನೂ ಮೋಕ್ಷದಶೆಯಲ್ಲಿ ಅದ್ವೈತವನ್ನೂ ಅಂಗೀಕರಿಸಿರುವುದರಿಂದ ಶ್ರುತಿಸಾಮಾನ್ಯಕ್ಕೂ ಪ್ರಾಮಾಣ್ಯವನ್ನು ಕೊಟ್ಟಂತಾಯಿತು ವೀರಶೈವ ಸಿದ್ಧಾಂತದಲ್ಲಿ.

'ವಿಮರ್ಶಾಖ್ಯಾ ಪರಾಶಕ್ತಿಃ ವಿಶ್ವವೈಚಿತ್ರ್ಯಕಾರಿಣೀ' ಎಂಬಂತೆ ಪರಶಿವಬ್ರಹ್ಮದಲ್ಲಿ ಈ ಚಿತ್ರ ವಿಚಿತ್ರವಾದ ಪ್ರಪಂಚವು ನಿರ್ಮಾಣವಾಗುವುದಕ್ಕೆ ಕಾರಣೀಭೂತವಾದ 'ವಿಮರ್ಶ, ಎಂಬ ಒಂದು ಶಕ್ತಿಯು ಅವಿನಾಭಾವಸಂಬಂಧದಿಂದಿದೆ. ಶಕ್ತಿಯುಳ್ಳವನು ಶಕ್ತನು; ಶಕ್ತನಿಂದ ಅವನ ಶಕ್ತಿಯನ್ನು ಬೇರ್ಪಡಿಸಲಾಗುವುದಿಲ್ಲ. ಅದು ಪುಷ್ಪ ಪರಿಮಳದಂತೆ ಅವಿಭಾಜ್ಯವಾಗಿದೆ. ಆ ಶಕ್ತಿಯನ್ನೇ ಶ್ವೇತಾಶ್ವತರ ಶ್ರುತಿಯು 'ದೇವಾತ್ಮ ಶಕ್ತಿ' ಎಂದು ಕರೆದಿದೆ. ಅದೇ ಶ್ರುತಿಯು

"ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ
ಸ್ವಾಭಾವಿಕೀ ಜ್ಞಾನಬಲಕ್ರಿಯಾಚ" (ಶ್ವೇ. ಉ.೬-೮)

ಅವನ ಪರಾಶಕ್ತಿಯನ್ನು ವಿವಿಧ ಪ್ರಕಾರವಾಗಿ ಹೇಳಿದೆ. ಅದು ಸ್ವಾಭಾವಿಕವೂ, ಜ್ಞಾನಕ್ರಿಯೆಯೂ ಬಲಕ್ರಿಯೆಯೂ ಆಗಿದೆ. ಮೊದಲು ಆ ಪರಶಿವಬ್ರಹ್ಮದಲ್ಲಿ ಲೋಕನಿರ್ಮಾಣಮಾಡಬೇಕೆಂಬ ಇಚ್ಛೆಯುಂಟಾಯಿತು; ಅದೇ ಇಚ್ಛಾಶಕ್ತಿ; ಹೇಗೆ ಮಾಡಬೇಕೆಂಬುದೇ ಜ್ಞಾನಶಕ್ತಿ; ಮಾಡುವುದೇ ಕ್ರಿಯಾಶಕ್ತಿ. ಈ ಶಕ್ತಿಯು ಸತ್ವ, ರಜ, ತಮೋಗುಣ ಸ್ವರೂಪವುಳ್ಳದ್ದು. ಈ ಗುಣಗಳ ವೈಷಮ್ಯದಿಂದ ಈ ವಿಮರ್ಶ ಶಕ್ತಿಯು ಶುದ್ಧ ಚಿದ್ರೂಪನಾದ ಪರಶಿವನಲ್ಲಿ ಭೋಕ್ತೃ, ಭೋಜ್ಯ, ಪ್ರೇರಕರೂಪವಾಗಿ ಪರಿಣಮಿಸಿದೆ.

ಈ ರೀತಿ ಅದ್ವಿತೀಯವಾದ ಪರಶಿವ ತತ್ತ್ವವು 'ಬಹುಸ್ಯಾಂ ಪ್ರಜಾಯೇಯ' ಎಂಬಂತೆ ಅನೇಕವಾಗಿ ಪರಿಣಮಿಸಿದೆ. ಚರಾಚರಾತ್ಮಕವಾದ ಈ ಜಗತ್ತು ಪ್ರಳಯದಲ್ಲಿ ಪರಶಿವನಲ್ಲಿ ಮಯೂರಾಂಡರಸ ನ್ಯಾಯದಂತೆ ಸೂಕ್ಷ್ಮರೂಪದಿಂದಿದ್ದುದರಿಂದಲೇ ಈಗ ಸ್ಥೂಲ ರೂಪದಿಂದ ಹೊರಹೊಮ್ಮಿದೆ. "ಧಾತಾ ಯಥಾಪೂರ್ವಮಕಲ್ಪಯತ್" ಎಂಬ ಶ್ರುತಿಯೂ ಇದಕ್ಕೆ ಪ್ರಮಾಣವಾಗಿದೆ. ಆದ್ದರಿಂದ ಜಗತ್ತು ಸತ್ಯವೇ ಹೊರತು ಮಿಥ್ಯೆಯಲ್ಲ. ಪ್ರಪಂಚವು ಸತ್ಯವೆಂಬ ಭಾವನೆ ಇಲ್ಲದೆಹೋದರೆ ಐಹಿಕವ್ಯವಹಾರ, ಬೋಧ್ಯ - ಬೋಧಕ, ಉಪಾಸ್ಯ-ಉಪಾಸಕ ಮೊದಲಾದ ಎಲ್ಲ ವ್ಯವಹಾರಗಳೂ ಅರ್ಥವಿಲ್ಲದಂತಾಗಿ ಸ್ಥಗಿತಗೊಳ್ಳುತ್ತವೆ. ಸೂರ್ಯ ಚಂದ್ರ ನಕ್ಷತ್ರಾದಿಗಳು ನಿಯತವಾಗಿ ಪ್ರಪಂಚವನ್ನು ಪ್ರಕಾಶಪಡಿಸುವುದು, ಋತುಧರ್ಮಗಳು ನಿಯಮಬದ್ಧವಾಗಿ ನಡೆಯುತ್ತಿರುವುದು ಇವುಗಳನ್ನು ನೋಡಿದರೆ ಜಗತ್ತು ಸತ್ಯವೆಂಬ ಗ್ರಹಿಕೆ ಯಾರಿಗೆ ತಾನೇ ಉಂಟಾಗಲಿಕ್ಕಿಲ್ಲ? ಜಗತ್ತೇನೋ ಇದ್ದುಬಿಟ್ಟಿದೆ. ನಮ್ಮ ದೃಷ್ಟಿಯನ್ನು ಮಾತ್ರ ಬದಲಾಯಿಸಿಕೊಳ್ಳಬೇಕು. ಅನೇಕತೆಯಲ್ಲಿ ಏಕತೆಯನ್ನು ಕಂಡುಕೊಂಡು ನಾವು ಧನ್ಯರಾಗಬೇಕಾಗಿದೆ.

ವೀರಶೈವ ಸಿದ್ಧಾಂತದಲ್ಲಿ ಪರಬ್ರಹ್ಮ, ಪರಶಿವ, ಲಿಂಗ ಸ್ಥಲ, ಶೂನ್ಯ ಎಂಬ ಪದಗಳು ಪರ್ಯಾಯವಾಚಕಗಳಾಗಿವೆ. ಈ ಷಟ್‌ಸ್ಥಲದರ್ಶನದಲ್ಲಿ ಆರು ಸ್ಥಲಗಳು ನಿರ್ದೇಶಿಸಲ್ಪಟ್ಟಿವೆ.

'ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಂ।
ತದ್ಬ್ರಹ್ಮ ಸ್ಥಲಮಿತ್ಯುಕ್ತಂ ಸ್ಥಲತತ್ತ್ವವಿಶಾರದೈಃ॥

ಎಂದರೆ ಈ ಚರಾಚರಾತ್ಮಕವಾದ ಜಗತ್ತು ಯಾವುದರಲ್ಲಿ ಹುಟ್ಟಿ ಯಾವುದರಲ್ಲಿ ಲಯವನ್ನು ಹೊಂದುತ್ತದೆಯೋ ಅದು ಬ್ರಹ್ಮ. ಅದನ್ನೇ 'ಸ್ಥಲ' ಎಂಬುದಾಗಿ ವೀರಶೈವಾಚಾರ್ಯರು ನಿರ್ವಚನ ಮಾಡಿದ್ದಾರೆ. ಈ ಸ್ಥಲರೂಪ ಏಕಮೇವಾದ್ವೈತ ಬ್ರಹ್ಮವು

ಸ್ವಲೀಲೆಯಿಂದ 'ಅಂಗ-ಲಿಂಗ' ಎಂದು ಎರಡು ಪ್ರಕಾರವಾಯಿತು. ಸ್ಥೂಲ ಚಿಚ್ಛಕ್ತಿ ವಿಶಿಷ್ಟ ಜೀವನೇ 'ಅಂಗ'ನೆನಿಸುವನು. ಸೂಕ್ಷ್ಮ ಚಿಚ್ಛಕ್ತಿ ವಿಶಿಷ್ಟ ಪರಶಿವನೇ 'ಲಿಂಗ'ವೆನಿಸುವನು. ಲಿಂಗಾಂಗ ಪದ ವಾಚ್ಯರಾದ ಶಿವಜೀವರ ಐಕ್ಯವೇ ಲಿಂಗಾಂಗಸಾಮರಸ್ಯವೆನಿಸುವುದು. ಇದರ ಸಾಧನೆಗಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳು ಏರ್ಪಟ್ಟಿವೆ. ಆಯಾ ಸ್ಥಲದ ಆಚಾರ ಭೇದದಿಂದಲೂ ಅಧಿಕಾರ ಭೇದದಿಂದಲೂ ಈ ಹೆಸರುಗಳು ಬಂದಿವೆ. ಈ ಆರು ಸ್ಥಲಗಳು ಷಟ್‌ಸ್ಥಲ ಸೋಪಾನಗಳು. ಜೀವನು ಇದ್ದಕ್ಕಿದ್ದಂತೆಯೇ ಅಟ್ಟವನ್ನು ಹತ್ತಲಾರ. ಅವನಿಗೆ ಅವಲಂಬನವಾಗಿ ಒಂದು ಏಣಿಯು ಬೇಕು. ಜೀವನು ಒಂದೊಂದು ಹಂತದಲ್ಲಿಯೂ (ಸ್ಥಲದಲ್ಲಿಯೂ) ತನ್ನ ಸತ್ಕ್ರಿಯಾಚರಣೆಯಿಂದ ಚಿತ್ತಶುದ್ಧಿಯನ್ನು ಪಡೆದುಕೊಳ್ಳುತ್ತಾನೆ. ಹೊಸ ಅನುಭವವನ್ನು ಗಳಿಸಿಕೊಂಡು ಉತ್ತರೋತ್ತರಾಭಿವೃದ್ಧಿಯನ್ನು ಪಡೆಯುತ್ತಾ ಹೋಗುತ್ತಾನೆ. ಇವು ಆರೂ ಅವನಿಗೆ ಆತ್ಮನಿರೀಕ್ಷಣೆಯ ಘಟ್ಟಗಳು.

"ಅನಾದ್ಯವಿದ್ಯಾ ಸಂಬಂಧಾತ್ತದಂಶೋ ಜೀವ ನಾಮಕಃ" ಜೀವನು ಚೇತನ ಹಾಗೂ ಜಡ ಪ್ರಕೃತಿಗಳ ಒಕ್ಕೂಟದಿಂದ ಉದಯಿಸುತ್ತಾನೆ. ಪರಮಾತ್ಮನ ಚೈತನ್ಯವು ಸರ್ವತ್ರ ವ್ಯಾಪಕವಾಗಿದ್ದರೂ ಜೀವನಲ್ಲಿ ಚೇತನದ ಚಿದ್ರೂಪವು ಸ್ಥೂಲವಾಗಿದೆ· ಎಂದರೆ ಸತ್ವ, ರಜ, ತಮೋಗುಣಗಳಿಂದ ಆಚ್ಛಾದಿಸಲ್ಪಟ್ಟು ಮಲಿನಗೊಂಡಿದೆ. ಅವನು ಜಡ ಪ್ರಕೃತಿಯೊಡನೆ ಸೇರಿ ತಾನು ಚೇತನನೆಂಬುದನ್ನು ಮರೆತು ದೇಹಾತ್ಮಬುದ್ಧಿಯುಳ್ಳವನಾಗಿ ಭವಭವಾಂತರಗಳಲ್ಲಿ ತೊಳಲಿ ಬಳಲುತ್ತಾನೆ. ಸೃಷ್ಟಿಯು ತನ್ನ ರಮಣೀಯತೆಯಿಂದಲೂ ವಿಲಾಸವೈಭವಗಳಿಂದಲೂ ಜೀವನನ್ನು ಆಕರ್ಷಿಸುತ್ತದೆ. ಅದರಲ್ಲೂ ಇಂದಿನ ವಿಜ್ಞಾನಯುಗದಲ್ಲಿ ಪ್ರತಿದಿನವೂ ಅಸಂಖ್ಯಾತ ಭೋಗಸಾಮಗ್ರಿಗಳು ಅವನ ಉಪಭೋಗಕ್ಕೆ ಸಿದ್ಧವಾಗುತ್ತಿರುವಾಗ ಅವನು ಅವುಗಳಿಗೆ ಮಾರುಹೋಗುವುದರಲ್ಲಿ ಆಶ್ಚರ್ಯವೇನಿದೆ? ಅವನು ಅವುಗಳಲ್ಲಿ ಅಡಕವಾಗಿರುವ 'ಅಸ್ತಿ-ಭಾತಿ-ಪ್ರಿಯ'ಗಳನ್ನು (ಪರಶಿವನ ಸಚ್ಚಿದಾನಂದಗಳನ್ನು) ಮರೆತು ಕೇವಲ ಅವುಗಳ ನಾಮರೂಪಗಳಿಗೆ ಮರುಳಾಗಿ ಪ್ರಕೃತಿಯ ಗುಲಾಮನಾಗಿ ತನ್ನ ಸ್ವರೂಪವನ್ನು ಮರೆತಿದ್ದಾನೆ. ಇದೇ ಅವನ ಬಂಧನ.

"ಅವಿದ್ಯಾ ಮೋಹಿತಾ ಜೀವಾಃ ಬ್ರಹ್ಮೈಕ್ಯ ಜ್ಞಾನ ವರ್ಜಿತಾಃ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ॥"

ಎಂಬಂತೆ ಅವಿದ್ಯೆಯು (ಅಜ್ಞಾನವು) ಅನಾದಿಯಿಂದಲೂ ಜೀವರ ಜನ್ಮಕ್ಕೆ ಅಂಟಿ ಬಂದಿದೆ. ಅವರಿಗೆ ಪರಶಿವನ ಜ್ಞಾನವಿರುವುದಿಲ್ಲ. ಅವಿದ್ಯೆಯ ಶಕ್ತಿಭೇದದಿಂದ ಜೀವರೂ ಅನೇಕ ವಿಧವಾಗಿದ್ದಾರೆ. ಅವರವರ ಕರ್ಮಗಳಿಗನುಸಾರವಾಗಿ ನಾನಾ ಯೋನಿಗಳಲ್ಲಿ ಹುಟ್ಟುತ್ತಾರೆ. "ಜೀವತ್ವಂ ದುಃಖ ಸರ್ವಸ್ವಂ ತದಿದಂ ಮಲ ಕಲ್ಪಿತಂ" ಎಂಬಂತೆ ಘೋರವಾದ ಅಪಾರವಾದ ಸಂಸಾರ ದಾವಾಗ್ನಿಯಲ್ಲಿ ಬೆಂದು ಬೇಗುದಿಗೊಂಡಿರುವ ಜೀವನು ಸ್ವಾಭಾವಿಕವಾಗಿಯೇ ಮಲದೋಷಗಳಿಂದ ಕೂಡಿದ್ದಾನೆ. ಈ ಮಲಗಳು ಅವನಿಗೆ ಆವರಣಗಳಾಗಿ ಅವನ ಸತ್ಕ್ರಿಯಾಚರಣೆಗೆ ಅವಕಾಶ ಕೊಡದೆ ಅವನ ಅಂತಃಕರಣವನ್ನು ಮುಸುಗಿವೆ. ಹಿಂದಿನ ಅನೇಕ ಜನ್ಮಗಳಲ್ಲಿ ಕರ್ಮೋಪಾಸನೆಗಳನ್ನು ಮಾಡಿ ಕೃತೋಪಾಸ್ತಿಯಾಗಿರುವ ಜೀವನಲ್ಲಿ ಪುಣ್ಯವು ಅಧಿಕವಾಗಿ ಪಾಪವು ಕ್ಷಯವಾಗಿ ಪರಿಶುದ್ಧಾಂತಃಕರಣನಾಗುತ್ತಾನೆ. ಅವನ ಪರಿಶುದ್ಧವಾದ ಅಂತಃಕರಣದಲ್ಲಿ ಶಿವಕಾರುಣ್ಯದಿಂದ ಶಿವಭಕ್ತಿಯು ಮೂಡುತ್ತದೆ. ಅಗ ಈ ಜೀವನು 'ಪಿಂಡ' ಶಬ್ದ ವಾಚ್ಯನಾಗಿ ಚರಮಶರೀರಿಯಾಗುತ್ತಾನೆ.

ಇಂಥ ಜೀವನಲ್ಲಿ ಸ್ವಾಭಾವಿಕವಾಗಿಯೇ ಜಿಜ್ಞಾಸಾ ಬುದ್ಧಿ ಹುಟ್ಟುತ್ತದೆ. ನಿತ್ಯಾನಿತ್ಯವಸ್ತುವಿವೇಕಜ್ಞಾನದಿಂದ ತಾನು ಜಡವಾದ ದೇಹಕ್ಕಿಂತಲೂ ಇಂದ್ರಿಯಗಳಿಗಿಂತಲೂ ಬೇರೆಯೆಂದು ತಿಳಿಯುತ್ತಾನೆ.

"ಮಲಕೋಶೇ ಶರೀರೇಸ್ಮಿನ್ ಮಹಾದುಃಖವಿವರ್ಧನೇ।
ತಡಿದಂಕುರ ಸಂಕಾಶೇ ಕೋವಾ ಮೋದೇತ ಪಂಡಿತಃ॥"

ಈ ದೇಹವು ಕ್ಷಣಭಂಗುರವಾದುದು, ಇದೊಂದು ಚಲಿಸುವ ಮಲಭಾಂಡ, ಮಹಾದುಃಖಕ್ಕೆ ಕಾರಣವಾದದ್ದು. ದಾರಾಪುತ್ರಾದಿ ಸಮಸ್ತ ಬಂಧುಬಾಂಧವರೆಲ್ಲರೂ ನಿಮಿತ್ತ ಬಂಧುಗಳು, ಸ್ವರ್ಗಾದಿ ಸುಖಗಳು ಕೂಡ ಸಾತಿಶಯ, ಕ್ಷಯ, ಪತನಗಳಿಂದ ಕೂಡಿವೆ ಎಂದು ತಿಳಿಯುತ್ತಾನೆ. "ಜನ್ಮವ್ಯಾಧಿಜರಾಮೃತ್ಯು ದುಃಖದೋಷಾನು ದರ್ಶನಂ" ಎಂಬ ಗೀತಾವಾಕ್ಯದಂತೆ ಇವನಿಗೆ ಸಂಸಾರದಲ್ಲಿ ದೋಷದರ್ಶನವಾಗಿ ಶರೀರ, ಶರೀರದ ಸಂಬಂಧಿಗಳು. ಧನಕನಕವಸ್ತುವಾಹನಾದಿಗಳ ಮೇಲೆ ಜಿಹಾಸೆ ಹುಟ್ಟಿ ಇವನ ಮನಸ್ಸು ಪೂರ್ಣವಾಗಿ ಪ್ರಪಂಚದಿಂದ ಪರಮಾರ್ಥಕ್ಕೆ ತಿರುಗುತ್ತದೆ. ಇದಕ್ಕೆ ಬುದ್ಧ, ಅಶೋಕ ಮುಂತಾದವರನ್ನು ದೃಷ್ಟಾಂತವಾಗಿ ಕೊಡಬಹುದು. ಸಂಸಾರದಲ್ಲಿ ಹೇಯತಾ ಬುದ್ಧಿ ಹುಟ್ಟಿ ವೈರಾಗ್ಯ ತತ್ಪರನಾಗಿ 'ಪಿಂಡ' ಶಬ್ದವಾಚ್ಯನಾದ ಈ ಜೀವನು ತನ್ನ ಜನ್ಮಾದಿಗಳಿಗೆ ಮೂಲಕಾರಣವನ್ನು ತಿಳಿದು ಕೃತಾರ್ಥನಾಗಬೇಕೆಂಬ ತೀವ್ರೇಚ್ಛೆಯಿಂದ

"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿ ಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ"

ಎಂಬ ಮುಂಡಕೋಪನಿಷತ್ತಿನ ವಾಕ್ಯದಂತೆ ಶಿವತತ್ವವಿವೇಕಿಯೂ ಲಿಂಗಾಂಗಸ್ಥಲ ಭೇದಜ್ಞನೂ, ಸರ್ವತಂತ್ರ ಪ್ರಯೋಗಜ್ಞನೂ,

ಸರ್ವಸಂದೇಹ ರಹಿತನೂ, ಲೋಭ ಮೋಹ ವಿವರ್ಜಿತನೂ, ಆದ ಗುರುವನ್ನು ಆಶ್ರಯಿಸಿ ತನ್ನನ್ನು ಭವರೋಗದಿಂದ ಪಾರು ಮಾಡಬೇಕೆಂದು ಪ್ರಾರ್ಥಿಸುತ್ತಾನೆ. ಈ ಸಂದರ್ಭದಲ್ಲಿ ಕಾರುಣಿಕನಾದ ಆಚಾರ್ಯನು ತನಗೆ ಶರಣಾಗತನಾದ ಶಿಷ್ಯನಲ್ಲಿ ಶಕ್ತಿಪಾತವನ್ನು ಗಮನಿಸಿ ಅವನಿಗೆ ಶಿವದೀಕ್ಷೆಯನ್ನು ಕೊಡುತ್ತಾನೆ.

"ದೀಯತೇ ಚ ಶಿವಜ್ಞಾನು ಕ್ಷೀಯತೇ ಪಾಶಬಂಧನಂ ।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥

ಯಾವುದು ಶಿವಜ್ಞಾನವನ್ನುಂಟುಮಾಡಿ ಮಲ ಮಾಯಾ ಕರ್ಮ ಬಂಧನವನ್ನು ನಾಶಮಾಡುತ್ತದೆಯೋ ಅದೇ ದೀಕ್ಷೆ. ಈ ಸಂದರ್ಭದಲ್ಲಿ ಗುರುವು ಶಿಷ್ಯನಿಗೆ ಇಷ್ಟಲಿಂಗಧಾರಣೆಯನ್ನು ಮಾಡುತ್ತಾನೆ. ಶಿಷ್ಯನ ಹೃದಯದಲ್ಲಿರುವ ಚೈತನ್ಯಾತ್ಮಕವಾದ ಪ್ರಾಣಲಿಂಗದ ಕಲೆಯನ್ನು ತನ್ನ ಯೋಗಶಕ್ತಿಯಿಂದ ಆಕರ್ಷಿಸಿ ವಿಧ್ಯುಕ್ತವಾಗಿ ಸಂಸ್ಕರಿಸಲ್ಪಟ್ಟ ಪಂಚಸೂತ್ರ ಘಟಿತವಾದ ಶಿವಲಿಂಗದಲ್ಲಿ ಸ್ಥಾಪಿಸಿ ಉಪಾಸನೆಗಾಗಿ ಶಿಷ್ಯನ ಕರಪೀಠಕ್ಕೆ ಕೊಡುತ್ತಾನೆ. ಹಾಗೂ ಪ್ರಣವ ಸಹಿತವಾದ ಪಂಚಾಕ್ಷರೀ ಮಂತ್ರವನ್ನು ದಕ್ಷಿಣ ಕರ್ಣದಲ್ಲಿ ಉಪದೇಶಮಾಡುತ್ತಾನೆ. ಸರ್ವಾನಿಷ್ಟಗಳನ್ನು ಪರಿಹರಿಸುವ ಈ ಇಷ್ಟಲಿಂಗಧಾರಣ ಕಾಲದಲ್ಲಿಯೇ ಶಿಷ್ಯನ ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ಪ್ರಾಣಲಿಂಗ ಮತ್ತು ಭಾವಲಿಂಗಗಳನ್ನು ನೆಲೆಗೊಳಿಸುತ್ತಾನೆ. ಇಲ್ಲಿಂದ ಮುಂದೆ ಸಾಧಕನಿಗೆ ಲಿಂಗದ ನಿತ್ಯ ಸಂಪರ್ಕವುಂಟಾಗುತ್ತದೆ.

ಷಟ್‌ಸ್ಥಲ ಸಿದ್ಧಾಂತದಲ್ಲಿ ಲಿಂಗಧಾರಣವು ಬಹಳ ಮಹತ್ವವಾದ ಘಟ್ಟ. ಈ ಇಷ್ಟಲಿಂಗದ ಉಪಾಸನೆಯಿಂದಲೇ ಸಾಧಕನು ಪ್ರಾಣಲಿಂಗ ಹಾಗೂ ಭಾವಲಿಂಗ ಪೂರ್ವಕವಾಗಿ ಮಹಾಲಿಂಗವನ್ನು ದರ್ಶಿಸಬೇಕಾಗಿದೆ. ಆದ್ದರಿಂದ ಈ ಇಷ್ಟಲಿಂಗವು ಅವನಿಗೆ ಚರಮಗತಿಯನ್ನು ಮುಟ್ಟಿಸುವ ಶ್ರೇಷ್ಠ ಅವಲಂಬನ, ಇಂತಹ ಇಷ್ಟಲಿಂಗಧಾರಣೆಯಿಂದಲೇ ಬ್ರಹ್ಮಾದಿ ದೇವತೆಗಳು. ಮನುಮುನಿಗಳು, ಋಷಿಗಳು, ಸಮಸ್ತರೂ ಪರಮಾರ್ಥ ತತ್ತ್ವವನ್ನು ಪಡೆದುಕೊಂಡು ತತ್ತ್ವೀಭೂತರಾಗಿದ್ದಾರೆ.

ಸಿದ್ಧಾಂತಶಿಖಾಮಣಿಯಲ್ಲಿ ಸಾಧ್ಯಸಾಧನಗಳು ಬಹಳ ಸ್ಪಷ್ಟವಾಗಿಯೂ ಗಂಭೀರವಾಗಿಯೂ ನಿರೂಪಿಸಲ್ಪಟ್ಟಿವೆ. ಸಾಧ್ಯವು ನಾವು ಪಡೆದುಕೊಳ್ಳಬೇಕಾದ ಪರಶಿವ ತತ್ತ್ವ. ಅದನ್ನು ಪಡೆದುಕೊಳ್ಳಲು ಮಾಡಬೇಕಾದ ಪ್ರಯತ್ನವೇ ಸಾಧನ. ಸಾಧ್ಯವು ಎಷ್ಟು ಉತ್ಕೃಷ್ಟವೋ ಸಾಧನವೂ ಅಷ್ಟೇ ಉತ್ಕೃಷ್ಟವಾದದ್ದಾಗಿರಬೇಕು. ಸೃಷ್ಟಿ - ಸ್ಥಿತಿ - ಲಯಗಳಿಗೆ ಕಾರಣೀಭೂತವೂ, ಕೇವಲ ಚಿದ್ರೂಪವೂ, ನಿಷ್ಕಲವೂ, ನಿರ್ವಿಕಲ್ಪವೂ, ಅಪ್ರಮೇಯವೂ ಅನಿರ್ದೇಶ್ಯವೂ. ಅವ್ಯಕ್ತವೂ ಆದ ಮಹಾಲಿಂಗದಲ್ಲಿ ತಾದಾತ್ಮ್ಯವನ್ನು ಹೊಂದಿ ಪರಮಪುರುಷಾರ್ಥವನ್ನು ಪಡೆದುಕೊಳ್ಳಬೇಕಾದರೆ ಸಾಧಕನ ಸಾಧನೆಯು ಅವ್ಯಾಹತವಾಗಿ ಉತ್ತರೋತ್ತರೋತ್ಕರ್ಷತೆಯಿಂದ ನಡೆಯಬೇಕಾಗಿದೆ. ಪರತತ್ತ್ವವು ಸ್ಥೂಲೇಂದ್ರಿಯಗಳಿಗೆ ನಿಲುಕುವ ವಸ್ತುವಲ್ಲ. ಅವಾಙ್ಮನಸಗೋಚರವಾದುದು. ಇದಕ್ಕೆ ತೀವ್ರ ತಪಶ್ಚರ್ಯವೇ ಬೇಕು. ಅದಕ್ಕೆ ನೈತಿಕ ತಳಹದಿಯು ಅತಿ ಮುಖ್ಯ. ಅಷ್ಟಾವರಣ ಪಂಚಾಚಾರಗಳು ಈ ಧ್ಯೇಯವನ್ನು ಸಾಧಿಸುತ್ತವೆ. ಅಷ್ಟಾವರಣಗಳು ಸುಭದ್ರವಾದ ಕೋಟೆಯಿದ್ದಂತೆ, ಶತ್ರುಗಳ ಧಾಳಿಯಿಂದ ಸಾಧಕನನ್ನು ರಕ್ಷಿಸುತ್ತವೆ. ಮನಸ್ಸು ಜೇಡಿಮಣ್ಣಿದ್ದಹಾಗೆ. ಅದನ್ನು ಹೇಗೆ ಬೇಕಾದರೆ ಹಾಗೆ ತಿರುಗಿಸಬಹುದು. ಮನಸ್ಸಿನಲ್ಲಿ ಅಲ್ಪ ಸ್ವಲ್ಪ ದೌರ್ಬಲ್ಯವಿದ್ದರೂ ಅಂತಹ ಸಮಯವನ್ನೇ ಹೊಂಚುಹಾಕುತ್ತಿರುವ ಹೊರಗಿನ ಶತ್ರುಗಳಾದ ಕಾಮ, ಕ್ರೋಧ, ಲೋಭ, ಮೋಹ ಮದ ಮತ್ಸರಗಳು ಮನಸ್ಸಿನೊಳಕ್ಕೆ ಪ್ರವೇಶ ಮಾಡುತ್ತವೆ. ಇವು ಆಪ್ತತಸ್ಕರರಂತೆ ನಮಗೆ ಅನುಕೂಲವಾಗಿಯೇ ಇದ್ದಂತೆ ನಟಿಸಿ ನಮ್ಮ ಅಮೂಲ್ಯವಾದ ವಿವೇಕವೆಂಬ ಆಭರಣವನ್ನು ಅಪಹರಿಸುತ್ತವೆ. ಆದ್ದರಿಂದ ಸಾಧಕನು ಸದಾ ಎಚ್ಚರಿಕೆಯಿಂದ ಮನಸ್ಸನ್ನು ಕಾಯ್ದುಕೊಳ್ಳಬೇಕು.

ಹಿಂದು ಸಮಾಜದಲ್ಲಿ ಗುರುವಿನ ಸ್ಥಾನ ಬಹಳ ದೊಡ್ಡದು. ವೀರಶೈವಧರ್ಮದಲ್ಲಿಯಂತೂ, ಅಷ್ಟಾವರಣಗಳಲ್ಲಿ ಗುರುವೇ ಮೊದಲನೆಯವನು. ಇದರಿಂದಲೇ ಗುರುವಿನ ಮಹತ್ವವೆಷ್ಟೆಂಬುದನ್ನು ತಿಳಿಯಬಹುದು. ಗುರುವು ಶಿಷ್ಯನಿಗೆ ವಜ್ರಕವಚವಿದ್ದಂತೆ. ಶಿಷ್ಯನು ತನ್ನ ಸಾಧನಾ ಮಾರ್ಗದಲ್ಲಿ ಎಡವಿಬೀಳುವ ಸಂದರ್ಭದಲ್ಲಿ ಗುರುವು ಅವನ ರಕ್ಷಕನಾಗುತ್ತಾನೆ. "ಆಚಾರ್ಯವಾನ್ ಪುರುಷೋ ವೇದ" ಎಂಬ ಛಾಂದೋಗ್ಯ ಶ್ರುತಿಯಂತೆ ಗುರುವಿನ ಬೋಧಾಂಜನದಿಂದ ಅವ್ಯಕ್ತವಾಗಿರುವ ಪರತತ್ತ್ವನಿಕ್ಷೇಪವು ಸಾಧಕನಿಗೆ ಗೋಚರವಾಗುತ್ತದೆ. ಆದ್ದರಿಂದಲೇ ಗುರುವು ಸಾಕ್ಷಾತ್ ಪರಮೇಶ್ವರನೆಂಬ ಭಾವನೆ ಸಾಧಕನಲ್ಲಿ ಮೂಡಬೇಕು. ಜ್ಞಾನ ಪ್ರಾಪ್ತಿಗಾಗಿ ಅವರಿಬ್ಬರಲ್ಲಿಯೂ ಭೇದ ಬುದ್ಧಿಯನ್ನು ಮಾಡಬಾರದು. ಈ ವಿಷಯದಲ್ಲಿ "ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ" ಎಂಬುದಾಗಿ ಶ್ವೇತಾಶ್ವತರ ಶ್ರುತಿಯು ಸಾರುತ್ತದೆ. ಸಾಧಕನು ಆಚಾರ್ಯನಾದ ಗುರುವನ್ನು ಎಡಬಿಡದೆ ನೆರಳಿನೋಪಾದಿಯಲ್ಲಿ ಅನುಸರಿಸಬೇಕು, ಅವನ ಪರತತ್ತ್ವ ಬೋಧೆಯನ್ನು ನಿರಂತರ ಶ್ರವಣಮಾಡಬೇಕು. ಶ್ರವಣಮಾಡಿದ್ದನ್ನು ಮನನಮಾಡಬೇಕು. ಮನನಕಾಲದಲ್ಲಿ ಬರುವ ಸಂದೇಹಗಳನ್ನು ಗುರುವಿನಿಂದಲೇ ಪರಿಹರಿಸಿಕೊಳ್ಳಬೇಕು. ಆಚಾರ್ಯನ ಹಾಗೂ ಶಾಸ್ತ್ರದ ಉಪದೇಶವನ್ನನುಸರಿಸಿ ಇಷ್ಟಲಿಂಗದ ಕ್ರಿಯಾಚರಣೆಯಲ್ಲಿ ನಿರತನಾಗಬೇಕು. ಗುರುವಿನಲ್ಲಿ ಹೇಗೋ ಜಂಗಮನಲ್ಲಿಯೂ ಅದೇ ರೀತಿ ನಡೆದುಕೊಳ್ಳಬೇಕು. ಗುರು-ಲಿಂಗ-ಜಂಗಮರು ಒಂದೇ ತಾಯಿಬೇರಿನ ಮೂರು ಕವಲುಗಳು, ಈ ಜಗಜ್ಜಾಲವನು

ಚಿದ್ರೂಪದಲ್ಲಿ ನೋಡುವ ಅಸಂಗನೇ ಜಂಗಮ ಶಿವಯೋಗಿ. ಆದ್ದರಿಂದ ಗುರುಲಿಂಗ ಜಂಗಮಾರಾಧನೆಯನ್ನು ಮಾಡುತ್ತಾ ತನ್ನ ತನು ಮನ ಧನಗಳನ್ನು ಅವರಿಗೆ ಅರ್ಪಿಸಿ ತಾನು ಪರಿಶುದ್ಧನಾಗಬೇಕು.

"ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೆ" ಎಂಬಂತೆ ಶಿವಪೂಜೆ, ಶಿವವ್ರತ, ಶಿವಮಂತ್ರಜಪ, ಶಿವತತ್ತ್ವ ಶ್ರವಣ, ಶಿವಧ್ಯಾನವಲ್ಲದೆ ಇತರ ಕರ್ಮಗಳು ಸಾಧಕನಿಗಿಲ್ಲ. "ಮನಃ ತ್ರಾಯತೆ ಇತಿ ಮಂತ್ರಃ" ಎಂಬಂತೆ ಪ್ರಣವ ಸಹಿತವಾದ ಶಿವ ಪಂಚಾಕ್ಷರೀ ಮಂತ್ರ ಜಪದಿಂದ ಚಿತ್ತಶುದ್ಧಿಯುಂಟಾಗುವುದು ಮಾತ್ರವಲ್ಲದೆ, ಉಚ್ಛೃಂಖಲವಾಗಿ ಹರಿದಾಡುವ ಮನಸ್ಸಿನ ಏಕಾಗ್ರತೆಯು ಕುದುರುತ್ತದೆ. ಮಾಂಸಮಯ ಪಿಂಡವು ಮಂತ್ರಮಯವಾಗುತ್ತದೆ; ದುರಿತಕ್ಷಯವಾಗಿ ಪುಣ್ಯಸಂಚಯವಾಗುತ್ತದೆ. ಈ ವಿಷಯದಲ್ಲಿ

'ಸಕೃದುಚ್ಚಾರಮಾತ್ರೇಣ ಪಂಚಾಕ್ಷರ ಮಹಾಮನೋಃ।
ಸರ್ವೇಷಾಮಪಿ ಜಂತೂನಾಂ ಸರ್ವಪಾಪಕ್ಷಯೋ ಭವೇತ್॥

ಎಂಬ ಶ್ಲೋಕವು ಪ್ರವರ್ತಿಸುತ್ತದೆ.

ಶಿವಪೂಜಾದಿ ನಿತ್ಯಕರ್ಮಗಳನ್ನು ಮಾಡದೆ ಬಿಟ್ಟರೆ ಪಾಪ ಘಟಿಸುತ್ತದೆ; ಮಾಡಿದರೆ ಪುಣ್ಯವಿಲ್ಲ. ಆದ್ದರಿಂದ ನಿತ್ಯಕರ್ಮಗಳನ್ನು ತಪ್ಪದೆ ನಡೆಸಬೇಕು. ಶರೀರವು ಇರುವುದೇ ಕರ್ಮ ಮಾಡುವುದಕ್ಕೆ. ಕರ್ಮ ಮಾಡದೆ ಯಾವ ಮನುಷ್ಯನೂ ಇರುವುದಕ್ಕಾಗುವುದಿಲ್ಲ. ಯಾವ ಕರ್ಮವನ್ನೇ ಮಾಡಲಿ, ಅದು ಒಂದು ಫಲವನ್ನು ಕೊಡುತ್ತದೆ. ಆ ಫಲವು ಒಳ್ಳೆಯದಾದರೂ ಸರಿಯೇ, ಕೆಟ್ಟದ್ದಾದರೂ ಸರಿಯೇ, ಅದನ್ನು ಅನುಭವಿಸುವುದಕ್ಕೆ ಜನ್ಮವೆತ್ತಲೇ ಬೇಕು. ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ? ಫಲಾಭಿಸಂಧಿಯಿಲ್ಲದೆ ಈಶ್ವರಾರ್ಪಣ ಬುದ್ಧಿಯಿಂದ ಮಾಡಿದ ಕರ್ಮಗಳು ಬಂಧನಕಾರಿಯಾಗುವುದಿಲ್ಲ·

ಪರಮೇಶ್ವರನು ಜ್ಞಾನಕ್ರಿಯಾಸ್ವರೂಪನು. ಇಷ್ಟಲಿಂಗೋಪಾಸನೆಯು ಜ್ಞಾನಕ್ರಿಯಾತ್ಮಕವಾದದ್ದು. ಆದ್ದರಿಂದ ಸಾಧಕನಲ್ಲಿ ಜ್ಞಾನಕ್ರಿಯೆಗಳೆರಡೂ ಅಳವಡಬೇಕು. ಯಾವುದೋ ಒಂದು ಕಾಲದಲ್ಲಿ ಕ್ರಿಯೆಯನ್ನು ಮಾಡಿ ಮತ್ತಾವುದೋ ಕಾಲದಲ್ಲಿ ಅದರ ಜ್ಞಾನವನ್ನು ಮಾಡಿಕೊಳ್ಳುವುದಲ್ಲ. ಕ್ರಿಯಾಜ್ಞಾನಗಳೆರಡೂ ಸಮಕಾಲದಲ್ಲಿಯೇ ನಡೆಯಬೇಕು. ಲಿಂಗದ ಅರಿವು, ಲಿಂಗದ ಕ್ರಿಯೆ ಜೊತೆಗೂಡಬೇಕು· ಎಂದರೆ ಸಾಧಕನಿಗೆ ತನ್ನ ಸ್ವರೂಪದ ಪ್ರಜ್ಞೆಯು ಇರಬೇಕು, ಅದನ್ನು ಪಡೆದುಕೊಳ್ಳುವ ಕ್ರಿಯೆಯನ್ನೂ ಅವನು ಆಚರಿಸಬೇಕು. ಈ ಕಾರಣದಿಂದಲೇ ವೀರಶೈವ ಸಿದ್ಧಾಂತದಲ್ಲಿ ಜ್ಞಾನಕರ್ಮ (ಸಮ) ಸಮುಚ್ಚಯವನ್ನು ಅಂಗೀಕರಿಸಿದೆ. ಈ ವಿಷಯದಲ್ಲಿ

"ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತ ಮಶ್ನುತೇ॥"
(ಈ. ಉ. ೧೧)

ಎಂಬ ಈಶ ಶ್ರುತಿಯು ಬಹಳ ಸಮಂಜಸವಾಗಿದೆ. ಹಾಗೂ ವೇದಸಮ್ಮತವಾಗಿದೆ. ಅವಿದ್ಯೆಯಿಂದ (ಈಶ್ವರಾರ್ಪಣ ಬುದ್ಧಿಯಿಂದು ಮಾಡುವ ಕರ್ಮಗಳಿಂದ) ಮೃತ್ಯುವನ್ನು ಜಯಿಸಿ ವಿದ್ಯೆಯಿಂದ (ಜ್ಞಾನದಿಂದ) ಅಮೃತತ್ವವನ್ನು (ಮೋಕ್ಷವನ್ನು) ಪಡೆಯುತ್ತಾನೆ. ಜ್ಞಾನಕರ್ಮಗಳು ಒಟ್ಟಿಗೆ ನಡೆದರೇನೇ ಅಖಂಡರಸವಾದ ಆನಂದವು ಉಂಟಾಗುವುದು.

ಈ ವಿಧವಾದ ಸತ್ಕ್ರಿಯಾಚರಣೆಯಿಂದ ಸಾಧಕನಲ್ಲಿರುವ ಅಹಂಕಾರ, ದರ್ಪ, ದಂಭ ಮುಂತಾದ ಆಸುರೀ ಗುಣಗಳು ನಷ್ಟವಾಗಿ ಶೀಲಸಂಪತ್ತು ವೃದ್ಧಿಯಾಗುತ್ತದೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ ಮುಂತಾದ ದೈವೀಗುಣಗಳು ರಕ್ತಗತವಾಗುತ್ತವೆ. ತಾನು ತೆಗೆದುಕೊಳ್ಳುವ ಪ್ರತಿಯೊಂದು ಆಹಾರಪದಾರ್ಥವನ್ನೂ ಆಧಾರಾದಿ ಚಕ್ರಗಳಲ್ಲಿರುವ ಆಚಾರಾದಿ ಲಿಂಗಗಳಿಗೆ ಸಮರ್ಪಿಸಬೇಕು. ಅನಂತರ ಅವುಗಳನ್ನು ಸ್ವೀಕರಿಸಿದರೆ ಆ ಆಹಾರವು ಶುದ್ಧವಾಗಿ ಪ್ರಸಾದವಾಗುತ್ತದೆ.

'ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಂ'
'ಮನಃ ಪ್ರಸಾದ ಸಿದ್ಧ್ಯರ್ಥಂ ನಿರ್ಮಲ ಜ್ಞಾನ ಕಾರಣಂ'

ಎಂಬ ವಾಕ್ಯಗಳು ಈ ವಿಷಯದಲ್ಲಿ ಪ್ರವರ್ತಿಸುತ್ತವೆ. ಇದರಿಂದ ಅಂತಃಕರಣವು ಶುದ್ಧವಾಗುತ್ತದೆ. ಅದರಲ್ಲಿ ಪರಿಶುದ್ಧವಾದ ಜ್ಞಾನವು ಹುಟ್ಟುತ್ತದೆ. ಪ್ರಸಾದದಿಂದ ಸರ್ವದುಃಖಗಳೂ ನಾಶವಾಗುತ್ತವೆಂದು ಗೀತೆಯು "ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ" ಎಂದು ಘೋಷಿಸಿದೆ. ಇದರಿಂದ ಸಾಧಕನ ಇಂದ್ರಿಯಗಳೆಲ್ಲವೂ ಲಿಂಗೇಂದ್ರಿಯಗಳಾಗಿ ಅವನು ಲಿಂಗಭೋಗೋಪಭಾಗಿಯಾಗುತ್ತಾನೆ.

ಇಲ್ಲಿಯವರೆಗೆ ಸಾಧಕನ ಆಚರಣೆಯಲ್ಲಿ ಕ್ರಿಯೆಯು ಪ್ರಧಾನವಾಗಿಯೂ, ಜ್ಞಾನವು ಗೌಣವಾಗಿಯೂ ಇರುತ್ತದೆ. ಇನ್ನು ಮುಂದೆ ಜ್ಞಾನವು ಪ್ರಧಾನವಾಗಿಯೂ ಕ್ರಿಯೆಯು ಗೌಣವಾಗಿಯೂ ಇರುತ್ತದೆ. ಈ ಪ್ರಪಂಚವು ಮಾಯಾವಿಕಲ್ಪದಿಂದ ಉತ್ಪನ್ನವಾದುದೆಂದೂ ಹೇಯವೆಂದೂ ತಿಳಿದು ಸಚ್ಚಿದಾನಂದ ಸ್ವರೂಪವಾದ ಪ್ರಾಣಲಿಂಗದಲ್ಲಿ ಮನಸ್ಸನ್ನು ನೆಟ್ಟು ಅನುಸಂಧಾನ ಮಾಡುತ್ತಾನೆ.

"ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿ ಪ್ರಾಣರೂಪಿಣೀ।
ತದ್ರೂಪಲಿಂಗ ವಿಜ್ಞಾನೀ ಪ್ರಾಣ ಲಿಂಗೀತಿ ಕಥ್ಯತೇ॥"

ಲಿಂಗವೇ ಪ್ರಾಣ, ಪ್ರಾಣವೇ ಲಿಂಗವೆಂಬ ಬುದ್ಧಿಯಿಂದ ಹೃದಯಸ್ಥಿತವಾದ ಪ್ರಾಣಲಿಂಗೋಪಾಸನೆಯು ನಡೆಯುತ್ತದೆ. ಇದೇನೂ ಸಾಮಾನ್ಯವಾದುದಲ್ಲ. ಸತ್ಕ್ರಿಯಾಚರಣೆಯಿಂದ ಈಗ ಪರಿಶುದ್ಧವಾಗಿರುವ ಮನಸ್ಸಿಗೆ ಅಂತರ್ಮುಖವಾಗುವ ಶಕ್ತಿ ಬರುತ್ತದೆ. ಇಲ್ಲಿಂದ ಮುಂದೆ ಮನಸ್ಸಿನ ವೃತ್ತಿಗಳು ತೈಲಧಾರೆಯಂತೆ ಅಖಂಡಾಕಾರವಾಗಿ ಭಾವಲಿಂಗದತ್ತ ಹರಿಯುತ್ತವೆ. ಇಲ್ಲಿ ಭಾವಶುದ್ಧವಾದ ಮಾನಸಿಕೋಪಚಾರಗಳಿಂದ ಅಂತರ್ಮುಖವಾಗಿ ಪೂಜೆ ನಡೆಯುತ್ತದೆ.

ಭಾವರೂಪವಾದ ಪೂಜೆಯೂ ವೃತ್ತ್ಯಾತ್ಮಕವಾದುದರಿಂದ ಆ ಭಾವಾಭಾವಗಳು ಕೂಡ ಲಯವಾಗಬೇಕು. ಇದಾಗಬೇಕಾದರೆ ಮನಸ್ಸು, ಇಂದ್ರಿಯಗಳು ಎಲ್ಲವೂ ಮಹಾಲಿಂಗದಲ್ಲಿಯೇ ಎರಕಗೊಳ್ಳಬೇಕು. ಅದಕ್ಕಾಗಿ ಸಾಧಕನು ಅನವರತ ಧ್ಯಾನದಲ್ಲಿ ನಿರತನಾಗುತ್ತಾನೆ.

> “ಮನೋಯತ್ರ ಪ್ರವರ್ತೇತ ತತ್ರ ಸರ್ವೇಂದ್ರಿಯ ಸ್ಥಿತಿಃ।
> ಶಿವೇ ಮನಸಿ ಸಂಲೀನೆ ಕ್ವಚೇಂದ್ರಿಯ ವಿಚಾರಣಾ ॥”

ಇಂದ್ರಿಯಗಳಿಗೆ ಮನಸ್ಸು ಅಧಿಪತಿಯಾಗಿರುವುದರಿಂದ ಮನಸ್ಸೊಂದು ವಶವಾದರೆ ಎಲ್ಲ ಇಂದ್ರಿಯಗಳೂ ವಶವಾದಂತೆಯೇ. ಈಗ ಆತನ ಇಂದ್ರಿಯಗಳಿಗೆ ಬಹಿರ್ವೃತ್ತಿಯಿಲ್ಲ. ಮನಸ್ಸು ಮಹಾಲಿಂಗದಲ್ಲಿ ಮುಳುಗಿ ತನ್ನ ಮನತ್ವವನ್ನು ಕಳೆದುಕೊಂಡಿದೆ. ಅವನು

> “ನಾನ್ಯತ್ಪಶ್ಯತಿ ಯೋಗೀಂದ್ರೋ ನಾನ್ಯಜ್ಞಾನಾತಿ ಕಿಂಚನ ।
> ನಾನ್ಯಚ್ಛೃಣೋತಿ ಸಂದೃಷ್ಟೇ ಚಿದಾನಂದಮಯೇಶಿವೇ ॥

ಎಂಬಂತೆ ಇನ್ನೊಂದನ್ನು ನೋಡುವುದಿಲ್ಲ, ಇನ್ನೊಂದನ್ನು ತಿಳಿಯುವುದಿಲ್ಲ, ಇನ್ನೊಂದನ್ನು ಕೇಳುವುದಿಲ್ಲ. “ಯತ್ರ ನಾನ್ಯತ್ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯತ್ ವಿಜಾನಾತಿ ತದ್ಭೂಮಾ” ಎಂಬ ಶ್ರುತಿಯಂತೆ ಅವನು ಈಗ ಭೂಮಾಸ್ಥಿತಿಯಲ್ಲಿದ್ದಾನೆ. ಅವನಿಗೆ ಈಗ ಆತ್ಮನಲ್ಲಿಯೇ ನೋಟ, ಆತ್ಮನಲ್ಲಿಯೇ ಕೂಟ, ಆತ್ಮನಲ್ಲಿಯೇ ಬೇಟ. ಎಲ್ಲಿ ನೋಡಿದರೂ ಅವನ ಕಣ್ಣಿಗೆ ಶಿವರೂಪವೇ ಕಾಣುತ್ತದೆ. 'ಶಿವೋಹಂ' ಭಾವನೆಯೂ ಬಲವಾಗಿ ಬೇರೂರಿದೆ. ಸರ್ವೇಂದ್ರಿಯನಿರೂಢೋಪಿ ಸರ್ವೇಂದ್ರಿಯ ವಿಹೀನವತ್” ಎಂಬಂತೆ ಅವನಿಗೆ ದೇಹೇಂದ್ರಿಯಗಳಿದ್ದರೂ ದೇಹೇಂದ್ರಿಗಳು ಇಲ್ಲದವನಂತೆಯೇ ಸರಿ. ಏಕೆಂದರೆ ಅವನು ಅಂತರ್ಮುಖವಾದ ಮನಸ್ಸಿನಿಂದ ಜ್ಞಾನರೂಪವಾದ ಸ್ವಸ್ವರೂಪಾಗ್ನಿಯಲ್ಲಿ ಸಮಸ್ತ ವಿಷಯಗಳನ್ನು ಹವನಮಾಡಿ ಸಂತೋಷಪಡುತ್ತಾನೆ.

ಪರಶಿವನ ಸ್ವರೂಪಭೂತ ಗುಣಗಳು ತನ್ನಲ್ಲಿ ಸಹಜವಾಗಿ ಅಳವಟ್ಟಿರುವ ಈ ಸಾಧಕನಾದ ಶಿವಯೋಗಿಯು ಈಗ ಪರಾಹಂತೆಯನ್ನು ಮುಟ್ಟಿದ್ದಾನೆ. ಅವನಲ್ಲಿ ಭೇದಬುದ್ಧಿ ಇಲ್ಲ. “ಅಹಂ ಶಿವಂ ಗುರುಶ್ಚಾಹಮಹಂ ವಿಶ್ವಂ ಚರಾಚರಂ” ಎಂಬಂತೆ ತನ್ನಲ್ಲಿ ಸಮಸ್ತ ಭೂತಗಳನ್ನೂ ಸಮಸ್ತ ಭೂತಗಳಲ್ಲಿ ತನ್ನನ್ನೂ ನೋಡುತ್ತಾನೆ.

> ಅಕರ್ತಾಽಹಮವೇತ್ತಾಽಹಮದೇಹೋಽಹಂ ನಿರಂಜನಃ।
> ಇತಿ ಚಿಂತಯತಃ ಸಾಕ್ಷಾತ್ ಸುವಿದೇವ ಪ್ರಕಾಶತೇ॥

ನಾನು ಅಕರ್ತನು, ಅದೇಹನು, ನಿರಂಜನನು ಎಂಬ ಭಾವನೆಯು ಅವನಲ್ಲಿ ಉಂಟಾಗಿ ಅಸಂಗಚಿನ್ಮಾತ್ರನಾಗಿ ಉಳಿಯುತ್ತಾನೆ. ಇದೇ ಜೀವನ್ಮುಕ್ತನ ಸ್ಥಿತಿ. ಇಲ್ಲಿಗೆ ಅವನ ಜನ್ಮವು ಸಾರ್ಥಕವಾಯಿತು.

ಜ್ಞಾನಶೂನ್ಯ ಸ್ಥಲದಲ್ಲಿ ಹೇಳಿರುವ ಕೆಲವು ವಿಚಾರಗಳು ಪ್ರಬೋಧಕರವಾಗಿವೆ. ಪರಮೇಶ್ವರನು ಜ್ಞಾನಸ್ವರೂಪನೇ ಆದರೂ ಅವನಲ್ಲಿ ಜ್ಞಾನವೂ (ಜನ್ಯ ಜ್ಞಾನವು) ಇಲ್ಲ ಅಜ್ಞಾನವೂ ಇಲ್ಲ. “ನಾ ಜ್ಞಾನಂ ಜ್ಞಾನಮೇವವಾ” ಎಂದು ಹೇಳಿರುವುದರಿಂದ ಅವನು ಜ್ಞಾನಾಜ್ಞಾನಗಳಿಗಿಂತ ಭಿನ್ನವಾದ ಜ್ಞಾನಸ್ವರೂಪನೆಂದು ಅರ್ಥವಾಗುತ್ತದೆ. ಮಾಂಡೂಕ್ಯೋಪನಿಷತ್ತಿನ ೮ನೇ ಮಂತ್ರದಲ್ಲಿ ಬರುವ “ನ ಪ್ರಜ್ಞಂ ನಾಪ್ರಜ್ಞಂ” ಎಂಬ ಮಾತುಗಳು ಈ ಅಭಿಪ್ರಾಯವನ್ನು ದೃಢಪಡಿಸುತ್ತವೆ.

ಇಲ್ಲಿ ಸ್ವಯಂ ಪ್ರಕಾಶವಾದ ಮಹಾಲಿಂಗದಲ್ಲಿ ಏಕೀಭೂತನಾದ ಶಿವಯೋಗಿಯ ಜ್ಞಾನಸ್ವರೂಪವೂ ಅಷ್ಟೇ. ಭೇದಗಳಿಗೆ ಕಾರಣವು ಜನ್ಯ ಜ್ಞಾನವು, ಎಂದರೆ ಪ್ರಮಾತೃ, ಪ್ರಮಾಣ, ಪ್ರಮೇಯಗಳಿಂದುಂಟಾಗುವ ತ್ರಿಪುಟಿ ಜ್ಞಾನವು. ತ್ರಿಪುಟಿಯು ನಿಂತರೇನೇ ಪರಶಿವತಾದಾತ್ಮ್ಯವು ಘಟಿಸುವುದು. ಲೌಕಿಕ, ವೈದಿಕ (ಶಾಸ್ತ್ರ), ಮೋಕ್ಷ, ವ್ಯವಹಾರ ರೂಪವಾದ ಈ ತ್ರಿಪುಟಿ ಜ್ಞಾನವೆಲ್ಲವೂ ಈಗ ನಷ್ಟವಾಗುತ್ತದೆ. ಆ ಜ್ಞಾನವು ನಷ್ಟವಾಗಿ ಎಲ್ಲಿಗೆ ಹೋಯಿತು? ಪ್ರಮಾತೃವಾದ ನಾನೇ ನನ್ನ ಅಸ್ತಿತ್ವವನ್ನು ಕಳೆದುಕೊಂಡು ಮಹಾಲಿಂಗದಲ್ಲಿ ಏಕೀಭವಿಸಿರುವಾಗ ನನ್ನನ್ನು ಆಶ್ರಯಿಸಿರುವ ಆ ಜ್ಞಾನವು ನನ್ನೊಡನೆಯೇ ಲಯವಾಗುತ್ತದೆ. ಆದ್ದರಿಂದಲೇ ಶಿವಯೋಗಿಯ ಜ್ಞಾನವು ನಷ್ಟವಾಗಿದೆಯೆಂದು ಹೇಳಿರುವದು.

ಇನ್ನು ಈ ಜೀವನ್ಮುಕ್ತನಾದ ಶಿವಯೋಗಿಯ ಮೋಕ್ಷದ ಸ್ವರೂಪವೇನು?

> ಜಲೇಜಲಮಿವನ್ಯಸ್ತಂ ವಹ್ನೌವಹ್ನಿರಿವಾರ್ಪಿತಃ ।
> ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನದೃಶ್ಯತೇ ॥

ನೀರು ನೀರಿನಲ್ಲಿ, ಬೆಂಕಿಯು ಬೆಂಕಿಯಲ್ಲಿ ಬೆರತು ಯಾವ ರೀತಿ ಅವಿಭಾಜ್ಯವಾಗುತ್ತದೆಯೋ ಅದೇ ರೀತಿ ಜೀವನು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪರಶಿವಸ್ವರೂಪನಾಗುತ್ತಾನೆ. ಮುಂಡಕೋಪನಿಷತ್ತಿನಲ್ಲಿ ಬರುವ

> ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ-
> ಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ ।
> ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ
> ಪರಾತ್ ಪರಂ ಪುರುಷಮುಪೈತಿ ದಿವ್ಯಂ॥

ಹೇಗೆ ಹರಿಯುತ್ತಿರುವ ನದಿಗಳು ನಾಮರೂಪಗಳನ್ನು ಕಳೆದುಕೊಂಡು ಸಮುದ್ರವನ್ನು ಸೇರಿ ಸಮುದ್ರಸ್ವರೂಪವೇ ಆಗುತ್ತವೆಯೋ ಹಾಗೆಯೇ ಜ್ಞಾನಿಯು ನಾಮರೂಪಗಳಿಂದ ಬಿಡುಗಡೆಯನ್ನು ಹೊಂದಿ ಪರಾತ್ಪರನೂ ದಿವ್ಯನೂ ಆದ ಪರಮಾತ್ಮನನ್ನು ಸೇರಿ ಆ ಪರಮಾತ್ಮಸ್ವರೂಪನೇ ಆಗುತ್ತಾನೆ.

★

ಓಂ ತತ್ ಸತ್

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ
ಬೆಂಗಳೂರಿನ ಮಹಾ ಮಹೋತ್ಸವ ಸಮಯದಲ್ಲಿ
ನಮ್ಮ ಪ್ರಣಾಮಗಳು

ಶ್ರೀ ಲಿಂಗೇಶ್ವರ ಅಂಡ್ ಕೋ.

ದಿನಸಿ ವ್ಯಾಪಾರಿಗಳು
ದಾವಣಗೆರೆ

ಫೋನ್ : 35
★
ತಂತಿ : ಸಂರಜ್

We Welcome
Pancha Jagadgurus
With Great Respect

Sharma Transport

No, 332, Albert Victor Road
opp: N. S. Garage
Near Kalasipalyam Bus Stand
BANGALORE-2
Phone: 71893

No. 82, Thotadappa Choultry
Near City Railway Station
BANGALORE-23
Phone; 71373

★

D. P. SHARMA
Proprietor

★



ವಿದ್ವಾನ್ ಜಿ. ವಿ. ಶಿವಸ್ವಾಮಿ

ಜಗದ್ಗುರು ಶ್ರೀ ರೇಣುಕಾಚಾರ್ಯರ ಸಾಹಿತ್ಯ

ಕನ್ನಡದ ಸಾಪ್ತಾಹಿಕಗಳಲ್ಲಿನ ತಮ್ಮ ವಿದ್ವತ್ಪೂರ್ಣ ಲೇಖನಗಳಿಂದ ಜನಪ್ರಿಯರಾಗಿರುವ ವಿದ್ವಾನ್ ಜಿ. ವಿ. ಶಿವಸ್ವಾಮಿ ಅವರು ತ್ರಿಭಾಷಾ ಪಂಡಿತರು. ತಾರುಣ್ಯದಲ್ಲಿಯೇ ನಿರಂತರ ಅಧ್ಯಯನದಿಂದ "ಜ್ಞಾನನಿಧಿ"ಗಳಾಗಿದ್ದಾರೆ. "ಶಕ್ತಿ ವಿಷ್ಟಾದ್ವೈತ" ಸಿದ್ಧಾಂತದಲ್ಲಿ ಅಪಾರ ಪರಿಶ್ರಮ ಹೊಂದಿರುವ ಶ್ರೀಯುತರು ಸದಾ ಸಾಹಿತ್ಯ ಸಾಗುವಳಿಯಲ್ಲಿ ನಿರತರಾಗಿದ್ದಾರೆ. ಅನೇಕ ಸಾಂಸ್ಕೃತಿಕ ಸಂಘ ಸಂಸ್ಥೆಗಳೊಡನೆ ನಿಕಟ ಸಂಪರ್ಕ ಹೊಂದಿರುವ ಇವರು "ಅಧ್ಯಾಪಕ" ಕಾರ್ಯ ನಿರತರಾಗಿದ್ದಾರೆ.

ಭಾರತೀಯ ದಾರ್ಶನಿಕ ಸಾಹಿತ್ಯದ ವಿಕಾಸಕ್ಕೆ ಪ್ರಾಚೀನ ಕಾಲದಿಂದಲೂ ಅನೇಕ ಆಚಾರ್ಯರು, ಋಷಿಗಳು, ತತ್ವಜ್ಞಾನಿಗಳು ಅವತರಿಸಿ ಸ್ವಾತ್ಮಾನುಭವರೂಪವಾದ ಅಪರೋಕ್ಷ ಜ್ಞಾನವನ್ನು ಪಡೆದು, ತಾವು ಅನುಭವಿಸಿದ ಪರಮಾನಂದ ಜ್ಞಾನವನ್ನು ಮಾನವ ಕುಲಕ್ಕೆ ಉಣಿಸುವುದಕ್ಕೋಸ್ಕರ ಒಂದೊಂದು ಸಾಧನ ಮಾರ್ಗವನ್ನು ರಚಿಸಿದರು. ಅವೇ ಕಾಲಕ್ರಮೇಣ ಮತಗಳೆಂದು ಪ್ರಚಾರಗೊಂಡುವು.

ಅವುಗಳಲ್ಲಿ ಶಿವಾದ್ವೈತ (ಶಕ್ತಿವಿಶಿಷ್ಟಾದ್ವೈತ), ಅದ್ವೈತ ದ್ವೈತ, ವಿಶಿಷ್ಟಾದ್ವೈತ ಎಂಬೀ ನಾಲ್ಕು ಮತಗಳು ಪ್ರಚಾರದಲ್ಲಿ ಬಂದಿವೆ. ಈ ಮತಗಳ ಪರಮ ಧ್ಯೇಯವೆಂದರೆ, ಅಜ್ಞಾನಾಂಧಕಾರದಲ್ಲಿ ಮುಳುಗಿರುವ ಮಾನವರನ್ನು ಸುಜ್ಞಾನದ ಕಡೆಗೆ ಕೊಂಡೊಯ್ಯುವುದೇ ಆಗಿದೆ.

ಜಗದ್ಗುರು ರೇಣುಕಾದಿ ಪಂಚಾಚಾರ್ಯರು* ಸೃಷ್ಟಿಯ ಆದಿಯಲ್ಲಿ ಅವತರಿಸಿ ಶಿವಾದ್ವೈತ ಸಿದ್ಧಾಂತವನ್ನು ಮಾನವರ ಒಳಗೂ ಹೊರಗೂ ಉಪದೇಶಿಸಿ, ತಮ್ಮ ಜ್ಞಾನಾಮೃತವನ್ನು ಕೃತಿಗಳ ರೂಪದಲ್ಲಿಯೂ ನೀಡಿ ದಾರ್ಶನಿಕ ಸಾಹಿತ್ಯದ ವಿಕಾಸಕ್ಕೆ ಕಾರಣೀಪುರುಷರಾಗಿರುತ್ತಾರೆ. ಈ ವಿಷಯಗಳನ್ನು ವೀರಾಗಮ ಸ್ವಯಂಭುವಾಗಮ, ಸುಪ್ರಭೇದಾಗಮಗಳು, ಅನೇಕ ಪ್ರಾಚೀನ ಸಂಸ್ಕೃತ ಗ್ರಂಥಗಳು ಸ್ಪಷ್ಟಪಡಿಸುತ್ತವೆ. ಆಗಮಗಳನ್ನು ಶಿವನೇ ಪಾರ್ವತಿಗೂ, ಷಣ್ಮುಖನಿಗೂ ಉಪದೇಶಿಸಿದ್ದಾನೆಯಾದ್ದರಿಂದ ಇವುಗಳು ಶಿವನ ನಿಶ್ವಾಸಗಳೆನಿಸಿದ ವೇದಗಳಂತೆಯೇ ಪ್ರಮಾಣವೆನಿಸಿವೆ.

ನಮ್ಮ ಭಾರತ ಭೂಮಿಯು ಶ್ರೀ ರೇಣುಕಾಚಾರ್ಯರ ಪಾದಸ್ಪರ್ಶದಿಂದ ಪುನೀತವಾಗಿದೆ. ಈ ಪುಣ್ಯ ಭೂಮಿಯ ಪ್ರತಿಯೊಂದು ಧೂಳಿನ ಕಣದಲ್ಲಿ ಅವರ ಅನುಭವದ ತೇಜಸ್ಸು ಇಂದಿಗೂ ಪರಿದಾಡುತ್ತಲಿರುವುದು. ಆಚಾರ್ಯರ ಗ್ರಂಥಗಳು ಅಜ್ಞಾನದಲ್ಲಿ ಕೈಯಾಡಿಸುತ್ತ ಅಲೆದಾಡುವ ಮಾನವರಿಗೆ ಅರಿವಿನ ಪ್ರಕಾಶನದಲ್ಲಿ ತಮ್ಮ ಆತ್ಮಕಲ್ಯಾಣವನ್ನು ಕಂಡುಕೊಳ್ಳುವಂತೆ ಮಾಡಿರುವುವು. ಅವರ ಅಮರ ಕೃತಿಗಳು ದಾರ್ಶನಿಕ ಸಾಹಿತ್ಯವೆಂದು ಲೋಕಪ್ರಸಿದ್ಧಿಯಾಗಿವೆ. ಆಚಾರ್ಯರು ಕೃತಿಗಳ

---

* ಜಗದ್ಗುರು ಶ್ರೀ ರೇಣುಕಾಚಾರ್ಯರು, ಶ್ರೀ ದಾರುಕಾಚಾರ್ಯರು, ಶ್ರೀ ಏಕೋರಾಮಾರಾಧ್ಯರು, ಶ್ರೀ ಪಂಡಿತಾರಾಧ್ಯರು, ಶ್ರೀ ವಿಶ್ವಾರಾಧ್ಯರು,

ಹಾಗೂ ಪವಾಡಗಳ ಮುಖೇನ ಜನರ ಸ್ಮೃತಿಪಥದಲ್ಲಿ ಅಚ್ಚಳಿಯದೆ ಉಳಿದುಕೊಂಡಿರುವರು.

ಶ್ರೀ ರೇಣುಕಾಚಾರ್ಯರು ಪೀಠಾಧೀಶ್ವರರು. ಮಹಾಶಿವಯೋಗಿಗಳು, ಸಿದ್ಧಪುರುಷರು, ದಾರ್ಶನಿಕ ಸಾಹಿತ್ಯಕಾರರು, ಭಾಷ್ಯಕಾರರು ಆಗಿದ್ದರು. ಅಂತೆಯೇ ಅವರ ಕೃತಿಗಳು ದಾರ್ಶನಿಕ ಸಾಹಿತ್ಯದ ಮಾಲೆಯಲ್ಲಿ ರತ್ನಪ್ರಾಯವಾಗಿವೆ, ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದಿವೆ.

ಶ್ರೀ ರೇಣುಕಾಚಾರ್ಯರ ಕಾಲ

ವೀರಶೈವ ಮತಸ್ಥಾಪಕರಾದ ಜಗದ್ಗುರು ರೇಣುಕಾಚಾರ್ಯರ ಕೃತಿಗಳನ್ನು ತಿಳಿಯುವ ಪೂರ್ವ ಅವರ ಕಾಲವನ್ನು ತಿಳಿಯುವುದು ಅವಶ್ಯಕ. ವಿಜಯಾಗಮ,[1] ವೀರಾಗಮ, ಸ್ವಯಂಭುವಾಗಮಗಳು ರೇಣುಕಾದಿ ಪಂಚಾಚಾರ್ಯರು ನಾಲ್ಕು ಯುಗಗಳಲ್ಲಿಯೂ ಅವತರಿಸಿ ವೀರಶೈವಮತವನ್ನು ಸ್ಥಾಪಿಸಿದರೆಂದು ಸ್ಪಷ್ಟಪಡಿಸುತ್ತವೆ. ಆದರೆ ಕೆಲವು ಗ್ರಂಥಗಳಿಂದ ನಮಗೆ ಈ ರೀತಿ ತಿಳಿದುಬರುತ್ತದೆ. ರೇಣುಕಾಚಾರ್ಯರು ಬಹು ಪುರಾತನರೆಂದು ಸಿದ್ಧನಾಥ ಶಿವಾಚಾರ್ಯನು ಬರೆದ "ರೇಣುಕ ವಿಜಯ" ವೆಂಬ ಸಂಸ್ಕೃತ ಗ್ರಂಥದ ಸಮಾಪ್ತಿಯಲ್ಲಿ ಉಲ್ಲೇಖಿಸಿರುವ ಈ ಕೆಳಗಿನ ಶ್ಲೋಕದಿಂದ ವೇದ್ಯವಾಗುತ್ತದೆ.

> ಋತುಬ್ರಹ್ಮ ವಿಯದ್ಬ್ರಹ್ಮ ಮಿತೇ ವಿಕ್ರಮ ವತ್ಸರೇ । [2]
> ಮಾರ್ಗಶೀರ್ಷೇ ಚ ಪೌರ್ಣಮ್ಯಾಂ ಪ್ರಬಂಧಃ ಪ್ರಾಪಪೂರ್ಣತಾಂ ॥

ಇದರಿಂದ ಕವಿಯು ವಿಕ್ರಮ ಶಕ 1016ನೆಯ ವರ್ಷದಲ್ಲಿ ಈ ಗ್ರಂಥವನ್ನು ಸಮಾಪ್ತಿಗೊಳಿಸಿದನೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಸದ್ಯಃ ವಿಕ್ರಮ ಶಕವು 2027 ಇರುತ್ತದೆ. ಅಂದರೆ ಕವಿಯು ಗ್ರಂಥವನ್ನು ರಚಿಸಿ ಇಂದಿಗೆ 1009 ವರ್ಷಗಳಾಯಿತು ಎಂದು ವಿದ್ವಾಂಸರ ಅಭಿಪ್ರಾಯ. ಈ ಬಗ್ಗೆ ಸಾವಿರಾರು ವರ್ಷಗಳ ಪೂರ್ವದಲ್ಲಿ "ಸಿದ್ಧಾಂತ ಶಿಖಾಮಣಿ"ಯನ್ನು ರಚಿಸಿದ ಶಿವಯೋಗಿ ಶಿವಾಚಾರ್ಯನು ತನ್ನ ಗ್ರಂಥದ ಅಂತ್ಯ ಭಾಗದಲ್ಲಿ ಶ್ರೀ ರೇಣುಕಾಚಾರ್ಯರ ಶಿವಲೋಕಾಗಮನದ ವಿಷಯವನ್ನು ಸ್ಪಷ್ಟವಾಗಿ ಬರೆದಿರುತ್ತಾನೆ.. ಕ್ರಿ.ಶ. 1060ರಲ್ಲಿ ಶ್ರೀಪತಿ ಪಂಡಿತರಿಂದ ರಚಿಸಲ್ಪಟ್ಟಿರುವ "ಶ್ರೀಕರ ಭಾಷ್ಯದಲ್ಲಿ" ಸಹ ಸಿದ್ಧಾಂತ ಶಿಖಾಮಣಿಯ ವಾಕ್ಯಗಳು ಅನೇಕ ಕಡೆ ಪ್ರಮಾಣ ರೂಪವಾಗಿ ಉದಾಹರಿಸಲ್ಪಟ್ಟಿರುವುವು. ಶ್ರೀಪತಿಪಂಡಿತರು "ಅಥಾತೋ ಬ್ರಹ್ಮಜಿಜ್ಞಾಸಾ" (1–1–1) ಎಂಬ ಸೂತ್ರಕ್ಕೆ ಭಾಷ್ಯವನ್ನು ಬರೆಯುವಾಗ "ಪವಿತ್ರಂತೇ ಇತಿ ಋಗ್ವೇದ ಮಂತ್ರಸ್ಯ ಸಿದ್ಧಾಂತ ಶಿಖಾಮಣೌ ಶ್ರೀ ರೇಣುಕಾಚಾರ್ಯೇಣ ಲಿಂಗಧಾರಣ ಪರತ್ವೇನ ನಿರ್ದೇಶಾತ್" ಇತ್ಯಾದಿ ವಾಕ್ಯಗಳನ್ನು ಬರೆದು ಸಿದ್ಧಾಂತ ಶಿಖಾಮಣಿಯ ಪವಿತ್ರತೆಯನ್ನು ಉಲ್ಲೇಖಿಸಿರುವರು.

ಜಗತ್ಪ್ರಸಿದ್ಧರಾದ ಮಿ॥ ಜೆ. ಎಸ್. ಫಾರ್ಕುಹಾರ್, ಎಂ.ಎ., ಡಿ.ಲಿಟ್., ಎಂಬವರು ತಮ್ಮ ಗ್ರಂಥದಲ್ಲಿ[3] ಪ್ರತಿಯುಗದ ಆದಿಯಲ್ಲಿಯೂ ಶಿವನ ಮುಖಗಳಿಂದ ಅವತರಿಸಿದ ಏಕೋರಾಮ, ಪಂಡಿತಾರಾಧ್ಯ, ರೇಣುಕಾರಾಧ್ಯ, ಮರುಳಾರಾಧ್ಯ ಮತ್ತು ವಿಶ್ವಾರಾಧ್ಯ ಎಂಬ ಐದು ಜನ ಆಚಾರ್ಯರಿಂದ ವೀರಶೈವಮತವು ಸ್ಥಾಪಿಸಲ್ಪಟ್ಟಿತೆಂದೂ ಇವರು ಬಹು ಪುರಾತನ ಕಾಲದವರೆಂದೂ ಬರೆದಿರುತ್ತಾರೆ. ಶ್ರೀ ವ್ಹಿ. ಜಿ. ಪಾಟೀಲರು[೫] ಆದಿ ರೇಣುಕರ ಕಾಲ ಸುಮಾರು ಮೂರು ಸಾವಿರ ವರ್ಷಗಳೆಂದು ಅಂದರೆ ಇಲ್ಲಿಗೆ "2800 ವರ್ಷಗಳಾದುವು" ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳಿಂದ ಶ್ರೀ ರೇಣುಕಾಚಾರ್ಯರ ಕಾಲ ಸುಮಾರು ಎರಡು ಮೂರು ಸಾವಿರ ವರ್ಷಗಳ ಪ್ರಾಚೀನವೆಂದು ತಿಳಿಯಬಹುದು.

ಆಚಾರ್ಯರ ಕೃತಿಗಳು

1 ರೇಣುಕಭಾಷ್ಯ.—ಶ್ರೀ ರೇಣುಕಾಚಾರ್ಯರು ವೇದ, ವೇದಾಂತ, ಪುರಾಣ, ಆಗಮ, ಸಕಲ ಶಾಸ್ತ್ರಗಳ ಪಾಂಡಿತ್ಯವನ್ನು ಪಡೆದಿದ್ದರಿಂದ "ರೇಣುಕಭಾಷ್ಯ"ವನ್ನು ಬರೆದು ದಾರ್ಶನಿಕ ಸಾಹಿತ್ಯಕ್ಕೆ ಗೌರವ ತಂದಿದ್ದರೆಂದು ತಿಳಿದುಬರುತ್ತದೆ. [4]ಶ್ರೀ ಜಗದ್ಗುರು ಪಂಚಾಚಾರ್ಯರು ಭೂಮಂಡಲದಲ್ಲಿ ವೀರಶೈವ ಮತವನ್ನು ಸ್ಥಾಪಿಸಿ ಈ ಮತದ ಸಿದ್ಧಾಂತವು ಸರ್ವರಿಗೂ ತಿಳಿಯಲೆಂಬ ಉದ್ದೇಶದಿಂದ ಶಿವಸೂತ್ರ, ಬ್ರಹ್ಮಸೂತ್ರ, ಉಪನಿಷದಾದಿಗಳ ಮೇಲೆ ಭಾಷ್ಯಗಳನ್ನು ರಚಿಸಿದರು. ಈ ಭಾಷ್ಯಗಳು "ರೇಣುಕಭಾಷ್ಯ, ದಾರುಕಭಾಷ್ಯ, ಏಕೋರಾಮ ಭಾಷ್ಯ, ಪಂಡಿತಾರಾಧ್ಯ ಭಾಷ್ಯ, ವಿಶ್ವಾರಾಧ್ಯ ಭಾಷ್ಯ ಎಂಬ ಹೆಸರುಗಳಿಂದ ಪ್ರಸಿದ್ಧವಿರುವುವು. ಈ ಪೂಜ್ಯಪಾದರು ಲೋಕೋತ್ತರವಾದ ಭಾಷ್ಯಗಳನ್ನು ರಚಿಸಿ ಈ ಮತಕ್ಕೆ ವಿಶೇಷ ಗೌರವವನ್ನು ತಂದಿದ್ದರು ಎಂಬುದಾಗಿ ತಿಳಿದುಬಂದಿದೆ. ಮಹಾನಾರಾಯಣೋಪನಿಷತ್ತಿಗೆ ಭಾಷ್ಯವನ್ನು ಬರೆದ ಪ್ರಾಚೀನ ಪಂಡಿತರಾದ ಶ್ರೀ ವೃಷಭ ಪಂಡಿತಾರಾಧ್ಯರು 11ನೇ ಅನುವಾಕದಲ್ಲಿ "ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ" ಇತ್ಯಾದಿ ವಾಕ್ಯಗಳಿಗೆ ಭಾಷ್ಯವನ್ನು ಬರೆಯುವಾಗ "ರೇವಣಸಿದ್ಧ ಮರುಲಸಿದ್ಧೈಕೋರಾಮಸಿದ್ಧ ಪಂಡಿತಾರಾಧ್ಯಾದಯಃ ಸಹಸ್ರ ಶೀರ್ಷಂ ದೇವಮಿತ್ಯಾದಿ ಪರಶಿವ ಧರ್ಮ ಪ್ರತಿಪಾದಕ ವಾಕ್ಯಾನಾಂ……" ॥

---

[1] ವೀರಶೈವರತ್ನ— ಪು. ೩೮.

[2] ರೇಣುಕ ವಿಜಯ.

[3] ರಿಲಿಜಿಸ್ ಕ್ವೆಸ್ಟ್ ಆಫ್ ಇಂಡಿಯಾ

[4] ವೀರಶೈವರತ್ನ—ಪು..೨೨

[೫] ವಿಭೂತಿಗ್ರಂಥ ಪು. ೩೬೮

ಉದ್ಧೃತಾರಾಧ್ಯವೇಮನಾರಾಧ್ಯವಿಶ್ವಾರಾಧ್ಯಾದಯಸ್ತು "ಅಸ್ಯಾಮುಪನಿಷದಿ ದಹರೋಪಾಸನಾ ವಿಷಯೇ ನಾರಾಯಣೋಪಾಸಕತ್ವ ಶಿವೋಪಾಸ್ಯತ್ವ ನಿರ್ಣಯೇ ಸಹಸ್ರಶೀರ್ಷಾನುವಾಕಗತಾನಿ......"॥ ಈರೀತಿಯಾಗಿ ವಾಕ್ಯಗಳನ್ನು ಬರೆದು ಶ್ರೀ ರೇಣುಕಾದಿ ಪಂಚಾಚಾರ್ಯರ ಭಾಷ್ಯದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಈ ಪೂಜ್ಯರುಗಳು ರಚಿಸಿದ ಭಾಷ್ಯಗಳು ಸದ್ಯಃ ನಮ್ಮ ಸ್ವಾಧೀನದಲ್ಲಿ ಇಲ್ಲವಾದರೂ ಕೆಲವು ಪುಸ್ತಕಭಂಡಾರಗಳಲ್ಲಿ ದೊರೆಯುವುದಾಗಿ ತಿಳಿದುಬರುತ್ತದೆ. [5] ಸಿಕಂದರಾಬಾದ್‌ನಲ್ಲಿ ಇರುವ ಶ್ರೀ ಮಾರ್ಕಂಡೇಯ ಶಾಸ್ತ್ರಿಗಳವರಲ್ಲಿ "ರೇಣುಕ ಭಾಷ್ಯ" "ದಾರುಕ ದಿಗ್ವಿಜಯ"ಎಂಬೀ ಎರಡು ಗ್ರಂಥಗಳು ದೊರೆಯುತ್ತವೆಂದು ಅವರ ಪುಸ್ತಕಭಾಂಡಾಗಾರದ ಪಟ್ಟಿಯಿಂದ ತಿಳಿದುಬರುತ್ತದೆ. ಅಲ್ಲದೆ ಜರ್ಮನ್‌ದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಇರುವ ಲೈಬ್ರರಿಯಲ್ಲಿ "ಶ್ರೀ ರೇಣುಕ ಭಾಷ್ಯ"ವು ಇದೆ ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟು ಅನೇಕ ಗ್ರಂಥಗಳಲ್ಲಿಯೂ ಉಲ್ಲೇಖನಮಾಡಿರುತ್ತಾರೆ. ಮಹಾಪೀಠಾಚಾರ್ಯರು ಬರ್ಲಿನ್ ಲೈಬ್ರರಿಯಲ್ಲಿರುವ "ಶ್ರೀ ರೇಣುಕ ಭಾಷ್ಯ"ವನ್ನು ಬರೆದು ತರಿಸಿ ಪ್ರಕಟಣೆ ಮಾಡಿದರೆ ಸಮಾಜಕ್ಕೆ ಮಹದುಪಕಾರವಾಗುತ್ತದೆ. ಈ ಕಾರಣಗಳಿಂದ ಆಚಾರ್ಯರು ಬಹುಮುಖ ಪ್ರತಿಭೆಯುಳ್ಳವರೆಂದು ತಿಳಿದುಬರುತ್ತದೆ.

2. **ಶಿವಾಗಮ.**—ಆದಿ ರೇಣುಕರು ಶಿವಾಗಮಗಳನ್ನು ಪ್ರಕಟಿಸಿದ್ದರೆಂದು ಕೆಲವು ವಿದ್ವಾಂಸರೂ ಅವುಗಳನ್ನು ಪ್ರಚಾರಪಡಿಸಿದರೆಂದು ಇನ್ನು ಕೆಲವು ಮಂದಿ ವಿದ್ವಾಂಸರೂ ಅಭಿಪ್ರಾಯಪಟ್ಟಿರುತ್ತಾರೆ. ಶ್ರೀ ಜ. ಚ. ನಿ. ಯವರು"ವಿಭೂತಿ" ಎಂಬ ಗ್ರಂಥದ "ಸಂಸ್ಕೃತ ವಾಙ್ಮಯದಲ್ಲಿ ಶಿವಾಚಾರ್ಯ ಸಾಹಿತಿಗಳು" ಎಂಬ ಲೇಖನದಲ್ಲಿ ಈ ರೀತಿ ಬರೆದಿರುತ್ತಾರೆ. "ಜಗದ್ಗುರು ರೇಣುಕಾಚಾರ್ಯರು ಶಿವಾಗಮಗಳನ್ನು ಬರೆದಂತೆ ಸಿದ್ಧಾಂತ ಶಿಖಾಮಣಿಯ ಈ ಶ್ಲೋಕದಿಂದ ಸ್ಪಷ್ಟವಾಗುತ್ತದೆ.

"ಯಂತ್ರ ಮಂತ್ರ ಕಲಾ ಸಿದ್ಧಾನ್ ವಿಮತಾನ್ ಸಿದ್ಧ ಮಂಡಲಾನ್ ।[6]
ವಿಜಿತ್ಯ ಸ್ವಪ್ರಭಾವೇನ ಸ್ಥಾಪಯಿತ್ವಾ ಶಿವಾಗಮಾನ್ ॥
ಆಜಗಾಮ ನಿಜಾವಾಸಂ ಕುಲ್ಯಪಾಕಾಭಿದಂ ಸ್ಥಲಂ"

3. "ರಸಾಮೃತ", "ರಸರಾಜ ಶಿರೋಮಣಿ" ಎಂಬೆರಡು ಗ್ರಂಥಗಳನ್ನು ಶ್ರೀ ರೇಣುಕಾಚಾರ್ಯರು ಬರೆದಂತೆಯೂ ತಿಳಿದುಬಂದಿದೆ. ಮೊದಲನೆಯದು ಅಪೂರ್ಣವಾಗಿಯೂ ಎರಡನೆಯದು ನೇಪಾಳ ನೃಪಗೃಹದಲ್ಲಿ ಇರುವಂತೆಯೂ ತಿಳಿದುಬಂದಿದೆ; ಸದರ್ಮ ದೀಪಿಕೆಯ ಸ-137 ರಲ್ಲೂ, ವಿಭೂತಿ ಗ್ರಂಥದ ಪು. 358ರಲ್ಲೂ, ಶ್ರೀ ಜ.ಚ.ನಿ.ಯವರ ಅಭಿಮತವಾಗಿರುತ್ತದೆ. ಆಚಾರ್ಯರು ಸರ್ವ ವಿದ್ಯಾವಿಶಾರದರೆಂದು ಅನೇಕ ಗ್ರಂಥಗಳಲ್ಲಿ ಪ್ರಾಚೀನ ಕವಿಗಳು ಉಲ್ಲೇಖಿಸಿರುವುದರಿಂದ ಈ ಕೃತಿಗಳನ್ನು ಬರೆದಿರಬೇಕೆಂದು ತಿಳಿಯಬಹುದು.

ಸಿದ್ಧಾಂತ ಶಿಖಾಮಣಿ

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸಿದ ಗ್ರಂಥವೇ "ಸಿದ್ಧಾಂತ ಶಿಖಾಮಣಿ". ವ್ಯಾಸ ಮಹಾಮುನಿಗಳು ಶ್ರೀ ಕೃಷ್ಣಾರ್ಜುನರ ಸಂವಾದವನ್ನು ಸಂಗ್ರಹಿಸಿ ಅದಕ್ಕೆ "ಭಗವದ್ಗೀತಾ" ಎಂದು ನಾಮವಿಟ್ಟಂತೆ ಶಿವಯೋಗಿ ಶಿವಾಚಾರ್ಯರು ರೇಣುಕಾಗಸ್ತ್ಯರ ಸಂವಾದವನ್ನು ಸಂಗ್ರಹಿಸಿ ಇದಕ್ಕೆ "ಸಿದ್ಧಾಂತ ಶಿಖಾಮಣಿ" ಎಂಬ ನಾಮವಿಟ್ಟರು. ಇದೇ ಕಾರಣದಿಂದ ಈ ಗ್ರಂಥವು "ರೇಣುಕಗೀತಾ" ಎಂಬ ಪವಿತ್ರ ನಾಮದಿಂದಲೂ ಪ್ರಸಿದ್ಧವಾಗಿದೆ. ವೇದಾಂತಸಾರ ವೀರಶೈವ ಚಿಂತಾಮಣಿ ಮೊದಲಾದವುಗಳ ಗ್ರಂಥಕಾರರು ಇದನ್ನೇ "ರೇಣುಕಾಗಮ" ಎಂಬ ನಾಮದಿಂದಲೂ ಉಲ್ಲೇಖಿಸಿರುವರು. ಈ ಸಿದ್ಧಾಂತ ಶಿಖಾಮಣಿಯಲ್ಲಿ ಷಟ್‌ಸ್ಥಲ. ಅಷ್ಟಾವರಣ. ಪಂಚಾಚಾರ, ವರ್ಣಾಶ್ರಮ ಧರ್ಮ ವಿಚಾರ, ಇನ್ನೂ ಅನೇಕ ವಿಷಯಗಳೊಳಗೊಂಡು 21 ಪರಿಚ್ಛೇದಗಳಲ್ಲಿ 101 ಸ್ಥಲಗಳ ಸಮಗ್ರಸ್ವರೂಪವು ಆಚಾರ್ಯರಿಂದ ನಿರೂಪಿಸಲ್ಪಟ್ಟಿರುವುದು. ಶಿವಾದ್ವೈತ ಸಿದ್ಧಾಂತದಲ್ಲಿ ಪರಬ್ರಹ್ಮವು "ಸ್ಥಲ" ಶಬ್ದದಿಂದ ಪ್ರತಿಪಾದಿಸಲ್ಪಟ್ಟಿರುವುದು. "ಸ್ಥೀಯತೆ, ಲೀಯತೆ ಯತ್ರ ಜಗದೇತಚ್ಚರಾಚರಂ । ತದ್ಬ್ರಹ್ಮಸ್ಥಲಮಿತ್ಯುಕ್ತಂ ಸ್ಥಲತತ್ವ ವಿಶಾರದೈಃ" ಎಂಬ ಪ್ರಮಾಣದಂತೆ ಚರಾಚರಾತ್ಮಕವಾದೀ ಜಗತ್ತು ಯಾವುದರಲ್ಲಿ ಉತ್ಪತ್ತಿ ಮತ್ತು ಲಯಗಳನ್ನು ಹೊಂದುವುದೋ ಆ ಪರಬ್ರಹ್ಮವು "ಸ್ಥಲ"ವೆಂದು ಹೇಳಿಸಿಕೊಳ್ಳುವುದು.

ಅಗಸ್ತ್ಯ ಮಹಾಮುನಿಗೆ ತತ್ವೋಪದೇಶ

"ಅಗಸ್ತ್ಯ ಮುನಿ ಶಾರ್ದೂಲ ಸಮಸ್ತಾಗಮ ಪಾರಗ
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತಂ ಶೃಣು ಸಾದರಂ."[7]

ಶ್ರೀ ರೇಣುಕಾಚಾರ್ಯರು ಅಗಸ್ತ್ಯರ ಪ್ರಾರ್ಥನೆಯನ್ನು ಕೇಳಿ ಸರ್ವಾಗಮನಿಷ್ಣಾತನಾದ ಎಲೈ, ಅಗಸ್ತ್ಯ ಮಹರ್ಷಿಯೇ ! ಶಿವಜ್ಞಾನವನ್ನುಂಟುಮಾಡತಕ್ಕ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸುವೆನೆಂದು ಹೇಳಿ, ಷಟ್‌ಸ್ಥಲರೂಪವಾದ ಸಿದ್ಧಾಂತ ಶಾಸ್ತ್ರವನ್ನೆಲ್ಲ ಉಪದೇಶಿಸಿ ಕೊನೆಯಲ್ಲಿ "ಅಗಸ್ತ್ಯ ಮುನಿಯೇ, ನೀನು ಶಿವಾನುಗ್ರಹಕ್ಕೆ ಪಾತ್ರನೆಂದು ನಿಶ್ಚಯಿಸಿ ನಿನಗೆ ಈ ದರ್ಶನ

---

[5] ವೀರಶೈವರತ್ನ ಪು. ೨೩ ಮತ್ತು ೨೪

[6] ಸಿದ್ಧಾಂತ ಶಿಖಾಮಣಿ ಪರಿ. 21-ಪು.-೨೮೭.

[7] ಸಿದ್ಧಾಂತ ಶಿಖಾಮಣಿ ಪ. ೫, ಪು. ೪೪.

ಸಿದ್ಧಾಂತವನ್ನು ಉಪದೇಶಿಸಿರುವೆನು. ನೀನು ಸರ್ವಾದರಣೀಯವಾದ ಶಿವಾದ್ವೈತದರ್ಶನವನ್ನು ಪ್ರಪಂಚದಲ್ಲೆಲ್ಲಾ ಪ್ರಚಾರಪಡಿಸು" ಎಂದು ಅಪ್ಪಣೆಕೊಡಿಸಿರುವರು.

ರೇಣುಕಾಚಾರ್ಯರ ಅಪ್ಪಣೆ ಮೇರೆಗೆ ಅಗಸ್ತ್ಯರು ಪ್ರಪಂಚದಲ್ಲೆಲ್ಲಾ ಸಂಚಾರಮಾಡಿ ಶಿವಾದ್ವೈತ ದರ್ಶನವನ್ನು ಪ್ರಚಾರ ಮಾಡಿದರೆಂದು ಶ್ರೀಕರ ಭಾಷ್ಯದಿಂದ ತಿಳಿದುಬರುತ್ತದೆ.

ಈ ಗ್ರಂಥವು ತನ್ನ ನಾಮಕ್ಕೆ ತಕ್ಕಂತೆ ಶಿವಸಿದ್ಧಾಂತ ತತ್ವಗಳನ್ನು ಪ್ರತಿಪಾದಿಸತಕ್ಕ ಸಮಸ್ತ ಗ್ರಂಥಗಳಲ್ಲಿ ಶಿಖಾಮಣಿಯಾತೊಪ್ಪುತ್ತಿರುವುದು. ಆದುದರಿಂದಲೇ ಈ ಗ್ರಂಥಕಾರರು:

"ಶ್ರೀ ವೇದಾಗಮ ವೀರಶೈವ ಸರಣಿಃ ಶ್ರೀ ಷಟ್‌ಸ್ಥಲೋದ್ಯನ್ಮಣಿಃ [8]
ಶ್ರೀ ಜೀವೇಶ್ವರ ಯೋಗಪದ್ಮ ತರಣಿಃ ಶ್ರೀ ಗೋಪ್ಯಚಿಂತಾಮಣಿಃ।
ಶ್ರೀ ಸಿದ್ಧಾಂತ ಶಿಖಾಮಣಿಃ ಲಿಖಿತಿಯಸ್ತಂ ಲೇಖಿಯತ್ಯಾದರಾತ್
ಶ್ರೋತಾ ಶ್ರಾವಯಿತಾ ಸಯಾತಿ ವಿಮಲಾಂ ಭಕ್ತಿಂ ಚ ಮುಕ್ತಿಂಪರಾಂ॥"

ಈ ರೀತಿಯಾಗಿ ಗ್ರಂಥಪ್ರಾಶಸ್ತ್ಯವನ್ನು ಶಿವಯೋಗಿ ಶಿವಾಚಾರ್ಯರು ಮುಕ್ತಕಂಠದಿಂದ ಉದ್ಘೋಷಿಸಿರುವರು. ಈ ಗ್ರಂಥವು ವೀರಶೈವ ದರ್ಶನ ಸಾಹಿತ್ಯದ ಮಾಲೆಯಲ್ಲಿ ಅತ್ಯಂತ ಪ್ರಾಚೀನವಾದ ಗ್ರಂಥವೆಂದು ಅನೇಕ ವಿದ್ವಾಂಸರ ಮತ. ಆಚಾರ್ಯರ ಉಪದೇಶಾತ್ಮಕವಾದ ಸಿದ್ಧಾಂತ ಶಿಖಾಮಣಿಯು ದರ್ಶನ ಸಾಹಿತ್ಯಕ್ಕೆ ಒಂದು ಮಹಾ ಕೊಡುಗೆ ಎಂದು ಹೇಳಬೇಕು. ಈ ಸಂಸ್ಕೃತ ಗ್ರಂಥವನ್ನು ಕನ್ನಡ, ತೆಲುಗು, ತಮಿಳು, ಮರಾಠಿ ಭಾಷೆಗಳಿಗೆ ವಿದ್ವಾಂಸರುಗಳು ಭಾಷಾಂತರಿಸಿ ಜನಸಾಮಾನ್ಯರಿಗೆ ಉಪಕಾರಮಾಡಿ ಆಚಾರ್ಯರ ಕೀರ್ತಿಯನ್ನು ಬೆಳಗಿರುತ್ತಾರೆ.

ರೇಣುಕಾಚಾರ್ಯರನ್ನು ಕುರಿತ ಕೃತಿಗಳು

ರೇಣುಕಾಚಾರ್ಯರ ಪ್ರತಿಭೆಗೆ ಒಳಗಾದ ಅನೇಕ ಕವಿಗಳು ಆಚಾರ್ಯರ ಜೀವನ, ಕೃತಿಗಳು ಮತ್ತು ಮಹಿಮಾ ಪವಾಡಗಳನ್ನು ಕುರಿತು ಗ್ರಂಥಗಳನ್ನು ಬರೆದಿರುತ್ತಾರೆ. (1) ಸಿದ್ಧನಾಥ ಶಿವಾಚಾರ್ಯರು ಸಂಸ್ಕೃತದಲ್ಲಿ "ರೇಣುಕ ವಿಜಯ", (2) ಮಲ್ಲಣ ಕವಿ "ರೇಣುಕಸಾಂಗತ್ಯ", (3) ಈಶಾನ್ಯ ಶಿವಗುರುವು ಸಂಸ್ಕೃತದಲ್ಲಿ "ರೇಣುಕ ಚರಿತ್ರ", (4) ಚತುರ್ಮುಖ ಬೊಮ್ಮರಸ ಕವಿಯು "ರೇವಣಸಿದ್ಧ ಪುರಾಣ", (5) ಹರಿಹರನು "ರೇವಣ ಸಿದ್ಧೇಶ್ವರ ರಗಳೆ", (6) ಗುರುಸಿದ್ಧಲಿಂಗರು "ಶ್ರೀ ರೇವಣ ಸಿದ್ಧೇಶ್ವರ ಭಕ್ತಿಸಾರ", ಬಸವಪ್ಪ ಶಾಸ್ತ್ರಿಗಳು "ರೇಣುಕ ವಿಜಯ", ಮತ್ತು ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು "ರೇಣುಕ ವಿಜಯ ಪುರಾಣ", ತಿಪ್ಪಶೆಟ್ಟರ ಮಠದ ಶ್ರೀಗಳು "ರೇವಣಸಿದ್ಧ ಶತಕ" ಮುಂತಾದ ಗ್ರಂಥಗಳನ್ನೂ, ಇತ್ತೀಚೆಗೆ, ಮೈಸೂರು ಅರಮನೆಯ ಪಂಡಿತರಾಗಿದ್ದ ಆಸ್ಥಾನ ಮಹಾ ವಿದ್ವಾನ್, "ಪಂಡಿತ ರತ್ನಂ" ಸಿರಸಿ ಗುರುಶಾಂತ ಶಾಸ್ತ್ರಿಗಳು ಕನ್ನಡದಲ್ಲಿ ರೇಣುಕ ವಿಜಯ"", (8) ಶ್ರೀ ಜ.ಚ.ನಿ.ಯವರು ಕನ್ನಡದಲ್ಲಿ "ಮಣಿ ಮುಕುರ" (ಈ ಗ್ರಂಥವು ಸಿದ್ಧಾಂತ ಶಿಖಾಮಣಿಯನ್ನು ಕನ್ನಡ ಪದ್ಯ ಶೈಲಿಯಲ್ಲಿ ಭಾಷಾಂತರಿಸಿ ಬರೆಯಲಾಗಿದೆ.) ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ॥ ಸಿದ್ಧಪ್ಪಾರಾಧ್ಯರು "ರೇಣುಕ ಪರಂಜ್ಯೋತಿ" ಮುಂತಾದ ಅನೇಕ ಗ್ರಂಥಗಳನ್ನು ಬರೆದು ವೀರಶೈವ ದರ್ಶನ ಸಾಹಿತ್ಯಕ್ಕೆ ಮತ್ತಷ್ಟು ಪ್ರತಿಭೆಯನ್ನು ತಂದಿರುತ್ತಾರೆ.

ಈ ಕವಿಪುಂಗವರು ರೇಣುಕಾಚಾರ್ಯರನ್ನು : "ವೀರಶೈವ ಪರಮದೇಶಿಕಂ", "ವೀರಶೈವ ಸಿದ್ಧಾಂತವನು ಲೇಸಾಗಿ ಪಸರಿಸಿದ ರೇವಣ ಸಿದ್ಧೇಶಂ", "ವೀರಶೈವ ಸಿದ್ಧಾಂತ ಚಕ್ರೇಶಂ". ವೀರಶೈವ ಮತಸ್ಥಾಪನಾಚಾರ್ಯ", ಶಿವಾದ್ವೈತ ಸಿದ್ಧಾಂತ ಸ್ಥಾಪನಾಚಾರ್ಯ", "ಶಿವಯೋಗ ವಿಶೇಷಜ್ಞ ಶಿವಾಜ್ಞಾನ ಮಹೋದಧೇ"। ಸಮಸ್ತ ವೇದಶಾಸ್ತ್ರಾದಿ ವ್ಯವಹಾರ ಧುರಂಧರ", ಜಗದ್ಗುರು ರೇಣಕಾಚಾರ್ಯರು ವೀರಶೈವ ಧರ್ಮದ ಸ್ವರೂಪದ ರೂಪರೇಖೆಗಳ ಪರಿಚಯವನ್ನು ಜಗತ್ತಿಗೆ ಮಾಡಿಕೊಟ್ಟಿರುವುದರಿಂದ ಪರಂಜ್ಯೋತಿ ಎನಿಸಿ ಅಂದಿನಿಂದ ಇಂದಿನವರೆಗೂ ಎಲ್ಲರ ಹೃದಯದಲ್ಲೂ ಶೋಭಿಸುತ್ತಲಿದ್ದಾರೆ". ಇವೇ ಮೊದಲಾದ ಪದಗಳಿಂದ ಆಚಾರ್ಯರನ್ನುದ್ದೇಶಿಸಿ ಹೊಗಳಿರುವುದು ಈ ಮೇಲ್ಕಂಡ ಗ್ರಂಥಗಳಿಂದ ತಿಳಿಯಬಹುದು. ಅಲ್ಲದೆ, ಶ್ರೀ ಮರಿತೋಂಟದಾರ್ಯರು ತಮ್ಮ ವೀರಶೈವಾನಂದ ಚಂದ್ರಿಕೆಯಲ್ಲಿ "ವೀರಶೈವ ಸಮಯಪ್ರವರ್ತಕಾನಾಂ ರೇಣುಕಾನಾಂ..." ಎಂದು ಹೇಳಿ ಶ್ರೀ ರೇಣುಕರನ್ನು ಮತಪ್ರವರ್ತಕರಲ್ಲಿ ಮೊದಲನೆಯವರೆಂದು ಒಪ್ಪಿರುತ್ತಾರೆ. "ವೀರಶೈವ ಧರ್ಮದ ಉಗಮ ಐದು ಜನ ಆಚಾರ್ಯರಿಗೆ ಸೇರತ್ತದೆ, ಇವರನ್ನು ಪಂಚಾಚಾರ್ಯರೆಂದು ಕರೆಯುತ್ತಾರೆ" "ಎಂದು "ಭಾರತೀಯ ಇತಿಹಾಸ ದರ್ಶನ"[9] ಎಂಬ ಗ್ರಂಥದಲ್ಲಿ ಬರೆದಿದೆ. ಈ ಮಾತುಗಳಿಂದ ಆಚಾರ್ಯರು ಮಹಾ ಪುರುಷರು, ಉತ್ತಮ ದಾರ್ಶನಿಕರು, ನೀತಿಬೋಧಕರು ಆಗಿ ಸಾಹಿತ್ಯಕ್ಷೇತ್ರದಲ್ಲಿ ಧ್ರುವತಾರೆಯಂತೆ ಪ್ರಕಾಶಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಆಚಾರ್ಯರ ಧರ್ಮಪ್ರಚಾರ.—ರೇಣುಕಾಚಾರ್ಯರು ಆಸೇತು ಹಿಮಾಚಲದವರೆಗೆ ಭರತ ಖಂಡದಲ್ಲೆಲ್ಲ ಸಂಚಾರಮಾಡಿ ಧರ್ಮಜಾಗೃತಿಯನ್ನುಂಟುಮಾಡಿರುತ್ತಾರೆ. ಹಿಂದೂ ಧರ್ಮವನ್ನು ಉದ್ಧಾರಮಾಡಿದವರಲ್ಲಿ ಆಚಾರ್ಯರು ಒಬ್ಬರು. ಈ ಮಹಾ ಪುರುಷರು ತಮ್ಮ ತಪಶ್ಶಕ್ತಿಯಿಂದ ಜನ

---

[8] ಸಿದ್ಧಾಂತ ಶಿಖಾಮಣಿ ಪು-೨೭೭.

[9] ಭಾರತೀಯ ಇತಿಹಾಸದರ್ಶನ. by ಶ್ರೀ ಬಿ.ಕೆ. ಮಾಧವಮೂರ್ತಿ ಮತ್ತು ಶ್ರೀ ಬಿ. ಎಸ್. ರಾಮಯ್ಯನವರು

ಸಾಮಾನ್ಯರ ಹೃದಯವನ್ನು ಸೆರೆಹಿಡಿದು ಜಾಗೃತಗೊಳಿಸಿ ಅವರನ್ನು ಉತ್ತಮ ಮಾರ್ಗದಲ್ಲಿ ನಡೆಯುವಂತೆ ಮಾಡಿರುತ್ತಾರೆ. "ವೀರಶೈವ ದರ್ಶನದ ಅರಿವಿನಿಂದ ಮಾನವನು ನಿತ್ಯಸುಖಿ, ಶಾಂತಿ, ಕೈವಲ್ಯಪದವಿಯನ್ನು ಪಡೆಯಬಹುದು. ಭಾರತೀಯರ ಜೀವನ ಧರ್ಮ, ತ್ಯಾಗಗಳಿಂದ ಕೂಡಿರಬೇಕು, ಪ್ರತಿಯೊಬ್ಬರ ನಡೆ, ನುಡಿ ಶಿವನು ಮೆಚ್ಚುವಂತಿರಬೇಕು, ಶಿವನ ಕೃಪೆಯೇ ಮಾನವನ ಉದ್ಧಾರ. ದರ್ಶನವೇ ಮುಕ್ತಿ ಎಂದು ಉಪದೇಶ ಮಾಡಿ ತಮ್ಮ ಕೃತಿಗಳಲ್ಲಿರುವ ಆತ್ಮಾನಂದದ ತಿರುಳನ್ನು ಜನರಿಗೆ ಧಾರೆಯೆರೆದು ದಾರ್ಶನಿಕ ಸಾಹಿತ್ಯದಲ್ಲಿ ತಮ್ಮ ಕೃತಿಗಳನ್ನು ಅಚ್ಚಳಿಯದಂತೆ ಉಳಿಸಿರುತ್ತಾರೆ.

ರೇಣುಕಾಚಾರ್ಯರ ಕೃತಿಗಳನು ಮತ್ತು ಆಚಾರ್ಯರನ್ನು ಕುರಿತು ಬರೆದಿರುವ ವಿದ್ವಾಂಸರ ಗ್ರಂಥಗಳನ್ನು ಕುರಿತು ಅಭ್ಯಾಸ ಮಾಡುವಾಗ ನಮಗೆ ಮೂಡಬೇಕಾದ ದೃಷ್ಟಿ ಪವಿತ್ರವಾದುದಾಗಿರಬೇಕು. ಅವರು ಪರಿಪೂರ್ಣರು, ಮಹಾತ್ಮರು; ಅವರೆಲ್ಲಿ, ನಾವೆಲ್ಲಿ ? ಮಹಾಮಹಿಮರಾಗಿ ಹುಟ್ಟಿ ಮಾನವರ ವಿಕಾಸಕ್ಕಾಗಿ ಮಾನವರೊಡನೆ ಬಾಳಿ ಉಳಿದರು. ಆಧ್ಯಾತ್ಮಿಕ ದರ್ಶನದ ಧ್ರುವತಾರೆಯಾಗಿ ಮನ, ಬುದ್ಧಿ, ಆಚರಣೆ, ಸ್ವಭಾವ, ನುಡಿನಡೆಗಳನ್ನು ತಿದ್ದಿ ದೃಢ ನಿಲುಮೆ ಮುಂತಾದವುಗಳನ್ನು ಕೈಹಿಡಿದು ನಡೆಸಿರುವರು. ಅವರು ನಡೆದುಹೋದ ದಾರಿಯಲ್ಲಿ ನಾವುಗಳು ಇಂದು ಸಾಗಬೇಕಾಗಿದೆ. ಅಂಥ ಮಹಾಚಾರ್ಯರ ಸ್ಮರಣೆ ಆಧುನಿಕ ಕಲುಷಿತ ವಾತಾವರಣದಲ್ಲಿ ಕಂಗೆಟ್ಟು ನಿಂತ ಮಾನವನಿಗೆ ಶಾಂತಿ, ಸುಖ, ನೆಮ್ಮದಿಗಳನ್ನು ನೀಡುವಾಗ ಅವರ ಜೀವನದ ಕಥನ ಹಾಗೂ ಅವರ ಸಾಧನಗಳ ಕಡೆ ಸಹೃದಯತೆಯಿಂದ ಕಣ್ಣಾಡಿಸುವ ಮಾನವರಿಗೆ ಇನ್ನೇನು ತಾನೆ ಅಸಾಧ್ಯ?

OUR PRANAMAMS TO

Jagadguru Panchacharyas

Phone : 72143
5/A. MARKET ROAD
BASAVANGUDI
BANGALORE-4

C. G. CHINNAPPA NAIDU
ENGINEERING CONTRACTOR
Prop : LAKSHMI CONSTRUCTION CO.

**Made
out of
the
Finest
Materials**

**MANGALORE
GANESH
BEEDIES**

**Smokers
cannot
afford
to miss
them**

Daily Sales Exceed 4 Crore Beedies

Head Office

MANGALORE GANESH BEEDI WORKS

VINOBA ROAD : : MYSORE-5

Telephone: 20241

Telegrams: AROMA



ಡಾ|| ಜೆ. ರುದ್ರಪ್ಪನವರು

ಪರಮಾತ್ಮನಲ್ಲಿ ಭಕ್ತಿ, ವಿಶ್ವವ್ಯಾಪಾರದಲ್ಲಿ ಶ್ರದ್ಧೆ ಈ ಎರಡರ ಸಮನ್ವಯವೇರ್ಪಟ್ಟಲ್ಲಿ ಅದು ದೈವಜೀವನವಾಗುತ್ತದೆ. ವಿಶ್ವವ್ಯಾಪಾರಗಳೆಲ್ಲಾ ಪರಮಾತ್ಮನಿಂದ ಬೇರೆಯಲ್ಲ. ಇವೆಲ್ಲಾ ಪರಮಾತ್ಮನ ಲೀಲೆ ಎಂಬ ಅನುಸಂಧಾನವು ದಾರ್ಶನಿಕ ತಿಳುವಳಿಕೆಯ ಪರಿಪಕ್ವದ ಸ್ಥಿತಿಯನ್ನು ತೋರಿಸುತ್ತದೆ. ಪರಮಾತ್ಮನ ಸ್ವರೂಪವನ್ನು ಅನುಸಂಧಾನಮಾಡುವಾಗ ಆರಂಭದಲ್ಲಿ ಭೇದಭಾವದ ಅನುಭವವಿರುತ್ತದೆ. ಅದೇ ತತ್ವದ ತಿಳಿವಳಿಕೆಯ ನೆರವಿನಿಂದ ಭೇದಾಭೇದರೂಪವಾಗಿ ಜ್ಞಾನ ವಿಷಯವಾಗುತ್ತಲಿರುತ್ತದೆ. ಸಾಧನಾಭ್ಯಾಸಗಳ ಬಲದಿಂದ ಅಭೇದವ್ಯಾಪ್ತಿಯು ಅನುಭವಕ್ಕೆ ಬರುತ್ತದೆ. ಹೀಗೆ ಜೀವನದಲ್ಲಿ ನೀತಿಯ ನೆಲೆಯಿಂದ ಧರ್ಮಮಾರ್ಗವನ್ನು ಅನುಸರಿಸಬೇಕು. ದಾರ್ಶನಿಕ ತತ್ವಾನುಸಂಧಾನದ ತಿಳಿವಳಿಕೆಯನ್ನು ವಿಶದಪಡಿಸಿಕೊಳ್ಳಬೇಕು. ಸಾಧನಾಭ್ಯಾಸಗಳ ಪರಿಪಾಕದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕು. ಇವುಗಳಿಗೆ ಕೈದೀವಿಗೆಯಂತೆ ಈ ಶೈವದರ್ಶನವು ಶಿವಾಂಶಸಂಭೂತರಾದ ಮಹಾಮಹಿಮರಿಂದ ರಚಿತವಾಗಿದೆ.

ಕಾಶ್ಮೀರಶೈವ - ವೀರಶೈವ ಸೂಕ್ಷ್ಮಪರಿಚಯ

ಡಾ|| ಜೆ. ರುದ್ರಪ್ಪನವರ ಹೆಸರು ಸಮಾಜದಲ್ಲಿ ಪ್ರತಿಷ್ಠಿತವಾದುದು. ಪರಮ ಪಂಡಿತರಾದ ಶ್ರೀಯುತರು ಕಾಶ್ಮೀರ ಶೈವಧರ್ಮದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲರು, ಬರೆಯಬಲ್ಲರು. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದು ಈಗ ನಿವೃತ್ತರಾಗಿ ವಿಶ್ರಾಂತ ಜೀವನದಲ್ಲಿದ್ದರೂ ಸದಾ ಆಧ್ಯಾತ್ಮ ಚಿಂತನೆಯೇ ಇವರ ಪ್ರವೃತ್ತಿಯಾಗಿದೆ. ಶ್ರೀಯುತರ ಪಾಂಡಿತ್ಯಕ್ಕೆ ಮನ್ನಣೆ ನೀಡಿ ಪಂಜಾಬು ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಎಲ್ಲಾ ಶೈವ ಧರ್ಮಗಳಲ್ಲಿಯೂ ಪತಿ, ಪಶು, ಪಾಶ ಎಂಬ ಮೂರು ಪ್ರಧಾನವಾದ ಅಂಶಗಳನ್ನು ನಿರೂಪಿಸಿರುತ್ತಾರೆ. ಈ ಶೈವ ಸಂಪ್ರದಾಯಗಳಲ್ಲಿ ಎಲ್ಲಕ್ಕೂ ಮೂಲ ಕರ್ತೃವಾದ ಪರಶಿವನೇ ಪತಿ, ಬದ್ಧಜೀವನೇ ಪಶು. ಯಾವುದರಿಂದ ಜೀವಾತ್ಮನು ಬದ್ಧನಾಗಿ ಜನ್ಮಾಂತರಗಳನ್ನು ಹೊಂದುತ್ತಾನೆಯೋ ಅದೇ ಪಾಶ. ಈ ಪಾಶವು ಆಣವ, ಮಾಯಾ ಕಾರ್ಮಮಲಗಳೆಂದು ಪರಿಗಣಿಸಲ್ಪಟ್ಟಿವೆ. ಜೀವನು ಶಿವನಿಂದ ತಾನು ಬೇರೆಯಲ್ಲವೆಂದು ತಿಳಿದಾಗ ಪಾಶವು ಮಾಯವಾಗುವುದು. ಮಲ ನಿವೃತ್ತಿಯಿಂದ ಮೋಕ್ಷಪ್ರಾಪ್ತಿ ಎಂಬುದೇ ಈ ಎಲ್ಲ ಶೈವ ಧರ್ಮಗಳ ಗುರಿ.

ಕಾಶ್ಮೀರ ಶಿವಾದ್ವೈತ ಮತವು ಪೂರ್ಣವಾಗಿ ತನ್ನ ದಾರ್ಶನಿಕ ಭಾವನೆಗಳಲ್ಲಿ ಅದ್ವೈತವಾಗಿದೆ. ಇದು ಮುಖ್ಯವಾಗಿ ಆಗಮಗಳನ್ನೇ ಅನುಸರಿಸಿರುವ ಮತ. ಅನೇಕ ಸಾಧಕರ ಸಾಧನೆಗಳಿಂದ ಉಂಟಾದ ಅನುಭವಸಿದ್ಧವಾದ ವಿಷಯಗಳ ಮೇಲೆ ಪ್ರಧಾನವಾಗಿ ಆಧಾರಪಟ್ಟಿರುವುದಾಗಿದೆ. ಈ ಮತವು ಕ್ರಿ.ಶ. 9ನೇ ಶತಮಾನದಿಂದ 12ನೇ ಶತಮಾನದವರೆಗೆ ಅವಿಚ್ಛಿನ್ನವಾಗಿ ಬೆಳೆದು ಬಂದಿತು. ವೀರಶೈವ ಧರ್ಮದವರಾದರೋ 28 ಶಿವಾಗಮಗಳನ್ನೂ ವೇದಗಳನ್ನೂ ಆಧಾರ ಗ್ರಂಥಗಳನ್ನಾಗಿ ಸ್ವೀಕರಿಸಿದ್ದಾರೆ.

ತಾತ್ತ್ವಿಕ ದೃಷ್ಟಿಯಿಂದ ಮುಖ್ಯವಾಗಿ ಆಗಮಗಳನ್ನು ಶಿವದೀಕ್ಷೆ, ಶಿವಪೂಜೆ ಮೊದಲಾದ ವೈದಿಕ ಕರ್ಮಗಳಲ್ಲಿ ವೇದಮಂತ್ರಗಳನ್ನೂ, ಆಗಮೋಕ್ತ ಸಾಧನಾಕ್ರಮಗಳನ್ನೂ ಆಚರಣೆಯಲ್ಲಿಟ್ಟುಕೊಂಡಿದ್ದಾರೆ. ಶಿವಶರಣರ ಉಕ್ತಿಗಳೂ ಇವರಿಗೆ ಮಾನ್ಯವಾಗಿವೆ ಮಾರ್ಗದರ್ಶಕವಾಗಿವೆ.

ಕಾಶ್ಮೀರಶೈವ ಧರ್ಮವನ್ನು ಪ್ರತ್ಯಭಿಜ್ಞಾದರ್ಶನ ಎಂದು ಕರೆಯುವ ವಾಡಿಕೆ ಇದೆ. ಪ್ರತ್ಯಭಿಜ್ಞಾ ಎಂಬ ಪದವು ಕಾಶ್ಮೀರ ಶಿವಾದ್ವೈತ ಶಾಸ್ತ್ರದ ರಹಸ್ಯವನ್ನು ಸೂಚಿಸುತ್ತದೆ. ಪ್ರತ್ಯಭಿಜ್ಞಾ ಅಂದರೆ "ಆ ಶಿವನೇ ನಾನು" ಎಂದು ಮಲಾವೃತನಾದ ಜೀವನು ತನ್ನ ಸಹಜ ಸ್ವರೂಪವನ್ನು ಗುರುತಿಸುವುದು. ಈ ತತ್ತ್ವಶಾಸ್ತ್ರದ ಪ್ರಕಾರ ವಿಶ್ವಕ್ಕೆ ಮೂಲಕಾರಣ ಶಿವನು. ಆತನೊಬ್ಬನು ಸ್ವತಂತ್ರನು. ಸರ್ವಶಕ್ತನು ಮತ್ತು ಅನಂತಶಕ್ತಿಗಳನ್ನೊಳಗೊಂಡಿರುವವನು. ಭೇದಜ್ಞಾನಕ್ಕೆ ಕಾರಣವಾಗಿರುವ ಈ ಪ್ರಪಂಚವೆಲ್ಲಾ ಆತನ ಸ್ವಾತಂತ್ರ ಶಕ್ತಿಯ ವಿಲಾಸ.

ಶಿವನು ತನ್ನ ಲೀಲೆಯಿಂದ ಗ್ರಾಹ್ಯಗ್ರಾಹಕ ಭಾವದಿಂದಿರುವ ವಿಶ್ವವನ್ನು ತನ್ನಲ್ಲಿಯೇ ಪ್ರಕಾಶಪಡಿಸುತ್ತಾನೆ. ಈ ಪ್ರಕಾಶವು ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳಿಂದ ನಡೆಸಲ್ಪಡುತ್ತದೆ. ಮೂವತ್ತಾರು ತತ್ತ್ವರೂಪಿಯಾಗಿ ವಿಶ್ವಾತ್ಮಕನಾಗಿದ್ದಾನೆ. ಪರಾ ಪಶ್ಯಂತಿ ಮಧ್ಯಮಾ ವೈಖರಿ ರೂಪವಾದ ಶಕ್ತ್ಯಾತ್ಮಕನಾಗಿದ್ದಾನೆ. ಪರಶಿವನು ವಿಶ್ವಸೃಷ್ಟಿಯನ್ನು ಮಾಡುವಾಗ ತನ್ನಲ್ಲಿರುವ ಅನಂತ ಶಕ್ತಿಗಳನ್ನು ಪ್ರಸಾರ ಮಾಡುತ್ತಾನೆ. ಆ ಶಕ್ತಿಗಳ ಪ್ರಸಾರವೇ ಈ ವಿಶ್ವ. ಆ ಶಕ್ತಿಗಳಲ್ಲಿ ಜ್ಞಾನಕ್ರಿಯಾ ಶಕ್ತಿಗಳಿರುವಂತೆ ಸ್ಮೃತಿಶಕ್ತಿ ಅಪೋಹನ ಶಕ್ತಿ ಇವೆ. ಆ ಅಪೋಹನ ಶಕ್ತಿಯ ವಿಲಾಸವೇ ಸ್ಥೂಲ ಪ್ರಪಂಚ, ಮತ್ತು ಜೀವಭಾವ. ಅಂದರೆ, ಸರ್ವ ಶಕ್ತನಾದ ಪರಶಿವನು ಜೀವಭಾವವನ್ನೂ ಸ್ಥೂಲ ಪ್ರಪಂಚವನ್ನೂ ತನ್ನ ಶಕ್ತಿ ಸಂಕೋಚದ ಮೂಲಕ—"ಮಾಯಾ ವಿಮೋಹಿನೀ ಶಕ್ತಿ"ಯಿಂದ ಹೊರಹೊಮ್ಮಿಸುತ್ತಾನೆ. ಮರಳಿ ತನ್ನ "ದೃಕ್ರಿಯಾಶಕ್ತಿ"ಗಳ ಆವಿಷ್ಕರಣದಿಂದಲೇ ಸಹಜಾವಸ್ಥೆಯನ್ನು ಪಡೆಯುತ್ತಾನೆ. ಇದು ಪರಶಿವನ ಲೀಲೆ.

ಕಾಶ್ಮೀರ ಶಿವಾದ್ವೈತ ಸಿದ್ಧಾಂತವು ಅನುಭವಭಾವನಾಮಯವಾದುದು. ಇದು ಪ್ರಪಂಚವೆಲ್ಲಾ ಒಂದು ಶಕ್ತಿಯ ವಿಲಾಸವೆಂಬ ಭಾವನೆಯನ್ನು ತಿಳಿಯಪಡಿಸುತ್ತದೆ. ಆ ಶಕ್ತಿಯು ಶಿವಾಭಿನ್ನವೆಂದೂ, ಜಡ ಚೇತನ, ಚಿತ್ತು ಅಚಿತ್ತು, ಬಾಹ್ಯ, ಆಂತರೀಯ ಎಂಬ ಒಂದಕ್ಕೊಂದು ಭಿನ್ನವಾಗಿರುವ ತತ್ತ್ವಗಳಲ್ಲಿ ಐಕ್ಯವನ್ನು ಅಪೂರ್ವವಾದ ರೀತಿಯಲ್ಲಿ ಬೋಧಿಸುತ್ತದೆ. ಇಲ್ಲಿ ಪರಶಿವನೇ ಪರತತ್ತ್ವ. ಪರತತ್ತ್ವವು ಪೂರ್ಣವಾಗಿ ಜೀವಾತ್ಮನ ಸ್ವರೂಪವೂ ಆಗಿದೆ. ಸಾಧನೆಗಳ ಪರಿಣಾಮವಾಗಿ ಜೀವಾತ್ಮ ಪರಮಾತ್ಮರುಗಳ ಐಕ್ಯವು ಸಾಧ್ಯ.

ಆಧ್ಯಾತ್ಮ ತತ್ತ್ವವು ಅನುಭವಕ್ಕೆ ಗೋಚರಿಸುವ ತತ್ತ್ವವು. ಪರಶಿವನೇ ಪರತತ್ತ್ವ. ಪರಶಿವನು ಸರ್ವಸ್ವತಂತ್ರನು. ಸರ್ವಕ್ಕೂ ಕಾರಣನು. ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತವಾಗಿರುವ ಸ್ಥಿತಿಯಲ್ಲಿ ವಿಶ್ವೋತ್ತೀರ್ಣನನಿಸಿಕೊಳ್ಳುತ್ತಾನೆ. ಹಾಗೆಯೇ ಚರಾಚರಾತ್ಮಕ ಪ್ರಪಂಚಕ್ಕೆ ಸರ್ವವಿಧ ಕಾರಣನಾಗಿ ವಿಶ್ವಮಯನಾಗಿದ್ದಾನೆ. ಚಿದಾನಂದ ಘನನಾಗಿ ಪರಿಪೂರ್ಣನಾಗಿರುತ್ತಾನೆ. ತನ್ನ ಶಕ್ತಿಪ್ರಸಾರದಿಂದ ವಿಶ್ವವನ್ನು ಸೃಷ್ಟಿಸುವನು. "ಸ್ವಶಕ್ತಿ ಪ್ರಚಯೋಸ್ಯ ವಿಶ್ವಂ" ಸ್ವೇಚ್ಛಯಾ ಸ್ವಭಿತ್ತಾ ವಿಶ್ವಮುನ್ಮೀಲಯತಿ". ಪರಶಿವನಿಗೆ ಚಿತ್ ಆನಂದ ಇಚ್ಛಾ, ಜ್ಞಾನಕ್ರಿಯಾಶಕ್ತಿಗಳು ನಿತ್ಯವಾಗಿರುತ್ತವೆ. ಪರಶಿವನು ತನ್ನ ಪಂಚ-ಶಕ್ತಿಗಳಿಂದ ಯಾವಾಗಲೂ ಪಂಚ-ಕೃತ್ಯಗಳನ್ನು ಮಾಡುತ್ತಿರುತ್ತಾನೆ. ಪಂಚ-ಕೃತ್ಯಗಳು ಸೃಷ್ಟಿ. ಸ್ಥಿತಿ. ಸಂಹಾರ, ತಿರೋಧಾನ, ಅನುಗ್ರಹ. ಇಲ್ಲಿ ಸೃಷ್ಟಿ ಅಂದರೆ ವಿಶ್ವಸೃಷ್ಟಿ. ಸ್ಥಿತಿ ಅಂದರೆ ಸೃಷ್ಟಿಮಾಡಿದ್ದನ್ನು ಕಾಪಾಡುವುದು, ಸಂಹಾರ ಅಂದರೆ ತನ್ನಲ್ಲಿಯೇ ಲಯಮಾಡಿಕೊಳ್ಳುವುದು. ತಿರೋಧಾನ ಅಂದರೆ ಚಿತ್ತಿನಲ್ಲಿ ಅಖಂಡವಾಗಿ ಶೇಖರಿಸಿದ್ದನ್ನು ಪುನಃ ಭೇದರೂಪವಾಗಿ ಪ್ರಕಾಶಪಡಿಸುವ ಸ್ಥಿತಿಯಲ್ಲಿಟ್ಟಿರುವುದು. ಅನುಗ್ರಹವೆಂದರೆ ಸಂಸ್ಕಾರರೂಪದಲ್ಲಿಲ್ಲದೆ ಚಿತ್ತಿನಲ್ಲಿ ಸಂಪೂರ್ಣವಾಗಿ ಲಯವಾಗುವುದು—ಹೀಗೆ ಐದು ಶಕ್ತಿಗಳಿಂದಲೂ ಐದು ಕೃತ್ಯಗಳಿಂದಲೂ ವಿಶ್ವಾತ್ಮಕನಾಗಿಯೂ ಅನುತ್ತರ ವಿಶ್ವಮಯನಾಗಿಯೂ ಸ್ವತಂತ್ರನಾಗಿಯೂ ಪರಿಪೂರ್ಣನಾಗಿಯೂ ಪರಮಶಿವನಿದ್ದಾನೆ.

> ಇಹ ಖಲು ನಿಖಿಲ ಜಗದಾತ್ಮಾ, ಸರ್ವೋತ್ತೀರ್ಣ ಸರ್ವ
> ಮಯಶ್ಚ, ವಿಕಲ್ಪಾಸಂಕುಚಿತ ಸಂವಿತ್ ಪ್ರಕಾಶರೂಪಃ,
> ಅನವಚ್ಛಿನ್ನ ಚಿದಾನಂದ ವಿಶ್ರಾಂತಃ ಪ್ರಸದವಿರಳ ವಿಚಿತ್ರ
> ಪಂಚವಾಹ ವಾಹ ವಾಹಿನೀ ಮಹೋದಧಿಃ. ನಿರತಿಶಯ
> ಸ್ವಾತಂತ್ರ್ಯ ಸೀಮನಿ ಪ್ರಗಲ್ಭಮಾನಃ ಸರ್ವಶಕ್ತಿ ಖಚಿತಃ
> ಏಕ ಏವ ಅಸ್ತಿ ಸಂವಿದಾತ್ಮಾ ಮಹೇಶ್ವರಃ

> ಚಿದ್ರೂಪಂ ಪರಮ ಲಿಂಗಂ ಶಾಂಕರಂ ಸರ್ವಕಾರಣಂ। ಚಿದ್ರೂಪಂ
> ಹಿ ಪರಂತತ್ತ್ವ ಶಿವಾಖ್ಯಂ ವಿಶ್ವಕಾರಣಂ। ಪರಂ ಬ್ರಹ್ಮ
> ಮಹಾಲಿಂಗಂ ಪ್ರಪಂಚಾತೀತಮವ್ಯಯಂ। ಜ್ಯೋತಿರ್ಲಿಂಗಂ
> ಸದಾಭಾತಿ ಯದ್ಬ್ರಹ್ಮೇತ್ಯಾಹುರಾಗಮಾಃ ॥
>
> ಸಿದ್ಧಾಂತ ಶಿಖಾಮಣಿ

ಶೈವಮತದಲ್ಲಿ ವಿಶಿಷ್ಟವಾದ ಸ್ಥಾನವನ್ನು ಹೊಂದಿರುವ ವೇದಾಂತದ ಒಂದು ಪ್ರಧಾನ ಸಂಪ್ರದಾಯವನ್ನು ವೀರಶೈವ ಅಥವಾ ಶಕ್ತಿವಿಶಿಷ್ಟಾದ್ವೈತವೆಂಬ ಹೆಸರುಗಳಿಂದ ಕರೆಯುತ್ತಾರೆ. ಶಕ್ತಿವಿಶಿಷ್ಟಾದ್ವೈತವೆಂದರೆ ಶಕ್ತಿವಿಶಿಷ್ಟ ಜೀವ ಮತ್ತು ಶಕ್ತಿವಿಶಿಷ್ಟ ಶಿವ ಇವೆರಡರ ಸಾಮರಸ್ಯ. ಚಿದಚಿದಾತ್ಮಕ ಶಕ್ತಿ

ವಿಶಿಷ್ಟನಾದ ಜೀವನು ಮತ್ತು ಸೂಕ್ಷ್ಮಚಿದಚಿದಾತ್ಮಕನಾದ ಶಿವ ಇವರಿಬ್ಬರ ಸಾಮರಸ್ಯವನ್ನೇ ಶಕ್ತಿವಿಶಿಷ್ಟಾದ್ವೈತವೆಂದು ಕರೆಯುವುದು. ಶಕ್ತಿವಿಶಿಷ್ಟನಾದ ಪರಶಿವನಿಂದ ಉತ್ಪನ್ನವಾದ ಚರಾಚರಾತ್ಮಕವಾದ ಜಗತ್ತೆಲ್ಲವೂ ಮಿಥ್ಯೆಯಲ್ಲ, ಸತ್ಯವಾದುದು.

ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚ್ಚರವ್ ।
ತಸ್ಮಾದೇತನ್ನಭಿದ್ಯೇತ ಯಥಾಕುಂಭಾದಿಕಂ ಮೃದಃ
ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೆ
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನಭಿದ್ಯತೇ ॥

ಸಿದ್ಧಾಂತ ಶಿಖಾಮಣಿ

ಜಗತ್ತಿನ ಪ್ರಸಾರವನ್ನು ರೇಣುಕಾಚಾರ್ಯರು ಸಂಕ್ಷಿಪ್ತವಾಗಿ ಬಹು ಸುಂದರವಾಗಿ ತಿಳಿಸಿರುತ್ತಾರೆ.

ಆತ್ಮಶಕ್ತಿವಿಕಾಸೇವ ಶಿವೋವಿಶ್ವಾತ್ಮವಾಸ್ಥಿತಃ ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯಪ್ರಸಾರಣಾತ್ ॥

“ಹಾಗೆಯೋ ಅನಾದ್ಯವಿದ್ಯಾ ಸಂಬಂಧಾತ್ತದುಶೋ ಜೀವ ನಾಮಕಃ” ಎಂದು ಶಿವಜೀವರ ಪಾರಮಾರ್ಥಿಕವಾದ ಭೇದಾಭೇದವನ್ನು ಅಂಗೀಕರಿಸಿರುತ್ತಾರೆ. ಪೂರ್ಣಾಹಂತಾರೂಪ ಪರಮಶಿವ ಏಕಮಾತ್ರವೇ ಪರಮ ತತ್ತ್ವ. ಇವನನ್ನು ಪಾರಿಭಾಷಿಕ ಸಂಜ್ಞೆಯಲ್ಲಿ “ಸ್ಥಲ” ಎಂದು ಕರೆಯುತ್ತಾರೆ.

ಆಲಯಃ ಸರ್ವಭೂತಾನಾಂ ಲೋಕಾನಾಂ ಲೋಕಸಂಪದಾಂ ।
ಯದ್‌ಭವೇತ್ ಪರಮಂ ಬ್ರಹ್ಮ ‘ಸ್ಥಲಂ’ ತತ್ ಪ್ರಾಹುರಕ್ಷರಮ್ ॥

ಶಿವನು ಶಕ್ತಿಯಿಂದಾಗಲಿ ಅಥವಾ ಶಕ್ತಿ ಶಿವನಿಂದಾಗಲಿ ಬೇರೆಯಾಗಿರುವುದಿಲ್ಲ. ಎರಡರಲ್ಲಿಯೂ ಏಕತೆಯಿರುತ್ತದೆ. ಶಕ್ತಿಯ ಕ್ಷೋಭಮಾತ್ರದಿಂದ “ಸ್ಥಲ” (ಪರಮಶಿವ)ದಲ್ಲಿ ಎರಡು ವಿಧವಾದ ರೂಪವುಂಟಾಗುತ್ತದೆ. ಉಪಾಸ್ಯರೂಪ— ಇದಕ್ಕೆ “ಲಿಂಗ” ಎಂದು ಹೆಸರು. ಮತ್ತು ಉಪಾಸಕರೂಪ— ಇದಕ್ಕೆ “ಅಂಗ” ಎಂದು ಹೆಸರು. ಪರಶಿವನ ಎರಡು ರೂಪಗಳಿಗೆ ಸಮಾನವಾಗಿ “ಶಕ್ತಿ”ಯಲ್ಲಿಯೂ ಎರಡು ರೂಪಗಳುಂಟಾಗುತ್ತವೆ. ಪ್ರವೃತ್ತಿಯನ್ನುಂಟುಮಾಡುವ ಶಕ್ತಿಗೆ “ಕಲಾ” ಎಂದು ಹೆಸರು. ನಿವೃತ್ತಿಯನ್ನುಂಟುಮಾಡುವ ಅಂಗದ ಶಕ್ತಿಗೆ “ಭಕ್ತಿ” ಎಂದು ಹೆಸರು. ಕಲಾಶಕ್ತಿಯಿಂದ ಜಗತ್ತು ಪರಶಿವನ ಮೂರ್ತಸ್ವರೂಪವಾಗುತ್ತದೆ. ಭಕ್ತಿಯ ದ್ವಾರಾ ಈ ಜಗತ್ತು ಪರಮಶಿವನೊಡನೆ ಏಕೀಭೂತವಾಗುತ್ತವೆ. ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗ ಎಂಬುದಾಗಿ ಲಿಂಗದಲ್ಲಿ ಮೂರು ವಿಧ. ಇದೇ ರೀತಿ ಅಂಗದಲ್ಲಿ (ಜೀವ)ದಲ್ಲಿಯೂ ಯೋಗಾಂಗ (ಕಾರಣ ರೂಪ ಪ್ರಾಜ್ಞ) ಭೋಗಾಂಗ (ಸೂಕ್ಷ್ಮ ರೂಪ ತೈಜಸ) ಮತ್ತು ತ್ಯಾಗಾಂಗ (ಸ್ಥೂಲ ಶರೀರ ರೂಪ ವಿಶ್ವ) ಎಂದು ಮೂರು ವಿಧ. ಜೀವನು ಭಕ್ತಿಯಿಂದ ಪರಮಶಿವನೊಡನೆ ಏಕಭಾವವನ್ನು ಹೊಂದುವುದೇ ಮುಕ್ತಿ. ಸಂಸಾರ ಮತ್ತು ಜೀವ ಇವು ಶಿವ ರೂಪವಾದುವೇ.

ಜಗತ್ತು ಪರಶಿವಬ್ರಹ್ಮದ ಪರಿಣಾಮ. ಜಗತ್ತು ಸತ್ಯ. ಚಿತ್ ಶಕ್ತಿಯ ಸಂಕೋಚ ರೂಪವಾದ ಚಿತ್ತವಿಶಿಷ್ಟನೇ ಜೀವನು. ಈ ರೀತಿಯಾಗಿ ಜಗತ್ತು ಜೀವತ್ಮ ಇವೆರಡೂ ಒಬ್ಬನೇ—ಪರಶಿವ ಬ್ರಹ್ಮದಿಂದ ಅಭಿವ್ಯಕ್ತವಾದವುಗಳು. ಕಾಶ್ಮೀರ ಶಿವಾದ್ವೈತದವರು ನಿರೂಪಿಸಿರುವ 36 ತತ್ತ್ವಗಳಿಗೂ, ಸಿದ್ಧಾಂತ ಶಿಖಾಮಣಿಯಲ್ಲಿ ಉದಹರಿಸಿರುವ ಶಿವಸ್ತುತಿ, ಶಕ್ತಿಸ್ತುತಿಗಳಲ್ಲಿ ಪ್ರತಿಪಾದಿಸಿರುವ 36 ತತ್ತ್ವಗಳಿಗೂ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಪರತತ್ತ್ವ, ಶಿವಶಕ್ತಿ ಜಗತ್‌ಸೃಷ್ಟಿ, ಜೀವಾತ್ಮನನ್ನು ಆವರಿಸಿರುವ ಮೂರು ಮಲಗಳು, ಷಡಧ್ವಗಳು ಮೊದಲಾದ ದಾರ್ಶನಿಕ ಪ್ರಕ್ರಿಯೆಗಳಲ್ಲಿ ಕಾಶ್ಮೀರ ಶಿವಾದ್ವೈತಕ್ಕೂ ಶಕ್ತಿ ವಿಶಿಷ್ಟಾದ್ವೈತಕ್ಕೂ ಇರುವ ಸಾಮ್ಯವನ್ನು ಕಾಣಬಹುದು. ಕೆಲವು ಪರಿಭಾಷೆಗಳು ಆಯಾ ಕಾಲಕ್ಕನುಸಾರವಾಗಿ ಎಲ್ಲಾ ಮತಗಳಲ್ಲಿಯೂ ಮಾರ್ಪಡುವಂತೆ ಇಲ್ಲಿಯೂ ಮಾರ್ಪಟ್ಟಿವೆ. ಮೂಲಭೂತವಾದ ತತ್ತ್ವಸ್ವರೂಪವನ್ನು ಬದಲಾವಣೆಯಿಲ್ಲದೆ ನಿರೂಪಿಸಿದರೂ ವ್ಯವಹಾರ ಮತ್ತು ಆಚರಣೆಗಳಲ್ಲಿ ಕಾಲಕ್ರಮದಲ್ಲಿ ಬದಲಾವಣೆಯಾಗುತ್ತವೆ. ಇದು ಪ್ರಕೃತಿಯ ಮಹಿಮೆ.

ಎಲ್ಲಾ ಶೈವ ಸಂಪ್ರದಾಯದವರೂ ನಿರೂಪಿಸಿರುವ ಬಂಧ ಸ್ವಭಾವವು ಒಂದೇ ಆಗಿದೆ. ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳ ಸಂಕೋಚಗಳೇ ಮಲಗಳು. ಆಣವ ಮಾಯಾ ಕಾರ್ಮವೆಂಬಿವೇ ಮೂರು ಮಲಗಳು. ಈ ಕೆಳಗಿನ ದೃಷ್ಟಾಂತದಿಂದ ಮಲಗಳ ಆವಿರ್ಭಾವ ಮತ್ತು ಸ್ವಭಾವಗಳನ್ನು ತಿಳಿಯಬಹುದು. ಭತ್ತದ ಪೈರುಗಳು ಬೆಳೆದು ತೆನೆಬಿಡುವಾಗ ಎಳೆ ತೆನೆಯಲ್ಲಿ ಬರೀ ಹಾಲು ಕಂಡುಬರುತ್ತದೆ. ಬಲಿತ ಮೇಲೆ ಅಕ್ಕಿಯಾಗಿಯೂ ಹೊಟ್ಟಿಗೂ ಅಕ್ಕಿಯ ಅಂಶಕ್ಕೂ ಮಧ್ಯೆ ಇರುವುದು ತೌಡಿನ ಮುಸುಕಾಗಿಯೂ ರೂಪನ್ನು ಹೊಂದುತ್ತದೆ. ಇದರಲ್ಲಿ ಒಂದು ದಪ್ಪ ತೌಡು ಮತ್ತು ಇನ್ನೊಂದು ತೆಳುವಾದ ಸೂಕ್ಷ್ಮತೌಡು. ಈ ಆವರಣಗಳು ಬೀಜಕ್ಕೆ ಇಲ್ಲದಿದ್ದರೆ ಮರಳಿ ಇದು ಮೊಳಕೆಗೆ ಬರಲಾರದು. ಇದೇ ರೀತಿಯಾಗಿ ಮಲಾವರಣಗಳು ಜನ್ಮಾಂತರಗಳನ್ನುಂಟು ಮಾಡುತ್ತವೆ. ಬದ್ಧಾತ್ಮನಿಗೆ ಈ ಮೂರು ಮಲಗಳು ಪರಿವೇಷ್ಟಿತವಾಗಿರುತ್ತವೆ. ಇವಿಲ್ಲದಿದ್ದರೆ ಜೀವಭಾವವಿಲ್ಲ. ಜನನ ಮರಣಗಳಿಲ್ಲ. ಜನ್ಮಾಂತರಗಳಿಲ್ಲ. ಎಲ್ಲಾ ಶೈವ ಸಂಪ್ರದಾಯದವರು ನಿರೂಪಿಸಿರುವ ಬಂಧ ಸ್ವಭಾವವು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗಿದೆ. ಶಿವತ್ವವು ಜೀವನಲ್ಲಿ ಸಿದ್ಧವಾಗಿದ್ದರೂ ಅವ್ಯಕ್ತವಾಗಿದೆ. ಇದಕ್ಕೆ ಕಾರಣ ಶಕ್ತಿಸಂಕೋಚರೂಪವಾದ ಮಲಗಳೇ ಆಗಿರುತ್ತವೆ.

ಕಾಶ್ಮೀರ ಶೈವರು ವ್ಯಕ್ತಿಯ ಪರಿಪಾಕಕ್ಕನುಸಾರವಾಗಿ ಶಾಂಭವೋಪಾಯ ಶಾಕ್ತೋಪಾಯ ಆಣವೋಪಾಯಗಳನ್ನು ಸೂಚಿಸಿರುತ್ತಾರೆ. ವೀರಶೈವರಲ್ಲಾದರೋ ಅಷ್ಟಾವರಣ ಪಂಚಾಚಾರ ಷಟ್ಸ್ಥಲ ಲಿಂಗಾಂಗ ಸಾಮರಸ್ಯಗಳ ಅನುಷ್ಠಾನದಿಂದ ಶಿವತ್ವವನ್ನು ಹೊಂದಬೇಕೆಂಬುದೇ ಆಗಿದೆ. ಶಿವನ ಸ್ವಪ್ರಕಾಶರೂಪವಾದ ಶಕ್ತಿಯೇ ಅಂಗಗತವಾಗಿ ಭಕ್ತಿಯೆನಿಸಿಕೊಳ್ಳುವುದು. ಈ ಸಂಪ್ರದಾಯದಲ್ಲಿ ಅನುಸರಿಸಿರುವ ಭಕ್ತಿಯೋಗದಲ್ಲಿ ಜ್ಞಾನ ಕ್ರಿಯೆಗಳೆರಡೂ ಸಮಪ್ರಧಾನವಾಗಿರುತ್ತವೆ. – ಇದನ್ನೇ ಶಿವಯೋಗವೆನ್ನುವರು.

"ಶಿವದೃಷ್ಟಿ" ಎಂಬ ಗ್ರಂಥದಲ್ಲಿ ಸೋಮಾನಂದರು "ಸರ್ವಂ ಶಿವಮಯಂ" ಎಂಬ ಭಾವನೆಯನ್ನು ನಿರಂತರವೂ ಅನುಸಂಧಾನ ಮಾಡಬೇಕೆಂದು ಈ ರೀತಿಯಾಗಿ ಸೂಚಿಸಿರುತ್ತಾರೆ.

> ಶಿವೋಽಸ್ಮಿಸಾಧನಾವಿಷ್ಟಃ ಶಿವೋಽಹಂ ಯಾಜಕೋಽಪ್ಯಹಂ
> ಶಿವಂಯಾಮಿ ಶಿವೋಯಾಮಿ ಶಿವೇನಶಿವಸಾಧನಃ
> ಭಿನ್ನೋಽಪ್ಯಭಿನ್ನಏವಾಸ್ಮಿ ಇತ್ಥಂ ವಿಚೇಷ್ಟನಂ
> ಶಿವೋಭೋಕ್ತಾ ಶಿವೋಭೋಜ್ಯಂ ಶಿವೇಷು ಶಿವಸಾಧನಃ
> ಶಿವಃ ಕರ್ತಾ ಶಿವಃ ಕರ್ಮಾ ಶಿವೋಽಸ್ಮಿ ಕರಣಾತ್ಮಕಃ
> ಲಿಂಗಾದಿಕೆ ಪೂಜಿತೋಽಸ್ಮಿ ಸದಾ ಪೂಜೇತಿ ವಾಸ್ಥಿತಾ।
> ಪೂಜಕಃ ಪೂಜಸು ಪೂಜ್ಯಮಿತಿ ಸರ್ವಂ ಶಿವಃ ಸ್ಥಿತಃ
> ಸುಖೆ ದುಃಖೆ ವಿಮೋಹೇಚ ಸ್ಥಿತೋಽಹಂ ಪರಮಃ ಶಿವಃ
> ಪ್ರತಿಪಾದಿತಮೆತಾವತ್ ಸರ್ವಮೇವ ಶಿವಾತ್ಮಕಂ।

ಯಾವ ಸ್ಥಿತಿಯನ್ನು ಅಕ್ಷರಗಳಿಂದ ಉಚ್ಚರಿಸಲು ಸಾಧ್ಯವೋ, ಯಾವುದನ್ನು ಇಚ್ಛಾಶಕ್ತಿಯಿಂದ ಅನುಭವಿಸಬಹುದೋ ಆ ಸ್ಥಿತಿಯನ್ನು ಯಾವನು ಮುಟ್ಟಿರುವನೋ ಆತನು ಅನುಭವಿ. "ಅನುಸ್ಮೃತ್ಯಭವತೀತಿ ಅನುಭವಃ" ಇದು ಚಿತ್ಸ್ವರೂಪ. ಇದನ್ನು ಅನುಸರಿಸಿ ಉಂಟಾಗುತ್ತಿರುವುದು ಚಿದನುಭವ, ಈ ಸ್ಥಿತಿಯನ್ನು ಪಡೆದಿರುವವನು ಅನುಭವಿ.

* * *

With the best compliments of

Our Salutations to
Jagadguru
Panchapeethadhipathis

★

Phone : 26779

D. SHANTIRAJAIAH SONS
MANDY MERCHANTS
1/2. III MAIN ROAD, NEW THARAGUPET,
BANGALORE-2.



“ಜ್ಯೋತಿ-ರ್ವಿದ್ಯಾಲಂಕಾರ” “ಸಾಹಿತ್ಯರತ್ನ”
ಪಂಡಿತ ಷಣ್ಮುಖಯ್ಯ ಅಕ್ಕೂರಮಠ, ಎಂ.ಎ. ಅವರು
“ಜೀವಗಂಗೋತ್ರಿ” ಶಂಕರಪುರಂ, ಬೆಂಗಳೂರು-೪

ಭಾರತೀಯ ಸಾಹಿತ್ಯೇತಿಹಾಸವನ್ನವಲೋಕಿಸಿದಾಗ, “ರಾಜ ಭೋಗದಲ್ಲಿ ಯೋಗ ಬೀಜ” ಎನ್ನುವ ಮಾತಿಗೆ ಅಗ್ನಿಸಾಕ್ಷಿಗಳಾಗಿ ಕೆಲವೇ ವ್ಯಕ್ತಿಗಳನ್ನು ಉದಾಹರಿಸಬಹುದು. ಒಬ್ಬ ಬುದ್ಧ; ಇನ್ನೊಬ್ಬ ಅಶೋಕ; ಮತ್ತೊಬ್ಬ ಬಾಹುಬಲಿ, ಇನ್ನೊಬ್ಬ ಭರ್ತೃಹರಿ; ಮಗದೊಬ್ಬ ನಿಜಗುಣಶಿವಯೋಗಿ. ತುಂಡು ನೆಲಕ್ಕೆ ರಾಜರಾಗಿದ್ದವರು ಕಾಕತಾಳನ್ಯಾಯದಂತೆ. ಜೀವನದಲ್ಲುಂಟಾದ ಆಕಸ್ಮಿಕ ಘಟನೆಗಳಿಂದ ಜೀವನದಲ್ಲಿ ಪರಿವರ್ತನೆ ಹೊಂದಿ ಪರಿವ್ರಾಜಕರಾಗಿ, ಭೌತಿಕ ಸಂಪತ್ತು ಭೋಗ ಭಾಗ್ಯಗಳನ್ನು ತೃಣೀಕರಿಸಿ ಅಧ್ಯಾತ್ಮ ಲೋಕದ ಅನಭಿಷಕ್ತ ಸಾಮ್ರಾಟರಾಗಿ ಮಾನವನ ಉತ್ಕ್ರಾಂತಿ ಹಾಗೂ ಅವನ ಕಲ್ಯಾಣದತ್ತ ಧ್ಯೇಯವನ್ನಿರಿಸಿ ದೇಹ ಸವೆಸಿದ ಮಹಾನುಭಾವರಾಗಿದ್ದಾರೆ. ರಾಜ್ಯಗಳೂ, ರಾಷ್ಟ್ರಗಳೂ ಅನಂತ ಕಾಲಗರ್ಭದಲ್ಲಿ ಅಡಗಿ ವಿನಾಶವಾಗಿದ್ದರೂ ಈ ವ್ಯಕ್ತಿಗಳ ಹೆಸರು ಹಾಗೂ ಅವರು ಜಗತ್ತಿಗೆ ಸಾರಿದ ಸಂದೇಶ ಅವಿನಾಶಿಯಾಗಿವೆ ಮತ್ತು ಚಿರಸ್ಮರಣೀಯವಾಗಿವೆ.

ಪ್ರಸ್ತುತ ಲೇಖನ ಇಂಥ ಮಹಾನುಭಾವರಲ್ಲೊಬ್ಬರಾದ ಶ್ರೀಮನ್ನಿಜಗುಣ ಶಿವಯೋಗಿಗಳನ್ನು ಕುರಿತದ್ದಾಗಿದೆ.

ಕರ್ನಾಟಕದ ಕವಿಗುರು ಶ್ರೀ ನಿಜಗುಣ ಶಿವಯೋಗಿಗಳು

★

ಶ್ರೀ ಷಣ್ಮುಖಯ್ಯ ಅಕ್ಕೂರ ಮಠ ಅವರ ಪ್ರತಿಭೆಗೆ ಪ್ರತ್ಯಕ್ಷ ಸಾಕ್ಷಿ ಈ ಲೇಖನ. ಬಿ.ಎ. ಪದವೀಧರರಾದ ಶ್ರೀಯುತರು ಕನ್ನಡವಲ್ಲದೆ, ಸಂಸ್ಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಅಪಾರ ಪ್ರೌಢಿಮೆಯನ್ನು ಗಳಿಸಿಕೊಂಡಿದ್ದಾರೆ. ಅನೇಕ ಲೇಖನಗಳನ್ನು ಬರೆದಿರುವ ಇವರ ಲೇಖನಿ ಸಂಸ್ಕಾರ ಪೂರಿತವಾಗಿದೆ. ಶ್ರೀಯುತರು ಅಧ್ಯಾಪಕ ವೃತ್ತಿಯನ್ನು ಕೈಗೊಂಡಿದ್ದಾರೆ.

★

ಯಾವುದಾದರೊಂದು ಜನಾಂಗದ ಜೀವನ ಮಟ್ಟವನ್ನು ನಿರ್ಣಯಿಸುವ ಯೋಗ್ಯ ನಿಕಷವೆಂದರೆ ಸಾಹಿತ್ಯ. ಅಂತೆಯೇ ಜನಾಂಗದ ಪ್ರಗತಿ, ವಿಗತಿ, ಅಪ್ರಗತಿ, ಅಧೋಗತಿಗಳನ್ನು ನಿರೀಕ್ಷಿಸಿ ಪರೀಕ್ಷಿಸಲು ಆಯಾ ಜನಾಂಗದ ಸಾಹಿತ್ಯವನ್ನೇ ಪರಿಶೀಲಿಸಬೇಕಾಗುವುದು. ಸಂಸ್ಕೃತಿಶೀಲವಾದ ಸಾಹಿತ್ಯವು ಸುಸಂಸ್ಕೃತ ಜನಾಂಗದ ಸ್ಪಷ್ಟ ಕುರುಹು. ಕನ್ನಡ ಸಾಹಿತ್ಯಾಕಾಶದಲ್ಲಿ ಅನೇಕ ಮಹಾಪುರುಷರ ಅಮರ ಕೃತಿಗಳು ನಕ್ಷತ್ರಗಳೋಪಾದಿಯಲ್ಲಿ ಜ್ಞಾನ ಪ್ರಭೆಯಿಂದ ಬೆಳಗುತ್ತಲಿವೆ. ಅವುಗಳ ಮಧ್ಯದಲ್ಲಿ ನಿಜಗುಣರ ಕೃತಿಗಳು ಧ್ರುವ ತಾರೆಯಂತೆ ತಮ್ಮದೇ ವೈಶಿಷ್ಟ್ಯವನ್ನೂ ವೈವಿಧ್ಯವನ್ನೂ ಪಡೆದಿವೆ.

ಕನ್ನಡದಲ್ಲಿ ಮೊದಲನೆಯ ಯೋಗಗ್ರಂಥವನ್ನಿತ್ತ, ಕನ್ನಡದಲ್ಲಿ ಮೊದಲನೆಯ ವಿಶ್ವಕೋಶವನ್ನಿತ್ತ, ಕನ್ನಡದಲ್ಲಿ ಮೊದಲನೆಯ ಹಾಡುಗಬ್ಬವನ್ನಿತ್ತ ಹಾಗೂ ಕನ್ನಡದಲ್ಲಿ ವೇದಾಂತ ಗ್ರಂಥಗಳ ರಚನೆಗೆ ಮೊದಲು ಶ್ರೀಕಾರ ಹಾಕಿದ ಆಧ್ಯಾತ್ಮಲೋಕದ ಅನಭಿಷಿಕ್ತ ಸಾಮ್ರಾಟ್ ಕರ್ನಾಟಕ ಕವಿಗುರು ನಿಜಗುಣ ಶಿವಯೋಗಿಗಳ ಜೀವನವು ಅಸದೃಶವಾಗಿದೆ. ಅವರ ವ್ಯಕ್ತಿತ್ವ ಅನ್ಯಾದೃಶವಾಗಿದೆ:

ಕರ್ನಾಟಕದ ಈ ಆಧ್ಯಾತ್ಮ ಕೋಗಿಲೆ" ಮನುಜಕುಲಜನನದ ಲಾಭವಾವುದು? ಎಂದು ಪ್ರಶ್ನಿಸಿ "ಅನಾರೆಂದರಿವುದು" ಎಂದು ಉತ್ತರವಿತ್ತಿದೆ. ಸಮಸ್ತ ಮಾನವ ಕೋಟಿಯ ಅತಿ ಗಂಭೀರ ಹಾಗೂ ಜಟಿಲ ಪ್ರಶ್ನೆಗೆ ಸಮಸ್ತ ವೇದೋಪನಿಷತ್ತುಗಳ ಸಾರ ಸಂಗ್ರಹವನ್ನೇ ಸೂತ್ರ ರೂಪದಲ್ಲಿ ಸಾಕಾರಗೊಳಿಸಿ ಕನ್ನಡದ ಆಡುನುಡಿಯಲ್ಲಿ ನಿಜಗುಣರು ನಿರೂಪಿಸಿದ್ದಾರೆ.

ಒಂದು ಕಾಲದಲ್ಲಿ ಮುಮುಕ್ಷವು ಸಂಸ್ಕೃತವನ್ನೇ ಅವಲಂಬಿಸಬೇಕಾಗಿದ್ದಾಗ, ಶರಣರು ತತ್ಸಮಾನವಾದ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಿದರೆ ನಿಜಗುಣರು ಸಂಸ್ಕೃತದ ಷಡ್ದರ್ಶನಗಳ ಸಾರ ಸಂಪತ್ತನ್ನು ನೇರವಾಗಿ ಕನ್ನಡಕ್ಕಿಳಿಸಿ ಜನವಾಣಿಯನ್ನು ದೇವವಾಣಿ ಮಟ್ಟಕ್ಕೇರಿಸಿದ್ದಾರೆ. ಅವರು ತಮ್ಮ ಕಾವ್ಯ ಪ್ರತಿಭೆ, ತೇಜೋಮಯ ಅನುಭವ, ಪ್ರಗಲ್ಭ ಪಾಂಡಿತ್ಯ ಅಪಾರ ಜೀವನಾನುಭವ ಹಾಗೂ ಸಮದರ್ಶನ ಇವುಗಳ ಮೂಲಕ ಕನ್ನಡ ವಾಙ್ಮಯದಲ್ಲಿ ಆಚಾರ್ಯ ಪದವಿಯನ್ನು ಅಲಂಕರಿಸಿದ್ದಾರೆ.

ಸದ್ಯಃ ಉಪಲಬ್ಧವಿರುವ ಇವರ ಗ್ರಂಥಗಳೆಂದರೆ

1) ಅರಮತ್ತು ಮೂವರ ತ್ರಿವಿಧಿ (2) ಅನುಭವ ಸಾರ (3) ಪರಮಾನುಭವಬೋಧೆ (4) ಪರಮಾರ್ಥಗೀತೆ (5) ಕೈವಲ್ಯ ಪದ್ಧತಿ— (6) ಪಾರಮಾರ್ಥ ಪ್ರಕಾಶಿಕೆ (7) ವಿವೇಕ ಚಿಂತಾಮಣಿ. ಸುಸ್ಕೃತದಲ್ಲಿ ಬರೆದಿರುವ ದರ್ಶನಸಾರಂ, ಆತ್ಮತರ್ಕ ಚಿಂತಾಮಣಿ, ಈ ಎರಡು ಗ್ರಂಥಗಳು ಉಪಲಬ್ಧವಿಲ್ಲ. ಹೀಗೆ ಅವರ ಕೃತಿಗಳಿಂದ ಜನಜೀವನಕ್ಕೆ ಅಮೋಘವಾದ ಜ್ಞಾನದ ಕೊಡುಗೆಯಾಗಿದೆ.

ನಿಜಗುಣ ಶಿವಯೋಗಿಗಳನ್ನು ಹಾಗೂ ಅವರ ವ್ಯಕ್ತಿತ್ವದ ಬಹುಮುಖ ಪ್ರತಿಭೆಯ ಪರಿಣತೆಯನ್ನು ಕುರಿತು ನಾಡಿನ ಗಣ್ಯ ವಿದ್ವಾಂಸರ ಅಭಿಪ್ರಾಯಗಳು ಇಂತಿವೆ. "ನಿಜಗುಣ ಶಿವಯೋಗಿ ಕನ್ನಡ ನಾಡಿನ ಅತ್ಯದ್ಭುತ ವ್ಯಕ್ತಿಗಳಲ್ಲಿ ಒಬ್ಬನು. ಅಗಾಧ ವಿದ್ವತ್ತೆಯಿಂದಲೂ, ದೀರ್ಘ ತಪಶ್ಚರ್ಯದಿಂದಲೂ ಜ್ಞಾನದ ತುತ್ತ ತುದಿಯನ್ನೇರಿ ಕೆಳಗಿಳಿದು ಬಂದು ತರತರದ ಗದ್ಯ ಪದ್ಯಗಳಲ್ಲಿ ಕನ್ನಡ ಜನಕ್ಕೆ ತನ್ನ ಅರಿವನ್ನು ಹಂಚಿಕೊಟ್ಟಿದ್ದಾನೆ" ಎಂದಿದ್ದಾರೆ. ಡಾ॥. ರಂ. ಶ್ರೀ ಮುಗುಳಿಯವರು ದಿ॥ ಡಾ. ಅನ. ಕೃಷ್ಣರಾಯರು ಕೂಡ "ನಿಜಗುಣಶಿವಯೋಗಿಯು ಒಬ್ಬ ಕವಿಯೆಂದು ಹೇಳುವುದಕ್ಕಿಂತ ಒಬ್ಬ ಸೀಮಾಪುರುಷನೆಂದು ಹೇಳಬೇಕಾಗುತ್ತದೆ. ಆತನ ಸಾಹಿತ್ಯ ಸೃಷ್ಟಿ ವಿಪುಲವಾದರೂ, ಕನ್ನಡ ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ್ದೂ ಆಗಿದೆ. ನಿಜಗುಣ ಶಿವಯೋಗಿ ಕಾವ್ಯದ ತೆರೆಯ ಮೇಲೆ ನಿಂತು ಆಧ್ಯಾತ್ಮದ ಮುಗಿಲನ್ನು ಮುಟ್ಟುತ್ತಾನೆ. ಭಾರತೀಯ ತತ್ವ ಶಾಸ್ತ್ರವನ್ನಿವನು ಕನ್ನಡಿಸಿರುವ ರೀತಿ, ಇವನ ಪ್ರಗಲ್ಭ ಪಾಂಡಿತ್ಯ ಆಳವಾದ ಅನುಭವ ವಿಶಾಲ ದೃಷ್ಟಿಗಳ ಪ್ರತೀಕವಾಗಿದೆ. ಇವನಿಗೆ ವೇದ–ಆಗಮ, ಉಪನಿಷತ್ತು ಸ್ಮೃತಿಗಳಲ್ಲಿ ಪಾಂಡಿತ್ಯವಲ್ಲದೆ, ಪುರಾಣ, ಇತಿಹಾಸ, ಸಂಗೀತ ವ್ಯಾಕರಣ, ತರ್ಕ, ಜ್ಯೋತಿಷ್ಯ, ಲಕ್ಷಣ ಶಾಸ್ತ್ರ–ಯೋಗಗಳಲ್ಲಿಯೂ ನಿಷ್ಣಾತತೆ ಇತ್ತು. ಅಧಿಕ ವಿದ್ಯಾ ಸಂಪನ್ನ, ಸುಜ್ಞಾನ ಚಕ್ರವರ್ತಿ ಅನುಪಮಾನಂದಾಬ್ಧಿ ಇತ್ಯಾದಿ ಬಿರುದುಗಳು ನಿಜಗುಣರನ್ನು ಆಶ್ರಯಿಸಿ ಗೌರವ ಪಡೆದವೆಂದರೆ ಉತ್ಪ್ರೇಕ್ಷೆಯಾಗಲಾರದೆಂದು ಅಭಿಪ್ರಾಯ ಪಟ್ಟಿದ್ದಾರೆ. ಪಾಶ್ಚಾತ್ಯ ವಿದ್ವಾಂಸರಾದ ಇ.ಪಿ. ರೈಸರು ನಿಜಗುಣರನ್ನು ಕುರಿತು ಕೆಳಗಿನಂತೆ ಅಭಿಪ್ರಾಯ ಪಟ್ಟಿದ್ದಾರೆ. He was a great Scholar Prolific writer ಎಂದೂ, ಅವರು ಮುಂದುವರಿದು ಅವರ ವಿವೇಕ ಚಿಂತಾಮಣಿಯ ಬಗ್ಗೆ ಹೀಗೆ ಅಭಿಪ್ರಾಯ ಪಡುತ್ತಾರೆ.

“But his best known work is the vivekachintamani a very useful encyclopcadia of Sanskrit terms and Veerasaiva lore'' ಎಂದು ಅವರ ಕೃತಿಯ ಘನತೆಯನ್ನು ಸಾರಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಕೆಲವೇ ಕೃತಿಗಳು ಸೀಮೋಲ್ಲಂಘನಮಾಡಿವೆ. ಅವುಗಳಲ್ಲಿ ನಿಜಗುಣರ ವಿವೇಕ ಚಿಂತಾಮಣಿ ಒಂದಾಗಿದೆ. ಇದು ತಮಿಳು, ಸಂಸ್ಕೃತ, ಮರಾಠಿ, ಭಾಷೆಗಳಿಗೆ ಅನುವಾದಿಸಲ್ಪಟ್ಟಿದೆ. ಎಂದ ಮೇಲೆ ಇದರ ಶ್ರೇಷ್ಠತೆಗೆ ಬೇರೆ ನಿದರ್ಶನ ಅನಾವಶ್ಯಕ.

ಇಂತಹ ಮಹಾನ್ ತತ್ವಜ್ಞಾನಿ ಹಾಗೂ ದಾರ್ಶನಿಕ ನಿಜಗುಣ ಶಿವಯೋಗಿಗಳ ಮಹತ್ ಕೃತಿಗಳನ್ನು ಕಂಡಾಗ ಸಹಜವಾಗಿ ನಮ್ಮ ಗಮನ ನಿಜಗುಣರ ವ್ಯಕ್ತಿ ಜೀವನ ಚರಿತ್ರೆಯ ಕಡೆಗೆ ಹರಿಯುತ್ತದೆ. ಸಹಜ ವೈರಾಗ್ಯಶೀಲನೂ, ಆಧ್ಯಾತ್ಮ ರಸ ಋಷಿಯೂ ಆದ ಈತನಿಗೆ ಐಹಿಕವಾದ ಕೀರ್ತಿ ಕಾಮನೆಗಳ ಬಯಕೆ ಇಲ್ಲದುದರಿಂದಲೋ ಏನೋ ತನ್ನ ಕೃತಿಗಳಲ್ಲಿ ಎಲ್ಲೂ ತನ್ನ ನಿಜ ಜೀವನದ ಬಗ್ಗೆ ಹೇಳಿ ಕೊಂಡಿಲ್ಲ. ಆದರೂ ಕೆಲವು ಜನ ಕನ್ನಡ ವಿದ್ವಾಂಸರು ನಿಜಗುಣರ ಗ್ರಂಥಗಳಲ್ಲಿ ಕಾಣುವ ವಚನಲತೆಗಳಿಂದ ಅವರ ಜೀವನ ಚರಿತ್ರೆಯ ಹಂದರವನ್ನು ನಿರ್ಮಿಸಿದ್ದಾರೆ. ಮತ್ತು ನಿಜಗುಣರು ಬದುಕಿ ಬಾಳಿದ ಕಾಲವನ್ನು ಬಹುಮತವಾಗಿ ಹದಿನೈದನೆಯ ಶತಮಾನವೆಂದು ಅಭಿಪ್ರಾಯಪಟ್ಟಿದ್ದಾರೆ.

ನಿಜಗುಣರ ಜೀವನವನ್ನು ಕುರಿತು ನಿರ್ದಿಷ್ಟವಾದ ಚಾರಿತ್ರಿಕ ಅಂಶಗಳು ನಮಗೆ ಸಿಕ್ಕುತ್ತಿಲ್ಲ. ಆದರೂ, ಇವರು ಮೊದಲು ಕೊಳ್ಳೇಗಾಲದ ಸುತ್ತು ಮುತ್ತಲಿನ ಪ್ರಾಂತಕ್ಕೆ ರಾಜರಾಗಿದ್ದರು, ಜಂಗಮ ದಾಸೋಹಿಗಳಾಗಿದ್ದರು. ಆದರೆ ಇವರ ಹೆಂಡತಿ ಇವರ ಸಾಧನೆಗೆ ಅನುಕೂಲಕರಳಾಗಿರಲಿಲ್ಲ. ಇದನ್ನರಿತು ನಿಜಗುಣರು ಸಂಸಾರವನ್ನೇ ತ್ಯಜಿಸಿ ವೈರಾಗ್ಯಸಂಪನ್ನರಾದರು — ಇದಿಷ್ಟು ಪರಂಪರೆಯಿಂದ ಬಂದ ಕಥೆ. ಚಿಲಕವಾಡಿಯ ಬಳಿ ಇರುವ ಶಂಭುಲಿಂಗನ ಬೆಟ್ಟವೇ ಅವರು ತಪಸು ಮಾಡುತ್ತಿದ್ದ ಸ್ಥಳವೆಂದು ತೋರುತ್ತದಲ್ಲದೆ ತನ್ನ

ಎಲ್ಲ ಕೃತಿಗಳನ್ನೂ ಶಂಭುಲಿಂಗನ ಸಾನ್ನಿಧ್ಯದಲ್ಲಿಯೇ ರಚಿಸಿದವೆಂಬ ಐತಿಹ್ಯ ಈಗಲೂ ಉಳಿದುಕೊಂಡು ಬಂದಿದೆ. ಕನ್ನಡದ ಅನುಭವಿಗಳೂ, ವರಕವಿಗಳೂ ಆದ ಮುಪ್ಪಿನ ಷಡಕ್ಷರಿಗಳು ಇವರ ಸಮ ಸಮಕಾಲೀನರೆಂದು ವಿದ್ವಾಂಸರ ಅಭಿಪ್ರಾಯ. ನಿಜಗುಣ ಪ್ರಭುಗಳಿಗೆ ಹೇಗೆ ಇಂತಹ ಶಕ್ತಿ ಆವಿರ್ಭಾವವಾಯಿತು? "ಆಡು ಮುಟ್ಟದ ಗಿಡವಿಲ್ಲ" ಎಂಬಂತೆ ನಿಜಗುಣರು ಮುಟ್ಟದ ಶಾಸ್ತ್ರವಿಲ್ಲ ಎಂದು ಹೇಳಬೇಕಾಗುತ್ತದೆ. ಅವರಿಗೆ ಎಲ್ಲ ಶಾಸ್ತ್ರಗಳಲ್ಲೂ ಪರಿಣತಿ ಇತ್ತು. ವೇದೋಪನಿಷತ್ತುಗಳು ಕರತಲಾಮಲಕವಾಗಿದ್ದವು ಎನ್ನುವುದು ಅವರ ಕೃತಿಗಳಿಂದಲೇ ಸ್ಪಷ್ಟವಾಗುತ್ತದೆ. ಆ ಅದ್ಭುತ ಮೇಧಾಶಕ್ತಿ, ಆ ಆಧ್ಯಾತ್ಮಿಕ ಓಜಸ್ಸು, ನಿರ್ಜರೋಪಮ ಕಾವ್ಯಶೈಲಿ, ಸಾಗರದಂತೆ ಗಂಭೀರವಾದ ಶಾಸ್ತ್ರ ನಿರೂಪಣೆ, ಯೋಗ ದೃಷ್ಟಿ ಹಾಗೂ ನಿಶ್ಚಲ ಆತ್ಮಾನುಭವ ಇವೆಲ್ಲ ಆತನಿಗೆ ದೊರಕೊಂಡುದು ಹೇಗೆ? ಎಂಬುದನ್ನು ವಿಚಾರಿಸಿದಾಗ ನಿಜಗುಣರಲ್ಲಿ ಬೀಜರೂಪವಾಗಿ ಈ ಶಕ್ತಿ ಈ ಮಹತ್ತು ಇತ್ತೆಂದು ಒಪ್ಪಿಕೊಂಡರೂ ಅದು ವ್ಯಕ್ತಿಯ ಸಾಧನೆಯಿಲ್ಲದೆ ಹಾಗೂ ಗುರು ಶಂಭುಲಿಂಗನ ಕೃಪೆಯೂ ಇಲ್ಲದೆ ವ್ಯಕ್ತವಾಗಲಾರದು ಎಂಬುದು ನಿಜಗುಣರ ಕೃತಿಗಳಿಂದ ತಿಳಿದು ಬರುತ್ತದೆ.

ಜನ್ಮತಃ ವೀರಶೈವರಾದ ನಿಜಗುಣ ಶಿವಯೋಗಿಗಳು ತಾತ್ವಿಕವಾಗಿ ಸರ್ವದರ್ಶನ ಸಮನ್ವಯಾಚಾರ್ಯರಾಗಿ ಮಾನವಧರ್ಮವನ್ನು ವಿಶ್ವಧರ್ಮದೆಡೆಗೆ ಕೊಂಡೊಯ್ದಿದ್ದಾರೆ.

ಇನ್ನು ಇವರ ಕೃತಿಗಳಲ್ಲಿ ಕಂಡು ಬರುವ ಉತ್ತಮ ಪದ್ಯಭಾಗಗಳನ್ನಾಯ್ದು ಮಾನವಕೋಟಿಗೆ ನಿಜಗುಣರ ಸಂದೇಶವನ್ನು ಹೀಗೆ ಸ್ಪಷ್ಟಪಡಿಸಬಹುದು.

ಉಪನಿಷತ್ತಿನ ಮೈತ್ರೇಯಿಗೆ ಸಮಾನಳಾದ ಪತ್ನಿಯನ್ನು ಕೈಹಿಡಿಯಬೇಕೆಂದು ಬಯಸಿದ ನಿಜಗುಣರಿಗೆ ಚಾರಿತ್ರ್ಯಹೀನಳಾದ ಸಂಗಾತಿ ಜೀವನದಲ್ಲಿ ದೊರಕಿದ್ದರಿಂದ ಅವರು ಜುಗುಪ್ಸೆಗೊಂಡು ಅರಮನೆಯ ಐಸಿರಿಯನ್ನು ತೃಣೀಕರಿಸಿ ತಮ್ಮ ರಾಜಧಾನಿಗೆ ಸಮೀಪವರ್ತಿಯಾದ ಶಂಭುಲಿಂಗನ ಆವಾಸಸ್ಥಾನಕ್ಕೆ ಬಂದು ಕಾಲಕಳೆದಿರಬೇಕು: ಅಲ್ಲಿ—ಹೆಂಡತಿಯೊಂದಿಗೆ ಹಿಂದೆ ಕಳೆದ ವಾಸನಾ ಸುಖದ ಅರಿವು ಅವರ ಮನಃ ಪಟಲದ ಮೇಲೆ ಮರುಕಳಿಸಿದಾಗ ವಿಷಯ ಸುಖ ದೂರವಾದ ನಿಜಗುಣರು ತಮ್ಮ ಇಷ್ಟದೈವ ಶಂಭುಲಿಂಗನನ್ನು ಕುರಿತು ತನಗೆ ವೈರಾಗ್ಯ ಕೊಡು ಎಂದು ಬೇಡುವ ದೃಶ್ಯ ಮನೋಜ್ಞವಾಗಿದೆ.

—"ಮುಂದಿದ್ದು ನೋಡುವ ನೋಟದ ಮುಗುಳ್ನಗೆಯ ಸರಸ ದಿನಿಗೆಲೆಯ ನುಡಿಯ, ಸನ್ನೆವೆರಸಿ ತೋರುವ ಭಾವದ-ಮೋಹ ಮುಂಬರಿವ ಸೊಬಗಿನ ಸುದತಿಯ ಕಂಡು ॥ಸೋಲದಾತನೆ ವಿರತನು ಮನದೊಳಗೆ ಬಾಲೆಯರ ಸಿಂಗರವನೆ ಕಂಡು".

ಈ ಪ್ಯದಲ್ಲಿ ನಿಜಗುಣರ ಮನದ ಹೊಯ್ದಾಟ, ಹಿಂದಿನ ವಾಸನಾ ಸುಖದ ಇಣುಕು ನೋಟ, ಮನಸ್ಸನ್ನು ಏಕಾಗ್ರತೆಗೆ ಕೊಂಡೊಯ್ಯುವ ಸಾಧನೆ, ಶಂಭುಲಿಂಗನಲ್ಲಿ ಅನನ್ಯ ಪ್ರಾರ್ಥನೆ ಹೀಗೆ ಸಾಧಕನು ಸಿದ್ಧಿಗಾಗಿ ಹಂಬಲಿಸುವ ಹೋರಾಟವನ್ನು ಕಾಣುತ್ತೇವೆ.

ಮುಂದುವರಿದು ನಿಜಗುಣರು ಪುನಃ ತಮ್ಮ ಮನಸ್ಸು ವಿಷಯ ಸುಖಕ್ಕೆಳೆಸದಂತೆ ಭಕ್ತಿ–ಜ್ಞಾನ–ವೈರಾಗ್ಯಗಳನ್ನು ಕರುಣಿಸೆಂದು ಶಂಭುಲಿಂಗನನ್ನು ಈ ರೀತಿ ಪ್ರಾರ್ಥಿಸುತ್ತಾರೆ.

ಕರುಣಿಸೆನಗಿದನೆ ಬೇಡುವೆನಭವ ಬೇರೊಂದು।
ವರವನೊಲ್ಲೆನು ಮುಕ್ತಿ ದೊರೆವ ಸಾಧನವ॥

ಈ ಪದ್ಯದಲ್ಲಿ ಸಾಧಕನಿಗಿರಬೇಕಾದ ನಿಶ್ಚಲ ಧ್ಯೇಯವನ್ನು ನಿರೂಪಿಸಿದ್ದಾರೆ. "ಮನವೆಂಬ ಗಿಳಿಯನೊಯ್ಯರದೊಳೋವಿ ಮೆಲ್ಲನೆ ಮುದ್ದು ನುಡಿಗಲಿಸೆಲೆ ಮಾನಿನಿ"— ಎನ್ನುವ ಈ ಪದ್ಯದಲ್ಲಿ ನಿಜಗುಣರು ಮಾನವನ ಮನಸ್ಸಿನ ಬಗ್ಗೆ ಈ ರೀತಿ ಹೇಳುತ್ತಾರೆ. "ಮನಸ್ಸೆಂಬ ಗಿಳಿಯನ್ನು ಬಹಳ ಪ್ರೇಮದಿಂದ ಕಾಪಾಡಿ ಅದಕ್ಕೆ ಮುದ್ದು ನುಡಿಯನ್ನು ಕಲಿಸಬೇಕು ಎಂಬ"— ಬಹಳ ಸೊಗಸಾದ ಸಾದೃಶ್ಯಗಳಿಂದ ನಿರೂಪಿಸಿದ್ದಾರೆ. ಈ ದೇಹವೇ ಮಿಂಚಿನ ರತ್ನ ಪಂಜರ. ಅದರಲ್ಲಿ ಮೂರು ವರ್ಣದ ಕೋಲಿನ ಮೇಲೆ ಪ್ರಾಣವೆಂಬ ಸರಪಣಿಯಿಂದ ಬಂಧಿತವಾಗಿ ಮನವೆಂಬ ಗಿಳಿ ಕುಳಿತಿದೆ. ಅರಿಷಡ್ವರ್ಗಗಳೆಂಬ ಬೆಕ್ಕು ಅದರ ಬಳಿಗೆ ಬರದಂತೆ ಓಡಿಸಿ ಭಾವದ ಕೈಯಿಂದ ಮೈದಡವಿ, ಆತ್ಮಾರಾಮನೆ ಶಿವ, ಶಿವ, ಎಂದು ಓದುವುದನ್ನು ಆ ಗಿಳಿಗೆ ಕಲಿಸಬೇಕಾಗಿದೆಯಂತೆ. ಇಂತಹ ವಿಚಾರಗಳು ನಿಜಗುಣರ ಆಧ್ಯಾತ್ಮಿಕ ದರ್ಶನಕ್ಕೆ ಹಿಡಿದ ಕನ್ನಡಿಗಳಾಗಿವೆ.

ನಿಜಗುಣರು ಸಂಗೀತಜ್ಞರೂ ಆಗಿದ್ದರು. ಅವರು ಗಾನಯೋಗಿಗಳೂ ಅಹುದು. ನಿಜಾನಂದದ ಆವೇಶದಿಂದ ಯೋಗಿಯ ಅಂತರಂಗವು ನುಡಿಸುವ ವೀಣಾ ಧ್ವನಿ ಅದು ದುಃಖವನ್ನು ಪರಿಹರಿಸುವ ರಾಗರಸದ ತರಂಗಿಣಿ ಎಂದು ಅವರೇ ಹೀಗೆ ಹೇಳುತ್ತಾರೆ. "ಯೋಗಿನಿಜಾನಂದದೊಳು ನುಡಿಸುವ ವೀಣೆ॥ ರಾಗರಸದ ತರಂಗಿಣಿ ನೋಡು ರಮಣಿ ತಿಳಿದೇಳು ಮುಖ್ಯನಾಡಿ ಎಂಬ ತಂತಿಗಳನು—" ಇಲ್ಲಿ ದೇಹವನ್ನು ವೀಣೆಗೆ ಹೋಲಿಸುವ ಭಾವ ಹೃದಯಸ್ಪರ್ಶಿಯಾಗಿದೆ. ನಿಜಗುಣರು ತಮ್ಮ ಅನುಭವವನ್ನು ಬೇರೆ–ಬೇರೆ ರಾಗಗಳಲ್ಲಿ ಹೊರ ಹೊಮ್ಮಿಸಿ ಪದ್ಯಗಳ ರಚನೆ ಮಾಡಿದ್ದಾರೆ. ಅವುಗಳಲ್ಲಿ ನಾದನಾಮಕ್ರಿಯೆ. ಶಂಕರಾಭರಣ, ಸೌರಾಷ್ಟ್ರ, ಮಾಳವ ಇವೇ ಮೊದಲಾದ ರಾಗಗಳು ಪ್ರಮುಖವಾಗಿವೆ. ಆದ್ದರಿಂದ ಇವರು ಕನ್ನಡನಾಡಿನ ಶ್ರೇಷ್ಠವಾಗ್ಗೇಯಕಾರರಾಗಿದ್ದಾರೆ.

ಇನ್ನು ನಿಜಗುಣರ ಗುರುಭಕ್ತಿಗೆ ಸಾಕ್ಷಿಯಾಗಿ ಕನ್ನಡ ಸಾಹಿತ್ಯದಲ್ಲಿ ಅಪೂರ್ವವೆನಿಸಿದ — ಶ್ರೀ ಗುರುವಚನೋಪದೇಶವನಾಲಿಸಿದಾಗಳಹುದು.

ನರರಿಗೆ ಮುಕುತಿ — — —

ಈ ಪದ್ಯ ಬಹು ಜನಾದರಣೀಯವಾಗಿದೆ.

ಮತ್ತೊಂದು ಪದ್ಯದಲ್ಲಿ ಕವಿ ಶಿವನ ತ್ರಿನೇತ್ರಗಳ ಕಲ್ಪನೆಯ ಅರ್ಥವನ್ನು ಸುಂದರವಾಗಿ ಕಂಡು ಲೋಕ ಕಲ್ಯಾಣಕ್ಕಾಗಿ ಶಿವನ ಕಾರುಣ್ಯವನ್ನು ಬೇಡುತ್ತಾರೆ. ಆ ಪದ್ಯ ಪರಿಣಾಮಕಾರಿಯಾಗಿ ರೂಪುಗೊಂಡಿದೆ—"

"ನೋಡಲಾಗದೆ ದೇವ। ನೋಡಲಾಗದೆ।
ಕೂಡೆ ನಿನ್ನ ದಿಟ್ಟಿ ಮೂರು। ನಾಡಲೇಸು ಮಾಡಲೆನ್ನ ॥ಪ॥

ನಿಜಗುಣರ ದರ್ಶನವನ್ನು ಕೆಲವರು ಅಪಾರ್ಥಿಸಿಕೊಂಡಂತೆ ಅದು ಸಂಪೂರ್ಣ ಅದ್ವೈತವಲ್ಲ, ಅವರೇ ಒಂದೆಡೆ ಹೇಳುವ "ಬಳಸದಿರದ್ವೈತವನು ಬಾಹ್ಯದಲ್ಲಿ ನಿನೊಳಗೇಕೋಭಾವನೆ ಯೊಡಗೂಡು" ಎನ್ನುವ ಮಾತನ್ನು ಗಮನಿಸಿದಾಗ ಪ್ರಾರಂಭದಲ್ಲಿ ಸಾಧಕನಿಗೆ ನಿಯಮಗಳೆಲ್ಲ ಅವಶ್ಯಕ, ಹಾಗೂ ಅನಿವಾರ್ಯ. ಆದರೆ ಒಂದು ನಿಲುವಿಗೆ ಜೀವ ಏರಿ ತನ್ನ ಗುರಿಯನ್ನು ಸೇರಿದ ಮೇಲೆ ವ್ಯರ್ಥವಾದ ನಿಯಮಗಳ ಅಗತ್ಯವಿಲ್ಲವೆಂಬುದು ನಿಜಗುಣರ ಅಭಿಪ್ರಾಯ. ನಿಜಗುಣರು ಕೇವಲ ಅದ್ವೈತಿಗಳಂತೆ ಜಗತ್ತು ನಶ್ವರ ವೆಂದು ಸಾರಲಿಲ್ಲ. ಪ್ರಪಂಚ ಪರಮಾರ್ಥ ಎರಡೂ ಅವಶ್ಯಕ ವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ". ಜಾಣನು ಲೌಕಿಕ ಪರಮಾರ್ಥ ವೆರಡನ್ನು ಮಾಣದೆ ಕೂಡಿ ನಡೆಸುತಿಪನಿಂತು" ಎಂದು ಒಂದು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ. "ತಾಯಿಯ ಒಂದು ಸ್ತನ್ಯಪಾನ ಮಾಡುತ್ತಿರುವ ಶಿಶು, ತನ ಕೈಗಳನ್ನು ಮತ್ತೊಂದು ಮೊಲೆಯ ಮೇಲೆ ಕೈಸಾರುವಂತೆ"

ಮತ್ತೊಂದು ಪದ್ಯದಲ್ಲಿ ನಿಜಗುಣರು ಪಂಚಾಂಗದ ಸಂವತ್ಸರ ಗಳಿಗೆ ಶ್ಲೇಷಾರ್ಥ ಕೊಟ್ಟು ಮಾನವನು ಜನನ–ಮರಣದ ಸಂವತ್ಸರಗಳ ಚಕ್ರದಿಂದ ಹೇಗೆ ಪಾರಾಗಬೇಕು ಎಂಬುದನ್ನು ಕಲಾತ್ಮಕ ವಾಗಿ ಹೀಗೆ ವರ್ಣಿಸಿದ್ದಾರೆ.

"ನೀನೊಲಿಯದ ನಿಮಿಷವೆ ಪಲವರುಷವಾನೆಂತುಳಿವೆ?
ಮನ್ನಿಸು ದೇವ॥
ಜ್ಞಾನ ವಿರೋಧಿ, ಮಾಯಾ ವಿಕೃತಿ ಬಹುಧಾನ್ಯವೇ ಶುಕ್ಲ
ಧಾತುಗಳಾಗೆ
ಈ ನಿಖಿಲ ಪ್ರಜೋತ್ಪತ್ತಿಯುನವರೊಳು ನೀನುಂಟು ಮಾಳ್ಪ
ಸರ್ವೇಶ್ವರ (2)
ಮುಳಿದು ಮನ್ಮಥನ ವಿಕ್ರಮವನು ಜಯಿಸಿ।
ಮುಪ್ಪೊಳಲ ದುರ್ಮುಖಿಯ ರಾಕ್ಷಸರನಿಕ್ಕಿ
ನಳಪಾರ್ಥಿವಾದಿ ಶ್ರೀಮುಖದ ಸೌಮ್ಯರಿಗೆ
ಮಂಜುಳತರಾನಂದ ವೀವನನೂಪಮ ॥3॥
ಭಾವಿಸೆ ಶ್ರೀಭವಾದಿ ಕ್ಷಯ ಕಡೆಯಾದವರ
ಭಾವ ವಿಕಾರತ್ವವಿಹಿತ ಜೀವದುಃಖಾಕರಪೋತ್ತರಣ
ಪ್ಲವ ಮಹಿಮಾ ವಿಭವದ ಶಂಭುಲಿಂಗವೆ ॥4॥ (ಕೈ. ಪ)

ನಿಜಗುಣರ ದಾರ್ಶನಿಕ ಹೃದಯದಿಂದ ಮೂಡಿ ಬಂದ ದಿವ್ಯ ವಾದ ಮತ್ತೊಂದು ಮಂಗಳ ಗೀತೆ ಇದೋ — ಕೇಳಿ.

ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ —

ಸ್ವತಃ ಜ್ಯೋತಿ ಸ್ವರೂಪರಾಗಿ ನಿಜಗುಣ ಶಿವಯೋಗಿಗಳು ಮಾನವವರ್ಗಕ್ಕೆ ದಾರಿ ಕಾಣುವ ಬೆಳಕಾದರು.

ಇನ್ನು ಕೆಲವು ನಿಜಗುಣರ ನುಡಿಮುತ್ತುಗಳು ಇಂತಿವೆ —

1) ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚಂದವಮ.

2) ತಲ್ಲಣಿಸದೆ ನಿಂದಲ್ಲಿ ತಾನಿರ್ಪುದೆ ಚಂದವಮ.

3) ಧರೆಯೊಳು ಅತ್ಯಧಿಕವೆನಿಪ ಶಾಂತಿಯನು ಬೇಡುವೆ ನಭವಾ.

4) ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ?

5) ಪರರ ದುರ್ಗುಣಗಳ ಮರೆವುತಾದರಿಪ್ಪುದೆ ಚಂದವಮ

6) ದುರಿತದೊಳಧಿಕವಾವುದು? — ನಿಂದೆ.

7) ಜೀವನವೆರಸಿದ ಮರಣವಾವುದು? — ಚಿಂತೆ.

8) ಕೆಡುವ ಶರೀರದ ಸಫಲವಾವುದು? — ಪರಹಿತ.

9) ಕಿಂಕರವೃತ್ತಿಯಾವುದು? — ತನಗಳಿಯಾಸೆ.

10) ಎಸೆವ ಜಾಗರಣವಾವುದು? — ಸದ್ವಿವೇಕ.

11) ಶಶಿಯ ಶೀತಳದುತಾವುದು? — ಶಮೆ.

12) ಸುಧಾರಸ ಧಾರೆಯಾವುದು? — ಮಿಗೆ ಮೃದುವಚನ.

13) ಸದುಗತಿ ಯಾವುದು? "ಶಂಭುಲಿಂಗ"

ಇಂತಹ ಸಹಸ್ರಾಧಿಕ ಅನುಭಾವಿಕ ಹಾಗೂ ಅಮೃತವಾಣಿ ಗಳಿಂದ ನಿಜಗುಣರು ಮನುಕುಲದ ಸಂತೃಪ್ತ ಹೃದಯಗಳನ್ನು ಈಗಲೂ ಸಂತೈಸುತ್ತಿದ್ದಾರೆ.

ಮಾನವ ಕುಲ ಸುಖಿಶಾಂತಿಯಿಂದ – ಅಜ್ಞಾನದಿಂದ ಜ್ಞಾನ ದೆಡೆಗೆ – ಅಮಂಗಳದಿಂದ ಮಂಗಳದೆಡೆಗೆ, ಅಸತ್ಯದಿಂದ ಸತ್ಯದೆಡೆಗೆ

ಅಶುಭದಿಂದ – ಶಂಭುಲಿಂಗದೆಡೆಗೆ ಬೆಳೆಯಬೇಕಾದರೆ ನಿಜ ಗುಣರ ದರ್ಶನ, ಆಧ್ಯಾತ್ಮ ತತ್ವಗಳು ನಮಗೆ ಸದಾ ಬೆಳಕನ್ನೀಯುವ ಸಾಧನಗಳಾಗಿವೆ. ನಿಜಗುಣರ ಅಮರ ಕೃತಿಗಳಿಂದ ಕನ್ನಡ ಸಾಹಿತ್ಯ – ಸಂಸ್ಕೃತಿ ತನ್ನ ಔನ್ನತ್ಯವನ್ನು ಹೆಚ್ಚಿಸಿಕೊಂಡಿದೆ.

VITA FOOD PRODUCTS

Manufacturers of:

Quality Biscuits, Confectionery & Vermicelli
Mysore Road, BANGALORE-26

PHONE: Fact. 24018
Resi. 75152

GRAMS: 'VITAFOOD'

◆

Our Other Concerns:

KARNATAKA TRADING CO.,
Merchants
Old Tharagupet, BANGALORE-2A

PHONE: Office: 72444
Resi. : 4846

GRAMS: 'TRADELINK'

◆

SRI SHANKAR FLOUR MILLS
Manufacturers of:
Pure Gram Flour
No. 2, New Bamboo Bazaar, BANGALORE-2

PHONE: Mills 73473
Resi: 4846

GRAMS: 'TRADELINK'

◆

JANATHA AGENCIES
Stockists for:
Vita Food Products & Sri Shankar Flour Mills
Akkam Building
254, Old Tharagupet, BANGALORE-2A

PHONE: 72218

◆

Opening Shortly:

SRI SHANKAR INDUSTRIES
No. 51, Industrial Town
Rajajinagar – BANGALORE

Tel. ENNARCE

Phone { Shop. 71827
Res. 73835

With Best Compliments from :

Mark : N. R. C.

M/s N. R. CHANDRAN

MUNDY MERCHANTS & COMMISSION AGENTS

(Importer & Exporter in Potato, Garlic, Onion, etc.)

1 ST MAIN ROAD, NEW THARAGUPET, BANGALORE-2

ಎನ್. ಆರ್. ಚಂದ್ರನ್, ಹೊಸ ತರಗುಪೇಟೆ, ಬೆಂಗಳೂರು - 2

ಪಟ್ಟದ ಶ್ರೀ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು,
ಶ್ರೀ ಹುಣಸಮಾರನಹಳ್ಳಿ ಸಂಸ್ಥಾನ ಮಠ, ಬೆಂಗಳೂರು ಜಿಲ್ಲೆ.

ಜಗದೀಶ್ವರನು ಈ ಪ್ರಪಂಚದಲ್ಲಿ ತನ್ನ ವಿನೋದಕ್ಕಾಗಿ ಅನೇಕ ಜೀವಿಗಳನ್ನು ಸೃಷ್ಟಿಮಾಡಿರುತ್ತಾನೆ. ಮಾನವನು ಈ ಬಗೆಯ ಸೃಷ್ಟಿಯ ವೈಚಿತ್ರ್ಯವನ್ನು ಅರಿತು ಶ್ರೇಷ್ಠವಾದ ಜೀವನದಿಂದ ಸಾರ್ಥಕವನ್ನು ಪಡೆಯಲೆಂದು ದಿವ್ಯಜ್ಞಾನವನ್ನು ಅಪೂರ್ವ ಪ್ರಸಾದವಾಗಿ ಕೊಟ್ಟಿರುತ್ತಾನೆ. ಮಾನವೇತರ ಪ್ರಾಣಿ ಸಮುದಾಯಗಳಿಗೆ ಈ ಬಗೆಯ ಜ್ಞಾನ ಶಕ್ತಿಯು ಇಲ್ಲದಿರುವುದರಿಂದ ತಮ್ಮ ಬದುಕನ್ನು ಕೇವಲ ಆಹಾರ, ನಿದ್ರಾ, ಭಯ, ಸಂತತಿ ಬೆಳವಣಿಗೆಗೆ ಮಾತ್ರವೇ ಉಪಯೋಗಿಸಿಕೊಂಡು ಜೀವನವನ್ನು ಸಾಗಿಸುತ್ತವೆ, ತೃಪ್ತಜೀವಿಗಳಾಗಿರುತ್ತವೆ. ಈ ಪ್ರಪಂಚದ ದೈವೀಸಂಪತ್ತಿನಲ್ಲಿ ಮಾನವನು ಪಡೆದಿರುವ ಹಕ್ಕುಬಾಧ್ಯತೆಗಳಂತೆಯೇ ಪ್ರಕೃತಿಯ ಸಮಾನವಾದ ಉಪಯೋಗವನ್ನು ಪ್ರಾಣಿಸಮುದಾಯವೂ ಪಡೆದಿರುತ್ತದೆ. ಪವಿತ್ರ ಉಪನಿಷತ್ತುಗಳಲ್ಲಿ ಬರುವ 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂಬ ಶಾಂತಿ ಮಂತ್ರದಲ್ಲಿ ವಿಶ್ವದ ಸಮಸ್ತರೂ ಶಾಂತಿಯನ್ನು ಪಡೆಯಬೇಕೆಂಬ ಸರ್ವೋತ್ಕೃಷ್ಟ ನಿಯಮವು ಬೋಧಿಸಲ್ಪಟ್ಟಿದೆ.

ವಿಶ್ವ ಶಾಂತಿಗೆ ಧರ್ಮದ ಮಾರ್ಗದರ್ಶನ

ವೀರಶೈವ ಸಮಾಜದ ಸರ್ವಾಂಗೀಣ ಅಭ್ಯುದಯ ಮತ್ತು ಸಂಘಟನೆಗೆ ಮಹತ್ವಾಕಾಂಕ್ಷೆ ಹೊಂದಿರುವ ವೀರಶೈವಮತಸ್ಥಾಪಕ ಪೀಠಗಳಲ್ಲೊಂದಾದ ಶ್ರೀ ಶ್ರೀಶೈಲ ಪೀಠದ ಶಾಖಾ ಪೀಠವಾದ ಬೆಂಗಳೂರು ಜಿಲ್ಲೆ ಶ್ರೀ ಹುಣಸಮಾರನಹಳ್ಳಿ ಸಂಸ್ಥಾನ ಮಠದ ಪಟ್ಟದ ಶ್ರೀ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವಿಶ್ವ ಶಾಂತಿಗೆ ಮಾರ್ಗದರ್ಶನ' ಎಂಬ ಈ ಲೇಖನವು ಸಾರಭರಿತವಾಗಿರುವುದಲ್ಲದೆ, ಸಮಯೋಚಿತವೂ ಆಗಿದೆ. ಕನ್ನಡ - ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಪರಿಣತರಾದ ಶ್ರೀ ಸ್ವಾಮಿಗಳಿಂದ ಸಮಾಜವು ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದಾಗಿದೆ.

ಮಾನವನು ತನ್ನ ವ್ಯವಸ್ಥಿತ ಜೀವನವನ್ನು ಸುಗಮಪಡಿಸುವುದಕ್ಕಾಗಿ ದಿನನಿತ್ಯದ ಕಾರ್ಯಕ್ಷೇತ್ರದಲ್ಲಿಯೂ ವಿಜ್ಞಾನದ ಉಪಯೋಗಗಳನ್ನು ಬಳಸಿಕೊಂಡು ಬದುಕಿನ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ. ಯಾಂತ್ರಿಕ ಜೀವನದಿಂದ ಮಾನವರಿಗೆ ಅವಶ್ಯಕವಾದ ಲೌಕಿಕ ಪೂರೈಕೆಗಳೆಲ್ಲವೂ ಕರಗತವಾಗುತ್ತಿದ್ದರೂ ಈವರೆಗೆ ನಿರೀಕ್ಷಿಸಿದ್ದ ತೃಪ್ತಜೀವನವು ಮಾತ್ರ ದೊರಕಲಿಲ್ಲ. ಲೌಕಿಕ ಅಭ್ಯುದಯಗಳು ತೀವ್ರಗತಿಯಿಂದ ಸಾಗಿದಷ್ಟು ಮಾನವನ ಆಸೆ ಆಕಾಂಕ್ಷೆಗಳು ಮಿತಿಮೀರಿ, ಜೀವನವನ್ನು ಒಳಹೊಕ್ಕು ಮಾನವನು ಕೊನೆಗೆ ನಿರಾಶನಾಗುತ್ತಿದ್ದಾನೆ. ಆಶ್ಚರ್ಯಜನಕವಾದ ಎಷ್ಟೋ ಉಪಯುಕ್ತ ಸಲಕರಣೆಗಳು ಕಂಡುಹಿಡಿಯಲ್ಪಟ್ಟು ನಾಗರೀಕ ಜೀವನಕ್ಕೆ ನಾಂದಿಯಾಗಿದ್ದರೂ, ದುರುಪಯೋಗದಿಂದ, ದುಷ್ಟ ಭಾವನೆಗಳಿಂದ ಸ್ವಾರ್ಥತೆಯ ಆಂದೋಲನದಿಂದಾಗಿ ಇವು ಅಶಕ್ತವಾಗಿವೆ. ಧರ್ಮಬಾಹಿರವಾದ ಅಪ್ರಾಮಾಣಿಕತೆಯು ನಡವಳಿಕೆಯು ಸಮಗ್ರ ಮಾನವರ ಅಭ್ಯುದಯವನ್ನು ಸಾಧಿಸಲು ಅಪ್ರಯೋಜಕವಾಗಿ ಸುಸಂಸ್ಕೃತವಾದ ನಾಗರೀಕತೆಯು ಬೆಳೆಯಲು ಅಸಮರ್ಥವಾಗುತ್ತದೆ. ಇಂದು ನಾಗರೀಕತೆಯ ಹೆಸರಿನಲ್ಲಿ ಅನೀತಿ. ಅನ್ಯಾಯ, ಅಧರ್ಮವೇ ಮುಂತಾದ ರಾಕ್ಷಸೀ ಕೃತ್ಯಗಳು ಹೆಚ್ಚಾಗಿ

ಮಾನವೀಯತೆಯು ಹಾಳಾಗುತ್ತಿದೆ. ಧರ್ಮವೊಂದೇ ಸಾಧನವಾಗಬಲ್ಲದು. ಸ್ವಧರ್ಮಾನುಷ್ಠಾನನಿಷ್ಠೆ ಪರಧರ್ಮಗಳ ಸಹಿಷ್ಣುತೆ ಮಾನವರಿಗೆ ಸರ್ವೋತ್ಕೃಷ್ಟವಾದವು. “ಧಾರ್ಮಿಕತೆಯ ಬೆಂಬಲವಿಲ್ಲದೆ ನೈತಿಕತೆಯು ಬೆಳೆಯಲಾರದು.” ಸ್ವಧರ್ಮಾಚರಣೆಯಲ್ಲಿ ನಂಬಿಕೆಯಿಲ್ಲದೆ ಪರಧರ್ಮಗಳ ನಿಂದೆ, ದೈವಿಕ ಶಕ್ತಿಯ ಬಗ್ಗೆ ನಾಸ್ತಿಕ್ಯ ವಾದಗಳನ್ನು ಬೆಳಸಿಕೊಂಡು ಧರ್ಮಬಾಹಿರವಾಗಿ ಬಾಳುವಂತಹ ಜನತೆಯಿಂದ ಸಮಗ್ರ ಶಾಂತಿಯೇ ಕಲಕುವುದು.

ಪ್ರಪಂಚದ ಯಾವುದೇ ರಾಷ್ಟ್ರವಾಗಲಿ ಅದಕ್ಕೆ ಧರ್ಮದ ತಳಹದಿಯಿಲ್ಲದಿದ್ದರೆ ಅದರ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುವುದ, ಬಹಳ ಮಟ್ಟಿಗೆ ಸಾಧ್ಯವಿಲ್ಲ. ಆದರ್ಶ ರಾಷ್ಟ್ರವಾಗಿ ಮುನ್ನಡೆಯಲು ಧರ್ಮದ ಶ್ರದ್ಧೆ, ಧರ್ಮದಿಂದೊಡಗೂಡಿದ ಆರ್ಥಿಕ ಪ್ರಗತಿಗಳು ಬಹುಕಾಲದವರೆವಿಗೂ ಗೌರವಾನ್ವಿತವಾಗಿ ಬಾಳಲು ಶಕ್ತವಾಗುತ್ತವೆ. ಸಂಪತ್ ಭರಿತವಾದ ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲ್ಮೆಯನ್ನು ಸಾಧಿಸುತ್ತಾ ಸಹಬಾಳುವಿಗೆ ಸಹಾಯಕವಾಗಿ ವಿಶ್ವಶಾಂತಿಯನ್ನು ಸಾಧಿಸುವ ಮಹಾಕಾಂಕ್ಷೆಯನ್ನು ಹೊಂದಿರಬೇಕು. ವಿಶ್ವದ ಧರ್ಮದವರೆಲ್ಲರೂ ಸಂಘಟಿತರಾಗಿ ಸಮಗ್ರ ಧರ್ಮರಕ್ಷಣೆಯ ಕಾರ್ಯದಲ್ಲಿ ಒಂದಾಗಿ ಮುನ್ನಡೆದು ಧಾರ್ಮಿಕ ಪ್ರಗತಿಯನ್ನು ಸಾಧಿಸಿ ಅಧರ್ಮ, ಅನ್ಯಾಯ, ಅಸತ್ಯಗಳನ್ನು ಹತ್ತಿಕ್ಕಿ ಸುಖೀ ರಾಜ್ಯ ಸ್ಥಾಪನೆಗೆ ಹವಣಿಸಬೇಕು. ಮಾನವೀಯತೆಯ ಸತ್ಯಾಸತ್ಯತೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಸಕಲ ಮಾನವರೂ ಸುಖವಾಗಿ ಸಂವೃದ್ಧಿಯಾಗಿ ಬಾಳುವಂತಹ ಸದವಕಾಶಗಳನ್ನು ಧರ್ಮಶ್ರದ್ಧಾನಿಷ್ಠರಾದ ವಿಶ್ವದ ಮಹಾನ್ ವ್ಯಕ್ತಿಗಳು ಸಾಧಿಸಲು ಕಂಕಣಬದ್ಧರಾಗಬೇಕು. ಯುಗಯುಗಾಂತರಗಳಿಂದಲೂ ಬಾಳಿ ಬೆಳಗಿದ ಧರ್ಮವು ಪುನಃ ನವಚೈತನ್ಯವನ್ನು ಹೊಂದಿ ಈ ಕಲಿಯುಗದ ವಿಜ್ಞಾನ ನಾಗರೀಕತೆಗೆ ಮಾರ್ಗದರ್ಶಕವಾಗಿ ಜನಜೀವನದ ಮಟ್ಟವನ್ನು ಅರ್ಥವತ್ತಾಗಿ ಸುಧಾರಿಸಬೇಕು. ಸತ್ಯವಲ್ಲದ ಅಂಧಾನುಕರಣೆಗಳು ನಿವಾರಣೆಯಾಗಿ ದೇವರಿದ್ದಾನೆ, ಧರ್ಮದಲ್ಲಿ ಶಕ್ತಿಯುಂಟು, ಪಾಪಪುಣ್ಯಗಳು ಉಂಟೆಂಬ ಅಸ್ತಿಕ್ಯ ಭಾವನೆಯು ಸ್ಥಿರಪಟ್ಟು ಆಯಾ ಧರ್ಮದ ಅಧಿದೇವತೆಗಳ ಉಪಾಸನೆಯು ಸಕ್ರಮವಾಗಿ ನಡೆಯಲು ಆಯಾ ಧರ್ಮ ಸಿದ್ಧಾಂತಗಳು ಶಾಶ್ವತವಾಗಿ ಉಳಿಯಲು ಪ್ರೇರಕವಾಗಿ ಪ್ರಪಂಚದ ಭವಿಷ್ಯವು ದೈವಿಕ ಬಲದ ಮೇಲೆ ರೂಪುಗೊಳ್ಳಬೇಕು. ದೈವಬಲವು ಪರಿಶುದ್ಧ ಉಪಾಸನಾ ಬಲದಿಂದ ಒಡಗೂಡಿ ಸಕಲ ಪ್ರಾಣಿಗಳನ್ನು ಪ್ರೀತಿಯಿಂದ ಕಾಣುವ ಸರ್ವೋತ್ಕೃಷ್ಟ ಆತ್ಮೀಯ ನಂಬಿಕೆಯೇ ಆಗಿದೆ. ನಂಬಿಕೆಯಿಲ್ಲದೆ ಯಾರೇ ಆದರೂ ಮುಂದುವರಿಯುವುದಾಗಲೀ, ಶ್ರೇಷ್ಠ ಜ್ಞಾನವನ್ನು ಪಡೆಯುವುದಾಗಲೀ ಸಾಧ್ಯವಿಲ್ಲ. ಮಾನವನ ಅಳಿವಿಗೂ, ಉಳಿವಿಗೂ, ನಂಬಿಕೆಯು ಪ್ರಧಾನವಾಗಿದೆ. ಧರ್ಮಮಾರ್ಗಗಳಿಂದ ಮುನ್ನಡೆದವರು ಈ ವರೆವಿಗೂ ಯಾರೇ ಆಗಲಿ ಹಾಳಾಗಿರುವುದು ಇತಿಹಾಸದಿಂದ ತಿಳಿದು ಬಂದಿಲ್ಲ. ಆಧುನಿಕ ಶಕ್ತಿಗಳ ಕರಾಳ ನರ್ತನವು ಮೇರೆ ಮೀರಿದಾಗ ಪರಮಾತ್ಮನ ಸಂಬಂಧವಾದ ಯಾವುದೇ ದೈವೀ ಗುಣಗಳು ಬೆಳೆಯುವುದಿಲ್ಲ.

ಹಿಂದೂಗಳಾಗಲಿ, ಮಹಮದೀಯರಾಗಲಿ, ಕ್ರೈಸ್ತರಾಗಲಿ, ರಾಷ್ಟ್ರದ ಯಾವುದೇ ಧರ್ಮದವರಾಗಲಿ ತಮ್ಮ ಧರ್ಮದ ಅನುಷ್ಠಾನ ಮಾರ್ಗಗಳನ್ನು ಸಕ್ರಮವಾಗಿ ಆಚರಿಸುವುದರಿಂದ ಸಮಗ್ರ ಶಾಂತಿಯ ವಾತಾವರಣ ಉದಯವಾಗುವುದು. ಆದರೆ ತಮ್ಮ ಧರ್ಮದಲ್ಲಿ ನಂಬಿಕೆಗೆಟ್ಟು, ನಾಸ್ತಿಕರಾದಾಗ ಅಂತಹ ವ್ಯಕ್ತಿಗಳನ್ನು ದೈವಮಾರ್ಗಕ್ಕೆ ಕರೆದೊಯ್ಯುವುದು ಬಹು ಕಷ್ಟ. ದೈವ ನಂಬಿಕೆಯನ್ನು ಕಳೆದುಕೊಂಡ ಬಳಿಕ ಮರಳಿ ಪಡೆಯುವುದು ಸಾಧ್ಯವಿಲ್ಲ. ಧರ್ಮಗ್ರಂಥಗಳ ಗೌರವ, ಅದರಲ್ಲಿ ಬೋಧಿಸಿರುವ ಮಾರ್ಗಗಳು ಮಾನವರ ಅಭ್ಯುದಯಕ್ಕೆ ಸಾಧಕವಾಗಿರುವುದರಿಂದ ಯಾವುದೇ ಧರ್ಮದವರ ಬಗ್ಗೆ ಸಂಕುಚಿತ ಭಾವನೆಗಳನ್ನು ತೋರಿ ಇಲ್ಲದ ಸಲ್ಲದ ವಿತಂಡ ವಾದಗಳನ್ನು ಮಾಡುತ್ತಾ ಮುಂದುವರಿದರೆ ಧರ್ಮದ ಶ್ರೇಯಸ್ಸನ್ನು ಸಾಧಿಸಲು ಸಾಧ್ಯವಿಲ್ಲ. ಸದ್ಯಃ ಜಗತ್ತಿಗೆ ಧರ್ಮದ ಅರಿವು ಅವಶ್ಯಕವಾಗಿರುವುದರಿಂದ ಎಲ್ಲರೂ ಧರ್ಮವನ್ನು ಪಾಲಿಸುವಂತೆ ಪ್ರೇರಿಸುವುದು ಅತ್ಯಾವಶ್ಯಕ. ದ್ವೇಷಾಸೂಯೆಗಳ ನಿರ್ಮೂಲನಕ್ಕೆ ಅಜ್ಞಾನನಿವಾರಣೆಗೆ, ಧರ್ಮವೊಂದೇ ಚೈತನ್ಯಕರವಾದದ್ದು. ಅಧರ್ಮ, ಅನ್ಯಾಯ, ಮಾನವರ ವ್ಯವಹಾರಗಳಿಗೆ ಅನಿಷ್ಟಕಾರಕಗಳಾಗಿರುವುದರಿಂದ ಅವುಗಳನ್ನು ಮೂಲತಃ ನಿವಾರಣೆಗೊಳಿಸುವಂತಹ ಧಾರ್ಮಿಕ ಪ್ರಚಂಡ ಪ್ರವೃತ್ತಿಯು ಬೆಳೆದು ವಿಶ್ವಶಾಂತಿಗೆ ನೆರವಾಗಬೇಕಾದ ಸಮಯ ಬಂದಿದೆ. ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ಮುಂದಾಗುವ ಯಾರೇ ರಾಜಕೀಯ ನಾಯಕರು ಧರ್ಮದ ಪ್ರತೀಕವಾಗಿರಬೇಕು. ಧರ್ಮದಲ್ಲಿ ಶ್ರದ್ಧೆಯಿಲ್ಲದ ನಾಯಕರುಗಳ ಮುಂದಾಳುತನದಿಂದ ಜನತೆಯ ಧರ್ಮನಾಶವಾಗುತ್ತಾ ಅಶಾಂತಿ ಅನ್ಯಾಯ ಹೆಚ್ಚುವುವು.

ಜನತೆಯ ಶ್ರೇಯಸ್ಸನ್ನು ಸಾಧಿಸುವ ಅಥವಾ ಲಾಷ್ಟ್ರಕಲ್ಯಾಣವನ್ನೆಸಗುವ ಮಹಾನ್ ಶಕ್ತಿ ಧರ್ಮದಲ್ಲಿರುವುದರಿಂದ ಪ್ರತಿಯೊಬ್ಬರೂ ಧರ್ಮಕ್ಕೆ ಶರಣಾಗಬೇಕಾಗಿರುವುದು ಕರ್ತವ್ಯ. ಆದ್ದರಿಂದ ಜನತೆಯಲ್ಲಿ ಧರ್ಮದ ನಂಬಿಕೆ, ಭಾವನೆಗಳು ನೇರವಾಗಿ ಬೆಳೆದು ಬಾಳಲು ಸದವಕಾಶಗಳನ್ನು ದೊರಕಿಸಿಕೊಡಬೇಕು. ನೀತಿನಿಯಮಗಳಿಲ್ಲದ ಯೋಜನೆಗಳು ಕೈಗೂಡಲಾರವು.(ಫಲಕಾರಿಯಾಗಲಾರದವು). ಬಡತನ ದಾರಿದ್ರ್ಯಗಳು ನಿವಾರಣೆಯಾಗಲಾರವುಃ ಗೌರವ ಪ್ರತಿಷ್ಠೆಗಳನ್ನು ಬೆಳೆಸಿಕೊಳ್ಳಲು ಹೋರಾಡುವಂತೆ ಜನತೆ ನಿಯಮ ಬದ್ಧವಾದ ಧರ್ಮದ ಆಚರಣೆಗಳನ್ನು ಪಾಲಿಸಬೇಕು. ಎಂದೆಂದಿಗೂ ಅಧರ್ಮ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬಾರದು. ತನ್ನ ನಿಶ್ಚಲವಾದ ಸಚ್ಚಾರಿತ್ರ್ಯದಿಂದ ಆದರ್ಶ ಜೀವನವನ್ನು ನಡೆಸಿದರೆ ಮನುಷ್ಯನು ಬಡತನದ ಸಮಸ್ಯೆಗಳನ್ನು ಎದುರಿಸಲು

ಸರ್ವಶಕ್ತನಾಗುತ್ತಾನೆ. ಧರ್ಮ ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮಾನವನ ಬಾಳುವೆಗೆ ಸಾಧನವಾದ ಅರ್ಥಕಾಮಗಳನ್ನು ಸಂಪಾದಿಸುವ ಮೊದಲು ಧರ್ಮಕ್ಕನುಸಾರವಾಗಿಯೇ ಆರ್ಜಿಸಿ ಮೋಕ್ಷಕ್ಕೆ ಅರ್ಹನಾಗಬೇಕೆಂಬ ನಿಯಮ ವ್ಯಕ್ತಪಡಿಸಲ್ಪಟ್ಟಿದೆ.

ಸದ್ಗೃಹಸ್ಥರಾಗಿ ಸಮಾಜದಲ್ಲಿ ಸಭ್ಯತೆಯಿಂದ ಬಾಳಬೇಕೆಂಬ ಸ್ತ್ರೀಪುರುಷರೆಲ್ಲರೂ ಧರ್ಮನಿಯಮಗಳಿಗೆ ಒಳಪಟ್ಟು ಆಧ್ಯಾತ್ಮಿಕ ಸೂತ್ರವನ್ನು ಹಿಡಿದು ಪರಮಾತ್ಮನನ್ನು ಮೆಚ್ಚಿಸುವ ಸುಂದರವಾದ ಆನಂದದಿಂದೊಡಗೂಡಿದ ಸಂಸಾರ ನೌಕೆಯನ್ನು ಪ್ರಪಂಚವೆಂಬ ಸಮುದ್ರದ ಮೇಲೆ ಜಾಣತನದಿಂದ ನಡೆಸಿಕೊಂಡು ಸಾಗಬೇಕು. ಗೃಹಸ್ಥನಾಗಲು ಇಚ್ಛಿಸುವುದು. ಸಾಂಸಾರಿಕ ಶ್ರೇಯಸ್ಸನ್ನು ಹೊಂದುವುದಕ್ಕಲ್ಲದೆ, ಸಾಂಸಾರಿಕ ಅಶಾಂತಿಯಲ್ಲಿ ಬಳಲಿ ಬೇಸತ್ತು ಜೀವನದಲ್ಲಿ ಜಿಗುಪ್ಸಿತನಾಗಿ ನಿಸ್ಸಾರಜೀವನವನ್ನು ಅನುಭವಿಸುವುದಕ್ಕಲ್ಲ.

ಪರಮಾತ್ಮನ ಅನುಗ್ರಹವನ್ನೂ ಮನೆತನದ ಹಿರಿಮೆಯನ್ನೂ ಉಂಟುಮಾಡಿಕೊಡುವಂತೆ ಶುದ್ಧವಾದ ಮಾರ್ಗಗಳಲ್ಲಿ ನಡೆಯುತ್ತಾ ಆದರ್ಶ ಜೀವನವನ್ನು ನಡೆಸಬೇಕು.

ಸಮಾಜವು ಸುಭದ್ರವಾಗಿ ಬೆಳೆದು ಅದಕ್ಕೆ ಶ್ರೇಯಸ್ಸು ಉಂಟಾಗಬೇಕಾದರೆ ಎಲ್ಲರೂ ವಿಚಾರಾತ್ಮಕ ಬುದ್ಧಿಯಿಂದ ಬಾಳಬೇಕಾಗುತ್ತದೆ. ಸಮಾಜದ ಅಳಿವು ಅಥವಾ ಉಳಿವು ಇಂದಿನ ಸಮಾಜ ಮಾರ್ಗದರ್ಶಕರಾದ ಹಿರಿಯ ವ್ಯಕ್ತಿಗಳನ್ನು ಆಶ್ರಯಿಸಿರುತ್ತದೆ. ಸಮಾಜದ ಒಗ್ಗಟ್ಟನ್ನು ಕಾಪಾಡಿಕೊಂಡು ಬಂದಿರುವ ಹಿರಿಯರು ಎಂದೆಂದಿಗೂ ಸಮಾಜದ ಅವನತಿಯಾಗದಂತೆ ಸದುಪಾಯಗಳನ್ನು ಕಂಡು ಹಿಡಿದು ಮಾನವರ ಬಾಳುವೆಗೆ ಸೊಬಗನ್ನುಂಟು ಮಾಡಬೇಕು.

ಸುವ್ಯವಸ್ಥಿತವಾದ ಸಮಾಜದ ವಿಕಾಸದಿಂದ ಭವ್ಯ ರಾಷ್ಟ್ರದ ನಿರ್ಮಾಣವಾಗಿ ಬಹು ಕಾಲದವರೆಗೂ ಬಾಳಿ ಬೆಳಗಲು ಶಕ್ತವಾಗುತ್ತದೆ. ರೀತಿ, ನೀತಿ, ನಿಯಮಗಳನ್ನು ಸಂಯಮದಿಂದ ಸಾಧಿಸಿ ಎಲ್ಲ ಮಾನವರೂ ಭೂತದಯೆ, ಪಶ್ಚಾತ್ತಾಪ, ಸದ್ಭಾವನೆಗಳಿಂದೊಡಗೂಡಿ ವಿಶ್ವಶಾಂತಿಗೆ ಸಹಾಯಕರಾಗಿ ಬಾಳಬೇಕು.

ವಿಶ್ವಪ್ರಭುವಾದ ಈಶ್ವರನು ತನ್ನ ಅಂಶೀಭೂತರಾದ ಮಾನವರ ದಿವ್ಯಜ್ಞಾನವಿಕಾಸ ಪುರೋಭಿವೃದ್ಧಿಗಳಿಂದ ಸಂತುಷ್ಟನಾಗುತ್ತಾನೆ. ಪರಮಾತ್ಮನ ಸಂತೋಷವೇ ಮಾನವರ ಶ್ರೇಯಸ್ಸಿನ ಮಾರ್ಗಗಳು. ತಂದೆಗೆ ಹರ್ಷವನ್ನುಂಟುಮಾಡುವ ಸುಪುತ್ರನಂತೆ ಪರಮಾತ್ಮನಿಗೆ ಸಂತೋಷವನ್ನುಂಟುಮಾಡುವ ಪವಿತ್ರ ಮಕ್ಕಳಾಗಿ ಈ ಪೃಥ್ವಿಯ ಮೇಲೆ ಬಾಳಿ ಬೆಳಗಬೇಕು. ಧರ್ಮವು ಈ ದಿಶೆಯಲ್ಲಿ ಅತ್ಯಮೂಲ್ಯವಾದ ಶಕ್ತಿಯನ್ನೂ ಮಾರ್ಗದರ್ಶನವನ್ನೂ ಕೊಡುತ್ತದೆ. ಆದುದರಿಂದ ಪವಿತ್ರ ಧರ್ಮಾಭ್ಯುದಯಕ್ಕೆ ವಿಶ್ವಮಾನವರೆಲ್ಲರೂ ಮುಂದಾಗುವಂತೆ ಪರಮ ಕರುಣಾಶಾಲಿಯಾದ ಪರಮಾತ್ಮನು ಸದ್ಬುದ್ಧಿಯನ್ನೀಯಲಿ!

OUR PRANAMAMS TO
JAGADGURU PANCHA PEETADHIPATIS

Tel : KUMKUM
Phones : Shop: 72566
Resi : 70378

A. L. SATYANARAYANA SETTY & SONS
KIRANA & GENERAL MERCHANTS
142, Old Tharagupet, BANGALORE-2A.

OUR OBEISANCES AT THE LOTUS FEET
OF JAGADGURU PANCHACHARYAS

Phone: 74315

MILAN TEXTILES

(Sole Distributors in Terene Suitings for Shree Ram Silk Mfg. Co., Calcutta)

K. V. S. MARKET
AVENUE ROAD
BANGALORE - 2

ವೀರಶೈವ ಸಂಸ್ಕೃತಿ

ಪ್ರಾಚೀನತೆ ಮತ್ತು ಪ್ರಗತಿ



ಡಾ|| ಸಾ. ಶಿ. ಮರುಳಯ್ಯ

ಸರ್ವೋನ್ನತ ಸಂಸ್ಕೃತಿಯ ತೌರು ನಮ್ಮ ಭಾರತ. ಇಲ್ಲಿನ ಸಂಸ್ಕೃತಿ ಸನಾತನವಷ್ಟೇ ಅಲ್ಲ ಅತಿ ಪ್ರಾಚೀನವೂ ಹೌದು. ಇದರ ಜನನದ ಬಗ್ಗೆ ಜಾತಕ ಬರೆಯುವ ಜ್ಯೋತಿಷಿ ಇನ್ನೂ ಹುಟ್ಟಿಲ್ಲ. ಅಂದರೆ ಅತಿ ಪುರಾತನವಾದ ಭಾರತದ ಸಂಸ್ಕೃತಿಯ ಕಾಲ ನಿರ್ಧಾರ ಇಂದಿಗೂ ಸಾಧ್ಯವಾಗಿಲ್ಲ. ಏನೇ ಇರಲಿ, ಭಾರತದ ಸಂಸ್ಕೃತಿ ಅನಾದಿಯಾದುದು; ಅನಂತವಾದುದು. ಈ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ. ನಮ್ಮಲ್ಲಿ ನಡೆದ ಭೂಸಂಶೋಧನೆಯ ಫಲವಾಗಿ ಹಲವು ಅವಶೇಷಗಳು ಸಿಕ್ಕಿ, ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಹತ್ತಾರು ಸತ್ಯಾಂಶಗಳು ಹೊರಬಿದ್ದಿವೆ. ಅದರ ಪ್ರಕಾರ ಭಾರತದ ಮೂಲನಿವಾಸಿಗಳು ಅತಿ ಪ್ರಾಚೀನರೆಂಬುದು ಸ್ಪಷ್ಟ. ಅಷ್ಟೇ ಅಲ್ಲ, ಅವರು ತಮ್ಮದೇ ಆದ ಒಂದು ಸಂಸ್ಕೃತಿಯಲ್ಲಿ ಅತಿ ಪ್ರಬುದ್ಧರೂ ಆಗಿದ್ದರು. ಜಗತ್ತಿನ ಇತರ ರಾಷ್ಟ್ರಗಳಲ್ಲಿ ಮಾನವ ಇನ್ನೂ ಮಾನವತ್ವಕ್ಕೇ ಬರದೆ ಪಶುಪ್ರಾಣಿಗಳಲ್ಲಿ ತಾನೂ ಒಂದು ಜೀವಿಯಾಗಿ ಬದುಕುತ್ತಿದ್ದಾಗ ಭಾರತದ ಮೂಲನಿವಾಸಿ ಮಹಾ ಮೇಧಾವಿ ಮಾನವನಾಗಿದ್ದ. ಭೂಮಿಯ ಇತರೆಡೆಗಳಲ್ಲಿ ಮನುಷ್ಯ ಪ್ರಾಣಿ ಬತ್ತಲೆ ಇದ್ದಾಗ ಭಾರತೀಯ ಅತಿ ನವುರಾದ ಬಟ್ಟೆ ತೊಡುತ್ತಿದ್ದ. ಅಗ್ನಿಯ ಆವಿಷ್ಕಾರ ಇತರೆಡೆಯಲ್ಲಿ ಇನ್ನೂ ಆಗದಿದ್ದಾಗ ಭಾರತೀಯ ಅಗ್ನಿಯನ್ನು ಜ್ಞಾನದ ಸಂಕೇತವೆಂದು ಭಾವಿಸಿ ಔಪಾಸಿಸುತ್ತಿದ್ದ ಅದರಿಂದ ಮಾಂಸವನ್ನು ಬೇಯಿಸಿ ತಿನ್ನಬೇಕೆಂಬ ಅರಿವು ಆತನಿಗಿತ್ತು. ಇತರೆಡೆಯ ಜೀವಿಗಳು ಮರದ ಪೊಟರೆಗಳಲ್ಲಿ, ಗುಡ್ಡದ ಗುಹೆಗಳಲ್ಲಿ ಅವಿತುಕೊಂಡಿದ್ದಾಗ ಭಾರತೀಯ ಸೊಗಸು ತುಂಬಿದ ಸೌಧಗಳಲ್ಲಿ ವಾಸಿಸುತ್ತಿದ್ದ. ಹಲವು ಭೂ ಉತ್ಖನನಗಳಲ್ಲಿ ಸಿಕ್ಕ ಪ್ರಾಚೀನಾವಶೇಷಗಳು ಇದಕ್ಕೆ ಸಾಕ್ಷಿಯಾಗಿ ನಿಂತಿವೆ.

ಇಂದು ಪಾಕಿಸ್ಥಾನದ ಪ್ರಭುತ್ವಕ್ಕೆ ಸೇರಿಹೋಗಿರುವ ಹರಪ್ಪ ಮತ್ತು ಮೊಹೆಂಜದಾರೊ ಭೂ ಉತ್ಖನನವು ನಮ್ಮ ಭಾರತೀಯ ಸಂಸ್ಕೃತಿಯ ಪ್ರಾಚೀನತೆಯನ್ನು ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದುವರೆ, ನಮ್ಮ ಹಿಂದೂಸ್ಥಾನದಲ್ಲಿರುವ—ಇತ್ತೀಚೆಗೆ ನಡೆದ ಭೂ ಸಂಶೋಧನೆಯಿಂದ—ಲೋಖಲ್ ಭೂ ಉತ್ಖನನವು ಸುಮಾರು ೭–೮ ಸಹಸ್ರ ವರ್ಷಗಳಿಗೂ ಹಿಂದಿನದೆಂದು ಸಾರುತ್ತದೆ. ನಮ್ಮ ಸಂಸ್ಕೃತಿಯ

ಕನ್ನಡ ಸಾಹಿತ್ಯರಂಗದಲ್ಲಿ ಶ್ರೀ ಸಾ. ಶಿ. ಮರುಳಯ್ಯನವರು ಸಾಕಷ್ಟು ಜನಪ್ರಿಯರಾಗಿದ್ದಾರೆ. ಎಂ.ಎ. ಪದವಿಯನ್ನು ಗಳಿಸಿ ಒಂದೂವರೆ ದಶಕದಿಂದಲೂ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ ಶ್ರೀಯುತರು ವೀರಶೈವ ಸಿದ್ಧಾಂತ ಹಾಗೂ ಕನ್ನಡ ಪ್ರಾಚೀನ ಸಾಹಿತ್ಯದ ಬಗ್ಗೆ ಅಪಾರ ಜ್ಞಾನವನ್ನು ಸಂಪಾದಿಸಿದ್ದಾರೆ. ಅದಕ್ಕೆ ಈ ಲೇಖನವೇ ಸಂಕೇತವಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಪಿ.ಎಚ್.ಡಿ. ಪಡೆದಿರುವ ಶ್ರೀ ಮರುಳಯ್ಯನವರಿಂದ ಸಮಾಜ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದಾಗಿದೆ.

ಪ್ರಾಚೀನತೆಯ ಜೊತೆಯಲ್ಲೇ ವೀರಶೈವದ ಪ್ರಾಚೀನತೆಯೂ ಅಡಗಿದೆ ಎಂಬುದನ್ನು ನೋಡಬಹುದು.

ಮೊದಲನೆಯದಾಗಿ, ಇತಿಹಾಸಜ್ಞರು ಹೇಳುವಂತೆ ಮಾನವನ ಜನನ ಕೇವಲ ಏಷ್ಯಾ ಮೈನರ್‌ನಲ್ಲೇ ಆಗಿರಲಾರದು; ಅಲ್ಲಿಂದಲೇ ಪ್ರಪಂಚದ ಇತರ ಭಾಗಗಳಿಗೆ ಮನುಷ್ಯ ಜೀವನಕ್ಕಾಗಿ ವಲಸೆ ಹೋಗಿರಲಾರನು. ಜಗತ್ತಿನ ಯಾವ ಭೂಭಾಗಕ್ಕೆ ಹೇಗೇ ಇಗಲಿ ಭಾರತಕ್ಕಂತೂ ಈ ಮಾತು ಅನ್ವಯಿಸಲಾರದು.

ಎರಡನೆಯದಾಗಿ, ಏಷ್ಯಾ ಮೈನರ್‌ನಿಂದ ಇರಾನ್ - ತುರಾನ್, ಈಜಿಪ್ಟ್, ಇಂಡಿಯಾ ಮೊದಲಾದೆಡೆಗಳಿಗೆ ಜನತೆ ಹೊರಹೊರಟು ಆಯಾಯ ಪ್ರದೇಶಗಳಲ್ಲಿ ತಮ್ಮ ಪ್ರಗತಿಯನ್ನು ಸಾಧಿಸಿದರು ಎಂದು ಇತಿಹಾಸ ತಿಳಿಸುತ್ತದೆ. ಆದರೆ ಅಲ್ಲಿಂದ ಭಾರತಕ್ಕೆ ವಲಸೆ ಬಂದ ಜನಾಂಗ ಇಲ್ಲಿ ಆರ್ಯರು ಎಂದೆನ್ನಿಸಿಕೊಳ್ಳುವ ಮುನ್ನವೇ ಭಾರತದಲ್ಲಿ ಮೂಲನಿವಾಸೀ ಜನಾಂಗ ಒಂದಿತ್ತು ಎಂಬುದು ಗಮನಾರ್ಹವಾದ ವಿಷಯ. ಇಲ್ಲಿದ್ದ ಸ್ಥಳೀಯ ವ್ಯಕ್ತಿಗಳು ಆರ್ಯರೀಗಿಂತಲೂ ಆರ್ಯರಾಗಿದ್ದರು. ನಾಗರಿಕತೆ, ಸಂಸ್ಕೃತಿಗಳಲ್ಲಿ ಮಹೋನ್ನತ ಮಜಲು ಮುಟ್ಟಿದ್ದರು. ಅಷ್ಟೇ ಅಲ್ಲ ಅವರು ಪರಶಿವನ ಪದ ಭಕ್ತರಾಗಿದ್ದು, ಶಿವಲಿಂಗದ ಆರಾಧಕರೂ ಆಗಿದ್ದರು.

ಮೂರನೆಯದಾಗಿ ಆರ್ಯರಿಗಿಂತಲೂ ನಾಗರಿಕತೆಯಲ್ಲಿ ಹಿರಿಯರಾದ ಭರತಖಂಡದ ಈ ಮೂಲನಿವಾಸೀ ಜನಾಂಗವು ಭಾರತಾದ್ಯಂತವೂ ಶಿವೋಪಾಸನೆಯನ್ನೇ ಪ್ರಧಾನ ಧರ್ಮವೆಂದು ಭಾವಿಸಿದ್ದಂತೆ ತೋರುತ್ತದೆ. ರಾಮಾಯಣ ಮಹಾಕಾವ್ಯದಲ್ಲಿ ಶ್ರೀ ರಾಮನು ದೋಷನಿವಾರಣಾರ್ಥವಾಗಿ ಪ್ರತಿಷ್ಠಾಪಿಸಿದ ಶ್ರೀ ರಾಮೇಶ್ವರ ಲಿಂಗವೇ ಈ ಹೇಳಿಕೆಗೆ ಸಮರ್ಥನೆಯಾಗಿದೆ ಎಂದು ಹಲವರು ತಜ್ಞರು ಹೇಳುತ್ತಾರೆ.

ಆರ್ಯರ ಆಗಮನಕ್ಕೂ ಹಿಂದೆ ನಮ್ಮ ರಾಷ್ಟ್ರದಲ್ಲಿ ಅಘೋರ, ಈಶಾನ, ತತ್ಪುರುಷ, ಸದ್ಯೋಜಾತ, ವಾಮದೇವ ಎಂಬ ಪರಶಿವನ ಪಂಚಮುಖಗಳಿಂದ ಉದ್ಭವಿಸಿ ಅವತರಿಸಿದ ಜಗದಾದಿ ಗುರುಗಳಾದ ಪಂಚ ಆಚಾರ್ಯರುಗಳು ಕನ್ಯಾಕುಮಾರಿಯಿಂದ ಹಿಮಾಲಯದ ತುದಿಯವರೆಗೆ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ, ಕಾಶಿ, ಹಿಮವತ್ಕೇದಾರ ಈ ಭಾಗಗಳಲ್ಲಿ ಪಂಚಪೀಠಗಳನ್ನೂ, ಭಾರತಾದ್ಯಂತ ದ್ವಾದಶ ಜ್ಯೋತಿರ್ಲಿಂಗಗಳನ್ನೂ ಪ್ರತಿಷ್ಠಾಪಿಸಿ ಧರ್ಮೋದ್ಧಾರವನ್ನೆಸಗಿರುವುದು ಲೋಕವಿದಿತವಾದ ವಿಷಯ. ಕ್ರಿ.ಶ. 1919 ರಲ್ಲಿ ಕಲ್ಕತ್ತೆಯಲ್ಲಿ ಪ್ರಕಟವಾದ "ವಂಗವಾಸಿ" ಎಂಬ ಹಿಂದಿ ಪತ್ರಿಕೆಯ ಲೇಖನವೊಂದು ಈ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಳನ್ನು ನೀಡುತ್ತದೆಂದು ಕಾಶೀನಾಥ ಶಾಸ್ತ್ರಿಗಳವರು ತಿಳಿಸುತ್ತಾರೆ.

ಶೃತಿ, ಸ್ಮೃತಿ, ಆಗಮ, ಇತಿಹಾಸ, ಕಾವ್ಯ, ಪುರಾಣಗಳಲ್ಲಿ ಆರ್ಯರ ದೇವತೆಗಳಲ್ಲದೆ ಶಿವ ಅಥವಾ ರುದ್ರನ ಬಗೆಗೆ ಹೆಚ್ಚಿನ ಆರಾಧನೆ ವರ್ಣನೆಗಳು ಸಿಕ್ಕುವುದರಿಂದ ಶಿವೋಪಾಸನೆಯು ಆರ್ಯರಿಗಿಂತಲೂ ಪ್ರಾಚೀನವಾದುದು, ಅದೇ ಭರತಖಂಡದ ಮೂಲ ಸಂಸ್ಕೃತಿ. ವೀರಶೈವವೇ ಅದರ ಪ್ರಾಚೀನ ಧರ್ಮ, ಜಗದ್ಗುರು ಪಂಚಾಚಾರ್ಯರುಗಳೇ ಅದನ್ನು ಬೆಳಗಿಸಿದ ಮಹದ್ವಿಭೂತಿಗಳು ಎಂಬುದು ಸುಸ್ಪಷ್ಟ.

ನಾಲ್ಕನೆಯದಾಗಿ, ಪರಂಪರಾಗತವಾಗಿ ಬೆಳೆದು ಬಂದ ಆಚಾರ್ಯ ಪೀಠಗಳು ಭರತಖಂಡದ ಇತರ ರಾಷ್ಟ್ರಗಳಲ್ಲೂ ವೀರಶೈವ ಧರ್ಮ ಪ್ರಚಾರಕ್ಕೆ ಪ್ರಯತ್ನಿಸಿದಂತೆ ತೋರುತ್ತದೆ. ಯುರೋಪ್, ಅಮೆರಿಕಾ ದೇಶಗಳಲ್ಲಿ ಶಿವದೇವಾಲಯಗಳೂ, ಶಿವಪ್ರತಿಮೆಗಳೂ, ಶಿವಲಿಂಗಗಳೂ ದೊರೆತಿವೆ. ಬ್ರೆಸಿಲ್‌ನಲ್ಲಿ, ಕೋರಿಂಥ್‌ನಲ್ಲಿ, ಇಟಲಿಯಲ್ಲಿ, ಗ್ಲಾಸ್ಕೋನಗರದಲ್ಲಿ, ಫ್ರಿಜಿಯನ್ ದೇಶದಲ್ಲಿ, ಮೆಕ್ಕಾದಲ್ಲಿ, ಸಿಂಹಳದಲ್ಲಿ–ಪ್ರಪಂಚದ ಹಲವೆಡೆಗಳಲ್ಲಿ ಇಂದಿಗೂ ಶಿವ, ಪಾರ್ವತಿ, ಗಣಪತಿ ಮೂರ್ತಿಗಳು ನಿದರ್ಶನ ವಸ್ತುಗಳಾಗಿ ನಿಂತಿವೆ. ಆಫ್ರಿಕಾಖಂಡ ಮತ್ತು ಸಿಂಹಳ ದ್ವೀಪಗಳಲ್ಲಂತೂ ಲೆಕ್ಕವಿಲ್ಲದಷ್ಟು ಲಿಂಗಗಳು ದೊರೆಯುತ್ತವೆ. ಅದಕ್ಕೆ ಕಾರಣವೂ ಇದೆ. ಏನೆಂದರೆ ಪ್ರಾಚೀನ ಕಾಲದಲ್ಲಿ ಆಫ್ರಿಕ ಮತ್ತು ಈಗಿರುವ ಭರತಖಂಡ ಒಂದೇ ಭೂಭಾಗವಾಗಿದ್ದುವು. ಯಾವುದೋ ಕಾಲದಲ್ಲಿ ಅರಬ್ಬೀ ಸಮುದ್ರವು ನುಗ್ಗಿ ಅಖಂಡ ಭೂಭಾಗದಿಂದ ಭರತಖಂಡವನ್ನು ಬೇರ್ಪಡಿಸಿತು—ಹೀಗೆಂಬುದಾಗಿ ಭೂಗರ್ಭಶಾಸ್ತ್ರ ತಿಳಿಸುತ್ತದೆ. ಇದು ಸತ್ಯ. ಭೌಗೋಳಿಕ ರೂಪರೇಷೆಗಳಲ್ಲಿ ಆನೆ ಮೊದಲಾದ ಪ್ರಾಣಿಗಳ ಅಸ್ತಿತ್ವದಲ್ಲಿ ಇದರ ಸತ್ಯಾಂಶ ವ್ಯಕ್ತವಾಗುತ್ತದೆ. ಇಂದಿಗೂ "ಜಂಬೂದ್ವೀಪೇ ಭರತಖಂಡೇ......" ಎಂದು ಉಚ್ಚರಿಸುತ್ತೇವೆ. ಇದರ ಅರ್ಥ ಏನು? ಜಂಬೂದ್ವೀಪ ಯಾವುದು? ಭರತಖಂಡ ಯಾವುದು? ಬಹುಶಃ ಆಫ್ರಿಕೆಯನ್ನೊಳಗೊಂಡ ಪ್ರಾಚೀನ ಭೂಖಂಡ ಜಂಬೂದ್ವೀಪ, ಅದರಿಂದ ಬೇರ್ಪಟ್ಟು ಈಗಿರುವ ಭಾರತ ಭೂಮಿ "ಭರತಖಂಡ" ಇರಬಹುದು ಎನ್ನಿಸುತ್ತದೆ. ಇದಕ್ಕೆ ಪೋಷಕವಾಗಿ ಮತ್ತೊಂದು ಐತಿಹಾಸಿಕ ಸಂಶೋಧನೆಯನ್ನು ಹೆಸರಿಸಬಹುದು. ಚಮನಲಾಲ್ ಎಂಬುವರು "ಇಂಡಿಯನ್ ಇನ್ ಅಮೆರಿಕ" ಎಂಬ ಗ್ರಂಥವೊಂದರಲ್ಲಿ ಕೆಲವು ಕುತೂಹಲಕಾರಿಯಾದ ಅಂಶಗಳನ್ನು ತಿಳಿಸಿದ್ದಾರೆ. ಅವರು ಮೆಕ್ಸಿಕೊ ಕೊಲ್ಲಿಗೆ ಹೋದಾಗ ಅಲ್ಲಿ ನಮ್ಮ ಭಾರತೀಯ ಮಾದರಿಯ ಊಟ ತಿಂಡಿಗಳು ಸಿಕ್ಕಿದುವಂತೆ. ಅಲ್ಲಿನ ಜನರ ನಡೆನುಡಿ ಸಂಪ್ರದಾಯಗಳು ನಮ್ಮ ಭಾರತೀಯರಂತೆ. ಅಲ್ಲಿ ಯಾವ ಸ್ಥಳದಲ್ಲಿ ಕಾಲಿಟ್ಟರೂ ಒಂದೊಂದು ಹಾವು. ಇದನ್ನು ಕಂಡ ಚಮನ್‌ಲಾಲ್ ಒಂದು ಊಹೆ ಕಟ್ಟಿದರು. ಬಹುಶಃ ಮೆಕ್ಸಿಕೊ ನಮ್ಮ ಪ್ರಾಚೀನರು ತಿಳಿದಿದ್ದ ನಾಗಲೋಕ ಅಥವಾ ಪಾತಾಳಲೋಕ ಇರಬಹುದು ಎಂದು.

ಅವರ ಊಹೆ ಸತ್ಯವಾಯಿತು. ಹೇಗೆಂದರೆ ನಮ್ಮವರು ಪಾತಾಳ ಅಥವಾ ನಾಗಲೋಕಕ್ಕೆ ಹೋಗಬೇಕಾದರೆ ಸಮುದ್ರಗರ್ಭಕ್ಕೇ ಇಳಿಯಬೇಕಾಗಿತ್ತು. ಅಲ್ಲದೆ ಅಲ್ಲಿ ನಾಗಗಳು ಬಹಳ. ಇಂದಿಗೂ ನಮ್ಮ ದೇಶದ ದಕ್ಷಿಣದಲ್ಲಿರುವ ಹಿಂದೂ ಮಹಾಸಾಗರದಲ್ಲಿ ಒಂದು ನೀರಿನ ಅಂತರ್ ಪ್ರವಾಹವು (Water current) ನೇರವಾಗಿ ಮೆಕ್ಸಿಕೊ ಭಾಗಕ್ಕೆ ಹೋಗುತ್ತದೆಯಂತೆ. ಅಂದ ಮೇಲೆ ನಮ್ಮ ಪ್ರಾಚೀನರು ಮೆಕ್ಸಿಕೊವನ್ನು ಪಾತಾಳ ಅಥವಾ ನಾಗಲೋಕ ಎಂದು ಕರೆದಿರುವುದು ಸತ್ಯ.

ಹೀಗೆ ಅಖಂಡ ಭರತಖಂಡಕ್ಕೆ ಒಳಪಟ್ಟ ಒಂದು ಭೂಭಾಗವೇ ಆದದ್ದರಿಂದ ಆಫ್ರಿಕೆಯಲ್ಲಿ ಹೆಜ್ಜೆಹೆಜ್ಜೆಗೂ ಶಿವ ಪ್ರತಿಮೆಗಳು ದೊರೆಯುತ್ತವೆ. ಅಲ್ಲಿನ ಅನೇಕ ಭಾಗಗಳಲ್ಲಿ ಶಿವನ ಪೂಜೆಯೇ ವಿಶೇಷವಾಗಿ ನಡೆಯುತ್ತಿದ್ದಿರಬಹುದು. ಗ್ರೀಕರ ಸಸ್ಯಾಧಿ ದೇವತೆ ಡಯೋನಿಸೂಸ್ ಸ್ಪಷ್ಟವಾಗಿ ಶಿವಲಿಂಗವೇ ಆಗಿದೆ.

ಒಟ್ಟಿನಲ್ಲಿ ಪ್ರಪಂಚದ ಬಹು ಭಾಗಗಳಲ್ಲಿ ಅನಾದಿಕಾಲದಿಂದಲೂ ಶಿವಪೂಜೆ, ಶಿವಧರ್ಮಗಳು ಪ್ರಚಾರದಲ್ಲಿದ್ದುವೆಂದು ಸ್ಪಷ್ಟವಾಗಿ ತಿಳಿದಂತಾಯಿತು.

ಇನ್ನು ಮುಂದೆ, ವಿಶ್ವವ್ಯಾಪಿಯೂ, ಸೃಷ್ಟಿಯಷ್ಟು ಪ್ರಾಚೀನವೂ, ಶ್ರೇಷ್ಠವೂ ಆದ ವೀರಶೈವ ಸಂಸ್ಕೃತಿಯಲ್ಲಿ ಗುರುತಿಸಬಹುದಾದ ಒಂದೆರಡು ಪ್ರಗತಿಪರ ಮಜಲುಗಳನ್ನು ಹೆಸರಿಸ ಬಯಸುತ್ತೇನೆ. ಈ ಮಜಲುಗಳು ಪ್ರಮುಖವಾಗಿ ನಾಲ್ಕು— ಉಗಮ, ಉತ್ಥಾನ, ಪುನರುತ್ಥಾನ ಮತ್ತು ಜಾಗೃತಿ.

ಮೊದಲನೆಯದಾಗಿ ವೀರಶೈವ ಸಂಸ್ಕೃತಿಯ ಉಗಮದ ಬಗ್ಗೆ ಹಿಂದೆಯೇ ವಿವರಣೆ ನೀಡಿದ್ದೇವೆ. ಜಗದ್ಗುರು ರೇಣುಕಾದಿ ಪಂಚಮಹಾ ಆಚಾರ್ಯರುಗಳು ಸಂಸ್ಥಾಪಿಸಿ ಅದರ ಜನನಕ್ಕೆ ಕಾರಣರಾದರು.

ಎರಡನೆಯದಾಗಿ, ವೀರಶೈವ ಸಂಸ್ಕೃತಿಯ ಉತ್ಥಾನ ಆದದ್ದು ಕ್ರಿ.ಶ. 12 ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಅಲ್ಲಮ, ಬಸವ, ಚನ್ನಬಸವ, ಸಿದ್ಧರಾಮಾದಿ ಪ್ರಮಥರ ಕೈಯಲ್ಲಿ. ವೀರಶೈವ ಧರ್ಮ ಬಹುಶಃ ವಿಶ್ವಧರ್ಮವಾಗಿ ಮೆರೆದದ್ದು ಆ ಪುಣ್ಯಪುರುಷರ ತಪಶ್ಶಕ್ತಿಯಿಂದ ಎಂದು ಹೇಳಬಹುದು. ಅಂದು ರಾಜಕೀಯ ಕ್ರಾಂತಿ, ಸಾಹಿತ್ಯ ಕ್ರಾಂತಿ, ಸಮಾಜಿಕ ಕ್ರಾಂತಿಗಳ ಜೊತೆಯಲ್ಲಿ ಧರ್ಮಕ್ರಾಂತಿ ಆಗಿ ಮುಗಿಯಿತು. ವಿಶ್ವದ ಇತಿಹಾಸದಲ್ಲೆ ಕರ್ನಾಟಕದ ಶರಣರ ಸಾಧನೆ ಒಂದು ಸುವರ್ಣ ಸಂಪುಟವಾಗಿ ಉಳಿದಿದೆ.

ಮೂರನೆಯದು ಪುನರುತ್ಥಾನ. ಇದು ಆದದ್ದು ಕ್ರಿ.ಶ. ೧೫ ನೆಯ ಶತಮಾನದಲ್ಲಿ ನಿತ್ಯ ನಿರಂಜನ ಪರಂಜ್ಯೋತಿ ಸ್ವರೂಪರಾದ ಶ್ರೀ ತೋಂಟದ ಸಿದ್ಧಯತಿವರೇಣ್ಯರ ದಿವ್ಯ ದಿನಗಳಲ್ಲಿ. ಪ್ರಾಚೀನವೂ, ಪ್ರಬುದ್ಧವೂ ಆದ ವೀರಶೈವ ಧರ್ಮವೆಂಬ ಸೂರ್ಯನನ್ನು ಪರಸಮಯ ರಾಹು ಹಿಡಿಯಿತೆಂದು ತೋರುತ್ತದೆ. ಆದರೆ ಶ್ರೀ ತೋಂಟದ ಸಿದ್ಧಲಿಂಗರು ಆ ರಾಹುಗ್ರಸ್ಥ ಸೂರ್ಯನಿಗೆ ಮೋಕ್ಷವನ್ನು ನೀಡಿ, ಅದು ಸ್ವಪ್ರಕಾಶದಿಂದ ಬೆಳಗುವಂತೆ ಮಾಡಿದರು. ಆ ಪುಣ್ಯಪುರುಷರ ಕಾಲ ವೀರಶೈವ ಧರ್ಮದ ಪುನರುತ್ಥಾನ ಕಾಲ ಎಂದು ಕರೆದಿದ್ದೇವೆ.

ನಾಲ್ಕನೆಯದಾಗಿ ಉಳಿದಿರುವ ಕಾಲ ನಾವು ನೀವು ಕಾಣುತ್ತಿರುವ ಕಾಲ. ಇದು ಜಾಗೃತಿಯ ಕಾಲ. ಇಂದು ಧರ್ಮ ಮತ್ತು ಸಂಸ್ಕೃತಿಗಳ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದು ನಡೆಯಬೇಕು. ಅರ್ಥವಿಲ್ಲದ ಆವೇಶಕ್ಕೆ ಬಲಿಯಾಗಬಾರದು. ಇದರಿಂದ ವ್ಯಕ್ತಿ ನಾಶ, ವ್ಯಕ್ತಿತ್ವದ ನಾಶ. ತನ್ಮೂಲಕ ಇಡೀ ಸಮಾಜಕ್ಕೇ ಸಂಪೂರ್ಣ ಅಪಾಯವಿದೆ. ಇಂದು ಎಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಆದುದರಿಂದಲೇ ಇದನ್ನು ನಾವು ಜಾಗೃತಿಯ ಕಾಲ ಎಂದು ಕರೆದದ್ದು.

ಧರ್ಮ ಸಂಸ್ಕೃತಿಗಳ ಸಂಶೋಧನೆಯ ಕಡೆಗೆ ಧರ್ಮಪೀಠಗಳೂ, ದಾರ್ಶನಿಕರೂ, ಧರ್ಮಾಭಿಮಾನಿಗಳೂ ಗಮನ ಹರಿಸಿ ಒಂದಾಗಿ ಚೆಂದಾಗಿ ದುಡಿಯಲಿ ಎಂದು ಹಾರಯಿಸೋಣ.

ನುಡಿಮುತ್ತುಗಳು

ಸ್ವಪ್ರತಿಷ್ಠೆಗೆ ಸಮನಾದ ದುರ್ಗುಣವಿಲ್ಲ.
ಶುದ್ಧಹೃದಯ ಭಗವಂತನ ದರ್ಶನಕ್ಕೆ ಹೋಗುವ ಹೆಬ್ಬಾಗಿಲು.
ಆಯುಸ್ಸು ಅತ್ಯಲ್ಪವಾಗಿದೆ, ಕಾಲಧಾವಿಸುತ್ತಿದೆ, ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿರಿ.

OUR VENERATIONS TO

JAGADGURU

PANCHACHARYAS

Phone : Office : 25701
Resi : 74943

N. M. RAMASWAMY & Co.,

Distributors for Gwalior Suitings for Mysore State

and

ANANDTEX

(DEALERS IN TEXTILES)

SREE MARKET, M. P. LANE, CHICKPET,

BANGALORE-2 A

Phone : 70101

ಡಾ॥ ಸಿದ್ಧಪ್ಪಾರಾಧ್ಯರು

ವೀರಶೈವ ಭಾಷ್ಯಗಳು

ವ್ಯಾಸಮಹರ್ಷಿ ರಚಿಸಿರುವ ಬ್ರಹ್ಮಸೂತ್ರಗಳು, ಮಹಾಭಾರತದ ಸಾರಸರ್ವಸ್ವವೆನಿಸಿದ ಭಗವದ್ಗೀತೆ, ಉಪನಿಷತ್ತುಗಳು ಇವು ಆಧ್ಯಾತ್ಮ ಸಾಧಕರಿಗೆ ಕೈದೀವಿಗೆಗಳಂತೆ ಮಾರ್ಗದರ್ಶಕವೆನಿಸಿವೆ. ಆದ್ದರಿಂದಲೇ ಇವು ಪ್ರಸ್ಥಾನತ್ರಯವೆಂದು ಪ್ರಸಿದ್ಧವಾಗಿವೆ. ಇವುಗಳಲ್ಲಿ ಬ್ರಹ್ಮಸೂತ್ರಗಳು ಬ್ರಹ್ಮದ ಸ್ವರೂಪವನ್ನು ವಿವೇಚಿಸುವ ಲಕ್ಷಣಗ್ರಂಥಗಳೆನಿಸಿದರೆ ಗೀತೆ ಮತ್ತು ಉಪನಿಷತ್ತುಗಳು ಆ ಲಕ್ಷಣವನ್ನು ಉದಾಹರಣಗಳ ಮೂಲಕ ಸಮನ್ವಯ ಮಾಡುತ್ತ ಸಾಧಕರ ಗಮನವನ್ನು ಬ್ರಹ್ಮಸೂತ್ರಗಳ ಕಡೆಗೆ ಸೆಳೆಯುತ್ತಲಿವೆ. ಬ್ರಹ್ಮಸೂತ್ರಗಳ ಅರ್ಥವು ಸುಲಭವಾಗಿ ಎಲ್ಲರಿಗೂ ತಿಳಿಯುವಂತಿಲ್ಲ. ಮಿತವಾದ ಪದಗಳಲ್ಲಿ ಸಂದೇಹಕ್ಕೆ ಎಡೆಯಿಲ್ಲದಂತೆ ಅಪಾರವಾದ ಅರ್ಥವನ್ನು ನಿರ್ದುಷ್ಟವಾದ ರೀತಿಯಲ್ಲಿ ವಿಶ್ವಕ್ಕೂ ಅನ್ವಯಿಸುವಂತೆ ತಿಳಿಸುವುದೇ ಸೂತ್ರದ ಲಕ್ಷಣ. ಆದ್ದರಿಂದಲೇ ಬ್ರಹ್ಮಸೂತ್ರಗಳಿಗೆ ವಿವರಣಗಳ ಆವಶ್ಯಕತೆ ಅನಿವಾರ್ಯವೆನಿಸಿದೆ. ಆ ವಿವರಣವಷ್ಟೇ ಅಲ್ಲದೆ ಅದನ್ನು ಸಮನ್ವಯ ಮಾಡಲಿಕ್ಕೆ ಗೀತೋಪನಿಷತ್ತುಗಳು ಉದಾಹರಣೆಗಳನ್ನು ಒದಗಿಸಬೇಕಾಯಿತು. ಬ್ರಹ್ಮಸೂತ್ರಗಳ ವಿವರಣವೇ ವೃತ್ತಿ ಎಂದೂ ಭಾಷ್ಯವೆಂದೂ ಲೋಕದಲ್ಲಿ ರೂಢಿಗೆ ಬಂದಿದೆ.

ಈ ಬ್ರಹ್ಮಸೂತ್ರಗಳಿಗೆ ಪ್ರತಿಯೊಂದು ಮತದವರೂ ತಮ್ಮ ತಮ್ಮ ಸಿದ್ಧಾಂತ ಸಂಪ್ರದಾಯ ಮಾರ್ಗಗಳಿಗನುಗುಣವಾಗಿ ವೃತ್ತಿಯನ್ನೂ ಭಾಷ್ಯವನ್ನೂ ಬರೆದಿರುವರು. ಹಾಗೆಯೇ ವೀರಶೈವಾಚಾರ್ಯರೂ ತಮ್ಮ ಸಿದ್ಧಾಂತ ಸಂಪ್ರದಾಯಗಳಿಗೆ ಅನುಗುಣವಾಗಿ ಬ್ರಹ್ಮಸೂತ್ರಗಳಿಗೆ ವೃತ್ತಿಯನ್ನೂ ಭಾಷ್ಯವನ್ನೂ ಬರೆದಿರುವರು. ಈ ವೃತ್ತಿಯೇ ಅಗಸ್ತ್ಯವೃತ್ತಿ ಎಂದೂ ಭಾಷ್ಯವು ಶ್ರೀಕರಭಾಷ್ಯವೆಂದೂ ಪ್ರಸಿದ್ಧವಾಗಿವೆ.

> ಅಗಸ್ತ್ಯ ಮುನಿಚಂದ್ರೇಣ ಕೃತಾಂ ವೈಯಾಸಿಕೀಂ ಶುಭಾಂ!
> ಸೂತ್ರವೃತ್ತಿಂ ಸಮಾಲೋಕ್ಯ ಕೃತಂಭಾಷ್ಯಂ ಶಿವಂಕರಂ॥

ಹೀಗೆ ಶ್ರೀಪತಿ ಪಂಡಿತಾರಾಧ್ಯರು ಶ್ರೀಕರಭಾಷ್ಯದ ಆರಂಭದಲ್ಲಿ ತಿಳಿಸಿರುವರು. ಇವರು ಕ್ರಿ.ಶ. ಹನ್ನೊಂದನೆಯ ಶತಮಾನದ ಕೊನೆಯಲ್ಲಿ ಶ್ರೀಶೈಲ ಪೀಠದ ಅಧ್ಯಕ್ಷರಾಗಿದ್ದರು. ಇವರು ಬ್ರಹ್ಮ

ವೀರಶೈವ ದರ್ಶನ ಶಾಸ್ತ್ರದಲ್ಲಿ ಮಹಾನ್ ವಿದ್ವಾಂಸರಾಗಿ ಸಲವತ್ತಕ್ಕೂ ಹೆಚ್ಚಿನ ಉತ್ತಮ ಗ್ರಂಥಗಳನ್ನು ರಚಿಸಿರುವ ಸುಂದರ ಶೈಲಿಯ ಡಾ.॥ ಸಿದ್ಧಪ್ಪಾರಾಧ್ಯರು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ರೀಡರ್ ಆಗಿದ್ದಾರೆ. ನಿರಾಡಂಬರ ವ್ಯಕ್ತಿಗಳೂ ಸ್ನೇಹಶೀಲರೂ ಆದ ಶ್ರೀಯುತರ ಗೀತಾಭಾಷ್ಯ, ಶ್ರೀಕರಭಾಷ್ಯದ ಗ್ರಂಥಗಳು ಅಪಾರ ಜನಮನ್ನಣೆ ಗಳಿಸಿವೆ.

ಸೂತ್ರಗಳಿಗೆ ವೀರಶೈವ ಮತಕ್ಕೆ ಹೊಂದಿಕೆಯಾಗುವಂತೆ ಭಾಷ್ಯವನ್ನು ಬರೆಯುವಾಗ ಬಹಳ ಹಿಂದೆಯೇ ಅಗಸ್ತ್ಯ ಮಹರ್ಷಿ ಆ ಬ್ರಹ್ಮಸೂತ್ರಗಳಿಗೆ ಬರೆದಿದ್ದ ವೃತ್ತಿಯನ್ನು ಅನುಸರಿಸಿ ಬರೆದಿರುವುದಾಗಿ ಇಲ್ಲಿ ತಿಳಿಸಿದ್ದಾರೆ.

ಈ ಅಗಸ್ತ್ಯ ಮಹರ್ಷಿ ಮಹಾಭಾರತ ಕಾಲದಲ್ಲಿ ಇದ್ದವರು. ಇವರಿಗೆ ರೇಣುಕಾಚಾರ್ಯರಿಂದ ಶಿವತತ್ತ್ವದ ಉಪದೇಶವಾಗಿತ್ತು. ಆ ಉಪದೇಶವನ್ನು ಅನುಸರಿಸಿ ಅಗಸ್ತ್ಯರು ಲೋಕಕಲ್ಯಾಣಕ್ಕಾಗಿ ಬ್ರಹ್ಮಸೂತ್ರಗಳನ್ನು ವಿವರಿಸಲಿಕ್ಕಾಗಿ ವೃತ್ತಿಯೊಂದನ್ನು ಬರೆದಿರುವರು. ಅದು ಮದರಾಸಿನಲ್ಲಿ ಈಗ ಪ್ರಕಟವಾಗಿದೆ. ಅದರ ಆಧಾರದ ಮೇಲೆ ಶ್ರೀಪತಿ ಪಂಡಿತಾರಾಧ್ಯ ಮಹಾಸ್ವಾಮಿಗಳು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದು ಅದು ಸಾಧಕರ ಭವಬಂಧವನ್ನು ಪರಿಹರಿಸಿ ಜೀವನವನ್ನು ಪಾವನ ಮಾಡಲಿರುವುದೆಂಬ ಆಶಯದಿಂದ ಅದಕ್ಕೆ ಶ್ರೀಕರಭಾಷ್ಯವೆಂದು ಹೆಸರಿಟ್ಟಿರುವರು.

“ವೈದಿಕಾನಾಂ ವಿಶುದ್ಧಾನಾಂ ಏತದ್ಭಾಷ್ಯಂ ಹಿ ಕಲ್ಪಕಂ” ಎಂದು ಅವರು ತಮ್ಮ ಭಾಷ್ಯವನ್ನು ಆಧ್ಯಾತ್ಮ ಸಾಧಕರಿಗೆ ಕಲ್ಪವೃಕ್ಷದಂತೆ ಸರ್ವಾರ್ಥಪ್ರದಾಯಕವೆಂದು ತಿಳಿಸಿದ್ದಾರೆ. ಇವರು ಭಾಷ್ಯವನ್ನು ಆರಂಭಿಸುವ ಮುನ್ನ ವೀರಶೈವ ಸಿದ್ಧಾಂತ ಸಂಪ್ರದಾಯಗಳು ಎಂಥವೆಂಬುದನ್ನು ಸಹ ಸ್ಪಷ್ಟಪಡಿಸಿರುವರು. ಅದನ್ನು ಹೀಗೆ ತಿಳಿಸಿದ್ದಾರೆ.

ಶ್ರುತ್ಯೇಕದೇಶ ಪ್ರಾಮಾಣ್ಯಂ ದ್ವೈತಾದ್ವೈತಮತಾದಿಷು॥
ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತ ಸಂಜ್ಞಕೇ॥
ವೀರ ಶೈವೈಕಸಿದ್ಧಾಂತೇ ಸರ್ವಶ್ರುತಿ ಸಮನ್ವಯಃ!

ಶ್ರೀಪತಿ ಪಂಡಿತಾರಾಧ್ಯರು ತಮ್ಮ ಭಾಷ್ಯಕ್ಕೆ ಅನುಸರಿಸಿರುವ ನಿಯಮವನ್ನು ತಮಗಷ್ಟೇ ಅಲ್ಲದೆ ಮುಂದೆ ಬೇರೆಯವರು ಬರೆಯಲಿರುವ ಭಾಷ್ಯಗಳಿಗೂ ಆಧಾರವಾಗುವಂತೆ ಸ್ಪಷ್ಟವಾಗಿ ತಿಳಿಸಿರುವರು. ಬ್ರಹ್ಮಸೂತ್ರಗಳಲ್ಲಿ ತಿಳಿಸಿರುವ ಬ್ರಹ್ಮದ ಲಕ್ಷಣವನ್ನು ಸಮನ್ವಯ ಮಾಡಲಿಕ್ಕೆ ಹೊರಟಿರುವ ಶ್ರುತಿಗಳಲ್ಲಿ ಅಧಿಕಾರಿಗಳ ವೈವಿಧ್ಯಕ್ಕೆ ಅನುಗುಣವಾಗಿ ಅಭಿಪ್ರಾಯ ಭೇದಗಳು ಬಂದಿವೆ. ಅಧಿಕಾರಿಗಳೆಲ್ಲರೂ ಒಂದೇ ಬಗೆಯಾಗಿರುವುದಿಲ್ಲ. ಮಂದಾಧಿಕಾರಿಗಳಿಗೆ ರುಚಿಸಿದ್ದು ಮಧ್ಯಮಾಧಿಕಾರಿಗಳಿಗೆ ರುಚಿಸದು. ಮಧ್ಯಮಾಧಿಕಾರಿಗಳಿಗೆ ಇಷ್ಟವಾದ್ದು ಉತ್ತಮಾಧಿಕಾರಿಗಳಿಗೆ ಇಷ್ಟವಾಗಲಾರದು. ಆದ್ದರಿಂದಲೇ ಶಬ್ದ ಪ್ರಮಾಣವೆನಿಸಿದ ಶ್ರುತಿಯಲ್ಲಿ ಅಭಿಪ್ರಾಯ ವಿರೋಧವು ಕಂಡುಬಂದಿದೆ. ಇದನ್ನು ಸಮನ್ವಯ ಮಾಡಲಿಕ್ಕೆ ಬ್ರಹ್ಮಸೂತ್ರಗಳಲ್ಲಿ ಅವಿರೋಧಾಧ್ಯಾಯ, ಸಮನ್ವಯಾಧ್ಯಾಯ ಎಂದು ಎರಡು ಮುಖ್ಯ ವಿಭಾಗಗಳು ಏರ್ಪಟ್ಟಿವೆ. ಇವುಗಳಿಗೆ ಶ್ರೀಕರಭಾಷ್ಯವು ವೀರಶೈವ ಸಿದ್ಧಾಂತಕ್ಕೆ ಅನುಗುಣವಾಗಿ ವಿರೋಧವನ್ನು ಪರಿಹರಿಸುವ ಮೂಲಕ ಸೂಕ್ತವಾದ ಸಮನ್ವಯವನ್ನು ಏರ್ಪಡಿಸಿದೆ.

ದೇಹೇಂದ್ರಿಯಗಳಿಗೆ ಆಶ್ರಯವಾಗಿ ಅವುಗಳಿಂದ ದುಡಿಸಿ ಭೋಗಿಸುತ್ತಿರುವ ಜೀವಾತ್ಮನೊಬ್ಬನಿರುವ ಬಗ್ಗೆ ಯಾರಿಗೂ ವಿರೋಧವಿಲ್ಲ. ಇವನಿಗೆ ಆಶ್ರಯವಾಗಿ ಎಲ್ಲವನ್ನೂ ತನ್ನೊಳಗೆ ಸೇರಿಸಿಕೊಂಡು ಒಳಗೂ ಹೊರಗೂ ವ್ಯಾಪಿಸಿರುವ ಪರಮಾತ್ಮನೊಬ್ಬನಿರುವನೆಂಬ ಬಗ್ಗೆ ವಾದವಿವಾದಗಳು ನಡೆಯುತ್ತಲಿವೆ. ಜೀವನಲ್ಲದೆ ಬೇರೆ ಪರಮಾತ್ಮನಿಲ್ಲವೆಂದೂ ಈ ಜೀವನೇ ಪರಮಾತ್ಮನೆಂದೂ ಇವನೂ ಅವನೂ ಇಬ್ಬರೂ ಇರುವರೆಂದೂ, ಇವನು ಅವನಿಗೆ ವ್ಯಾಪಿಸಲು ಶರೀರವಾಗಿರುವನೆಂದೂ ದಾರ್ಶನಿಕರು ಬೇರೆ ಬೇರೆ ಅಭಿಪ್ರಾಯಗಳಿಗೆ ಬಂದಿರುವರು. ಇವರೇ ಅದ್ವೈತಿಗಳು, ದ್ವೈತಿಗಳು, ವಿಶಿಷ್ಟಾದ್ವೈತಿಗಳು ಎಂದು ವಿಶ್ರುತರಾಗಿರುವರು. ಇವರೆಲ್ಲರಿಗೂ ಅವರವರ ಇಷ್ಟದಂತೆಯೇ ಶ್ರುತಿ ಸಮಾಧಾನ ಪಡಿಸುತ್ತಲಿದೆ. ತಾನೇ ಬ್ರಹ್ಮವೆಂದು ತಿಳಿಸುವ ಅದ್ವೈತ ಶ್ರುತಿಯು ಅದ್ವೈತಿಗಳನ್ನು ಸಮಾಧಾನ ಮಾಡಿದರೆ ಪ್ರಭು ಭೃತ್ಯ ಭಾವವನ್ನು ಅವಲಂಬಿಸಿದ ದ್ವೈತಿಗಳಿಗೆ ಅದರಿಂದ ಅಷ್ಟು ಸಮಾಧಾನವಿರುವುದಿಲ್ಲ. ದ್ವೈತಿಗಳನ್ನೂ ಅದ್ವೈತಿಗಳನ್ನೂ ಸಮಾಧಾನ ಮಾಡಲಿಕ್ಕಾಗಿ ವಿಶಿಷ್ಟಾದ್ವೈತಿಗಳು ಪರಮಾತ್ಮನನ್ನು ಅಂತರಾತ್ಮನನ್ನಾಗಿಯೂ ಜೀವಾತ್ಮರನ್ನು ಅವನ ಶರೀರಗಳನ್ನಾಗಿಯೂ ಪರಿಗ್ರಹಿಸಿದರು. ಜೀವ ಪರಮರಿಬ್ಬರನ್ನೂ ಸತ್ಯರೆಂದು ತಿಳಿಸುವ ದ್ವೈತ ಶ್ರುತಿಗಳು ದ್ವೈತಿಗಳಿಗೆ ಪ್ರಮಾಣವೆನಿಸಿದರೆ ಅದ್ವೈತಿಗಳಿಗೆ ವಿರೋಧವಾಗಿರುತ್ತವೆ. ಜೀವನನ್ನೇ ಬ್ರಹ್ಮವೆಂದು ಭಾವಿಸುವ ಅದ್ವೈತಿಗಳಿಗೆ ದ್ವೈತ ಶ್ರುತಿಗಳು ಪ್ರಮಾಣವಾಗಲಾರವು. ಹೀಗೆ ಶ್ರುತಿಯಲ್ಲಿ ಒಂದೊಂದು ಅಂಶವನ್ನು ಪ್ರಮಾಣವೆಂದು ಕೆಲವರು ಅಂಗೀಕರಿಸಿದರೆ ಸರ್ವರಿಗೂ ಪ್ರಬಲ ಪ್ರಮಾಣವೆನಿಸಿರುವ ಶ್ರುತಿಯಲ್ಲಿ ಹೇಳಿರುವುದೆಲ್ಲವನ್ನೂ ಪ್ರಮಾಣವೆಂದು ಅಂಗೀಕರಿಸಲಿಕ್ಕಾಗಿ ವೀರಶೈವ ಮತವು ಮುಂದೆ ಬಂದಿತು. ಆದ್ದರಿಂದಲೇ ವೀರಶೈವ ಮತವನ್ನು ದ್ವೈತಾದ್ವೈತ ಮತವೆಂದೂ, ಸರ್ವಶ್ರುತಿ ಸಮನ್ವಯ ಮತವೆಂದೂ ಅದರ ಸಿದ್ಧಾಂತವನ್ನು ವಿಶೇಷಾದ್ವೈತವೆಂದೂ, ಶಕ್ತಿವಿಶಿಷ್ಟಾದ್ವೈತವೆಂದೂ ಕರೆಯಲಾಗಿದೆ.

ವೀರಶೈವ ಸಿದ್ಧಾಂತದ ಪ್ರಕಾರ ಜೀವನು ಪರಮಾತ್ಮನ ಚೇತನಾಂಶನಾಗಿದ್ದು ಶಕ್ತಿಯಿಂದ ಬೇರೆಯಾಗಿರುವನು. ಪರಮಾತ್ಮನು ಚಿಚ್ಛಕ್ತಿ ವಿಶಿಷ್ಟನಾಗಿದ್ದರೆ ಅವನ ಅಂಶನಾದ ಜೀವನು ಚಿತ್ತಶಕ್ತಿ ವಿಶಿಷ್ಟನಾಗಿರುವನು. ಚಿಚ್ಛಕ್ತಿ ಎಂದರೆ ಪರಮಾತ್ಮನ ಪ್ರಾಣಶಕ್ತಿ. ‘ಸತ್ಯಾತ್ಮ ಪ್ರಾಣಾರಾಮಂ’ ಎಂಬ ಶ್ರುತಿಯು ಸತ್ಸ್ವರೂಪನಾದ ಪರಮಾತ್ಮನು ತನ್ನ ಪ್ರಾಣಶಕ್ತಿಯಲ್ಲಿ ಸದಾ ರಮಿಸುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಇದು ಪರಮಾತ್ಮನಂತೆಯೇ ಸತ್, ಚಿತ್ ಆನಂದ ರೂಪವಾಗಿರುವುದು. ಇಂತಹ ಚಿತ್ ಶಕ್ತಿಯು ತನ್ನ ಸಚ್ಚಿದಾನಂದ ಸ್ಥಿತಿಯನ್ನು ಕಳೆದುಕೊಂಡು ಸತ್ತ್ವರಜಸ್ತಮೋರೂಪದಿಂದ ಚಿತ್ತ ಅಥವಾ ಮಾಯೆ ಎನಿಸುವುದು. ಇದೇ ಮನಸ್ಸು, ಬುದ್ಧಿ ಅಹಂಕಾರ ದೇಹ,

ಇಂದ್ರಿಯಗಳಾಗಿ ಪರಣಮಿಸಿರುವುದು. ಇದರಿಂದಲೇ ಜೀವನಿಗೆ ಅನ್ನಮಯವೇ ಮೊದಲಾದ ಐದು ಕೋಶಗಳು ಏರ್ಪಟ್ಟಿರುವುವು. ಇವುಗಳೊಳಗೆ ಸೇರಿಕೊಂಡಿರುವ ಜೀವನು ತಾನೇ ದೇಹದ ಅಧಿಪತಿ ಎಂದು ಭಾವಿಸಿ ತನ್ನ ಮೂಲಸ್ಥಿತಿಯನ್ನು ಮರೆಯುವನು. ಇಂತಹ ಚಿತ್ತ ಶಕ್ತಿ ವಿಶಿಷ್ಟ ಜೀವನಿಗೆ ಚಿತ್‌ಶಕ್ತಿ ವಿಶಿಷ್ಟ ಪರಮಾತ್ಮನೊಡನೆ ಅದ್ವೈತ ಅಂದರೆ ಸಾಮರಸ್ಯವನ್ನು ವೀರಶೈವ ಸಿದ್ಧಾಂತವು ಪ್ರತಿಪಾದಿಸುತ್ತದೆ. ಇದರಿಂದ ಶ್ರುತಿಯಲ್ಲಿ ಎಲ್ಲವನ್ನೂ ಒಪ್ಪಿಕೊಂಡಂತಾಗುತ್ತದೆ. ಜೀವನು ಪರಮಾತ್ಮನ ಸಾಕ್ಷಾದಂಶನಾದರೂ ಮಾಯೆ ಅಥವಾ ಚಿತ್ತದ ನಿತ್ಯ ಸಂಪರ್ಕದಿಂದ ಪರಮಾತ್ಮನನ್ನು ಪೂರ್ಣವಾಗಿ ಮರೆತು ಅವನಿಂದ ಬೇರೆಯೇ ಆಗಿರುವನು. ಹೀಗೆ ಜೀವ ಪರಮರಿಬ್ಬರಿಗೂ ಸಂಸಾರ ದಶೆಯಲ್ಲಿ ಸಹಜವಾಗಿ ಬೇರೆಯೇ ಆಗಿರುವುದರಿಂದ 'ದ್ವಾಸು ಪರ್ಣಾ' ಮೊದಲಾದ ದ್ವೈತ ಶ್ರುತಿಗಳನ್ನು ಪೂರ್ಣವಾಗಿ ಒಪ್ಪಿದಂತಾಯಿತು. ಜೀವನೇ ಗುರುವಿನಿಂದ ಶಿವದೀಕ್ಷೆಯನ್ನು ಪಡೆದು ದೇಹದಲ್ಲಿ ತನ್ನೊಡನೆ ಶಿವನು ನೆಲೆಸಿರುವುದನ್ನು ತಿಳಿದು ಅವನಿಗೆ ಶರಣಾಗತನಾಗಿ ಅವನೊಡನೆ ಸಮರಸವಾಗಿ ಬೆರೆಯುವುದರಿಂದ ಅದ್ವೈತಾನಂದವನ್ನು ಇಲ್ಲಿಯೇ ಈ ಪ್ರಸಾದಕಾಯದಲ್ಲಿ ಅನುಭವಿಸಬಲ್ಲನಾದ್ದರಿಂದ "ಅತ್ರ ಬ್ರಹ್ಮಸಮಶ್ನುತೇ", "ಅಮೃತ ಇಹ ಭವತಿ" ಮೊದಲಾದ ಅದ್ವೈತ ಶ್ರುತಿಗಳು ಮೋಕ್ಷದಶೆಯಲ್ಲಿ ಜೀವನಿಗೆ ಅನ್ವಯಿಸುತ್ತವೆ. ಜೀವನು ಭಕ್ತಿಯಿಂದ ಪರಶಿವನನ್ನು ಉಪಾಸನೆ ಮಾಡುತ್ತ ಭೇದಭಾವವನ್ನು ಕ್ರಮವಾಗಿ ಕಳೆದುಕೊಂಡು ಅಭೇದಾನಂದವನ್ನು ಇಲ್ಲಿಯೇ ಅನುಭವಿಸುವ ಪ್ರಯುಕ್ತ ಕಾಲಭೇದದಿಂದಲೂ ಅವಸ್ಥಾ ಭೇದದಿಂದಲೂ ಅವನಿಗೂ ಪರಶಿವನಿಗೂ ಭೇದಾಭೇದ ಶ್ರುತಿಗಳೆರಡೂ ಯುಕ್ತವಾಗಿ ಅನ್ವಯಿಸುತ್ತವೆ. ಹೀಗೆ ಎರಡು ಬಗೆಯ ಶ್ರುತಿಗಳಿಗೂ ಅನ್ವಯಿಸುವಂತೆ ಜೀವ ಪರಮರ ಸ್ವರೂಪಗಳನ್ನು ಚಿತ್ರಿಸುವುದೇ ವೀರಶೈವ ಮತದ ವೈಶಿಷ್ಟ್ಯವೆನಿಸಿದೆ.

ಇದು ಶಿವಾಗಮಗಳ ಕಾಲದಿಂದಲೂ ವೇದಗಳ ಕಾಲದಿಂದಲೂ ಶಿವದೀಕ್ಷೆಯ ಮೂಲಕ ಸರ್ವಜೀವರಿಗೂ ಅನುಭವಕ್ಕೆ ಬರುತ್ತಲಿದೆ. "ಪವಿತ್ರಂತೇ" ಎಂಬ ಋಗ್ವೇದ ಮಂತ್ರವು ಮಾನವರ ಸ್ಥೂಲ ಸೂಕ್ಷ್ಮ ಕಾರಣ ದೇಹಗಳಲ್ಲಿ ಪರಮಾತ್ಮನು ಇಷ್ಟ ಪ್ರಾಣ ಭಾವ ರೂಪಗಳಿಂದ ನೆಲೆಸಿರುವನೆಂದೂ ಇದರ ಪರಿಚಯವನ್ನು ಗುರುವು ದೀಕ್ಷಾ ಕಾಲದಲ್ಲಿ ಶಿಷ್ಯನಿಗೆ ಮಾಡಿಕೊಡುವನೆಂದೂ ಇದರಿಂದ ಸ್ಥೂಲ ದೇಹಕ್ಕೆ ಅಂಟಿಕೊಂಡಿದ್ದ ಸ್ವಾರ್ಥತೆ ಎಂಬ ಆಣವ ಮಲವೂ, ಸೂಕ್ಷ್ಮ ದೇಹಕ್ಕೆ ಅಂಟಿಕೊಂಡಿದ್ದ ವ್ಯಾಮೋಹವೆಂಬ ಮಾಯೆಯ ಮಲವೂ, ಕಾರಣ ದೇಹಕ್ಕೆ ಅಂಟಿಕೊಂಡಿದ್ದ ಅಹಂಕಾರವೆಂಬ ಕಾರ್ಮಿಕ ಮಲವೂ ತೊಲಗುವುದೆಂದೂ, ಶಿವಜ್ಞಾನವೆಂಬ ಬೆಂಕಿಯಲ್ಲಿ ಜೀವನು ಬೆಂದು ತನ್ನ ಮಲಗಳನ್ನು ನೀಗಿಕೊಂಡು ನಿರ್ಮಲನಾಗುವನೆಂದೂ ಆ ಮಂತ್ರವು ತಿಳಿಸುತ್ತದೆ.

ಇದೇ ಅಂಶವನ್ನು "ತಸ್ಯಾಭಿಧ್ಯಾನಾತ್ ಯೋಜನಾತ್ ತತ್ತ್ವಭಾವಾತ್ ಭೂಯಶ್ವಾಂತೇ ವಿಶ್ವಮಾಯಾ ನಿವೃತ್ತಿಃ" ಎಂಬ ಶ್ವೇತಾಶ್ವತರ ಶ್ರುತಿಯು ಜೀವನಿಗೆ ಪರಮಾತ್ಮನ ನಿತ್ಯ ಸಂಪರ್ಕದಿಂದಲೂ ನಿರಂತರ ಧ್ಯಾನದಿಂದಲೂ ಸಾಮರಸ್ಯದ ಅನುಭವದಿಂದಲೂ ಎಲ್ಲಾ ಬಗೆಯ ಮಾಯಾ ವ್ಯಾಮೋಹಾಭಿಮಾನಗಳೂ ತೊಲಗುವುವೆಂಬ ಅಂಶವನ್ನು ಸ್ಪಷ್ಟಪಡಿಸಿದೆ. ಇದರಂತೆಯೇ ಭಗವದ್ಗೀತೆಯೂ ಸಹ ಜೀವಪರಮರ ಸಂಯೋಗದಿಂದ ಜೀವನು ಹೇಗೆ ನಿರ್ಮಲನಾಗುವನೆಂಬುದನ್ನು ತಿಳಿಸುತ್ತದೆ.

ಅನನ್ಯಾಶ್ಚಿಂತಯಂತೋಮಾಂ ಯೇ ಯೇಜನಾಃ ಪರ್ಯುಪಾಸತೇ ॥
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ॥

ಇದರಲ್ಲಿ ಜೀವರು ನಿರಂತರ ಚಿಂತನೆಯಿಂದಲೂ, ಶರಣಾಗತಿಯಿಂದಲೂ, ಪರ್ಯುಪಾಸನದಿಂದಲೂ, ನಿತ್ಯಾಭಿಯೋಗದಿಂದಲೂ ಪರಮಾತ್ಮನ ಅನುಭವವನ್ನು ಪಡೆಯುತ್ತ ಬಂದರೆ ಅವನು ಅವರ ಯೋಗಕ್ಷೇಮಗಳನ್ನು ವಹಿಸಿಕೊಳ್ಳುವನೆಂದು ಹೇಳಿದೆ. ಇಲ್ಲಿ ಯೋಗವೆಂದರೆ ಜೀವರಿಗೆ ಅವರ ಸನಾತನ ಸ್ಥಿತಿಯಲ್ಲಿ ಸಮರಸವಾಗಿ ಬೆರೆಯುವಿಕೆ ಎಂದು ಅರ್ಥ. ಕ್ಷೇಮವೆಂದರೆ ಬ್ರಹ್ಮಭಾವದಲ್ಲಿ ಜೀವರು ಬೆರೆತು ಸರ್ವವನ್ನು ಬ್ರಹ್ಮದೃಷ್ಟಿಯಿಂದ ಕಾಣುತ್ತ ಬ್ರಹ್ಮಾನಂದದ ಅನುಭವದಲ್ಲಿಯೇ ಇದ್ದು ನಿರ್ಲಿಪ್ತತೆಯಿಂದಲೂ ಸಮದೃಷ್ಟಿಯಿಂದಲೂ ಲೋಕದ ವ್ಯವಹಾರಗಳನ್ನು ನಡೆಸುವುದೆಂದು ಅರ್ಥ. ಮಾನವರು ಆಧ್ಯಾತ್ಮ ಸಾಧನೆಯಿಂದ ಗಳಿಸಬೇಕಾದ ಪರಮೈಶ್ವರ್ಯವೆಂದರೆ ಇದೇಯೆ. ದೇಹದೊಳಗೆ ಇಂದ್ರಿಯಗಳೊಡನೆ ವ್ಯವಹರಿಸುತ್ತಿರುವ ಜೀವನು ಅಲ್ಲಿಯೇ ನಿರ್ಲಿಪ್ತತೆಯಿಂದ ಅವ್ಯಕ್ತನಾಗಿ ನೆಲೆಸಿರುವ ಪರಮಾತ್ಮನನ್ನು ಗುರುವಿನಿಂದ ಅರಿತು ಆಗಾಗಲೇ ಇಂದ್ರಿಯ ಫಲಗಳನ್ನು ಅವನಿಗೆ ಸಮರ್ಪಿಸುತ್ತ ಅಹಂಕಾರ ಮಮಕಾರಗಳ ದಾಂಧಲೆಗೆ ಸಿಲುಕದೆ ಮುಂಜಾನೆಯಿಂದ ಸಂಜೆಯವರೆಗೆ ಮಾಡುವುದೆಲ್ಲವನ್ನೂ ಪರಮಾತ್ಮನ ಆರಾಧನವೆಂದು ಭಾವಿಸಿ ಪ್ರತಿ ನಿಮಿಷವೂ ಅವನ ಸ್ಮರಣದಲ್ಲಿಯೇ ಇದ್ದು ತನ್ನ ದೇಹದ ಸತ್ತ್ವರಜಸ್ತಮೋಗುಣಗಳನ್ನು ಸಹ ಸತ್ ಚಿತ್ ಆನಂದಗಳಾಗಿ ಬದಲಾಯಿಸಿಕೊಂಡು ಬಾಳನ್ನು ಹಸನು ಮಾಡಿಕೊಳ್ಳಬೇಕಾದ್ದು ಅವನ ಪಾಲಿಗೆ ಬಂದಿರುವ ಪಂಚಾಮೃತ. ಇಷ್ಟನ್ನು ಸಾಧಿಸಿದರೆಯೇ ಮಾನವ ಜೀವನ ಪಾವನವಾಗಬಲ್ಲದು; ಸುಂದರವೂ ಪರಿಪೂರ್ಣವೂ ವಿಕಸಿತವೂ ಆಗಬಲ್ಲದು. ಇದೇ ಬಾಳಿನ ಕೊನೆಯ ಗುರಿ. ಇದನ್ನು ಪರಮ ಪುರುಷಾರ್ಥವೆಂದು ಅನುಭವಿಗಳು ಕರೆಯುತ್ತಾರೆ.

ಬ್ರಹ್ಮ ಸೂತ್ರಗಳೂ ಗೀತೆಯೂ ಶ್ರುತಿಗಳೂ ಮಾನವರಿಗೆ ಇಂತಹ ಉತ್ತಮ ಗತಿಯನ್ನು ಇಲ್ಲಿಯೇ ಈ ದೇಹದಲ್ಲಿಯೇ ಸಾಧಿಸಿ ಅನುಭವಿಸಬೇಕೆಂದು ಎಚ್ಚರಿಸುತ್ತಲಿವೆ. ಶ್ರೀಪತಿ ಪಂಡಿರಾಧ್ಯ ಸ್ವಾಮಿಗಳು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯು

ವಾಗ ಆಧ್ಯಾತ್ಮ ಸಾಧಕರೆಲ್ಲರಿಗೂ ಇಂತಹ ಉತ್ತಮ ಗತಿ ದೊರಯಲೆಂಬ ಸದಾಶಯದಿಂದ ಹೃದಯಂಗಮವಾದ ವಿವರಣವನ್ನು ಕೊಟ್ಟಿರುವರು. "ಅಪಿ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಂ"(3-2-23) "ಅತೋಽನಂತೇನ ತಥಾಹಿ ಲಿಂಗಂ" (3-2-25) ಎಂಬ ಸೂತ್ರಗಳಲ್ಲಿ ಅವರು ಜಗತ್ತಿಗೆ ಶಿವಾತ್ಮಕತ್ವವನ್ನು ಪ್ರತಿಪಾದಿಸಿ ಶಿವಯೋಗಿಗೆ ಜಗತ್ತು ಶಿವಮಯವಾಗಿಯೇ ಕಾಣುವುದೆಂಬುದನ್ನು ತಿಳಿಸಿರುವರು. ಈ ಸೂತ್ರಗಳಿಗೆ ಅವರು ಶ್ರೀಕರ ಭಾಷ್ಯದಲ್ಲಿ ಹೀಗೆ ವಿವರಣೆ ಮಾಡಿರುವರು. ಸಂರಾಧನವೆಂದರೆ ಸಮ್ಯಕ್‌ರಾಧನಂ. ಅಂದರೆ ಒಳಗೂ ಹೊರಗೂ ಪರಮಾತ್ಮನನ್ನು ನಿರಂತರವೂ ಧರಿಸಿ ಸ್ಮರಿಸುವಿಕೆ; ಅರ್ಚನೆ ಎಂದು ಅರ್ಥ. ಅಂದರೆ ಹೃದಯದಲ್ಲಿ ಪ್ರಾಣಲಿಂಗದ ಧ್ಯಾನ ದೇಹದಲ್ಲಿ ಇಷ್ಟಲಿಂಗದ ಧಾರಣ. ಹೀಗೆ ಪರಮೇಶ್ವರನ ನಿತ್ಯ ಸಂಪರ್ಕವನ್ನು ಜೀವನು ಪೂರ್ಣವಾಗಿ ಪಡೆಯುವುದೇ ಸಂರಾಧನವೆನಿಸುವುದು. ಈ ಬಗೆಯ ಉಪಾಸನ ಮಹಿಮೆಯಿಂದ ಭಕ್ತರಿಗೆ ಅವರವರ ಭಕ್ತಿ ವಿಕಾಸಕ್ಕೆ ಅನುಗುಣವಾಗಿ ಸ್ವಪ್ನದಲ್ಲೂ ಜಾಗ್ರದವಸ್ಥೆಯಲ್ಲೂ ನಿರಾಕಾರ ಪರಮಾತ್ಮನ ಸಾಕ್ಷಾತ್ಕಾರವಾಗುವುದೆಂದು ಶ್ರುತಿಸ್ಮೃತಿಗಳಿಂದ ನಮಗೆ ತಿಳಿದುಬರುವುದು. ಈ ಸೂತ್ರದಲ್ಲಿ ಬಂದಿರುವ ಪ್ರತ್ಯಕ್ಷವೆಂದರೆ ಶ್ರುತಿ; ಅನುಮಾನವೆಂದರೆ ಸ್ಮೃತಿ ಎಂದು ತಿಳಿಯಬೇಕು. ಶ್ರುತಿ ಸ್ವತಂತ್ರವೂ ಪ್ರತ್ಯಕ್ಷವೂ ಆದ ಪ್ರಮಾಣವಾದ್ದರಿಂದ ಪ್ರತ್ಯಕ್ಷವೆನಿಸಿದೆ. ಸ್ಮೃತಿಗೆ ಆಧಾರವಿದ್ದ ಶ್ರುತಿಯನ್ನು ಅನುಮಾನದಿಂದ ಊಹಿಸಿಬೇಕಾಗಿರುವುದರಿಂದ ಸ್ಮೃತಿಯನ್ನು ಅನುಮಾನವೆಂಬ ಪದದಿಂದ ಕರೆಯಲಾಗಿದೆ. ಹೀಗೆ ಜೀವರಿಗೆ ಪರಮಾತ್ಮನನ್ನು ಆರಾಧಿಸುವ ಕಾಲದಲ್ಲಿ ಜಗತ್ತು ಶಿವಾತ್ಮಕವಾಗಿ ಕಾಣುವುದೆಂಬ ಅಂಶವನ್ನು ಶ್ರುತಿ ಸ್ಮೃತಿಗಳು ಸ್ಪಷ್ಟವಾಗಿ ತಿಳಿಸುತ್ತವೆ ಎಂದು ಈ ಎರಡು ಸೂತ್ರಗಳಲ್ಲಿ ವ್ಯಾಸರು ಹೇಳಿದ್ದಾರೆ. ಅತಃ ಶಿವಧ್ಯಾನ ಧಾರಣ ಪೂಜೆಗಳಲ್ಲಿ ನಿರತರಾಗಿ ಜಗದ್ವ್ಯವಹಾರಗಳನ್ನು ಸತ್ಯನಿಷ್ಠೆಯಿಂದಲೂ ಪ್ರಾಮಾಣಿಕತೆಯಿಂದಲೂ ಶಿವಪೂಜೆ ಎಂದು ನಡೆಸುತ್ತಲಿರುವ ಸದ್ಭಕ್ತರು ಶಿವಾನುಗ್ರಹದಿಂದ ಜೀವಭಾವವನ್ನು ಕಳೆದುಕೊಂಡು ಶಿವಭಾವವನ್ನು ಹೊಂದಿರುವುದರಿಂದಲೇ ಅಂತಹ ಸದ್ಭಕ್ತರಿಗೆ ಅನಂತೇನ ಚರಾಚರಾತ್ಮಕವಾದ ಜಗದ್ರೂಪದಿಂದ ಲಿಂಗಂ ಪ್ರಕಾಶತೇ — ಶಿವನೇ ಎಲ್ಲಾ ಕಡೆಯೂ ಕಾಣಿಸುತ್ತಾನೆ ಎಂದು ಶ್ರೀಪತಿ ಪಂಡಿತಾರಾಧ್ಯರು ಈ ಸೂತ್ರಗಳಿಗೆ ಅರ್ಥಮಾಡಿದ್ದಾರೆ. ಅಲ್ಲಿಗೆ ಉಪಾಸಕರಿಗೆ ಉಪಾಸನ ಕಾಲದಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾಗುತ್ತೆಂಬುದು ಖಚಿತವಾಯಿತು. ಪೂಜಾಕಾಲದ ಈ ಬಗೆಯ ಶಿವಾನುಭವವನ್ನು ನಿರಂತರವೂ ಅನುಸಂಧಾನ ಮಾಡುವುದರಿಂದ ಅದೇ ಅಭ್ಯಾಸವಾಗಿ ಮುಂದೆ ಅದೇ ಸ್ವಭಾವವಾಗಿ ವ್ಯವಹಾರ ಕಾಲದಲ್ಲಿ ಜಗತ್ತನ್ನು ಶಿವಮಯವೆಂದೇ ಕಾಣುವ ಪದ್ಧತಿ ಸಹಜವೇ ಆಗುವುದು. ಹೀಗೆ ಶಿವಾನಂದರೂಪವಾದ ಫಲಪ್ರಾಪ್ತಿಗೆ ಶಿವಧ್ಯಾನಧಾರಣರೂಪವಾದ ಉಪಾಸನ ಜ್ಞಾನವೂ ಅದಕ್ಕೆ ಅನುಗುಣವಾದ ಉಪಾಸನಾ ಕ್ರಿಯೆಯೂ ಆವಶ್ಯಕವೆಂಬುದನ್ನು ಬ್ರಹ್ಮಸೂತ್ರದ ಆಧಾರದ ಮೇಲೆ ಶ್ರೀಪತಿ ಪಂಡಿತಾರಾಧ್ಯರು ಸಮರ್ಥನ ಮಾಡಿದ್ದಾರೆ. ಈ ಬಗೆಯ ಜ್ಞಾನ ಕ್ರಿಯೆಗಳಿಂದ ಭಕ್ತನಿಗೆ ಜಗತ್ತು ಶಿವಾತ್ಮಕವಾಗಿಯೇ ಕಾಣುವುದು. ಇದರಲ್ಲಿ ಮಿಥ್ಯಾಕಲ್ಪನೆಯಾಗಲೀ ಆಕಸ್ಮಿಕತೆಯಾಗಲೀ ಎಂದೆಂದಿಗೂ ಸಂಭವಿಸಲಾರದು. "ನ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಂ ಚರಾಚರಂ" ಎಂದು ಗೀತೆಯಲ್ಲಿ ಪರಮಾತ್ಮನು ತಾನಿಲ್ಲದೆ ಯಾವ ವಸ್ತುವೂ ಸ್ವತಂತ್ರವಾಗಿ ಬಾಳಲಾರದೆಂದು ಸಹಜವಾಗಿ ಹೇಳಿದ್ದಾನೆ.

ಜೀವನು ಶಿವಾಂಶನಷ್ಟೇ ಅಲ್ಲದೆ ಜಗತ್ತು ಶಿವಾತ್ಮಕವೆಂಬ ಅಂಶವನ್ನು ಶ್ರೀಪತಿ ಪಂಡಿತಾರಾಧ್ಯರು ತಮ್ಮ ಭಾಷ್ಯದಲ್ಲಿ ಅನೇಕ ಕಡೆಗಳಲ್ಲಿ ಹೃದಯಂಗಮವಾಗಿ ಚಿತ್ರಿಸಿರುವರು. "ಜನ್ಮಾದ್ಯಸ್ಯ ಯತಃ" ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ ಶ್ರೀಪತಿ ಪಂಡಿತಾರಾಧ್ಯರು ತಮ್ಮ ನಿಲುವನ್ನು ಹೀಗೆ ಸಮರ್ಥಿಸಿರುವರು. ನಿರಾಕಾರ ಪರಶಿವನು ತನ್ನ ಪ್ರಾಣಶಕ್ತಿಯೊಡಗೂಡಿ ಜಗತ್ತಿನ ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಕಾರಣವಾಗಿರುವನಲ್ಲದೆ ಜಗತ್ತಿನ ಕಟ್ಟಕಡೆಯ ತಳಹದಿಯೂ ಆಗಿರುವನು. ಅವನು ಹೊರಗಿನ ಯಾವ ಸಾಧನವೂ ಇಲ್ಲದೆ ತನ್ನ ಸ್ವಂತ ಶಕ್ತಿಯಿಂದ ಎಲ್ಲಾ ವಸ್ತುಗಳನ್ನೂ ಸೃಷ್ಟಿಸಿರುವನು. ಆಕಾರವಿಲ್ಲದ ವಾಯು ಅರಣ್ಯದ ಎಲ್ಲಾ ವೃಕ್ಷಗಳನ್ನು ಅಳ್ಳಾಡಿಸುವಂತೆ ಪರಮಾತ್ಮನು ನಿರಾಕಾರನಾಗಿಯೇ ಇರುತ್ತ ಜಗತ್ತಿನ ಎಲ್ಲಾ ಕಾರ್ಯಗಳನ್ನು ನಡೆಸುತ್ತಿರುವನು. ಭಕ್ತರನ್ನು ಅನುಗ್ರಹಿಸಲಿಕ್ಕಾಗಿಯೇ ಅವನು ಎಲ್ಲಾ ಆಕಾರಗಳನ್ನು ಸ್ವೇಚ್ಛೆಯಿಂದ ಧರಿಸಿ ನಮ್ಮೊಡನೆ ಇರುವನು. ಹೀಗೆ ಸರ್ವಾಧಾರನೂ ಸರ್ವಶಕ್ತನೂ ಆದ ಪರಮಾತ್ಮನು ಜಗತ್ತಿಗೆ ಮೂಲಕಾರಣನಾಗಿ ಜಗದಾತ್ಮಕನೂ ಆಗಿರುವುದರಿಂದ ಜಗತ್ತನ್ನು ಮಿಥ್ಯೆ ಎಂದು ಹೇಳುವುದು ಅನುಭವಕ್ಕೆ ವಿರೋಧವಾಗಿ ಕಾಣುವುದು. "ಅಪಾಣಿ ಪಾದೋಜವನೋಗೃಹೀತಾ ಪಶ್ಯತ್ಯಚಕ್ಷುಃ ಸಶೃಣೊತ್ಯಕರ್ಣಃ" ಇತ್ಯಾದಿ ಶ್ರುತಿಗಳಲ್ಲಿ ನಿರವಯವನಾದರೂ ಪರಮಾತ್ಮನು ಬಾಹ್ಯ ಕರಣಗಳನ್ನು ಅಪೇಕ್ಷಿಸದೆಯೇ ತನ್ನ ಸ್ವತಂತ್ರ ಶಕ್ತಿಯಿಂದ ಜಗತ್ತಿಗೆ ಕರ್ತನಾಗಿರುವನೆಂಬುದು ಸ್ಪಷ್ಟ ಪಡುತ್ತದೆ. "ಕೈಕಾಲುಗಳಿಲ್ಲದಿದ್ದರೂ ಅದ್ಭುತ ಶಕ್ತಿಯಿಂದಲೇ ಎಲ್ಲವನ್ನು ನಡೆಸುವೆನು. ಕಣ್ಣಿಲ್ಲದೆ ನೋಡುವೆನು. ಕಿವಿಯಲ್ಲಿದೆಯೇ ಎಲ್ಲವನ್ನು ಕೇಳುವೆನು. ಏಕಾಂತಸ್ಥಿತಿಯಲ್ಲಿ ಇರುತ್ತಲೇ ಎಲ್ಲಾ ಇಂದ್ರಿಯ ವ್ಯವಹಾರಗಳನ್ನು ನಡೆಸುವೆನು. ನಾನು ಯಾವಾಗಲೂ ಚಿದ್ರೂಪನಾಗಿ ಇರುತ್ತಲೇ ಯೋಗಿಗಳಿಗೆ ದೊರಕುವೆನು" ಎಂದು ಪರಮಾತ್ಮನೇ ತನ್ನ ಅದ್ಭುತ ಸಾಮರ್ಥ್ಯವನ್ನು ಈ ಶ್ರುತಿಯಲ್ಲಿ ತಿಳಿಸಿರುವನು. ಗಟ್ಟಿ ತುಪ್ಪ ಭೋಜನ ಸೌಕರ್ಯಕ್ಕಾಗಿ ನೀರಾಗುವುದರಿಂದ ಅವೆರಡಕ್ಕೂ ಭೇದವು ಹೇಗೆ ಸಹಜವಾಗಿ ಇರುವುದಿಲ್ಲವೋ ಹಾಗೆ ನಿರಾಕಾರ

ಪರಮಾತ್ಮನೇ ಭಕ್ತಾನುಗ್ರಹಕ್ಕಾಗಿ ದಿವ್ಯ ಮಂಗಳ ವಿಗ್ರಹವನ್ನು ಧರಿಸಿ ಸಗುಣನೆನಿಸಿರುವಾಗ ನಿರಾಕಾರ ಮತ್ತು ಸಾಕಾರ ಸ್ಥಿತಿಗಳಲ್ಲಿ ಭೇದವಿರುವುದಿಲ್ಲ. ಅದೇ ಪರಮಾತ್ಮನೇ ಇನ್ನೂ ಕೊಂಚ ಮುಂದೆ ಬಂದು ಪ್ರಕೃತಿ ಸಂಬಂಧವಾದ ರೂಪಗಳನ್ನು ಧರಿಸಿ ಜಗತ್ತಾಗಿ ಪರಿಣಮಿಸಿರುವನಾದ್ದರಿಂದ ಜಗತ್ತು ಮಿಥ್ಯೆ ಎನಿಸಲಾರದು. ಈ ಅಂಶವು ವ್ಯಾಸರಿಗೆ ಸಮ್ಮತವೆಂಬ ಅಂಶವನ್ನು ಶ್ರೀಪತಿ ಪಂಡಿತಾರಾಧ್ಯರು "ಪರಿಣಾಮಾತ್" ಎಂಬ ಸೂತ್ರದ ಭಾಷ್ಯದಲ್ಲಿ ಸ್ಪಷ್ಟಪಡಿಸಿರುವರು. ಬ್ರಹ್ಮವೇ ಜಗತ್ತಿನ ರೂಪದಿಂದ ತೋರಿಕೆಗೆ ಕಾಣುವುದೆಂಬುದೇ ಸೂತ್ರಕಾರನಿಗೆ ಇಷ್ಟವಾಗಿದ್ದರೆ "ಪರಿಣಾಮಾತ್" ಎಂಬುದರ ಬದಲು "ವಿವರ್ತಾತ್" ಎಂಬ ಪದವನ್ನು ಸೂತ್ರಕಾರರು ಉಪಯೋಗಿಸಬೇಕಾಗಿತ್ತು. ಇದನ್ನು ಪ್ರಯೋಗಿಸದೆ "ಪರಿಣಾಮಾತ್" ಎಂದುಹೇಳಿರುವುದರಿಂದ ಜಗತ್ತು ಶಕ್ತಿವಿಶಿಷ್ಟ ಪರಮಾತ್ಮನ ಪರಿಣಾಮವಾದ್ದರಿಂದ ಸತ್ಯವೆನಿಸಿದೆ ಎಂಬುದೇ ಬ್ರಹ್ಮಸೂತ್ರಗಳಿಗೂ ಶ್ರುತಿಸ್ಮೃತಿಗಳಿಗೂ ಅನುಭವಕ್ಕೂ ಸಮ್ಮತವೆಂದು ಶ್ರೀಪತಿ ಪಂಡಿತಾರಾಧ್ಯರು ಸಮರ್ಥನ ಮಾಡಿರುವರು.

"ಲೋಕವತ್ತು ಲೀಲಾ ಕೈವಲ್ಯಂ" ಎಂಬ ಸೂತ್ರದ ಭಾಷ್ಯದಲ್ಲಿ ಪರಮಾತ್ಮನಲ್ಲಿ ಲೋಕಕಲ್ಯಾಣ ಲೀಲಾವೈಭವವೂ ಆತ್ಮಶಕ್ತಿಯಲ್ಲಿ ಏಕಾಂತವಾಗಿ ವಿಹರಿಸುವ ವೈರಾಗ್ಯ ಪೂರ್ಣವಾದ ಕೇವಲಾವಸ್ಥೆಯೂ ಸಹಜವಾಗಿ ಇರುವುದೆಂಬ ಅಂಶವನ್ನು ಶ್ರೀ ಪಂಡಿತಾರಾಧ್ಯರು ಸ್ಪಷ್ಟಪಡಿಸಿರುವರು. ಇದನ್ನು ಶಿವಾಗಮಗಳ ಆಧಾರದ ಮೇಲೆ ಇವರು ಸಮರ್ಥಿಸಿರುವರು.

ಶಕ್ತೇಃ ಸಂಕೋಚನಾ ವೇಗ ಸೃಷ್ಟೇಃ ಪೂರ್ವಂ ಮಹೇಶ್ವರ॥
ನಿರಂಶೋ ನಿರ್ಗುಣಶ್ಚೇತಿ ವೇದಾಂತೇಷು ಪ್ರಗೀಯತೇ॥
ಶಕ್ತೇರ್ವಿಕಾಸಭಾವೇನ ಹ್ಯನಂತ ಗುಣವಾನಿತಿ ॥
ಪ್ರೋಚ್ಯತೇಭಗಸಾನ್ರುದ್ರಃ ಪಶುಪಾಶ ವಿಮೋಚಕಃ॥

ಆದುದರಿಂದ ನಿರ್ಗುಣಶ್ರುತಿಗಳು ಪ್ರಳಯಕಾಲದ ಪರಮಾತ್ಮನ ಸ್ವಯಂಭು ಸ್ಥಿತಿಯನ್ನೂ ಕೇವಲಾವಸ್ಥೆಯನ್ನೂ ಆತ್ಮರಾಮ ಸ್ಥಿತಿಯನ್ನೂ ತಿಳಿಸುತ್ತವೆ. ಸಗುಣ ಶ್ರುತಿಗಳೂ ಸಹ ಸೃಷ್ಟ್ಯನಂತರದಲ್ಲಿ ಪರಮಾತ್ಮನ ಶಕ್ತಿ ವಿಕಾಸದ ಲೀಲಾವಸ್ಥೆಯನ್ನೂ ಬೋಧಿಸುತ್ತವೆ. ಸೃಷ್ಟಿಕಾಲದಲ್ಲಿ ಅವನು ತನ್ನ ಚಿತ್‌ಶಕ್ತಿಯ ಅತ್ಯಲ್ಪಾಂಶದಿಂದ ತ್ರಿಮೂರ್ತಿಗಳಾಗಿಯೂ ಜಗದಾಕಾರವಾಗಿಯೂ ಪರಿಣಮಿಸಿದರೂ ಅವನ ಉಳಿದ ಭಾಗವು ಸಮುದ್ರದಂತೆ ನಿರ್ವಿಕಾರವಾಗಿಯೇ ಇರುವುದು. ಅವನು ಸಹಜವಾಗಿ ನಿರಾಕಾರ ಸ್ಥಿತಿಯಲ್ಲಿ ಇದ್ದು ತನ್ನ ಏಕಶಕ್ತಿ ಶಕಲದಿಂದ ಅನಂತಾಕಾರವಾಗಿ ಪರಿಣಮಿಸುವುದರಿಂದ ನಿರ್ಗುಣ ಶ್ರುತಿಗಳು ಅವನ ನಿರಾಕಾರ ಸ್ಥಿತಿಗೂ ಸಗುಣ ಶ್ರುತಿಗಳು ಅವನ ಸಾಕಾರದ ಲೀಲಾವೈಭವಕ್ಕೂ ಅನ್ವಯಿಸುತ್ತವೆ ಎಂದು ಸಮನ್ವಯವನ್ನು ತಿಳಿಸಿರುವುದರಿಂದ ಪರಮಾತ್ಮನ ಸ್ಥಿತಿಯ ಬಗ್ಗೆ ಯಾರಿಗೂ ಯಾವ ವಿವಾದಕ್ಕೂ ಅವಕಾಶವಿರುವುದಿಲ್ಲ.

ಪರಶಿವನಲ್ಲಿ ಶಕ್ತಿ ಸಂಕೋಚ ವಿಕಾಸಗಳನ್ನು "ಸರ್ವೋಪೇತಾಚ" ಎಂಬ ಸೂತ್ರದ ಭಾಷ್ಯದಲ್ಲಿ ಸಮನ್ವಯ ಮಾಡಿರುವುದು ಸಮಂಜಸವಾಗಿದೆ — "ವಾಯ್ವಾಕಾಶಗಳಂತೆ ನಿರವಯವನೂ ಸರ್ವಗತನೂ ಆದ ಪರಶಿವನಲ್ಲಿ ಎರಡು ಬಗೆಯ ಶಕ್ತಿಗಳಿವೆ. ಒಂದು ಪ್ರಾಣರೂಪವಾದ ಚಿತ್ ಶಕ್ತಿ; ಸಚ್ಚಿದಾನಂದ; ಅಭಿನ್ನ ಶಕ್ತಿ. ಮತ್ತೊಂದು ಅಚಿತ್ ಎಂದರೆ ಜಡಮಾಯಾ ಶಕ್ತಿ. ಸತ್ತ್ವರಜಸ್ತಮೋಗುಣಾತ್ಮಕವಿದದ್ದು; ಭಿನ್ನ ಶಕ್ತಿ. ಹೀಗೆ ಅವನು ಶಕ್ತಿ ದ್ವಯವಿಶಿಷ್ಟ ನಾದ್ದರಿಂದಲೇ ಸ್ವತಂತ್ರನಾಗಿದ್ದು ಅಸಾಧ್ಯಕಾರ್ಯಗಳನ್ನು ಅನಾಯಾಸವಾಗಿ ನಡೆಸುತ್ತಿರುವನು" ಎಂದು ಅವರು ತಿಳಿಸಿದ್ದಾರೆ. ಇದರಂತೆ "ಪಾದೋಽಸ್ಯ ವಿಶ್ವಭೂತಾನಿ! ತ್ರಿಪಾದಸ್ಯಾಮೃತಂ ದಿವಿ" ಎಂಬ ಶ್ರುತಿಯಲ್ಲಿ ಪರಶಿವನ ಚರಣಗಳನ್ನು ಹೇಳಿರುವುದರಿಂದ "ಜ್ಯೋತಿಶ್ಚರಣಾಭಿಧಾನಾತ್ ! ಎಂಬ ಸೂತ್ರದಲ್ಲಿ ಜ್ಯೋತಿಶ್ಶಬ್ದವು ಅವನ ನಿತ್ಯೈಶ್ವರ್ಯವಿಭೂತಿಯನ್ನು ತಿಳಿಸುತ್ತದೆ ...ಎಂದು ಹೇಳಿ ಈ ವಾಕ್ಯವನ್ನೊಳಗೊಂಡ ಪುರುಷ ಸೂಕ್ತವು ಆರು ಬಗೆಯ ತಾತ್ಪರ್ಯ ಲಿಂಗಗಳ ಪ್ರಕಾರ ಶಿವನನ್ನೇ ಬೋಧಿಸುವುದೆಂದು ಶ್ರೀಪತಿ ಪಂಡಿತರಾಧ್ಯರು ಪ್ರತಿಪಾದಿಸಿರುವರು. ಇದರಂತೆಯೇ "ಛಂದೋಽ ಭಿದಾನಾತ್" ಎಂಬ ಸೂತ್ರದಲ್ಲಿ ಗಾಯತ್ರೀ ಛಂದಸ್ಸಿನಲ್ಲಿ ಸಾಧಕನ ಚೇತೋರ್ಪಣ ವನ್ನೂ ಶ್ರುತಿಯು ತಿಳಿಸಿದೆ ಎಂಬುದು ಹೋದದೇ ಇರುವ ಪ್ರಯುಕ್ತ ಆ ಛಂದಸ್ಸಿನ ಮಂತ್ರವು ಪರಶಿವನಿಗೇ ಅನ್ವಯಿಸುವುವೆಂದು ತಿಳಿಸಿ ಅಲ್ಲಿ ಬಂದಿರುವ ಭರ್ಗಪದವು ಶಿವನನ್ನೇ ಬೋಧಿಸುವುದೆಂದು ಸಮಂಜಸವಾಗಿ ನಿರೂಪಿಸಿರುವರು.

ಅದರಂತೆಯೇ ರಾಮನು ದಂಡಕಾರಣ್ಯದಲ್ಲಿ ಶಿವನ ದಿವ್ಯೋಪದೇಶವನ್ನು ಕೇಳಿ ಸಂತುಷ್ಟನಾಗಿ ಅದೇ ಸಂಸ್ಕಾರದಿಂದ ಮುಂದೆ ಕೃಷ್ಣನಾಗಿ ಹುಟ್ಟಿ ಅರ್ಜುನನಿಗೆ ಶಿವಾತ್ಮ ದೃಷ್ಟಿಯಿಂದ ಗೀತೆಯನ್ನು ಉಪದೇಶಿಸಿರುವನೆಂದೂ ಆ ಗೀತೆಯು ಹೃದಯದೊಳಗಿನ ಈಶ್ವರನಿಗೆ ಜೀವನ ಶರಣಾಗತಿಯನ್ನೇ ಮುಖ್ಯವಾಗಿ ಬೋಧಿಸುತ್ತ ಈಶ್ವರನ ಕಲ್ಯಾಣ ವಿಭೂತಿಯನ್ನೇ "ಪಶ್ಯಮೇ ಯೋಗಮೈಶ್ವರಂ" ಎಂಬಲ್ಲಿ ವರ್ಣಿಸಿರುವುದೆಂದೂ ಗೀತೆಗೆ ಶಿವನ ಶಕ್ತಿ ವೈಭವದ ವರ್ಣನೆಯಲ್ಲಿಯೇ ತಾತ್ಪರ್ಯವೆಂದು ಶ್ರೀಪತಿ ಪಂಡಿತಾರಾಧ್ಯರು ಸ್ಪಷ್ಟಪಡಿಸಿರುವರು. ಹೀಗೇ ಅವರು ವೇದಾಂತ ವಾಕ್ಯಗಳೆಲ್ಲಕ್ಕೂ ಶಿವನಲ್ಲಿಯೇ ತಾತ್ಪರ್ಯವೆಂಬುದನು 'ತತ್ತು ಸಮನ್ವಯಾತ್' ಎಂಬ ಸೂತ್ರದ ಭಾಷ್ಯದಲ್ಲಿ ಸ್ಪಷಪಡಿಸಿರುವರಲ್ಲದೇ ಆಧ್ಯಾತ್ಮ ಸಾಧಕರೆಲ್ಲರಿಗೂ ಶಿವನೇ ಉಪಾಸ್ಯನೆಂಬುದನ್ನು ಶ್ರುತಿ ಸೂತ್ರಗಳ ಆಧಾರದಿಂದಲೇ ಸ್ಥಾಪಿಸಿರುವರು.

ಹೀಗೆ ಶಿವನ ಸರ್ವವ್ಯಾಪ್ತಿಯನ್ನು ತಿಳಿಸಲಿಕ್ಕಾಗಿಯೇ ಯಜುರ್ವೇದವು 'ನಿಧನ ಪತಯೇ ನಮಃ' ಎಂದು ಆರಂಭವಾಗುವ ಮಂತ್ರದಲ್ಲಿ ಪ್ರತಿಯೊಂದು ಪದದಲ್ಲೂ 'ನಮಃ' ಎಂಬ ಪದವನ್ನು ಹೇಳಿದೆ. ಇದರಿಂದ ಶಿವನು ಆಧ್ಯಾತ್ಮ ಸಾಧಕರೆಲ್ಲರಿಗೂ ನಮಸ್ಕಾರಯೋಗ್ಯನೂ ಜಗತ್ಕಾರಣನಾದ ಪರಬ್ರಹ್ಮವೂ ಆಗಿರುವನೆಂಬುದು ಸಿದ್ಧವಾಗುತ್ತದೆ.

ಗೃಹಸ್ಥನು ಅತಿಥಿ ಅಭ್ಯಾಗತರ ಸೇವೆಯನ್ನೂ ಸುಬ್ರಹ್ಮಣ್ಯ ಮೊದಲಾದ ದೇವತೆಗಳ ಅರ್ಚನೆಯನ್ನೂ ತಪ್ಪದೇ ನಡೆಸಬೇಕೆಂಬುದು ಆರ್ಯ ಸಂಪ್ರದಾಯವೆನಿಸಿದೆ. ಈ ದೇವತೆಗಳನ್ನು ಅವನು ಎಷ್ಟು ಸಂತೋಷದಿಂದ ಅರ್ಚಿಸುವನೋ ಅಷ್ಟೇ ಹೆಚ್ಚು ಹೆಚ್ಚಾಗಿ ಅವರ ಅನುಗ್ರಹದಿಂದ ಸುವೃಷ್ಟಿ ಸಮೃದ್ಧಿಗಳು ಅವನಿಗೆ ಲಭಿಸುತ್ತವೆ. ಈ ಬ್ರಹ್ಮ ವಿಷ್ಣ್ವಾದಿ ದೇವತೆಗಳನ್ನು ಕರೆಯುವುದು ಹೇಗೆ? ಕರೆದರೆ ಅವರು ಬಂದರೆಂದು ಭಾವಿಸುವುದು ಹೇಗೆ? ಬಂದರೆಂದು ಭಾವಿಸಿ ಅವರನ್ನು ಸತ್ಕರಿಸುವುದು ಹೇಗೆ? ಇಂತಹ ಸಂಶಯಗಳು ಹಲವಾರು ಬಂದು ಈಗಿನ ಯುವತಿಯರು ಇಂತಹ ಕೆಲಸಗಳನ್ನೇ ತೊರೆಯುವರು. ಇಂತಹ ಪ್ರಶ್ನೆಯನ್ನು ಆಶಂಕಿಸಿ ಶ್ರೀಪತಿ ಪಂಡಿತಾರಾಧ್ಯರು ಅದಕ್ಕೆ ಸೂಕ್ತವಾದ ಸಮಾಧಾನವನ್ನು ಕೊಟ್ಟಿದ್ದಾರೆ. ಅದೇ ಪ್ರಗತಿಶೀಲರಾದ ವರ್ಧಿಷ್ಣುಗಳೆಲ್ಲರಿಗೂ ಸ್ಮೃತಿಪಥದಲ್ಲಿ ಇರಬೇಕಾದ ವಿಷಯ. ದೇವತೆಗಳು ಪ್ರತ್ಯಕ್ಷವಾಗಿ ನಮಗೆ ಕಾಣಿಸದೇ ಇದ್ದರೂ ನಾವು ಭಕ್ತಿಯಿಂದ ಅರ್ಪಿಸಿದ ಭಾಗವನ್ನು ಅವರು ಅವಶ್ಯವಾಗಿ ಸ್ವೀಕರಿಸುತ್ತಾರೆ ಎಂಬ ವಿಶ್ವಾಸವನ್ನು ಭಾಷ್ಯಕಾರರು ನಮ್ಮ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಲೌಕಿಕ ಉದಾಹರಣೆಗಳೊಡನೆ ತಿಳಿಸಿದ್ದಾರೆ. ಒಂದು ವಿಶೇಷ ಸಮಾರಂಭದಲ್ಲಿ ಅನೇಕ ಮಹನೀಯರು ಸೇರಿದ್ದಾರೆ. ಅವರನ್ನು ಗೌರವಿಸುವ ಸಂದರ್ಭದಲ್ಲಿ ಅವರೆಲ್ಲರಿಗೂ ಪೂಜ್ಯನಾದವನೊಬ್ಬನು ಅಲ್ಲಿಗೆ ಬಂದಿರುವುದಿಲ್ಲ. ಅವನಿಗೆ ಗೌರವವನ್ನು ಸಲ್ಲಿಸದೆ ಇಲ್ಲಿ ಹಾಜರಾಗಿರುವವರನ್ನು ಗೌರವಿಸುವ ಹಾಗಿಲ್ಲ. ಆದರೆ ಅವನು ಇಲ್ಲಿ ದೈಹಿಕವಾಗಿ ಹಾಜರಿಲ್ಲವೆಂದು ಅವನನ್ನು ತಳ್ಳಿ ಹಾಕುವುದು ಸಭ್ಯತೆಯಲ್ಲ; ಸುಸಂಸ್ಕೃತಿಯೂ ಅಲ್ಲ. ಅವನು ಬರಲಿಲ್ಲವೆಂದು ತಿಳಿದು ಇಲ್ಲಿ ಬಂದಿರುವವರನ್ನು ಗೌರವಿಸದೇ ಬಿಡುವಂತೆಯೂ ಇಲ್ಲ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಇಲ್ಲಿ ಸೇರಿರುವವರಿಗೆ ತಾಂಬೂಲವನ್ನು ಕೊಟ್ಟು ಗೌರವಿಸುವ ಮೊದಲು, ಹಾಜರಾಗದಿರುವ ಪೂಜ್ಯತಮ ವ್ಯಕ್ತಿಯ ಹೆಸರನ್ನು ಹೇಳಿ ಅವನ ಉದ್ದೇಶದಿಂದ ಒಂದು ತಾಂಬೂಲವನ್ನು ಎಲ್ಲರಿಗೂ ಕೊಡುವ ಮೊದಲೇ ತೆಗೆದಿಟ್ಟ ಆಮೇಲೆ ಅಲ್ಲಿ ಸೇರಿವವರೆಲ್ಲರಿಗೂ ತಾಂಬೂಲವನ್ನು ಕೊಟ್ಟು ಸನ್ಮಾನಿಸುತ್ತೇವೆ. ನಾವು ಮೊದಲು ತೆಗೆದಿಟ್ಟ ತಾಂಬೂಲವು ಆ ಪೂಜ್ಯವ್ಯಕ್ತಿಗೆ ಸಲ್ಲದಿದ್ದರೂ ಅವನಿಗಾಗಿ ಮೊದಲೇ ತಾಂಬೂಲವನ್ನು ತೆಗೆದಿಟ್ಟು ಗೌರವಿಸಿದರೆಂಬ ವರ್ತಮಾನವನ್ನು ಕೇಳಿಯೇ ಅವನು ಸಂತೋಷಗೊಳ್ಳುವನು. ಹೀಗೆ ನಾವು ಸುಬ್ರಹ್ಮಣ್ಯ ಮೊದಲಾದ ದೇವತೆಗಳನ್ನು ಭಕ್ತಿ ಗೌರವಗಳಿಂದ ಕರೆದರೆ ಅವರು ನಮ್ಮ ಹೃತ್ಪೂರ್ವಕವಾದ ಕರೆಗೆ ಒಪ್ಪಿ ಎದುರಿಗೆ ಬರುವುದನ್ನು ನಾವು ದೈಹಿಕವಾಗಿ ಕಾಣಲಾಗದಿದ್ದರೂ ನಾವು ಕೊಡಬೇಕಾದ್ದನ್ನು ವಿಶ್ವಾಸದಿಂದ ಕೊಟ್ಟರೆ ಅದು ಆಯಾ ದೇವತೆಗಳಿಗೆ ಅರ್ಪಿತವಾಗುತ್ತದೆ. ಯಾವ ಹೆಸರಿನಿಂದ ಯಾವ ರೂಪದಲ್ಲಿ ಕರೆದು ಭಕ್ತಿಯಿಂದ ನಾವು ನೀಡುವೆವೋ ಅದೆಲ್ಲವೂ ಸರ್ವದೇವಾತ್ಮಕನೂ ಸರ್ವವ್ಯಾಪಕನೂ ಆದ ಪರಶಿವನಿಗೆ ಸಲ್ಲುವುದೆಂದೂ ಆ ಮೂಲಕ ಉದ್ದೇಶಪಟ್ಟ ಸುಬ್ರಮಣ್ಯ ಮೊದಲಾದ ದೇವತೆಗಳೆಲ್ಲರೂ ಸಂತುಷ್ಟರಾಗುವರೆಂದೂ ಸದ್ಭಾವನೆಯನ್ನು ಶ್ರೀಕರ ಭಾಷ್ಯವು ಇಡೀ ಮಾನವವರ್ಗಕ್ಕೆ ಹುಟ್ಟಿಸುತ್ತಲಿದೆ.

ಇಷ್ಟೇ ಅಲ್ಲದೆ, ವೇದವ್ಯಾಸರುಬ್ರಹ್ಮ ಸೂತ್ರಗಳಲ್ಲಿ ಶಿವಪೂಜೆಯನ್ನು ಪ್ರತಿಯೊಬ್ಬ ಆಧ್ಯಾತ್ಮ ಸಾಧಕನಿಗೂ ಎಷ್ಟು ಆವಶ್ಯಕವೆಂದು ತಿಳಿಸಿರುವರೆಂಬ ವಿಷಯವನ್ನು ಶ್ರೀಪತಿ ಪಂಡಿತಾರಾಧ್ಯರು ಹಲವಾರು ಸೂತ್ರಗಳಲ್ಲಿ ಹೃದಯಂಗಮವಾಗಿ ವಿವರಿಸಿರುವರು. "ಜೀವಮುಖ್ಯ ಪ್ರಾಣಲಿಂಗಾತ್" ಎಂಬ ಸೂತ್ರದಲ್ಲಿ ಸಾಧಕನು ಶಿವೋಽಹಂ ಭಾವನೆಯಿಂದ ಭಾವಲಿಂಗದ ಅನುಸಂಧಾನವನ್ನು ಮನಸ್ಸಿನಿಂದ ಪ್ರಾಣಲಿಂಗದ ಧ್ಯಾನವನ್ನು ಕೈಗಳಿಂದ ಇಷ್ಟದೇವನೆನಿಸಿದ ಶಿವಲಿಂಗದ ಅರ್ಚನೆಯನ್ನು ಹೀಗೇ ಮೂರು ಬಗೆಯ ಅರ್ಚನೆಯನ್ನು ಅವಶ್ಯವಾಗಿ ನಡೆಸುತ್ತಿರಬೇಕೆಂದು ಅವರು ತಿಳಿಸಿದ್ದಾರೆ. ಇದರಿಂದ ಜ್ಞಾನಕರ್ಮಗಳೆರಡರ ಸಮನ್ವಯವೂ ಅಧ್ಯಾತ್ಮ ಸಾಧನೆಗೆ ಅತ್ಯಾವಶ್ಯಕವೆನಿಸುತ್ತದೆ. ಅರಿಯದೆ ಮಾಡುವ ಕ್ರಿಯೆಯೂ ಅರಿತು ಕ್ರಿಯೆಯನ್ನು ಆಚರಿಸದಿರುವುದೂ ವ್ಯರ್ಥವೆನಿಸುತ್ತವೆ. "ವಿಹಿತತ್ವಾಚ್ಚಾಶ್ರಮ ಕರ್ಮಾಪಿ" " ಸಹಕಾರಿ ತ್ವೇನ ಚ" ಎಂಬ ಸೂತ್ರಗಳಲ್ಲಿ ಆಚಾರ್ಯರು ಜ್ಞಾನಕರ್ಮಗಳೆರಡರ ಆವಶ್ಯಕತೆಯನ್ನು ಒತ್ತಿ ಹೇಳಿರುವರು. ಹೀಗೆ ಬ್ರಹ್ಮಸೂತ್ರಗಳು ಆಧ್ಯಾತ್ಮ ಸಾಧನೆಗೆ ಬಹು ಮುಖ್ಯವೆಂಬ ಅಂಶವನ್ನು ಶ್ರೀಕರ ಭಾಷ್ಯವು ನಮಗೆ ಮನವರಿಕೆ ಮಾಡಿಕೊಡುತ್ತವೆ.

ಹೀಗೆ ಶ್ರೀಪತಿ ಪಂಡಿತಾರಾಧ್ಯರು "ಅಂತಸ್ತದ್ಧರ್ಮೋಪದೇಶಾತ್" ಎಂಬ ಸೂತ್ರ ಭಾಷ್ಯದಲ್ಲಿ ಪರಶಿವನನ್ನು ಸರ್ವಾಂತರ್ಯಾಮಿಯಾದ್ದರಿಂದ ಮಹಾಲಿಂಗನೆಂದೂ, "ಆಕಾಶಸ್ತಲಿಂಗಾತ್" ಎಂಬ ಸೂತ್ರ ಭಾಷ್ಯದಲ್ಲಿ ಅವನೇ ಸರ್ವಕ್ಕೂ ಅವಕಾಶನಾಗಿರುವುದರಿಂದ ಪ್ರಸಾದ ಲಿಂಗನೆಂದೂ, "ಅತಏವಪ್ರಾಣಃ" ಎಂಬ ಸೂತ್ರ ಭಾಷ್ಯದಲ್ಲಿ ಅವನ ಆಶ್ರಯದಿಂದಲೇ ಜೀವನು ಬದುಕಿರುವುದರಿಂದ ಅವನೇ ಪ್ರಾಣಲಿಂಗನೆಂದು ಭಾಷ್ಯದಲ್ಲಿ ಯುಕ್ತಿಯುಕ್ತವಾಗಿ ಪ್ರತಿಪಾದಿಸಿರುವುದು ಅಭಿನಂದನೀಯವೆನಿಸಿದೆ. ಅಲ್ಲಿಂದ ಮುಂದೆ "ಜ್ಯೋತಿಶ್ಚರಣಾಭಿಧಾನಾತ್" ಎಂಬ

ಸೂತ್ರಭಾಷ್ಯದಲ್ಲಿ ಅವನೇ ವಿಶ್ವವನ್ನು ಬೆಳಗುವ ದಿವ್ಯ ಜ್ಯೋತಿಯಾಗಿರುವುದರಿಂದ ಶಿವಲಿಂಗವೆಂದೂ "ಛಂದೋಽಭಿಧಾನಾತ್" ಎಂಬ ಸೂತ್ರ ಭಾಷ್ಯದಲ್ಲಿ ಗಾಯತ್ರೀ ಮಂತ್ರವೂ ಜ್ಞಾನ ಸ್ವರೂಪನಾದ ಶಿವನನ್ನೇ ಬೋಧಿಸುತ್ತಿರುವುದರಿಂದ ಶಿವನೇ ಈ ದೇಹದಲ್ಲಿ ಗುರುಲಿಂಗನಾಗಿರುವನೆಂದೂ "ಭೂತಾದಿ ಪಾದ ವ್ಯಪದೇಶೋಪಪತ್ತೇಶ್ಚೈವಂ" ಎಂಬ ಸೂತ್ರದ ಭಾಷ್ಯದಲ್ಲಿ ಶಿವನೇ ಪಂಚ ಇಂದ್ರಿಯಗಳಲ್ಲೂ ಸದ್ಯೋಜಾತಾದಿ ಪಂಚ ಬ್ರಹ್ಮರೊಡನೆ ಉಪಾಸನವನ್ನು ಸ್ವೀಕರಿಸುತ್ತಿರುವುದರಿಂದ ಆಚಾರ ಲಿಂಗನಾಗಿರುವನೆಂದೂ ಶ್ರೀಪತಿ ಪಂಡಿತಾರಾಧ್ಯರು ದೇಹದಲ್ಲಿ ಪರಮಾತ್ಮನ ಷಟ್ಸ್ಥಲಾತ್ಮಕ ಲೀಲೆಯನ್ನು ಹೃದಯಂಗಮವಾಗಿ ಚಿತ್ರಿಸಿರುವರು. ಸೂರ್ಯಮಂಡಲದಲ್ಲಿ ಶಿವನೇ ನೆಲೆಸಿ ಭಕ್ತರಿಂದ ಉಪಾಸನವನ್ನು ಸ್ವೀಕರಿಸುತ್ತಿರುವನೆಂಬ ಅಂಶವನ್ನು ಶ್ರೀಪತಿ ಪಂಡಿತಾರಾಧ್ಯರು "ಅಂತಸ್ತದ್ಧರ್ಮೋಪದೇಶಾತ್" ಎಂಬ ಸೂತ್ರದ ಭಾಷ್ಯದಲ್ಲಿ ನೀಲಕಂತ, ಭಟ್ಟಭಾಸ್ಕರ, ಘಂಟಾನಾಥ, ಜ್ಯೋತಿರ್ನಾಥ ಮೊದಲಾದ ಪೂರ್ವಿಕರ ಅಭಿಪ್ರಾಯದಿಂದ ಸಮರ್ಥನ ಮಾಡಿರುವರು. "ಕಪ್ಯಾಸಂ ಪುಂಡರೀಕಮೇವ ಮಕ್ಷಿಣೀ" ಎಂಬ ಛಾಂದೋಗ್ಯ ಮಂತ್ರಕ್ಕೆ ಪೂರ್ವಾಚಾರ್ಯರು ಬರೆದಿರುವ ಅಭಿಪ್ರಾಯವನ್ನು ಅನುಸರಿಸಿ ಶ್ರೀಪತಿ ಪಂಡಿತಾರಾಧ್ಯರು ತಮ್ಮ ನಿಲುವನ್ನು ಸ್ಪಷ್ಟಪಡಿಸಿರುವುದು ಇವರ ನಿಷ್ಪಕ್ಷಪಾತ ಮನೋಭಾವವನ್ನೂ ಇವರ ವಿಮರ್ಶಚಾತುರ್ಯವನ್ನೂ ತಿಳಿಸುತ್ತದೆ. ಇವಿಷ್ಟೇ ಅಲ್ಲದೆ ರೇಣುಕಾಚಾರ್ಯರು ಮರುಳಸಿದ್ಧಶಿವಾಚಾರ್ಯರು ಮೊದಲಾದ ಪೂರ್ವಾಚಾರ್ಯರ ಭಾಷ್ಯ ಪಂಕ್ತಿಗಳನ್ನು ಅಲ್ಲಲ್ಲಿ ಉದಾಹರಿಸಿರುವರು. ರೇಣುಕಗೀತೆ ಎನಿಸಿದ ಸಿದ್ಧಾಂತ ಶಿಖಾಮಣಿಯನ್ನು ಅನೇಕ ಕಡೆಗಳಲ್ಲಿ ಬಹಳ ಗೌರವದಿಂದ ಉದಾಹರಿಸಿರುವರು. ಹಾಗೆಯೇ ಶ್ರೀಕಂತ ಶಿವಾಚಾರ್ಯರ ಅಭಿಪ್ರಾಯಗಳನ್ನು ಅನೇಕ ಕಡೆಗಳಲ್ಲಿ ಯುಕ್ತಿಯುಕ್ತವಾಗಿ ನಿರಾಕರಿಸುರುವರು. ರಾಮಾನುಜರ ವಿಶಿಷ್ಟಾದ್ವೈತ ಮತವು ಪೂರ್ವಪಕ್ಷಕ್ಕೂ ನಿಲ್ಲುವಂತಹದಲ್ಲವೆಂದು ಖಂಡಿಸಿರುವರು. ಎಷ್ಟೋ ನಿರ್ದಾಕ್ಷಿಣ್ಯ ಪ್ರಕೃತಿಯಿಂದ ಬ್ರಹ್ಮಸೂತ್ರಗಳ ಅರ್ಥವನ್ನು ವಿವರಿಸುತ್ತ ಶ್ರುತಿಸಾರವೆನಿಸಿದ ವೀರಶೈವ ಮತವು ಮುಮುಕ್ಷುಗಳೆಲ್ಲರಿಗೂ ಆದರಣೀಯವೆಂದೂ ಅದೇ ಬ್ರಹ್ಮ ಸೂತ್ರಕಾರರ ಮುಖ್ಯಾಭಿಪ್ರಾಯವೆಂದೂ ಶ್ರೀಪತಿ ಪಂಡಿತಾರಾಧ್ಯರು ಶ್ರೀಕರಭಾಷ್ಯದಲ್ಲಿ ಪತ್ಯಧಿಕರಣದಲ್ಲಿ ಸ್ಪಷ್ಟಪಡಿಸಿರುವರು.

ಈಚೆಗೆ ಉಮುಚಿಗೆ ಶಂಕರಶಾಸ್ತ್ರಿಗಳು ಈಶಾವಾಸ್ಯೋಪನಿಷತ್ತು, ಕೇನೋಪನಿಷತ್ತು, ಮುಂಡಕೋಪನಿಷತ್ತು, ಇವುಗಳಿಗೆ ವೀರಶೈವ ಮತಕ್ಕೆ ಅನುಗುಣವಾಗಿ ಭಾಷ್ಯಗಳನ್ನು ಬರೆದಿರುವರು. ಹಾಗೆಯೇ ಮಹಾ ನಾರಾಯಣೋಪನಿಷತ್ತಿಗೂ ಸಿದ್ಧಾಂತ ಶಿಖೋಪನಿಷತ್ತಿಗೂ ಭಾಷ್ಯಗಳು ರಚಿತವಾಗಿವೆ. ಈ ಲೇಖಕನೇ ಶ್ವೇತಾಶ್ವತರೋಪನಿಷದ್ಭಾಷ್ಯವನ್ನು ರಚಿಸಿ ಕನ್ನಡ ಅನುವಾದದೊಡನೆ ಪ್ರಕಟಿಸಿರುವನು. ಅದರಲ್ಲಿ ವೀರಶೈವ ಧರ್ಮದ ಸರ್ವಶ್ರುತಿ ಸಮನ್ವಯ ಪ್ರಕರಣವೂ ಷಟ್ಸ್ಥಲ ಸಂಪ್ರದಾಯದ ಆಚರಣ ಕ್ರಮವೂ ವಿಹಿತವಾಗಿ ಸೇರಿಕೊಂಡಿವೆ. ಹಾಗೆಯೇ ಭಗವದ್ಗೀತೆಗೂ ವೀರಶೈವ ಭಾಷ್ಯವು ಈ ಲೇಖಕನಿಂದಲೇ ಸಂಸ್ಕೃತದಲ್ಲಿಯೂ ಕನ್ನಡ ಅನುವಾದ ರೂಪದಲ್ಲಿಯೂ ಪ್ರತ್ಯೇಕವಾಗಿ ಪ್ರಕಟವಾಗಿದೆ. ಅದರಲ್ಲಿ ಶಿವಾಗಮಗಳ ಆಧಾರದ ಮೇಲೆಯೂ ವಚನ ಶಾಸ್ತ್ರದ ಅನುಭವಿಗಳ ವಚನಗಳ ಆಧಾರದ ಮೇಲೆಯೂ ಗೀತಾವಾಕ್ಯಗಳನ್ನು ಪರಿಶೀಲಿಸಿ ಸಮನ್ವಯ ಮಾಡಲಾಗಿದೆ. ಶ್ರೀಕೃಷ್ಣನು ಉಪಮನ್ಯು ಮಹರ್ಷಿಗಳಿಂದ ಪಾಶುಪತದೀಕ್ಷೆಯನ್ನು ಪಡೆದು ಪರಮ ಶಿವಭಕ್ತನಾಗಿದ್ದುದರಿಂದ ಶಿವನ ಲೀಲಾ ವೈಭವವನ್ನೂ ಶಕ್ತಿವಿಕಾಸವನ್ನೂ ಎಷ್ಟು ಗಂಭೀರವಾಗಿ ವಿಶದಪಡಿಸಿರುವನೆಂಬ ಅಂಶವನ್ನು ಸಾಧಕರ ಗಮನಕ್ಕೆ ತರಲಾಗಿದೆ.

ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತ ಮೇವ ವಾ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಂ॥

ಎಂಬಲ್ಲಿ ಹೇಳಿರುವ ತೇಜಸ್ಸೇ ಪರಮಾತ್ಮನ ಪ್ರಾಣರೂಪವಾದ ಚಿಚ್ಛಕ್ತಿ ಎಂದೂ ಅದೇ ಎಲ್ಲರಲ್ಲೂ ವ್ಯಾಪಿಸಿರುವ ಚಿತ್ತಶಕ್ತಿ ಎಂದೂ ಅದರ ವಿಕಾಸಕ್ಕೆ ಸಾಧಕರು ಪರಮಾತ್ಮನನ್ನು ಹೇಗೆ ನಿರಂತರವೂ ಧ್ಯಾನಧಾರಣ ಅನುಸಂಧಾನಗಳಿಂದ ಅರ್ಚನೆ ಮಾಡುತ್ತಿರಬೇಕೆಂದೂ ಉಪನಿಷತ್ತುಗಳ ಮತ್ತು ಅನುಭವ ವಚನಗಳ ಆಧಾರದ ಮೇಲೆ ಪ್ರತಿನಿಧಿಸಿದೆ. ಹೃದಯದಲ್ಲಿ ಅವ್ಯಕ್ತವಾಗಿ ಅಡಗಿರುವ ಈಶ್ವರನನ್ನು ಪ್ರಾಣಲಿಂಗವೆಂದು ಭಾವಿಸಿ ಅದಕ್ಕೆ ಶರಣಾಗತನಾಗಿ ಅದರಲ್ಲಿ ಸಮರಸವಾಗಿ ಬೆರತು ಐಕ್ಯವನ್ನು ಹೇಗೆ ಹೊಂದಬಹುದೆಂಬ ಅಂಶವನ್ನು ಭಾಷ್ಯವು ಸ್ಪಷ್ಟಪಡಿಸಿದೆ. ಇದಕ್ಕೆ ಅವಶ್ಯಕವಾದ ಯೋಗ ಮಾರ್ಗವನ್ನು ಭಾಷ್ಯದಲ್ಲಿ ಸೂಕ್ತವಾಗಿ ತಿಳಿಸಲಾಗಿದೆ. ಹೀಗೆ ವೀರಶೈವ ಭಾಷ್ಯಗಳು ಸೂತ್ರ ಉಪನಿಷತ್ತು ಗೀತೆಗಳ ಅಭಿಪ್ರಾಯಗಳನ್ನು ವೀರಶೈವ ಧರ್ಮಕ್ಕೆ ಅಳವಡಿಸಿ ಅಧ್ಯಾತ್ಮ ಸಾಧಕರೆಲ್ಲರಿಗೂ ಅವು ಎಷ್ಟರಮಟ್ಟಿಗೆ ತಿಳಿದು ಆಚರಿಸಲು ಸಾಧ್ಯವೆಂಬ ಅಂಶವನ್ನು ಮನವರಿಕೆ ಮಾಡುತ್ತಲಿವೆ.

Telegrams : SHANKERMOTOR

Telephone : 44

With Best Compliments from :

The Shanker Transport Company (Private) Ltd.

KOPPA—KADUR

(Mysore State)

Pioneer in the field of Passenger Transport in Chikmagalur, Shimoga and South Kanara Districts.

A. Ramesh Rao.

MANAGING DIRECTOR.

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ
ಅಪೂರ್ವ ಸಂಗಮದ ಪುಣ್ಯ ಸಂದರ್ಭದಲ್ಲಿ ನಮ್ಮ ಪ್ರಣಾಮಗಳು

◆

ಈ ಮಹೋತ್ಸವ
ವಿಶ್ವಶಾಂತಿಗೆ, ಜಗತ್ಕಲ್ಯಾಣಕ್ಕೆ ಸಾಧಕವಾಗಲಿ

⁂

ಅಜ್ಜಂಪುರ ರಂಗಪ್ಪ

ಹೋಲ್‌ಸೇಲ್ ಕಿರಾಣಿ ವ್ಯಾಪಾರಿಗಳು

ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ತಂತಿ : 'ಲಿಂಗೇಶ್ವರ್'
ಫೋನ್ : 24

Grams: JANATA

Phone: 71480–22626–79030

JANATA Tourist

Air Conditioned Booking Agency Department Round the Clock Service

KEMPEGOWDA ROAD, Sagar Talkies Building, **BANGALORE-9.**

H. O. & WORKSHOP Phone: 70742 99, 2nd Main Road, Gandhinagar, Bangalore-9.

Branches: 114, Hospital Road,
Bangalore-2
Phone: 79039

Opp. City Rly. Station,
Bangalore City.
Phone: 79177

Ananda Rao Circle, Phone; 70981

... ... **Booking Agents all over Bangalore** ... ...

Welcome you to Bangalore

We are the only Tourist Operators in Bangalore Providing Luxury Coaches fitted with Radio, Cooling Glasses and Drinking Water facility etc.

Super Continental Coaches are also available for Special Trips at Moderate Rates

Always insist to Book by JANATA TOURIST as they are the BEST

Our joy trips are as follows

Daily Night Trips to Sight Seeing & Places of Pilgrimage

1. Mangalore, 2. Udipi, 3. Coondapur, 4. Shimoga, 5. Bhadravati, 6. Bellary, 7- Hospet, 8. Davangere, 9. Hubli, 10. Belgaum, 11. Madras, 12, Jog Falls, 13, Sagar, 14. Mercara, 15. Cannanore, 16. Mysore.

MYSORE SIGHT SEEING

Srirangapatnam Temple, Gumbaz, Summer Palace, Mysore St. Philomina's Church, Chamundi Hill, Bull, Zoo, Art Gallery and **Illuminated Brindavan Garden**

Fare: Super Continental Rs. 18-00
Continental Rs. 15-00

Daily
Dep. 7-30 a.m.
Arri. 11 p.m.

BANGALORE SIGHT SEEING

Covering Govt. Sandal Soap Factory, H. M. T. Watch Factory (if permitted), Ulsoor Lake, Bull Temple, Tippu Palace, Lal-bagh, Cubbon Park, Museum, Vidhana Soudha, Mahatma Gandhi Road (Arts & Crafts), Commercial Street.

Fare: Rs. 7-50

Daily, except Sunday
Dep. 8-30 a.m.
Arri. 6 p.m.

BELUR, HALEBEEDU, SRAVANABELAGOLA

Fare: Rs. 20-00

Every Friday
Dep. 7-30 a.m.
Arri. 10 p.m.

NANDI HILLS

Covering Cubbon House, Amrut Sarovar, Tippu's Drop, Gandhi Nilayam, Bull Temple etc.

Fare: Rs. 10-00

Every Sunday
Dep. 8-30 a.m.
Arri. 6 p.m.

ಶ್ರೀ ಪಂಡಿತಾರಾಧ್ಯರು - ಶ್ರೀಶೈಲ ಕ್ಷೇತ್ರ

ಲೇಖಕರು:
ವಿದ್ಯಾವಿಭೂಷಣ ಭೋಗಿಶೆಟ್ಟಿ ಜೂಗಪ್ಪನವರು

ನಮ್ಮ ಭಾರತ ದೇಶದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳು ಕೇದಾರದಿಂದ ಕನ್ಯಾಕುಮಾರಿಯವರೆಗೆ ಯುಗಯುಗಾಂತರಗಳಿಂದ ಪೂಜಿಸಲ್ಪಡುತ್ತಿವೆ. ಲಿಂಗಪೂಜಾ ತತ್ವವು ವೇದಗಳ ಕಾಲಕ್ಕಿಂತ ಸಾವಿರಾರು ವರ್ಷ ಪುರಾತನವಾಗಿತ್ತೆಂದು ಮೊಹಂಜೊದಾರೊ, ಹರಪ್ಪಾ ಅವಶೇಷಗಳ ಪರಿಶೋಧನೆಯಿಂದ ಸ್ಪಷ್ಟವಾಗುತ್ತೆಂದು ಸರ್ ಜಾನ್ ಮಾರ್ಶಲ್ ಇವರು ನಿರೂಪಿಸಿರುವರು. ಲಿಂಗವು ಗೋಲಾಕಾರವಾಗಿ ವಿಶ್ವದ ಪ್ರತೀಕವಾಗಿಯೂ ಮತ್ತು ಮಾನವ ಹೃದಯದ ಚಿಹ್ನೆಯಾಗಿಯೂ ಭಾವಿಸಲ್ಪಡುತ್ತದೆ. ಇದು ಕೇವಲ ವಿಗ್ರಹಾರಾಧನೆಯಲ್ಲ. ಜ್ಯೋತಿರ್ಲಿಂಗವೆಂದರೆ ಮಾನವನ ಅಂತರಾತ್ಮದಲ್ಲಿರುವ ಆತ್ಮಲಿಂಗವೇ! ಸೂರ್ಯನ ಅಥವಾ ದೀಪದ ಮತ್ತು ನೇತ್ರದ ಸಹಾಯವಿಲ್ಲದೆ ನಿದ್ರೆಯಲ್ಲಿ ನಾವು ಕಾಣುವ ಕನಸಿನಲ್ಲಿ ತೋರಿಬರುವ ಅಂತರ್ಜ್ಯೋತಿಯೇ ಜ್ಯೋತಿರ್ಲಿಂಗ. ಭಗವದ್ಗೀತೆಯ ಕ್ಷೇತ್ರ—ಕ್ಷೇತ್ರಜ್ಞ ವಿಚಾರ ಯೋಗದಲ್ಲಿ ಇದನ್ನು "ಜ್ಯೋತಿಷಾಮಪಿ ತಜ್ಯೋತಿಃ ತಮಸಃ ಪರಮುಚ್ಯತೇ॥ ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವತ್ರ ವಿಷ್ಟಿತಮ್" ಎಂದು ಸ್ಪಷ್ಟೀಕರಿಸಿದೆ. ಶ್ರೀಶೈಲದಲ್ಲಿ ಯುಗಯುಗಾಂತರಗಳಿಂದಿರುವ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದಿಂದ ಆದಿ ಪಂಡಿತಾರಾಧ್ಯರು ಉದ್ಭವಿಸಿ ಶ್ರೀಶೈಲ ಕ್ಷೇತ್ರವನ್ನೂ ದೇವಾಲಯವನ್ನೂ ಸೂರ್ಯಸಿಂಹಾಸನ ಪಂಡಿತಾರಾಧ್ಯ ಪೀಠವನ್ನೂ ಸ್ಥಾಪಿಸಿದರೆಂದು ಸುಪ್ರಭೇದ, ಸ್ವಯಂಭು ಆಗಮಗಳು ಸಾರುತ್ತವೆ. 1885ನೇ ಇಸ್ವಿಯಲ್ಲಿ ಮದ್ರಾಸ್ ಹೈಕೋರ್ಟಿನವರು ತಮ್ಮ ತೀರ್ಮಾನದಲ್ಲಿ ಈ ವಿಷಯವನ್ನು ಅಂಗೀಕರಿಸಿರುವರು. ಶ್ರೀಶೈಲ ದೇವಾಲಯದಲ್ಲಿ ಶ್ರೀರಾಮ, ಸೀತಾ ಇವರಿಂದ ಸ್ಥಾಪಿತವಾದ ಸಹಸ್ರ ಲಿಂಗಗಳು ಮತ್ತು ಪಂಚಪಾಂಡವರು, ದ್ರೌಪದಿ ಪ್ರತಿಷ್ಠೆ ಮಾಡಿದ ಲಿಂಗಗಳು ಈಗಲೂ ಪೂಜಿಸಲ್ಪಡುತ್ತಿವೆ. ಆಂಧ್ರದ ಪ್ರತಾಪರುದ್ರ ಮಹಾರಾಜರು, ಮಹಾರಾಷ್ಟ್ರದ ಛತ್ರಪತಿ ಶಿವಾಜಿ, ವಿಜಯನಗರದ ಹರಿಹರ, ಕೃಷ್ಣದೇವರಾಯರು ಕಟ್ಟಿಸಿದ ಶಿಲಾ ಮಂಟಪಗಳು, ಗೋಪುರಗಳು ವಿರಾಜಿಸುತ್ತಿವೆ. ಶ್ರೀಶೈಲ ಸೂರ್ಯಸಿಂಹಾಸನ ಪಂಡಿತಾರಾಧ್ಯ ಪೀಠವು ಶ್ರೀ ಮಲ್ಲಿಕಾರ್ಜುನ-ಭ್ರಮರಾಂಬಾ ದೇವಾಲಯಗಳು ಮಧ್ಯೆ ಹಾಗೂ ಶಿಥಿಲವಾದ ಸ್ಥಿತಿಯಲ್ಲಿದ್ದುದನ್ನು ಶ್ರೀಶೈಲ ಜಗದ್ಗುರುಗಳು ಹಾಗೂ ಭಕ್ತ ಮಂಡಳಿಯು 1960 ರಲ್ಲಿ ಬಹು ಸುಂದರವಾಗಿ ಕಟ್ಟಿಸಿರುವರು. ಶ್ರೀಶೈಲ ದೇವಾಲಯವು ಆಂಧ್ರ ಪ್ರದೇಶದ ಕರ್ನೂಲ್

ಎಂ.ಎ. ಪದವೀಧರರೂ, ಐ. ಎ. ಎಸ್. ಅಧಿಕಾರಿಗಳಾಗಿದ್ದು ಕಲೆಕ್ಟರರಾಗಿ ನಿವೃತ್ತರಾಗಿರುವ ವಿದ್ಯಾ ವಿಭೂಷಣ ಭೋಗಿಶೆಟ್ಟಿ ಜೋಗಪ್ಪನವರು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತುಂಬಾ ಪರಿಶ್ರಮ ಉಳ್ಳವರಾಗಿದ್ದಾರೆ. ಶ್ರೀ ಶ್ರೀಶೈಲ ಪೀಠ ಹಾಗೂ ದೇವಾಲಯದ ಉತ್ಕರ್ಷೆಗಾಗಿ ನಲವತ್ತು ವರ್ಷಗಳ ಕಾಲ ಶ್ರಮಿಸಿ ಶ್ರೀ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾಗಿರುವ ಮಹನೀಯರು ಅನಂತಪುರದಲ್ಲಿ ಕರ್ನಾಟಕಾಂಧ್ರ ಸಂಘವನ್ನು ಸ್ಥಾಪಿಸಿ, ಕನ್ನಡ ಮತ್ತು ತೆಲುಗು ಭಾಷಾ ಮೈತ್ರಿಗೆ ಸತತ ಶ್ರಮಿಸುತ್ತಲಿದ್ದಾರೆ. ಶ್ರೀಯುತರ ಲೇಖನ ವಿಚಾರ ಭರಿತವಾಗಿದೆ.

ಜಿಲ್ಲೆಯಲ್ಲಿ ಕೃಷ್ಣಾ ನದಿ ತೀರದಲ್ಲಿ 800 ಅಡಿ ಎತ್ತರದಲ್ಲಿ ನಿರ್ಮಿಸಲ್ಪಟ್ಟಿದೆ. ಬ್ರಹ್ಮ, ವಿಷ್ಣು, ರುದ್ರ ಗಿರಿಗಳ ಮಧ್ಯೆ ಕೃಷ್ಣಾನದಿಯು ಬೃಹದಾಕಾರದ ಕೊಳ್ಳವಾಗಿ ಹರಿಯುತ್ತದೆ. ಇದೇ "ಪಾತಾಳ ಗಂಗೆ"ಯೆಂದು ಪ್ರಸಿದ್ಧಿಯಾಗಿದೆ. ಇಲ್ಲಿಯೇ ಶ್ರೀಶೈಲಂ ಪ್ರಾಜೆಕ್ಟ್ ನಿರ್ಮಿಸಲ್ಪಡುತ್ತಿದೆ. ಈ ಪ್ರಾಜೆಕ್ಟಿಗಾಗಿ ದೊಡ್ಡ ಪರ್ವತವನ್ನು ಅಗಿಯುವಾಗ ಆ ಗುಡ್ಡದಲ್ಲಿರುವ ಪುರಾತನ ದೊಡ್ಡ ಗುಹೆಯು ಕಂಡುಹಿಡಿಯಲ್ಪಟ್ಟಿತು. ಇಲ್ಲಿ ಸಿದ್ಧರು ಪೂರ್ವದಲ್ಲಿ ತಪಸ್ಸನ್ನಾಚರಿಸುತ್ತಿದ್ದರೆಂದು ಭಾವಿಸಲಾಗಿದೆ.

ಆದಿ ಪಂಡಿತಾರಾಧ್ಯರು ಯುಗ ಯುಗಾಂತರಗಳಿಂದ ಪ್ರಖ್ಯಾತಿ ಪಡೆದಿರುವ ವೀರಶೈವ ಪಂಚಾಚಾರ್ಯರಲ್ಲಿ ಪ್ರಮುಖರಾಗಿದ್ದಾರೆ. ವೀರಶೈವ ಮತ ಸ್ಥಾಪನಾಚಾರ್ಯರಾದ ಆದಿ ರೇಣುಕಾಚಾರ್ಯರು ಆಂಧ್ರ ದೇಶದಲ್ಲಿ ಹೈದರಾಬಾದಿಗೆ 50 ಮೈಲು ದೂರದಲ್ಲಿರುವ ಕೊಲ್ಲಿಪಾಕಿ ಕ್ಷೇತ್ರದಲ್ಲಿರುವ ಸೋಮೇಶ್ವರ ಲಿಂಗದಿಂದ ಉದ್ಭವಿಸಿ ಮಲಯಾಚಲದ ಅಗಸ್ತ್ಯ ಮಹರ್ಷಿಗಳಿಗೆ ವೀರಶೈವ ಮತತತ್ವ ಬೋಧೆಯನ್ನು ಮಾಡಿದರೆಂದು ಶ್ರೀ ಶಿವಯೋಗಿ ಶಿವಾಚಾರ್ಯರು 8ನೇ ಶತಮಾನದಲ್ಲಿ ಸಂಸ್ಕೃತದಲ್ಲಿ ಬರೆದಿರುವ "ಸಿದ್ಧಾಂತ ಶಿಖಾಮಣಿ" ಎಂಬ ಗ್ರಂಥದಲ್ಲಿ ಬರೆದಿರುವರು. ಅಲ್ಲದೆ ಶ್ರೀ ರೇವಣಸಿದ್ಧರು ಆದಿ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಆಶೀರ್ವದಿಸಿ ಉಪದೇಶ ಮಾಡಿದರೆಂದು ಶ್ರೀ ಶಂಕರಾಚಾರ್ಯರ ಗುರುವಂಶ ಕಾವ್ಯದಲ್ಲಿ ಬರೆಯಲ್ಪಟ್ಟಿದೆ. ಈ "ಸಿದ್ಧಾಂತ ಶಿಖಾಮಣಿ"ಯು "ರೇಣುಕ ಗೀತೆ"ಯೆಂದು ಸಹ ಪ್ರಖ್ಯಾತಿ ಪಡೆದಿದೆ. 9ನೇ ಶತಮಾನದಲ್ಲಿ ಶ್ರೀಶೈಲ ಪಂಡಿತಾರಾಧ್ಯ ಪೀಠಾಚಾರ್ಯರಾದ ಶ್ರೀಪತಿ ಪಂಡಿತರು ತಾವು ಬ್ರಹ್ಮಸೂತ್ರಗಳಿಗೆ ಬರೆದ ಶ್ರೀಕರಭಾಷ್ಯದಲ್ಲಿ ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿಸಿದ ವೀರಶೈವ ಧರ್ಮ ತತ್ವವು ಸರ್ವ ಶ್ರುತಿ ಶಾಸ್ತ್ರ ಸಮನ್ವಯವೆಂದೂ ನಿರೂಪಿಸಿರುವರು. ಆ ತರುವಾಯ ಈ ಪೀಠಾಚಾರ್ಯರಾದ ಶ್ರೀ ಜಂಗಮ ಮಲ್ಲಿಕಾರ್ಜುನ ಗುರುವರ್ಯರ ವಿಷಯವಾಗಿ ಆಂಧ್ರದಲ್ಲಿ ಆದಿ ಕವಿಯಾದ ನನ್ನ ಚೋಡ ಮಹಾರಾಜರು 10ನೇ ಶತಮಾನದಲ್ಲಿ ರಚಿಸಿದ "ಕುಮಾರ ಸಂಭವ" ಎಂಬ ಕಾವ್ಯದಲ್ಲಿ ಅದನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಿದಂತೆ ಬರೆದಿರುವರು. ಇವರ ಸಮಾಧಿಯು ಪಂಡಿತಾರಾಧ್ಯ ಪೀಠದ ಎದುರಿನಲ್ಲಿ ಬಲಗಡೆಗೆ ಇದ್ದುದನ್ನು ನಾನು 1959 ರಲ್ಲಿ ಜೀರ್ಣೋದ್ಧಾರ ಮಾಡಿಸಿದೆನು. 12ನೇ ಶತಮಾನದಲ್ಲಿ ದ್ರಾಕ್ಷಾರಾಮದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಪೀಠಾಚಾರ್ಯರಾದಂತೆ ಶ್ರೀ ಪಾಲ್ಕುರ್ಕಿ ಸೋಮನಾಥ ಮಹಾಕವಿಗಳು ತೆಲಗು ಭಾಷೆಯಲ್ಲಿ ರಚಿಸಿದ "ಪಂಡಿತಾರಾಧ್ಯ ಚರಿತ್ರೆ" ಎಂಬ ಪ್ರಸಿದ್ಧ ಗ್ರಂಥದಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಮಹಾಪಂಡಿತರೂ, ಸಿದ್ಧಪುರುಷರೂ, ಮಹಿಮಾ ಪುರುಷರೂ ಎಂದು ಹೇಳಲಾಗಿದೆ. ಇದಲ್ಲದೆ ಕರ್ಮಡಿ ಮಹಿಮೆಯನ್ನು ವರ್ಣಿಸುತ್ತಾ, ಬಲ್ಲಹ ಮಹಾರಾಜರು ಪಂಡಿತಾರಾಧ್ಯರ ಮಠವನ್ನು ಕಟ್ಟಿಸಿ ತನ್ನ ದೇಶವನ್ನೆಲ್ಲ ಈಶ್ವರಾರ್ಪಣ ಮಾಡಿದರೆಂತಲೂ, ಅವರ ಸತೀಮಣಿಯು ಸಹ ಇನ್ನೊಂದು ಮಠವನ್ನು ಕಟ್ಟಿಸಿದಳೆಂತಲೂ ಈ ಗ್ರಂಥದಲ್ಲಿ ಹೇಳಲ್ಪಟ್ಟಿದೆ. 15ನೇ ಶತಮಾನದಲ್ಲಿ ಸುಪ್ರಸಿದ್ಧ ಮಹಾಕವಿಗಳಾದ ಶ್ರೀ ಗುರುರಾಜ ಕವಿವರ್ಯರು ತೆಲುಗು ಪಂಡಿತಾರಾಧ್ಯರ ಚರಿತ್ರೆಯನ್ನು ಸಂಸ್ಕೃತದಲ್ಲಿ ಬರೆದಿರುವರು. ಇದನ್ನು ಆಸ್ಥಾನ ವಿದ್ವಾನ್ ಶ್ರೀ ಎನ್. ಆರ್. ಕರಿಬಸವ ಶಾಸ್ತ್ರಿಗಳು ಕನ್ನಡದಲ್ಲಿ ವ್ಯಾಖ್ಯಾನ ಭಾವಮಂಜರಿಯನ್ನು ಬರೆದು 1921 ರಲ್ಲಿ ಪ್ರಕಟಿಸಿದರು. ಈ ಗ್ರಂಥದಲ್ಲಿ ಅವರು ಶ್ರೀಶೈಲ ಪಂಡಿತಾರಾಧ್ಯ ಪೀಠವನ್ನು ಸಂದರ್ಶಿಸಿ ಪೂರ್ವದಲ್ಲಿ ಬಹು ವೈಭವದಿಂದ ವಿರಾಜಿಸುತ್ತಿದ್ದ ಪೀಠವು ಶಿಥಿಲವಾಗಿದ್ದುದನ್ನು ಕಂಡು ಈ ಪೀಠವು ಪುನಃ "ಶ್ರೀಮಲ್ಲಿಕಾರ್ಜುನ ಸ್ವಾಮಿಯ ಕೃಪೆಯಿಂದಲೂ ಪಂಡಿತಾರಾಧ್ಯರ ತಪಃಶಕ್ತಿಯಿಂದಲೂ ಪೂರ್ವದ ವೈಭವದಿಂದ ಬೆಳಗಲಿ" ಎಂದು ಹಾರೈಸಿದರು. ಈ ಮೊದಲು ಹೇಳಿದಂತೆ ಬೆಂಗಳೂರಿನ ಭಕ್ತರು ಈ ಪೀಠದ ಜೀರ್ಣೋದ್ಧಾರವನ್ನು 1960 ರಲ್ಲಿ ಬಹು ಸುಂದರವಾಗಿ ಮಾಡಿದರು.

ವಿಜಯನಗರದ ಪತನಾನಂತರ ಶ್ರೀಶೈಲದಲ್ಲಿಯ ದೇವಾಲಯಗಳಿಗೆ ಸರಿಯಾದ ರಕ್ಷಣೆ ಇಲ್ಲದಂತಾಗಿ, ಮಲ್ಲಿಕಾಫರ, ಪಿಂಡಾರಿಗಳು ಮುಂತಾದ ದರೋಡೆಖೋರರಿಗೆ ತುತ್ತಾಗಿ ನಾಶವಾಗುತ್ತ ಬಂದಿತು. ಅರಣ್ಯ, ಕಾಡುಮೃಗಗಳಿಂದ, ಮಲೇರಿಯಾ ಮುಂತಾದ ರೋಗಗಳಿಂದ ಈ ಕ್ಷೇತ್ರವು ಅಗಮ್ಯವಾಗಿ ಭಯಂಕರ ಯಾತ್ರಾಸ್ಥಾನವಾಗಿ ಪರಿಣಮಿಸಿತು. ಆದ್ದರಿಂದ ಶ್ರೀಶೈಲ ಪಂಡಿತಾರಾಧ್ಯ ಪೀಠಾಚಾರ್ಯರು ಆತ್ಮಕೂರಿನಲ್ಲಿ ಮತ್ತು ರೈಲು ಪ್ರಯಾಣಕ್ಕೆ ಅನುಕೂಲವಾಗಿರುವ ಗುಂತಕಲ್ಲಿನಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿ, ಬಹಳ ಪ್ರಯಾಸದಿಂದ ಶಿವರಾತ್ರಿ—ಯುಗಾದಿ ಉತ್ಸವಗಳಿಗೆ ಮಾತ್ರ ಶ್ರೀಶೈಲಕ್ಕೆ ಹೋಗಿ ಯಾತ್ರಿಕರಿಗೆ ಸಾಧ್ಯವಾದ ಸೌಕರ್ಯಗಳನ್ನು ಮಾಡುತ್ತಿದ್ದರು. ನಿತ್ಯಪೂಜಾದಿಗಳನ್ನು ಮಾಡಲು ವೀರಶೈವ ಮಾಹೇಶ್ವರರನ್ನು ಅರ್ಚಕರಾಗಿ ದೇವಾಲಯದಲ್ಲಿಯೇ ಇರುವಂತೆ ನಿಯಮಿಸಿದರು.

ಜಗದ್ಗುರು ಶ್ರೀ ನಾಗಲೂಟಿ ಭಿಕ್ಷಾವರ್ತಿ ಪಂಡಿತಾರಾಧ್ಯ ಶಿವಾಚಾರ್ಯರು, ಶ್ರೀ ವಾಗೀಶ ಶಿವಾಚಾರ್ಯರಿಗೆ ಪಂಡಿತಾರಾಧ್ಯ ಪೀಠದ ಸೂತ್ರವನ್ನು—ಮುದ್ರಿಕೆಯನ್ನು ಕೊಟ್ಟು ಅವರನ್ನೇ ಪಂಡಿತಾರಾಧ್ಯ ಪೀಠದ ಪೀಠಾಚಾರ್ಯರೆಂದು 1940 ರಲ್ಲಿ ಅಧಿಕಾರವನ್ನು ಅನುಗ್ರಹಿಸಿದರು. ಅದರಂತೆ ಇವರ ಪಟ್ಟಾಧಿಕಾರ ಮಹೋತ್ಸವವು 1941 ರಲ್ಲಿ ಇತರ ಪಂಚಾಚಾರ್ಯರ ಆಶೀರ್ವಾದದಿಂದ ನೆರವೇರಿಸಲ್ಪಟ್ಟಿತು. ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಮಹಾಸ್ವಾಮಿಗಳು ತಮ್ಮ ತಪೋಶಕ್ತಿಯಿಂದ ಭಕ್ತರಿಗೆಲ್ಲಾ ವರ ಪ್ರಸಾದಗಳನ್ನು ನೀಡುತ್ತಾ ಶ್ರೀಶೈಲ ಕ್ಷೇತ್ರದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ನಿರಂತರ ಕೃಷಿ ಮಾಡು

ತ್ತಿದ್ದಾರೆ. 1945 ರಲ್ಲಿ ಶ್ರೀಶೈಲದಲ್ಲಿ ಕಾಲರಾರೋಗದಿಂದ ಶಿವರಾತ್ರಿಗೆ ಹೋದ ಅನೇಕ ಯಾತ್ರಿಕರು ಮೃತಪಟ್ಟರು. ಈಗ ಮದ್ರಾಸ್ ಸರಕಾರದವರು ಈ ದಾರುಣ ದುರಂತವು ಮತ್ತೆ ಸಂಭವಿಸದಂತೆ ಉಪಯುಕ್ತವಾದ ಯೋಜನೆಯನ್ನು ಸಿದ್ಧಪಡಿಸಲು ಆಗ "ರಾಯಲಸೀಮಾ ಅಭಿವೃದ್ಧಿ ಶಾಖೆ"ಯ ಕಾರ್ಯದರ್ಶಿಯಾಗಿದ್ದ ನನ್ನನ್ನು ನಿಯಮಿಸಿದರು. ನಾನು ಬಾಲ್ಯದಲ್ಲಿ ನಮ್ಮ ಅಜ್ಜಿಯ ಸಂಗಡ ಶಿವರಾತ್ರಿಗೆ ಶ್ರೀಶೈಲಕ್ಕೆ ಹೋಗಿಬಂದ ಭಯಂಕರ ಅನುಭವ ಜ್ಞಾಪಕಕ್ಕೆ ಬಂದಿತು. ಮಾರ್ಗಸೌಕರ್ಯದ ಅಭಾವದಿಂದ ಬಂಡಿಯಲ್ಲಿ, ಕಾಲ್ನಡಿಗೆಯಿಂದ ಪೆದ್ದಚೆರುವಿನಿಂದ ನಾಗಪಾಟಿ, ಭೀಮುನ ಕೊಳ್ಳ, ಕೈಲಾಸದ್ವಾರದ ಮಾರ್ಗವಾಗಿ ದೇವಾಲಯಕ್ಕೆ ನಡೆದು ಶ್ರೀಶೈಲದಲ್ಲಿ ಒಂದು ವಾರದವರೆಗೆ ಇದ್ದು ಅಲ್ಲಿಗೆ ಶಿವರಾತ್ರಿಗೆ ಬಂದಿದ್ದ ಅಧಿಕಾರಿಗಳೊಡನೆ ಶ್ರೀ ವಾಗೀಶ ಶಿವಾಚಾರ್ಯರ ಅಪ್ಪಣೆಯಂತೆ ಶ್ರೀಶೈಲ ಮಾರ್ಗ ನಿರ್ಮಾಣಕ್ಕೂ, ಯಾತ್ರಿಕರ ವಸತಿ ಸೌಕರ್ಯಗಳಿಗೂ ನಿರ್ಮಿಸಬೇಕಾದ ಛತ್ರಗಳ ಯೋಜನೆಯನ್ನು ತಯಾರಿಸಿ ಸಮರ್ಪಿಸಲಾಯಿತು. ಆ ಯೋಜನೆಯನ್ನು ಮದ್ರಾಸ್ ಸರ್ಕಾರದವರು ಅಂಗೀಕರಿಸಿದರು. ಆದರೆ ಹಣದ ಅಭಾವದಿಂದ ಇದನ್ನು ಹಿಂದೂಡಲಾಯಿತು. ತರುವಾಯ ಆಂಧ್ರ ಪ್ರದೇಶದ ಅವತರಣವಾದ ಮೇಲೆ ನಾನು ರಾಯಲಸೀಮಾ ಅಭಿವೃದ್ಧಿ ಶಾಖೆಯ ಅಧಿಕಾರಿಯಾಗಿದ್ದುದರಿಂದ ಈ ಯೋಜನೆಯನ್ನು ಪೂರ್ತಿಗೊಳಿಸಲು ಒತ್ತಾಯ ಮಾಡಲಾಯಿತು. ಶ್ರೀ ವಾಗೀಶ ಶಿವಾಚಾರ್ಯರು ಕಾಶಿಯಲ್ಲಿ ತಮ್ಮ ಸ್ನೇಹಿತರಾಗಿದ್ದ ಮದ್ರಾಸ್ ಗವರ್ನರ್ ಶ್ರೀ ಪ್ರಕಾಶರಿಗೆ ಕೇಂದ್ರ ಸರಕಾರದಿಂದ ಧನಸಹಾಯ ಪಡೆಯಬೇಕೆಂದು ಬರೆದರು. ಅದರಂತೆ ಕೇಂದ್ರ ಸರಕಾರದ 25 ಲಕ್ಷ ರೂಪಾಯಿಗಳ ಧನಸಹಾಯದ ಫಲವಾಗಿ ಶ್ರೀಶೈಲಕ್ಕೆ ಬಸ್ಸು ಮಾರ್ಗ ನಿರ್ಮಾಣವಾಯಿತು. ಇದರ ಪ್ರಾರಂಭೋತ್ಸವವು 24 - 11 - 1957 ರಂದು—ಆಗ್ಗೆ ಆಂಧ್ರ-ಮೈಸೂರು ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಸಂಜೀವರೆಡ್ಡಿ, ಶ್ರೀ ನಿಜಲಿಂಗಪ್ಪನವರಿಂದ ವೈಭವಯುತವಾಗಿ ನಡೆಯಿತು. ಅದೇ ದಿನವೇ ನಾನು ಮತ್ತು ಅನಂತಪುರದ ಮಿತ್ರರು ಕಟ್ಟಿಸಲು ವಾಗ್ದಾನ ಮಾಡಿದ ಕುಟೀರಗಳಿಗೆ ಮುಖ್ಯ ಮಂತ್ರಿಗಳು ಶಂಕು ಸ್ಥಾಪನೆ ಮಾಡಿದರು. 1958 ರಲ್ಲಿ ನಾನು ಶ್ರೀಶೈಲ ವೀರಶೈವ ಸಂಘವನ್ನು ಸ್ಥಾಪಿಸಿ, "ವೀರಶೈವ ವಿಜ್ಞಾನ ಪ್ರದೀಪ ಪ್ರಸಾದ ಮಂದಿರಕ್ಕೆ" ಶಂಕುಸ್ಥಾಪನೆಯನ್ನು ಶ್ರೀಶೈಲ ಜಗದ್ಗುರುಗಳಿಂದ ಮಾಡಿಸಲಾಯಿತು. ಶ್ರೀ ಜಗುದ್ಗುರುಗಳವರು ಗುಂಟೂರು ಛತ್ರ ನಿರ್ಮಾಣಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಶೇಖರಿಸಿ ಶಂಕುಸ್ಥಾಪನೆ ಮಾಡಿದರು. ಪಂಡಿತಾರಾಧ್ಯ ಪೀಠ, ಸಭಾಮಂಟಪ ನಿರ್ಮಾಣವಾದ ತರುವಾಯ 1961 ರಲ್ಲಿ ದೇವಾಲಯಗಳ ಕಮೀಶನರವರು ಶ್ರೀಶೈಲದಲ್ಲಿ ಪಂಡಿತಾರಾಧ್ಯರ ಪೀಠವೇ ಇಲ್ಲವೆಂದು ಅಜ್ಞಾನಪೂರಿತವಾದ ಮೂರ್ಖತನದಿಂದ ದ್ವೇಷಾಸೂಯೆಗಳಿಂದ ಎತ್ತಿ ಹಿಡಿದು ಅದನ್ನು ವಾದಗ್ರಸ್ತ ವಿಷಯವನ್ನಾಗಿ ಮಾಡಿದರು. ಇದರ ತೀರ್ಮಾನವು ಕೋರ್ಟಿನಲ್ಲಿಯೇ ಆಗಬೇಕಾಯಿತು. 1967 ರಲ್ಲಿ ಆಂಧ್ರ ಸರಕಾರದ ರಾಜೀ ಒಪ್ಪಿಗೆಯಂತೆ ಕರ್ನೂಲ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಪಂಡಿತಾರಾಧ್ಯ ಪೀಠವು, ಜಂಗಮ ಮಲ್ಲಿಕಾರ್ಜುನರ ಸಮಾಧಿಯು ಶ್ರೀಶೈಲ ದೇವಸ್ಥಾನದಲ್ಲಿ ಇರುವುದಾಗಿಯೂ ಶ್ರೀಶೈಲ ಸೂರ್ಯಸಿಂಹಾಸನದ ಪಂಡಿತಾರಾಧ್ಯ ಶಿವಾಚಾರ್ಯರೇ ದೇವಾಲಯದ ಪೀಠಾಧಿಪತಿಗಳೆಂದೂ. ಮತ್ತು ಶ್ರೀಶೈಲಜಗದ್ಗುರುಗಳಿಗೆ ಪಾದಕಾಣಿಕೆಗಳು ಸಲ್ಲಬಹುದೆಂದೂ ತೀರ್ಮಾನಿಸಿದರು. (O. S. No. 24/67). ಯಾತ್ರಿಕರ ವಸತಿಗಾಗಿ ದೇವಸ್ಥಾನದ ಛತ್ರ, ವೀರಶೈವರ ಛತ್ರ, ವೈಶ್ಯರ ಛತ್ರ ಮತ್ತು ಸುಂದರವಾದ ಕುಟೀರಗಳು ಕಟ್ಟಲ್ಪಟ್ಟಿರುವುವು. ಮೈಸೂರು ಮುಖ್ಯ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರಪಾಟೀಲರವರಿಂದ ಪ್ರಾರಂಭವಾದ ಶ್ರೀ ಜಗದ್ಗುರುಗಳ ನಿತ್ಯಾನ್ನದಾಸೋಹ ಮಂದಿರದಲ್ಲಿ ಯಾತ್ರಿಕರಿಗೆ ನಿತ್ಯವೂ ಜಗದ್ಗುರುಗಳ ಪ್ರಸಾದವು ದೊರೆಯುತ್ತದೆ. ಮೈಸೂರು ಸರಕಾರದವರು ಸಹ ಈಗ ತಿರುಪತಿಯಲ್ಲಿ ಕಟ್ಟಿಸಿರುವಂತೆ ವಿಶಾಲವಾದ ಛತ್ರವನ್ನು 20 ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಿಸುತ್ತಿದ್ದಾರೆ. ಶ್ರೀಶೈಲ ಪ್ರಾಜೆಕ್ಟು ಇನ್ನು 3–4 ವರ್ಷಗಳಲ್ಲಿ ಪೂರ್ತಿಯಾಗುತ್ತದೆ. ಪ್ರಾಜೆಕ್ಟು ಮಾರ್ಗವಾಗಿ ಹೋದರೆ ಹೈದರಾಬಾದು 120 ಮೈಲು ಆಗುತ್ತದೆ. ಚಿತ್ರದುರ್ಗ, ಅನಂತಪುರ, ಕರ್ನೂಲ, ಗುಂತಕಲ್ಲು, ಗುಂಟೂರು, ತಿರುಪತಿ, ಮುಂತಾದ ಪಟ್ಟಣಗಳಿಂದ ಬಸ್ಸುಗಳು ನಿತ್ಯವೂ ಸಾವಿರಾರು ಯಾತ್ರಿಕರನ್ನು ಶ್ರೀಶೈಲಕ್ಕೆ ಕರೆದೊಯ್ಯುತ್ತಿರುವುವು. ಹೀಗೆ ಶ್ರೀ ಜಗುದ್ಗುರುಗಳ ತಪಃಶಕ್ತಿಯಿಂದ ಆಂಧ್ರ ಸರಕಾರದ ಮತ್ತು ಭಕ್ತರ ಸಹಕಾರದಿಂದ ಶ್ರೀಶೈಲವು ಭೂಕೈಲಾಸವಾಗುತ್ತಲಿದೆ!

ಶ್ರೀಶೈಲ ಕ್ಷೇತ್ರವು ಕನ್ನಡ - ಸಂಸ್ಕೃತ - ಆಂಧ್ರ ವಾಙ್ಮಯದಲ್ಲಿ ವಿಶೇಷವಾಗಿ ವರ್ಣಿಸಲ್ಪಟ್ಟಿದೆ. ಅಲ್ಲದೆ, ಶ್ರೀಶೈಲ ಪರ್ವತದಲ್ಲಿ ಅನೇಕ ಆಯುರ್ವೇದ ಔಷಧ ಗಿಡಮೂಲಿಕೆಗಳು ಈಗಲೂ ದೊರೆಯುತ್ತವೆ. ಈ ಕ್ಷೇತ್ರವು ಪಂಡಿತಾರಾಧ್ಯರೂ ಸಿದ್ಧನಾಗಾರ್ಜುನ ಮುಂತಾದ ತಪಸ್ವಿಗಳೂ ನೆಲಸಿದ ಪುಣ್ಯಭೂಮಿಯಾಗಿದೆ. ಈಗಲೂ ಇಲ್ಲಿ ಮೌನಸಾಧುಗಳು ದಿಗಂಬರರಾಗಿ ಜಟಾಧಾರಿಗಳಾಗಿ ಶ್ರೀಶೈಲ ದೇವಾಲಯದ ಹತ್ತಿರ ತಪಸ್ಸು ಮಾಡುತ್ತಿರುವರು. ಇವರು ಶಿವರಾತ್ರಿಯಲ್ಲಿ ಮಾತ್ರ ಶ್ರೀಶೈಲ ವಾಗೀಶ ಶಿವಾಚಾರ್ಯರ ಪಾದಪೂಜೆ ಮಾಡಲು ಹೊರಗೆ ಬರುತ್ತಾರೆ. ಶ್ರೀಶೈಲಂ ಪ್ರಾಜೆಕ್ಟ್ ಮುಕ್ತಾಯವಾದ ನಂತರ ಅನೇಕ ಕಟ್ಟಡಗಳಿಂದ ಮತ್ತು ವಿದ್ಯುಚ್ಛಕ್ತಿ ಸೌಕರ್ಯದಿಂದ ಕೂಡಿದ ಶ್ರೀಶೈಲ ಕ್ಷೇತ್ರವು, ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಬಹು ಪುಣ್ಯ ಕ್ಷೇತ್ರವಾಗಿ ರಮಣೀಯ ಪ್ರದೇಶವಾಗಿದೆ. ಇಂತಹ ಸಂಸ್ಕೃತ ವಿಶ್ವವಿದ್ಯಾನಿಲಯವು ತಿರುಪತಿ ದೇವಸ್ಥಾನ ಶ್ರೀಶೈಲ ದೇವಸ್ಥಾನಗಳ ಆದಾಯದಿಂದ ಕೇಂದ್ರ ಸರ್ಕಾರದ

ಮತ್ತು ಇತರ ಪ್ರದೇಶ ಸರಕಾರಗಳ ಧನಸಹಾಯದಿಂದ, ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ಕೃಪೆಯಿಂದ ಇಲ್ಲಿ ಸ್ಥಾಪಿತವಾಗಲಿ ಎಂದು ಹಾರೈಸುವೆ!

ಶ್ರೀಶೈಲದಲ್ಲಿ ಪಂಚಪೀಠಗಳು, ಮಠಗಳು, ದೇವಾಲಯದ ಸಮೀಪದಲ್ಲಿ ಶಿಥಿಲವಾಗಿರುತ್ತವೆ. ಅಲ್ಲದೆ ಬಸವಣ್ಣನವರ ಮಹಾಮನೆಯು ಸಹ ಶ್ರೀಶೈಲದಲ್ಲಿ ಇದ್ದಿತೆಂದೂ ಶ್ರೀಶೈಲ ಜಗದ್ಗುರುಗಳವರು ಬರೆದ ವಿಮರ್ಶಾತ್ಮಕವಾದ "ಲೋಕಾರಾಧ್ಯ ಬಸವಣ್ಣನವರು" ಎಂಬ ಗ್ರಂಥದಲ್ಲಿ ನಿರೂಪಿಸಿದೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಹಿಂದಿನ ಜನ್ಮದಲ್ಲಿ ಶಿಲಾದ ಮಹಾಮುನಿಯ ಪುತ್ರನಾದ ನಂದೀಶ್ವರನಾಗಿದ್ದನೆಂದು ಹೇಳಿರುವರು. ಶ್ರೀಶೈಲದಲ್ಲಿ ಮಹಾಶಿವಶರಣೆ ಅಕ್ಕಮಹಾದೇವಿ ಶ್ರೀ ಮಲ್ಲಿಕಾರ್ಜುನ ಲಿಂಗದಲ್ಲಿ ಐಕ್ಯವಾಗಿದ್ದಾಳೆ. ಅಕ್ಕಮಹಾದೇವಿ ತಪಸ್ಸು ಮಾಡಿದ ಗವಿಯು ದೇವಾಲಯಕ್ಕೆ 7 ಮೈಲಿ ದೂರದಲ್ಲಿದೆ. ಇದಕ್ಕೆ ಕಾಲುದಾರಿಯನ್ನು ಶ್ರೀಶೈಲ ವೀರಶೈವ ಸಂಘದವರು ಮಾಡಿಸಿದ್ದಾರೆ. ಮಹಾವೈರಾಗ್ಯಮೂರ್ತಿ ಸೂನ್ಯಸಿಂಹಾಸನಾಧಿಪತಿ ಶ್ರೀ ಅಲ್ಲಮಪ್ರಭುದೇವರು ಸಹ ಶ್ರೀಶೈಲದಲ್ಲಿ ತಪಸ್ಸು ಮಾಡಿ ಜ್ಯೋತಿರ್ಲಿಂಗದಲ್ಲಿ ಐಕ್ಯವಾದಂತೆ "ಪ್ರಭುಲಿಂಗ ಲೀಲೆ" ಸಾರುತ್ತದೆ. ಸೊಲ್ಲಾಪುರದ ಶಿದ್ಧರಾಮೇಶ್ವರರು ಕೊಳದಲ್ಲಿ ಬೀಳಲು ಉದ್ಯುಕ್ತನಾಗಿದ್ದಾಗ ಶ್ರೀ ಮಲ್ಲಿಕಾರ್ಜುನ ಸ್ವಾಮಿಯು ರಕ್ಷಿಸಿದ ಪುಣ್ಯಸ್ಥಳವಾಗಿದೆ. ಅಲ್ಲದೆ ಶಂಕರಾಚಾರ್ಯರು, ತಮಿಳು ದೇಶದ ಜ್ಞಾನಸಮ್ಮಂದರ್, ಮಾಣಿಕ್ಯವಾಚಗರ್ ಮುಂತಾದ ಮಹಾ ಶರಣರು ಶ್ರೀಶೈಲದ ಮಲ್ಲಿಕಾರ್ಜುನ ಸ್ವಾಮಿಯ ದರ್ಶನ ಮಾಡಿ, ಭಕ್ತಿಗೀತೆಗಳನ್ನು ಹಾಡಿರುವರು. ವೀರಶೈವ ಧರ್ಮಾನುಸಾರವಾಗಿ ಶ್ರೀಶೈಲ ಮಲ್ಲಿಕಾರ್ಜುನ ಜ್ಯೋತಿರ್ಲಿಂಗವನ್ನು ಜಾತಿ - ಮತ - ಕುಲಭೇದವಿಲ್ಲದೆ ಎಲ್ಲರೂ ಸ್ವಹಸ್ತದಿಂದ ಮುಟ್ಟಿ ಪೂಜೆ ಮಾಡುವ ಮಹಾ ಭಾಗ್ಯವು ಅನಾದಿಕಾಲದಿಂದ ಎಲ್ಲರಿಗೂ ಲಭಿಸಿದೆ. ಶಿವಶರಣ ದಾಸಿಮಯ್ಯನ ವಂಶಿಕರು ಶಿವರಾತ್ರಿಯಲ್ಲಿ ಮಲ್ಲಿಕಾರ್ಜುನ ಶಿಖರಕ್ಕೆ ದಿನಾಲು ಒಂದು ಮೊಳದ ಪ್ರಕಾರ ನೇಯ್ದು 365 ಮೊಳ ಉದ್ದದ ಪಾಗವನ್ನು ಲಿಂಗಾಕಾರವಾಗಿ ಪಟ್ಟಿಯಲ್ಲಿ ತಂದು ಪೂಜೆಮಾಡಿ ಅರ್ಧರಾತ್ರಿ ಸಮಯಕ್ಕೆ ಶಿಖರಕ್ಕೆ, ದೇವಾಲಯದ ಮೇಲ್ಭಾಗಕ್ಕೆ ಸುತ್ತುವರು. ಶಿವರಾತ್ರಿ ಮತ್ತು ಯುಗಾದಿಗಳಲ್ಲಿ ಲಕ್ಷಾಂತರ ಯಾತ್ರಿಕರು ಸ್ವಾಮಿಯ ದರ್ಶನಕ್ಕಾಗಿ ಬರುತ್ತಿರುವರು. ಧಾರವಾಡದ ಶ್ರೀ ಮೃತ್ಯುಂಜಯಸ್ವಾಮಿಗಳ ಆದೇಶಾನುಸಾರವಾಗಿ ಶಿವಾನುಭವ ಮಂಟಪವು ಶ್ರೀಶೈಲ ವೀರಶೈವ ಸಂಘದ ಪ್ರಾಂಗಣದಲ್ಲಿ ಕಟ್ಟಿಸಲ್ಪಟ್ಟಿದೆ. ಶಿವಾನುಭವ ಗೋಷ್ಠಿ ಇಲ್ಲಿ ನಡೆಯುತ್ತದೆ. ಅಲ್ಲದೆ, ಇದರಲ್ಲಿ ಭಾರತೀಯ ವಿದ್ಯಾಪೀಠವು ಸಿದ್ಧಗಂಗಾ ಮಠಾಧಿಪತಿಗಳಾದ ಶ್ರೀ ಶಿವಕುಮಾರಸ್ವಾಮಿಗಳಿಂದ ಸ್ಥಾಪಿತವಾಗಿದೆ. ವೀರಶೈವರಿಗೆ ಶ್ರೀಶೈಲವು ಮಹಾಪವಿತ್ರವಾದ ಪುಣ್ಯಕ್ಷೇತ್ರವಾಗಿದೆ. ಇಲ್ಲಿ ವೀರಶೈವ ಧರ್ಮದ ಮುಖ್ಯ ತತ್ವವಾದ ಗುರು - ಲಿಂಗ - ಜಂಗಮ - ಭಕ್ತಿ - ಜ್ಞಾನ - ಕ್ರಿಯಾಯೋಗ ಸಾಕ್ಷೀಭೂತವಾಗಿದೆ. ಶ್ರೀಶೈಲ ಜಗದ್ಗುರುಗಳು ಸ್ವಧರ್ಮ ನಿಷ್ಠೆಯನ್ನೂ ಪರಧರ್ಮ ಸಹಿಷ್ಣುತೆಯನ್ನೂ ಸರ್ವಧರ್ಮ ಸಮನ್ವಯವನ್ನೂ, ಬೋಧಿಸುತ್ತ ಧರ್ಮೋಪದೇಶವನ್ನು ಮಾಡುತ್ತಲಿರುವರು. ವೀರಶೈವ ಧರ್ಮವು ವಿಶ್ವಮಾನವ ಧರ್ಮವೆಂದು ನಿರೂಪಿಸಿರುವರು.

ಪಂಚ ಜಗದ್ಗುರುಗಳಿಗೆ ನಮ್ಮ ಪ್ರಣಾಮ

ಎಸ್. ಆರ್. ಆಟೋಮೊಬೈಲ್ಸ್
ಜೈಲ್ ರೋಡ್, ಚಿಕ್ಕಮಗಳೂರು
ಮಾಲೀಕರು: ಎಸ್. ಎ. ನಾರಾಯಣರಾವ್

For all your banking facilities

State Bank of Mysore

AT YOUR SERVICE ALWAYS

WE HAVE DEPOSIT ACCOUNTS BEARING
ATTRACTIVE RATES OF INTEREST
TO SUIT YOUR NEEDS.

Head Office :

AVENUE ROAD, BANGALORE

ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಅನೇಕ ವರ್ಷಗಳಿಂದ ಪ್ರವಾಸಕ್ಷೇತ್ರದಲ್ಲಿ ಅನುಭವ ಪಡೆದ ಸಂಸ್ಥೆ.

ಭಾರತ ದೇಶಾದ್ಯಂತ ಸುಲಭ ದರದಲ್ಲಿ ಆಧುನಿಕ ವೈಭವಯುತ ಸೂಪರ್ ಡಿಲಕ್ಸ್, ಕಾಂಟಿನೆಂಟಲ್, ಸೂಪರ್ ಕಾಂಟಿನೆಂಟಲ್ ಬಸ್ಸಿನಲ್ಲಿ ಚಾರಿತ್ರಿಕ, ಪುರಾಣ ಪ್ರಸಿದ್ಧ ಸ್ಥಳಗಳಿಗೆ ಸುವ್ಯವಸ್ಥಿತ ಪ್ರವಾಸಗಳಿಗೆ ನಮ್ಮಲ್ಲಿ ಭೇಟಿ ಕೊಡಿ.

ಪ್ರೊ. M. ಸಿದ್ಧಲಿಂಗಪ್ಪ

ಫೋನ್ ನಂ: 70047

ಶ್ರೀ ಮಲ್ಲಿಕಾರ್ಜುನ ಟ್ರಾವಲ್ಸ್

ನಂ, 41, ಆಲ್ಬರ್ಟ್ ವಿಕ್ಟರ್ ರೋಡ್,
ಚಾಮರಾಜಪೇಟೆ, ಒಂದನೇ ರಸ್ತೆ,
ಬೆಂಗಳೂರು,

With best Compliments from:

NATIONAL TRAVELS

H. O. Bidangere, Phone No. 40 Kunigal Tq. Tumkur Dist.

BRANCHES

1. No. 5, Albert Victor Road,
   Kalasipalyam, Bangalore-2 *Phone: 24488*
2. Behind Taj Mahal Hotel,
   Gandhi Nagar, Bangalore-9.
3. Near Hotel Janatha,
   S. C. Road, Bangalore-9.
4. Railway Station Road,
   Bangalore.
5. Railway Station Road,
   Dharwar, *Phone: 8580*
6. Opposite Central Bus Stand,
   K. C. Bhavan-Building *Phone: 2001*
7. Belmutta Road, Hampana Katte, Mangalore. *Phone: 6343*

Daily Sight Seeing trips by Super Continental Coach.

To Belgaum, Dharwar, Hubli, Mangalore, Udipi. Coondapur and Gulburga.

Please Contact us for long trips and tours.

By Super Continental Coach on Contract-Basis.

ಶ್ರೀ ಶ್ರೀ ರಂಭಾಪುರಿ ಜಗದ್ಗುರುಗಳವರ ಶಿವಪೂಜಾ ಸಮೀಕ್ಷೆ



ಸುಲೋಚನಾದೇವಿ ಅರಾಧ್ಯರು

ಶ್ರೀಮತಿ ಸುಲೋಚನಾದೇವಿ ಆರಾಧ್ಯರದು ದೇಶಭಕ್ತರ ಮನೆತನ. ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಕೈಲಾಸವಾಸಿ ಜಂಗಿನ ಮುರುಗಯ್ಯನವರ ಮೊಮ್ಮಗಳು ಈಕೆ. ಪರಮ ದೇಶ ಭಕ್ತೆಯಾದ ಈಕೆ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನೂ ಅನುಭವಿಸಿದ್ದಾರೆ. ವೀರಶೈವ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿರುವ ಇವರು ಮನೋಹರವಾಗಿ ಬರೆಯ ಬಲ್ಲರು. ಮಹಿಳೆಯರ ಪ್ರಗತಿಯ ಬಗ್ಗೆ ಮಹತ್ವಾಕಾಂಕ್ಷೆ ಹೊಂದಿರುವ ಇವರು ಮೈಸೂರು ರಾಜ್ಯದ ಸಣ್ಣ ಕೈಗಾರಿಕೆ ಮಂಡಲಿ ಅಧ್ಯಕ್ಷ ಶ್ರೀ ಆರ್. ಎಸ್ ಆರಾಧ್ಯರ ಧರ್ಮಪತ್ನಿ.

“ ಶ್ರವಣಂ-ಕೀರ್ತನಂ ಶಂಭೋಃ ಸ್ಮರಣಂ
ಪಾದಸೇವನಂ ಅರ್ಚನಂ-ವಂದನಂ, ದಾಸ್ಯಂ।
ಸಖ್ಯಂ ಆತ್ಮನಿವೇದನಂ. ”

ಈ ರೀತಿಯಾಗಿ ನವವಿಧ ಭಕ್ತಿಗಳು ಹೇಳಲ್ಪಟ್ಟಿವೆ. ಷೋಡಶೋಪಚಾರಗಳಿಂದ ಪರಶಿವನನ್ನು ಅರ್ಚಿಸುವುದೇ ನವವಿಧ ಭಕ್ತಿ. ಇದರಲ್ಲಿ ಸಾಧನ-ಸಾಮಗ್ರಿಗಳು ವಿವಿಧವಾಗಿರುತ್ತವೆ.

ಲೋಕಕ್ಕೆ ಮಾರ್ಗದರ್ಶನವಾಗಿ ಪೂಜಾ ವಿಧಾನದಲ್ಲಿ ಎರಡು ಬಗೆ ಉಂಟು.

(1). ಸಾಕಾರ, (2). ನಿರಾಕಾರ ಎಂದು. ಇವುಗಳಲ್ಲಿ ಚಿತ್ತಶುದ್ಧಿಗೆ, ಚಿತ್ತದ ಏಕಾಗ್ರತೆಗೆ ಹೇತುವಾದ ಸಾಕಾರ ಪೂಜೆಯೇ ಶ್ರೇಷ್ಠವಾದುದು. ನಿರಾಕಾರ ಪೂಜೆ ಎಲ್ಲರಿಂದಲೂ ಸಾಧ್ಯವಾದುದಲ್ಲ. ಅದು ಕೇವಲ ಯೋಗಿಗಳು, ತಪಸ್ವಿಗಳಿಂದ ಮಾತ್ರ ಸಾಧ್ಯವಾದುದು. ಆದರೆ ಜನಸಾಮಾನ್ಯರ ಉದ್ಧಾರಕ್ಕೆ ಸಾಕಾರ ಲಿಂಗಾರ್ಚನೆಯೇ ಪರಮ ಸಾಧುವಾದುದು. ಶ್ರೀ ರಂಭಾಪುರಿ ಜಗದ್ಗುರುಗಳು ಸಾಕಾರ-ನಿರಾಕಾರ ಎರಡರಲ್ಲೂ ಸಿದ್ಧಿಯನ್ನು ಪಡೆದ ಸಿದ್ಧಪುರುಷರು. ಇವರು ಕೈಕೊಳ್ಳುವ ಪ್ರತಿಯೊಂದು ಪೂಜಾಕ್ರಮವೂ ಲೋಕಮಂಗಳಕರವಾಗಿದೆ.

ಅವರು ಶಿವಾಗಮ ಶಾಸ್ತ್ರ ತತ್ವಾನುಸಾರವಾಗಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲವೆಂಬ ಆಚರಣೆಗಳನ್ನು ತಮ್ಮ ಲಿಂಗಾರ್ಚನೆಯಲ್ಲಿ ಅಳವಡಿಸಿಕೊಂಡಿದ್ದಾರೆ.

ಜಗದ್ಗುರುಗಳವರ ಶಿವಪೂಜಾ ಸಮೀಕ್ಷೆಗೆ ಮುನ್ನ ಅವರ ಪೂಜಾತತ್ವಗಳ ಪರಿಚಯ ಮತ್ತು ಪುರಾತನ ಕಾಲದಿಂದಲೂ ಪರಂಪರಾನುಗತವಾಗಿ ನಡೆದುಬಂದ ಪೂಜಾ ವಿಧಿ-ವಿಧಾನ ಗಳು ಮತ್ತು ಕಾಲಧರ್ಮಕ್ಕನುಸಾರವಾಗಿ ಅವುಗಳಲ್ಲಿ ಉಂಟಾದ ಪರಿವರ್ತನೆಗಳು ಇವುಗಳ ಬಗ್ಗೆ ಪ್ರಥಮವಾಗಿ ವಿಮರ್ಶಿಸೋಣ.

ಸಮಾಜ-ಸಂಸ್ಕೃತಿಗಳು ಮಾನವ ಜೀವನದ ಎರಡು ಅಂಗಗಳು. “ಮಾನವ ಸಂಘಜೀವಿ. ಸಮಾಜ ಮಾನವನಿಗೆ ಸಂಜೀವಿನಿ”. ಮಾನವ ಜೀವನದಲ್ಲಿ, ಮಾನವ ಸಮಾಜದಲ್ಲಿ ಅಧರ್ಮ ಹೆಚ್ಚಿ ಮನುಷ್ಯನ ರೀತಿ ನೀತಿಗಳು, ನಡೆ-ನುಡಿಗಳು, ಆಚಾರ-ವಿಚಾರ

ಗಳು ಅವನತಿಗಿಳಿದು ಮನುಷ್ಯ ಅಧರ್ಮಿಯಾದಾಗ ಮತ್ತು ಮನುಷ್ಯ ತನ್ನ ಜೀವನದಲ್ಲಿ ಕಷ್ಟಕಾರ್ಪಣ್ಯಗಳಿಗೆ ಸಿಲುಕಿದಾಗ ಪರಶಿವನೆಡೆಗೆ ತನ್ನ ಮನಸ್ಸನ್ನು ತಿರುಗಿಸುವುದು ಸಹಜವಾಗಿದೆ. “ಸಂಕಟ ಬಂದಾಗ ವೆಂಕಟರಮಣ” ಎಂಬಂತೆ. ಆಗ ಪರಮೇಶ್ವರನ ಕೃಪೆ ಮಾನವನಿಗೆ ಬೇಕೇ ಬೇಕು. ಮನುಷ್ಯ ಪತಿತನಾಗಿ ಪಾಶವೀ ಪ್ರವೃತ್ತಿಯಿಂದ, ಆಶೆ-ಆಮಿಷಗಳಿಂದ ವಿಷಯಾಸಕ್ತನಾದಾಗ ಅವನ ಉದ್ಧಾರಕ್ಕೆ ಸಂಸ್ಕಾರ ಎಂಬ ಒಂದು ಧಾರ್ಮಿಕ ವಿಚಾರ ಬೇಕು. ಈ ಸಂಸ್ಕಾರ ಸದ್ಗುರುವಿನಿಂದ ದೊರೆಯುವುದು. ಈ ವಿಚಾರದಿಂದ ಮನುಷ್ಯನು ತನ್ನ ಅಜ್ಞಾನದಿಂದ ದೂರವಾಗಿ ಅರಿವು ಮೂಡಿದಾಗ ಶುದ್ಧಾಚರಣೆಗೆ ತೊಡಗುತ್ತಾನೆ. ಪವಿತ್ರ ಜೀವನ, ಶಿವನಲ್ಲಿ ದೃಢವಾದ ಭಕ್ತಿ ಮತ್ತು ಲಿಂಗಾರ್ಚನೆ, ಗುರುಭಕ್ತಿ ಇವುಗಳಿಂದ ಮನುಷ್ಯನ ಮನಸ್ಸಿನ ಮಲಿನತೆಯನ್ನು ತೊಳೆದು ನಿರ್ಮಲಮಾಡಿ ಜೀವನವನ್ನು ವಿಷಯಗಳಿಗೆ ಅಂಟಿಕೊಳ್ಳದಂತೆ ಮಾಡುವುದೇ ಧಾರ್ಮಿಕ ಸಂಸ್ಕಾರದ ಗುರಿ. ಇದರಿಂದ ಆತ್ಮಶುದ್ಧಿಯನ್ನು ಹೊಂದಿ ನಿರ್ಮಲನಾಗುತ್ತಾನೆ ಸಾಧಕನು.

ಭಾರತದಲ್ಲಿ ಭಗವಂತನ ಸಾಕಾರ ಪೂಜೆ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಮತ್ತು ಕಾಲಕ್ಕನುಗುಣವಾಗಿ ಧರ್ಮವು ಪರಿವರ್ತನೆ ಹೊಂದುತ್ತಾ ಬಂದಿದೆ.

ಕುಂಬಾರನಿಗೆ ಗಡಿಗೆಯನ್ನು ಮಾಡಲು ಮೊದಲು ಮಣ್ಣು ಬೇಕು. ಅದನ್ನು ಹದಮಾಡಿದ ಮೇಲೆ ಚಕ್ರ, ದಾರ, ಮರದ ಕೋಲು ಮೊದಲಾದ ವಸ್ತುಗಳು ಬೇಕು. ಇದೇ ರೀತಿ ಶಿವನ ಪೂಜೆಗೆ ವೀರಶೈವ ಧರ್ಮದ ತತ್ವಾನುಸಾರ ಮತ್ತು ಪೂಜ್ಯ ಜಗದ್ಗುರುಗಳವರ ಪೂಜಾ ವಿಧಾನಗಳಿಗನುಸಾರವಾಗಿ ಅಷ್ಟಾವರಣಗಳು, ಪಂಚಾಚಾರಗಳು, ಷಟ್‌ಸ್ಥಲಗಳು ಮುಂತಾದ ಸಾಧನಸಂಪತ್ತುಗಳು ಬೇಕು.

ಪೂಜ್ಯ ಜಗದ್ಗುರುಗಳವರ ಪೂಜಾಕ್ರಮದಲ್ಲಿ ಅಷ್ಟಾವರಣ ತತ್ವಗಳ ಸೂಕ್ಷ್ಮ ಪರಿಚಯ :— ಅಷ್ಟಾವರಣಗಳು ಎಂದರೆ ಎಂಟು ಆವರಣಗಳು ಎಂದು ಅರ್ಥ. ಇವುಗಳು ಬಾಹ್ಯರಂಗದಲ್ಲಿ ಅಂತರಂಗದಲ್ಲಿ ಎಂದು ಎರಡು ಭೇದಗಳಾಗಿವೆ.

ಬಾಹ್ಯರಂಗದಲ್ಲಿ :— ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ.

ಅಂತರಂಗದಲ್ಲಿ :—ಅರಿವು, ಆನಂದ, ಅನುಭವ, ಸಮರಸ, ಮುಕ್ತಿ. ಇವುಗಳ ಉಪಾಸನೆಗಾಗಿ ವಿಭೂತಿ- ರುದ್ರಾಕ್ಷಿ- ಮಂತ್ರ ಇವುಗಳ ಭೇದಪ್ರಭೇದಗಳು ಇನ್ನೂ ಅನೇಕ ಉಂಟು. ಅವುಗಳ ವಿವರಣೆಯನ್ನು ಅವಶ್ಯವಿದ್ದಾಗ ಕೊಡೋಣ.

ಪಂಚಾಚಾರಗಳು :—ಐದು ಆಚಾರಗಳು. ಪಂಚೇಂದ್ರಿಯಗಳ ಶುದ್ಧಾಚರಣೆಗಳು. ಇವುಗಳು ಯಾವುವೆಂದರೆ - ಲಿಂಗಾಚಾರ-ಸದಾಚಾರ - ಶಿವಾಚಾರ - ಗಣಾಚಾರ - ಭೃತ್ಯಾಚಾರ. ಇವುಗಳ ಆಚರಣೆ ಈ ರೀತಿ ಇದೆ.

1. ಲಿಂಗಾಚಾರ :—ನಡೆ, ನುಡಿ, ಶುದ್ಧತೆ. “ನುಡಿದರೆ ಮುತ್ತಿನ ಹಾರದಂತಿರಬೇಕು”, “ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ”. ಮನುಷ್ಯನಲ್ಲಿ ಅಂಗಗುಣಗಳಳಿದು. ಲಿಂಗಗುಣಗಳಳವಡಬೇಕು. (ಮಂಗಳ ಗುಣ). “ಆಚಾರವೇ ಸ್ವರ್ಗ, ಅನಾಚಾರವೇ ನರಕ”.

2. ಸದಾಚಾರ :—ಕ್ರಿಯಾಶೀಲತೆ, ಸತ್ಯ ಶುದ್ಧ ಕಾಯಕ, ಕಾಯಕವೇ ಕೈಲಾಸ. “ಕಾಯಕದಲ್ಲಿ ನಿರತನಾದರೆ ಗುರು-ಲಿಂಗ-ಜಂಗಮ. ಮುಂದೆ ಇದ್ದರೂ ಹಂಗು ಹರಿಯಬೇಕು”. “ಚಿತ್ತಶುದ್ಧಿಯಿಂದ ಕಾಯಕವ ಮಾಡುವ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು”. ಎಂದು ಶರಣೆ ಲಕ್ಷಮ್ಮ ಹೇಳಿದ್ದಾಳೆ.

3. ಶಿವಾಚಾರ :—ಐಕ್ಯಸಾಧನೆ, ಅಭೇದಬುದ್ಧಿ, “ಸರ್ವಂ ಲಿಂಗಮಯಂ ಜಗತ್” ಎಂಬ ವಿಶ್ವಾತ್ಮಭಾವನೆ.

4. ಗಣಾಚಾರ :__ದುರ್ಗುಣಗಳನ್ನು, ಭವಿಗಳನ್ನು, ನಾಸ್ತಿಕರನ್ನು, ಸದ್ಗುಣಿಗಳನ್ನಾಗಿ, ಭಕ್ತರನ್ನಾಗಿ, ಆಸ್ತಿಕರನ್ನಾಗಿ ಮಾಡುವುದೇ ಗಣಾಚಾರ. “ತನಗೆ ಮುನಿದವರಿಗೆ ತಾ ಮುನಿಯಲೇತಕ್ಕಯ್ಯ...... ಮನೆಯೊಳಗಣ ಕಿಚ್ಚು ತನ್ನ ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು ಕೂಡಲಸಂಗಮದೇವಾ”. ಅಂದರೆ ಸ್ನೇಹ- ಸೌಹಾರ್ದತೆಯಿಂದಿರಬೇಕು ಎಂದು ಸಮರಸತೆಯನ್ನು ಬೋಧಿಸಿದೆ.

5. ಭೃತ್ಯಾಚಾರ :—ಸೇವಕ – ಸೇವ್ಯಭಾವ, ಕಿಂಕರಭಾವ, “ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ”. ಎಂಬ ಕೈಂಕರ್ಯ ಭಾವ. ಇವೇ ಪಂಚಾಚಾರಗಳು.

ಷಟ್‌ಸ್ಥಲಗಳು :__ಆರು ಸ್ಥಲಗಳು. ಇವು ಜೀವ ಪರಮರ ಐಕ್ಯವನ್ನು ಸಾಧಿಸುವ ಸ್ಥಲಗಳು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಈ ಆರು ಸ್ಥಲಗಳು ಭೇದ - ಪ್ರಭೇದಗಳಾಗಿ 36 ಸ್ಥಲಗಳಾದುವು. ಈ 36 ಸ್ಥಲಗಳನ್ನು ಚೆನ್ನಬಸವಣ್ಣನವರು 216 ಸ್ಥಲಗಳಾಗಿ ಮಾಡಿದ್ದಾರೆ. ಇವುಗಳನ್ನೇ “ಸಿದ್ಧಾಂತ ಶಿಖಾಮಣಿ”ಯಲ್ಲಿ 101 ಸ್ಥಲಗಳಾಗಿ ಮಾಡಿದ್ದಾರೆ.

ಭಕ್ತಿ, ಜ್ಞಾನ, ವೈರಾಗ್ಯ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಇವುಗಳನ್ನು ಷಟ್‌ಸ್ಥಲ ಸಿದ್ಧಾಂತ ಒಳಗೊಂಡಿದೆ.

ಭಕ್ತ, ಮಹೇಶ ಸ್ಥಲಗಳು :— ಭಕ್ತಿಯನ್ನು, ದ್ವೈತವನ್ನು; ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳು — ಜ್ಞಾನ ಮತ್ತು ವಿಶಿಷ್ಟಾದ್ವೈತವನ್ನು;

ಶರಣ ಮತ್ತು ಐಕ್ಯ ಸ್ಥಲಗಳು :— ಶಿವ-ಜೀವರ ಸಂಪೂರ್ಣ ಐಕ್ಯವನ್ನು ತೋರಿಸಿಕೊಡುತ್ತವೆ. ಈ ಆರು ಸ್ಥಲಗಳು ಆತ್ಮನ ಆಧ್ಯಾತ್ಮಿಕೋನ್ನತಿಯ ಆರು ಮೆಟ್ಟಲುಗಳಾಗಿವೆ. ಇದೇ ಅದ್ವೈತ.

ವೀರಶೈವ ಧರ್ಮದಲ್ಲಿ ಅಷ್ಟಾವರಣಗಳೇ ಧರ್ಮದ ಅಂಗವಾಗಿ ಪಂಚಾಚಾರವೇ ಧರ್ಮದ ಪ್ರಾಣವಾಗಿ ಷಟ್‌ಸ್ಥಲಗಳೇ ಜೀವ-ಪರಮರ ಐಕ್ಯಕ್ಕೆ ಸಾಧನವಾಗಿವೆ. ಇವುಗಳಿಂದಲೇ ಲಿಂಗಾಂಗ ಸಾಮರಸ್ಯದ ಸಿದ್ಧಿ. ಇದೇ ಜಗದ್ಗುರುಗಳವರ ಅನುಷ್ಠಾನ ಕ್ರಮ.

ವೇದ, ಆಗಮ, ಪುರಾಣಗಳ ಪೂಜಾ ವಿಧಾನ ಸಮೀಕ್ಷೆಯನ್ನು ಕೊಂಚ ಅವಲೋಕಿಸಿದರೆ ಈರೀತಿ ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ಮೊದಲು ಮಾನಸಿಕ ಧ್ಯಾನ (ತಪಸ್ಸು) ಪ್ರಾರಂಭವಾಯಿತು. ಅನಂತರ ಯಜ್ಞಯಾಗಾದಿಗಳು, ಯೋಗ ಸಾಧನೆಗಳು ಪ್ರಾರಂಭವಾದುವು. ಇವರ ದೇವರುಗಳು ವೀರ ಶೈವರಂತೆ ಪರಾತ್ಪರ ವಸ್ತು ಪರಮಾತ್ಮನೊಬ್ಬನೇ ಆಗಿರಲಿಲ್ಲ. ಇವರಿಗೆ ಬಹುಸಂಖ್ಯಾತ ದೇವರುಗಳಿದ್ದರು. ಇವರಲ್ಲಿ ಇಂದ್ರ, ಅಗ್ನಿ, ಸೋಮ, ವಿಷ್ಣು, ಸೂರ್ಯ, ಸವಿತೃ ಮುಂತಾದ ಇನ್ನೂ ಅನೇಕ ದೇವತೆಗಳಿದ್ದರು. ಇವರನ್ನೆಲ್ಲಾ ಪೂಜಿಸಿ ಒಲಿಸಿಕೊಳ್ಳಬೇಕಾಗಿತ್ತು. ತನ್ನ ಇಷ್ಟಾರ್ಥಸಿದ್ಧಿಗಾಗಿ, ಇದರ ಜೊತೆಗೆ ಮನುಷ್ಯ ಭಯ-ಭೀತಿಗೊಳಗಾಗಿ ಭೂತ- ಪ್ರೇತಗಳನ್ನೂ ಕೂಡ ಪೂಜಿಸುತ್ತಿದ್ದನು. ಮತ್ತು ಅಂಧಶ್ರದ್ಧೆಯ ವಸ್ತು ಪೂಜೆಗಳೂ ಸಹ ನಡೆಯುತ್ತಿದ್ದವು. ಅಂದರೆ ಮಾಟ ಮಂತ್ರ, ತಂತ್ರ ಮುಂತಾದ ಅನಾಗರಿಕ ಧರ್ಮಗಳು. ಇದರ ಜೊತೆಗೆ ರಕ್ತಾಭಿಷೇಕ, ಪ್ರಾಣಿಬಲಿ ಕೊನೆಗೆ ನರಬಲಿಯೂ ಸಹ ನಡೆಯುತ್ತಿತ್ತು ಎಂದು ಗ್ರಂಥಗಳಿಂದ ತಿಳಿದುಬರುತ್ತದೆ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಮುಂದಿನ ಯುಗದಲ್ಲಿ ಪೂಜೆಯಲ್ಲಿ ಸ್ವಲ್ಪ ಪರಿವರ್ತನೆ ಕಂಡು ಬರುತ್ತದೆ. ಸತ್ತವರು ಬದುಕಿದವರ ಕನಸಿನಲ್ಲಿ ಬಂದರೆ ಅವರಿಗೆ ಪಿತೃ ಪೂಜೆಯೆಂದೂ, ಒಂದುವೇಳೆ ಅವರು ಬಲಿಷ್ಠರೂ, ಶಕ್ತಿಶಾಲಿಗಳೂ ಆಗಿದ್ದರೆ ಅವರಿಗೆ ಗೌರವಗಳು ಹೆಚ್ಚುತ್ತಿದ್ದವು. ಮತ್ತು ಅವರೇ ದೇವರುಗಳಾಗಿ ಪರಿಣಮಿಸುತ್ತಿದ್ದರು. ಈ ಒಂದು ಪದ್ಧತಿ ಎಲ್ಲಾ ಧರ್ಮಗಳಲ್ಲೂ ಕಂಡು ಬರುತ್ತಿತ್ತು. ಈ ಅಂಧ ಶ್ರದ್ಧೆಗಳು 11ನೇ ಶತಮಾನದ ವೇಳೆಗೆ ಕಡಿಮೆಯಾಗುತ್ತಾ ಬಂದುವು. 20ನೇ ಶತಮಾನಕ್ಕಂತೂ ಈ ಅಂಧ ಶ್ರದ್ಧೆಗಳು ಹೇಳಹೆಸರಿಲ್ಲದಂತಾಗುತ್ತವೆ.

19ನೇ ಶತಮಾನದ ಅಂತ್ಯಕಾಲದಲ್ಲಿ ಜಗದ್ಗುರು ಪಂಚಾಚಾರ್ಯ ಪೀಠಾಧೀಶ್ವರ ಶ್ರೀಮದ್ರಂಭಾಪುರಿ ಜಗದ್ಗುರುಗಳವರ ಶಿವಪೂಜಾ ವಿಧಾನವನ್ನು ಸೂಕ್ಷ್ಮವಾಗಿ ಅವಲೋಕಿಸೋಣ. ಇದುವರೆಗೂ ಅವರ ಆದರ್ಶ ತತ್ವಗಳನ್ನೂ ಮತ್ತು ಇತರ ಪೂಜಾ ಪದ್ಧತಿಗಳನ್ನೂ ತಿಳಿದುಕೊಂಡಿದ್ದಾಯಿತು.

ಈಗ ಪೂಜ್ಯ ಜಗದ್ಗುರುಗಳವರ ಶಿವಪೂಜೆ, ಅವರ ಪೂಜಾ ಗೃಹ ಮತ್ತು ಅಲ್ಲಿ ಇರತಕ್ಕ ಪ್ರತಿಯೊಂದು ಪೂಜಾ ವಸ್ತುವೂ ನಮಗೆ ಲೌಕಿಕ ಮತ್ತು ಪಾರಮಾರ್ಥಿಕ ಸಂಕೇತವಾಗಿ ಕಂಡು ಬರುತ್ತವೆ. ಪೂಜ್ಯ ಸನ್ನಿಧಿಯವರು ಮಂಗಳಸ್ನಾನ ಮಾಡಿ ಕೆಂಪು ಪೀತಾಂಬರವನ್ನುಟ್ಟು ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ತಮ್ಮ ಪೂಜಾಪೀಠವನ್ನು ಅಲಂಕರಿಸಿದಾಗ ಸಾಕ್ಷಾತ್ ಪರಶಿವನ ರೂಪವೇ ನೇತ್ರಗೋಚರವಾಗುತ್ತದೆ. ಮಹಾ ಸನ್ನಿಧಿಯವರು ಧರಿಸಿರುವ ವಿಭೂತಿ-ರುದ್ರಾಕ್ಷಿಯ ಸಂಕೇತವೆಂದರೆ:—

ಭಸ್ಮ :— ಶಿವನ ಮಹಾಪ್ರಸಾದವೇ ಭಸ್ಮ. ಶಿವನ ಮಹಾ ತೇಜಸ್ಸೇ ಭಸ್ಮ.

ರುದ್ರಾಕ್ಷಿ :—ರುದ್ರನು ತ್ರಿಪುರಗಳನ್ನು ದಹಿಸುವಾಗ ಆತನ ನೇತ್ರಗಳಿಂದ ಬಿದ್ದ ಜಲಬಿಂದುಗಳೇ ರುದ್ರಾಕ್ಷಿಗಳೆಂದು ಹೇಳಿದೆ. ಮತ್ತು ರುದ್ರಾಕ್ಷಿಗಳು ಪರಶಿವನ ಜ್ಞಾನ ಚಕ್ಷುವಿನಿಂದ ಉದಯವಾದುವು ಎಂದು ಶರಣರು ಹೇಳುತ್ತಾರೆ. ಇಂತಹ ಪವಿತ್ರ ವಸ್ತುಗಳನ್ನು ಭಕ್ತರೆಲ್ಲರೂ ತಮ್ಮ ಶರೀರದಲ್ಲಿ ಧರಿಸಿ ಪವಿತ್ರರಾಗಬೇಕೆಂದು ಬೋಧಿಸುತ್ತಾರೆ.

ಪೂಜ್ಯ ಸನ್ನಿಧಿಯವರ ಪೂಜಾಗೃಹದಲ್ಲಿರುವ ಆರತಿಗಳ ಸಂಕೇತ ಬಹು ನಿಗೂಢವಾಗಿದೆ. ಸನ್ನಿಧಿಯವರು ತಮ್ಮ ಇಷ್ಟಲಿಂಗಕ್ಕೆ ಏಕಾರತಿ, ಪಂಚಾರತಿ, ಸಹಸ್ರಾರತಿ, ಲಕ್ಷಾರತಿ ಎಂದು ಬೆಳಗುತ್ತಾರೆ. ಇದರಲ್ಲಿ ನಿಗೂಢವಾದ ಅರ್ಥವಿದೆ. ಏನೆಂದರೆ :—

1. ಏಕಾರತಿ :— ಮನುಷ್ಯನ ಮನಸ್ಸನ್ನು ಏಕಾಗ್ರತೆಗೊಳಿಸುವುದು.

2. ಪಂಚಾರತಿ :— ಮನುಷ್ಯ ತನ್ನ ಪಂಚೇಂದ್ರಿಯಗಳನ್ನು ನಿಗ್ರಹ ಮಾಡುವುದು.

3. ಸಹಸ್ರಾರತಿ :—ಶಿವನು ಸರ್ವವ್ಯಾಪಿ, ಸರ್ವಾಂತರ್ಯಾಮಿ.

4. ಲಕ್ಷಾರತಿ :— ಜ್ಯೋತಿಸ್ವರೂಪ ಮತ್ತು ಮಂಗಳ ಸ್ವರೂಪ. ಅಂದರೆ, ಮನುಷ್ಯನ ಅಜ್ಞಾನವೆಂಬ ಕತ್ತಲೆಯನ್ನು ಅಳಿಸಿ ಜ್ಞಾನವೆಂಬ ಬೆಳಕನ್ನು ಪ್ರಕಾಶಪಡಿಸುವುದೇ ಆರತಿಯ ಸಂಕೇತ. ಅಂದರೆ ಮನುಷ್ಯ ತನ್ನ ಅಂಗಗುಣಗಳನ್ನು ಕಳೆದು ಲಿಂಗಗುಣಗಳನ್ನು ಅಳವಡಿಸಿಕೊಳ್ಳಬೇಕು.

ಸನ್ನಿಧಿಯವರು ಆಸನಾರೂಢರಾದಾಗ ಅವರ ಮಸ್ತಕದ ಮೇಲೆ ರಜತ ಪಂಚಮುಖ ನಾಗಾಭರಣ ಛತ್ರಿಯಾಕಾರದಲ್ಲಿ ಅಲಂಕೃತವಾಗುತ್ತದೆ. ಇದಕ್ಕೆ ಪಂಚೇಂದ್ರಿಯ, ಪಂಚವಿಷಯಗಳು, ಪಂಚಭೂತಗಳನ್ನು ಜಯಿಸಿದ ಸಂಕೇತ, ಅಂದರೆ ಇದು ಜ್ಞಾನರತ್ನದ ಪ್ರತೀಕ.

ಸನ್ನಿಧಿಯ ಎಡಬಲಗಳಲ್ಲಿ ಗುರು ರೇಣುಕಾಚಾರ್ಯರ ಮತ್ತು ಆದಿ ಶಕ್ತಿಯ ಮೂರ್ತಿಗಳಿಗೆ ಪೂಜೆ ಸಲ್ಲುತ್ತಲಿರುತ್ತದೆ. ಹೊರಗಡೆ ಶಿಷ್ಯರು ಗಂಟೆ, ಜಾಗಟೆ, ನಗಾರಿಗಳಿಂದ ಮಂಗಳ ಧ್ವನಿಯನ್ನು ಮೊಳಗಿಸುತ್ತಾರೆ. ಆ ಧ್ವನಿ ಓಂಕಾರ ಸ್ವರೂಪವಾಗಿ ಆಕಾಶವನ್ನು ಭೇದಿಸುವಂತಿರುತ್ತದೆ. "ಶರಣ ಸತಿ__ಲಿಂಗಪತಿ" ಎಂಬ ವೀರಶೈವ ತತ್ವದಂತೆ ತಮ್ಮ ಆತ್ಮಲಿಂಗನಿಗೆ ಮುತ್ತು, ರತ್ನ, ವಜ್ರ, ವೈಡೂರ್ಯಗಳಿಂದ ಅಲಂಕಾರ ಮಾಡಿ ಅರ್ಚನೆ, ವಂದನೆ, ಜಪ-ತಪಗಳಿಂದ ಅಂತರಂಗವಾಗಿ ಮತ್ತು ಬಹಿರಂಗವಾಗಿ ಎರಡು ವಿಧಗಳಲ್ಲೂ ಪೂಜಿಸುತ್ತಾರೆ. ಮಹಾಸನ್ನಿಧಿಯವರ ಪೂಜಾ ವೈಭವದಲ್ಲಿ ಎರಡು ವಿಧಾನಗಳು ಬಹು ಮುಖ್ಯವಾದುವು. ಸದಾಕಾಲ ಶಿವನ ಮಂತ್ರ ಜಪ, ಮತ್ತೊಂದು ಅತಿ ಮಹತ್ವಪೂರ್ಣವಾದುದು ಕುಂಭಾಭಿಷೇಕ. ವೀರಶೈವ ಧರ್ಮದಲ್ಲಿ ಅನಂತರೂಪಿ ಶಿವನ ಭಜನೆ ಬಹಳ ಸುಲಭ. ಕೇವಲ ಪಂಚಾಕ್ಷರ, ಷಡಕ್ಷರಗಳಿಂದ, ಮಾತ್ರ ಶಿವನನ್ನು ಜಪಿಸಬಹುದು. ಆದರೆ ವೇದ, ಆಗಮ ಉಪನಿಷತ್ತುಗಳ ಕಾಲದಲ್ಲಿ ಒಬ್ಬೊಬ್ಬ ದೇವತೆಗೂ ನಾಲ್ಕು ವೇದ ಭಾಗಗಳಲ್ಲಿ ಒಂದು ಭಾಗದ ಸಂಪೂರ್ಣ ಸ್ತುತಿ - ಗೌರವಗಳನ್ನು (ವಂದನೆಗಳನ್ನು) ಸಲ್ಲಿಸಿ ಅವರನ್ನು ಒಲಿಸಿಕೊಳ್ಳಬೇಕಾಗಿತ್ತು. ಆದರೆ ಶಿವನು ಮಾತ್ರ ಬಹಳ ಸುಲಭವಾಗಿ ಸ್ತುತಿಯಿಂದಲೇ ಸಂತೃಪ್ತನಾಗುತ್ತಾನೆ. ಇದಕ್ಕಿಂತ ಹೆಚ್ಚಾಗಿ ಮಂತ್ರಗಳ ಸಾರವೆಲ್ಲ ಕೇವಲ ಓಂ ಎಂಬ ಓಂದೇ ಒಂದು ಬೀಜಾಕ್ಷರದಲ್ಲಿ ಅಡಗಿದೆ.

ಓಂ ಪ್ರಣವಸ್ವರೂಪಿ

ಇದರಲ್ಲಿ	ಅಕಾರ	ಉಕಾರ	ಮಕಾರ
„	ಸೃಷ್ಟಿ	ಸ್ಥಿತಿ	ಲಯ
„	ಸತ್ವ	ರಜ	ತಮ
„	ಜಾಗ್ರತ್	ಸ್ವಪ್ನ	ಸುಷುಪ್ತಿ

ಈ ರೀತಿಯಾಗಿ ಎಲ್ಲಾ ತತ್ವಗಳೂ ಓಂ ಎಂಬ ಒಂದೇ ಒಂದು ಬೀಜಾಕ್ಷರದಲ್ಲಿಯೇ ಅಡಗಿರುತ್ತವೆ. ಅಂತೆಯೇ ಪೂಜ್ಯ ಸನ್ನಿಧಿಯವರು ಓಂಕಾರ ಸ್ವರೂಪಿ, ಪ್ರಣವಸ್ವರೂಪಿ, ಶಿವನನ್ನು ಕ್ಷಣ ಕ್ಷಣಕ್ಕೂ ಸ್ತುತಿಸುತ್ತಾರೆ. ಭಕ್ತರಿಗೂ ಸಹ ಅದನ್ನೇ ಬೋಧಿಸುತ್ತಾರೆ.

ಶ್ರೀ ಜಗದ್ಗುರು ಪ್ರಸನ್ನ ರೇಣುಕಾಚಾರ್ಯರ ಕುಂಭಾಭಿಷೇಕದ ಮಹತ್ವ: ಕುಂಭ ಎಂದರೆ ಕಲಶ, ಮಂಗಳ ಪ್ರದಾಯಕ. ಅದು ಆದಿಶಕ್ತಿಯ ಸಂಕೇತ, ವಿಶ್ವಶಕ್ತಿಯ ಸಂಕೇತ. ಇದರಲ್ಲಿ ಮನುಷ್ಯನ ಜೀವನ ಮಾರ್ಗ, ಜೀವನ್ಮುಕ್ತಿಯ ಮಾರ್ಗ ಎಲ್ಲವೂ ಅಡಗಿವೆ. ಪ್ರಪಂಚದ ಸೃಷ್ಟಿ ಪ್ರಕೃತಿಯಿಂದ ಆಗುತ್ತದೆ. ಜೀವನಿಗೆ ಸಮಸ್ತ ಸಂಪತ್ತು, ಶಕ್ತಿಯನ್ನು ಕೊಟ್ಟು ರಕ್ಷಣೆ ಮಾಡತಕ್ಕಂಥವಳು ಆದಿಶಕ್ತಿ. ಆಕೆಯ ಅನುಗ್ರಹ ಇಲ್ಲದೇ ಇದ್ದರೆ ಪ್ರಪಂಚ ನಡೆಯುವುದೇ ಕಷ್ಟ. ಪೃಥ್ವಿ, ಜಲ, ವಾಯು, ಅಗ್ನಿ, ಆಕಾಶ ಈ ಪಂಚಭೂತಗಳು, ಆಕೆಯಲ್ಲಿ ಅಡಗಿವೆ. ಶಿವಶಕ್ತಿ ಒಂದು ಎರಡಾಗಿದೆ. ಇವೆರಡೂ ಒಂದಾದರೆ ಐಕ್ಯ (ಶೂನ್ಯ). ಇದೇ ವೀರಶೈವರ ತತ್ವ ಸಿದ್ಧಾಂತ. ಪೂಜ್ಯ ಸನ್ನಿಧಿಯವರು ಲೋಕಕಲ್ಯಾಣಾರ್ಥವಾಗಿ ಈ ತತ್ವ ಸಂಕೇತದಂತೆ ಸಹಸ್ರ ಕುಂಭಾಭಿಷೇಕ, ಲಕ್ಷ ಕುಂಭಾಭಿಷೇಕ ಮುಂತಾಗಿ ಮಾಡುತ್ತಾರೆ. ಇದರಲ್ಲಿ ಇನ್ನೊಂದು ಸಂಕೇತವಡಗಿದೆ. ಶಿವನು ಅಭಿಷೇಕ ಪ್ರಿಯ ಮತ್ತು ಗಂಗಾಧರನೆಂಬ ಸಂಕೇತದ ಪ್ರತೀತಿ ಪುರಾಣ ಆಗಮಗಳಲ್ಲಿ ಕಂಡುಬರುತ್ತದೆ. ಆದರಲ್ಲೂ (ಶಕ್ತಿಯಿಂದ) ಕುಂಭದಿಂದ, ಕಲಶದಿಂದ ಅಭಿಷೇಕ ಮಾಡಿದಾಗ ಸಚ್ಚಿದಾನಂದನಿಗೆ ಸಂಪೂರ್ಣ ತೃಪ್ತಿ. ಇದರಿಂದ ಇಡೀ ಮಾನವ ಜನಾಂಗಕ್ಕೆ ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ, ಸಾಮಾಜಿಕವಾಗಿ, ಲೋಕಕಲ್ಯಾಣವಾಗುವುದು ಸರ್ವವಿದಿತವಾದುವಾಗಿದೆ.

ಇಂದು ಮನುಷ್ಯ ಜೀವನ, ಭೂಮಿ, ಆಕಾಶದ ಅಂತರದಷ್ಟು ಪರಿವರ್ತನೆ ಹೊಂದಿದೆ. ಜನಜೀವನದ ನಾಗರಿಕತೆ, ಆಚಾರ – ವಿಚಾರಗಳು ಎಲ್ಲವೂ ನಾಗಾಲೋಟದಲ್ಲಿ ಚಲಿಸುತ್ತಲಿವೆ. ಮನುಷ್ಯನ ಜೀವನ ಯಾಂತ್ರಿಕ ಜೀವನವಾಗಿದೆ. ಮತ್ತು ಅವನ ಒಲವು ವಿಜ್ಞಾನದ ಕಡೆ ಸಂಪೂರ್ಣವಾಗಿ ಸೋತಿದೆ. ಇದರಿಂದ ಧಾರ್ಮಿಕ ತತ್ವಗಳು ಅವನತಿಗಿಳಿಯುತ್ತಲಿವೆ. ಅನಾದಿ ಕಾಲದಂತೆ ಮನುಷ್ಯ ಮರದ ಪೊಟರೆಗಳಲ್ಲಿಯೋ, ಗುಹೆಗಳಲ್ಲಿಯೋ,ಇದ್ದು ದೇಹವನ್ನು ರಕ್ಷಿಸಿದರೆ ಸಾಲದು. ದೇಹಕೆ ಮರದ ಎಲೆಗಳನ್ನೋ, ಪ್ರಾಣಿಗಳ ಚರ್ಮಗಳನ್ನೋ ಸುತ್ತಿಕೊಂಡರೆ ಸಾಲದು. ವಾಸಿಸುವ ಮನೆ ಅಚ್ಚುಕಟ್ಟಾಗಿರಬೇಕು. ಧರಿಸುವ ಬಟ್ಟೆ ಆಕರ್ಷಕವಾಗಿರಬೇಕು. ಈ ರೀತಿ ಆತನ ಸಮಗ್ರ ಜೀವನದಲ್ಲಿ ಸೌಂದರ್ಯದ ಊಪಾಸನೆ ಬೆಳೆಯುತ್ತಾ ಹೋಗುತ್ತಲಿದೆ. ಆತನ ಆಶೆ ಆಮಿಷಗಳ ಪ್ರವೃತ್ತಿ ಪ್ರಬಲವಾಗುತ್ತಲಿದೆ. ಹೊರದೇಶಗಳಿಂದ ಪಡೆದ ವಿವಿಧ ಅನುಭವಗಳು ಆಡಂಬರ ಜೀವನವನ್ನೇ ಎತ್ತಿ ತೋರಿಸುತ್ತಲಿವೆ. ಅದರಲ್ಲೂ ವಿಪರೀತವಾಗಿ ಕಂಡು ಬರುತ್ತಿರುವ ನಮ್ಮ ಜನತೆಯು, ಉಡಿಗೆ - ತೊಡಿಗೆಗಳಲ್ಲಿ ಸಾಧಿಸಿರುವ ಕ್ರಾಂತಿ, ನಾವು ಅಸಹಾಯಕರಾಗಿ ಹೇಳುವುದಾದರೆ, ಇಂದು ನಮ್ಮ ಜನಾಂಗವನ್ನು ನಾವೇ ಕಣ್ಣಿನಿಂದ ನೋಡುವ ಮನಸ್ಸಾಗುತ್ತಿಲ್ಲ, ಇದರ ಜೊತೆಗೆ ಮಕ್ಕಳಿಗೆ ಅಮೃತ ಉಣಿಸುವ ಕೈಗಳೇ ವಿಷವಿಕ್ಕಿದರೆ, "ಹರ ಕೊಲ್ಲಲ್ ಪರಕಾಯ್ವನೇ ಎಂಬಂತೆ

ಮಕ್ಕಳು ರಾಷ್ಟ್ರಶಿಲ್ಪಿಗಳಾಗಲಿ ದೇಶಭಕ್ತರಾಗಲಿ, ಶಿವಶರಣರಾಗಲಿ ಬಸುರಿಗೆ ಹೆಸರು ತಂದುಕೊಡುವವರಾಗಲಿ ಎಂಬ ಮಾರ್ಗದರ್ಶನ ಕೊಡುವ ಮಹಾ ಮಾತೆಯರ ಸಂಖ್ಯೆಯು ಕಡಿಮೆಯಾಗುತ್ತಲಿದೆ. ಇಂತಹ ಆಧುನಿಕ ಕಾಲದಲ್ಲಿ ದೇವರೇ ಇಲ್ಲ ಎನ್ನುವ ನಾಸ್ತಿಕರ ಕಾಲದಲ್ಲಿ ಜಗದ್ಗುರುಗಳವರ ಶಿವಪೂಜಾ ಸಮೀಕ್ಷೆಯ ಕಡೆಗೆ ಗಮನ ಹರಿಸುವವರ ಸಂಖ್ಯೆ ಎಷ್ಟು ಸಿಕ್ಕೀತು.

ತನ್ನವರನ್ನೇ ಮರೆತು, ತನ್ನವರನ್ನೇ ತರಿದು ಅರೆದು ತಿನ್ನುವುದೇ ಇಂದು ಮನುಷ್ಯನ ಸಹಜ ಗುಣವಾಗಿದೆ. ಇಂತಹ ಪಾಶವೀ ಪ್ರವೃತ್ತಿ ದೂರವಾಗಿ ಮಾನವ ಜೀವನದ ನಿವೃತ್ತಿಗೆ ಮಹಾಸನ್ನಿಧಿಯವರ ಶಿವಪೂಜಾ ಸಮೀಕ್ಷೆ ಅವರ ಸಂಪೂರ್ಣ ಆಶೀರ್ವಾದ ಇಂದು ಜನತೆಗೆ ಅವಶ್ಯವಾಗಿ ಬೇಕೇಬೇಕು..

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ"

ಎಂಬಂತೆ ಧರ್ಮದ ಅವನತಿ ಸಂಸ್ಕೃತಿಯ ಅಧೋಗತಿ ಉಂಟಾಗಿರುವ ಇಂದು ಆ ದಿವ್ಯ ಮಹಾ ಸನ್ನಿಧಿಗಳವರ ದರ್ಶನ ಮತ್ತು ಅವರ ಆಶೀರ್ವಚನ ಬೇಕೇಬೇಕು.

"ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇನಮಃ"

ಶ್ರೀಮಹಾಜಗದ್ಗುರುಗಳು ಇಂದು ನಮಗೆ ದೀಕ್ಷಾ ಗುರು, ಶಿಕ್ಷಾ ಗುರು, ಮೋಕ್ಷಗುರು, ಗುರುವಿನ ಗುರು, ಎಂಬ ಸದ್ಗುರುಗಳಾಗಿ ಅಧ್ಯಾತ್ಮಿಕ ತತ್ತ್ವದ ಅರಿವನ್ನು ಮಾಡಿಕೊಡುತ್ತಲಿದ್ದಾರೆ, ಶಿವನೆಂಬ ಪರಾತ್ಪರ ವಸ್ತುವನ್ನು ಗುರು - ಲಿಂಗ - ಜಂಗಮವೆಂಬ ರೂಪದಲ್ಲಿ, ತನು - ಮನ - ಧನ ಎಂಬ ಸಾಧನವಸ್ತುಗಳಿಂದ ತ್ರಿವಿಧ ದಾಸೋಹವ ಮಾಡುವ ವಿಧಾನವನ್ನು ಬಹು ಸುಲಭವಾಗಿ ಸರ್ವ ಜನಾಂಗಕ್ಕೂ ತಿಳಿಸಿಕೊಡುತ್ತಲಿದ್ದಾರೆ.

"ಕರಿಯು ಕನ್ನಡಿಯಲ್ಲಿ ಅಡಗುವಂತೆ" ಆ ಅಖಂಡ ಪರವಸ್ತುವನ್ನು ತನ್ನೊಳಗೇ ಅಡಗಿಸಿಕೊಂಡು, ತಾನೇ ಅವನು ಅವನೇ ತಾನಾಗಿ "ಶಿವೋಹಂ" ಎಂಬ ಸಿದ್ಧಾಂತವನ್ನು ಜನತೆಗೆ ತೋರಿಸಿ ಕೊಟ್ಟಿದ್ದಾರೆ ಶ್ರೀ ಜಗದ್ಗುರುಗಳವರು.

ಜೀವ ಪರಮರ ಸಮರಸ ತತ್ವ ಎಲ್ಲವೂ ಲಿಂಗಾಂಗ ಸಾಮರಸ್ಯದಲ್ಲಿ ಕೊನೆಗೊಂಡು ಚೈತನ್ಯ ಸ್ವರೂಪವಾಗಿ ಪರಿಣಮಿಸುತ್ತದೆ ಎಂಬುದನ್ನು ಪೂಜ್ಯ ಶ್ರೀ ಜಗದ್ಗುರುಗಳವರು ತಮ್ಮ ಬೋಧನೆಯಲ್ಲಿ ಮಾತ್ರವಲ್ಲದೆ, ಶಿವಪೂಜಾ ಆಚರಣೆಯಲ್ಲಿಯೂ ಸಾಧಿಸಿ ತೋರಿಸಿದ್ದಾರೆ.

ಸತ್ಯಂ-ಶಿವಂ-ಸುಂದರಂ

ಪಂಚ ಜಗದ್ಗುರುಗಳಿಗೆ ನಮ್ಮ ಪ್ರಣಾಮ

ಭವಾನಿ ಟಿಂಬರ್ ಕಂಪನಿ
[ಮರದ ದಿಮ್ಮಿಗಳು ಹಾಗೂ ಕತ್ತರಿಸಿದ ವಿವಿಧ ಪ್ರಮಾಣದ ಮರಗಳ ಸರಬರಾಜುಗಾರರು]
ಅಂಡರ್ ಬ್ರಿಡ್ಜ್ ರಸ್ತೆ, ಕಡೂರು
[ಚಿಕ್ಕಮಗಳೂರು ಜಿಲ್ಲೆ]

ಪಂಚ
ಪೀಠಾಧೀಶ್ವರರಿಗೆ
ನಮ್ಮ
ಪ್ರಣಾಮಗಳು

ಶ್ರೀ
ದಯಾನಂದ ಕಲ್ಲೆ

ಕಬ್ಬಿನ ಗದ್ದೆ ಎಸ್ಟೇಟ್
ಚಿಕ್ಕಮಗಳೂರು ಜಿಲ್ಲೆ

Our Pranamams to

Jagadguru Pancha

Peethadhipaties

For Delicious Food

VISIT

Phone: 29012

KAMAT HOTEL

208, S. C. Road, Seshadripuram
BANGALORE-20
Prop : **R. P. KAMAT**

Telegram : "PRAKASH"

Telephone ; Office ; 380
Resi ; 2087

SREE
**SIDDESWARA
TEXTILE MILLS
PRIVATE LIMITED.,**
**Post Box No. 78
DAVANGERE CITY**

Manufacturer of :

HIGH CLASS CARDED OR COMBED COTTON YARN IN COUNTS RANGING FROM 20S TO 100S SINGLE OR FOLDED, HANK OR CONES INDISPENSABLE FOR HANDLOOMS, HOSIERY AND POWERLOOMS.

Managing Directors :

G. Mahadevappa
and
G. M. Halappa

ಶಕ್ತಿವಿಶಿಷ್ಟಾದ್ವೈತವಿದ್ವಾನ್
ಪಟ್ಟದ ಷ|| ಬ್ರ||
ಶಿವಪ್ರಕಾಶ ಶಿವಚಾರ್ಯ ಸ್ವಾಮಿಗಳು
ಮೈಸೂರು ಅರಮನೆ ಜಪದಕಟ್ಟೆ ಮಠ

ಭಾರತೀಯರ ಆಧ್ಯಾತ್ಮಿಕ ಸುಖಕ್ಕಾಗಿ ಅವತರಿಸಿದ ಶಿವಾಚಾರ್ಯರ ದಿವ್ಯಶಕ್ತಿ ಬಹು ದೊಡ್ಡದು. ಅದು ಜಗದ್ಗುರು ಪಂಚಾಚಾರ್ಯರಿಂದ ಪ್ರಾರಂಭವಾದುದು. ಮತ್ತು ಧರ್ಮಸಾಹಿತ್ಯದಲ್ಲಿ ಪ್ರಖ್ಯಾತವಾದುದು. ಆಚಾರ್ಯರೆಂದರೆ ಆದಿಯುವರೆಂಬ ಮನೋಭಾವ ಎಲ್ಲರಲ್ಲಿಯೂ ಮೂಡಿ ಬಂದಿದೆ. ಅವರ ಪೂಜ್ಯತೆ ಗೌರೀಶಂಕರ ಶಿಖರದಂತೆ ಉನ್ನತವಾದುದು. ಉತ್ತರದಲ್ಲಿ ಕಾಶೀ, ಕೇದಾರ ಎಂಬ ಎರಡು ಪೀಠಗಳಿದ್ದರೆ ದಕ್ಷಿಣ ಭಾಗದಲ್ಲಿ ರಂಭಾಪುರಿ, ಉಜ್ಜಯಿನೀ ಮತ್ತು ಶ್ರೀ ಶೈಲ ಪೀಠಗಳಿವೆ. ಅವರು ಪ್ರತಿಷ್ಠಾಪಿಸಿದ ಪಂಚ ಸಿಂಹಾಸನಗಳು ರಾಜಾಧಿರಾಜರನ್ನು ತಲೆಬಾಗಿಸಿವೆ. ರಂಭಾಪುರಿಯು ವೀರ ಸಿಂಹಾಸನವಾದರೆ, ಉಜ್ಜಯಿನಿಯು ಸದ್ಧರ್ಮ ಸಿಂಹಾಸನವಾಗಿದೆ. ಮತ್ತೊಂದೆಡೆ ಕೇದಾರವು ವೈರಾಗ್ಯ ಸಿಂಹಾಸನವಾದರೆ ಇನ್ನೊಂದೆಡೆ ಶ್ರೀಶೈಲವು ಸೂರ್ಯ (ಪಾಂಡಿತ್ಯ) ಸಿಂಹಾಸನವಾಗಿದೆ. ಕೊನೆಯದಾಗಿ ಕಾಶಿಯು ಜ್ಞಾನ ಸಿಂಹಾಸನವಾಗಿದೆ. ಎಂತಹ ತಾತ್ವಿಕವಾದ ಪಂಚಧರ್ಮ ಪೀಠಗಳು!

ಸದ್ಧರ್ಮ ಪೀಠಾಧೀಶ್ವರರು

"ಉಜ್ಜಯಿನಿ ಸದ್ಧರ್ಮ ಪೀಠ" ಲೇಖನದ ಕರ್ತೃಗಳಾದ ಶ್ರೀ ಪಟ್ಟದ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು ಶಕ್ತಿವಿಶಿಷ್ಟಾದ್ವೈತದಲ್ಲಿ ವಿದ್ವಾಂಸರು. "ಸದ್ಧರ್ಮ ಪ್ರಭಾ" ಎಂಬ ಧಾರ್ಮಿಕ ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಸ್ವಾಮಿಗಳು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ರಾಜ್ಯದ ನಾನಾ ಕಡೆ ಸಂಸ್ಕೃತ ಶಾಲೆಗಳನ್ನು ನಡೆಸುತ್ತಿರುವರಲ್ಲದೆ ಸಮಾಜ ಮತ್ತು ಧರ್ಮದ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ.

ಭಾರತದಲ್ಲಿ ಪಂಚಾಚಾರ್ಯರ ಸೂತ್ರದ ಮಠಗಳಿಲ್ಲದ ಗ್ರಾಮಗಳೇ ಇಲ್ಲ. ಗುರುವರ್ಗದ ವೈವಿಧ್ಯತೆ ವಿಶೇಷವಾಗಿದೆ. ಅವರ ಶಾಸ್ತ್ರೀಯ ಕಟ್ಟುಪಾಡುಗಳು ಬಹಳ ಅಚ್ಚುಕಟ್ಟಾಗಿವೆ. ಶುಭಾಶುಭ ಕಾರ್ಯಗಳು ಶಿವಾಚಾರ್ಯರಿಗೆ ಮೀಸಲಾಗಿವೆ. ಪ್ರತಿಯೊಬ್ಬ ವೀರಶೈವನ ಹೃದಯವು ಶ್ರೀ ಗುರುವಿನ ಕಾರುಣ್ಯದಿಂದ ಕೂಡಿದೆ ಸಾಮಾಜಿಕ, ಬೌದ್ಧಿಕ, ಆಧ್ಯಾತ್ಮಿಕ ಕ್ಷೇತ್ರಗಳ ಸುಧಾರಣೆಯು ಶಿವಾಚಾರ್ಯರದು. ಆದುದರಿಂದ ಇವರು ಸಾಭಾರಿ ಗುರುಗಳಾಗಿದ್ದಾರೆ.

ಜಗದ್ಗುರು ಪಂಚಾಚಾರ್ಯರ "ಲಿಂಗಾಂಗಸಂಗಿನೋವತ್ಸ ಪುನರ್ಜನ್ಮನವಿದ್ಯತೆ" ಎಂಬುದು ದಿವ್ಯ ಸಂದೇಶ. ಅವರ ಕಾರ್ಯಕ್ಷೇತ್ರದ ಸ್ಮಾರಕವನ್ನು ನೆನೆದರೆ ಇಡೀ ಭಾರತದ ಚಿತ್ರವು ನಮ್ಮ ಕಣ್ಮುಂದೆ ಬಂದು ನಿಲ್ಲುತ್ತದೆ.

ತಸ್ಮಾತ್ ತಸ್ಮಾತ್ತ್ವ ಗಿರಿಜೇ ಪಂಚಾನನ ಸಮುದ್ಭವಾಃ। ಎಂಬ ಮವಾದಿ ಸರ್ವಲೋಕಾನಾಂ ಜಗದ್ಗುರು ವರೋತ್ತಮಾಃ॥ ಶಿವಾಗಮವಾಣಿಯು ಪಂಚಾಚಾರ್ಯರ ಸನಾತನತ್ವವನ್ನು ಸಾರುತ್ತದೆ. ಈ ಪರಂಪರೆಯಲ್ಲಿ ಬಂದಾದ ಉಜ್ಜಯಿನಿ ಸದ್ಧರ್ಮ

ಪೀಠವನ್ನು ಯುಗಾಂತರದಿಂದ ಶ್ರೀ ಭಗವತ್ಪಾದ ದಾರುಕಾಚಾರ್ಯರು (ಶ್ರೀ ಮರುಳಾರಾಧ್ಯರು) ಆರೋಹಣ ಮಾಡಿದ್ದಾರೆ. ಇತಿಹಾಸದಲ್ಲಿ ದೊರೆಯುವ ಮಹಾಚಾರ್ಯರಲ್ಲಿ ಕೆಲವು ಆಚಾರ್ಯರು ಜಗತ್ತಿಗೆ ನೀಡಿದ ಸಂದೇಶವು ಅವರ ಮಹತ್ಕಾರ್ಯಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಜಗದ್ಗುರು ಮರುಳಸಿದ್ಧಮಹಾಚಾರ್ಯರು ಗೈದ ಲೀಲೆ ಸದ್ಧರ್ಮ ಸಿಂಹಾಸನ ಸ್ಥಾಪನಾದಿ ಮಹತ್ಕಾರ್ಯಗಳನ್ನು ಈಗಾಗಲೇ ಶ್ರೀಶೈಲ ಜಗದ್ಗುರು ಪಂಡಿತ ವಾಗೀಶ ಶಿವಾಚಾರ್ಯ ಮಹಾಸನ್ನಿಧಿಯವರು ಪ್ರಕಟಿಸಿರುವ 'ಮರುಳಸಿದ್ಧ ವಿಮರ್ಶೆ' ಎಂಬ ಉದ್ಗ್ರಂಥದಿಂದ ತಿಳಿಯಬಹುದಾಗಿದೆ. ಈ ಪರಂಪರೆಯ ಶ್ರೀ ಶ್ರೀ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯರೂ ಅನೇಕ ಮಹತ್ಕಾರ್ಯಗಳನ್ನು ಮಾಡಿದ್ದಾರೆ. ದೇಶದ ಜನತೆ ಭೀಕರ ಬರಗಾಲಕ್ಕೆ ತುತ್ತಾದಾಗ ತಮ್ಮ ಯೋಗಸಿದ್ಧಿಯಿಂದ ಮಳೆ ಬರಿಸಿದ್ದಾರೆ. ದೆಹಲಿ ಚಕ್ರವರ್ತಿಯಲ್ಲಿಗೆ ದಯಮಾಡಿಸಿ ಕಾದ ಉಕ್ಕಿನ ಕವಚವನ್ನು ಧರಿಸಿ ಆ ಪ್ರಾಂತದಲ್ಲಿ ಮಳೆ ಹರಿಸಿ ದೇಶವನ್ನು ಸಮೃದ್ಧಿಯುತವನ್ನಾಗಿ ಮಾಡಿದ್ದಾರೆ. ಅನೇಕ ಕಡೆ ಮಳೆ ಮಹಾಂತಿನ ಮಠವೆಂಬುದಾಗಿ ಪ್ರಸಿದ್ಧಿ ಪಡೆದ ಮಠಗಳಿವೆ. ತಮ್ಮ ಆಧ್ಯಾತ್ಮಿಕ ಉಪದೇಶದಿಂದ ರಾಜರನ್ನು ತಮ್ಮ ಶಿಷ್ಯರನ್ನಾಗಿ ಮಾಡಿದ್ದಾರೆ. ಮಲೆನಾಡಿನಲ್ಲಿ ಕವಲೆ ದುರ್ಗದ ಮಳೆ ಮಹಾಂತ ಮಠವು ಪ್ರಾಚೀನವಾಗಿದ್ದು ಇತಿಹಾಸದಲ್ಲಿ ಪ್ರಸಿದ್ಧಿ ಪಡೆದಿದೆ. ಡಾ॥ ರೈಸ್‌ರವರ ಅಭಿಪ್ರಾಯದಂತೆ ಅಲ್ಲಿ ವಿಶ್ವವಿದ್ಯಾಲಯವಿತ್ತೆಂದು ಎಲ್ಲಾ ಧರ್ಮದ ದರ್ಶನ ಶಾಸ್ತ್ರಗಳ (64 ಕಲೆಗಳ) ಪಾಠ ಪ್ರವಚನಗಳು ನಡೆಯುತ್ತಿದ್ದುವೆಂದೂ, ಅನಾಥ ರೋಗಿಗಳ ಶುಶ್ರೂಷೆ ನಡೆಯುತ್ತಿತ್ತೆಂದೂ ತಿಳಿಸಿದ್ದಾರೆ. ಅಲ್ಲಿ ದೊರೆಯುವ ಶಾಸನದಿಂದ ಉಜ್ಜಯಿನಿ ಪೀಠದ ಜಗದ್ಗುರುಗಳಾದ ಮಳೆಯ ಮಲ್ಲಿಕಾರ್ಜುನ ಸ್ವಾಮಿಗಳು ಸ್ಥಾಪಿಸಿದ್ದೆಂದೂ ತಿಳಿಯ ಬರುತ್ತದೆ. ಭೀಮಾನದೀ ತೀರದಲ್ಲಿರುವ ಅಫ್‌ಜಲ್‌ಪುರದ ಮಳೇಂದ್ರಸ್ವಾಮಿ ಮಠ ಈ ಮಹನೀಯರು ಸ್ಥಾಪಿಸಿದ ಮಠಗಳಲ್ಲಿ ಪ್ರಮುಖವಾಗಿದೆ. ಕಂಚಿ, ತಿರುವಾಂಕೂರು, ಸೇಲಂ, ತಮಿಳು ನಾಡಿನಲ್ಲೂ ಮತ್ತು ಆಂಧ್ರ ಮಹಾರಾಷ್ಟ್ರಗಳಲ್ಲೂ ಇವರು ಸ್ಥಾಪಿಸಿದ ಮಠಗಳಿವೆ.

ಮೈಸೂರು ಪ್ರಾಂತದ ತಲಕಾಡಿನಲ್ಲಿ ತಪೋನಿರತರಾಗಿದ್ದ ಉಜ್ಜಯಿನಿ ಪೀಠಾಧೀಶ್ವರರಾದ ಶ್ರೀ ಜಗದ್ಗುರು ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯರು ಆ ದೇಶದ ರಾಜನಾಗಿದ್ದ ಗಂಗರಸನ ಪಟ್ಟದಾನೆ ರೋಗಗ್ರಸ್ತವಾಗಿ ಮರಣೋನ್ಮುಖವಾಗಿರುವುದನ್ನು ಕಂಡು ಈ ಶಿವಯೋಗಿಗಳು ತಮ್ಮ ಅಮೃತ ಹಸ್ತದಿಂದ ಬದುಕಿಸಿದರು. ಆಗ್ಗೆ ರಾಜಗೌರವದೊಡನೆ ಸತ್ಕರಿಸಿ ಅನೇಕ ಗ್ರಾಮಗಳನ್ನು ಸಂಪತ್ತನ್ನು ಅರ್ಪಿಸುವುದಾಗಿ ರಾಜನು ಪ್ರಾರ್ಥಿಸಲು ಜಗದ್ಗುರು ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯರು ಸದ್ಧರ್ಮವು ನಮ್ಮ ಸಂಪತ್ತಾಗಿರುವಾಗ ನಿನ್ನ ಸಂಪತ್ತು ನಮಗೆ ಬಂಧನಕಾರಿಯಾಗುತ್ತದೆ. ನಿನ್ನ ದಾನ ಬೇಡವೆಂದು ತಿಳಿಸಿದರು. ಆದರೂ ರಾಜನು ಸ್ಮರಣಾರ್ಥವಾಗಿ ಗಜಶಾಲೆಯಲ್ಲಿಯೇ ಹರ್ತಿಕೇರಿ ಮಠವೊಂದ ಕಟ್ಟಿಸಿ ಮಹಾಗುರುವಿನ ಪೂಜೆ, ಶಿವದೀಕ್ಷೆಯಿಂದ ಕೃತಾರ್ಥನಾದನೆಂದು ಈಗಿರುವ ಮಠದ ಇತಿಹಾಸದಿಂದ ತಿಳಿಯುತ್ತದೆ. ಇದೇ ಹೆಸರಿನಿಂದ ಈಗಿರುವ ಪಟ್ಟದ ಶ್ರೀಗಳು ಅನೇಕ ಧರ್ಮಕಾರ್ಯಗಳನ್ನು ಮಾಡುತ್ತಿದ್ದಾರೆ.

ಬೆಂಗಳೂರು ಪ್ರಾಂತದಲ್ಲಿ ತೊಂಬತ್ತೊಂದನೆಯ ಜಗದ್ಗುರುಗಳಾದ ಜಗದ್ಗುರು ವಿರೂಪಾಕ್ಷ ಶಿವಾಚಾರ್ಯರ ಶಿವಯೋಗ ಸಮಾಧಿ ಕನ್ನಲ್ಲಿ ಮಹಾಂತಮಠದಲ್ಲಿದೆ. ಈ ಮಹಿಮರು ನೆಲಮಂಗಲ, ಶಿವಗಂಗೆ, ತುಮಕೂರು, ಹೊಸಕೋಟೆ, ಬೆಂಗಳೂರು, ಮಾಗಡಿ, ಸೀತಕಲ್ಲು ಮುಂತಾದ ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿ ಧರ್ಮಪ್ರಚಾರಮಾಡಿ ಸಾಮಂತರಾಜರಿಗೆ ಧರ್ಮೋಪದೇಶ ಮಾಡಿದ್ದಾರೆ.

ಮಹಾಮಂತ್ರ ಸ್ವರೂಪರೆಂದು ಪ್ರಖ್ಯಾತರಾಗಿದ್ದ ಜ॥ ಗುರು ಸಿದ್ಧ ಶಿವಾಚಾರ್ಯರು ಮೈಸೂರು ಪ್ರಾಂತ್ಯದಲ್ಲಿ ಶಂಭುಲಿಂಗನ ಬೆಟ್ಟದಲ್ಲಿ ಜಪಾನುಷ್ಠಾನ ತತ್ಪರರಾಗಿದ್ದಾಗ ಇವರ ಮಹಿಮೆಯನ್ನು ಕೇಳಿ ಮೈಸೂರು ರಾಜರಾಗಿದ್ದ ಶ್ರೀ ಮುಮ್ಮಡಿ ಕೃಷ್ಣರಾಜರು ದರ್ಶನಕ್ಕೆ ಬಂದು ಅರಮನೆಗೆ ದಯಮಾಡಿಸಲು ಬಿನ್ನೈಸಿದರು. ಸಾಮಾನ್ಯವಾಗಿ, ರಾಜರು ಭೋಗಿಗಳು. ಇವರಿಗೆ ಲಿಂಗಾಂಗ ಸಾಮರಸ್ಯ ಸಿದ್ಧಿಸುವುದೇ ಎಂದಾಲೋಚಿಸಿ ಒಂದೆರಡು ವರ್ಷಗಳ ನಂತರ ಸಂಸ್ಥಾನದ ಗೌರವದೊಡನೆ ಉತ್ಸವದಿಂದ ದಯಮಾಡಿಸಿ ಲಿಂಗಾಂಗಿಯಾದ ಅರಸರಿಗೆ ಶಿವದೀಕ್ಷಾ ಮಂತ್ರೋಪದೇಶ ಮಾಡಿ ರಾಜಪೂಜಿತರಾದರು. ರಾಜರ ಇಷ್ಟದಂತೆ ಮೈಸೂರಿನಲ್ಲೇ ಮಠವನ್ನು ಸ್ಥಾಪಿಸಿ ನಿತ್ಯವೂ ಪಾದಪೂಜೆಗೆ ಯೋಗ್ಯ ಗುರುಗಳನ್ನು ಏರ್ಪಡಿಸಿ ಪೀಠಕ್ಕೆ ದಯಮಾಡಿಸಿದರು. ಈಗಲೂ ಅದು ಅರಮನೆ ಜಪದ ಕಟ್ಟೆ ಮಠ ಎಂದು ಪ್ರಸಿದ್ಧಿ ಪಡೆದಿದೆ. ಉಜ್ಜಯಿನಿ ಸದ್ಧರ್ಮ ಪೀಠಕ್ಕೆ ಸಂಬಂಧಿಸಿದ ರಾಜರು ಕೊಟ್ಟ ಪಟ್ಟೇ ಪೀತಾಂಬರ ದಾನ ಮುಂತಾದ ಸಂಪತ್ತನ್ನು ಪೀಠದ ಅಭಿವೃದ್ಧಿಗೆ ವಿನಿಯೋಗಿಸಿ ಪ್ರಖ್ಯಾತರಾದರು. ಈಗಲೂ ಮೈಸೂರು ಪ್ರಾಂತದಲ್ಲಿ ಪಿರಿಯಾಪಟ್ಟಣ, ಶೆಟ್ಟೀ ನಾಯಕನ ಹಳ್ಳಿ, ಕುಂದೂರು, ಕುದೇರು, ಚಾಮರಾಜನಗರ, ಸೋಸಲೆ, ಶ್ರೀರಂಗಪಟ್ಟಣ, ಮುಂತಾದ ಗ್ರಾಮಗಳಲ್ಲಿ ಇವರು ಸ್ಥಾಪಿಸಿದ ಮಠಗಳಿವೆ. ಶ್ರೀ ಜಗದ್ಗುರು ಚನ್ನವೃಷಭ ಶಿವಾಚಾರ್ಯ ಸ್ವಾಮಿಗಳು ಶಿವಯೋಗನಿಷ್ಠರೂ, ಸಕಲ ಶಾಸ್ತ್ರ ಪರಿಣತರೂ ಆಗಿದ್ದು ಧರ್ಮಪ್ರಸಾರಕ್ಕಾಗಿ ಆಂಧ್ರ, ಕರ್ನಾಟಕ, ಕೇರಳ ದೇಶಗಳಲ್ಲಿ ಸಂಚರಿಸುತ್ತಾ ತುಮಕೂರು ಭಕ್ತರ ಬಿನ್ನಹದ ಪ್ರಕಾರ ರಾಜಗೌರವದೊಡನೆ ಉತ್ಸವ ನಡೆದಿರಲು ಪೀಠದ ಆನೆಯು ಚಾಮರ ಬೀಸುತ್ತಿರಲು

ವೈಷ್ಣವರು ಗಜಲಕ್ಷ್ಮಿಯು ತಮ್ಮ ಆರಾಧ್ಯ ದೇವತೆ. ಆದರಿಂದ ಚಾಮರ ಹಾಕಿಸುವುದರಿಂದ ತಮ್ಮ ಮಠಕ್ಕೆ ಅವಮಾನವೆಂದು ಉತ್ಸವವನ್ನು ಪ್ರತಿಬಂಧಿಸಿದರು. ನ್ಯಾಯಾಲಯದಲ್ಲೂ, ಶಾಸ್ತ್ರದಲ್ಲೂ ಜಯಶೀಲರಾಗಿ ಉತ್ಸವವನ್ನು ಪೂರ್ಣಗೊಳಿಸಿ ತಮ್ಮ ಪವಾಡದಿಂದ ಸೀರ್ಯದಲ್ಲಿ ಮುಸ್ಲಿಮರಾದಿ ಸಕಲ ಜನಾಂಗದವರಿಂದ ಗೌರವ ಪಡೆದು ತಮ್ಮ ಲೀಲೆಯನ್ನು ತೋರಿಸಿ ಅಲ್ಲಿಯೇ ಶಿವಯೋಗ ಸಮಾಧಿ ಹೊಂದಿದ್ದಾರೆ. ಅಲ್ಲಿ ಪ್ರತಿ ವರ್ಷ ನವರಾತ್ರಿಯಲ್ಲಿ ಉತ್ಸವ ನಡೆಯುತ್ತದೆ. ಅದು ಉಜ್ಜಯಿನಿ ಮಠವೆಂದು ಪ್ರಸಿದ್ಧವಾಗಿದೆ.

ಇವರ ಅನಂತರ ಶ್ರೀ ಜಗದ್ಗುರು ಶ್ರೀ ಚೆನ್ನವೀರ ಶಿವಾಚಾರ್ಯರು ಪೀಠಾರೋಹಣ ಮಾಡಿ ಮಹಾ ಪೀಠವನ್ನು ಸಕಲ ಸಂಪತ್ತಿನಿಂದ ಬಹು ಕಾಲವಾಳಿದರು. ಜಗತ್ತಿನಲ್ಲಿ ವೀರಶೈವ ಆಚಾರವಿಚಾರಗಳನ್ನು ಪ್ರಚಾರ ಮಾಡಿದರು. ಅನೇಕ ಪಂಡಿತರಿಗೆ ಆಶ್ರಯವನ್ನು ಕೊಟ್ಟಿದ್ದರು. ಪೀಠದ 106ನೇ ಜಗದ್ಗುರುಗಳಾದ ಶ್ರೀ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ವಿದ್ಯಾವಂತರೂ, ಶಿವಯೋಗನಿಷ್ಠರೂ ಆಗಿದ್ದರು. ತಮ್ಮ ಕಾಲದಲ್ಲಿ ಶಿವಾನುಭವ, ಪಾತಂಜಲಿಯೋಗಸೂತ್ರ, ಶಿಷ್ಯಸಂತಾಪಹರಣ ಮುಂತಾದ ಗ್ರಂಥಗಳನ್ನು ರಚಿಸಿ ಕೊಟ್ಟೂರು ನಗರದಲ್ಲಿ ತಮ್ಮ ಪೂರ್ವಜರ ಗದ್ದುಗೆಯಲ್ಲಿ ಜಗದ್ಗುರು ದಾರುಕಾಶ್ರಮವನ್ನು ಸ್ಥಾಪಿಸಿದರು. ಭಕ್ತರಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡಿದರು. ಮಹಾ ತಪಸ್ವಿಗಳಾದ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರಿಗೆ ಚರಪಟ್ಟಾಧಿಕಾರವನ್ನೂ ಕಾಶಿ ಪಂಡಿತರಾಗಿದ್ದ ಶ್ರೀ ವಿರೂಪಾಕ್ಷ ಶಿವಾಚಾರ್ಯರಿಗೆ ಸ್ಥಿರ ಪಟ್ಟಾಧಿಕಾರವನ್ನೂ ವಹಿಸಿ ಪೀಠವನ್ನು ಉದ್ಧರಿಸಿದರು.

ಶ್ರೀ ಜಗದ್ಗುರು ಸಿದ್ಧಲಿಂಗ ಸ್ವಾಮಿಗಳು ಚಿಕ್ಕ ವಯಸ್ಸಿನಲ್ಲಿ ಸದ್ಧರ್ಮ ಪೀಠಾರೋಹಣ ಮಾಡಿದ್ದರೂ ನ್ಯಾಯ, ವ್ಯಾಕರಣ ಯೋಗ ಶಾಸ್ತ್ರಗಳಲ್ಲಿ ಪರಿಣಿತರಾಗಿದ್ದರು. ವೀರಶೈವ ಧರ್ಮ ಜಾಗೃತಿಯನ್ನು ಉಂಟುಮಾಡಿದರು. ಪಂಚಪೀಠಗಳ ಉನ್ನತಿಗಾಗಿ ಬಹಳವಾಗಿ ಶ್ರಮಿಸಿದರು. ಬುಕ್ಕಾಂಬುಧಿಯಲ್ಲಿ ತಪವನ್ನಾಚರಿಸಿದರು. ಶ್ರೀ ರಂಭಾಪುರಿ ಪೀಠಕ್ಕೆ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರಿಗೆ ಪಟ್ಟಾಧಿಕಾರವನ್ನು ಮಾಡಿದರು. ಶ್ರೀ ಶೈಲ, ಕೇದಾರ ಪೀಠಗಳ ಉನ್ನತಿಯ ಬಗ್ಗೆ ಸಹಾಯ ಮಾಡಿದರು. ಗುರುವರ್ಗ ಮತ್ತು ವಿರಕ್ತ ಮಠಗಳು ಸಮಾಜದಲ್ಲಿ ಉತ್ತಮ ಧರ್ಮಜಾಗೃತಿ ಮಾಡಬೇಕಾದರೆ ಸ್ವಾಮಿತ್ವ ವಹಿಸುವ ವಟುಗಳಿಗೆ ಯೋಗ್ಯ ಧಾರ್ಮಿಕ ಶಿಕ್ಷಣ ಕೊಡಿಸಲು ಲಿ॥ ಹಾನಗಲ್ಲು ಕುಮಾರ ಶಿವಯೋಗಿಗಳು ಶಿವಯೋಗ ಮಂದಿರ ಸ್ಥಾಪಿಸಿದರು. ಕ್ರಮೇಣ ಕೆಲವು ಶಿಷ್ಯರ ತಾತ್ವಿಕ ಭಿನ್ನಾಭಿಪ್ರಾಯದ ಮೂಲಕ ಜ್ಞಾನ ಗುರು ವಿದ್ಯಾಪೀಠವನ್ನು ಸ್ಥಾಪಿಸಿ ಕೊಟ್ಟೂರಿನ ದಾರುಕಾಶ್ರಮದಲ್ಲಿ ಸಂಸ್ಕೃತ ವೈದಿಕ ವಿದ್ಯೆಯ ಅಭ್ಯಾಸ, ಪ್ರಾಚೀನ ಗ್ರಂಥಗಳ ಸಂಶೋಧನೆಗೆ ನೆರವಾದರು. ಮತ್ತು ಕೈ॥ ಉಮಚಗಿ ಶಂಕರ ಶಾಸ್ತ್ರಿಗಳಿಗೆ ಆಶ್ರಯ ಕೊಟ್ಟು ಈಶ, ಕೇನ, ಮಾಂಡೂಕ್ಯ, ಸಿದ್ಧಾಂತ ಮುಂತಾದ ಉಪನಿಷತ್ತುಗಳಿಗೆ ವೀರಶೈವ ಭಾಷ್ಯವನ್ನು ಮತ್ತು ಸಿದ್ಧಾಂತಸುಧಾಕರ ಶ್ರೀಕರಭಾಷ್ಯ, ಮುಂತಾದ ವೀರಶೈವ ಸಿದ್ಧಾಂತದ ಕನ್ನಡ ಗ್ರಂಥಗಳನ್ನು ಬರೆಯಿಸಿ ಜೀವನ ಪರ್ಯಂತರ ಅವರನ್ನು ಪೋಷಿಸಿದರು. ಇವರು ತಮ್ಮ ಕಾಲದಲ್ಲಿ ಹಲವು ಪಂಡಿತರಿಗೆ ಆಶ್ರಯವಿತ್ತರು. ಶ್ರೀ ಶಿವಸ್ವಾಮಿಗಳ ಮಠದಲ್ಲಿ ಲಿಂಗೈಕ್ಯ ಕೇದಾರ ಜಗದ್ಗುರು ವಿಶ್ವಲಿಂಗ ಶಿವಾಚಾರ್ಯರ ಗಣಾರಾಧನೆಯ ಸಮಯದಲ್ಲಿ ಕೈ॥ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳ ಕೋರಿಕೆಯಂತೆ “ಪಂಚಾಚಾರ್ಯ ಪ್ರಭಾ” ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಮುದ್ರಣಾಲಯಕ್ಕೆ 25 ಸಹಸ್ರ ರೂಪಾಯಿಗಳನ್ನು ಕೊಡಿಸಲು ಸಹಕರಿಸಿ ಆಶೀರ್ವದಿಸಿದರು. ಬಳ್ಳಾರಿಯಲ್ಲಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ 5000 ರೂ.ಗಳನ್ನು ಆಶೀರ್ವದಿಸಿಪರು. ಉಜ್ಜಯಿನಿ ಪೀಠದ ಬಹುಭಾಗವನ್ನು ಜೀರ್ಣೋದ್ಧಾರಗೊಳಿಸುತ್ತಿರುವಾಗಲೇ ಶಿವನ ದಿವ್ಯತೇಜಸ್ಸಿನಲ್ಲಿ ಸಮರಸರಾದರು.

ಸದ್ಯದಲ್ಲಿ ಪೀಠಾಧೀಶ್ವರರಾಗಿರುವ ಶ್ರೀ ಜಗದ್ಗುರು ಸಿದ್ಧೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾ ಸ್ವಾಮಿಗಳು ಹಿಂದಿನ ಜಗದ್ಗುರುಗಳಿಂದ ಅರ್ಧಕ್ಕೆ ನಿಂತ ಭೋಜನ ಶಾಲೆ ಮತ್ತು ಗೋಶಾಲೆಗಳನ್ನು ಪೂರ್ಣಗೊಳಿಸಿದರು. ಲಿಂಗೈಕ್ಯ ಜಗದ್ಗುರು ಸಿದ್ಧಲಿಂಗ ಶಿವಯೋಗಿಗಳ ಸಂಕಲ್ಪದಂತೆ ಜಗದ್ಗುರು ಪಂಚಾಚಾರ್ಯರ ಸಭಾಭವನ ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಪೂರ್ಣವಾಗಲು ಬಂದಿದೆ. ಜ್ಞಾನ ಗುರು ವಿದ್ಯಾಪೀಠವನ್ನು ರಿಜಿಸ್ಟರ್ ಮಾಡಿಸಿ ತಮ್ಮ ಪೂಜ್ಯ ಗುರುಗಳ ಸಂಕಲ್ಪವನ್ನು ಕಾರ್ಯರೂಪಕ್ಕೆ ತಂದಿದ್ದಾರೆ.

ಇದಕ್ಕಾಗಿ ಭೂಮಿ, ಧನ ಸಂಗ್ರಹ ಮಾಡಿದ್ದಾರೆ. ಈ 8–10 ವರ್ಷದಿಂದ ಚಿತ್ರದುರ್ಗ, ಗದಗ, ತುರವನೂರು, ಉಜ್ಜಯಿನಿಗಳಲ್ಲಿ ಪ್ರಸಾದ ನಿಲಯಗಳನ್ನೂ, ಐದು ಸಂಸ್ಕೃತ ಪಾಠಶಾಲೆಗಳನ್ನೂ, ಉಜ್ಜಯಿನಿ ಹೊಳಲಗುಂದಿಯಲ್ಲಿ ಹೈಸ್ಕೂಲುಗಳನ್ನೂ ಸ್ಥಾಪಿಸಿದ್ದಾರೆ. ಧರ್ಮ ಪ್ರಚಾರಕ್ಕಾಗಿ “ಸದ್ಧರ್ಮ ಪ್ರಭಾ” ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ. ಪ್ರಾಚೀನ ಗ್ರಂಥಗಳ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿ ಧರ್ಮ ಸಂಸ್ಕೃತಿಯನ್ನು ರಕ್ಷಿಸಲು ಸಂಕಲ್ಪಿಸಿದ್ದಾರೆ. ಈಗ ಮೂವತ್ತೆರಡು ವರ್ಷ ಪೀಠಾಧಿಕಾರ ವಹಿಸಿ ಅನೇಕ ರೀತಿಯಿಂದ ಸಮಾಜಕ್ಕಾಗಿ ಶ್ರಮಿಸುತ್ತಿದ್ದಾರೆ.

ಉಜ್ಜಯಿನಿ ಪೀಠವನ್ನು 110 ಜನ ಪೀಠಾಚಾರ್ಯರು ಆರೋಹಣ ಮಾಡಿದ್ದರು. ಯುಗಯುಗಾಂತರದ ಇತಿಹಾಸ ಪುರಾಣದ

ಮಾತಾಗಿದೆ. ಈಗ ಎಷ್ಟೋ ಇತಿಹಾಸ ಅಗೋಚರವಾಗಿದೆ. ಪೀಠಾಚಾರ್ಯರ ಚರಿತ್ರೆಗಳು ದೊರೆಯುತ್ತಿದ್ದರೂ ಲೇಖನ ಹೆಚ್ಚಿನ ವಿಸ್ತಾರವಾಗುವ ದೃಷ್ಟಿಯಿಂದ 5–6 ಜಗದ್ಗುರುಗಳ ಸೂಕ್ಷ್ಮ ಚರಿತ್ರೆಯನ್ನು ಇಲ್ಲಿ ತಿಳಿಸಲಾಗಿದೆ.

ಉಜ್ಜಯಿನಿ ಸದ್ಧರ್ಮ ಪೀಠವು ವೀರಶೈವ ಜನಾಂಗದ ಮಧ್ಯದಲ್ಲಿರುವ ನಿಮಿತ್ತ ಪೀಠದ ಕಾರ್ಯಗಳು ಜಾಗೃತವಾಗುವಂತೆ ವೀರಶೈವ ಧರ್ಮ ಸಂಸ್ಕೃತಿಯ ಹೊಂಬೆಳಗು ಸರ್ವತ್ರ ಪ್ರಸಾರವಾಗುವುದರಲ್ಲಿ ಸಂದೇಹವಿಲ್ಲ.

ಶಿವಾಚಾರ್ಯ ಶಕ್ತಿ ಬೆಳಗಲಿ

ಸುಡಿಮುತ್ತುಗಳು

ಆಶೆಯೇ ಪುನರ್ಜನ್ಮದ ಬೀಜ.

ಪ್ರಾಪಂಚಿಕ ಪ್ರೇಮ ಕೇವಲ ಸ್ವಾರ್ಥಪರವಾದುದು.

ಪರಮಾತ್ಮನನ್ನು ದರ್ಶಿಸದ ಮನುಷ್ಯ ಕುರುಡನು.

ಪಂಚ ಜಗದ್ಗುರುಗಳಿಗೆ ನಮ್ಮ ಪ್ರಣಾಮ

⁂

ಪ್ರವಾಸಗಳ ಸುವ್ಯವಸ್ಥೆಗೆ ನಿಮ್ಮೆಲ್ಲರ ಸೇವೆಗಾಗಿ ಸಿದ್ಧರಾಗಿರುವ

ವೆಲ್‌ಕಮ್ ಟ್ರಾವೆಲ್ಸ್

(ಪ್ರವಾಸಗಳ ಮತ್ತು ಟೂರಿಸ್ಟ್ ಬಸ್ಸುಗಳ ವ್ಯವಸ್ಥಾಪಕರು)
ಗ್ರಾಂ: ವೆಲ್‌ಟೂರ್

1, ಆಲ್ಬರ್ಟ್ ವಿಕ್ಟರ್ ರೋಡ್, ಬೆಂಗಳೂರು – 18
ಫೋನ್: 72368

ನಿಮ್ಮ ಎಲ್ಲಾ ವಿಧವಾದ ಪ್ರವಾಸಗಳಿಗೂ ನಮ್ಮಲ್ಲಿ ಸುಧಾರಿತ ದರಗಳಲ್ಲಿ ಬಸ್ಸುಗಳು ಸಿಗುತ್ತವೆ.

ಪ್ರೊ: ಎಚ್. ಎಸ್. ಶಿವರುದ್ರಪ್ಪ



ಶ್ರೀ ಅ. ಚ. ಶಂಕರಾರಾಧ್ಯರು

ಬೆಂಗಳೂರು ಸಿಟಿ ಕಾರ್ಪೊರೇಷನ್ ಆಫೀಸಿನಲ್ಲಿ ಸೇವೆ ಸಲ್ಲಿಸುತ್ತಿದ್ದು ನಿವೃತ್ತರಾದನಂತರ ಚಿಕ್ಕಪೇಟೆ ಶ್ರೀ ಮಹಂತರ ಮಠ ಟ್ರಸ್ಟಿನ ಮೇನೇಜರಾಗಿ 12 ವರುಷಗಳಿಂದ ಕಾರ್ಯ ನಿರ್ವಹಿಸುತ್ತ ಸರ್ವರ ಮನ್ನಣೆಗೆ ಪಾತ್ರರಾಗಿರುತ್ತಾರೆ. ಶ್ರೀ ಗುರುಪೀಠಗಳು ಮತ್ತು ಶಿವಶರಣರ ಮಠಗಳಲ್ಲಿ ತುಂಬಾ ಶ್ರದ್ಧಾಭಕ್ತಿಯಿಂದ ಕೂಡಿದವರಾಗಿದ್ದಾರೆ.

ಶ್ರೀ ಮಹಂತರ ಮಠದ ಸೇವೆಯಿಂದ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಕೃಪೆಗೆ ಪಾತ್ರರಾಗಿ ಮಹಾಸ್ವಾಮಿಯವರು ಇವರಿಗೆ "ಮಹಾ ಗುರುಸೇವಾ ಚಂದ್ರ" ಎನ್ನುವ ಸನ್ಮಾನ ಪ್ರಶಸ್ತಿಯನ್ನು ನೀಡಿ ಆಶೀರ್ವದಿಸಿರುತ್ತಾರೆ. ಸಮಾಜದ ಮೇಲ್ಮೆಗಾಗಿ ಆಸಕ್ತಿಯುಳ್ಳವರಲ್ಲಿ ಇವರೂ ಒಬ್ಬರಾಗಿದ್ದಾರೆ.

ಶ್ರೀಮದ್ ವೀರಶೈವ ಧರ್ಮಪೀಠಗಳ ಪುರಾತನತ್ವ

ಪಂಚ ಭೂತಾತ್ಮಕವಾದ ಈ ಚರಾಚರ ಜಗತ್ತು ಪರಮಾತ್ಮನಿಂದ ಉದ್ಭವಿಸಲ್ಪಟ್ಟು, ಹಗಲು ರಾತ್ರಿ, ದಿನ ಮಾಸ, ಋತು ಧರ್ಮಗಳಿಂದ ಕಾಲಚಕ್ರರೂಪವಾಗಿ ನಡೆಯುತ್ತಲಿವೆ. ಈ ಕಾಲಚಕ್ರವೇ ಈ ವಿಶ್ವದ ಸಸ್ಯಾದಿ ಸಕಲ ಜೀವರಾಶಿಗಳ ಜೀವಿತಕ್ಕೆ ಮೂಲಾಧಾರವಾಗಿದೆ. ಈ ಸಕಲ ಜೀವರಾಶಿಗಳೆಲ್ಲಾ ಪಂಚಭೂತಗಳ ಸಂಯೋಗದಿಂದ ಅಂಡಜ, ಪಿಂಡಜ, ಉದ್ಭಿಜ, ಜರಾಯುಜ ಮುಂತಾದ ಬೀಜರೂಪದಿಂದ ಉದ್ಭವಿಸಿ ಸೃಷ್ಟಿ, ಸ್ಥಿತಿ, ಲಯಾದಿ ಕಾಲನಿಯಮಗಳಿಗೆ ಒಳಪಟ್ಟು, ಸಾಗುತ್ತಿವೆ. ಈ ರೀತಿ ಉದ್ಭವಿಸಿದ ಸಜೀವ, ನಿರ್ಜೀವಿಗಳೆಲ್ಲಾ ದ್ವಿಮುಖ ಭಾಗಗಳಾಗಿ, ಮುಂದೆ ಶಾಖೋಪಶಾಖೆಗಳಿಂದ ಸಹಸ್ರಾರು ಭೇದ ಪ್ರಭೇದಗಳಿಂದ ಕಾಣುತ್ತಿವೆ. ಈ ರೀತಿ ಎಷ್ಟೇ ಭೇದ ಪ್ರಭೇದಗಳಿಂದ ಇದ್ದರೂ ಸರ್ವವೂ ಸತ್ವ, ರಜ, ತಮೋಗುಣಗಳಿಂದ ಕೂಡಿರುತ್ತವೆ. ಈ ರಜಸ್ಸು, ತಮೋಗುಣಗಳಿಗೆ ವಿಶ್ವದ ಸಕಲ- ಅಂದರೆ ಪಶು ಪಕ್ಷಿ ಮೃಗಾದಿ ಜಲಾಂತರ್ಗತ ಪ್ರಾಣಿಗಳೂ, ಸಸ್ಯಾದಿಗಳೂ ಸೇರಿರುತ್ತವೆ. ಆದರೆ ಮಾನವ ಜೀವಿಯು ಮಾತ್ರ ಸತ್ವಗುಣದಿಂದ ಕೂಡಿ ಸಕಲ ಪ್ರಾಣಿಗಳಿಗಿಂತ ಶ್ರೇಷ್ಠ ಪ್ರಾಣಿಯೆಂದು ಪರಿಗಣಿಸಲ್ಪಟ್ಟಿರುತ್ತಾನೆ. ಈ ವಿಚಾರವನ್ನು ವಿಶ್ವದ ಎಲ್ಲಾ ಆಸ್ತಿಕ ನಾಸ್ತಿಕ ಪಂಥಗಳೂ ಒಪ್ಪುತ್ತಿವೆ.

ಈ ವಿಶ್ವದ ಸರ್ವ ಪ್ರಾಣಿಗಳೂ ತಮ್ಮ ಉದರ ಪೋಷಣೆಯಲ್ಲೇ ಮಗ್ನವಾಗಿ ತಮ್ಮ ಪ್ರಾಣಧಾರಣೆಗೆ ಮುಖ್ಯವಾದ ನೈಸರ್ಗಿಕ ಆಹಾರ ಸೇವನೆಯಿಂದ ಕಾಲಚಕ್ರದಲ್ಲಿ ನಡೆಯುತ್ತಿವೆ. ಆದರೆ ಮಾನವ ಪ್ರಾಣಿಯು ಮಾತ್ರ ಉದರಪೋಷಣೆ ಒಂದರಿಂದಲೇ ತೃಪ್ತನಾಗದೆ ವಿಚಾರ, ವಿಮರ್ಶೆ, ಶಕ್ತಿಯಿಂದ ಕೂಡಿ, ಜಗತ್ತಿನ ಜಂಝಾಟಕ್ಕೆ ಸಿಕ್ಕಿ, ಈತನ ಮನಸ್ಸು ಶಾಂತಿಗಾಗಿ ಹಂಬಲಿಸುತ್ತಿರಲು ಪರಮಾತ್ಮನು ಸಾಕಾರರೂಪ, ನಿರಾಕಾರ ರೂಪದಿಂದ ವಿಶ್ವದ ಎಲ್ಲಾ ಭಾಗಗಳಲ್ಲೂ ಆಯಾ ಕಾಲ, ದೇಶ ವರ್ತಮಾನಗಳಿಗನುಸಾರವಾಗಿ ಧರ್ಮಬೋಧೆ ಮಾಡಿದನೆಂದು ತಿಳಿದುಬರುತ್ತದೆ.

ಈ ಧರ್ಮ ಬೋಧಗಳೇ ಮುಂದೆ ಮತಗಳಾಗಿ ಪರಿಣಮಿಸಿ ಈ ಮತಗಳು ಗುರುರೂಪದಿಂದ ಸ್ಥಾಪಿಸಲ್ಪಟ್ಟಿರುತ್ತವೆ. ಈ ರೀತಿ ಈ ವಿಶ್ವದ ಒಂದು ಭಾಗವಾದ ನಮ್ಮ ಭರತ ಖಂಡದಲ್ಲಿ

ಹಿಂದೂ ಮತ ಉದ್ಭವಿಸಿ ಈ ಮತವು ವೇದಾಗಮಗಳಿಂದ ಈಶ್ವರವಾಣಿಯಿಂದ ಬಂದದ್ದಾಗಿರುತ್ತದೆ. ಈ ವೇದಾಗಮಗಳ ಬೋಧನೆಯಿಂದ ಮಾನವ ಪ್ರಾಣಿಯು ಜೀವಿತದ ಸಾರ್ಥಕತೆ ಅಂದರೆ ಧರ್ಮ, ಅರ್ಥ, ಕಾಮ, ಮೋಕ್ಷವೇ ಮೊದಲಾದ ಚತುರ್ವಿಧ ಪುರುಷಾರ್ಥಗಳನ್ನು ಪಡೆಯುವುದೇ ಆಗಿರುತ್ತೆ. ಇದಕ್ಕಾಗಿ ಯಜ್ಞ ಯಾಗಾದಿಗಳೂ, ಜಪ, ತಪ ಧ್ಯಾನಾದಿಗಳೂ ಗುರುಗಳ ರೂಪದಿಂದ ಬೋಧಿಸಲ್ಪಟ್ಟವು. ಆದಿಯಿಂದಲೂ ಈ ಮತತತ್ವಗಳು ದ್ವೈತ, ಅದ್ವೈತ, ವಿಶಿಷ್ಟಾದ್ವೈತತತ್ವಗಳಿಂದಲೇ ಕೂಡಿದ್ದಾಗಿರುತ್ತವೆ.

ಮೋಕ್ಷಪ್ರನವಾದ ನಮ್ಮ ವೀರಶೈವ ಮತವೂ ಈ ಮೂರು ತತ್ವಗಳಿಂದ ಲೂ ಕೂಡಿ ವೇದಾಗಮಗಳಿಂದ ಶಿವಾದ್ವೈತ ಮತವೆಂದು ಬೋಧಿತವಾಗಿರುತ್ತೆ. ಈ ಆಗಮೋಕ್ತಿಗಳಂತೆ ಅಷ್ಟಾವರಣ ಪಂಚಾಚಾರ, ಷಟ್‌ಸ್ಥಲ ರೂಪಗಳಿಂದ ಶ್ರೀ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣ ರಾದ ಪಂಚ ಆಚಾರ್ಯರಿಂದ ಈ ವೀರಶೈವ ಮತವು ಸ್ಥಾಪಿತವಾಗಿ ಭರತ ಖಂಡದ ಎಲ್ಲಾ ಭಾಗಗಳಲ್ಲಿಯೂ ಹರಡಿರುತ್ತೆ. ಈ ಪಂಚಾಚಾರ್ಯರು ಲಿಂಗೋದ್ಭವರಾಗಿ ಬಂದು ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಮುಂತಾದ ಪಂಚಗೋತ್ರಗಳನ್ನೂ, ಕಾಮಿಕಾಗಮ, ದೀಪ್ತಾಗಮ, ವಿಜಯಾಗಮ, ರೌರವಾಗಮ, ಪ್ರೋದ್ಗೀತಾಗಮ ಎಂಬ ಪಂಚ ಸೂತ್ರಗಳನ್ನೂ ಸ್ಥಾಪಿಸಿ, ನೀತಿಪ್ರಧಾನವಾದ ಶೀಲಾಚಾರಗಳನ್ನೂ ಬೋಧಿಸಿ, ಕಟ್ಟು, ನಿಯಮಗಳಿಂದ ಮತಪ್ರಚಾರ ನಡೆಸಲು ಪಂಚ ಪೀಠಗಳನ್ನು ಸ್ಥಾಪಿಸಿದರು. ಆದಿಯಿಂದಲೂ ಈ ಪೀಠಗಳ ಪರಂಪರೆಯ ಪೀಠಾಚಾರ್ಯರುಗಳಿಂದ ಈ ವೀರಶೈವ ಧರ್ಮದ ಪ್ರಚಾರವು ನಡೆದುಕೊಂಡು ಬರುತ್ತಲಿದೆ. ಈ ಧರ್ಮ ತತ್ವಗಳು ಸಿದ್ಧಾಂತ ಶಿಖಾಮಣಿ ಮುಂತಾದ ಧರ್ಮ ಗ್ರಂಥಗಳಲ್ಲಿ ಬೋಧಿಸಲ್ಪಟ್ಟಿವೆ.

ಆದಿಯಿಂದ ಭರತ ಖಂಡದಲ್ಲಿ ಸಂಸ್ಕೃತ ಭಾಷೆಯೇ ಪ್ರಚಾರದಲ್ಲಿದ್ದುದರಿಂದ ಮತ ಗ್ರಂಥಗಳೆಲ್ಲಾ ಸಂಸ್ಕೃತ ಭಾಷೆಯಲ್ಲೇ ನಿರ್ಮಿತವಾಗಿವೆ. ಕಾಲ ಪರಿವರ್ತನೆಯಿಂದ ಭರತಖಂಡದ ರಾಜ್ಯಾಡಳಿತವು ಒಂದು ಮುಖವಾಗಿರದೆ ಭಿನ್ನ ಭಿನ್ನವಾಗಿ ನಂತರ ಪರದೇಶೀಯರ ಆಕ್ರಮಣದಿಂದ ನಾನಾ ಭಾಷೆಗಳು ಉದ್ಭವಿಸಿ. ಸಂಸ್ಕೃತ ಭಾಷೆಯು ಕುಂದಿ ನಶಿಸುತ್ತಾ ಬಂದಿತು. ಇದರಂತೆಯೇ ಕ್ರಮವಾದ ಧರ್ಮ ಪ್ರಚಾರಗಳಿಗೂ ಅಡಚಣೆಯುಂಟಾಗಿ ಧರ್ಮಪೀಠಗಳ ಪ್ರಭಾವವೂ ಕ್ಷೀಣಿಸುತ್ತಾ ಬಂದಿತು.

ಈ ಕಾಲದಲ್ಲಿ ಈಶ್ವರ ಪ್ರೇರಣೆಯಿಂದ ಭಕ್ತಭಂಡಾರಿ ಬಸವಾದಿ ಪ್ರಮಥರು ಅವತರಿಸಿ ಮೋಕ್ಷಪ್ರದವಾದ ವೀರಶೈವ ಮತಧರ್ಮದ ದೀಕ್ಷೆಯನ್ನು ಪಡೆದು ಇದರಂತೆ ನಡೆದು ನುಡಿದು ಮಾನವತ್ವದಿಂದ ದೈವತ್ವವನ್ನು ಹೊಂದಿ ಈ ಪವಿತ್ರ ಮತದ ತತ್ವಗಳಿಂದ ಪಡೆದ ತಮ್ಮ ಅನುಭವಾಮೃತವನ್ನು ತಿಳಿಗನ್ನಡದಲ್ಲಿ ಬರೆದು ಆಬಾಲವೃದ್ಧರಿಗೂ ಸುಲಭವಗಿ ತಿಳಿಯುವಂತೆ ಬೋಧಿಸಿ ವೀರಶೈವಧರ್ಮವನ್ನು ಜಾಗ್ರತಗೊಳಿಸಿದರು. ಈ ಬೋಧನೆಯು ವೀರಶೈವ ಸಮಾಜಕ್ಕೆ ಮಾತ್ರವಲ್ಲದೆ ವಿಶ್ವದ ಮಾನವಧರ್ಮಕ್ಕೇ ಆಶ್ರಯವಾಗಿರುತ್ತದೆ. ಈ ವೀರಶೈವ ಧರ್ಮದ ದೀಕ್ಷಾವಲಂಬಿಗಳಾದ ಸರ್ವರೂ ತಮ್ಮ ಅನುಭವದಿಂದ ರಚಿಸಿದ ವಚನಗಳು ಸಮಾಜದಲ್ಲಿ ಸರ್ವರಿಗೂ ಪರಮೋಪಕಾರಿಗಳಾಗಿವೆ.

ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರರು ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರವರೂ ಶ್ರೀಮದ್ರಂಭಾಪುರಿ ವೀರ ಸಿಂಹಾಸನಾಧೀಶ್ವರರು ಶ್ರೀ ಶ್ರೀ ಶ್ರೀ 1008 ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರವರೂ ಶ್ರೀ ಕಾಶೀ ಜ್ಞಾನ ಸಿಂಹಾಸನಾಧೀಶ್ವರರು ಶ್ರೀ ಶ್ರೀ ಶ್ರೀ 1008 ಜಗದ್ಗುರು ವೀರಭದ್ರ ಶಿವಾಚಾರ್ಯಭಗವತ್ಪಾದರವರೂ ಹಾಗೂ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳೇ ಮೊದಲಾದ ಅನೇಕ ಮಂದಿ ಸಂಸ್ಕೃತ ಪಂಡಿತೋತ್ತಮರೂ ಈ ವೀರಶೈವ ಮತವು ಪುರಾತನವಾದದ್ದೆಂದೂ, ಈ ಮತವು ಪಂಚಾಚಾರ್ಯರಿಂದಲೇ ಸ್ಥಾಪಿತವಾಯಿತೆಂದೂ ಈ ಮತದ ಮೂಲ ಧರ್ಮಪೀಠಗಳು ಬಾಳೆಹೊನ್ನೂರು, ಉಜ್ಜಯಿನಿ, ಶ್ರೀಶೈಲ ಕಾಶಿ, ಹಿಮವತ್ ಕೇದಾರಗಳಲ್ಲಿರತಕ್ಕ ಐದು ಮಹಾ ಪೀಠಗಳೇ ಆದಿಯಿಂದಲೂ ಇರತಕ್ಕವುಗಳೆಂದೂ ವೀರಶೈವ ಮತದ ಪ್ರತಿಯೊಬ್ಬ ವ್ಯಕ್ತಿಯೂ ಈ ಪಂಚ ಪೀಠಗಳ ಗೋತ್ರ, ಸೂತ್ರಗಳಿಗೊಳಪಟ್ಟಿರುವನೆಂದೂ ತೋರಿಸಿ, ಬೋಧಿಸಿ ವಿಶ್ವದ ಇತರ ಧರ್ಮಪೀಠಗಳಂತೆ ಈ ವೀರಶೈವ ಧರ್ಮಪೀಠಗಳೂ ಬೆಳಗುತ್ತಿವೆಯೆಂದೂ ಸಾರಿ ಈ ಪಂಚ ಪೀಠಗಳನ್ನು ಉದ್ಧಾರಮಾಡಿದರು. ಈ ಮತದ ಧರ್ಮವು ಬ್ರಹ್ಮಚಾರಿಗಳಿಗೂ, ಗೃಹಸ್ಥಾಶ್ರಮಿಗಳಿಗೂ ಸನ್ಯಾಸಾಶ್ರಮಿಗಳಿಗೂ ಬೋಧಕವಾಗಿದೆ.

ಈ ಪೀಠಗಳ ಪುರಾತನತ್ವವನ್ನು ವೀರಶೈವ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತಿಳಿದು, ಭೇದ ಭಾವಗಳನ್ನು ತೊರೆದು ಪೀಠಾಚಾರ್ಯರ ಕೃಪಾಶೀರ್ವಾದಕ್ಕೆ ಪಾತ್ರರಾಗಲೆಂದು ಶ್ರೀ ಗುರುದಾರುಕೇಶ್ವರನನ್ನು ಪ್ರಾರ್ಥಿಸುತ್ತೇನೆ.

ಅನಾದಿ ಕಾಲದಿಂದ ಬಂದಿರುವ ಈ ಮೂಲ ಪೀಠಗಳನ್ನು ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ನೆನಪಿನಲ್ಲಿಟ್ಟುಕೊಂಡಿರಬೇಕು.

1) ಶ್ರೀಮದ್ರಂಭಾಪುರಿ ವೀರಸಿಂಹಾಸನ ಪೀಠ, ಬಾಳೆಹೊನ್ನೂರು.

ಈ ಪೀಠದ ಪಟ್ಟಾಧಿಕಾರವನ್ನು ಹೊಂದಿರುವ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನರೇಣುಕ ವೀರ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಯವರು ಹಿಂದಿನ ಪಟ್ಟಾಧಿಕಾರಿಗಳ ಪರಂಪರೆಯಲ್ಲಿ 119ನೆಯವರಾಗಿರುತ್ತಾರೆ.

ಪ್ರತಿಯೊಬ್ಬ ಆಚಾರ್ಯರಿಗೂ 20 ವರ್ಷ ಸರಾಸರಿ ಅಧಿಕಾರಾವಧಿಯಂತೆ ಹೋದರೂ 2380 ವರ್ಷಗಳಾಗುತ್ತೆ.

2) ಶ್ರೀ ಸದ್ಧರ್ಮ ಸಿಂಹಾಸನ ಪೀಠ,
ಉಜ್ಜಯಿನಿ.

ಈ ಪೀಠದ ಪಟ್ಟಾಧಿಕಾರವನ್ನು ಹೊಂದಿರುವ ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರು ಹಿಂದಿನ ಪಟ್ಟಾಧಿಕಾರಿಗಳ ಪರಂಪರೆಯಲ್ಲಿ 109ನೆಯವರಾಗಿರುತ್ತಾರೆ.

3) ಶ್ರೀ ವೈರಾಗ್ಯಸಿಂಹಾಸನ ಪೀಠ,
ಹಿಮವತ್ ಕೇದಾರ ಉತ್ತರ ಪ್ರದೇಶ.

ಈ ಪೀಠದ ಪಟ್ಟಾಧಿಕಾರವನ್ನು ಹೊಂದಿರುವ ಶ್ರೀ ಶ್ರೀ ಶ್ರೀ 1008 ಜಗದ್ಗುರು ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಯವರು ಹಿಂದಿನ ಪಟ್ಟಾಧಿಕಾರಿಗಳ ಪರಂಪರೆಯಲ್ಲಿ 292ನೆಯವರಾಗಿರುತ್ತಾರೆ.

4) ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನ ಪೀಠ,
ಶ್ರೀಶೈಲ, ಗುಂತಕಲ್, ಆಂಧ್ರ ಪ್ರದೇಶ.

ಈ ಪೀಠದ ಪಟ್ಟಾಧಿಕಾರವನ್ನು ಹೊಂದಿರುವವರು ಶ್ರೀ ಶ್ರೀ ಶ್ರೀ 1008 ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಯವರು.

ಈ ಪೀಠವೂ ಬಹು ಪುರಾತನವಾದುದು. ಹಿಂದಿನ ಪಟ್ಟಾಧಿಕಾರಿಗಳ ವಿವರ ಇನ್ನೂ ಬಂದಿಲ್ಲ.

5) ಶ್ರೀ ಜ್ಞಾನ ಸಿಂಹಾಸನ ಪೀಠ, (ಕಾಶಿ)
ಜಂಗಮವಾಡಿ ಮಠ, ವಾರಣಾಸಿ.

ಈ ಪೀಠದ ಪಟ್ಟಾಧಿಕಾರವನ್ನು ಹೊಂದಿರುವ ಶ್ರೀ ಶ್ರೀ ಶ್ರೀ 1008 ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಯವರು ಹಿಂದಿನ ಪಟ್ಟಾಧಿಕಾರಿಗಳ ಪರಂಪರೆಯಲ್ಲಿ 85ನೆಯವರಾಗಿರುತ್ತಾರೆ.

ಮೂಲಪಂಚಾಚಾರ್ಯರು ಉದ್ಭವಿಸಿದ ಪವಿತ್ರವಾದ ಲಿಂಗಗಳ ವಿವರಣೆ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಕೊಲ್ಲಿಪಾಕಿ ಕ್ಷೇತ್ರದ ಸೋಮೇಶ್ವರ ಲಿಂಗದಲ್ಲಿ ಉದ್ಭವಿಸಿದರು. (ಅಗಸ್ತ್ಯಮಹರ್ಷಿಗೆ ಉಪದೇಶ ಕೊಟ್ಟರು).

ಶ್ರೀ ಜಗದ್ಗುರು ದಾರುಕಾಚಾರ್ಯರು ವಟಕ್ಷೇತ್ರದ ಸಿದ್ಧೇಶ್ವರ ಲಿಂಗದಲ್ಲಿ ಉದ್ಭವಿಸಿದರು. (ದಧೀಚಿ ಮಹರ್ಷಿಗೆ ಉಪದೇಶ ಕೊಟ್ಟರು).

ಶ್ರೀಜಗದ್ಗುರು ಪಂಡಿತಾರಾಧ್ಯರು ಶ್ರೀಶೈಲ ಕ್ಷೇತ್ರದ ಮಲ್ಲಿಕಾರ್ಜುನ ಲಿಂಗದಲ್ಲಿ ಉದ್ಭವಿಸಿದರು. (ಸಾನಂದ ಮಹರ್ಷಿಗೆ ಉಪದೇಶ ಕೊಟ್ಟರು).

ಶ್ರೀ ಜಗದ್ಗುರು ವಿಶ್ವಾರಾಧ್ಯರು ಕಾಶೀ ಕ್ಷೇತ್ರದ ವಿಶ್ವೇಶ್ವರ ಲಿಂಗದಲ್ಲಿ ಉದ್ಭವಿಸಿದರು. (ದೂರ್ವಾಸ ಮಹರ್ಷಿಗೆ ಉಪದೇಶ ಕೊಟ್ಟರು).

ಶ್ರೀ ಜಗದ್ಗುರು ಏಕೋರಾಮಾರಾಧ್ಯರು ದ್ರಾಕ್ಷಾರಾಮ ಕ್ಷೇತ್ರದ ರಾಮನಾಥಲಿಂಗದಿಂದ ಉದ್ಭವಿಸಿದರು. (ವ್ಯಾಸ ಮಹರ್ಷಿಗೆ ಉಪದೇಶ ಕೊಟ್ಟರು),

ಶ್ರೀ ರೇಣುಕಾಚಾರ್ಯರ ಜಯಂತಿ ಫಾಲ್ಗುಣ ಶುದ್ಧ ತ್ರಯೋದಶಿ ದಿನ.

ಶ್ರೀ ದಾರುಕಾಚಾರ್ಯರ ಜಯಂತಿ ವೈಶಾಖ ಶುದ್ಧ ಪಂಚಮಿ ದಿನ.

ಶ್ರೀ ಏಕೋರಾಮಾರಾಧ್ಯರ ಜಯಂತಿ ವೈಶಾಖ ಶುದ್ಧ ತದಿಗೆ ದಿನ.

ಶ್ರೀ ಪಂಡಿತಾರಾಧ್ಯ ಹಾಗೂ ಶ್ರೀ ವಿಶ್ವಾರಾಧ್ಯರ ಜಯಂತಿ ಮಹಾ ಶಿವರಾತ್ರಿ ದಿನ.

ಈ ದಿನಗಳಲ್ಲಿ ಜಯಂತಿಗಳನ್ನು ಸರ್ವರೂ ಆಚರಿಸಿ ಶ್ರೀ ಗುರುಕೃಪೆಗೆ ಪಾತ್ರರಾಗತಕ್ಕದ್ದು.

Compliments 卐

SHANTILAL & CO.,

STOCKISTS: S. K. F. BALL BEARINGS

28, SILVER JUBILEE PARK ROAD

BANGALORE-2

卐

ದಾವಣಗೆರೆ ನಗರ ಬೃಹನ್ಮಠಾಧೀಶ

ಶ್ರೀ ಷ. ಬ್ರಂ. ಸ್ಥಿರಪಟ್ಟಾಧ್ಯಕ್ಷ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು

ಅಷ್ಟಾವರಣ

ಶೈವ ಮತವು ತನ್ನದೇ ಆದ ಅತಿ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಹರಪ್ಪ ಮೊಹಂಜೋದಾರದಿಂದ ಹಿಡಿದು ಇಂದಿನ ವರೆಗೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ. ಅಲ್ಲದೆ ತನ್ನ ಅನೇಕ ಶಾಖೆಗಳ ಮುಖಾಂತರ ಜೀವಂತವಾಗಿ ಉಳಿದಿದೆ. ಶೈವರಲ್ಲಿ ಶಿವನನ್ನು ಲಿಂಗ ರೂಪದಲ್ಲಿ ಉಪಾಸಿಸುವ ಕ್ರಮವು ಬಹು ಪ್ರಾಚೀನವು. ದೇವಾಲಯಗಳಲ್ಲಿ ಸ್ಥಾವರ ಲಿಂಗಗಳನ್ನಲ್ಲದೆ ಶೈವ ಗುರುಗಳಿಂದ ಲಿಂಗ ಧಾರಣ ಮಾಡಿಸಿಕೊಂಡು ಉಪಾಸನೆಯನ್ನು ಮಾಡುವ ಪದ್ಧತಿಯೂ ಅತಿ ಪ್ರಾಚೀನವಾದುದು. ಆಗಮಗಳಲ್ಲಿ ಲಿಂಗದೀಕ್ಷೆ ಮತ್ತು ಅದರ ಉಪಾಸನೆಯನ್ನು ಕುರಿತು ಹೇಳಿದೆ. ಶೈವದ ಪರಿಪಕ್ವ ಫಲದಾತಿರುವ ವೀರಶೈವ ಧರ್ಮವು ತನ್ನದೇ ಆದ ಇತಿಹಾಸವನ್ನೂ, ತಾತ್ವಿಕ, ನೈತಿಕ ಮತ್ತು ಸಾಮಾಜಿಕ ಬೆಳವಣಿಗೆಗಳನ್ನೂ ಹೊಂದಿದೆ.

ಯಾವುದೇ ಮತವು ಪರಿಪೂರ್ಣವಾಗಬೇಕಾದರೆ ಮೇಲೆ ಹೇಳಿದ ಲಕ್ಷಣಗಳು ಅವಶ್ಯಕ. ವೀರಶೈವ ಧರ್ಮದ ಇತಿಹಾಸದ ಕುರುಹುಗಳನ್ನು ಶೈವಾಗಮಗಳಲ್ಲಿ ಕಾಣಬಹುದು. 12ನೇ ಶತಮಾನಕ್ಕಿಂತ ಹಿಂದೆಯೇ ಈ ಧರ್ಮ ಇದ್ದಿತೆಂದು ಇತಿಹಾಸ ಪ್ರಮಾಣ ಗ್ರಂಥಗಳಿಂದ ತಿಳಿದು ಬರುತ್ತದೆ. ಆದಾಗ್ಯೂ ಈ ದಿಸೆಯಲ್ಲಿ ಸತ್ಯಸಂಶೋಧನೆ ನಡೆಯಬೇಕಾಗಿದೆ. ಪ್ರಾಚೀನ ಸಂಸ್ಕೃತ ಗ್ರಂಥಗಳನ್ನೂ ಶಾಸನಗಳನ್ನೂ ಮತ್ತು ಇತರ ಸಾಧನಗಳನ್ನೂ ಸೂಕ್ಷ್ಮವಾಗಿ ಅಭ್ಯಾಸಿಸಬೇಕಾಗಿದೆ.

ತಾತ್ವಿಕ ವಿಭಾಗದಲ್ಲಿ ಶಿವ, ಜೀವ, ಜಗತ್ತು, ಇವುಗಳ ಸಂಬಂಧಗಳನ್ನು ಚರ್ಚಿಸಿ ನಿಶ್ಚಿತ ಸಿದ್ಧಾಂತವನ್ನು ಪ್ರತಿಪಾದಿಸಲಾಗಿದೆ. ಇದಕ್ಕೆ ಷಟ್‌ಸ್ಥಲ ಸಿದ್ಧಾಂತವೆಂದು ಇದನ್ನು ಶಿವಾದ್ವೈತ ವಿಶೇಷಾದ್ವೈತ, ದ್ವೈತಾದ್ವೈತ, ಶಕ್ತಿವಿಶಿಷ್ಟಾದ್ವೈತ ಎಂಬ ಅನೇಕ ಹೆಸರುಗಳಿಂದ ಕರೆಯಲಾಗಿದೆ.

ನೈತಿಕ ಕಟ್ಟುಪಾಡುಗಳು ಸಕಲ ಧರ್ಮೀಯರಿಗೂ ಅಗತ್ಯ. ನೀತಿಯು ಸಮಾಜ ಜೀವಿಯಾದ ಮಾನವನಿಗೆ ಇತರ ಮಾನವರೊಡನೆ ಹೇಗೆ ಬಾಳಬೇಕೆಂಬುದನ್ನು ಸೂಚಿಸುವುದು. ತಾತ್ವಿಕ ಸಿದ್ಧಾಂತವು ಜೀವನನ್ನು ವಿಚಾರಕ್ಕೊಳಪಡಿಸಿದರೆ, ನೈತಿಕ ವಿಚಾರವು ಆತನನ್ನು ಆಚಾರಕ್ಕೊಳಪಡಿಸುವುದು. ಮಾನ

ಶ್ರೀ ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ದಾವಣಗೆರೆ ಬೃಹನ್ಮಠಾಧೀಶರಾಗಿದ್ದಾರೆ. ಇವರು ವೀರಶೈವ ದರ್ಶನದಲ್ಲಿ ಆಳವಾಗಿ ಅಭ್ಯಾಸಮಾಡಿ ಪಾಂಡಿತ್ಯವನ್ನು ಗಳಿಸಿದ್ದಾರೆ. ಅವರ ಶೈಲಿಯು ನಿರರ್ಗಳವಾಗಿದೆ. ಇವೆಲ್ಲದರ ಪ್ರತೀಕವೇ ಪ್ರಕೃತ ಲೇಖನ.

ವನು ನೀತಿ ಬಾಹಿರನಾದರೆ ಧರ್ಮಕ್ಕೆ ಅನರ್ಹನು. ಸಮಾಜಕ್ಕೆ ಅಹಿತನು. ದೇವರನ್ನೊಲಿಸಲು ನೀತಿಯೆ ನೆಲಗಟ್ಟು. ಆಚಾರವೆಂದರೆ ಸದ್ವೃತ್ತಿ. ಸುಸ್ವಭಾವ, ಧರ್ಮಕ್ಕೆ ಆಚಾರ ಮುಖ್ಯಾಂಗ. ನಡೆನುಡಿಗಳನ್ನು ಪರಿಶುದ್ಧಗೊಳಿಸುವುದೇ ಆಚಾರದ ಗುರಿ.

> "ಆಚಾರವನರಿಯದೆ ಭವವಳಿಯದೆ
> ಕೋಪಮುರಿಯದೆ ತಾಪವುಡುಗದೆ
> ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ
> ನಾನು ಮರುಗುವೆ ಕಾಣ ಗುಹೇಶ್ವರ"

ಈರೀತಿ ಧರ್ಮಕ್ಕೆ ಆಚಾರವೇ ಮುಖ್ಯ. ಅದರಂತೆ ವೀರಶೈವ ಧರ್ಮಕ್ಕೆ ಪಂಚಾಚಾರಗಳು ವಿಧಿಸಲ್ಪಟ್ಟಿವೆ.

ಸಾಮಾಜಿಕ ಅಥವಾ ಧಾರ್ಮಿಕ ಬೆಳವಣಿಗೆ ಎಲ್ಲ ಧರ್ಮಗಳಿಗೂ ಅತ್ಯಗತ್ಯ. ನೈತಿಕ ಆಚಾರಗಳಿಂದ ಮಾನವನು ತನ್ನ ಧರ್ಮಕ್ಕೆ ತಕ್ಕ ಯೋಗ್ಯತೆಯನ್ನು ಪಡೆದು, ತಾತ್ವಿಕ ವಿಚಾರಗಳಿಂದ ಶಿವನೊಲುಮೆಗೆ ಪಾತ್ರನಾಗಿ ಮೋಕ್ಷವನ್ನು ಹೊಂದಬೇಕಷ್ಟೆ! ಆ ಮಾರ್ಗವನ್ನು ಆಚರಣೆಯಲ್ಲಿ ತರುವುದು ಹೇಗೆ, ತಿಳಿಸುವವರಾರು? ಇಂತಹ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಕಾಣುವುದು ಧಾರ್ಮಿಕ ವ್ಯವಸ್ಥೆಯಲ್ಲಿ. ಇಂತಹ ಸಾಮಾಜಿಕ ವ್ಯವಸ್ಥೆಯು ಧರ್ಮಗಳಿಗಿಲ್ಲದಿದ್ದರೆ ಆ ಧರ್ಮಗಳು ಬಹು ಕಾಲ ಬಾಳಲಾರವು ಮತ್ತು ತನ್ನ ಗುರಿಯನ್ನು ಮುಟ್ಟಲಾರವು. ಸಮಾಜದಲ್ಲಿ ಧಾರ್ಮಿಕ ಗ್ಲಾನಿಯಾದರೆ ತತ್ವಗಳು ಎಷ್ಟು ಮಹತ್ವವಾಗಿದ್ದರೂ ಉಪಯೋಗವಿಲ್ಲದವಾಗುತ್ತವೆ. ಕಾಲದ ಬದಲಾವಣೆಯಿಂದ ಸಮಾಜದಲ್ಲಿ ಏರು–ಪೇರುಗಳಾದರೂ ಈ ಧಾರ್ಮಿಕ ವ್ಯವಸ್ಥೆಯ ಮುಖಾಂತರ ಅವುಗಳಿಗೆ ನೂತನ ದೃಷ್ಟಿಯನ್ನು ಕೊಡಬೇಕಾಗುವುದು. ಅಂತಹ ಸಾಮಾಜಿಕ ಬೆಳವಣಿಗೆ ವೀರಶೈವರ ಅಷ್ಟಾವರಣಗಳಲ್ಲಿ ಕಂಡು ಬರುವುದು. ವೀರಶೈವರಿಗೆ ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ ಷಟ್‌ಸ್ಥಲ ಮಾರ್ಗದಲ್ಲಿ ನಡೆದರೆ ಲಿಂಗಾಂಗ ಸಾಮರಸ್ಯವು ಸಿದ್ಧಿಸುವುದು. ಈ ರೀತಿ ಅಂಗವು ಅಷ್ಟಾವರಣ ಸ್ವರೂಪಹೊಂದಿದರೆ ಅವನು ಅಂಗನೆನಿಸಿಕೊಳ್ಳುವನು. ಈ ಅಷ್ಟಾವರಣಾಂಗನೇ ಲಿಂಗ ಸ್ವರೂಪನು.

ಗುರು :—

ಗುರು-ಲಿಂಗ ಜಂಗಮ ತತ್ವಗಳು ಒಂದೇ ವೃಕ್ಷದ ರೆಂಬೆಗಳು. ಭಕ್ತಿ ಪಾಶಕ್ಕೆ ಗುರುತತ್ವವು ಮೂಲ. ಲಿಂಗ ತತ್ವವು ಮಧ್ಯಭಾಗ. ಜಂಗಮ ತತ್ವವು ಫಲ ಸ್ವರೂಪವಾದುದು. ಗುರುಭಕ್ತನ ಶಕ್ತಿಪಾತವನ್ನು ಪರೀಕ್ಷಿಸಿ ಲಿಂಗಸಂಬಂಧ ಮಾಡುವನು. ಭಕ್ತನು ಗುರುದತ್ತವಾದ ಇಷ್ಟಲಿಂಗವನ್ನು ಪ್ರಾಣ-ಭಾವಲಿಂಗಗಳ ಪ್ರತೀಕವೆಂದು ಭಾವಿಸಿ ಉಪಾಸಿಸುವನು. ಜಂಗಮನು ಆ ಉಪಾಸನೆಯನ್ನು ಪರೀಕ್ಷಿಸಿ ಅನುಗ್ರಹ ಮಾಡುವನು. ಈ ರೀತಿ ಗುರು ಲಿಂಗ ಜಂಗಮ–ಇವು ಮೂರೂ ವೀರಶೈವ ಧರ್ಮದಲ್ಲಿ ಬಹು ಪ್ರಾಮುಖ್ಯವಾಗಿವೆ. ಗುರು–ಜಂಗಮರು ಹಿರಿದಾದ ಕಾರ್ಯವನ್ನೆಸಗಿದ್ದಾರೆ.

ಅಷ್ಟಾವರಣಗಳಲ್ಲಿ ಮೊದಲಿನ ಸ್ಥಾನ ಗುರುವಿನದು. ಗುರುವಿನ ಕಾರ್ಯಕ್ಷೇತ್ರ ಬಹು ದೊಡ್ಡದು. "ಆಡು ಮುಟ್ಟದ ಗಿಡವಿಲ್ಲ" ಎಂದ ಹಾಗೆ ಗುರುವಿಲ್ಲದ ಧರ್ಮವಿಲ್ಲ. ಅದರಲ್ಲೂ ಭಾರತದಲ್ಲಿ ಗುರುವನ್ನು ಎಲ್ಲಕ್ಕಿಂತ ದೊಡ್ಡದು ಎಂದಿದ್ದಾರೆ. ಅದರಂತೆ ವೀರಶೈವರಿಗೂ ಗುರು ಬಹು ದೊಡ್ಡ ವ್ಯಕ್ತಿ. ಆದ್ದರಿಂದ ಆತನನ್ನು ಈ ರೀತಿ ವರ್ಣಿಸಿದ್ದಾರೆ:–

> ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ
> ಗುರುದೇವಃ ಪರಂ ತತ್ವಂ ತಸ್ಮೈ ಶ್ರೀ ಗುರುವೇನಮಃ॥

ಗುರುದೇವನೇ ಮಹಾದೇವನು ಗುರುದೇವನೇ ಸದಾಶಿವನು. ಗುರುದೇವನೇ ಪರತತ್ವವು. ಅಂತಹ ಶ್ರೀ ಗುರುವಿನ ಕಲ್ಪನೆ ವೀರಶೈವರದು. ಗುರುವು ಅತಿ ಮಹತ್ವದ ಸ್ಥಾನವನ್ನು ಹೊಂದಿದ್ದಾನೆ. ಆತನೆ ಆಧ್ಯಾತ್ಮಿಕ ಸಾಧನೆಗೆ ಮೂಲ. "ಮಡಕೆ ಮಾಡುವರೆ ಮಣ್ಣೆ ಮೊದಲು, ತೊಡಿಗೆಯ ಮಾಡುವರೆ ಹೊನ್ನೆ ಮೊದಲು, ಶಿವಪಥವನರಿವೊಡೆ ಗುರುಪಥವೆ ಮೊದಲು" ಎನ್ನುತ್ತಾರೆ ಬಸವಣ್ಣನವರು. ಲಿಂಗದೀಕ್ಷೆಯನ್ನು ಕರುಣಿಸಿ ಸಾಧನೆಯಲ್ಲಿ ತೊಡಗಿಸುವವನು ಗುರುವು. ಗುರುವಿಲ್ಲದೆ ಲಿಂಗವಿಲ್ಲ. ಆದ್ದರಿಂದ ಅಷ್ಟಾವರಣವೇ ಅಂಗವಾಗಿ ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲ ಮಾರ್ಗದಲ್ಲಿ ನಡೆದು, ಲಿಂಗಾಂಗ ಸಾಮರಸ್ಯವನ್ನು ಪಡೆದು, ಸಮಾಜದೊಪ್ಪಿಗೆಯಿಂದ ವಿಧ್ಯುಕ್ತವಾದ ಗುರುತ್ವ ಸಂಸ್ಕಾರವನ್ನು ಹೊಂದಿರುವುದೇ ವೀರಶೈವ ಗುರುವಿನ ಲಕ್ಷಣವು.

ದೀಕ್ಷೆ ಎಂಬುದು ವೀರಶೈವರಿಗೆ ಅತಿ ಪ್ರಾಮುಖ್ಯ ಧಾರ್ಮಿಕ ಆಚರಣೆ.

> "ದೀಯತೇ ಲಿಂಗ ಸಂಬಂಧಃ ಕ್ಷೀಯತೇ ಚ ಮಲತ್ರಯಂ।
> ದೀಯತೇ ಕ್ಷಿಯತೇಯಸ್ಮಾಃ ಸಾ ದೀಕ್ಷೇತಿ ನಿಗದ್ಯತೇ॥

ಕ್ರಿಯಾ, ಮಂತ್ರ ವೇಧದೀಕ್ಷೆಗಳೆಂಬುದಾಗಿ ದೀಕ್ಷೆ ಮೂರು ಬಗೆಯಾಗಿವೆ. ಇದರಿಂದ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿರುವ ಕಾರ್ಮಿಕ ಮಲ, ಮಾಯಾ ಮಲ, ಆಣವ ಮಲಗಳನ್ನು ಕಳೆದು, ಕ್ರಮವಾಗಿ ಇಷ್ಟ, ಪ್ರಾಣ ಭಾವವೆಂಬ ಲಿಂಗತ್ರಯ ಸಂಬಂಧವನ್ನುಂಟುಮಾಡುವವನು ಗುರುವು. ವೀರಶೈವರು ಗುರುವಿನಲ್ಲಿ ಮೂರು ಬಗೆಯನ್ನಾಗಿ ಕಂಡಿದ್ದಾರೆ. ದೀಕ್ಷಾ ಗುರು, ಶಿಕ್ಷಾ ಗುರು ಮೋಕ್ಷ ಗುರು. "ಕರ್ಮ, ಕ್ರಿ ಆಚಾರ ಸಂಬಂಧವ ಸಂಬಂಧಿಸಿ

ಮಾಡುವಲ್ಲಿ ದೀಕ್ಷಾಗುರು ಆ ಕ್ರೀ ತಪ್ಪಿದಲ್ಲಿ ಬಂಧನವ ಮಾಡುವಲ್ಲಿ ಶಿಕ್ಷಾಗುರು, ಇಷ್ಟ ಕಾಮ್ಯ ಮೋಕ್ಷಂಗಳ ಗೊತ್ತುಗೆಡಿಸಿ ನಿಶ್ಚೈಸಿ ಮಾಡುವಲ್ಲಿ ಮೋಕ್ಷಗುರು; ಇಂತೀ ಭೇದದಾಗವನರಿಯಬಲ್ಲ ಪರಮಗುರು" ಈ ಎಲ್ಲವೂ ಒಬ್ಬನೇ ಗುರುವಿನಿಂದ ನಡೆಯುವುವು. ಗುರುವಿನಲ್ಲಿ ಭೇದವಿಲ್ಲ. ಆದ್ದರಿಂದ ಗುರುತ್ವವು ಏಕವೂ ನಿತ್ಯವೂ ವ್ಯಾಪಕವೂ ಇರುವುದು. ಈ ರೀತಿ ಗುರುವಿನ ಸ್ಥಾನವು ವೀರಶೈವರಲ್ಲಿ ಬಹು ಮಹತ್ವದ್ದಾಗಿದೆ. ಈ ಎಲ್ಲ ಕಾರ್ಯಕ್ಕಾಗಿಯೇ ವೀರಶೈವರಲ್ಲಿರುವ ಗುರುಪೀಠಗಳು ಬಹು ವ್ಯವಸ್ಥಿತವಾಗಿರುವುವು. ಐದು ಗುರುಪೀಠಗಳಿದ್ದು ಅವಕ್ಕೆ ಐವರು ಜಗದ್ಗುರುಗಳಿರುವರು. ಆ ಪಂಚಪೀಠಾನುವರ್ತಿಗಳಾದ ಗುರುಮಠಗಳು ಎಲ್ಲೆಡೆಯಲ್ಲಿ ಸ್ಥಾಪಿಸಲ್ಪಟ್ಟಿರುವವು. ಪೀಠಾಧಿಕಾರಿಗಳ ಆಜ್ಞೆಯ ಮೇಲೆಗೆ ಈ ಮಠಾಧಿಕಾರಿಗಳು ಧರ್ಮಾಧಿಕಾರದ ಹೊಣೆಯನ್ನು ಹೊತ್ತು ಎಲ್ಲ ಧಾರ್ಮಿಕ ಸಂಸ್ಕಾರಗಳನ್ನು ವಿಧಿವತ್ತಾಗಿ ನಡೆಸುತ್ತಿರುವರು. ಈ ರೀತಿ ಗುರುಗಳು ವೀರಶೈವ ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನು ದೀಕ್ಷಾದಿ ಸಂಸ್ಕಾರದಿಂದ ಉದ್ಧರಿಸುತ್ತ ಸಮಾಜದಲ್ಲಿ ಧಾರ್ಮಿಕ ಮನೋಭಾವನೆಯನ್ನು ಬೆಳಗಿಸುತ್ತಿರುವರು.

ಲಿಂಗ:

ಲಿಂಗ ಅಷ್ಟಾವರಣಗಳಲ್ಲಿ ಎರಡನೆಯದು. ಲಿಂಗವೆಂದರೆ ಹರಿದಾಡುವ ಮನಸ್ಸನ್ನು ಒತ್ತಟ್ಟಿಗೆ ಏಕೀಕರಿಸಿ ಚಿದಾನಂದವನ್ನು ಪಡೆಯಲಿಕ್ಕೆ ಅನುಕೂಲವಾದ ಒಂದು ಸಾಧನವು.

"ತದೇವ ಲಿಂಗಂ ಪ್ರಣವಂ ಸಾರ್ವಕಾಯಿಕಂ"— ಎಂದರೆ ಇಚ್ಛೆಗಳನ್ನು ಪೂರ್ತಿಗೊಳಿಸುವ ಓಂಕಾರ ಪ್ರಣವವೇ ಲಿಂಗವು. ವೀರಶೈವ ಧರ್ಮ ಗ್ರಂಥವಾದ "ಸಿದ್ಧಾಂತ ಶಿಖಾಮಣಿ" ಲಿಂಗದ ವ್ಯಾಪಕ ಸ್ವರೂಪವನ್ನು ಈ ರೀತಿ ನಿರೂಪಿಸಿದೆ.

> "ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ।
> ಪುನಃ ಪುನಃ ಸಮುತ್ಪತ್ತಿ ತಲ್ಲಿಂಗಂ ಬ್ರಹ್ಮ ಶಾಶ್ವತಂ॥
> ತಸ್ಮಾಲ್ಲಿಂಗಮಿತಿ ಖ್ಯಾತಂ ಸತ್ತಾನಂದ ಚಿದಾತ್ಮಕಂ।
> ಬೃಹತ್ವಾದ್ಬ್ರಹ್ಮಣತ್ವಾಚ್ಚ ಬ್ರಹ್ಮ ಶಬ್ದಾಭಿದೇಯಕಂ॥

ಅಂದರೆ "ಯಾವ ವಸ್ತುವಿನಲ್ಲಿ ಈ ಚರಾಚರಾತ್ಮಕವಾದ ಜಗತ್ತು ಲಯವನ್ನು ಹೊಂದುವುದೋ, ಯಾವ ವಸ್ತುವಿನಲ್ಲಿ ಪುನಃ ಪುನಃ ಉತ್ಪತ್ತಿಯನ್ನು ಹೊಂದುವುದೋ ಆ ನಿತ್ಯವಾದ ಪರಬ್ರಹ್ಮವೇ ಲಿಂಗವೆಂದು ಹೇಳಿಸಿಕೊಳ್ಳುವುದು. ಸಚ್ಚಿದಾನಂದ ಸ್ವರೂಪವಾದ ಆ ಲಿಂಗವು ಮಹತ್ವವುಳ್ಳದ್ದಾದುದರಿಂದಲೂ, ತನ್ನನ್ನಾಶ್ರಯಿಸಿದವರಲ್ಲಿ ಅಂಥ ಮಹತ್ವವನ್ನು ಉಂಟುಮಾಡುವುದರಿಂದಲೂ ಬ್ರಹ್ಮಶಬ್ದವಾಚ್ಯವಾಗಿರುವುದು". ಸೂಕ್ಷ್ಮಾಗಮೋಕ್ತಿಯಂತೆ—

> ಲೀನಂ ಪ್ರಪಂಚರೂಪಂ ಹಿ ಸರ್ವಮೇತಚ್ಚರಾಚರಂ।
> ಸರ್ಗಾದೌ ಗಮ್ಯತೇ ಭೂಯಸ್ತಸ್ಮಾಲ್ಲಿಂಗಮುದೀರಿತಂ॥

ಅಂದರೆ ಯಾವುದರಲ್ಲಿ ಚರಾಚರಾತ್ಮಕವಾದ ಪ್ರಪಂಚವು ಪ್ರಳಯದಲ್ಲಿ ಲೀನವಾಗುವುದೋ, ಸೃಷ್ಟಿಯ ಆದಿಯಲ್ಲಿ ಯಾವುದರಿಂದ ಉತ್ಪತ್ತಿ ಸ್ಥಿತಿಗಳನ್ನು ಪಡೆಯುವುದೋ ಅದು ಲಿಂಗವೆನಿಸುವುದು. ಈ ರೀತಿ ವೀರಶೈವರು ಸಚರಾಚರ ಜಗತ್ತನ್ನು ಲಿಂಗ ಮಧ್ಯದಲ್ಲಿ ಕಂಡು, ಲಿಂಗಕ್ಕೆ ಹೊರತಾದುದಾವುದೂ ಇಲ್ಲವೆನ್ನುವ ಮಟ್ಟಿಗೆ ಲಿಂಗದ ಕಲ್ಪನೆಯನ್ನು ಬೆಳೆಸಿಕೊಂಡಿದ್ದಲ್ಲದೆ, ಇದರ ಸಂಕೇತವನ್ನು ಸದಾಕಾಲ ದೇಹದ ಮೇಲೆ ಧರಿಸಿ ಉಪಾಸಿಸತೊಡಗಿದರು. ಇದುವೆ ಇಷ್ಟಲಿಂಗವಾಗಿರುವುದು. ಯಾವಾಗಲೂ ಭಕ್ತರ ಅನಿಷ್ಟವನ್ನು ಪರಿಹರಿಸಿ, ಅವರಿಷ್ಟವನ್ನು ಕೊಡುವುದರಿಂದ ಇದು ಇಷ್ಟಲಿಂಗವೆಂಬ ಹೆಸರನ್ನು ಪಡೆಯಿತು. ಸಂಸಾರ ದುಃಖವನ್ನು ಹೋಗಲಾಡಿಸಿ, ಶಾಶ್ವತವಾದ ಆನಂದವನ್ನು ಅಂದರೆ ಲಿಂಗಾಂಗ ಸಾಮರಸ್ಯದ ಸುಖವನ್ನು ಕೊಡುವುದು ಇಷ್ಟಲಿಂಗ.

ಈ ಇಷ್ಟಲಿಂಗವು ಸ್ಥೂಲ ಶರೀರದಲ್ಲಿಯಲ್ಲದೆ, ಸೂಕ್ಷ್ಮ ಕಾರಣ ಶರೀರಗಳಲ್ಲಿ ಕ್ರಮವಾಗಿ ಪ್ರಾಣಲಿಂಗ ಭಾವಲಿಂಗ ನಾಮದಿಂದಲೂ, ಆಧಾರಾದಿ ಷಟ್ ಚಕ್ರಗಳಲ್ಲಿ ಆಚಾರಲಿಂಗ, ಗುರುಲಿಂಗಾದಿನಾಮದಿಂದಲೂ ಸಂಬಂಧವನ್ನು ಹೊಂದಿದ್ದು, ಇವೆಲ್ಲ ಸ್ಥಾನಗಳಲ್ಲಿಯೂ ಲಿಂಗೋಪಾಸನೆಯು ನಡೆಯಬೇಕು. ದೃಷ್ಟಿ ಚಲಿಸದಂತೆ ಕರಪೀಠದಲ್ಲಿರುವ ಇಷ್ಟ ಲಿಂಗದ ನಿರೀಕ್ಷಣೆಯಿಂದ ಗುರುವಿನ ಉಪದೇಶದಂತೆ ತಲ್ಲಿಂಗದ ಸಮರ್ಚನೆಯು ಇಷ್ಟಲಿಂಗೋಪಾಸನೆ ಎನಿಸುವುದು. ಆ ಇಷ್ಟಲಿಂಗವೇ ಪ್ರಾಣ ಸ್ವರೂಪವೆಂದು ಮನಸ್ಸಿನ ಏಕಾಗ್ರತೆಯಿಂದ ಧ್ಯಾನಿಸುವುದೇ ಪ್ರಾಣಲಿಂಗೋಪಾಸನೆಯೆನಿಸುವುದು. ಆ ಇಷ್ಟಲಿಂಗವೇ ತನ್ನ ಸ್ವರೂಪವೆಂದು ಭಾವಿಸಿ, ಅದರಲ್ಲಿ ಮನಸ್ಸನ್ನು ಲೀನ ಮಾಡುವುದೇ ಭಾವಲಿಂಗೋಪಾಸನೆಯು. ಇಷ್ಟ ಲಿಂಗವು ದೃಷ್ಟಿ ಗ್ರಾಹ್ಯವು, ಪ್ರಾಣ ಲಿಂಗವು ಮನೋಗ್ರಾಹ್ಯವು ಭಾವಲಿಂಗವು ಭಾವಗ್ರಾಹ್ಯವು ಎಂಬ ಅನುಭವೋಕ್ತಿಯೂ ಮೇಲಿನ ವಿಚಾರಕ್ಕನುಗುಣವಾಗಿರುವುದು. ಇದು ತ್ರಿವಿಧ ಲಿಂಗೋಪಾಸನೆಯ ಕ್ರಮವು. ದೃಷ್ಟಿಯನ್ನು ನಿಲ್ಲಿಸುವುದಕ್ಕೆ ಇಷ್ಟ ಲಿಂಗದ ಅವಶ್ಯಕತೆ ಬಹಳವಿರುವುದೆಂದು ವಿದಿತವಾದುದು. ಅಭ್ಯಾಸ ಕ್ರಮದಿಂದ ಸತ್, ಚಿತ್, ಆನಂದ (ಇಷ್ಟ, ಪ್ರಾಣ, ಭಾವ) ರೂಪವಾದ ಲಿಂಗತ್ರಯದ ಏಕಾಕಾರವಾದ ಸಚ್ಚಿದಾನಂದ ಸ್ವರೂಪವು ಅಂಗನಲ್ಲಿ ಸಂಭವಿಸುವುದು. ಈ ರೀತಿ ಅಂತರಂಗದಲ್ಲಿ ಅನುಭವದ ಸಂಸ್ಕಾರವಾಗಬೇಕಾದರೆ, ಬಹಿರಂಗದ ಕ್ರಿಯೆಯೆ ಮುಖ್ಯ. ಇಷ್ಟಲಿಂಗದಲ್ಲಿ ಆಚರಿಸುವ ಜ್ಞಾನಮಯವಾದ ಕ್ರಿಯೆಯೇ ತದನುಭವವನ್ನುಂಟುಮಾಡುವುದು. ಆದುದರಿಂದಲೇ ಇಷ್ಟಲಿಂಗಕ್ಕೆ ಕ್ರಿಯಾಲಿಂಗವೆಂದೂ ಹೆಸರಿರುವುದು. ಇದರಿಂದ ಇಷ್ಟಲಿಂಗವು ಅವಶ್ಯವಾದುದೆಂದು ಗೊತ್ತಾಗುವುದು.

ಜಂಗಮ:

ಜಂಗಮ ಅಷ್ಟಾವರಣಗಳಲ್ಲಿ ಮೂರನೆಯವನು. ಜಗದ ಜಂಜಡವನ್ನು ಜರೆದು, ಜೀವ ಭಾವವಳಿದು, ಜೀವಗುಣಗಳನ್ನು ತೊರೆದು ನಿರಂತರವೂ ಅನುಸಂಧಾನದಲ್ಲಿದ್ದು ಭಕ್ತಾನುಗ್ರಹ ರತನಾದವನೇ ಜಂಗಮನು. ಗುರುವಾಗಿ ದೀಕ್ಷಾಮುಖಾಂತರ ಇಷ್ಟಲಿಂಗವನ್ನು ಕರುಣಿಸಿ, ಮತಬೋಧೆಯನ್ನು ಮಾಡಿದರೆ, ಜಂಗಮನಾಗಿ ಬಂದು ಮತಾಚರಣೆಯ ಪರೀಕ್ಷೆ ಮಾಡಿ, ಆಚರಣೆಯ ಫಲವಾದ ಪ್ರಸಾದವನ್ನು ಅನುಗ್ರಹಿಸುವನು. ಗುರುವು ಧರ್ಮಬೋಧಕನಾದರೆ ಜಂಗಮನು ಧರ್ಮ ರಕ್ಷಕನಾಗಿರುವನು. ಅಂದರೆ ಸಮಾಜದ ಬಂಧುರತೆಗೆ ಗುರು ಬೇಕು, ಆಧ್ಯಾತ್ಮ ಪ್ರಗತಿಗೆ ಜಂಗಮ ಬೇಕು. ಈ ಧರ್ಮ ರಕ್ಷಣೆಯ ಕಾರ್ಯದಲ್ಲಿ ಅವರಿಬ್ಬರ ಕಾರ್ಯ ಬಹುಮಹತ್ವದ್ದು. ಆದ್ದರಿಂದಲೇ ವೀರಶೈವರಲ್ಲಿ ಗುರು ಲಿಂಗ ಜಂಗಮರಿಗೆ ತನುಮನಧನಗಳನ್ನರ್ಪಿಸಬೇಕೆಂಬ ನಿಯಮವಿರುವುದು. ಈ ರೀತಿ ಜಂಗಮದ ಕಲ್ಪನೆಯು ವೀರಶೈವ ಧರ್ಮದ ವಿಶಿಷ್ಟ ಕಲ್ಪನೆ.

ಜಂಗಮರ ಲಕ್ಷಣವನ್ನು ಸಿದ್ಧಾಂತ ಶಿಖಾಮಣಿಯು ಈ ರೀತಿ ವರ್ಣಿಸುತ್ತದೆ—

"ಯೇ ಪಶ್ಯಂತಿ ಜಗಜ್ಜಾಲಂ ಚಿದ್ರೂಪಂ ಶಿವಯೋಗತಃ।
ನಿರ್ಧೂತಮಲ ಸಂಸ್ಪರ್ಶಾಸ್ತೇ ಸ್ಮೃತಾಃ ಶಿವಯೋಗಿನಃ॥

ಅಂದರೆ ಯಾರು ಈ ಸಮಸ್ತ ಪ್ರಪಂಚವನ್ನು ಶಿವನ ಸಂಬಂಧದಿಂದ ಚಿತ್ಕ್ರಿಯಾ ಸ್ವರೂಪವನ್ನಾಗಿ ತಿಳಿಯುತ್ತಾರೋ, ಅಣವಾದಿ ಮಲ ಸ್ಪರ್ಶದೂರವಾದ ಅವರೇ ಜಂಗಮರೆಂದು ಹೇಳಿಸಿಕೊಳ್ಳುವರು. ಮಾನವ ಕಲ್ಯಾಣಕ್ಕಾಗಿ ಜಗದ್ಭರಿತನಾಗಿ ಸಂಚರಿಸುವವನು ಜಂಗಮನು. ಲಿಂಗದೇಹಿಯಾಗಿ ಜಂಗಮನು ಭಕ್ತನ ಉದ್ಧಾರಕ್ಕಾಗಿ ಸಂಚರಿಸುತ್ತಾ ಆತನಲ್ಲಿ ಶ್ರದ್ಧೆ ನಿಷ್ಠೆಗಳನ್ನು ಪ್ರಚೋದಿಸುತ್ತಾನೆ. ಆತನಲ್ಲಿರುವ ಕುಂದುಗಳನ್ನು ಎತ್ತಿ ತೋರಿಸುವುದಲ್ಲದೆ, ಆತನ ಮುನ್ನಡೆಗೆ ದಾರಿದೀಪನಾಗುತ್ತಾನೆ. ಬಸವಣ್ಣನವರು "ಗುರುವು ಉಪದೇಶ ಮಂತ್ರ ವೈದ್ಯನಾದರೆ, ಜಂಗಮವು ಉಪದೇಶ ಶಸ್ತ್ರ ವೈದ್ಯ" ಎಂದು ಹೇಳಿದ್ದಾರೆ. ಆತನು ಭವರೋಗವ ಕಳೆವ ವೈದ್ಯ. ಆತನು ಜ್ಞಾನ ಮೂರ್ತಿ. ಜಂಗಮವೇ ಗುರು. ಜಂಗಮವೇ ಲಿಂಗ. ಗುರುವು ದೀಕ್ಷಾ ಮೂರ್ತಿ, ಲಿಂಗವು ಪೂಜಾ ಮೂರ್ತಿಯಾದರೆ ಜಂಗಮವು ಭೋಗ ಮೂರ್ತಿ. ಲಿಂಗವೇ ಜಂಗಮನ ವೇಷವನ್ನು ಧರಿಸಿ ಸುಳಿಯುತ್ತದೆ. ಜಂಗಮ ತೃಪ್ತಿಯೇ ಲಿಂಗ ತೃಪ್ತಿ. ಅದರಿಂದಲ್ಲವೆ "ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ" ಎಂದೆನ್ನುವುದು.

> ಆಚಾರವೇ ಲಿಂಗ, ಆ ಆಚಾರದ ಅರಿವೇ ಜಂಗಮ. ಅಂಗವೇ ಲಿಂಗ,
> ಚೈತನ್ಯವೇ ಜಂಗಮ", ತನುವಿನ ಪ್ರಾಣ ಲಿಂಗವಾದರೆ,
> ಮನದ ಪ್ರಾಣ ಜಂಗಮ.

ಹೀಗೆ ಜಂಗಮನು ಭಕ್ತರನ್ನು ಉದ್ಧರಿಸುತ್ತ, ಅವರಿಂದ ಬಂದುದೆಲ್ಲವನ್ನು ತನ್ನದೆಂದು ಭಾವಿಸದೆ, ಶಿವ ಪ್ರಸಾದವೆಂದು ಭಾವಿಸಿ ಸಮಾಜೋದ್ಧಾರ ಕೆಲಸಕ್ಕೆ ವಿನಿಯೋಗಿಸುವುದು ಜಂಗಮನ ಕರ್ತವ್ಯವು. ಈ ರೀತಿ ಜಂಗಮನು ತನ್ನ ಸಾಧನೆಯಿಂದ ಜಗದ್ಭರಿತನಾಗಿ ಬೆಳೆದ ಒಂದು ಮಹಾ ಚೇತನ. ಜಾತಿ, ಕುಲ, ದೇಶ, ಕಾಲಗಳ ಯಾವ ಪರಿಮಿತಿಗೂ ಆತ ಬಂಧಿತನಾದವನಲ್ಲ. ಇಂತಹ ಸ್ಥಿತಿಯನ್ನು ಹೊಂದಿದವನೇ ನಿಜ ಜಂಗಮನು. ಜಂಗಮ ಜಾತಿಯ ಕುರುಹಲ್ಲ, ಆಧ್ಯಾತ್ಮಿಕ ನಿಲುವು, ಅನುಭಾವದ ತುತ್ತ ತುದಿ.

ಪಾದೋದಕ:

"ಪಕಾರಂ ಪರಮಜ್ಞಾನಂ ದೋಕಾರಂ ದೋಷವರ್ಜನಂ॥
ದಕಾರಂ ದಹತೇ ಜನ್ಮ ಕಕಾರಂ ಕರ್ಮನಾಶನಂ"॥

ಎಂದು ನಿರ್ವಚನ ಮಾಡಿದ್ದಾರೆ.

ಪಾದೋದಕ ಎಂಬುದು ಪವಿತ್ರ ತೀರ್ಥ ಎಂಬ ಶಬ್ದಕ್ಕಿಂತಲೂ ವಿಶಿಷ್ಟಾರ್ಥವನ್ನು ಕೊಡುವುದು. ಪಾದೋದಕ ವಿಧಿಯನ್ನು ಆಮೂಲಾಗ್ರವಾಗಿ ನೋಡಿದರೆ ಪಾದದ ಪ್ರತ್ಯಂಗುಲಿಗಳಿಗೂ ಸಂಬಂಧಿಸುವ ಪ್ರಣವ. ಆಗ ಜಪಿಸುವ ಜಪ, ಪಾದೋದಕದಲ್ಲಿ ಲಭಿಸುವ ಪ್ರಣವ, ಮೊದಲಾದ ವಿಧಾನಗಳಿಂದ ಉದಿಸಿದ ಪಾದೋದಕವು ಪ್ರತ್ಯಕ್ಷ ಚಿದ್ರೂಪವಾಗಿರುವುದು.

ಪರಮಾನಂದ ಏವೋಕ್ತ, ಪಾದಶಬ್ದೇನ ನಿರ್ಮಲಃ॥
ಜ್ಞಾನಂ ಚೋದಕ ಶಬ್ದೇನ ಪಾದೋದಕಮಿತಿಸ್ಮೃತಂ॥

ಅಂದರೆ ಪಾದ ಶಬ್ದದಿಂದ ಮಹಾನಂದವು ಹೇಳಲ್ಪಡುತ್ತದೆ; ಉದಕ ಶಬ್ದದಿಂದ ಜ್ಞಾನವು ಹೇಳಲ್ಪಡುತ್ತದೆ; ಇವೆರಡರ ಸಂಬಂಧವುಳ್ಳದ್ದೇ ಪಾದೋದಕವೆನಿಸುವುದು. ಅಥವಾ

ಪಾದ ಶಬ್ದೇನ ಗುರುದೇವ ನಿಗದ್ಯತೇ॥
ಶಿಷ್ಯಶ್ಚೋದಕ ಶಬ್ದೇನ ತಯೋರೈಕ್ಯಂತು ದೀಕ್ಷಯಾ॥

ಎಂದರೆ ಪಾದ ಶಬ್ದದಿಂದ ಗುರುವು ಹೇಳಲ್ಪಡುತ್ತಾನೆ, ಉದಕ ಶಬ್ದದಿಂದ ಶಿಷ್ಯನು ಹೇಳಲ್ಪಡುತ್ತಾನೆ. ಶಿಷ್ಯ ಮಸ್ತಕಾಘ್ರಾಣನ ಸ್ವರೂಪ ದೀಕ್ಷಾ ವಿಶೇಷದಿಂದ ಗುರುಶಿಷ್ಯರ ಐಕ್ಯವು ಹೇಳಲ್ಪಡುತ್ತದೆ. ಪಾದೋದಕವು ದೀಕ್ಷಾ, ಶಿಕ್ಷಾ, ಜ್ಞಾನ ಪಾದೋದಕಗಳೆಂದು ಮೂರು ಸ್ಥಲಗಳಾಗಿ ಏರ್ಪಟ್ಟಿದೆ. ಗುರು ಶಿಷ್ಯರ ಆನಂದದ ಐಕ್ಯವೇ ದೀಕ್ಷಾ ಪಾದೋದಕ; ಗುರು ಶಿಷ್ಯರ ಸ್ವರೂಪೈಕ್ಯ—ಜ್ಞಾನವೇ ಶಿಕ್ಷಾಪಾದೋದಕ, ಜ್ಞಾನ

ಗುರುವಿನೊಡನೆ ಶಿಷ್ಯನ ಸಾಮರಸ್ಯವೇ ಜ್ಞಾನಪಾದೋದಕ. ಇವನ್ನು ಗುರುಪಾದೋದಕ, ಲಿಂಗಪಾದೋದಕ, ಜಂಗಮ ಪಾದೋದಕ ಎಂದು ಮೂರು ಪ್ರಕಾರಗಳನ್ನಾಗಿ ಮಾಡಿರುವರು. ಗುರುಪಾದೋದಕ ಕರುಣ ಜಲ; ಲಿಂಗ ಪಾದೋದಕ ವಿನಯ ಜಲ; ಜಂಗಮ ಪಾದೋದಕ ಸಮತೆ ಜಲ; ಇದನ್ನು ಸೇವಿಸುವುದರಿಂದ ಸಂಚಿತ ಪ್ರಾರಬ್ಧ ಮತ್ತು ಆಗಾಮಿ ಕರ್ಮಗಳು ನಾಶವಾಗುತ್ತವೆ.

ಪ್ರಸಾದ:

ಇದು ಅಷ್ಟಾವರಣಗಳಲ್ಲಿ ಐದನೆಯದು. ಪ್ರಸನ್ನಚಿತ್ತತೆಯನ್ನುಂಟುಮಾಡುವುದಾವುದೋ ಅದೇ ಪ್ರಸಾದ. ಅತಲ್ಲದೆ ಭಗವದ್ಗೀತೆಯಲ್ಲಿ "ಪ್ರಸಾದೇ ಸರ್ವ ದುಃಖಾನಾಂ ಹಾನಿರಸ್ಯೋಪ ಜಾಯತೇ । ಪ್ರಸನ್ನ ಚೇತಸೋಹ್ಯಾಸು ಬುದ್ಧಿಃ ಕರ್ಮವ ತಿಷ್ಠತೆ ॥" ಎಂದು ಹೇಳಿರುವುದು. ಪ್ರಸಾದ ಸ್ವೀಕರಿಸುವುದರಿಂದ ಎಲ್ಲ ದುಃಖಗಳು ಹಿಂಗಿಹೋಗುವುವು. "ಮನಃ ಪ್ರಸಾದ ಯೋಗೇನ ಪ್ರಸಾದೀತ್ಯೇಷ ಕಥ್ಯತೆ" ಅಂದರೆ ಮನಃ ಪ್ರಸಾದ ಯೋಗದಿಂದ ಪ್ರಸಾದಿಯೆಂದು ಹೇಳಿಸಿಕೊಳ್ಳಲ್ಪಡುವನು. "ಶಿವ ಪ್ರಸಾದೋ ಯದ್ರವ್ಯಂ ಶಿವಾಯ ವಿನಿವೇದಿತಂ । ನಿರ್ಮಾಲ್ಯಂ ತತ್ತು ಶೈವಾನಾಂ ಮನೋ ನೈರ್ಮಲ್ಯ ಕಾರಣಂ ॥" ಎಂದರೆ ಯಾವ ವಸ್ತುವು ಶಿವನಿಗೆ ಸಮರ್ಪಿತವಾಗುವುದೋ ಅದು ಶಿವ ಪ್ರಸಾದವೆನಿಸುವುದು. ಆ ಪ್ರಸಾದವು ಮನೋ ನೈರ್ಮಲ್ಯಕ್ಕೆ ಕಾರಣವಾಗುವುದು. ವೀರಶೈವರು ತಮ್ಮ ಆಹಾರವನ್ನು ತಾವೇ ಸಂಪಾದಿಸಿ ತಮ್ಮದೆಂದು ಅಹಂಕಾರ, ಮಮಕಾರ ಭಾವನೆಯಿಂದ ಭುಂಜಿಸದೆ, ಅದು ತನ್ನ ಉಪಾಸ್ಯ ಮೂರ್ತಿಗಳಾದ ಗುರು, ಲಿಂಗ, ಜಂಗಮರ ಕೃಪೆಯಿಂದ ಪಡೆದುದೆಂದು ತಿಳಿದು, ಅವರಿಗರ್ಪಿಸಿ, ಅವರ ಮುಖದಿಂದ ಬಂದುದನ್ನು ದಾಸೋಹಂ ಭಾವದಿಂದ ಭುಂಜಿಸುವ ಆಹಾರವು ಪ್ರಸಾದವೆನಿಸುವುದು.

ಪ್ರಸಾದವು ಮೂರು ತೆರನಾಗಿ ಲಭಿಸುವುದು. ಅವು ಶುದ್ಧ ಪ್ರಸಾದ, ಸಿದ್ಧ ಪ್ರಸಾದ, ಪ್ರಸಿದ್ಧ ಪ್ರಸಾದ ಎಂಬುದಾಗಿ. ಮಡಿವಾಳ ಮಾಚಿದೇವನು ತನ್ನ ಒಂದು ವಚನದಲ್ಲಿ ಇದನ್ನು ಈ ರೀತಿ ವಿವರಿಸಿದ್ದಾನೆ.

"ಗುರುವಿನಲ್ಲಿ ಶುದ್ಧ, ಲಿಂಗದಲ್ಲಿ ಸಿದ್ಧ, ಜಂಗಮದಲ್ಲಿ ಪ್ರಸಿದ್ಧ. ಇಂತೀ ಶುದ್ಧ, ಸಿದ್ಧ,ಪ್ರಸಿದ್ಧ ಪ್ರಸಾದದಲ್ಲಿ ಏನನ್ನುಣಕಲಿಸಿದ ಕಲಿದೇವಾ ನಮ್ಮ ಶರಣ ಸಂಗನ ಬಸವಣ್ಣನು".

ಈ ರೀತಿ ತ್ರಿವಿಧ ಪ್ರಸಾದ ಸ್ವರೂಪವನ್ನು ಕಾಣಬಹುದು. ಇವೇ ಗುರು ಪ್ರಸಾದ, ಲಿಂಗ ಪ್ರಸಾದ, ಜಂಗಮ ಪ್ರಸಾದ ಎಂದು ಮೂರು ಪ್ರಕಾರಗಳಾದರೂ ತತ್ವತಃ ಬೇರೆಬೇರೆಯಲ್ಲ. ಒಂದು ಶಕ್ತಿಯ ಮೂರು ರೂಪಗಳು . ಈ ಮೂರರಲ್ಲಿ ಪ್ರತಿಯೊಂದರಲ್ಲಿಯೂ ಉಳಿದೆರಡು ಪ್ರಕಾರಗಳು ಕೂಡಿಯೇ ಇರುವುವು.

ವಿಭೂತಿ :

ಇದು ಅಷ್ಟಾವರಣಗಳಲ್ಲಿ ಆರನೆಯದು. ವಿಭೂತಿಯೆಂದರೆ ಸಂಪತ್ತು ಮತ್ತು ಭಸ್ಮಗಳೆಂದು ಎರಡು ಅರ್ಥಗಳಾಗುತ್ತವೆ. ಸಂಪತ್ತೆಂದರೆ ಭೌತಿಕ ಸಂಪತ್ತಲ್ಲ. ಆಧ್ಯಾತ್ಮಿಕ ಸಂಪತ್ತು. ಭಸ್ಮವೆಂದರೆ ಒಲೆಯೊಳಗಿನ ಬೂದಿಯಲ್ಲ, ಪವಿತ್ರವಾದ ಗೋಮಯದಿಂದ ಶುದ್ಧವಾದ ಭಸ್ಮವನ್ನು ತಯಾರಿಸಿ ಪಾದೋದಕ, ಮಂತ್ರಾದಿಗಳಿಂದ ಶುದ್ಧಿಗೊಳಿಸುವುದೇ ವಿಭೂತಿಯು. ಜ್ಞಾನಾಗ್ನಿಯಿಂದ ಕಾಮಕ್ರೋಧಾದಿ ಗುಣಗಳನ್ನು ದಹಿಸುವುದರಿಂದುಂಟಾದ ವೈಭವವೇ ವಿಭೂತಿಯು. ಶಿವನು ಅಗ್ನಿನೇತ್ರದಿಂದ ಮನ್ಮಥನನ್ನು ಧ್ವಂಸಮಾಡಿ ಆ ಬೂದಿಯನ್ನು ಮೈಗೆ ಪೂಸಿಕೊಂಡಂತೆ ವೀರಶೈವರು ತಾವೂ ಕಾಮಕ್ರೋಧಾದಿ ಷಡ್ರಿಪುಗಳನ್ನು ಅಳಿದಿರುವೆವೆಂಬುದನ್ನು ತೋರಿಸಲಿಕ್ಕೆ ಭಸ್ಮಧಾರಣಮಾಡುತ್ತಾರೆ. ವಿಭೂತಿ ಧಾರಣವೇ ಷಡ್ರಿಪುಗಳನ್ನಳಿದವರ ಗುರುತು. ಇದೇ ಆಧ್ಯಾತ್ಮಿಕ ಸಂಪತ್ತು.

ಅಗ್ನಿಪೂಜೆಗೂ, ಭಸ್ಮಪೂಜೆಗೂ ಮಹದಂತರವಿದೆ. ಅಗ್ನಿಪೂಜೆಯು ಪ್ರವೃತ್ತಿ ಮಾರ್ಗದ್ಯೋತಕವಾಗಿದೆ. ಭಸ್ಮಪೂಜೆಯು ನಿವೃತ್ತಿ ಮಾರ್ಗವನ್ನು ಸೂಚಿಸುತ್ತದೆ. ಅಗ್ನಿಯು ಭೋಗಕ್ಕೆ ನೆರವಾದರೆ ಭಸ್ಮವು ತ್ಯಾಗಕ್ಕೆ ಕಾರಣವಾಗಿದೆ. ಆದುದರಿಂದ ವಿಭೂತಿಯೆಂಬುದು ದಿವ್ಯ ತೇಜಸ್ಸು. ಅದು ಶಿವನ ಸ್ವರೂಪವನ್ನು ಪ್ರಕಾಶಗೊಳಿಸುವುದರಿಂದ "ಭಸಿತ"ವೆಂದು ಹೆಸರು ಬಂದಿದೆ. ಇದು ಶಿವನ ಪರಮ ಚೈತನ್ಯ ಚಿತ್ ಸ್ವರೂಪ. ಆ ಮಹಾ ವಸ್ತುವಿನ ದಿವ್ಯ ತೇಜದ ಸಂಕೇತವೆಂಬ ಭಾವನೆಯಿಂದ ವಿಭೂತಿಯನ್ನು ವೀರಶೈವರು ಧರಿಸುತ್ತಾರೆ. "ನಮ್ಮ ಗುಹೇಶ್ವರ ಲಿಂಗವ ಕಾಂಬುದಕ್ಕೆ ಆ ಮಹಾ ವಸ್ತುವಿನ ದಿವ್ಯ ತೇಜದಿಂದೊದಗಿದ ಭಸಿತವೇ ಮುಖ್ಯ ಕಾಣಿರಣ್ಣಾ" ಎಂದು ಇದರ ಮಹತ್ವವನ್ನು ಅಲ್ಲಮ ಪ್ರಭುವೂ ಸಹ ಹೇಳಿದ್ದಾನೆ. ಪ್ರಪಂಚವು ವಿಭೂತಿಮಯವು. ವಿಭೂತಿಯು ಮಲತ್ರಯಂಗಳ ತೊಳೆಯುವುದು.

ವಿಭೂತಿಯನ್ನು ನಿರುಪಾಧಿಕ, ಸೋಪಾಧಿಕವೆಂದು ಎರಡು ವಿಧವಾಗಿ ವಿಂಗಡಿಸಿರುವರು. ಪರಶಿವನನ್ನು ಮಹಾ ಭಸ್ಮವೆಂದು ಭಾವಿಸುವುದೇ "ನಿರುಪಾಧಿಕ ಭಸ್ಮ"ವೆನಿಸುವುದು. ಪಂಚಬ್ರಹ್ಮ ಮಂತ್ರನ್ಯಾಸಾದಿಗಳ ಸಂಬಂಧದಿಂದ ಯಾವುದು ಶಿವಾಗ್ನಿ ಸಂಸ್ಕಾರ ಪೂರ್ವಕವಾಗಿ ಉತ್ಪನ್ನವಾಗುವುದೋ, ಆ ಭಸ್ಮಕ್ಕೆ ತಂತ್ರಶಾಸ್ತ್ರ ವಿಶಾರದರು "ಸೋಮಾಧಿಕ ಭಸ್ಮ" ವೆಂದು ಹೇಳುವರು. ಭಸ್ಮಕ್ಕೆ ಐದು ಕಾರಣಗಳಿಂದ "ವಿಭೂತಿ-ಭಸಿತ-ಭಸ್ಮ-ಕ್ಷಾರ-ರಕ್ಷಾ" ಎಂದು ಹೆಸರುಗಳು ಬಂದಿವೆ. ಅಷ್ಟೈಶ್ವರ್ಯಗಳಿಗೆ ಕಾರಣೀಭೂತ

ವಾಗಿರುವುದರಿಂದ ವಿಭೂತಿಯೆಂದೂ, ಶಿವತತ್ವವನ್ನು ಪ್ರಕಾಶಗೊಳಿಸುವುದರಿಂದ ಭಸಿತವೆಂದೂ, ಮನೋವಾಕ್ಕಾಯ ಜನ್ಯವಾದ ಪಾಪಗಳನ್ನು ಭಯಪಡಿಸುವುದರಿಂದ ಭಸ್ಮವೆಂದೂ, ಆಧ್ಯಾತ್ಮಿಕ, ಆಧಿಭೌತಿಕ, ಆಧಿ ದೈವಿಕ ರೂಪ ತಾಪಗಳಿಂದ ಪ್ರಾಪ್ತವಾಗುವ ವಿಪತ್ತುಗಳನ್ನು ಕ್ಷಯಗೊಳಿಸುವುದರಿಂದ ಕ್ಷಾರವೆಂದೂ, ಭೂತ ಪ್ರೇತ ಪಿಶಾಚಾದಿಗಳಿಂದ ಕಾಪಾಡುವುದರಿಂದ ರಕ್ಷೆಯೆಂದೂ ಹೇಳಿಸಿಕೊಳ್ಳುವುದು ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ವಿವರಿಸಲಾಗಿದೆ.

ರುದ್ರಾಕ್ಷಿ :

ಇದು ಅಷ್ಟಾವರಣಗಳಲ್ಲಿ ಏಳನೆಯದು. ವಿಭೂತಿಯಂತೆ ರುದ್ರಾಕ್ಷಿಯೂ ಮಾರ್ಗಸೂಚಕವಾದ ಒಂದು ಬಹಿರಾವರಣ. ಅದರ ಉತ್ಪತ್ತಿ ಈ ರೀತಿ ನಿರೂಪಿತವಾಗಿದೆ :

"ಪುರಾ ತ್ರಿಪುರಸಂಹಾರೇ ತ್ರಿನೇತ್ರೋ ಜನಗತಾಂ ಪತಿಃ।
ಉದಪಶ್ಯತ್ಸುರಾಂ ಯೋಗಮುನ್ಮೀಲಿತ ವಿಲೋಚನಃ॥
ನಿಪೇತುಸ್ತಸ್ಯ ನೇತ್ರೇಭ್ಯೋ ಬಹವೋ ಜಲಬಿಂದವಃ
ತೇಭ್ಯೋ ಜಾತಾಹಿ ರುದ್ರಾಕ್ಷಾ ರುದ್ರಾಕ್ಷ ಇತಿ ಕೀರ್ತಿತಾಃ॥"

ಅಂದರೆ ತ್ರಿಪುರ ಸಂಹಾರದ ಸಂದರ್ಭದಲ್ಲಿ ರುದ್ರನ ಸೂರ್ಯ ಚಂದ್ರಾಗ್ನಿ ನೇತ್ರಗಳಿಂದ ಜಲಬಿಂದುಗಳು ಉದುರಿದವು. ಅವುಗಳಿಂದ ರುದ್ರಾಕ್ಷಿಗಳು ಉತ್ಪನ್ನವಾದವು. ಇವು ಮುವತ್ತೆಂಟು ವಿಧವಾಗಿವೆ. ಶಿವನ ಸೂರ್ಯನೇತ್ರದಿಂದ ಕಪಿಲ ವರ್ಣದ ಹನ್ನೆರಡು ಪ್ರಕಾರದ ರುದ್ರಾಕ್ಷಿಗಳು, ಚಂದ್ರನೇತ್ರದಿಂದ ಬಿಳಿ ಬಣ್ಣದ ಹದಿನಾರು ಪ್ರಕಾರದ ರುದ್ರಾಕ್ಷಿಗಳು, ಅಗ್ನಿನೇತ್ರದಿಂದ ಕಪ್ಪು ಬಣ್ಣದ ಹತ್ತು ಬಗೆಯ ರುದ್ರಾಕ್ಷಿಗಳು ಉತ್ಪನ್ನವಾದವು.

ಇವು ಪರಶಿವನ ಜ್ಞಾನನೇತ್ರದಿಂದ ಉದಯವಾದುವೆಂದು ವಚನಶಾಸ್ತ್ರದಿಂದ ತಿಳಿದುಬರುತ್ತದೆ. ವಿಭೂತಿಯೊಡನೆ ಅವುಗಳನ್ನು ಧರಿಸಿ ಶಿವಸ್ವರೂಪನಾಗಿ ಶಿವನನ್ನು ವೀರಶೈವರು ಅರ್ಚಿಸಬೇಕು. ಉರಿಲಿಂಗ ಪೆದ್ದಿಯು ತನ್ನದೊಂದು ವಚನದಲ್ಲಿ ರುದ್ರಾಕ್ಷಿ ಧಾರಣವನ್ನು ಈರೀತಿ ನಿರೂಪಿಸಿದ್ದಾನೆ.

> "ಘನಕ್ಕೆ ಮಹಿಮೆಯ ಪಡೆದರೆ ಶ್ರೀ ರುದ್ರಾಕ್ಷಿಯನೆ ಧರಿಸುವುದು. ಇದು ಕಾರಣ ಪಶ್ಚಿಮದಲ್ಲಿ ಐದು, ಶಿಖಿಯಲ್ಲಿ ಮೂರು, ಶಿರದಲ್ಲಿ ಮೂವತ್ತಾರು, ಗಳದಲ್ಲಿ ಮೂವತ್ತೆರಡು, ಕರ್ಣದ್ವಯದಲ್ಲಿ ಎರಡು, ಹಾರದಲ್ಲಿ ನೂರೆಂಟು, ತೋಳುಗಳಲ್ಲಿ ಹದಿನಾರು, ಕರಗಳಲ್ಲಿ ಹನ್ನೆರಡನ್ನೆರಡು, ಉದರದಲ್ಲಿ ಐವತ್ತು, ಜಪದಲ್ಲಿ ಇಪ್ಪತ್ತೆಂಟು.

ಮಂತ್ರ

ಮಂತ್ರವು ಅಷ್ಟಾವರಣಗಳಲ್ಲಿ ಎಂಟನೆಯದು. "ಮನಃ ತ್ರಾಯತೇ ಇತಿ ಮಂತ್ರಃ" ಅಂದರೆ ಮನಸ್ಸನ್ನು ರಕ್ಷಣೆ ಮಾಡುವುದಾದ್ದರಿಂದ ಅದಕ್ಕೆ ಮಂತ್ರವೆಂದು ಹೆಸರು. "ಕಣ್ಣು, ಮನ, ನಾಲಿಗೆಯು ತನ್ನವೆಂದೆನಬೇಡ, ಅನ್ಯರು ಕೊಂದರೆನಬೇಡ. ಇವು ಮೂರು ತನ್ನನೇ ಕೊಲ್ಲುವುವು ಸರ್ವಜ್ಞ" ಎಂದು ಸರ್ವಜ್ಞ ಹೇಳಿರುವನು. ಈರೀತಿ ಮನವು ಚಾಂಚಲ್ಯದ ಗುಣವುಳ್ಳದ್ದು. ಮನುವಿನ ಪ್ರಕಾರ ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ" ಮನಸ್ಸೇ ನಮ್ಮ ಬಂಧನಕ್ಕೂ, ಬಿಡುಗಡೆಗೂ ಕಾರಣವಾಗಿದೆ. ಇಂತಹ ಚಂಚಲವೂ, ತೀವ್ರಗಾಮಿಯೂ ಆದ ಮನಸ್ಸನ್ನು ಬಂಧಿಸುವುದು ಹೇಗೆ ? ಮನಸ್ಸನ್ನು ಹಿಡಿತದಲ್ಲಿರಿಸಿಕೊಳ್ಳಲು ಧ್ಯಾನ, ಪ್ರಾರ್ಥನೆ, ಚಿಂತನೆ, ಮಂತ್ರಾದಿಗಳು ಬಹು ಶ್ರೇಷ್ಠವಾದವುಗಳು. ಇವುಗಳಲ್ಲಿ ಮಂತ್ರವನ್ನು ಎಡಬಿಡದೆ ಉಚ್ಚರಿಸಲಿಕ್ಕೆ ಬರುತ್ತಿರುವುದಾದ್ದರಿಂದ ಮನಸ್ಸನ್ನು ಸ್ಥಿರಕರಿಸಲು ಅದು ಬಹು ಸುಲಭವಾದದ್ದು ಮತ್ತು ಉತ್ಕೃಷ್ಟವಾದದ್ದು. ಆದ್ದರಿಂದ ಮಂತ್ರವು ವೀರಶೈವರಿಗೆ ಬಹು ಪ್ರಾಮುಖ್ಯವಾದುದಾಗಿದೆ. ಇದು ಅಷ್ಟಾಪರಣಗಳಲ್ಲಿ ಮೊದಲಿನಿಂದ ಕೊನೆಯವರೆಗೂ ಎಲ್ಲ ಹಂತಗಳಲ್ಲಿ ಕಂಡುಬರುವ ವ್ಯಾಪಕ ಶಕ್ತಿ.

ವೀರಶೈವರಲ್ಲಿ ಪಂಚಾಕ್ಷರಿ ಮತ್ತು ಷಡಕ್ಷರಿಗಳೆಂದು ಎರಡು ಪ್ರಕಾರದ ಮಂತ್ರಗಳಿವೆ. ಪ್ರಣವವನ್ನು ಬಿಟ್ಟರೆ ಪಂಚಾಕ್ಷರಿಯಾಗುವುದು, ಹಿಡಿದರೆ ಷಡಕ್ಷರಿಯಾಗುವುದು. ಶ್ರೀ ಗುರುವು ಶಿಷ್ಯನ ಕಿವಿಯಲ್ಲಿ ಹೇಳುವನು. ಇದನ್ನು ಗೋಪ್ಯವಾಗಿಡಬೇಕು. ಗುರುವು ಲಿಂಗವನ್ನು ಶಿಷ್ಯನ ಕರಸ್ಥಲಕ್ಕೆ ಕೊಟ್ಟಂತೆ, ಮಂತ್ರ ಮೂರ್ತಿಯನ್ನು ಮನಸ್ಥಲಕ್ಕೆ ಕೊಡುವನು.

"ನಮಃ ಶಿವಾಯ" ಪಂಚಾಕ್ಷರಿ. "ಓಂ ನಮಃ ಶಿವಾಯ" ಷಡಕ್ಷರಿ. "ಓಂ" ಎಂಬುದು ನಿಷ್ಕಲಲಿಂಗ (ಭಾವಲಿಂಗ)ವನ್ನೂ "ನಮಃ ಶಿವಾಯ" ಎಂಬುದು ಸಕಲ ಲಿಂಗ (ಇಷ್ಟ ಲಿಂಗ)ವನ್ನೂ, "ಓಂ ನಮಃ ಶಿವಾಯ" ಎಂಬುದು ಸಕಲ ನಿಷ್ಕಲ ಲಿಂಗ (ಪ್ರಾಣಲಿಂಗ)ವನ್ನೂ ಪ್ರತಿಪಾದಿಸುತ್ತದೆ. ಪ್ರಣವಸಹಿತವಾದ ಈ ಪಂಚಾಕ್ಷರ ಅರ್ಥಾತ್ ಷಡಕ್ಷರ ಮಹಾಮಂತ್ರವನ್ನು ಶಿವಪೂಜಾಪರಾಯಣನಾದ ವೀರಶೈವನು ಏಕಾಗ್ರಚಿತ್ತದಿಂದ ಸದಾ ಜಪಿಸಬೇಕು.

ಮಂತ್ರ ಎಲ್ಲ ಶಕ್ತಿಗಳಿಗಿಂತ ಮಿಗಿಲಾದದ್ದು. ಇದು ನೆನೆದವನನ್ನು ತನ್ನಂತೆ ಮಾಡುವುದಲ್ಲದೆ ಮಂತ್ರರೂಪಿಯನ್ನಾಗಿ ಮಾಡುವುದು, ಶಿವ ಸ್ವರೂಪಿಯನ್ನಾಗಿಯೂ ಮಾಡುವುದು. ಯಾವನು ಮಂತ್ರರೂಪದಿಂದ ಶಿವನನ್ನು ಪೂಜಿಸುತ್ತಾನೋ ಅವನು ಭವಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಇದೇ ಇದರ ಗುಪ್ತ ಶಕ್ತಿ.

APPROVED BY THE INDIAN BANKS ASSOCIATION

Grams: MUJAWARCO
Phone: 26018

MUJAWAR & CO.

Transport Commission Agents

A-1, Jayachamarajendra Road,
(Behind Shivaji Talkies)
BANGALORE-2.

★

Quickest and fastest Transport Service to meet India's growing Industrial needs

MUJAWAR & COMPANY

Fleet Owners & Transporters

Head Office at Belgaum

with branches at Bombay, Ahmedabad, Hubli, Bangalore, Madras, Salem, Coimbatore, Madurai, and GOA - Panjim, Margoa, Mapuca and Vasco-Da-Gama

With best compliments from:

Phone : 75587
29841

Tel :

M. K. PANDURANGA SETTY

NEW AND OLD GUNNY MERCHANT

73/7, 3RD CROSS, NEW THARAGUPET, BANGALORE-2.
ಯಂ. ಕೆ. ಪಾಂಡುರಂಗ ಶೆಟ್ಟಿ, ಹೊಸತರಗುಪೇಟೆ, ಬೆಂಗಳೂರು–೨.
ಚೀಲದ ವ್ಯಾಪಾರಿಗಳು

With best compliments from:

Telegrams : " MAINFOOD "
S. T. No. BNCT. II G. 61/61-62
CST. No. II 384/64-65
FGL. 33/64-65

Phone No. Shop : 70494
Resi : 27591

DOMMASANDRADA B. MUNI REDDY

MERCHANT & COMMISSION AGENT

NEW THARAGUPET, BANGALORE–2

ದೊಮ್ಮಸಂದ್ರದ ಬಿ. ಮುನಿರೆಡ್ಡಿ
ಮಂಡಿ ಮರ್ಚೆಂಟ್, ಹೊಸತರಗುಪೇಟೆ, ಬೆಂಗಳೂರು–೨.

Telegram : JAYAJYOTHI

Telephone : 375

ಶ್ರೀ ಜಗದ್ಗುರು ಪಂಚಪೀಠಾಧಿಪತಿಗಳಿಗೆ ಶರಣು

K. C. ANDANUR

General Merchants & Commission Agents,

VIJAYALAKSHMI ROAD :: DAVANGERE - 1.

ಕೆ. ಸಿ. ಅಂದನೂರು

ಜನರಲ್ ಮರ್ಚೆಂಟ್ ಅಂಡ್ ಕಮೀಷನ್ ಏಜೆಂಟ್ಸ್

ವಿಜಯಲಕ್ಷ್ಮಿ ರೋಡ್, ದಾವಣಗೆರೆ-೧.

Dealers in : **Wheat & Sugar, Kirani Merchants.**

ಪಂಚ ಜಗದ್ಗುರುಗಳಿಗೆ ನಮ್ಮ ನಮನ

ಸುಂದರ
ಬೆಂಗಳೂರು ನಗರ ವೀಕ್ಷಣೆ
(ಭಾನುವಾರ ಹಾಗೂ ರಜಾದಿನಗಳನ್ನು ಬಿಟ್ಟು)

ಟಿಕೆಟ್ ರೂ. 7-50

ಪ್ರವಾಸ ನಮ್ಮ ಆಫೀಸಿನಿಂದ ಬೆಳಗ್ಗೆ 8-30 ಘಂಟೆಗೆ ಹೊರಟು, ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಹಿಂದೂಸ್ತಾನ್ ವಾಚ್ ಫ್ಯಾಕ್ಟರಿ, ಬುಲ್ ಟೆಂಪಲ್, ಟಿಪ್ಪೂ ಅರಮನೆ, ಲಾಲ್-ಬಾಗ್, ಕಬ್ಬನ್ ಪಾರ್ಕ್, ಮ್ಯೂಸಿಯಂ, ವಿಧಾನಸೌಧ, ಮಹತ್ಮಾಗಾಂಧಿ ರಸ್ತೆ, ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂ ಮತ್ತು ಕಮರ್ಷಿಯಲ್ ಸ್ಟ್ರೀಟ್ ನೋಡಿ ಸಂಜೆ 6 ಘಂಟೆಗೆ ಹಿಂದಿರುಗುವುದು.

ಪ್ರತಿ ಶುಕ್ರವಾರ ಮತ್ತು ಭಾನುವಾರ ನಮ್ಮ ಆಫೀಸಿನಿಂದ ಬೆಳಗ್ಗೆ 7–30 ಘಂಟೆಗೆ ಹೊರಟು, ರಾತ್ರಿ 10–30 ಘಂಟೆಗೆ ಹಿಂದಿರುಗುವುದು.
(ಸೀಸನ್‌ನಲ್ಲಿ ಮಾತ್ರ)

ಟಿಕೆಟ್ ರೂ. 20/-

ಬೇಲೂರು - ಹಳೇಬೀಡು
ಮತ್ತು ಶ್ರವಣಬೆಳಗೊಳ

ನಂದಿ ಬೆಟ್ಟ
(ಸೀಸನ್‌ನಲ್ಲಿ ಮಾತ್ರ)

ಟಿಕೆಟ್ ರೂ. 10/-

ಪ್ರತಿ ಭಾನುವಾರ ಬೆಳಿಗ್ಗೆ 8-30 ಘಂಟೆಗೆ ನಮ್ಮ ಆಫೀಸಿನಿಂದ ಹೊರಟು ಸಂಜೆ 6 ಘಂಟೆಗೆ ಹಿಂದಿರುಗುವುದು.

ಪ್ರತಿದಿನವೂ ಈ ಕೆಳಕಂಡ ಸ್ಥಳಗಳಿಗೆ ಪ್ರವಾಸ ಸೌಕರ್ಯವಿದೆ.

ಬೆಂಗಳೂರಿನಿಂದ ಹುಬ್ಬಳ್ಳಿ — ಧಾರವಾಡ — ಬೆಳಗಾವಿ
ಗದಗ್ — ಬಾಗಲಕೋಟೆ — ಉಡುಪಿ ಕುಂದಾಪುರ
ದಾವಣಗೆರೆ ಮತ್ತು ಹೊಸಪೇಟೆ

S. R. S. TOURIST SERVICE

ಎಸ್. ಆರ್. ಎಸ್. ಟೂರಿಸ್ಟ್ ಸರ್ವೀಸ್
(ಅಣ್ಣಮ್ಮನ ದೇವಾಲಯದ ಎದುರು)

ಫೋನ್: 73580 & 72415

304, ಸುಬೇದಾರ್ ಛತ್ರಂ ರಸ್ತೆ
ಬೆಂಗಳೂರು-9

ನಮ್ಮಲ್ಲಿ ಪ್ರವಾಸಗಳಿಗೆ ಉತ್ತಮ ದರ್ಜೆಯ ಬಸ್ಸುಗಳು ಸೂಕ್ತ ದರದಲ್ಲಿ ಸಿಗುತ್ತವೆ.

ಲೇಖಕರು :
ಸಾಹಿತ್ಯರತ್ನ, ಷ. ಬ್ರ. ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು, ಗುರುವಿನಪುರ - ಬೃಹನ್ಮಠ

ವೇದಕಾಲದ ಶಿವಾನುಭವ ಧರ್ಮ

ವೀರಶೈವ ಸಿದ್ಧಾಂತದ ಬಗ್ಗೆ ಆಳವಾಗಿ, ವಿಶಾಲವಾಗಿ ಚಿಂತನೆ ಮಾಡಿರುವ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು "ವೇದಕಾಲದ ಶಿವಾನುಭವ ಧರ್ಮ" ಎಂಬ ತಮ್ಮ ಈ ವಿಚಾರಪೂರಿತ ಲೇಖನದಲ್ಲಿ ವೇದಕಾಲದಲ್ಲಿನ ಶಿವಾಚಾರ ಧರ್ಮದ ಸ್ವರೂಪವನ್ನು ಸೊಗಸಾಗಿ ನಿರೂಪಿಸಿದ್ದಾರೆ. ವೀರಶೈವ ಧರ್ಮವು ವೇದಕಾಲಕ್ಕಿಂತ ಪ್ರಾಚೀನವಾದುದೆಂಬುದನ್ನು ದೃಷ್ಟಾಂತಗಳೊಡನೆ ನಿರೂಪಿಸಿದ್ದಾರೆ.

ವೇದಕಾಲದಲ್ಲಿನ ಅನುಭಾವ ಸ್ವರೂಪವನ್ನು ಕುರಿತು ವಿಚಾರ ಮಾಡೋಣ. ಸಾಮಾನ್ಯವಾಗಿ ವೇದ ಎಂಬುದಕ್ಕೆ "ಶೃತಿ" ಎಂಬುದು ನಾಮಾಂತರ. ಮೇಲಾಗಿ, ವೇದವು ಶೃತಿಯ ಏಕದೇಶ. ಸಂಹಿತೆ (ವೇದ) ಬ್ರಾಹ್ಮಣ ಮತ್ತು ಆರಣ್ಯಕ ಉಪನಿಷತ್ತುಗಳಲ್ಲಿ ಶೃತಿ ಎಂಬ ಹೆಸರಿದೆ. ಇಲ್ಲಿ ವೇದಕಾಲವೆಂದರೆ, ಶೃತಿಗಳು ಆವಿರ್ಭಾವವಾದ ಕಾಲ ಎಂದು ಸ್ಥೂಲವಾಗಿ ಹೇಳಬಹುದು.

ವೀರಶೈವ ಧರ್ಮವು ವೇದಕಾಲಕ್ಕಿಂತ ಪ್ರಾಚೀನವಾದುದು; ಈ ಮಾತು ವೇದದ ಆಯಾ ಭಾಗಗಳಿಂದಲೇ ಸಿದ್ಧವಾಗುತ್ತದೆ. "ನಾಸದಾಸೀನ್ನೋಸದಾಸೀತ್ … … …" ಎಂದು ಮುಂತಾಗಿ ಋಗ್ವೇದದಲ್ಲಿ ಬರುವ ನಾಸದೀಯ ಸೂಕ್ತದಲ್ಲಿ ಪರಶಿವ ಬ್ರಹ್ಮವು ಶಕ್ತಿ ವಿಶಿಷ್ಟವಾದುದೆಂಬ ತತ್ವವು ವರ್ಣಿತವಾಗಿದೆ. ಇತರ ವೈದಿಕ ಧರ್ಮದವರು ಬಾಹ್ಯ-ಅಗ್ನಿಯಲ್ಲಿ ಬಾಹ್ಯ-ಆಹುತಿಗಳನ್ನು ಹವನ ಮಾಡಿದರೆ, ಶಿವಾನುಭಾವಿಗಳು ಆತ್ಮಾಗ್ನಿಯಲ್ಲಿ ಸಮಸ್ತ ವಿಷಯಗಳನ್ನೂ ಹವನಮಾಡುತ್ತಾರೆ. ವೇದದಲ್ಲಿ ಆತ್ಮಯಾಜಿಯು (ಶಿವಾನುಭಾವಿಯು) "ಈತನು ನಮ್ಮ ತಂದೆ" ಎಂದು ಬಣ್ಣಿಸಲ್ಪಟ್ಟಿರುತ್ತಾನೆ.

> ಯ ಇಮಾ ವಿಶ್ವಾಭುವನಾನಿ
> ಜುಹ್ವ ದೃಷ್ಟಿರ್ಹೋತಾನ್ಯಸೀದಸ್ಪಿತಾನಃ॥
> ಸ ಆಶಿಷಾ ದ್ರವಿಣಮಿಚ್ಛ ಮಾನಃ
> ಪ್ರಥಮಚ್ಛ ದರಾವರಾಂ ಆವಿವೇಶ॥ (ಋ, 10–81–1)

ಯಾವನು ಈ ಸಮಸ್ತ ತನು, ಭುವನಗಳನ್ನು ಹವ್ಯ ದ್ರವ್ಯಗಳನ್ನಾಗಿ ಮಾಡಿ ಹೋಮ ಮಾಡುವನೋ ಅಂತಹ ಹೋತ್ರರೂಪನಾದ ಮಹರ್ಷಿಯು ನಮ್ಮಗಳಿಗೆ ತಂದೆಯಾಗಿದ್ದಾನೆ. ಅರ್ಥಾತ್ ಸಂಸಾರ ಸಾಗರತಾರಕನಾಗಿದ್ದಾನೆ. ಅವನು ಮೊದಲುಹುಟ್ಟಿದವನು; ಆದ್ದರಿಂದ ಅವನು ನಮಗೆ ಯಜಮಾನನೇ ಸರಿ. ಅವನು ಇದೆಲ್ಲವೂ ನಾನೇ ಎಂಬ ವಿಶ್ವಾತ್ಮ ಭಾವನೆಯ ಬಯಕೆಯಿಂದ ಪ್ರಾಕೃತರಾದ ನಮ್ಮನ್ನು ವ್ಯಾಪಿಸಿದನು; ಎಂದರೆ ತನ್ನ ನಿಜಬೋಧೆಯಿಂದ ನಮ್ಮನ್ನು ಸ್ವಸ್ವರೂಪಭೂತರನ್ನಾಗಿ ಮಾಡಿದನು.

> ನವಿಜಾನಾಮಿ ಯದಿ ವೇದಮಸ್ಮಿ
> ನಿಣ್ಯಃ ಸನ್ನದ್ಧೋ ಮನಸಾಚರಾಮಿ

ಯದಮ್ಯಾಽಽಗನ್ ಪ್ರಥಮ ಜಾ.
ಋತಸ್ಮಾದಿ ದ್ವಾಚೋ ಅಶ್ನುವೀ ಭಾಗಮಸ್ಮಾಃ॥

ಎಂಬ ಋಗ್ವೇದದ ಸೂಕ್ತದಲ್ಲಿ ಪ್ರಥಮಜ ಅರ್ಥಾತ್ ಶಿವನ ಪ್ರಮಥರ ಪುತ್ರರಾದ ಪ್ರಮಥ ವರ್ಣನೆ ಬರುತ್ತದೆ.

ನಮೃತ್ಯುರಾಸೀವ ಮೃತಂನತರ್ಹಿ
ನ ರಾತ್ರ್ಯಾ ಅಹ್ನ ಆಸೀತ್ಪ್ರಕೇತಃ॥
ಆನೀದ ವಾತಂ ಸ್ವಧಯಾ ತದೇಕಂ
ತಸ್ಮಾದ್ಧಾನ್ಯನ್ನ ಪರಃ ಕಿಂಚನಾಽಽಸ॥ (ಋ. 10–129)

ಸೃಷ್ಟಿಯ ಮೂಲಾರಂಭದಲ್ಲಿ ಮೃತ್ಯು ಎಂದರೆ , ಮೃತ್ಯುಗ್ರಸ್ತವೂ ನಾಶವಂತವೂ ಆದ ದೃಶ್ಯ ಸೃಷ್ಟಿಯೂ ಇದ್ದಿಲ್ಲ; ಅದು ಕಾರಣವೇ (ಬೇರೆ) ಅಮೃತ ಎಂದರೆ, ಅವಿನಾಶಿಯಾದ ನಿತ್ಯ ಪದಾರ್ಥ (ಭೇದವೂ) ಇದ್ದಿಲ್ಲ. ರಾತ್ರಿ ಹಗಲುಗಳ ಭೇದ ತಿಳಿಯುವ ಸಾಧನವೂ ಇದ್ದಿಲ್ಲ. ಇದ್ದುದೆಲ್ಲ ಒಂದೇ ಒಂದಾಗಿತ್ತು. ಅದು (ಅಪರ ಶಿವಚೈತನ್ಯವು) ಸ್ವಧೆಯಿಂದ ಎಂದರೆ ತನ್ನ ಶಕ್ತಿಯಿಂದ ಸ್ಫುರಿಸುತ್ತಿತ್ತು. ಅದರ ಹೊರತು ಅಥವಾ ಅದರಿಂದಾಚೆಗೆ ಅನ್ಯವಾವುದೂ ಇದ್ದಿಲ್ಲ.—ಎಂದು ಬಣ್ಣಿಸಲ್ಪಟ್ಟಿದೆ. ಇದೇ ಆಶಯವು ಉಳಿದ ವೇದಗಳಲ್ಲಿಯೂ ಆಯಾವೇದದ ಬ್ರಾಹ್ಮಣ, ಆರಣ್ಯಕಗಳಲ್ಲಿಯೂ ವಿಶದವಾಗಿದೆ.

ಪಶುಪತಿ, ಈಶ, ಈಶಾನ, (ಯ. ಸಂ 6–66) ಈ ಒಂದೊಂದು ನಾಮವನ್ನೇ ವೇದಗಳಲ್ಲಿ ಹಲವೆಡೆ ಕಾಣಬಹುದಾಗಿದೆ. ಇವುಗಳಲ್ಲದೆ ಇನ್ನೂ ಅನೇಕ ನಾಮಗಳು ಪರಮೇಶ್ವರನ ವಾಚಕಗಳಾಗಿವೆ. ಈ ಹೆಸರುಗಳು ಬೇರೆ ಬೇರೆಯಾಗಿರುವುದರಿಂದ ಅವು ಬೇರೆ ಬೇರೆ ವಸ್ತುವಾಚಕಗಳಾಗಿರದೆ, ಅವೆಲ್ಲಾ ಒಂದೇ ವಸ್ತುವಿನ ಪರ್ಯಾಯ ವಾಚಕಗಳಾಗಿವೆ. "ಅಗ್ನಿಮೀಳೆ"(ಋ. ಸಂ. 1–1–1)"ರುದ್ರೋವಾ ಏಷಯದಗ್ನಿ"(ತೈ.ಸಂ. 5–4–3) "ಪುರುಷ ಏವೇದಂಸರ್ವಮ್" (ಋ. ಸಂ. 10–90–2) "ತಸ್ಮಾದ್ರುದ್ರಪಶೂನಾಮಧಿಪತೆ" (ಋ ಸಂ. 1–43–4) ಎಂಬಿವೇ ಮೊದಲಾದ ವಾಕ್ಯಗಳು ನಾವು ಹೇಳುವ ಅಭಿಪ್ರಾಯವನ್ನೇ ಸಮರ್ಥಿಸುತ್ತವೆ. ಅಲ್ಲದೆ ವಾಜಸನೇಯ ಸಂಹಿತೆಯಲ್ಲಿ, ರುದ್ರನ ಅನೇಕ ಹೆಸರುಗಳಲ್ಲಿ ಶರ್ವ–ಭವ–ಎಂಬ ಎರಡು ಹೆಸರುಗಳು ಇವೆ. ಆ ಸಂಹಿತೆಯಲ್ಲಿಯೇ (39–8) ಅಗ್ನಿ, ಅಶನಿ, ಪಶುಪತಿ, ಭವ, ಶರ್ವ, ಈಶಾನ, ಮಹಾದೇವ – ಮುಂತಾದ ದೇವತೆಗಳೆಂದರೆ – ಒಂದೇ ದೇವತೆಯ ಬೇರೆ ಬೇರೆ ರೂಪಗಳೆಂದು ಹೇಳಿದೆ.

ಋಗ್ವೇದದೊಳಗಣ ವಾಕ್ಯಗಳನ್ನು ಪರಿಶೀಲಿಸಿದರೆ, ರುದ್ರನ ಸಂಬಂಧವು ಯಾವುದಾದರೊಂದು ಭೌತಿಕ ಚಮತ್ಕಾರದೊಡನಿದ್ದುದು ಕಂಡು ಬರುವುದಿಲ್ಲ. ಅವನು (ರುದ್ರನು) ಎಲ್ಲಕ್ಕೂ ಹೆಚ್ಚಿನವನು. (ಋ. 7–10–4) ಬಲಿಷ್ಠರಿಗಿಂತ ಬಲಿಷ್ಠನು. (ಋ.2–33–9) ಎಲ್ಲಿ ಮಾನವರೂ ದೇವತೆಗಳೂ ಯಾವ ಯಾವ ಕೃತ್ಯಗಳನ್ನು ಮಾಡಿದರೂ ಅವೆಲ್ಲವನ್ನೂ ಅವನು ತಿಳಿಯುತ್ತಾನೆ. (ಋ. 7–46–2) ಅವನು ಶಿವನು. (ಋ. 10–92–9) ಎಂಬೀ ಋಕ್ಕುಗಳು ಗುಣಮೂರ್ತಿಗಳಲ್ಲಿ ಪರಿಗಣಿಸಲ್ಪಡುವ ರುದ್ರನಿಗಿಂತಲೂ ಅಧಿಕರೆನಿಸುವ ಈಶ್ವರ, ಸದಾಶಿವರಿಗೂ ಸಹ ಅಧಿಷ್ಠಾನಭೂತನಾದ ಪರಶಿವನನ್ನೇ ರುದ್ರಾಭಿಧಾನದಿಂದ ಸ್ತುತಿಸುತ್ತವೆ. ವೇದದೊಳಗಣ ಗೌರೀ ಸೂಕ್ತವೂ ಉಷಾ ಸೂಕ್ತವೂ ದೇವೀಸೂಕ್ತವೂ ಪರಶಿವಾವಿನಾಭೂತ ಶಕ್ತಿಯ ಮಾಹಾತ್ಮ್ಯವನ್ನೇ ಕೊಂಡಾಡುತ್ತವೆ. ಆ ಸೂಕ್ತಗಳಿಗೆ ಪುರಾತನ ವೀರ ಮಾಹೇಶ್ವರಾಚಾರ್ಯರು ಗಂಭೀರವಾದ ಭಾಷ್ಯಗಳನ್ನು ಬರೆದಿದ್ದಾರೆಂದು ರಾಮಯೋಗೀಂದ್ರನೆಂಬ ಅತ್ಯಾಶ್ರಮಿಯು ತನ್ನ ವೈದಿಕಾಚಾರ ನಿರ್ಣಯದಲ್ಲಿ ಉಲ್ಲೇಖಿಸಿದ್ದಾನೆ.

ಋಗ್ವೇದದಲ್ಲಿ ಋಷಭ (ವೃಷಭ ಅಲ್ಲ) ಗಣೇಶನ ವರ್ಣನೆ ಇದೆ. ವೇದದಲ್ಲಿ ಉದ್ದಕ್ಕೂ ಹೀಗೆ ಪ್ರಮಥರ ವರ್ಣನೆ ಬರುವುದರಿಂದ ವೇದ ಪೂರ್ವದಲ್ಲಿಯೇ ಶಿವಾನುಭವ ಧರ್ಮವು ಅರ್ಥಾತ್ ವೀರಶೈವ ಧರ್ಮವು ಪ್ರಚಾರದಲ್ಲಿತ್ತೆಂದು ಸಿದ್ಧವಾಗುವುದಿಲ್ಲವೆ?

ಶಿವಾದ್ವೈತ ಪರ ನಾಮಧೇಯವುಳ್ಳ ಶಿವಾನುಭವ ಧರ್ಮವು ನಾಲ್ಕು ವೇದಗಳಲ್ಲಿಯೂ ವಿಶದವಾಗಿ ವರ್ಣಿತವಾಗಿದೆ. "ಗಣಾನಾಂತ್ವಾಗಣಪತಿಗ್ಂಹವಾಮಹೆ" ಎಂಬ ಮಂತ್ರವು "ಗಣೇಭ್ಯೋಗಣಪತಿಭ್ಯಶ್ಚವೋ ನಮೋ ನಮಃ" "ಸಹಸ್ರಾಣಿ ಸಹಸ್ರಶಃ" ಇತ್ಯಾದಿ ಮಂತ್ರಗಳಿಂದ ಅಗಣಿತಮಹಿಮಾಶಾಲಿಗಳಾದ ಪ್ರಮಥಗಣರು-ನಂದಿ, ಸ್ಕಂದ, ಶಂಕುಕರ್ಣ, ವಿಶ್ವಕರ್ಣ, ರೇಣುಕ, ದಾರುಕ ಮೊದಲಾದವರೂ, ಅವರಲ್ಲಿಯೇ ಸುಪ್ರಸಿದ್ಧರಾಗಿದ್ದಾರೆ. "ದಹ್ರಂ ವಿ ಪಾಪ್ಮ ಪರವೇಶ್ಮ ಭೂತಂ ಯತ್ಪುಂಡರೀಕಂ ಪುರಮಧ್ಯ ಸಗ್ಂ ಸ್ಥಂ । ತತ್ರಾಪಿದಹ್ರಂ ಗಗನಂ ವಿಶೋಕ ಸ್ತಸ್ಮಿನ್ಯದಂತ ಸ್ತದು ಪಾಸಿತವ್ಯಂ ......" ಈ ಮಂತ್ರದಲ್ಲಿ ಪ್ರಾಣಲಿಂಗೋಪಾಸನೆಯು ಹೇಳಲ್ಪಟ್ಟಿದೆ. "ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇಸ ಆತ್ಮಾಸ ವಿಜ್ಞೇಯಃ" "ಶಿವೋದ್ವೈತಃ ಏವಮೋಂಕಾರ ಆತ್ಮೈವ ಸಂವಿಶತ್ಯಾತ್ಮನಾತ್ಮಾನಾ ಯಥಾನದ್ಯಸ್ಸ್ಯಂದ ಮಾನಾಃ ಸಮುದ್ರೇ......" ಇತ್ಯಾದಿ ಉಪನಿಷದ್ವಾಕ್ಯಗಳಲ್ಲಿ ಅದ್ವಿತೀಯ ಪರಬ್ರಹ್ಮ ಪರಶಿವನನ್ನೇ ಪ್ರಯತ್ನಪೂರ್ವಕ ತಿಳಿದುಕೊಳ್ಳಬೇಕೆಂದೂ, ಆತ್ಮವೇ ಆ ಪರಶಿವನೆಂದು ಯಾವಾತನು ತಿಳಿದುಕೊಂಡು ಉಪಾಸನೆ ಮಾಡುವನೊ, ಅಂತಹವನು, ನದಿಯು ಸಮುದ್ರವನ್ನು ಸೇರಿ ಸಮುದ್ರವೇ ಆಗುವಂತೆ ಶಿವನಲ್ಲಿ ಬೆರೆತು ಬೇರಿಲ್ಲದಂತಾಗುತ್ತಾನೆಂದೂ, ಶಿವಾದ್ವೈತದ ಸ್ವರೂಪವು ವರ್ಣಿತವಾಗಿದೆ. ವ್ಯಾಸ ಮಹರ್ಷಿಗಳ ಮಾತಿನಿಂದಲೂ

ಶಿವಾನುಭವ ಧರ್ಮವು ಅತ್ಯಂತ ಪ್ರಾಚೀನವೆಂಬುದನ್ನು ಅರಿತುಕೊಳ್ಳಬಹುದಾಗಿದೆ.

> ಸ್ಕಂದ ಪುರಾಣ ಕಾಶೀ ಖಂಡದಲ್ಲಿ:
> ಸಂತಿ ರುದ್ರೇಣ ಕಥಿತಾಶ್ಶಿವಧರ್ಮಾಸ್ಸನಾತನಃ।...
> ಲಿಂಗೇನ ಸಹ ಪಂಚತ್ವಂ ಲಿಂಗೇನ ಸಹ ಜೀವಿತಂ।
> ಶೈಲಾದೇನ ಮಹಾಭಾಗಾ ವಿಚತ್ರಾ ಲಿಂಗಧಾರಕಾಃ॥
> ಏತೇ ಧರ್ಮಾಸ್ಸುಪ್ರತಿಷ್ಠಾ ಶೈಲಾದೇನ ಪ್ರತಿಷ್ಠಿತಾಃ॥

ರುದ್ರನಿಂದ ಹೇಳಲ್ಪಟ್ಟ ಶಿವಧರ್ಮವು ಸನಾತನವಾಗಿದೆ. ಲಿಂಗದೊಡನೆ ಜೀವಿಸುವುದೂ, ಲಿಂಗದೊಡನೆ ದೇಹ ತ್ಯಾಗ ಮಾಡುವುದೂ, ವಿಚಿತ್ರರೂ, ಮಹಾಭಾಗ್ಯಶಾಲಿಗಳೂ ಆದ ಲಿಂಗ ಧಾರಿಗಳ ಧರ್ಮವಾಗಿದೆ. ಈ ಧರ್ಮವು ವೇದದಲ್ಲಿಯೂ ಲೋಕದಲ್ಲಿಯೂ ಮೊದಲೇ ಸುಪ್ರತಿಷ್ಠವಾಗಿದ್ದು (ಅದು ಗ್ಲಾನಿ ಹೊಂದಿದಾಗ) ಶೈಲಾದನು (ನಂದಿ) ಪುನಃ ಪ್ರತಿಷ್ಠಿತ ಮಾಡಿದನು.

ತಾಂತ್ರಿಕ ಶೃತಿಯೆಂದು ಪ್ರಸಿದ್ಧಗಳಾದ, ವೇದಗಳಷ್ಟೇ ಪ್ರಾಚೀನಗಳಾದ ಶಿವಾಗಮಗಳಲ್ಲಿಯಂತು ಶಿವಾನುಭವ ಧರ್ಮವು ತುಂಬಿ ತುಳುಕುತ್ತದೆ. ಆಗಮ ಪುರಾಣಾಂತರ್ಗತ, ರೇಣುಕಾಗಸ್ತ್ಯ ಸಂವಾದ ರೂಪವಾದ "ಸಿದ್ಧಾಂತ ಶಿಖಾಮಣಿ"ಯನ್ನು ಸಂಗ್ರಹಿಸಿದ ಶಿವಯೋಗಿ ಶಿವಾಚಾರ್ಯರು "ಶಿವಾನುಭವಯೋಗತಃ ಶಿವಯೋಗೀತಿ ನಾಮೋಕ್ತಿರ್ಯಸ್ಯ ಯಾಥಾರ್ಥ್ಯಯೋಗಿನೀ". ಅರ್ಥಾತ್ ಶಿವಾನುಭವ ಯೋಗವನ್ನು ಸಾಧಿಸಿಕೊಂಡಿದ್ದರಿಂದಲೇ ತನ್ನ ಹೆಸರು ಸಾರ್ಥಕವಾಗಿದೆ ಎಂದು ಹೇಳಿಕೊಂಡಿದ್ದಾನೆ. ಈ ಮಹೋದಯರ ಕಾಲವು ಸುಮಾರು ಒಂದು, ಎರಡನೆಯ ಶತಮಾನವೆಂದು ಹೇಳಬಹುದು. ಈ ಮಾತು ಇತಿಹಾಸದಿಂದ ಸಿದ್ಧವಾಗುವುದರಿಂದ ಶಿವಾನುಭವ ಧರ್ಮದ ಪ್ರಾಚೀನತೆಯನ್ನು ಸಹಜವಾಗಿ ತಿಳಿಯಬಹುದಾಗಿದೆ.

ಸತ್ಯಂ ಶಿವಂ ಸುಂದರಮ್

OUR PROSTRATIONS TO
JAGADGURU PANCHACHARYAS

PRASAD STORES
No. 25, KEMPEGOWDA CIRCLE

AND

SREE PROVISION STORES
No. 40, BALEPET

Visit

FOR YOUR QUALITY PROVISION
& GENERAL GOODS

Prop: B. K. Channabasavaraju and Bros.

Estd : 1912
Tel Add : " LADHA "
Telex No : 043/368

Phones 22358 (Trunks)
28540

Our Respectful Welcome to:

Jagadguru Pancha Peethadhipatis

HAJI ABDUL LATIF TAYUB

General Merchants

263, Old Taragupet : P. B. No 7585
BANGALORE-2A

Use always our 'H.A.L.T' (Reg. Trade Mark) Brand Cocoanut Oil



ಶ್ರೀ ಷ. ಬ್ರ॥ ಪಂಚಾಕ್ಷರ ಸ್ವಾಮಿಗಳು
ಸಂಸ್ಥಾನ. ಬೃಹನ್ಮತ. ನೀಲಗಲ್ಲು
ರಾಯಚೂರು ಜಿಲ್ಲಾ

"ಜಗದ್ಗುರು ಪಂಚಾಚಾರ್ಯರೇ ವೀರಶೈವ ಮತಸ್ಥಾಪಕರು"

ನೀಲಗಲ್ಲು ಸಂಸ್ಥಾನಮತದ ಶ್ರೀ ಪಂಚಾಕ್ಷರ ಸ್ವಾಮಿಗಳು ತರುಣರಾದ ಉತ್ತಮ ಬರೆಹಗಾರರು. ಶ್ರೀಯುತರು ಬಾಳೆಹೊನ್ನೂರು ಪೀಠಕ್ಕೆ ಸೇರಿದವರು. ಈ ಲೇಖನದಲ್ಲಿ ಬರೆಹಗಾರರು "ಜಗದ್ಗುರು ಪಂಚಾಚಾರ್ಯರೇ ವೀರಶೈವ ಮತಸ್ಥಾಪಕರು" ಎಂಬ ಸಿದ್ಧಾಂತವನ್ನು ವಿಚಾರವತ್ತಾಗಿ. ಸರಳ ಶೈಲಿಯಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ.

ಶ್ರೀಪರಮೇಶ್ವರನಿಂದ ನಿರ್ಮಿಸಲ್ಪಟ್ಟ ಈ ಚರಾಚರಾತ್ಮಕವಾದ ಜಗತ್ತಿನಲ್ಲಿ ಮಾನವ ಜನ್ಮವೇ ಶ್ರೇಷ್ಠವಾದುದು. "ದುರ್ಲಭಂ ಮಾನುಷ ಜನ್ಮಂ" ಎಂಬಂತೆ ಮಾನವ ಜನ್ಮವು ದೊರೆಯುವುದು ದುರ್ಲಭವು. ಆದರೆ ಮಾನವನು ಸುಖಶಾಂತಿಗಳನ್ನೇ ಬಯಸುತ್ತಾನೆ. ಮಾನವನ ಸುಖ ಶಾಂತಿಗಳನ್ನು ಈಡೇರಿಸಲಿಕ್ಕಾಗಿಯೇ ಮಹಾತ್ಮರು ಭೂಲೋಕದಲ್ಲಿ ಅವತರಿಸಿ ಮತ ಧರ್ಮಗಳನ್ನು ಸ್ಥಾಪಿಸಿ ಅವುಗಳ ಆಚರಣೆಯ ಮೂಲಕ ಸುಖಶಾಂತಿಗಳನ್ನು ಹೊಂದಿ ಆತ್ಮೋದ್ಧಾರ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತಾರೆ. "ಸರ್ವಂ ಧರ್ಮಮೂಲಂ" ಎಂಬಂತೆ ಇಹಪರಗಳೆರಡಕ್ಕೂ ಧರ್ಮವು ಮೂಲವಾಗಿರುವುದು. ಉಜ್ವಲ ತೇಜಸ್ಸಿನಿಂದ ಮೆರೆಯಬೇಕಾದರೆ ಸತ್ವವು ಅದಕ್ಕೆ ಅವಶ್ಯವಾದುದೆಂದು ಸ್ಮೃತಿಯು ಹೇಳುತ್ತದೆ. "ಸಂಸಾರ ಸಾಗರೇಗಾಧೇಕಾಮಾದಿ ಗ್ರಹ ಸಂಕುಲೇ॥ ಮಜ್ಜತಾಂ ಮನುಜಾನಾಂಹಿ ಧರ್ಮಃ ಪರತರಾನೌಃ॥" ಎಂದರೆ ಸಮುದ್ರವನ್ನು ದಾಟಲಿಕ್ಕೆ ಹೇಗೆ ಹಡಗು ಬೇಕೋ ಹಾಗೆ ಸಂಸಾರ ಸಾಗರವನ್ನು ದಾಟಲಿಕ್ಕೆ ಧರ್ಮವು ಮುಖ್ಯವಾಗಿದೆ ಎಂದು ಯಾಜ್ಞ್ಯವಲ್ಕ್ಯ ಸ್ಮೃತಿಯು ಹೇಳುತ್ತದೆ. ಪ್ರಪಂಚದ ಮಾನವ ಕೋಟಿಯೆಲ್ಲ ಯಾವದಾದರೊಂದು ಮತದ ಕಟ್ಟಿಗೆ ಒಳಪಟ್ಟಿರುತ್ತದೆ. ಆತ್ಮಸಾಕ್ಷಾತ್ಕಾರವೆಂಬ ಶಾಶ್ವತ ಸುಖವನ್ನು ಕೊಡುವುದು ಧರ್ಮವಾಗಿದೆ. ಇಂತಹ ಧರ್ಮಗಳಲ್ಲಿ "ವೀರಶೈವ ಮತವೂ" ಒಂದಾಗಿರುತ್ತದೆ.

ಈ ಮತದ ಮುಖ್ಯ ಚಿಹ್ನೆ ಎಂದರೆ ಲಿಂಗಧಾರಣ. ಈ ವೀರಶೈವ ಮತವನ್ನು ಸ್ಥಾಪನೆ ಮಾಡಿದವರು ಜಗದ್ಗುರು ಪಂಚಾಚಾರ್ಯರು. ಶಿವನ ಅಪ್ಪಣೆಯಮೇರೆಗೆ ಭೂಲೋಕಕ್ಕೆ ಬಂದು ಪಂಚ ಲಿಂಗಗಳಲ್ಲಿ ಉದಯಿಸಿ. ಬಾಳೇಹಳ್ಳಿ, ಉಜ್ಜಯಿನಿ. ಕಾಶಿ. ಕೇದಾರ, ಶ್ರೀ ಶೈಲಗಳಲ್ಲಿ ಪಂಚ ಧರ್ಮಪೀಠಗಳನ್ನು ಸ್ಥಾಪಿಸಿದ್ದಾರೆ. ಈಗಲೂ ಕೂಡ ಈ ಪೀಠಗಳು ವಿರಾಜಮಾನವಾಗಿ ಕಂಗೊಳಿಸುತ್ತಲಿವೆ. ಜಗದ್ಗುರು ಪಂಚಾಚಾರ್ಯರು ಈ ಪೀಠಗಳನ್ನು ಸ್ಥಾಪಿಸಿ ಎಷ್ಟೋ ಶತಮಾನಗಳಾದವು. ಜಗದ್ಗುರು ಪಂಚಾಚಾರ್ಯರಿಂದಲೇ ಶಿವಾದ್ವೈತ ಮತ (ವೀರಶೈವ) ಸ್ಥಾಪನೆಯಾಗಿರುವುದು ಪ್ರತ್ಯಕ್ಷ ಪ್ರಮಾಣಗಳಿಂದಲೂ. ವ್ಯಾಸೋಕ್ತ ಪುರಾಣ. ಮಹಾಭಾರತ. ಶಿವಾಗಮಗಳು, ಸಿದ್ಧಾಂತ ಶಿಖಾಮಣಿ. ಮುಂತಾದ ಗ್ರಂಥಗಳಿಂದಲೂ ಮತ್ತು ಇತಿ

ಹಾಸ ಸಂಶೋಧಕರ ಮತ್ತು ಸಾಹಿತಿಗಳ ಲೇಖನಗಳಿಂದಲೂ ಸಾಕ್ಷ್ಯವನ್ನು ಇಲ್ಲಿ ಕೆಳಗೆ ಕೊಡಲಾಗುತ್ತದೆ.

ಸುಪ್ರಭೇದಾಗಮದಲ್ಲಿ "ತಸ್ಮಾತ್ತಸ್ಮಾಚ್ಚ ಗಿರಿಜಾ ಪಂಚಾನನ ಸಮುದ್ಭವಾಃ ಮದಾದಿ ಸರ್ವಲೋಕಾನಾಂ ಜಗದ್ಗುರುವರೋತ್ತಮಾಃ॥" ಎಂದರೆ ಎಲೈ ಪಾರ್ವತಿಯೇ, ನನ್ನ ಪಂಚ ಮುಖದಿಂದ, ಉದ್ಭವರಾದ ಜಗದ್ಗುರು ಪಂಚಾಚಾರ್ಯರು ನನ್ನ ಲೋಕವೇ ಮೊದಲುಗೊಂಡು ಹದಿನಾಲ್ಕು ಲೋಕಗಳಿಗೂ ಸಹ ಜಗದ್ಗುರುಗಳಾಗಿರುತ್ತಾರೆಂದು ಉಪದೇಶಿಸಿರುತ್ತಾನೆ. ಇದರಿಂದ ಪಂಚಾಚಾರ್ಯರ ಘನತೆ ಎಷ್ಟೆಂಬುದು ಕಂಡುಬರುತ್ತದೆ. "ದ್ವಾಪರೇ ರೇಣುಕಶ್ಚೇತಿ ದಾರುಕಶ್ಚದ್ವಿತೀಯಕಃ। ತೃತೀಯಃ ಶಂಕುಕರ್ಣಶ್ಚ ಚತುರ್ಥೋಧೇನು ಕರ್ಣಕಃ। ಪಂಚಮೇ ವಿಶ್ವ ಕರ್ಣಾಖ್ಯಃ ಪಂಚನಾಮಾನಿ ವೈಶೃಣು॥ ದ್ವಾಪರ ಯುಗದಲ್ಲಿ ರೇಣುಕ, ದಾರುಕ ಶಂಕುಕರ್ಣ, ಧೇನು ಕರ್ಣ, ವಿಶ್ವಕರ್ಣ ಎಂಬ ಐವರು ಆಚಾರ್ಯರಿದ್ದರೆಂದು "ಪಾಶುಪತತಂತ್ರ"ದಲ್ಲಿ ಹೇಳಿದೆ. ವೇದವ್ಯಾಸ ಮಹರ್ಷಿಗಳು ದ್ವಾಪರ ಯುಗದಲ್ಲಿದ್ದುದರಿಂದ ದ್ವಾಪರಯುಗದಲ್ಲಿ ರೇಣುಕ, ದಾರುಕ, ಘಂಟಾಕರ್ಣ, ಧೇನು ಕರ್ಣ, ವಿಶ್ವಕರ್ಣರೆಂಬ ಹೆಸರುಗಳಿಂದ ಅವತರಿಸಿದ್ದ ಶ್ರೀ ಪಂಚಾಚಾರ್ಯರ ಪವಿತ್ರ ನಾಮಗಳನ್ನು ಅವರು ತಮ್ಮ ಸ್ಕಾಂದ ಪುರಾಣ, ಶಿವ ಪುರಾಣ, ಸೌರ ಪುರಾಣ, ಪುರಾತನ ಗ್ರಂಥವಾದ ಮಹಾಭಾರತದಲ್ಲಿಯೂ ಸ್ಪಷ್ಟವಾಗಿ ಉಲ್ಲೇಖಿಸಿರುವರು. ಕಾಶೀಖಂಡದ 95ನೇ ಅಧ್ಯಾಯ 68ನೇ ಶ್ಲೋಕದಲ್ಲಿ "ಪಾರಾಶರ್ಯ ಸ್ತ ದಾರಭ್ಯ ಶಂಭುಶಕ್ತಿ ಪರೋಭವತ್। ಲಿಂಗು ವ್ಯಾಸೇಶ್ವರಂ ಸ್ಥಾಪ್ಯ ಘಂಟಾಕರ್ಣಹ್ರದಾಗ್ರತಃ॥ ವ್ಯಾಸ ಮಹರ್ಷಿಗಳು ಬಾಹುಬಂಧನದಿಂದ ಮುಕ್ತರಾದ ಮೇಲೆ "ಘಂಟಾಕರ್ಣ" ತೀರ್ಥದ ಮುಂಭಾಗದಲ್ಲಿ "ವ್ಯಾಸೇಶ್ವರ" ಎಂಬ ಹೆಸರಿನಿಂದ ಶಿವಲಿಂಗವನ್ನು ಪೂಜಿಸುತ್ತಿದ್ದರೆಂಬುದು ಮೇಲಿನ ಶ್ಲೋಕದ ಅಭಿಪ್ರಾಯವಾಗಿರುತ್ತದೆ. ವ್ಯಾಸೇಶ್ವರ ಲಿಂಗ ಸಮ್ಮುಖದಲ್ಲಿ "ಘಂಟಾಕರ್ಣ ಶಿವಾಚಾರ್ಯರ" ವಿಗ್ರಹವು ಅಚ್ಚಳಿಯದೆ ಉಳಿದಿದೆ. ಮತ್ತು ಘಂಟಾಕರ್ಣ ಶಿವಾಚಾರ್ಯರ ಪವಿತ್ರ ನಾಮದಿಂದ "ಘಂಟಾಕರ್ಣ ತೀರ್ಥ"ವು ಶೋಭಿಸುತ್ತಿರುವುದು ಈ ತೀರ್ಥಕ್ಕೆ ಅಲ್ಲಿನ ಜನರು "ಘಂಟಾಕರ್ಣ ತಲಾವ್" ಎಂದು ಕರೆಯುತ್ತಾರೆ ಎಂದು ವೀರಶೈವ ಮತಸ್ಥಾಪಕ ಜ॥ ಪಂಚಾಚಾರ್ಯರು ಎಂಬ ಗ್ರಂಥದ 20ನೇ ಪುಟದಲ್ಲಿ ವಿವರಿಸಿರುತ್ತಾರೆ. "ಸದ್ಯೋಜಾತ ಮುಖಮಾಸೀತ್ ರೇಣುಕಾಚಾರ್ಯ ಆರಾಧ್ಯ ಉದ್ಭವತಿ। ವಾಮದೇವ ಮುಖಮಾಸೀತ್ ದಾರುಕಾಚಾರ್ಯ ಆರಾಧ್ಯ ಉದ್ಭವತಿ। ಪರಮೇಶ್ವರನ ಸದ್ಯೋಜಾತ ಮುಖದಿಂದ ರೇಣುಕಾಚಾರ್ಯರೂ ವಾಮದೇವ ಮುಖದಿಂದ ದಾರುಕಾಚಾರ್ಯರೂ ಹೀಗೆ ಪಂಚಾಚಾರ್ಯರು ಹುಟ್ಟಿದರು. ವೇದಾಗಮ ಸಂಪ್ರದಾಯ ಮಹೇಶ್ವರ ತತ್ವವಿತ್ಪಂಚಾಚಾರ್ಯೇಭ್ಯೋ ದೀಕ್ಷಿತೋ ಲಿಂಗಸ್ಪರ್ಶನಃ ಸವಿವಾಹಂ॥ ಎಂದರೆ ವೇದಾಗಮ ಸಂಪ್ರದಾಯವನ್ನೂ ಶಿವತತ್ವವನ್ನೂ ಬಲ್ಲವರಾದ ಈ ಪಂಚಾಚಾರ್ಯರಿಂದ ದೀಕ್ಷೆಯನ್ನು ತೆಗೆದುಕೊಂಡವನು ಸಾಕ್ಷಾತ್ ಶಿವನು ಆಗುತ್ತಾನೆಂದು ಯಜುರ್ವೇದದ ಶಾಖಾಂತರಗತವಾದ ವೀರಲಿಂಗೋಪನಿಷತ್‌ನಲ್ಲಿ ಮೇಲಿನಂತೆ ವಿವರಿಸಲ್ಪಟ್ಟಿದೆ.

ಡಾ॥ ಜೆ. ಎನ್. ಫಾರ್ಕ್ಯುಹಾರ್, ಎಂ.ಎ., ಡಿ. ಲಿಟ್., ಬಾರ್ ಅಟ್ ಲಾ, ಎಂಬುವರು ಬರೆದಿರುವ "ದಿ ರಿಲಿಜಿಯಸ್ ಕ್ವೆಸ್ಟ್ ಆಫ್ ಇಂಡಿಯಾ" ಎಂಬ ಗ್ರಂಥದ 259ನೇ ಪುಟದಲ್ಲಿ ವೀರಶೈವರ ಇತಿಹಾಸವು ಬರೆಯಲ್ಪಟ್ಟಿದೆ. ಪ್ರತಿಯುಗಗಳಲ್ಲಿಯೂ ಶಿವನ ಮುಖಗಳಿಂದ ಅವತರಿಸಿದ ಏಕೋರಾಮ, ಪಂಡಿತಾರಾಧ್ಯ, ರೇವಣಸಿದ್ಧ, ಮರುಳಸಿದ್ಧ, ವಿಶ್ವಾರಾಧ್ಯ, ಎಂಬ ಐದು ಜನ ಯತಿಗಳಿಂದ ಈ ಮತವು ಸ್ಥಾಪಿಸಲ್ಪಟ್ಟಿತೆಂದು ಮೇಲ್ಕಂಡ ಗ್ರಂಥದ ಅಭಿಪ್ರಾಯವಾಗಿದೆ. ಮಿ॥ ಸಿ. ಪಿ. ಬ್ರೌನ್ ದೊರೆಗಳು ಬರೆದಿರುವ "ಮದ್ರಾಸ್ ಜರ್ನಲ್ ಆಫ್ ಲಿಟರೇಚರ್ ಅಂಡ್ ಸೈನ್ಸ್" ಎಂಬ ಗ್ರಂಥದ 11ನೇ ಭಾಗದ 153ನೇ ಪುಟದಲ್ಲಿ ಈ ಕೆಳಕಂಡಂತೆ ವಿವರಿಸಿದ್ದಾರೆ. ರೇವಣಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ, ಏಕೋರಾಮಾರಾಧ್ಯ ಎಂಬ ಐದು ಜನ ಯತಿಗಳು ನಾಲ್ಕು ಯುಗಗಳಲ್ಲಿಯೂ ಅನುಕ್ರಮವಾಗಿ ಅವತರಿಸಿದರೆಂದು ಮೇಲಿನ ಗ್ರಂಥಕರ್ತರ ಅಭಿಪ್ರಾಯವಾಗಿದೆ. ಪ್ರಸಿದ್ಧ ಇತಿಹಾಸಜ್ಞರಾದ ಕಾಶೀ ಕ್ಷೇತ್ರದ ನಿವಾಸಿ ಕೈ॥ ರಾಮದಾಸ ಗೌಡ, ಎಂ.ಎ., ಎಂಬುವರು ಬರೆದ "ಹಿಂದುತ್ವ" ಎಂಬ ಹಿಂದಿ ಗ್ರಂಥದಲ್ಲಿ 69ನೇ ಪುಟದಲ್ಲಿ ಈ ಕೆಳಗಿನಂತೆ ಬರೆದಿರುತ್ತಾರೆ. ಈ ಪ್ರಕಾರ "ವೀರಶೈವ ಜಗತ್‌ಕೋ ಶಿವಮಯ ಮಾನತಾ ಹೈ। ವೀರಶೈವೊಂಕೇ ಪಂಚಾಚಾರ್ಯ ಭಗವಾನ್‌ಕೆ ಇನ್ಹೀ ಪಾಂಚೋಮುಖೋಂಸೆ ಪ್ರಕಟ ಹುಎ ಹೈ। ಯೋ ಪಾಂಚೋ ಮಾಹೇಶ್ವರ ನಾಯ್‌ಕೆ ಜಗದ್ಗುರು ಕಲೀಕೆ ಆರಂಭಮೇ ಹುಯಿ." ವೀರಶೈವರು ಈ ರೀತಿ ಸಮಸ್ತ ಪ್ರಪಂಚವನ್ನು ಶಿವಮಯವನ್ನಾಗಿ ತಿಳಿಯುತ್ತಾರೆ. ವೀರಶೈವ ಮತಾಚಾರ್ಯರಾದ ಪಂಚಾಚಾರ್ಯರು ಭಗವಂತನ ಐದು ಮುಖಗಳಿಂದ ಅವತರಿಸಿದರು. ಈ ಐದು ಜನ ಜಗದ್ಗುರುಗಳು ಕಲಿಯುಗದ ಆರಂಭದಲ್ಲಿ ಅವತರಿಸಿದರು ಎಂದು ವಿವರಿಸಿರುತ್ತಾರೆ. ಕೈ॥ ಮಹೇಶ ಚಂದ್ರಗುರು ಎಂಬುವರು "ವೀರಶೈವ ಉಗಮ ಮತ್ತು ಪ್ರಗತಿ" ಎಂಬ ಗ್ರಂಥದ ಮುನ್ನುಡಿಯಲ್ಲಿ ಈ ಕೆಳಗಿನಂತೆ ವಿವರಿಸಿರುತ್ತಾರೆ. "ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಶಿವಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿರುವರು. ಶ್ರೀಮತ್ಪಂಚಾಚಾರ್ಯರು ಜಗದಾದಿಯಲ್ಲಿ ಪರಶಿವನ ಪಂಚ ಮುಖಗಳಿಂದ ಉದ್ಭವಿಸಿ, ಕೃತ, ತ್ರೇತಾ, ದ್ವಾಪರ, ಕಲಿಯುಗಗಳ ಆದಿಯಲ್ಲಿ ಭೂಮಂಡಲದಲ್ಲಿ ಪ್ರಸಿದ್ಧಿಗಳಿಸಿದ ಸೋಮೇಶ್ವರ, ಸಿದ್ಧೇಶ್ವರ ರಾಮನಾಥ, ಮಲ್ಲಿಕಾರ್ಜುನ, ವಿಶ್ವನಾಥ ಲಿಂಗಗಳಿಂದ ಅವತರಿಸಿ ಶಿವಾದ್ವೈತ ಸಿದ್ಧಾಂತವನ್ನು ಸ್ಥಾಪಿಸಿ ಜಗನ್ಮಾನ್ಯರಾಗಿರುವ

ವಿಷಯ ಶಿವಾಗಮಗಳಲ್ಲಿ ಉಕ್ತವಾಗಿದೆ. ಶ್ರೀಮತ್ಪಂಚಾಚಾರ್ಯರ ಬಗೆಗೆ ಪರಶಿವನು ಪಾರ್ವತಿಗೆ :—

"ಪ್ರವಕ್ಷ್ಯಾಮಿ ಭವತ್ಪಂಚಶೃಣುತಜ್ಜನನಕ್ರಮಂ
ಶ್ರೀ ಮದ್ರೇವಣಸಿದ್ಧಸ್ಯ ಕೊಲ್ಲಿಪಾಕಿ ಪುರೋತ್ತಮೇ॥
ಸೋಮೇಶಲಿಂಗಾಜ್ಜನನಂ ಆವಾಸಃ ಕದಲೀ ಪುರೇ ।
ತದ್ವನ್ ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ॥
ಸಿದ್ದೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ।
ಸುಧಾ ಕುಂಡಾಖ್ಯ ಸುಕ್ಷೇತ್ರೇ ಮಲ್ಲಿಕಾರ್ಜುನ ಲಿಂಗತಃ॥
ಜನನಂ ಪಂಡಿತಾಚಾರ್ಯಸ್ಯ ನಿವಾಸಃ ಶ್ರೀ ಗಿರೌಶಿವೇ ।
ದ್ರಾಕ್ಷಾರಾಮಾಖ್ಯ ಸುಕ್ಷೇತ್ರೇ ರಾಮನಾಥಾಖ್ಯ ಲಿಂಗತಃ॥
ಏಕೋ ರಾಮಸ್ಯ ಜನನಮಾವಾಸಸ್ತು ಹಿಮಾಲಯೇ॥
ಕಾಶ್ಯಾಂ ವಿಶ್ವೇಶಲಿಂಗಾಚ್ಚ ವಿಶ್ವಾರಾಧ್ಯಸ್ಯ ಸಂಭವಂ ।
ಸ್ಥಾನಂ ಶ್ರೀ ಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ॥
ಏತೇ ಯುಗಚತುಷ್ಟೇತು ಪಂಚಾರಾಧ್ಯ ಯಥಾ ವಿಧಿ ।
ಮಮಲಿಂಗ ಮುಖೋದ್ಭೂತ ಲೋಕವಿಶ್ರುತ ಕೀರ್ತಿಮತ್॥

ಈ ರೀತಿಯಾಗಿ ನಾಲ್ಕು ಯುಗಗಳಲ್ಲಿಯೂ ಪಂಚ ಆಚಾರ್ಯರು ಅವತರಿಸಿದ ವಿಷಯವನ್ನು ಸ್ಪಷ್ಟವಾಗಿ ವಿವರಿಸಿರುತ್ತಾನೆ. ಕೈ॥ ಚೀಫ್ ಜಸ್ಟೀಸ್ ಮಹಾದೇವಯ್ಯನವರು 29–3–1942ರಲ್ಲಿ ಮಹಂತಿನ ಮಠದಲ್ಲಿ ನಡೆದ ರೇಣುಕ ಜಯಂತಿಯ ಸಾರ್ವಜನಿಕ ಮಹಾಸಭೆಯಲ್ಲಿ "ಭಗವಾನ್ ಶ್ರೀ ಜಗದ್ಗುರು ರೇಣುಕಾಚಾರ್ಯರು ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರಲ್ಲಿ ಒಬ್ಬರಾಗಿದ್ದಾರೆ" ಎಂದು ತಮ್ಮ ಪ್ರಿಂಟಾದ ಭಾಷಣದಲ್ಲಿ ಹೇಳಿದ್ದಾರೆ. ವೀರಶೈವ ಮತವು ಬಹು ಪ್ರಾಚೀನವಾದುದು. ಅಲ್ಲದೆ ಆಚಾರ್ಯರ ವಿಷಯದಲ್ಲಿ ಸಾಕಷ್ಟು ಆಧಾರಗಳು ನಮಗೆ ದೊರೆಯುತ್ತವೆ. ಶಿವಾಗಮಗಳಲ್ಲಿಯೂ ವ್ಯಾಸನ ಪುರಾಣ ಮತ್ತು ಉಪನಿಷತ್‌ಗಳಲ್ಲಿಯೂ ಪಾಶ್ಚಿಮಾತ್ಯರೂ, ಹಿಂದೂ ದೇಶದ ಸುಪ್ರಸಿದ್ಧ ಪಂಡಿತರೂ ಬರೆದ ತಮ್ಮ ಜಗನ್ಮಾನ್ಯಗಳಾದ ಗ್ರಂಥಗಳಲ್ಲಿಯೂ ವೀರಶೈವ ಮತ ಸ್ಥಾಪಕ ಜಗದ್ಗುರು ಪಂಚಾಚಾರ್ಯರು ಪ್ರಾಚೀನ ಕಾಲದವರೆಂದು ಸ್ಪಷ್ಟವಾಗಿ ಬರೆದಿರುತ್ತಾರೆ.

With absolute reverence to:

JAGADGURU PANCHACHARYAS

Sree Balaji Trading Co.,

(Partners : K. R. ROKKIAH & BROS)

KIRANA, GENERAL MERCHANTS & COMMISSION AGENTS

42, Old Tharagupet
BANGALORE-2
Grams : ROKKIAH Co.,

Phone : Shop : 71762
Res : 28486
70334

Tel ; " BAJRANGBLI"
PHONE : Office 23274-24993
Residence 4362

Our Pranamams to
Pancha
Jagadgurus

★

Siyaram Ghanshyamdas

GRAIN MERCHANTS & COMMISSION AGENTS
32, OLD THARAGUPET (P. B. No. 7663), BANGALORE-2
TELEX No. 335 (Code: GUPTA BG)

ಲೇಖಕರು :
ವಿದ್ವಾನ್ ಶ್ರೀ ಚಂದ್ರಶೇಖರ ಶಾಸ್ತ್ರಿಗಳು
ರಾಯಚೂರು

"ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆ"

ಈ ಪ್ರಪಂಚದಲ್ಲಿ ನಿತ್ಯ ಜ್ಞಾನ ಸ್ವರೂಪನಾಗಿಹುವ ಗುರುವಿಗೂ, ಶಿವನಿಗೂ ಯಾವ ಭೇದವಿಲ್ಲ. ಶಿವನೇ ಪ್ರತ್ಯಕ್ಷವಾಗಿ ಗುರುರೂಪದಿಂದಿರುವನು. "ಶಿವನೇ ಗುರುವು" "ಗುರುವೇ ಶಿವನು". ಆದುದರಿಂದಲೇ "ನಗುರೋರಧಿಕಂ" "ನಾಸ್ತಿತತ್ವಂ ಗುರೋಃ ಪರಂ" ಎಂದು ಆಗಮಗಳು ಸಾರುತ್ತಿವೆ. ಎಲ್ಲರಿಗಿಂತಲೂ ಗುರುಗಳು ದೊಡ್ಡವರಾದುದರಿಂದ ಅವರ ಋಣಭಾರವು ನಮ್ಮ ಮೇಲೆ ಅಪಾರವಾಗಿರುತ್ತದೆ. ಗುರುವಿನ ಋಣಭಾರಕ್ಕಿಂತಲೂ ಅಧಿಕವಾದ ಋಣಭಾರವಿರುವುದಿಲ್ಲ. ನಮ್ಮಲ್ಲಿರುವ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ ಸುಜ್ಞಾನದ ಬೆಳಕನ್ನು ಕೊಟ್ಟು ನಿತ್ಯಾನಂದ ರೂಪವಾದ ಮೋಕ್ಷಸುಖವನ್ನು ಅನುಭವಿಸುವಂತೆ ಮಾಡುವ ಗುರುವಿನ ಕೃಪೆಯು ಅಷ್ಟಿಷ್ಟೆಂದು ಹೇಳಲಿಕ್ಕೆ ಸಾಧ್ಯವೇ ಇಲ್ಲ. ನಮ್ಮ ತಲೆಯ ಮೇಲೆ ಗುರುವಿನ ಅನುಗ್ರಹವು ಪರ್ವತಪ್ರಮಾಣದಷ್ಟಿದೆ. ಆ ಭಾರವನ್ನು ತೀರಿಸಲಿಕ್ಕೆ ಗುರುವಿನ ನಾಮಸ್ಮರಣೆಯೇ ಮುಖ್ಯವಾದ ಮಾರ್ಗವಾಗಿದೆ. ಗುರುವಿನ ನಾಮಸ್ಮರಣೆ ಮಾಡುವುದರಿಂದ ಋಣ ಭಾರದ ಶೇಷವೇ ಇಲ್ಲದಂತೆ ಮಾಡಿಕೊಳ್ಳಬಹುದು.

ವೀರಶೈವರಿಗೆ ಜಗದ್ಗುರು ಪಂಚಾಚಾರ್ಯರು ಆತ್ಮೋದ್ಧಾರದ ಗುರುಗಳಾಗಿರುತ್ತಾರೆ. ಅವರ ಋಣಭಾರವು ನಮ್ಮ ಮೇಲೆ ಅಪಾರವಾಗಿರುತ್ತದೆ. ಪ್ರತಿಯೊಬ್ಬ ವೀರಶೈವನೂ ಬೆಳಗ್ಗೆ ಹಾಸಿಗೆಯಿಂದ ಎದ್ದ ಕೂಡಲೇ ಮತ್ತು ಲಿಂಗ ಪೂಜೆಗೆ ಗದ್ದುಗೆಯ ಮೇಲೆ ಕುಳಿತುಕೊಂಡ ಕೂಡಲೇ ಮೊದಲು "ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ" ಎಂದು ಇಲ್ಲವಾದರೆ "ಜಗದ್ಗುರು ಪಂಚಾಚಾರ್ಯರಿಗೆ ಜಯವಾಗಲಿ" ಎಂದು ಗುರುಸ್ಮರಣೆ ಮಾಡಿ ಮುಂದಿನ ಕ್ರಿಯೆಗಳನ್ನು ಪ್ರಾರಂಭಿಸಬೇಕು. ಕೊರಳೊಳಗೆ ಲಿಂಗವಿರುವ ಪ್ರತಿಯೊಬ್ಬರೂ ಹೀಗೆ ಮಾಡಲೇ ಬೇಕು. ಏಕೆಂದರೆ, ನಾವು ಕೊರಳೊಳಗೆ ಕಟ್ಟಿಕೊಂಡು ಪ್ರತಿದಿನವೂ ಪೂಜಿಸುವಇಷ್ಟ ಲಿಂಗವು ಅವರ ಅನುಗ್ರಹದಿಂದ ಬಂದದ್ದಾಗಿದೆ. ನಾವು ಪ್ರತಿ ದಿನ ಆಚರಿಸುವ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳು, ಅವರಿಂದ ಬಂದವುಗಳಾಗಿವೆ. ಅವರು ವೀರಶೈವ ಮತವನ್ನು ಸ್ಥಾಪಿಸದಿದ್ದರೆ ನಾವು ಪೂಜಿಸುವ ಇಷ್ಟ ಲಿಂಗವು ಎಲ್ಲಿ ಇರುತ್ತಿತ್ತು? ನಾವು ಆಚರಿಸಿ ನಿತ್ಯಾನಂದ ಸುಖವನ್ನು ಪಡೆಯುವ ಸಾಧನಗಳಾದ ಅಷ್ಟಾವರಣ, ಪಂಚಾಚಾರ. ಷಟ್ಸ್ಥಲಗಳು ಎಲ್ಲಿ ಇರುತ್ತಿದ್ದವು? ನಾವು ಮೋಕ್ಷವನ್ನು ಪಡೆಯಲಿಕ್ಕೆ ಸುಲಭೋಪಾಯವಾದ

ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಉದ್ದಾಮ ವಿದ್ವಾಂಸರು. ಅಷ್ಟಭಾಷಾತಜ್ಞರಾದ ಶ್ರೀಯುತರು ಮಹಾ ತತ್ವಜ್ಞಾನಿಗಳೂ ಆಗಿದ್ದಾರೆ. ಎಷ್ಟು ಸೊಗಸಾಗಿ ಬರೆಯಬಲ್ಲರೋ, ಅಷ್ಟೇ ಘನವಾಗಿ ಮಾತನಾಡಬಲ್ಲ ಮಹಾ ವಾಗ್ಮಿಗಳು. ವೀರಶೈವ ಸಿದ್ಧಾಂತದ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಶ್ರೀಯುತರ ಈ ಲೇಖನ ಅವರ ಪಾಂಡಿತ್ಯಕ್ಕೆ ದ್ಯೋತಕವಾಗಿದೆ.

ಮಾರ್ಗವನ್ನು ಕಲ್ಪಿಸಿಕೊಟ್ಟು ಜನ್ಮ ಸಾರ್ಥಕ ಮಾಡಿಕೊಳ್ಳುವಂತೆ ಮಾಡಿರುವ “ಜಗದ್ಗುರು ಪಂಚಾಚಾರ್ಯ”ರ ಮಹೋಪಕಾರವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಸರಿ. ನಮ್ಮ ವೀರಶೈವ ಸಮಾಜದಲ್ಲಿ ಬಸವಾದಿ ಪ್ರಮಥರೂ, ಅನೇಕ ಮಹಾ ಶಿವಯೋಗಿಗಳೂ, ಮಹಾ ಮಹಾ ಶಿವಶರಣರೂ ಈ ಪಂಚಾಚಾರ್ಯರು ಅನುಗ್ರಹಿಸಿದ ಇಷ್ಟಲಿಂಗ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಆಚರಣೆಯಿಂದಲೇ ಮಹಾಮಹಿಮರೆನಿಸಿ ಮೋಕ್ಷವೆಂಬ ನಿತ್ಯಾನಂದರೂಪವಾದ ಸುಖದಲ್ಲಿ ಲೋಲಾಡುತ್ತಾ, ಜಗತ್ತಿನಲ್ಲಿ ಅಜರಾಮರವಾದ ಕೀರ್ತಿಯನ್ನು ಪಡೆದಿರುತ್ತಾರೆ. ಪಂಚಾಚಾರ್ಯರು ವೀರಶೈವ ಮತವನ್ನು ಸ್ಥಾಪಿಸದಿದ್ದರೆ ಬಸವಾದಿ ಪ್ರಮಥರ ಹೆಸರು ಈ ಜಗತ್ತಿನಲ್ಲಿ ಇರುತ್ತಲೇ ಇರಲಿಲ್ಲ. ೨೧ ಯುಗಗಳಿಂದಲೂ ಪಂಚಾಚಾರ್ಯರು ಜಗತ್ತಿಗೆ ಮಾಡಿರುವ ಮಹೋಪಕಾರವು ಇಷ್ಟೇ ಎಂದು ಅಳೆಯಲಿಕ್ಕೆ ಸಾಧ್ಯವೇ ಇಲ್ಲ. ಮಹಾ ಮಹಾ ರಾಜಾಧಿರಾಜರಿಗೆ ಮತ್ತು ಮಹಾ ಮಹಾ ಋಷಿಪುಂಗವರಿಗೆ ಲಿಂಗಧಾರಣೆ ಮಾಡಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡಿದ್ದ ಉದಾಹರಣೆಗಳಿವೆ. ಒಂದಾನೊಂದು ಕಾಲದಲ್ಲಿ ಆಸೇತು ಹಿಮಾಚಲ ಪರ್ಯಂತರವಾಗಿ ವೀರಶೈವ ಮತವು ವ್ಯಾಪಿಸುವಂತೆ ಮಾಡಿದ್ದರು. ಆ ಕಾಲದಲ್ಲಿ ಮೂರು ಕೋಟಿ ವೀರಶೈವರಿದ್ದರೆಂದು, ಹತ್ತು ಕೋಟಿ ಶೈವರಿದ್ದರೆಂದು “ನಿರ್ಮಾಲ್ಯ ರತ್ನಾಕರ” ಎಂಬ ಗ್ರಂಥದಲ್ಲಿ ಕಾಶಿಯ ಬಾಬು “ಶ್ರಿ ಬೇಚ ಸಿಂಹ” ಎಂಬ ಇತಿಹಾಸಜ್ಞನು ಬರೆದಿದ್ದಾನೆ. ಜೈನ, ಬೌದ್ಧ, ಮಹಮದೀಯ, ಕ್ರೈಸ್ತ ಮತಗಳ ಪ್ರಾಬಲ್ಯದಿಂದ ಕ್ಷೀಣಿಸುತ್ತಾ ಹೋಗಿ ಈಗಿನ ಮಟ್ಟಕ್ಕೆ ಬಂದು ಮುಟ್ಟಿದೆ. ಕಾಲಚಕ್ರದ ಗತಿಯಿಂದ ಹೆಚ್ಚಿದ್ದು ತಗ್ಗಬಹುದು, ತಗ್ಗಿದ್ದು ಹೆಚ್ಚಬಹುದು. ಇದು ಸೃಷ್ಟಿಯ ನಿಯಮ. ಇದೂ ಅಲ್ಲದೆ ಇಡೀ ಭೂಮಂಡಲದ ಆರು ಖಂಡಗಳಲ್ಲಿಯೂ ಆಕಾಶ ಮಾರ್ಗದಿಂದ ಸಂಚರಿಸುತ್ತಾ ಹೋಗಿ ಅಲ್ಲಿ ಶಿವಲಿಂಗಗಳನ್ನು ಸ್ಥಾಪಿಸಿ ಜನಗಳಲ್ಲಿ ಶಿವಭಕ್ತಿಯುಂಟಾಗುವಂತೆ ಮಾಡಿದುದು ಸಾಮಾನ್ಯವಾದ ಮಾತಲ್ಲ. ಈಗಲೂ ಯೂರೋಪ್, ಅಮೇರಿಕಾ ಖಂಡಗಳಲ್ಲಿ ಶಿವಲಿಂಗಗಳು ಉಂಟೆಂದು ಇತಿಹಾಸಕಾರರು ಹೇಳುತ್ತಾರೆ. ಜನಗಳಲ್ಲಿ ಮೊದಲು ಶಿವಭಕ್ತಿ ಹುಟ್ಟುವಂತೆ ಮಾಡಬೇಕಾದ ಸಾಧನವೆಂದರೆ ಶಿವಲಿಂಗಗಳ ಸ್ಥಾಪನೆ. ಆಮೇಲೆ ಇಷ್ಟಲಿಂಗ ಧಾರಣೆ. ಯೂರೋಪ್ ಖಂಡದಲ್ಲಿನ ಭೂಮಧ್ಯ ಸಮುದ್ರತೀರದ (ಮೆಡಿಟರೇನಿಯನ್ ಸಮುದ್ರ ತೀರದ) ಕೆಲವು ಜನರು ಲಿಂಗವನ್ನು ಕಂಠದಲ್ಲಿ ಧರಿಸಿಕೊಂಡು ಪೂಜಿಸುತ್ತಿದ್ದರೆಂದು “ಕೀತ್” ಎಂಬ ಇಂಗ್ಲಿಷ್ ಪಂಡಿತನು (ಫಾರ್ ಆರ್ಯನ್ ಆಂಡ್ ಫಾರ್ ದ್ರವಿಡಿಯನ್) ಎಂಬ ಗ್ರಂಥದಲ್ಲಿ ಬರೆದಿದ್ದಾನೆ.

ಶ್ರೀ ರಂಭಾಪುರೀ ವೀರ ಸಿಂಹಾಸನಾಧೀಶ್ವರರಾದ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು 1400 ವರ್ಷ ಭೂಲೋಕದಲ್ಲಿದ್ದು ಸಂಸ್ಕೃತ ಭಾಷೆಯಲ್ಲಿ ಹತ್ತು ಕೋಟಿ ಶ್ಲೋಕಗಳುಳ್ಳ “ಪರಮ ರಹಸ್ಯ”.ಎಂಬುವ ಅತ್ಯದ್ಭುತವಾದ ಗ್ರಂಥವನ್ನು ಬರೆದು ಮಹೋಪಕಾರ ಮಾಡಿರುವುದು ನಮ್ಮ ವೀರಶೈವ ಸಮಾಜಕ್ಕೆ ಒಂದು ಹೆಮ್ಮೆಯ ವಿಷಯವಾಗಿದೆ. ಈಗ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಇಪ್ಪತ್ತಾರು ಸಾವಿರ ಶ್ಲೋಕಗಳು ಮಾತ್ರ ದೊರೆಯುತ್ತವೆ. ವೀರಶೈವ ಸಾಹಿತ್ಯ ಸಂಶೋಧಕರಾಗಿದ್ದ ಸ್ಟೀಲ್ ಸಾಹೇಬರೂ ಅಷ್ಟ ಭಾಷಾ ಕವೀಶ್ವರರಾದ ಪಾಲ್ಕುರಿಕೆ ಸೋಮನಾರಾಧ್ಯರೂ ಈಗ 450 ವರ್ಷಗಳ ಹಿಂದೆ ಇದ್ದ ಅದ್ವಿತೀಯ ಪಂಡಿತರಾದ ಸೋಸಲೆ ರೇವಣಾರಾಧ್ಯರು “ಪರಮ ರಹಸ್ಯ”ವು ಹತ್ತು ಕೋಟಿ ಶ್ಲೋಕಗಳಿಂದ ಕೂಡಿದ ಮಹಾ ಉದ್ಗ್ರಂಥವೆಂದು ಹೇಳಿದ್ದಾರೆ. ಪಾಲ್ಕುರಿಕೆ ಸೋಮನಾರಾಧ್ಯರು, “ಜ್ಯೋತಿರ್ಮಯ ಶಾಂಭವೀ ದೀಕ್ಷೆ” ಎಂಬುವ ಗ್ರಂಥದಲ್ಲಿಯೂ ಸೋಸಲೆ ರೇವಣಾರಾಧ್ಯರು “ಶಿವತತ್ವ ಪ್ರಕಾಶ” ಎಂಬ ಗ್ರಂಥದಲ್ಲಿಯೂ ಈ ವಿಷಯವನ್ನು ಹೇಳಿದ್ದಾರೆ. ಹಾಗೂ ಈ ಗ್ರಂಥಕ್ಕೆ ಟೀಕೆಯನ್ನು ಬರೆದ ಮಹಾರಾಷ್ಟ್ರದ ಮನ್ಮಥ ಸ್ವಾಮಿಗಳೆಂಬುವರು ಶ್ರೀ ರೇವಣಸಿದ್ಧ ಮಹಾ ಶಿವಯೋಗಿಗಳಿಂದ “ಪರಮ ರಹಸ್ಯ” ಗ್ರಂಥವು ರಚನೆಯಾಗಿ ಜಗತ್ತಿಗೊಂದು ದೊಡ್ಡ ಉಪಕಾರವಾಗಿದೆ ಎಂದು ತಮ್ಮ “ದೇದೀಪ್ಯ” ಎಂಬುವ ಮಹಾ ಗ್ರಂಥದಲ್ಲಿ ಹೇಳಿರುವರೆಂದೂ ಕೇಳುತ್ತಿದ್ದೇನೆ. ಇಂತಹ ಅತ್ಯದ್ಭುತವಾದ ಕಾರ್ಯವನ್ನು ಮನುಷ್ಯ ಮಾತ್ರದವರು ಮಾಡಲಿಕ್ಕೆ ಶಕ್ಯವೇ ಇಲ್ಲ. ನೂರು ವರ್ಷ ಬಾಳುವ ಮಾನವ ಹತ್ತು ಕೋಟಿ ಶ್ಲೋಕಗಳನ್ನು ಬರೆಯಲಿಕ್ಕೆ ಸಾಧ್ಯವೆ ಎಂಬುದನ್ನು ಓದುಗರು ವಿಚಾರ ಮಾಡಲಿ. ಈ ಕಾರ್ಯವು ಸಾವಿರಾರು ವರ್ಷ ಬಾಳುವ ಯೋಗಿಗಳಿಂದ ಆಗಬೇಕೇ ಹೊರತು ಮತ್ತಾರಿಂದಲೂ ಸಾಧ್ಯವಿಲ್ಲ. ರೇವಣಸಿದ್ಧರು ಅರಿತು 700 ವರ್ಷ ಭೂಮಿಯಲ್ಲಿದ್ದುದರಿಂದ ಈ ಹತ್ತು ಕೋಟಿ ಶ್ಲೋಕದ ಗ್ರಂಥವು ರಚನೆಯಾಗಲಿಕ್ಕೆ ಸಾಧ್ಯವಾಯಿತು. ಇವರಿಂದಲೇ ಈ ಗ್ರಂಥವು ರಚನೆಯಾಯಿತೆಂಬುದು ನೂರಕ್ಕೆ ನೂರು ನಿಜವೆಂದು ದೃಢಪಡುತ್ತದೆ. ಇದರಲ್ಲಿ ಅನುಮಾನವು ಎಳ್ಳಷ್ಟೂ ಇರುವುದಿಲ್ಲ. ವೀರಶೈವ ಧರ್ಮಾಭಿವೃದ್ಧಿಗಾಗಿ ಶ್ರೀ ಆದಿ ರೇವಣಸಿದ್ಧರು ಎಷ್ಟು ಸಾಹಸ ಕಾರ್ಯಗಳನ್ನು ಮಾಡಿದ್ದಾರೆ ಎಂದು ಯೋಚಿಸಿ ಅವರ ಅದ್ಭುತ ಪ್ರಯತ್ನಕ್ಕಾಗಿ ವೀರಶೈವ ಸಮಾಜವೆಲ್ಲವೂ ಅವರ ಉಪಕಾರವನ್ನು ಬಹಳವಾಗಿ ಸ್ಮರಿಸಬೇಕಾಗಿದೆ. ಪ್ರತಿಯೊಬ್ಬ ವೀರಶೈವನ ರಕ್ತನಾಡಿಯಲ್ಲಿ ಶ್ರೀ ರೇವಣ ಸಿದ್ಧರ ಜೀವಾಣು ತುಂಬಿಕೊಂಡಿದೆ. ಸಮಾಜವು ಅವರಿಗೆ ಚಿರಋಣಿಯಾಗಿ ಇರಬೇಕಾಗಿದೆ. ಬಸವಣ್ಣನವರು ವಚನ ವಾಙ್ಮಯವನ್ನು ರಚಿಸಿ ಜಗತ್ತಿಗೆ ಹೇಗೆ ಉಪಕಾರವನ್ನು ಮಾಡಿದ್ದಾರೋ ಅದರಂತೆಯೇ ಶ್ರೀರೇವಣಸಿದ್ಧರುಬೃಹತ್ತಮವಾದ “ಪರಮ ರಹಸ್ಯ” ಎಂಬ ಗ್ರಂಥವನ್ನು ರಚಿಸಿ ಜಗತ್ತಿಗೆ ಉಪಕಾರವನ್ನು ಮಾಡಿದ್ದಾರೆ. ಕೆಲವು ವಚನಕಾರರು “ಪರಮ ರಹಸ್ಯ”ದ

ಸಾಕ್ಷಿಗಳನ್ನು ತೆಗೆದುಕೊಂಡಿದ್ದಾರೆ. ಜಗದ್ಗುರು ಪಂಚಾಚಾರ್ಯರ ಮುಖ್ಯ ಧ್ಯೇಯವು ಪರಮತವಾದಿಗಳನ್ನು ನಿಗ್ರಹಿಸಿ ತಮ್ಮ ಮತವನ್ನು ಪ್ರಸಾರ ಮಾಡುವುದೇ ಆಗಿತ್ತು. ಇಂಥ ಗುರುಪುಂಗವರನ್ನು ಅಂಗದಮೇಲೆ ಲಿಂಗ ಧರಿಸಿರತಕ್ಕ ಪ್ರತಿಯೊಬ್ಬ ವೀರಶೈವನೂ ಮೊದಲು ಅವರ ನಾಮಸ್ಮರಣೆಯನ್ನು ಮಾಡಿಯೇ ತೀರಬೇಕು. ಇದೇ ಗುರುಭಕ್ತನ ಲಕ್ಷಣ. ಇಲ್ಲದಿದ್ದರೆ ಗುರುವಿನಲ್ಲಿ ಕೃತಘ್ನತೆಯನ್ನು ತೋರಿಸಿದಂತಾಗುತ್ತದೆ. ನಮ್ಮ ಕೊರಳೊಳಗೆ ಲಿಂಗ ಬರುವಂತೆ ಮಾಡಿದ ಮತಸ್ಥಾಪಕ ಗುರುಪುಂಗವರನ್ನು ಸ್ಮರಿಸದಿದ್ದ ಮೇಲೆ ಅವನು ಎಂಥ ವೀರಶೈವನು? ವೇಷಧಾರಿಗಳಾದ ನಾಮಧಾರಿ ವೀರಶೈವರೆಂದು ಹೇಳಬಹುದಲ್ಲವೆ? ಅವರ ಋಣಭಾರವನ್ನು ಎಂದಿಗೆ ತೀರಿಸಬೇಕು? ಇವರ ಕೃತಘ್ನತೆಯು ಇಷ್ಟೇ ಎಂದು ಹೇಳಲಿಕ್ಕೆ ಬರುವಂತಿಲ್ಲ. ನೋಡಿರಿ, ಕ್ರಿಶ್ಚಿಯನ್ನರು, ಮಹಮದೀಯರು, ಬೌದ್ಧರು, ಜೈನ ಮೊದಲಾದವರು ತಮ್ಮ ತಮ್ಮ ಮತ ಸ್ಥಾಪಕ ಗುರುಪುಂಗವರ ಮೇಲೆ ಎಷ್ಟು ಭಕ್ತಿಯನ್ನಿಟ್ಟು ಸ್ತೋತ್ರ ಮಾಡುತ್ತಾರೆಂಬುದು ಜಗತ್ತಿನಲ್ಲಿ ಅವರು ಆಚರಿಸುವ ಆಚರಣೆಯಿಂದ ಗೊತ್ತಾಗುತ್ತದಲ್ಲವೆ? ಮಹಮ್ಮದೀಯರು "ಮಹಮದ್ ರಸೂಲುಲ್ಲ" ಎಂದೂ ಕ್ರಿಶ್ಚಿಯನ್ನರು "ಗಾಡ್ ಸೇವ್ ಜೀಸಸ್ ಕ್ರೈಸ್ತ್" ಎಂದೂ, ಬೌದ್ಧರು "ಬುದ್ಧಂ ಶರಣಂ ಗಚ್ಛಾಮಿ" ಎಂದೂ, ಜೈನರು "ಜಿನಸಿದ್ಧಾಯನಮಃ" ಎಂದೂ ತಮ್ಮ ಗುರುಗಳನ್ನು ಮೊದಲು ಸ್ಮರಣೆ ಮಾಡಿ ತಮ್ಮ ಕ್ರಿಯೆಗಳನ್ನು ಪ್ರಾರಂಭಿಸುತ್ತಾರೆ.

ಇವರಿಂದ ನಮ್ಮ ವೀರಶೈವರಲ್ಲಿ ಕೆಲವು ವ್ಯಕ್ತಿಗಳು ಪಾಠವನ್ನು ಕಲಿಯಬೇಕಾಗಿರುತ್ತದೆ. ಲಿಂಗ ಬರುವ ಹಾಗೆ ಮಾಡಿದ (ಲಿಂಗವನ್ನು ಕೊಟ್ಟ) ಗುರುಪುಂಗವರಲ್ಲಿ ಉದಾಸೀನತೆಯನ್ನು ತೋರಿಸಿದರೆ ಅವರು ಕೊಟ್ಟ ಲಿಂಗವನ್ನು ಪೂಜಿಸುವುದರಿಂದ ಆಗುವ ಫಲವೇನು? ವ್ಯರ್ಥ, ವ್ಯರ್ಥ "ಶಿವ ಪಥವನರಿವೊಡೆ ಗುರು ಪಥವೆ ಮೊದಲು" ಎಂದು ಹೇಳಿರುವ ಶಿವಶರಣ "ಸಾಮ್ರಾಟ್ ಬಸವಣ್ಣನವರ" ವಚನದಲ್ಲಿ ನಂಬಿಕೆಯನ್ನಿಟ್ಟು, ನಿಮಗೆ ಲಿಂಗ ದೊರೆಯುವಂತೆ ಮಾಡಿದ ಪಂಚಾಚಾರ್ಯ ಗುರುಪುಂಗವರಲ್ಲಿ ಭಕ್ತಿಯನ್ನಿಟ್ಟು, ನಾಮಸ್ಮರಣೆಮಾಡಿ ಮಹಾ ಋಣ ಭಾರವನ್ನು ತೀರಿಸಿ, ಕೃತಕೃತ್ಯರಾಗುವದು ಬಹು ಲೇಸು, ಬಹು ಲೇಸು. ಇಲ್ಲದಿದ್ದರೆ ಮಹಾ ಗುರು ದ್ರೋಹಿಗಳಾಗಿ ಘೋರವಾದ ನರಕದಲ್ಲಿ ಬಿದ್ದು ಹೊರಳಾಡುವ ಸಂಭವವು ಒದಗುತ್ತದೆ. ಇದನ್ನು ಪ್ರತಿಯೊಬ್ಬ ವೀರಶೈವನೂ ತಿಳಿದು ಅದರಂತೆ ಆಚರಿಸಬೇಕಾದುದು ಅತ್ಯವಶ್ಯ,

Phone : 75497

With best compliments from:

OUR HEARTY PRANAMAMS TO
PANCHA JAGADGURUS

SRI MANJUNATHA AGENCIES

MUNDY MERCHANTS

No. 11, 3rd Main Road, New Tharagupet,
BANGALORE-2.

With best compliments from:

Dial:

23231 }
75807 } For Details

EXCELLENT AND COMFORTABLE TRANSPORT ARRANGEMENTS
WITH LATEST LUXURY BUSES FOR YOUR VISITS
TO PLACES OF TOURIST IMPORTANCE

◆

Pilgrimages, School Excursions, Marriage Venues will be

Handled by

S. R. M. S. TOURIST SERVICE

Pinan
Pioneer in Tourist

(PREMIER TRAVEL AGENTS IN INDIA)

ROYAN CIRCLE, CHAMARAJPET, BANGALORE - 18.

ವೇ|| ವೀರಯ್ಯಸ್ವಾಮಿ ಶಾಸ್ತ್ರಿಮಠ

ವೀರಶೈವರ ಪೂರ್ವಾಚಾರದಲ್ಲಿ ಶ್ರೀ ಜಗದಾದಿ ಪರಮ ಜಗದ್ಗುರು ರೇಣುಕಾಚಾರ್ಯರು ಲಂಕಾದ್ವೀಪಕ್ಕೆ ಹೋಗಿ ಅಲ್ಲಿ ವೀರಶೈವ ಧರ್ಮ ಜಾಗೃತಿ ಮಾಡಿ ಶ್ರೀ ವಿಭೀಷಣನ ಇಷ್ಟದಂತೆ ಏಕ ಮುಹೂರ್ತದಲ್ಲಿ ಮೂರು ಕೋಟಿ ಲಿಂಗ ಸ್ಥಾಪನೆ ಮಾಡಿದ ವಿಷಯ ಸಿದ್ಧಾಂತಶಿಖಾಮಣಿ ಮೊದಲಾದ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಈ ಪುರಾಣೋಕ್ತ ವಿಷಯವು ನಿಶ್ಚಯ ಎಂಬುದಕ್ಕೆ ಸಾಕ್ಷಿಯಾಗಿ ಲಂಕಾ ಅಥವಾ ಸಿಂಹಳ ಕೀರು ಮಲಾಯ್ ಎಂಬ ಗ್ರಾಮದಲ್ಲಿ ಈಗಲೂ ಇರುವ ರೇಣುಕಾಶ್ರಮ ಮತ್ತು ರೇಣುಕ ವನ ಎಂಬ ಮಠಗಳು ಹಾಗೂ ನೂರಾರು ಮನೆ ವೀರಶೈವ ಸಮಾಜ ಬಂಧುಗಳು ಇರುವುದನ್ನು ನಾವು ಕಾಣಬಹುದು. ಇದರಿಂದ ಜಗದ್ಗುರು ರೇಣುಕಾಚಾರ್ಯರು ಲಂಕಾದ್ವೀಪಕ್ಕೆ ಗಗನ ಮಾರ್ಗವಾಗಿ ದಯಮಾಡಿಸಿ ಧರ್ಮ ಪ್ರಸಾರಕ್ಕೆ ಹೋಗಿ ಬಂದ ವಿಚಾರ ಸತ್ಯವಾದದು ಎಂದು ನನಗೆ ಮನವರಿಕೆಯಾಗಿದೆ.

ಲಂಕೆಯಲ್ಲಿ ಶ್ರೀ ರೇಣುಕಾಶ್ರಮ ಮತ್ತು ವೀರಶೈವರು

ಸಾಹಸ ಪ್ರವೃತ್ತಿಯ ಶ್ರೀ ವಿರಯ್ಯಸ್ವಾಮಿ ಶಾಸ್ತ್ರಿಮಠ ಅವರು ವೀರಶೈವ ಮತ ಸಿದ್ಧಾಂತದ ಬಗ್ಗೆ ಅಪಾರ ಚಿಂತನೆ ನಡೆಸಿದ್ದಾರೆ. ಇವರು ಆಚಾರ್ಯ ಪೀಠಗಳಲ್ಲಿ ಅತೀವ ನಿಷ್ಠೆಯುಳ್ಳವರು. ಪ್ರಯಾಸದಿಂದ ಸಿಂಹಳ ದ್ವೀಪದಲ್ಲಿ ಪ್ರವಾಸಮಾಡಿ ಅಲ್ಲಿನ ವೀರಶೈವರನ್ನು ಜಾಗ್ರತಗೊಳಿಸಿದ್ದಾರೆ. ಲಂಕೆಯ ಬಗೆಗಿನ ಇವರ ಈ ಲೇಖನ ಸ್ವಾರಸ್ಯಪೂರ್ಣವಾಗಿದೆ.

ಲಂಕಾ ದ್ವೀಪದ ವೀರಶೈವರನ್ನು ಅಲ್ಲಿ ಇರುವ ರೇಣುಕಾಶ್ರಮ ಮೊದಲಾದವನ್ನು ಸಂದರ್ಶಿಸಬೇಕೆಂಬ ಬಯಕೆ ಜಗದಾದಿ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದ ಹಾಗು ಸಿದ್ಧಾಂತಶಿಖಾಮಣಿಯ ಪ್ರೇರಣೆಯೇ ನನಗೆ ಆಕಸ್ಮಿಕವಾಗಿ ಶ್ರಾವಣ ಮಾಸದ ಅನುಷ್ಠಾನ ಪೂಜೆಯಲ್ಲಿ ಉಂಟಾಗಿ ಲಂಕಾಕ್ಕೆ ಪ್ರಯಾಣ ಬೆಳೆಸುವ ರಹದಾರಿಯ ಅವಶ್ಯಕತೆಗಳಿಗಾಗಿ (Passport) ವಗೈರೆ, ಸಿದ್ಧಗೊಳಿಸಿಕೊಂಡೆನು. ನಂತರ ನಾನು ಈ ವಿಷಯವಾಗಿ ಬೆಂಗಳೂರಿನಲ್ಲಿರುವ ಶರಣಸಾಹಿತ್ಯ ಸಂಪಾದಕರಾದ ಆಸ್ಥಾನ ವಿದ್ವಾನ್, ಪಂಡಿತ ರತ್ನಂ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು ಮುಖತಃ ಕಂಡು ಈ ಲಂಕಾ ವೀರಶೈವರ ವಿಷಯವನ್ನು ಪ್ರಸ್ತಾಪಿಸಿದೆನು. ಈ ಬಗ್ಗೆ ಅವರು ಶರಣಸಾಹಿತ್ಯ ಮಾಸಿಕದಲ್ಲಿ ಹಿಂದೆ ಪ್ರಕಟವಾಗಿದ್ದ ಲಂಕೆ ವೀರಶೈವಆಶ್ರಮದ ಭಾವಚಿತ್ರದ ಪಡಿ ಅಚ್ಚನ್ನು ನೆನಪಿಗೆ ತಂದರು.

1969ನೇ ಜೂನ್ ತಿಂಗಳಲ್ಲಿ ಸತ್ಯಸಂಕಲ್ಪಗಳಿಗನುಗುಣವಾಗಿ ಶ್ರೀ ಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರ ಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾಶೀರ್ವಾದ ಬಲದಿಂದ

ನಾನು ಲಂಕಾದ್ವೀಪಕ್ಕೆ ಹೋಗಿದ್ದು ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೊಂಡು ಮಾತೃಭೂಮಿಗೆ ಹಿಂತಿರುಗಿದೆನು. ಅನಂತರ ಬರುವಾಗ್ಗೆ ರಾಮೇಶ್ವರಂ, ಮತ್ತು ಜಂಗಮವಾಡಿಮಠ ಹಾಗೂ ಮಧುರೆ ಮೀನಾಕ್ಷಿ ದೇವಾಲಯ, ಕನ್ಯಾಕುಮಾರಿ ಮುಂತಾದ ಸ್ಥಳಗಳನ್ನು ಕಂಡುಬಂದೆನು.


Performing a Sahasra Abhishekam to
MAHALINGA MOORTHY.

"On Monday, 31st October, [illegible], at 10 a.m., the Ancient Sivalingam which has come down to us from time immemorial and which went underground for a while with the European invasions of Lanka, was enthroned with due ceremony in a specially constructed Mandapam in the Western Province."

ಸಿಂಹಳದಲ್ಲಿರುವ ಪ್ರಾಚೀನ ಶಿವಲಿಂಗಗಳ ನೋಟ

ಸಿಂಹಳದಲ್ಲಿ ನನ್ನ ಅನುಭವ

ನಾನು ಬೆಂಗಳೂರಿನಿಂದ ಮದ್ರಾಸಿಗೆ ಹೋಗಿ ವಿಮಾನ ಮಾರ್ಗದಿಂದ ಜಾಫನಾಕ್ಕೆ ಹೋಗಿ ಅಲ್ಲಿಂದ ಹತ್ತು ಮೈಲು ದೂರವಿರುವ ಕೀರುಮಲಾಯ್ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿರುವ ವೀರವಣ್ಣಯ್ ಶಿವ ಅಯ್ಯಂಪಿಳ್ಳಯ್ ಕುರುಕಳ್ ಎಂಬ ರೇಣುಕಾಶ್ರಮದಲ್ಲಿಯ ಸ್ವಾಮಿಗಳವರನ್ನು ಮತ್ತು ಅಲ್ಲಿರುವ ವೀರಶೈವ ಹಾಗೂ ಶೈವ ಬಂಧುಗಳನ್ನು ಪರಿಚಯ ಮಾಡಿಕೊಂಡೆನು. ಅವರು ಇಂಡಿಯಾದಿಂದ ಜಂಗಮರು ಬಂದದ್ದು ನೋಡಿ ಚಕಿತಗೊಂಡು ನನ್ನನ್ನು ಅತ್ಯಂತ ಪ್ರೀತಿ ಗೌರವಗಳಿಂದ ಬರಮಾಡಿಕೊಂಡರು. ಅವರ ಸ್ಥಿತಿಗತಿಗಳು ನಿಜಕ್ಕೂ ಚಿಂತಾಜನಕವಾಗಿವೆ. ಸಿಂಹಳ ಸರಕಾರದವರು ಈ ನಮ್ಮ ಅಲ್ಲಿಯ ಬಂಧುಗಳನ್ನು ಭಿಕ್ಷುಕರ ಗುಂಪಿಗೆ ಸೇರಿಸಿದ್ದಾರೆ. ಸಿಂಹಳದ ಲಿಂಗವಂತ ಬಂಧುಗಳಿಗೆ ಕೈಗಾರಿಕೆ, ವ್ಯಾಪಾರ, ವ್ಯವಸಾಯ, ಮೊದಲಾದ ಯಾವ ವ್ಯವಹಾರದಲ್ಲಿಯೂ ಸಂಪರ್ಕವಿಲ್ಲ. ಅವರು ದೇವಾಲಯದ ಪೂಜಾರಿಗಳಾಗಿ ಮತ್ತು ನೌಕರಿ ಕೂಲಿ ಕೆಲಸಮಾಡತಕ್ಕವರಾಗಿದ್ದಾರೆ. ಅವರಿಗೆ ವಿದ್ಯಾಭ್ಯಾಸಕ್ಕೆ ಸೌಕರ್ಯವಿಲ್ಲ.

ಜನರು ಬಡತನದಿಂದಲೂ ಅಜ್ಞಾನದಿಂದಲೂ ಕಾಲಕಳೆಯುತ್ತಿದ್ದಾರೆ. ಭರತ ಖಂಡದಲ್ಲಿ ಸುಮಾರು 50 ಲಕ್ಷ ಮಂದಿ ವೀರಶೈವರು ಉಂಟೆಂದು ತಿಳಿಯಲಾಗಿದೆ. ಅನೇಕ ಮಂದಿ ವೀರಶೈವರು ಉನ್ನತ ಸ್ಥಾನಮಾನಗಳನ್ನು ಗಳಿಸಿದ್ದಾರೆ. ವ್ಯಾಪಾರ, ವ್ಯವಸಾಯ ಹಾಗು ರಾಜಕೀಯಗಳಲ್ಲಿ ಸಾಕಷ್ಟು ಮುಂದುವರೆದಿದ್ದಾರೆ. ವಿದ್ವಾಂಸರ ಸಂಖ್ಯೆಯು ತಕ್ಕಮಟ್ಟಿಗೆ ಇದೆ.

1904ನೇ ಇಸ್ವಿಯ ಹಿಂದೆಯೇ ಅಖಿಲಭಾರತ ವೀರಶೈವ ಮಹಾಸಭೆಯು ಸ್ಥಾಪನೆಯಾಗಿದೆ. ಇದುವರೆಗೂ 17 ಅಧಿವೇಶನಗಳು ನಡೆದಿವೆ. ಅದಕ್ಕೆ ಒಂದು ಸ್ಥಿರ ಸ್ಥಾಯಿ ನಿಧಿ ಇದೆ. ಕಾರ್ಯಕಾರಿ ಸಮಿತಿ ಇದೆ. ಇಷ್ಟೆಲ್ಲ ಇದ್ದರೂ ಲಂಕಾ ವೀರಶೈವರ ಕಷ್ಟಕಾರ್ಪಣ್ಯಗಳನ್ನು ಭರತಖಂಡದ ವೀರಶೈವ ಬಂಧುಗಳು ಗಮನಿಸದಿರುವದು ನಿಜಕ್ಕೂ ದುಃಖಕರವಾಗಿದೆ. ಕ್ರೈಸ್ತ ಮತ್ತು ಮಹಮದೀಯ ಬಂಧುಗಳು ವಿಶ್ವದಲ್ಲಿರುವ ತಮ್ಮ ಸಮಾಜ ಬಂಧುಗಳ ಕ್ಷೇಮ ಚಿಂತನೆಗಳನ್ನು ಸದಾ ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ವೀರಶೈವರು ತಮ್ಮ ಧರ್ಮದ ಅನುಯಾಯಿಗಳು ಎಲ್ಲೆಲ್ಲಿ ಇದ್ದಾರೆ ಎಂಬುದನ್ನು ತಿಳಿಯಲು ಕೂಡ ಅಪೇಕ್ಷಿಸದಿರುವುದು ನಿಜಕ್ಕೂ ದುಃಖಕರವಾಗಿದೆ. ಹಿಮಾಲಯ



ಸಿಂಹಳ (ಲಂಕಾ)ದ ತಾಣಕೇಸಂತುರೈಯಲ್ಲಿರುವ ಶ್ರೀ ಗುರು ವೀರ ಭದ್ರ ದೇವಾಲಯದ ಮುಂಭಾಗದಲ್ಲಿ ವೇ|| ಶಾಸ್ತ್ರೀಮಠರು.

ಪ್ರದೇಶ ಮತ್ತು ನೇಪಾಳಗಳಲ್ಲಿ ಇರುವ ಅನೇಕ ವೀರಶೈವ ಬಂಧುಗಳು ಕೂಡ ಇದೇ ತರಹ ಕಷ್ಟದಲ್ಲಿರುವ ವಾರ್ತೆಯನ್ನು ಕೇಳಿರುವ ನಾನು ಈ ಸ್ಥಿತಿಯು ವೀರಶೈವರಿಗೆ ಅಪಮಾನಕರವಾಗಿದೆ ಎಂದು ಹೇಳಬಯಸುತ್ತೇನೆ. ಸಮಾಜದ ಪ್ರಮುಖರು ಈಗಲಾದರೂ ಎಚ್ಚೆತ್ತು ಲಂಕಾ, ಮಲೇಶಿಯಾ, ಸಿಂಗಪೂರ್ ಮೊದಲಾದ ಕಡೆಗಳಲ್ಲಿರುವ ವೀರಶೈವ ಬಂಧುಗಳನ್ನು ಗುರುತಿಸಿ ಅವರ ಕ್ಷೇಮ ಚಿಂತನೆಯನ್ನು ನೋಡಿಕೊಳ್ಳುವದು ಅಗತ್ಯವಾಗಿದೆ ಎಂದು ಈ ಮೂಲಕ ಬಿನ್ನವಿಸಿಕೊಳ್ಳುತ್ತೇನೆ.

ನಾನು ಕೇವಲ 14 ದಿವಸಗಳ ಕಾಲ ಸಿಂಹಳದಲ್ಲಿ ಇದ್ದೆನು. ನನ್ನನ್ನು ಆ ಸಿಂಹಳದ ಬಂಧುಗಳು ಅತ್ಯಂತ ಗೌರವಗಳಿಂದ ಸ್ವಾಗತಿಸಿ ಐದು ದಿನ ಮೆರವಣಿಗೆ ಮಾಡಿಸಿ ಪಾದ ಪೂಜೆ ಮಾಡಿಸಿ ಬಹಳವಾಗಿ ಗೌರವಿಸಿ ಬಿನ್ನವತ್ತಳೆಯನ್ನು ಕೊಟ್ಟಿರುವರು. ತಮ್ಮ ಸ್ಥಿತಿಯನ್ನು ಭಾರತದ ವೀರಶೈವರಿಗೆ ತಿಳಿಸಿ ತಮ್ಮನ್ನು ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು. ನಾನು ಅವರಿಗೆ ಕೊಟ್ಟ ಮಾತಿನಂತೆ ಸಿಂಹಳದಿಂದ ಬೆಂಗಳೂರಿಗೆ ಹಿಂತಿರುಗಿದ ಮೇಲೆ ಕರ್ನಾಟಕದ ಅನೇಕ ನಗರಗಳಲ್ಲಿ ಸಂಚರಿಸಿ ಸಿಂಹಳ ವೀರಶೈವರ ಪರಿಸ್ಥಿತಿಗಳನ್ನು ವಿವರಿಸಿದೆ. ಜನರು ಕುತೂಹಲದಿಂದ ನನ್ನ ಭಾಷಣ ಕೇಳಿದರು. ನನ್ನ ದ್ವೀಪಾಂತರ ಪ್ರಯಾಣದ ಸಾಹಸವನ್ನು ಮೆಚ್ಚಿ ಕೊಂಡಾಡಿದರು. ಆದರೆ ಸಿಂಹಳ ವೀರಶೈವರ ಉನ್ನತಿಗಾಗಿ ಯಾರೂ ಏನೂ ಪ್ರಯತ್ನ ಮಾಡಿಲ್ಲ ಎಂದು ಹೇಳಲು ದುಃಖಿಸುತ್ತೇನೆ.

ನಾನು ಲಂಕೆಯಲ್ಲಿದ್ದಾಗ 'ರೇಣುಕಾಶ್ರಮ', 'ರೇಣುಕವನ, ನಾಗಲಿಂಗೇಶ್ವರ ದೇವಾಲಯ, ನವಲೇಶ್ವರ ತೀರ್ಥ, ಶ್ರೀ ಗುರುವೀರಭದ್ರ ದೇವಾಲಯ, ತ್ರಿಕೋಣ ಮಲಯ್', ಶ್ರೀ ಗಣಪತಿ, ಶ್ರೀ ಮುನೀಶ್ವರ, ಶಿವಪಾರ್ವತಿ ದೇವಾಲಯ, ಶ್ರೀ ಕುಮಾರಸ್ವಾಮಿ, ಮತ್ಸ್ಯೇಶ್ವರ ಲಿಂಗ, ಮಕರಲಿಂಗ, ಈ ದೇವಾಲಯಗಳನ್ನು, ಅಲ್ಲದೆ ಶಿವನಡಿ ಪಾದ, (ಭಗವತ್ ಪಾದ) ಮತ್ತು ಏಳು ಬಿಸಿನೀರಿನ ಬುಗ್ಗಗಳು ಮುಂತಾದ ಪ್ರಾಚೀನ ಕ್ಷೇತ್ರಗಳನ್ನು ನೋಡಿಬಂದೆನು. ಕೊನೆಯ ದಿವಸ ದೊಡ್ಡ ಸಮಾರಂಭದಲ್ಲಿ 25 ಜನರಿಗೆ ಶಿವಲಿಂಗ ಧಾರಣವನ್ನು ಮಾಡಿದೆನಲ್ಲದೆ ಒಬ್ಬ ಸಾಧುವಿಗೆ ಲಿಂಗಧಾರಣ ಮಾಡಿದೆ.

ಅಲ್ಲದೆ ಒಂದು ಅಪೂರ್ವವಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ತಾಮ್ರ ಪಟವನ್ನೂ ಈ ಪ್ರಯಾಣದ ಸವಿನೆನಪಿಗಾಗಿ ಲಂಕೆಯಿಂದ ಭಾರತಕ್ಕೆ ರೇಣುಕಾಶ್ರಮದಿಂದ ತಂದಿರುವೆನು. ಅದರ ಅಪೂರ್ವವಾದ ಶಿಲ್ಪ ಕಲೆಯು ಭಾರತೀಯರಾದ ನಮ್ಮನ್ನು ಮುಗ್ಧಗೊಳಿಸುವಂತೆ ಮಾಡಿದೆ. ಅದು ದಿನಾಲು ನಮ್ಮ ಗುರುದಾರುಕಾಶ್ರಮದ ಮಠದಲ್ಲಿ ನಿತ್ಯವೂ ಶಿವಾರ್ಚನೆಯ ಕಾಲದಲ್ಲಿ ಭಕ್ತಿಯಿಂದ ಪೂಜಿಸಲ್ಪಡುತ್ತಿದೆ.

ಈ ಮೇಲ್ಕಂಡ ಎಲ್ಲ ಸಂಗತಿಗಳನ್ನು ಈಗಿನ ಶ್ರೀ ಮದ್ರಂಭಾಪುರಿ ವೀರಸಿಂಹಾಸನದ ವೀರತಪಸ್ವಿ ಶ್ರೀ ಶ್ರೀ ಶ್ರೀ 1008 ಜಗದ್ಗುರುಪ್ರಸನ್ನ ರೇಣುಕವೀರ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಗೆ ಅರಿಕೆ ಮಾಡಿಕೊಂಡಿದ್ದೇನೆ. ಅವರು ಒಮ್ಮೆ ಲಂಕೆಗೆ ದಯಮಾಡಿಸಿ ರೇಣುಕಾಶ್ರಮದಲ್ಲಿ ನೂತನವಾಗಿ



ಬೆಂಗಳೂರು ಗುರುದಾರುಕಾಶ್ರಮದ ವೇ|| ಶಾಸ್ತ್ರೀಮಠ ವೀರಯ್ಯನವರು ಲಂಕಾ (ಸಿಂಹಳ) ದಲ್ಲಿ ಪ್ರವಾಸ ಕೈಕೊಂಡಾಗ ತೆಗೆದ ಚಿತ್ರ.

ಕಟ್ಟಿರುವ ರೇಣುಕ ಮಂದಿರದಲ್ಲಿ ಲಿಂಗೋದ್ಭವ ಮೂರ್ತಿ ಪ್ರತಿಷ್ಠಾಪಿಸಿ ಸಿಂಹಳದ ವೀರಶೈವರನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿದ್ದೇನೆ. ಅದಕ್ಕೆ ಪೂಜ್ಯ ಜಗದ್ಗುರುಗಳವರು ಒಪ್ಪಿ ಸಿಂಹಳ ದ್ವೀಪಕ್ಕೆ ಎಷ್ಟೇ ಶ್ರಮವಾದರೂ ದಯಮಾಡಿಸಲು ಅಪ್ಪಣೆಯನ್ನು ಕೊಡಿಸಿದ್ದಾರೆ ಎಂದು ಮಹಾಜನಗಳಿಗೆ ತಿಳಿಸಲು ಹರ್ಷಿಸುತ್ತೇನೆ.

ಬೆಂಗಳೂರು ರಾಜಧಾನಿಗೆ ವೀರಶೈವ ಮತದ ಪಂಚ ಜಗದ್ಗುರುಗಳವರು ಒಟ್ಟಾಗಿ ಆಗಮಿಸುವ ಈ ಐತಿಹಾಸಿಕ ಸಂದರ್ಭದಲ್ಲಿ ಪಂಚಾಚಾರ್ಯರ ದರ್ಶನದ ಮೂಲಕ ನನ್ನ ಲಂಕೆಯ ಅನುಭವಗಳನ್ನು ಕರ್ನಾಟಕದ ಬಾಂಧವರಿಗೆ ಈ ಮೂಲಕವಾಗಿ ತಿಳಿಸಲು ನನಗೆ ಅವಕಾಶ ದೊರೆತಿರುವುದು ನನ್ನ ಮನಸ್ಸಿಗೆ ಹೆಚ್ಚು ನೆಮ್ಮದಿಯನ್ನುಂಟುಮಾಡಿದೆ.

ಸುಡಿಮುತ್ತುಗಳು

ಕಷ್ಟ ಕಾಲವು ಮನುಷ್ಯನ ಸದ್ಗುಣಗಳನ್ನು ಒರೆಗೆ ಹಚ್ಚುವ ನಿಕಷ.

ಪ್ರಾಪಂಚಿಕ ಆಶೋತ್ತರಗಳನ್ನು ಬಿಟ್ಟರೆ ಭಗವದ್ಭಕ್ತಿ ಮೂಡುವುದು.

ಅನಾಸಕ್ತಿಯಿಂದ ಕೂಡಿದ ಕರ್ಮವೇ ಭಗವಂತನಲ್ಲಿ
ಒಂದುಗೂಡುವ ದಾರಿ.

OUR SALUTATIONS TO
Jagadguru Panchacharyas

BHARAT AUTOMOBILES

POST BOX 28, B. H. ROAD
TUMKUR (KARNATAKA) INDIA.
Grams ; TF 380

. . . K. Y. PARAMSHIV

Phone : 380
Res : 516

ಲೇಖಕರು :

ಶ್ರೀ ಕೆ. ಎಸ್. ಜಯಸ್ವಾಮಿ ಅವರು

ಶ್ರೀ ಜಗದ್ಗುರು ಪಂಚಾಚಾರ್ಯರ ಪರಂಪರೆ ಮತ್ತು ಅನುಷ್ಠಾನ

ಭಾರತದಲ್ಲಿರುವ ಅನೇಕ ಮತಗಳಲ್ಲೆಲ್ಲಾ ಶಿವಾದ್ವೈತ ಮತವು ಗಣ್ಯವಾದದ್ದು. ಇದನ್ನು ವೀರಶೈವ ಸಿದ್ಧಾಂತ ಅಥವಾ ಶಿವದರ್ಶನವೆಂದು ಕರೆಯುತ್ತಾರೆ. ಲೋಕ ರೂಢಿಯಲ್ಲಿ ಶಿವ ಮತವೆಂದು ಪ್ರಸಿದ್ಧಿಯಾಗಿದೆ.

ಈ ವೀರಶೈವ ಮತವು ಅನಾದಿಯಾದುದು. ಯುಗಯುಗಗಳಿಂದಲೂ ಇದೆ. ಯುಗಯುಗಗಳಲ್ಲಿಯೂ ಶಿವನಿಂದ ಅನುಜ್ಞೆಯನ್ನು ಪಡೆದು ಅವತಾರಿಗಳು ಈ ಭೂಲೋಕದಲ್ಲಿ ಜನಿಸಿ ಶಿವಸಿದ್ಧಾಂತವನ್ನು ಪ್ರಚಾರಮಾಡುತ್ತಿದ್ದಾರೆ. ಅದೇ ಪ್ರಕಾರವಾಗಿ ಇಂದಿನ ಕಲಿಯುಗದಲ್ಲಿಯೂ ಐದು ಜನ ಆಚಾರ್ಯರು ಭಾರತಾದ್ಯಂತ ಶಿವಧರ್ಮವನ್ನು ನೆಲೆಗೊಳಿಸುತ್ತಿದ್ದಾರೆ. ಎಲ್ಲರಿಗೂ ಗೊತ್ತಿರುವಂತೆ ಉತ್ತರದ ಹಿಮಾಲಯದಲ್ಲೀ ಶ್ರೀ ಹಿಮವತ್ಕೇದಾರ ಕ್ಷೇತ್ರದಲ್ಲಿ ಶ್ರೀ ಏಕೋರಾಮಾರಾಧ್ಯರು, ಗಂಗಾ ತಟದಲ್ಲಿ ಶ್ರೀ ಕ್ಷೇತ್ರ ಕಾಶಿ (ವಾರಣಾಸಿ)ಯಲ್ಲಿ ಶ್ರೀ ವಿಶ್ವಾರಾಧ್ಯರು, ಶ್ರೀ ಉಜ್ಜಯನಿಯಲ್ಲಿ ಶ್ರೀ ದಾರುಕಾಚಾರ್ಯರು, ಮಧ್ಯಭಾರತದಲ್ಲಿ ಎಂದರೆ ಶ್ರೀ ಶೈಲದಲ್ಲಿ ಶ್ರೀ ಪಂಡಿತಾರಾಧ್ಯರು. ಕರ್ನಾಟಕ ಪ್ರಾಂತ್ಯದಲ್ಲಿ ಬಾಳೇಹೊನ್ನೂರಿನಲ್ಲಿ (ರಂಭಾಪುರೀ) ಶ್ರೀ ರೇಣುಕಾಚಾರ್ಯರು ಈ ಮತದ ಮಹತ್ವವನ್ನು ಪ್ರಚುರಪಡಿಸುತ್ತಿದ್ದಾರೆ. ಆ ಪರಂಪರೆಯಲ್ಲಿಯೇ ಬಂದಂತಹವರು ಈಗಿರುವ ಪೂಜನೀಯ ಜಗದ್ಗುರುಗಳು. ಶ್ರೀ ರಂಭಾಪುರೀ 1008 ಜಗದ್ಗುರು ಪ್ರಸನ್ನ ರೇಣುಕ ಭೀಷ್ಮ ಬ್ರಹ್ಮಚಾರಿ ವೀರತಪಸ್ವಿ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು—ಶ್ರೀ ರಂಭಾಪುರೀ ವೀರ ಸಿಂಹಾಸನಾಧೀಶ್ವರರು, ಶ್ರೀ ಉಜ್ಜಯನೀ 1008 ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು—ಶ್ರೀ ಉಜ್ಜಯನೀ ಸದ್ಧರ್ಮ ಸಿಂಹಾಸನಾಧ್ಯಕ್ಷರು. ಶ್ರೀಶೈಲ 1008 ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು,—ಶ್ರೀ ಶ್ರೀಶೈಲ ಸೂರ್ಯ ಸಿಂಹಾಸನಾಧ್ಯಕ್ಷರು. ಶ್ರೀ ಕಾಶೀ 1008 ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು—ಶ್ರೀ ಕಾಶೀ ಜ್ಞಾನ ಸಿಂಹಾಸನಾಧ್ಯಕ್ಷರು. ಶ್ರೀ ಕೇದಾರ 1008 ಜಗದ್ಗುರು ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು—ಶ್ರೀ ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರರು.

ಪಂಚಾಚಾರ್ಯರ ಉಗಮ ಹಾಗೂ ವೀರಶೈವ ಸಮಾಜ ಸುಧಾರಣೆಯ ಬಗ್ಗೆ ಈ ಲೇಖನ ಬರೆದಿರುವ ಶ್ರೀ ಕೆ. ಎಸ್. ಜಯಸ್ವಾಮಿ: ಅವರು ರಾಜ್ಯದ ಕಾಂಗಾರಿ ಇಲಾಖೆಯ ಜೂನಿಯರ್ ಇಂಜನಿಯರಾಗಿದ್ದಾರೆ. ಇವರು ಈಗಾಗಲೇ ಅನೇಕ ಕಥೆ, ಕವನಗಳನ್ನು ಬರೆದಿರುವವರಲ್ಲದೆ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ.

ಈ ಐವರು ಜಗದ್ಗುರುಗಳು ತಮ್ಮ ತಮ್ಮ ಪೀಠಗಳಿಗೆ ಅನುಕೂಲಕರವಾಗಿರುವಂತೆ ದೇಶದ ನಾನಾ ಭಾಗಗಳಲ್ಲಿ ಸಂಸ್ಥಾನ ಮಠಗಳನ್ನು ಸ್ಥಾಪಿಸಿದರು. ಆ ಮಠಗಳಲ್ಲಿ ಗುರುಗಳು ಅಥವಾ ಸ್ವಾಮಿಗಳು ವ್ಯವಸ್ಥೆಗಳನ್ನು ನೋಡಿಕೊಳ್ಳುವರು. ಇವರ ಕೆಳಗೆ ಉಪಮಠಗಳು ಸ್ಥಾಪಿತವಾದವು. ಇವುಗಳು ಶಾಖಾ ಮಠಗಳಾಗಿಯೂ ಮಹಂತರ ಮಠಗಳಾಗಿಯೂ ಖ್ಯಾತಿಯನ್ನು ಪಡೆದಿವೆ. ಇಂತಹ ಮಠಗಳಲ್ಲಿ ಚರಮೂರ್ತಿಗಳೆಂಬುವರು ಶಿವಾಚಾರ ಸಂಪನ್ನರಾಗಿ ಆ ಮಠದ ಸುತ್ತಮುತ್ತಣ ಭಕ್ತ ಶಿಷ್ಯರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಇವರು ನೇರವಾಗಿಯೋ ಅಥವಾ ತಮ್ಮ ಶಿಷ್ಯರುಗಳಾದ ಅಯ್ಯಾಚಾರದವರು ಅಥವಾ ಅಯ್ಯನವರುಗಳ ಮುಖಾಂತರವೋ ಸಮಾಜದ ವ್ಯಕ್ತಿಗಳೊಡನೆ ಸಂಪರ್ಕ ಪಡೆದಿರುತ್ತಾರೆ. ಅಂದರೆ ಇವರು ಸಮಾಜದ ಮನೆಗಳಲ್ಲಿ ನಡೆಯುವ ಹುಟ್ಟು, ಸಾವು, ಮದುವೆ ಮುಂತಾದ ಗೃಹಸ್ಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮಗಳು ಸಾಂಗವಾಗಿ ನಡೆಯಲು ಅನುವು ಮಾಡಿಕೊಡುತ್ತಿದ್ದಾರೆ. ಹೆಚ್ಚು ಜನ ಮತ ಬಾಂಧವರು ಒಂದೆಡೆ ಇದ್ದಲ್ಲಿ ಅಲ್ಲಿಯೇ ಇಂತಹ ಅಯ್ಯನವರಾಗಲೀ ಅಥವಾ ಸ್ವಾಮಿಗಳಾಗಲೀ ಇರಬೇಕಾಗುತ್ತದೆ.

ಹೀಗೆ ವ್ಯಕ್ತಿಯೊಡನೆ ನಿಕಟ ಸಂಪರ್ಕ ಪಡೆದವರು ಈ ಅಯ್ಯನವರು. ಇವರು ಮಹಂತರ ಮಠಗಳಿಗೆ ನಿಷ್ಠರಾಗಿ ಮಹಂತರ ಮಠಗಳವರು ಶಾಖಾಮಠಗಳಿಗೆ ನಿಷ್ಠರಾಗಿರುತ್ತಾರೆ. ಈ ಶಾಖಾಮಠಗಳು ಅಥವಾ ಸಂಸ್ಥಾನ ಮಠಗಳು ಆಯಾ ಪೀಠಕ್ಕೆ ಸೇರಿದ ಜಗದ್ಗುರುಗಳ ಆಜ್ಞಾನುವರ್ತಿಗಳಾಗಿರುತ್ತಾರೆ. ಇದು ಅನೂಚಾನವಾಗಿ ನಡೆದುಬಂದ ಪದ್ಧತಿ. ಇಂತಹ ವ್ಯವಸ್ಥೆ ಈಗ ಜಾಗೃತಿಕ ಜಗತ್ತಿನಲ್ಲಿರುವ ದೊಡ್ಡಮತವಾದ ಕ್ರೈಸ್ತಮತದಲ್ಲಿದೆ. ಮೊದಲು ಪ್ರಪಂಚಕ್ಕೆ ಒಬ್ಬ ಕ್ರೈಸ್ತ ಗುರು ಇಟಲಿಯ ವಾಟಿಕನ್ ಅರಮನೆಯಲ್ಲಿರುವ ಪೋಪ್, ಅವರ ಕೆಳಗೆ ಕಾರ್ಡಿನಲ್ಲುಗಳು, ಅವರ ಕೆಳಗೆ ನಾನಾದೇಶಗಳಲ್ಲಿರುವ ಕ್ರೈಸ್ತ ಗುರುಗಳು, ಅವರ ಕೆಳಗೆ ವಲಯದ ಮುಖ್ಯ ಗುರುಗಳು, ಅವರ ಕೆಳಗೆ ಬರುವವರು ಚರ್ಚುಗಳ ಪಾದ್ರಿಗಳು, ಅನಂತರ ಕ್ಲರ್ಜಿಮನ್‌ಗಳು.

ವೀರಶೈವ ಧರ್ಮದ ವ್ಯವಸ್ಥೆಯು ಮೇಲೆ ಸೂಚಿಸಿದ ಕ್ರಮದಲ್ಲಿ ಬಹಳ ಕಾಲ ನಡೆದು ಬಂದ ಬಳಿಕ ರಾಜಕೀಯ ಒತ್ತಡಗಳಿಂದ, ಚಾರಿತ್ರಿಕ ತೊಂದರೆಗಳಿಂದ ಪರಸ್ಪರ ಹೊಂದಾಣಿಕೆ ಅಥವಾ ಸಂಬಂಧವನ್ನು ಹೊಂದದೇ ಶಿಥಿಲವಾಯಿತು. ಇದರಿಂದ ವೀರಶೈವ ಮತದಲ್ಲಿ ಅನೈತಿಕತೆ ಜಾಸ್ತಿಯಾಯಿತು. ಅಂತಹ ಸಂದರ್ಭದಲ್ಲಿ ಶ್ರೀ ಬಸವೇಶ್ವರರು ಕಲ್ಯಾಣವನ್ನು ತಮ್ಮ ಕೇಂದ್ರವನ್ನಾಗಿಸಿಕೊಂಡು ವೀರಶೈವ ಮತವನ್ನು ಉದ್ಧಾರಮಾಡಿ ಸುಧಾರಿಸಿದರು. ಇದು ನಡೆದದ್ದು 12ನೇ ಶತಮಾನದಲ್ಲಿ.

ಕಾಲಕ್ರಮೇಣ ಮತಬಾಂಧವರು ಆಚರ ವಿಚಾರಗಳನ್ನು ಮರೆತು ವ್ಯವಹರಿಸಲು ಪ್ರಾರಂಭಿಸಿದರು. ಅಂತಹ ಸಂದರ್ಭದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಅವತರಿಸಿ ಧರ್ಮವನ್ನು ಮತ್ತೆ ಪ್ರಕಾಶಕ್ಕೆ ತಂದರು. ಇದು ನಡೆದದ್ದು 15ನೇ ಶತಮಾನದಲ್ಲಿ.

ಇದಾದ ಕೆಲವು ವರ್ಷಗಳಲ್ಲಿಯೇ ಭಾರತದ ಮೇಲೆ ಅನ್ಯ ದೇಶಿಯರ ಆಕ್ರಮಣ ನಡೆಯುತ್ತಾ ಬಂದಿತು. ಆಗ ಭಾರತದ ಇತರ ಧರ್ಮಗಳಂತೆಯೇ ವೀರಶೈವ ಧರ್ಮವೂ ಬಲವಾಗುತ್ತಾ ಬಂದಿತು. ಅಂತಹ ಸಂದರ್ಭಗಳಲ್ಲಿ ಅನೇಕ ವೀರಶೈವ ಗುರುಗಳು, ಹಿರಿಯರು ಶ್ರಮಿಸಿ ಮತದ ಅವನತಿಯನ್ನು ತಡೆದರು. ಅನೇಕ ಮಠಗಳ ಗುರುಗಳು ಇದುವರೆವಿಗೂ ಜ್ಞಾನ ದಾಸೋಹವನ್ನು ನಡೆಸುತ್ತಾ ಬಂದು ಮತೋನ್ನತಿಗೆ ಕಾರಣರಾಗಿದ್ದಾರೆ.

ಇತ್ತೀಚೆಗೆ 'ಅಖಿಲ ಭಾರತ ವೀರಶೈವ ಮಹಾಸಭೆ' ಎಂಬುದು ಸ್ಥಾಪಿಸಲ್ಪಟ್ಟು ಮತಬಾಂಧವರನ್ನು ಒಗ್ಗೂಡಿಸಲು ಸಹಾಯಕವಾಗಿದೆ. ಈ ಮಹಾಸಭೆಯಿಂದ ಜನರಲ್ಲಿ ಒಂದು ಜಾಗೃತಿಯುಂಟಾಯಿತು. ದೂರ ದೂರದ ಮತಬಾಂಧವರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶವಾಯಿತು. ಈಗ ನಡೆಯುತ್ತಿರುವ ಚರಿತ್ರಾರ್ಹವಾದ ಈ ಜಗದ್ಗುರುಗಳ ಸಮ್ಮೇಳನವು ಇಂತಹ ಹಿರಿಯರ ದೇಶದ ಶೆಟ್ಟರು ಯಜಮಾನರುಗಳ ಉನ್ನತ ಆದರ್ಶ, ಸಮಾಜಸೇವಾ, ಗುರುಪ್ರೇಮ, ಮತ್ತು ಸಹಾಯಗಳಿಂದಲೇ. ಇವರ ಈ ಮಹತ್ಕಾರ್ಯ ಆಚಂದ್ರಾರ್ಕವಾಗಿ ಉಳಿಯುವುದು. ಇಂತಹ ಒಂದು ಕ್ರಾಂತಿಕಾರಕವಾದ ಸಮ್ಮೇಳನಕ್ಕೆ ಅವಕಾಶ ಮಾಡಿಕೊಟ್ಟಂತಹ ದೇಶದ ಶೆಟ್ಟರು ಮತ್ತು ಯಜಮಾನರು ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷರು ಸದಸ್ಯರು (ಮಹನೀಯರು ಮತ್ತು ಮಹಿಳೆಯರು) ನಿಜಕ್ಕೂ ಪರಮಾತ್ಮನ ಕೃಪೆಗೆ ಪಾತ್ರರಾದಂಥವರು. ಈ ಸಂದರ್ಭದಲ್ಲಿ ನಮ್ಮ ವೀರಶೈವ ಸಮಾಜದ ಆಗುಹೋಗುಗಳ ಬಗ್ಗೆ ನಮ್ಮ ಮನಸ್ಸನ್ನು ತಿರುಗಿಸುವುದು ಸೂಕ್ತವಾದುದು.

ಇಂದಿನ ಸಮಾಜದಲ್ಲಿ ಲಿಂಗಾಯಿತರು ಅಥವಾ ವೀರಶೈವರೆಂದು ಕರೆಯಲ್ಪಡುವವರು ಆ ಜಾತಿಯಲ್ಲಿ ಹುಟ್ಟಿದ ಕಾರಣ ಮಾತ್ರದಿಂದ. ವಸ್ತುತಃ ಲಿಂಗವುಳ್ಳವರು ಲಿಂಗಮತರೆನ್ನಿಸಿಕೊಳ್ಳುತ್ತಾರೆ. ಹಿರಿಯರು ಲಿಂಗಪೂಜೆಯನ್ನು ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ಆದರೆ, ಹಿರಿಯರ ಗುರುಗಳ ಆಚಾರ ವಿಚಾರಗಳು, ನವತರುಣರಿಗೆ ಯಾವ ವಿಧವಾದ ಪರಿವರ್ತನೆಯನ್ನೂ ಉಂಟು ಮಾಡಿಲ್ಲ. ಅನೇಕರಿಗೆ ಪೂಜಾ ವಿಧಾನಗಳೇ ತಿಳಿಯದು. ಸರಿ

ಯಾದ ಮಾರ್ಗದರ್ಶನವಿಲ್ಲದೆ ಇಂದು ವೀರಶೈವ ಸಮಾಜ ಕ್ಷೀಣಿಸುತ್ತಿದೆ. "ಅಂಗದ ಮೇಲೆ ಲಿಂಗ ಧರಿಸಿದ್ದೆಡೆ ಅಧಿಕತರ ಪೂಜೆ" ಎಂದು ಶಿವಶರಣರು ತಿಳಿಸಿದ್ದರೂ ಅದಕ್ಕೆ ಇಂದು ಬೆಲೆಯಿಲ್ಲದಂತಾಗಿದೆ. ನಮ್ಮ ತರುಣ ಪೀಳಿಗೆಯನ್ನು ಸೂಕ್ತವಾದ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಎಂತಹ ಕಾರ್ಯಕ್ರಮಗಳನ್ನು ನಡೆಸಬೇಕೆಂಬುದನ್ನು ಕೂಲಂಕಷವಾಗಿ ವಿವೇಚಿಸಬೇಕು.

"ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನ" ಎಂಬ ನಾಣ್ಣುಡಿಯಂತೆ ಸಣ್ಣ ವಯಸ್ಸಿನಲ್ಲಿಯೇ ತಂದೆ ತಾಯಿಗಳು ಮಕ್ಕಳಿಗೆ ದೇವರ ಬಗ್ಗೆ ವಿಶ್ವಾಸ ಮೂಡಿಸಲು ಪ್ರಯತ್ನಿಸಬೇಕು. ದೊಡ್ಡವರಾಗುತ್ತಾ ಆಚಾರಗಳ ಬಗ್ಗೆ ತಿಳಿವಳಿಕೆ ಕೊಡಬೇಕು. ಅನಂತರ ಅನುಷ್ಠಾನಕ್ಕೆ ತರಲು ಅವಕಾಶ ಮಾಡಿಕೊಡಬೇಕು.

ಮಠಗಳಲ್ಲಿ ಸ್ವಾಮಿಗಳಿಗೆ ಸಾಧ್ಯವಾದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಆಚಾರ ವಿಚಾರಗಳ ಬಗ್ಗೆ ವಿವರಗಳನ್ನು ತಿಳಿಸಬೇಕು. ಈ ದಿಶೆಯಲ್ಲಿ ಶ್ರೀ ರಂಭಾಪುರಿ ವೀರಸಿಂಹಾಸನಾಧೀಶ್ವರರು ಮುಕ್ತಿ ಮಂದಿರದಲ್ಲಿ ಮಾಡುತ್ತಿರುವ ಶಿಕ್ಷಣ ಶಿಬಿರ ಸ್ತೋತ್ರಾರ್ಹವಾಗಿದೆ. ಹಾಗೆಯೇ ಶ್ರೀ ಹಾನಗಲ್ಲು ಕುಮಾರಸ್ವಾಮಿಗಳು ಮಹಾಕೂಟದ ಬಳಿ 'ಶಿವಯೋಗ ಮಂದಿರ'ದಲ್ಲಿ ಕೊಡುತ್ತಿರುವ ಶಿಕ್ಷಣವು ಗಮನಾರ್ಹವಾದುದು. ಇಂತಹ, ಕ್ರೈಸ್ತ ಮಿಷನರಿಗಳಂತೆ ಶಾಲೆಗಳನ್ನು ನಡೆಸಲು ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಬಹುದು.

ಸದ್ಯದಲ್ಲಿ ಮಠಗಳಲ್ಲಿ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಯುವಕರಿಗೆ ಮತ್ತು ಆಸಕ್ತರಾದ ಇತರರಿಗೆ ಮತವಿಚಾರಗಳ ಬಗ್ಗೆ ಬೋಧನಕ್ರಮವನ್ನು ಏರ್ಪಡಿಸಬೇಕು. ವಾರಕ್ಕೆ ಒಂದಾವರ್ತಿ ನಮ್ಮ ಮತದ ವಿಚಾರಗಳಾದ ಪಂಚಾಚಾರ, ಅಷ್ಟಾವರಣ, ಷಟ್‌ಸ್ಥಳ ಮುಂತಾದ ವಿಷಯಗಳ ಬಗ್ಗೆ ಬಲ್ಲವರಿಂದ ಉಪನ್ಯಾಸಗಳನ್ನು ಏರ್ಪಡಿಸಬೇಕು. ವ್ಯವಸ್ಥಿತವಾದ ಕ್ರಮಬದ್ಧವಾದ ಶಿವಪೂಜಾ ವಿಧಾನವನ್ನು ತಿಳಿಸಬೇಕು. ಸಾಧ್ಯವಾದರೆ ಶಿವಪೂಜೆಗೆ ಪ್ರಾಯೋಗಿಕಗಳನ್ನು ವ್ಯವಸ್ಥೆಮಾಡಿದರೆ ತಪ್ಪಾಗಲಾರದು. ಇದಕ್ಕೆ ತಕ್ಕಂಥ ಯೋಗ್ಯರನ್ನು ನೇಮಿಸಬೇಕು. ಈ ದಿಶೆಯಲ್ಲಿ ಈಗಾಗಲೇ ಧಾರವಾಡದ ಶಿವಾನುಭವ ಸಂಸ್ಥೆಯು ನಡೆಸುತ್ತಿರುವ ಪಾಠಪ್ರವಚನಗಳ ಪ್ರಾಮುಖ್ಯತೆಯು ಹಿರಿದಾದುದು. ಇದರಿಂದ ಈಗಾಗಲೇ ಸಾವಿರಾರು ಜನರು ವೀರಶೈವ ಸಿದ್ಧಾಂತದ ಬಗ್ಗೆ ತಿಳಿದುಕೊಳ್ಳಲು ಅವಕಾಶವಾಗಿ ನಿಯೋಜಿತವಾದ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿರುತ್ತಾರೆ.

ಇಷ್ಟೆಲ್ಲಾ ಪ್ರಾಥಮಿಕ ವ್ಯವಸ್ಥೆಯಾದ ಮೇಲೆ ಹೆಚ್ಚಿನ ವ್ಯಾಸಂಗಕ್ಕೆ ಪ್ರತ್ಯೇಕವಾದ ಕಾಲೇಜು ಅಥವಾ ಸಂಸ್ಥೆಯನ್ನು ಸ್ಥಾಪಿಸುವುದು ಸೂಕ್ತ. ಈ ಸಂಸ್ಥೆಯಲ್ಲಿ ಈಗಿನ ರಾಮಕೃಷ್ಣಮಠಗಳಂತಹ ವ್ಯವಸ್ಥೆಯಿದ್ದು ಬಸವಾದಿ ಪ್ರಮಥರು ಏರ್ಪಡಿಸಿದ್ದ ಅನುಭವ ಮಂಟಪದಂತೆ ವಿಚಾರವಿನಿಮಯಕ್ಕೆ ಅನುಕೂಲವಿರಬೇಕು. ಇಲ್ಲಿ ತರಬೇತಾದ ವ್ಯಕ್ತಿಗಳು ಮತ್ತೆ ಮಠ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಬೋಧಕರಾಗಿ ಬರಬೇಕಾಗುವುದು. ಕೆಲವರು ಶೈವಸಿದ್ಧಾಂತದ ಬಗ್ಗೆ ಉನ್ನತವಾದ ಸಂಶೋಧನೆಗೆ ತೊಡಗಬಹುದು. ಇದರಿಂದ ಇಡೀ ವೀರಶೈವ ಸಮಾಜ ಒಂದು ವ್ಯವಸ್ಥಿತವಾದ ಕಟ್ಟುಪಾಡಿಗೆ ನಿಲುಕುತ್ತದೆ. ಇಂದಿನ ಯುವಕರು ಮುಂದಿನ ಜನಾಂಗ. ಇಂದು ಹಿರಿಯರು, ಗುರುಗಳು ಸೂಕ್ತವಾದ ಮಾರ್ಗದರ್ಶನವನ್ನು ಕೊಡದಿದ್ದರೆ ಸಮಾಜವಾಗಲೀ ಮತಪದ್ಧತಿಯಾಗಲೀ ಊರ್ಜಿತವಾಗುವುದಿಲ್ಲ. ಉನ್ನತ ವ್ಯಾಸಂಗಕ್ಕೆ ಜಗದ್ಗುರು ಪೀಠಗಳು, ಮಠಗಳು ಆಶ್ರಯದಾತರಾಗಿದ್ದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಮತ್ತು ಶೋಭೆ ಬರುತ್ತದೆ. ಈಗಾಗಲೇ ಬೆಂಗಳೂರು ಮತ್ತು ಇತರ ಕಡೆಗಳಲ್ಲಿ ರೂಪುಗೊಳ್ಳುತ್ತಿರುವ "ಬಸವ ಭವನ"ದಿಂದ ಹೆಚ್ಚು ವ್ಯಾಪಕವಾದ ಕಾರ್ಯಕ್ರಮಗಳನ್ನು ನಿರೀಕ್ಷಿಸಬಹುದಾಗಿದೆ. ಈ ದಿಕ್ಕಿನಲ್ಲಿ ಗುರುಹಿರಿಯರ ಸೂಕ್ತ ನಿರ್ದೇಶನ ಬೇಕಾಗಿದೆ. ಮಠ ಮಾನ್ಯಗಳ ಸಂಪೂರ್ಣ ವ್ಯವಸ್ಥೆ ಮತ್ತು ಅವುಗಳಿಗೆ ಹೊಂದಿಕೊಂಡಿರತಕ್ಕಂಥ ಶಿಷ್ಯಕೋಟಿಗೆ ಮಾರ್ಗದರ್ಶನ ಬೇಕು. ಎಲ್ಲರೂ ಜಾಗ್ರತರಾಗಿ ಪರಂಪರಾನುಗತ ಪದ್ಧತಿಯನ್ನು ಈಗಿನ ಅಂತರ್ ಗ್ರಹಮಾನಕಾಲಕ್ಕೆ ತಕ್ಕಂತೆ ಸೂಕ್ತವಾಗಿ ಮಾರ್ಪಡಿಸಿಕೊಂಡರೆ ಈ ವೀರಶೈವ ಮತವು ಅನೂಚಾನವಾಗಿ ನಡೆದುಕೊಂಡು ಹೋಗಲು ದಾರಿಮಾಡಿಕೊಟ್ಟಂತಾಗುತ್ತದೆ.

ಅಂತಹ ಮತೋದ್ಧಾರ ಕಾರ್ಯಕ್ಕೆ ಜನಜಾಗೃತಿಗೆ ಜಗದ್ಗುರು ಶ್ರೀ ರೇಣುಕಾದಿ ಪಂಚಾಚಾರ್ಯರು ಸದಾ ಅನುಗ್ರಹಿಸಲಿ, ಆಶೀರ್ವದಿಸುತ್ತಿರಲಿ.

ನುಡಿಮುತ್ತುಗಳು

ಒಳ್ಳೆಯವರಾಗಿರಿ, ಒಳ್ಳೆಯದನ್ನೇ ಮಾಡಿರಿ.
ದಯಾಪರರಾಗಿರಿ, ಸಹಾನುಭೂತಿಯುಳ್ಳವರಾಗಿರಿ.

ಬೆಂಗಳೂರಿನ ಧಾರ್ಮಿಕ ಮಹೋತ್ಸವಕ್ಕೆ ಧನ್ಯವಾದಗಳು

Sri Lakshmi Lodge

Boarding, Lodging and Restaurant
4th Maid Road, :: Gandhinagar
BANGALORE-9

ನಗರದ ಅತ್ಯುತ್ತಮ ವಸತಿಗೃಹ ಮತ್ತು ಭೋಜನಗೃಹ,
ಪ್ರಥಮ ಸಂವರ್ಶನದಲ್ಲೇ ಸಂತೃಪ್ತಿ.

ಶ್ರೀ ಲಕ್ಷ್ಮೀ ಲಾಡ್ಜ್

ಬೋರ್ಡಿಂಗ್ — ಲಾಡ್ಜಿಂಗ್ — ರಸ್ಟೋರೆಂಟ್
4 ನೇ ಮೈನ್ ರಸ್ತೆ — ಗಾಂಧಿನಗರ
ಬೆಂಗಳೂರು - 9

ಪ್ರೊ : ಟಿ. ಎಸ್. ಶಂಕರಪ್ಪ * * * * ಫೋನ್ : 27657

ಶ್ರೀ ಷ ಬ್ರ|| ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು

ಶ್ರೀ ವೀರಶೈವ ಮತೋತ್ಪತ್ತಿ ಅಥವಾ ಪಂಚಾಚಾರ್ಯರ ಅವತಾರ

ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ||

ಯಾವ ಒಬ್ಬ ಸುಂದರವಾದ ಕರಕುಶಲ ಪ್ರೌಢಿಮೆಯುಳ್ಳ ಮಾನವನು ಎಷ್ಟೇ ಪ್ರಖ್ಯಾತಿಯನ್ನು ಹೊಂದಿದ್ದರೂ ಕೇವಲ ವರ್ಣನಾ ಮಾತ್ರದಿಂದ ವಸ್ತುವಿನ ಅದ್ಯತೆಯನ್ನು ಹೆಚ್ಚಿಸುವದಾಗಲಿ ಅದರ ಅನುಭವಾಮೃತವನ್ನು ಕರ್ಣಕ್ಕಾಗಲಿ ನೇತ್ರಕ್ಕಾಗಲಿ ಸುಸ್ಪಷ್ಟವಾಗಿ ಗೋಚರವಾಗುವಂತೆ ಮಾಡುವುದಾಗಲಿ ಸಾಧ್ಯವೇ ಇಲ್ಲ. ಆಯಾ ವಸ್ತುವಿನ ಸ್ವರೂಪಜ್ಞಾನವು ತನ್ನ ಹೃತ್ಪಟಲದ ಮೇಲೆ ಪ್ರತಿಬಿಂಬಿಸಿದಾಗ ಅದು ಚಿತ್ರೆಂಬ ಸಂಕೇತದೊಡನೆ ಸಮರಸ ಹೊಂದಿ ಅದರಿಂದುಂಟಾದ ಆನಂದ ಹೊರಹೊಮ್ಮಿದಾಗ ಆ ಆನಂದದ ನಿಜ ಸ್ವರೂಪವನ್ನು ಪರರಿಗೂ ವೇದ್ಯವಾಗುವಂತೆ ಮಾಡಲು ಆ ಭಾವನಾರೂಪ ಪ್ರತಿಮೆಯನ್ನು ಅರ್ಥಾತ್ ವಸ್ತುವನ್ನು ಚಿತ್ರಲೇಖನ ಮೂಲಕ ಪ್ರಕಟಗೊಳಿಸಲು ಕಾಗದ, ಹಲಗೆ, ಗೋಡೆ ಇವುಗಳು ಹೇಗೆ ಸಾಧನೆಗೆ ಕಾರಣೀಭೂತವೋ ಹಾಗೆಯೇ ಪರಶಿವನು ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ತ್ರಿಲೋಕಗಳಲ್ಲಿರುವ ಗೈರಿಕಾದಿ ಧಾತುಗಳೇ ಮೊದಲಾದ ಸಂಪದ್ಭರಿತವಾದ ವಸ್ತುಗಳನ್ನು ಬಿತ್ತರಿಸುವ ಚಿತ್ರರೂಪ ಲೇಖನಕ್ಕೆ ಅರ್ಥಾತ್ ಸೃಷ್ಟಿ ರಚನೆಗೆ ಮೂಲ ಆಧಾರ ಸ್ವರೂಪನೂ ಬೀಜಪ್ರಾಯನೂ ಭಿತ್ತಿಸ್ವರೂಪನೂ ಮೂಲ ಕಾರಣನೂ ಆಗಿರುತ್ತಾನೆ. ಆ ಸಚ್ಚಿದಾನಂದಮಯ ಪರಮಾತ್ಮನೇ ಗೋದಿಯಿಂದ ಅದರ ನುಚ್ಚು ಹೇಗೆ ಅಭೇದವೋ ಅದರಂತೆಯೇ ಚೇತನರೂಪ ಸಚ್ಚಿದಾನಂದಮಯ ಪರಬ್ರಹ್ಮನು ಸೃಷ್ಟ್ಯುತ್ಪತ್ತಿಗೆ ಬೀಜವೃಕ್ಷನ್ಯಾಯದಂತೆ ಅಭೇದ ಸ್ವರೂಪನಾಗಿದ್ದಾನೆ. "ಸದೇವ ಸೌಮ್ಯೇದ ಮಗ್ರ ಮಾಸೀತ್" "ಸತ್ಯಂ ಜ್ಞಾನಮನಂತಂಬ್ರಹ್ಮ" "ಆನಂದೋ ಬ್ರಹ್ಮೇತಿ ವ್ಯಜಾನಾತ್" ಇತ್ಯಾದಿ ಶೃತಿ ವಾಕ್ಯಗಳು ಬ್ರಹ್ಮನ ಸತ್, ಚಿತ್ ಆನಂದ ಸ್ವರೂಪಗಳನ್ನು ಮುಕ್ತಕಂಠದಿಂದ ಉದ್ಘೋಷಿಸುತ್ತಿವೆ. ಮತ್ತು ಈ ಚಿತ್, ಆನಂದ, ಜ್ಞಾನ ಕ್ರಿಯಾದಿಗಳು ಸಾಕ್ಷಾತ್ ಬ್ರಹ್ಮನ ಸ್ವರೂಪವಾಗಿವೆ, ಬ್ರಹ್ಮನಿಗೆ ಅಭಿನ್ನವಾಗಿವೆ. ಎಂದು ಮನವರಿಕೆಯಾಗುತ್ತದೆ. ಆದಾಗ್ಯೂ ಈ ಮಾತನ್ನು ಅಲ್ಲಗಳೆಯುವವರಿಗೆ "ಮಹಾದೇವೋ ದೇವಃ ತ್ರಯೀ ಮಾರ್ಗೋ ಮಾರ್ಗಃ ಯೋವಾಬ್ರೂತೇ ರುಜಿನಮನಮುನಯೋಃ" ಎಂದರೆ

ಸೊಲ್ಲಾಪುರದ ವೀರಶೈವ ಗುರುಕುಲದಲ್ಲಿ ಸಂಸ್ಕೃತ ಅಧ್ಯಯನ ಮಾಡಿರುವ ಶ್ರೀ ಷ|| ಬ್ರ|| ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಇದೀಗ ವೇದಾಂತ ಅಧ್ಯಯನನಿರತರಾಗಿದ್ದಾರೆ. ಪುರಾಣ ಪ್ರವಚನಾದಿಗಳಲ್ಲಿ ಉನ್ನತ ಪರಿಶ್ರಮ ಪಡೆದಿದ್ದಾರೆ. ಧರ್ಮದ ಉನ್ನತಿ, ಭಕ್ತಜನರ ಕಲ್ಯಾಣಕ್ಕೆ ಸತತ ಶ್ರಮಿಸುತ್ತಿದ್ದಾರೆ. ಇವರಿಂದ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ.

ಮಹಾದೇವನು ದೇವನಲ್ಲವೆಂದರೆ ವೇದಮಾರ್ಗ ಮಾರ್ಗವಲ್ಲವೆಂದರೆ ಅದು ನಾಸ್ತಿಕ ಪಂಥವಾಗುತ್ತದೆ ಎಂಬುದಾಗಿ ಶ್ರೀಕರ ಭಾಷ್ಯದಲ್ಲಿ ಶ್ರೀಪತಿಪಂಡಿತಾರಾಧ್ಯರು ಹೇಳಿ "ತಸ್ಮಾತ್ ಶಿವಾದ್ವೈತ ಮೇವ ಗ್ರಾಹ್ಯಂ" ಎಂಬುದಾಗಿ ಶ್ರೀಕರ ಭಾಷ್ಯದಲ್ಲಿ ಆನಂದಮಯಖಂಡದಲ್ಲಿ ವೀರಶೈವ ಸಿದ್ಧಾಂತವನ್ನು ಬಹು ರಮ್ಯವಾಗಿಯೂ ಸಮರ್ಪಕವಾಗಿಯೂ ಪ್ರತಿಪಾದಿಸಿದ್ದಾರೆ. ಮತ್ತು ಸ್ವತಂತ್ರತಾ, ಪರಿಪೂರ್ಣತಾ, ಸರ್ವಜ್ಞತಾ, ಸರ್ವಕರ್ತೃತ್ವಾದಿ ಅಪ್ರಾಕೃತಿಕ ಗುಣಗಳುಳ್ಳಾತನ ಪರಮ ಆನಂದದಿಂದ ಯಾವದು ಸಂತುಷ್ಟಗೊಳ್ಳುತ್ತಿದೆಯೋ ಸತ್ವರಜಃತಮೋಗುಣಗಳಿಗೆ.. ಅತೀತನಾದ ಹೇಯಗುಣ ರಹಿತನಾದ ಮಹಾ ವೈಭವಯುತನಾದ ಆ ಪರಮಾತ್ಮನಿಂದ ಈ ಜಗತ್ತು ಪ್ರಕಾಶಿಸುತ್ತದೆ.

"ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ" ಹಾಗೂ "ಕರಣಂಚ ನ ಶಕ್ತ್ಯಸ್ಯಾತ್" ಎಂಬುದಾಗಿ ಶೃತ್ಯರ್ಥ ಪ್ರಮಾಣವಿರುವದು. ಕರ್ತಾ ಸ್ವರೂಪನಾಗಿರತಕ್ಕ ಪರಶಿವನು ತನ್ನ ವಿಮರ್ಶಶಕ್ತಿ ಎಂಬ ಕರಣದ ಮೂಲಕ ಕಾರ್ಯರೂಪ ಜಗತ್ತನ್ನು ನಿರ್ಮಿಸುತ್ತಾನೆ. ಹೇಗೆ ಕರ್ತಾರೂಪ ಕುಂಭಕಾರನು ಕರಣ ರೂಪ ಮೃತ್ತಿಕೆಯಿಂದ ಕಾರ್ಯರೂಪ ಘಟವನ್ನು ನಿರ್ಮಿಸುತ್ತಾನೆಯೋ ಹಾಗೆ ಶಿವನು ಇಚ್ಛಾ ಮಾತ್ರದಿಂದ ಜಗತ್ತನ್ನು ಸೃಷ್ಟಿಸುತ್ತಾನೆ. ಆದರೆ ಕುಂಭಕಾರನಂತೆ ಶಿವನು ಉಪಕರಣಗಳನ್ನು ಅಪೇಕ್ಷಿಸುವುದಿಲ್ಲ. "ನಾನ್ಯೋಪಕರಣಾಪೇಕ್ಷಃ ಶಿವಃ" ಎಂದು ಪ್ರಾಚೀನ ಪ್ರಮಾಣ ವಿದೆ ಮತ್ತು "ಘನಗಂಭೀರ ಮಹಾಂಬುಧಿಯಲ್ಲಿ ಫೇನ ಬುದ್ಬುಧ ತರಂಗಗಳುದಯವಲ್ಲದೆ ಬೇರಾಗಬಲ್ಲವೇ? ಆತ್ಮನೆಂಬಂಬುಧಿಯಲ್ಲಿ ಬ್ರಹ್ಮಾಂಡ ಕೋಟಿಗಳುದಯವಲ್ಲದೆ ಬೇರಾಗ ಬಲ್ಲವೇ? ಅದರಂತೆ ಶಿವ ತನ್ನ ವಿನೋದಕ್ಕೆ ಸೃಷ್ಟಿಸಿದನೀ ವಿಶ್ವವನು. ವಿಶ್ವವನು ಸೃಷ್ಟಿಸಿದವನು ವಿಶ್ವಕ್ಕಿಂತ ಹೊರಗಾದನೇ? ಇಲ್ಲ. ವಿಶ್ವಮಯ ತಾನಾದನು. ನಮ್ಮ ವಿಶ್ವೇಶ್ವರನು ಜಗವಾಗಲು ಬಲ್ಲ. ಜಗವಾಗದಿರಲೂ ಬಲ್ಲ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ" ಎಂದು ಮುಂತಾಗಿ ಶಿವನಿಂದಲೇ ವಿಶ್ವಸೃಷ್ಟಿ ಎಂಬುದನ್ನು ಮೇಲಿನ ವಾಕ್ಯಗಳು ಆಮೂಲಾಗ್ರವಾಗಿ ಸಮರ್ಥಿಸುತ್ತವೆ. "ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ಸತ್ವತ್ಯಚ್ಚಾಭವತ್" ಇಂತೆಂದು ಶೃತಿಪ್ರಮಾಣವು ಪ್ರಸಿದ್ಧವಿದೆ. ಮತ್ತು "ಸ್ವೇಚ್ಛಾವಿಗ್ರಹ ಯುಕ್ತಾಯ ಸ್ವೇಚ್ಛಾವರ್ತನ ವರ್ತಿನೇ॥ ಸ್ವೇಚ್ಛಾಕೃತ ತ್ರಿಲೋಕಾಯ ನಮಃ ಸಾಂಬಾಯ ಶಂಭವೇ॥" ಎಂಬ ಶಿವಸಿದ್ಧಾಂತ ಶಿಖಾಮಣಿಯ ಶಾಸನೋಕ್ತಿಯಂತೆ ಸರ್ವತಂತ್ರ ಸ್ವತಂತ್ರನೂ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹಗಳೆಂಬ ಪಂಚ ಕೃತ್ಯಾಧೀಶ್ವರನೂ ವಿಶ್ವಕಲ್ಯಾಣ ಸಂಭವನೂ ಆದ ಶಂಕರನು ಭಕ್ತಾನುಗ್ರಹಕ್ಕಾಗಿ ಸ್ವೇಚ್ಛೆಯಿಂದ ನಾನಾವಿಧ ದಿವ್ಯ ಮಂಗಲ ವಿಗ್ರಹ ರೂಪವನ್ನು ಧರಿಸುವವನೂ ಸ್ವೇಚ್ಛಾ ವರ್ತನವುಳ್ಳವನೂ ಆಗಿ ತನ್ನಲ್ಲಿ ಅಡಕವಾದ ಇಚ್ಛಾಶಕ್ತಿಯಿಂದ ತ್ರಿಭುವನಗಳನ್ನು ನಿರ್ಮಿಸಿದನು. "ತದೈಕ್ಷತ ಬಹುಸ್ಯಾಂ ಪ್ರಜಾಯೇಯ" ಎಂಬ ಶೃತಿಯಂತೆ ಏಕಾಕಾರವಾಗಿದ್ದ ಶಿವನಿಗೆ ಬಹುರೂಪವನ್ನು ಹೊಂದಬೇಕೆಂಬ ಇಚ್ಛೆಯುಂಟಾಯಿತು. ಆದ್ದರಿಂದ ತನ್ನ ಇಚ್ಛೆಯಿಂದಲೇನೆ ಬಹುರೂಪವಾದ ಈ ಜಗತ್ತಿನ ಸ್ವರೂಪವನ್ನು ಇಚ್ಛಾ ಮೂಲಕ ಪಡೆದಿದ್ದಾನೆ. ಪ್ರಯುಕ್ತ ಪ್ರತಿಯೊಂದು ಕಾರ್ಯವು ಪರಶಿವನ ಪ್ರೇರಣಾ ಮಾತ್ರದಿಂದಲೇ ಉದಯೋನ್ಮುಖವಾಗುತ್ತಿರುವಂತೆ ಸೃಷ್ಟಿಯೂ ಸೃಷ್ಟಿಯೊಳಗಿನ ಸಂಪತ್ತನ್ನುಪಭೋಗಿಸುವ ಜೀವಿಯೂ ಅವನ ಚಲನವಲನಾದಿ ಕ್ರಿಯೆಗಳಿಗೆ ಆಜ್ಞಾಕರ್ತನಾದವನು ಸಾಕ್ಷಾಚ್ಛಿವನೇ ಆಗಿರುವನು. ಈಶನ ಪ್ರೇರಣೆಯಿಲ್ಲದೆ ತ್ರಿಭುವನಗಳಲ್ಲಿಯೂ ಯಾವ ಅಲ್ಪ ಕಾರ್ಯವೂ ನಡೆಯುವದಿಲ್ಲ. "ವಾಲಾಗ್ರ ಶತ ಭಾಗಸ್ಯ ಶತಧಾ ಕಲ್ಪಿತಸ್ಯಚ। ಭಾಗೋ ಜೀವಃ ಸವಿಜ್ಞೇಯಃ ಸಚಾನಂತ್ಯಾಯ ಕಲ್ಪತೇ। ನೈವಸ್ತ್ರೀ ನಪುಮಾನೇಷ ನಚೈವಾಯಂ ನಪುಂಸಕಃ॥ ಯದ್ಯಚ್ಛರೀರ ಮಾಧತ್ತೇ ತೇನ ತೇನ ಸಯುಜ್ಯತೇ॥" "ಅಂಶೋ ನಾನಾ ವ್ಯಪ ದೇಶಾತ್" ಎಂಬ ಶೃತಿ ಪ್ರಮಾಣಗಳಂತೆ ಪರಶಿವನು ಪ್ರತಿ ಜೀವಿಗಳಲ್ಲಿ ಅಣುರೂಪದಿಂದ ಅವರ ಹೃದಯಾಂತರಾಳದಲ್ಲಿದ್ದುಕೊಂಡು ಕರ್ತವ್ಯ ಕರ್ಮಗಳನ್ನು ನಿಯಂತ್ರಿಸುತ್ತಿರುತ್ತಾನೆ. ಇಂತಹ ಯಾವ ಸರ್ವತೋಮುಖವಾದ ಆ ಶಿವನ ಶಕ್ತಿಯು ಜಗತ್ತಿಗೆ ಆಜ್ಞಾಧಾರಕವಾಗಿದ್ದು ಶಿವಲಿಂಗದಲ್ಲಿ ಅಡಕವಾಗಿದೆ. (ಬೀಜವೃಕ್ಷ ನ್ಯಾಯದಂತೆ) ಇದು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿ ಬಂದಿರುವದು. ಇಲ್ಲಿ ಶಿವನು ಲಿಂಗ, ಬ್ರಹ್ಮ, ಪರಮ, ಸ್ಥಲ ಇತ್ಯಾದಿ ಶಬ್ದಗಳಿಂದ ಕರೆಯಲ್ಪಡುತ್ತಾನೆ. ಅವನು ಒಬ್ಬನೇ. "ಏಕಮೇವಾದ್ವಿತೀಯಂ" "ಏಕೋಹಿ ರುದ್ರೋನ ದ್ವಿತೀಯಾಯ ತಸ್ಥುಃ" ಇತ್ಯಾದಿ ಶೃತಿಗಳಿಂದ ಶಿವನಿಗೆ ಏಕತ್ವವೂ ನ್ಯಾಯಬದ್ಧವಾಗಿದೆ.

ಹೀಗಿರುವಾಗ ಒಂದು ಸಲ ಸೃಷ್ಟಿಕರ್ತ ಬ್ರಹ್ಮನು ರಕ್ಷಣಾಕರ್ತ ವಿಷ್ಣುವು ಪರಸ್ಪರ ಮೇಲ್ಮೆಗಾಗಿ ವಾದಗ್ರಸ್ತರಾದರು. ವಾದವು ವಿಕೋಪಕ್ಕೆ ಹೋಯಿತು. ಘನ ಘೋರ ಯುದ್ಧವೇ ಆರಂಭವಾಯಿತು. ಬೇಲಿಯು ಎದ್ದು ಹೊಲ ಮೇಯುವಾಗ ಸಾಕ್ಷಿಗೆ ಆಸ್ಪದವೇ ಇಲ್ಲದಂತೆ ಇವರೀರ್ವರ ಕಚ್ಚಾಟದಲ್ಲಿ ಮಧ್ಯೆ ಪ್ರವೇಶಿಸಿ ತೀರ್ಮಾನ ಮಾಡಲು ಯಾರಿಗೂ ಅವಕಾಶ ಇಲ್ಲವಾಯಿತು. ಆಗ ಇಂತಹ ಭೀಕರ ಪರಿಸ್ಥಿತಿಯಿಂದ ಭಯಗ್ರಸ್ತರಾದ ಇಂದ್ರಾದಿ ಸಕಲ ದೇವತೆಗಳು ಪರಶಿವನನ್ನು ಮೊರೆಹೊಕ್ಕರು. ಯೋಗ ಮುದ್ರೆಯಲ್ಲಿದ್ದ ಶಿವನು ಇವರ ಜಗಳವನ್ನು ಸೂಕ್ಷ್ಮರೂಪದಿಂದ ಅವಲೋಕಿಸಿದನು. ಆದರೆ ಅತ್ಯಂತ

ದಾರುಣ ಸನ್ನಿವೇಶ ಸಂಭವಿಸುವುದನ್ನು ಗ್ರಹಿಸಿ ತತ್ಕಾಲದಲ್ಲಿ ಅವರೀರ್ವರ ಮಧ್ಯೆ ಭೂಮ್ಯಾಕಾಶಗಳನ್ನು ಒಂದುಗೂಡಿಸುವಂತೆ ಸ್ತಂಭಾಕಾರನಾಗಿ ಅವರಿಗೆ ಗೋಚರನಾದನು. ಆಗ ಅವರಿಬ್ಬರ ಮಧ್ಯೆ ತಿಳಿಯಲಶಕ್ಯವಾದ ವಸ್ತುವೊಂದು ಪ್ರಕಟವಾದದ್ದನ್ನು ನೋಡಿ ಆಶ್ಚರ್ಯ ಚಕಿತರಾದರು. ಇವರೀರ್ವರ ಗರ್ವಭಂಗವನ್ನುಂಟು ಮಾಡಲು ಒಬ್ಬರ, ಶಿರಸ್ಸನ್ನು ಒಬ್ಬರು ಪಾದವನ್ನು ಕಂಡು ಬರಬೇಕೆಂದು ಅಶರೀರವಾಣಿಯಾಯಿತು. ಅದರಂತೆ ಅವರು ಪ್ರಯತ್ನಿಸಿ ವಿಫಲರಾದಾಗ ಪರಶಿವನು ನಿಜ ಸ್ವರೂಪದಿಂದ ಪ್ರಕಟನಾಗಿ ನಿಮ್ಮೆಲ್ಲರ ನಿಯಂತ್ರಣ ಕರ್ತನಾದ ಪರಮಾತ್ಮನು ಒಬ್ಬನು ಇದ್ದಾನೆಂದು ತಿಳಿಯಿರಿ. ಪಂಚಕೃತ್ಯಾಧೀಶ್ವರರಿಗೂ ಅವನು ಒಡೆಯನೆಂದು ಭಾವಿಸಿರಿ. ಅವನ ಘನವಾದ ಕೃಪಾಕಟಾಕ್ಷವಿಲ್ಲದೆ ಯಾರೂ ಯಾವದೇ ಸ್ಥಾನವನ್ನಾಗಲೀ ಘನತೆಯನ್ನಾಗಲೀ ಹೊಂದಲು ಸಾಧ್ಯವೇ ಇಲ್ಲ. ಪ್ರಯುಕ್ತ, ಇಚ್ಛಾಪುರುಷರು ಆತನ ಅನುಸಂಧಾನವನ್ನು ಮಾಡುವದು ಯಥೋಚಿತವಾಗಿದೆ. ಎಂದು ಹೇಳಿದನು. ಆಗ ಅವರು ಆ ದಿವ್ಯ ತೇಜೋವಿಶಿಷ್ಟನಾದ ವಿಗ್ರಹ ರೂಪ ಪರಮಾತ್ಮನನ್ನು ಆರಾಧಿಸುವ ಕ್ರಮವನ್ನು ಉಪದೇಶಿಸಬೇಕೆಂದು ಪ್ರಶ್ನಿಸಿದರು. ಅದಕ್ಕೆ ಆ ಪರಮಾತ್ಮನು ಅವರ ಇಷ್ಟದಂತೆ ಸರ್ವರೂ ಪೂಜಿಸಿ ಧನ್ಯರಾಗಲೆಂಬ ಉದ್ದೇಶದಿಂದ ಮಂದಿರಗಳಲ್ಲಿ ಸ್ಥಾಪಿಸಲು ಯೋಗ್ಯವಾದ ಈಶ್ವರಾಕಾರವಾಗಿ ಸ್ಥಾವರ ಲಿಂಗವಾಗಿಯೂ ದೇಹದಲ್ಲಿ ಧರಿಸಿ ಪೂಜಿಸಲರ್ಹವಾದ ಅಂಗುಷ್ಠಪ್ರಮಾಣ ಚತುರಂಗುಷ್ಠ ಪ್ರಮಾಣವುಳ್ಳ ಇಷ್ಟಲಿಂಗಾಕಾರವಾಗಿಯೂ ಪ್ರಕಟವಾಗಿ ಇವುಗಳನ್ನು ಗುರುಗಳಿಂದ ದೀಕ್ಷಾಬದ್ಧರಾಗಿ ಲಿಂಗಗಳನ್ನು ಪಡೆದುಕೊಂಡು ಉಪದೇಶ ಕ್ರಮವನ್ನನುಸರಿಸಿ ದಿವ್ಯತರವಾದ ಪರಮ ಪಂಚಾಕ್ಷರೀ ಮಂತ್ರೋಪದೇಶವನ್ನು ಹೊಂದಿ ತದೇಕಚಿತ್ತದಿಂದ ಅನುಷ್ಠಾನ ಮಾಡಿ ಅಭಿಲಷಿತ ಫಲಗಳನ್ನು ಹೊಂದಿ ತೃಪ್ತರಾಗಿರೆಂದು ಅಪ್ಪಣೆ ಕೊಡಿಸಿದನು. ಗುರೂಪದೇಶ ಕ್ರಮವೆಂದಾಕ್ಷಣದಲ್ಲಿಯೇ ಅವರು ಬೇರೆ ಗುರುಗಳನ್ನು ಅರಸಿಕೊಂಡು ಹೋಗುವದಕ್ಕಿಂತ ನೀನೇ ಉಪದೇಶವನ್ನು ಮಾಡಿ ನಮಗೆಲ್ಲ ಗುರುವಾಗಬೇಕು ಎಂದು ಪ್ರಾರ್ಥಿಸಿಕೊಂಡಾಗ ಪರಶಿವನು ತನ್ನದೇ ಆದ ಶಿವಧರ್ಮವನ್ನು ಪರಿಪಾಲನ ಮಾಡುವುದಕ್ಕಾಗಿ ತನ್ನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯಗಳೆಂಬ ಪಂಚಮುಖಗಳಿಂದ ಸ್ವಸ್ವರೂಪರಾದ, ಸ್ವಶಕ್ತಿಸಂಪನ್ನರಾದ ಐವರು ಆಚಾರ್ಯರು ಯೋನಿಜರಾಗದೆ ಅಯೋನಿಜರಾಗಿ ಶಿವಲಿಂಗದಿಂದಲೇ ಉದಯಿಸಿ ಉಪಾಸನಾ ಯೋಗ್ಯವಾದ ಶಿವತತ್ವವನ್ನು ಉಪದೇಶಿಸುವರು. ಮತ್ತು ಪರಮ ಪವಿತ್ರವಾದ ಶಿವ ಪಂಚಾಕ್ಷರಿ ಮಂತ್ರವನ್ನು ಬೋಧಿಸುವರು. ಅವರ ಉಪದೇಶ ಕ್ರಮದಂತೆ ಪರಶಿವನ ಉಪಾಸನೆಯನ್ನು ಮಾಡಿ ನಿಮ್ಮ ಇಷ್ಟಾರ್ಥಗಳನ್ನು ಹೊಂದಿ ನಿತ್ಯಸುಖಿಗಳಾಗಿರೆಂದು ಅಪ್ಪಣೆ ಕೊಡಿಸಿದ ವಿಷಯವು ಶಿವಾಗಮೋಪನಿಷತ್ ಸಾರಗರ್ಭಿತವಾದ ಶಿವಮಹಾಪುರಾಣಗಳಲ್ಲಿ ಉಕ್ತವಾಗಿರುವುದು. ಶಿವಮಹಾಪುರಾಣದ 32ನೇ ಅಧ್ಯಾಯ 14ನೇ ಶ್ಲೋಕದಲ್ಲಿ "ಯುಗಾವರ್ತೇಷು ಶಿಷ್ಯೇಷು ಯೋಗಾಚಾರ್ಯ ಸ್ವರೂಪಿಣಾ॥ ತತ್ರ ತತ್ರಾವತೀರ್ಣೇನ ಶಿವೇನೈವ ಪ್ರವರ್ತತೇ" ಅಂದರೆ ಪ್ರತಿ ಚತುರ್ಯುಗಗಳಲ್ಲಿಯೂ ಶಿವನು ಶಿಷ್ಯ ಸಮೇತನಾಗಿ ಯೋಗಾಚಾರ್ಯನೆಂಬ ಗುರುವಿನ ರೂಪವನ್ನು ಧರಿಸಿ ಲೋಕದಲ್ಲಿ ಅಲ್ಲಲ್ಲಿ ಅವತರಿಸಿ ಶಿವಧರ್ಮ ಪಾಲನೆಯನ್ನು ಮಾಡುವುದಾಗಿ ಆ ಪರಶಿವನು ನಿರೂಪಿಸಿದ್ದಾನೆ. ವಸ್ತು ಸ್ಥಿತಿಯು ಹೀಗಿದ್ದರೂ ಅದನ್ನು ಅಜ್ಞಾನದಿಂದ ತಿಳಿಯದಿರುವವನು ದಡ್ಡನೆನಿಸಿಕೊಂಡು ಕೆಟ್ಟಬುದ್ಧಿಯುಳ್ಳವನಾಗಿ ನಾಶವನ್ನು ಹೊಂದವನು.

ಮತ್ತು "ತಾನ್ ಸರ್ವಾನ್ಮನ್ಮುಖೋದ್ಭೂತಾಷ್ಟವಿಂಶತ್ಯಾಗಮೇಷು ಅಸುರ ಮೋಹಕ ವೇದ ವಿರುದ್ಧಾನ್ ದ್ವಾದಶೋಪಾಗಮಾನ್ ವಿಹಾಯ ಸಕಲವೇದಾರ್ಥ ನಿರ್ಣಾಯಕಾಷ್ಟಾದಶ ಸದಾಗಮೋಕ್ತ ಪ್ರಕಾರೇಣ ಮಮ ಸದ್ಯೋಜಾತಾದಿ ಪಂಚ ಮುಖೋದ್ಭೂತೈಃ"॥ ಎಂದು ಸುಪ್ರಭೇದಾಗಮದಲ್ಲಿ ಉಕ್ತವಾದ ಪ್ರಯುಕ್ತ ಕೃತಯುಗದಲ್ಲಿ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ ಪಂಚಾಕ್ಷರ ಎಂಬ ಹೆಸರುಗಳುಳ್ಳ ಪಂಚ ಯೋಗಾಚಾರ್ಯರು ಲಿಂಗದಿಂದುದ್ಭವಿಸಿ ಬ್ರಹ್ಮಾದಿಸಕಲ ದೇವತೆಗಳಿಗೂ ನೀಲಮಯವಾದ ಶಿವಲಿಂಗ ಧಾರಣ ಮಾಡಿಸಿ ಶಿವ ಪಂಚಾಕ್ಷರೀ ಮಂತ್ರೋಪದೇಶ ಮಾಡಿ ಮೋಕ್ಷಮಾರ್ಗವನ್ನು ತೋರ್ಪಡಿಸಬೇಕು. ತ್ರೇತಾಯುಗದಲ್ಲಿ ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರ್ವಕ್ತ್ರ, ಪಂಚವಕ್ತ್ರರೆಂಬ ಹೆಸರುಗಳುಳ್ಳ ಪಂಚಾಚಾರ್ಯರಿಂದ ಕೌಶಿಕ, ವಸಿಷ್ಠ, ಕಶ್ಯಪಾದಿ ಮಹರ್ಷಿಗಳಿಗೂ ಮನುಷ್ಯ ವರ್ಗಕ್ಕೂ ರತ್ನಮಯ ಶಿವಲಿಂಗ ಧಾರಣೆಯಿಂದ ಮಂತ್ರೋಪದೇಶಗೈದು ಮೋಕ್ಷಮಾರ್ಗವನ್ನು ಬೋಧಿಸಬೇಕು. ದ್ವಾಪರಯುಗದಲ್ಲಿ ರೇಣುಕ, ದಾರುಕ, ಶಂಖಕರ್ಣ, ಧೇನುಕರ್ಣ, ವಿಶ್ವಕರ್ಣ ಎಂಬ ಹೆಸರಿನ ಪಂಚಾಚಾರ್ಯರಿಂದ ಹದಿನಾರು ಮಹಾರಾಜರನ್ನು ಹರಿಶ್ಚಂದ್ರ, ನಳ, ಪುರು, ಕುತ್ಸ, ಪುರೂರವ ಮುಂತಾದ ಚಕ್ರವರ್ತಿಗಳಿಗೂ ವಜ್ರಮಯ ಶಿವಲಿಂಗ ಧಾರಣೆಯಿಂದ! ಮಂತ್ರೋಪದೇಶ ಪೂರ್ವಕ ಮೋಕ್ಷಮಾರ್ಗಾವಲಂಬಿಗಳಾಗುವಂತೆ ಮಾಡಬೇಕು. ಕಲಿಯುಗದಲ್ಲಿ ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾಧ್ಯ, ಪಂಡಿತಾರಾಧ್ಯ ವಿಶ್ವಾರಾಧ್ಯ ಎಂಬ ಹೆಸರಿನ ಪಂಚಾಚಾರ್ಯರುದ್ಭವಿಸಿ ಬ್ರಾಹ್ಮಣಾದಿ ಚಾತುರ್ವರ್ಣ್ಯಗಳ ಮಾನವವರ್ಗದಲ್ಲಿ ಯೋಗ್ಯರಾದ ಅಧಿಕಾರಯುತ್ತ ಜನತೆಗೆ ಶಿವಲಿಂಗವನ್ನು ಅನುಗ್ರಹಿಸಿ ಶಿವತತ್ವವವನ್ನುಪದೇಶಿಸಿ ಶಿವಪಂಚಾಕ್ಷರಿ ಮಂತ್ರವನ್ನು ಬೋಧಿಸಿ ಮೋಕ್ಷಮಾರ್ಗವನ್ನು ತೋರಿಸಬೇಕು. ಇಂತೆಂಬುದಾಗಿ ವೇದಾಗಮೋಪನಿಷತ್ತುಗಳ ಪ್ರಮಾಣೋಕ್ತಿಗಳು ಸೂರ್ಯಪ್ರಕಾಶದಷ್ಟು ಪ್ರಜ್ವಲವಾಗಿವೆ. ಮತ್ತು "ಕಲೌ ತದ್ವಂಶ ಜಾತಾನಾಂ

ದೀಕ್ಷಾನುಗ್ರಹಕಾರಣಾತ್॥ ನಿಧಾಯ ನಿಜಶಿಷ್ಯಾಂಶ್ಚ ಪುನಸ್ತೇ ಮಾಂ ಸಮಾಗತಾಃ ॥" ಅಂದರೆ ಭಕ್ತರ ಮತ್ತು ಅವರ ವಂಶಜರ ದೀಕ್ಷಾನುಗ್ರಹಗಳಿಗಾಗಿ ಮುಖ್ಯ ಪೀಠಗಳಾದ ಬಾಳೆಹೊನ್ನೂರು-ಉಜ್ಜಯನಿ-ಕೇದಾರ- ಶ್ರೀ ಶೈಲ-ಕಾಶಿ ಮಹಾಕ್ಷೇತ್ರಗಳೆನಿಸಿದ ಪಂಚ ಪೀಠಗಳ ಮೂಲಸ್ಥಾನಗಳಲ್ಲಿ ತಮ್ಮ ಪಟ್ಟದ ಶಿಷ್ಯರನ್ನು ಇರಿಸಿ ಪುನಃ ಶಿವಸಾನ್ನಿಧ್ಯದಲ್ಲಿ ಸೇರುತ್ತಾರೆ ಎನ್ನುವ ಮಾತು ನಿರ್ವಿವಾದವಾಗಿದೆ. ಈ ವಿಷಯದಲ್ಲಿ ವೀರಶೈವ ಮತವು ಪ್ರಾಚೀನವಾದುದೆಂದು ನಂಬಿಕೆ ಇಟ್ಟಿದ್ದರೂ ಮತದ ಸ್ಥಾಪಕರು ಯಾರು ಎಂಬುದು ಇನ್ನೂ ಕೆಲವರು ನಿರ್ಧಾರವಾಗಿಲ್ಲವೆಂದು ವಾದಿಸುತ್ತಾರೆ. ಇವರೀ ವಾದವು "ವಂಶವೇನೋ ಒಳ್ಳೆಯದೇ ಆದರೆ ಜನಕನಾರೋ? ಗೊತ್ತಾಗುವುದಿಲ್ಲ" ಎನ್ನುವಂತಿದೆ. ! ಮತ್ತು ಪ್ರಸ್ತುತದಲ್ಲಿ ಹತ್ತು ಜನ ಕುರುಡರು ಆನೆಯನ್ನು ಸವರಿ ತಿಳಿದು ತಮ್ಮದೇ ಆದ ಅಭಿಪ್ರಾಯಗಳನ್ನು ಸಿದ್ಧಾಂತಪಡಿಸುತ್ತಿರುವಂತೆ ನಾನಾ ಆದರ್ಶಗಳನ್ನು ಸಾರುತ್ತಿದ್ದರೂ ಒಳ್ಳೆಯವಾದವುಗಳನ್ನು ತಿಲಮಾತ್ರವೂ ಸಾಧಿಸಲಾಗದಿರುವುದು ಈಗಿನವರಲ್ಲಿ ದೋಷಪೂರ್ಣವಾಗಿ ಪರಿಣಮಿಸಿದೆ. ನೈಸರ್ಗಿಕ ಉದಾಹರಣೆಯನ್ನು ಕೊಡಬಯಸುವುದಾದರೆ ಅತ್ಯಂತ ಸುಂದರವೂ, ಪ್ರಸಿದ್ಧವೂ ಆದ "ನಾಗಲಿಂಗ" ಪುಷ್ಪವು ಅರಳಿದಾಗ ಅದರಲ್ಲಿ ಪಾಣಿವಾಟ, ಲಿಂಗ, ಮತ್ತು ಐದು ಮುಖವುಳ್ಳ (ನಾಗಸರ್ಪ) ಇವು ಗೋಚರವಾಗುತ್ತವೆ. ಇಲ್ಲಿ ಯಾರಾದರೂ ತಮ್ಮ ಕುಶಲ ಕಲೆಯನ್ನು ಪ್ರದರ್ಶನ ಮಾಡಿದ್ದಾರೆಂದರೆ ಯಾರೂ ಒಪ್ಪುವುದಿಲ್ಲ. ಸ್ವಾಭಾವಿಕವಾಗಿ ಅದು ದೇವ ನಿರ್ಮಿತವೂ ನೈಸರ್ಗಿಕ ಪ್ರದತ್ತವೆಂದೂ ಸಮಸ್ತ ಮಾನವರು ಒಪ್ಪಿಕೊಳ್ಳುವಲ್ಲಿ ಸಂದೇಹವಿಲ್ಲ. ಸೃಷ್ಟಿ ವೈಚಿತ್ರ್ಯವೇ ಹಾಗಿರಬೇಕಾದರೆ ಇದು ಕೂಡ ಶಿವನ ಅನಂತ ಲೀಲೆಗಳಲ್ಲಿ ಒಂದಾಗಿ ಶಿವನ ಪ್ರೇರಣಾಮಾತ್ರದಿಂದ ಈ ರೀತಿಯ ಸೃಷ್ಟಿಯ ಬೆಡಗಿನ ಸೌಂದರ್ಯದಿಂದೊಪ್ಪುವ "ನಾಗಲಿಂಗ" ಪುಷ್ಪವು ನಿರ್ಮಿತವಾಗಿದೆ. ಹಾಗೆಯೇ ಶಿವನು ಶಿವಮತಪರಿಪಾಲನಾಸಕ್ತನಾಗಿ ಲಿಂಗೋದ್ಭವ ಲೀಲೆಯಿಂದ ಭೂಲೋಕದಲ್ಲಿ ಗುರುರೂಪದಿಂದವತರಿಸಿ ವಿಶ್ವ ಕಲ್ಯಾಣ ಕಾರ್ಯದಲ್ಲಿ ನಿರತನಾಗಿರುವುದು ಶಾಸನಬದ್ಧವಾಗಿದೆ. ಮತ್ತು ಈ ಕಾರ್ಯವು ನಿರ್ವಿಘ್ನವಾಗಿ ಮುಂದುವರೆಯಲು "ಗುರುಸ್ಥಲ ಸಮಾಖ್ಯಾತಾ ವೀರಮಾಹೇಶ್ವರಾಭಿದಾಃ॥ ಏತೇಗುರು ಪದಾಧ್ಯಕ್ಷಾನಾನ್ಯೇ ಲಾಂಛನ ಧಾರಿಣಃ" ಗುರುಸ್ಥಲದವರೆಂದು ಪ್ರಸಿದ್ಧರಾದ ಮಾಹೇಶ್ವರರೇ ಗುರುಸ್ಥಾನಕ್ಕೆ ಅಧಿಕಾರಿಗಳು ಮತ್ತು ಅವರೇ ಪಂಚಗೋತ್ರ ಸಮುದ್ಭವರೂ, ಪಂಚ ಸೂತ್ರಾನುಸಾರಿಗಳೂ ಗುರುವಂಶದವರೆಂದು ಪ್ರಸಿದ್ಧರಾದವರೂ ಆದ ಮಾಹೇಶ್ವರರೇ ಎಲ್ಲ ಲಿಂಗಧಾರೀ ವೀರಶೈವರಿಗೆ ಗುರುಗಳೆಂಬುದನ್ನು ನಿರ್ಣಯಿಸಿದ್ದಾರೆ. ಈ ಎಲ್ಲ ಸಬಲ ಆಧಾರಗಳ ಮೇಲಿಂದ ವೀರಶೈವ ಮತವು ಅನಾದಿ ಎಂಬುದು ಸುಸ್ಪಷ್ಟವಾಗುತ್ತಿದೆ. ಮತ್ತು ವೀರಶೈವ ಮತಸ್ಥಾಪನಾಚಾರ್ಯರು ಪಂಚಾಚಾರ್ಯರೇ ಹೊರತು ಬೇರೆ ಇಲ್ಲವೆಂಬುದು ಘಂಟಾಘೋಷವಾಗಿ ವೇದಾಗಮೋಪನಿಷತ್ತುಗಳು ಸಾರುತ್ತಿವೆ.

ಇತ್ತೀಚೆಗೆ ಕೆಲವು ಭೂಸಂಶೋಧನಾ ಕಾರ್ಯದಲ್ಲಿ ಹರಪ್ಪಾ-ಮಹೇಂಜೋದಾರೋಗಳಲ್ಲಿನ ಅವಶೇಷಗಳ ಮೂಲಕ ಮತ್ತು ಶಿವಲಿಂಗ, ಶಿವವಿಗ್ರಹಗಳ ಆರಾಧನೆಗೆ ಯೋಗ್ಯವಾದ ಅರ್ಚನಾ ಸಾಮಗ್ರಿಗಳು ಅನೇಕ ಸಹಸ್ರ ವರ್ಷಗಳ ಪೂರ್ವದಲ್ಲಿ ಬಳಕೆಯಲ್ಲಿದ್ದುದಾಗಿ ತಿಳಿದುಬಂದಿದೆ. ಪ್ರಯುಕ್ತ, ಪರಮ ಪವಿತ್ರವಾದ ವಿಶ್ವಮತವಾದ ಸಮಸ್ತ ಮತಗಳಿಗೆ ಮಾತೃ ಸ್ವರೂಪವಾದ ವೀರಶೈವಮತವೂ ಅನಾದಿಕಾಲದಿಂದಲೂ ತನ್ನ ವಿಶಾಲವಾದ ತತ್ವಗಳಿಂದ ಗಂಭೀರವಾಗಿ ಸೂರ್ಯಕಾಂತಿಯಂತೆ ತನ್ನ ತೆರೆದ ಹೃದಯದ ಕರುಣಾಮಯಸಂದೇಶವನ್ನು ಲೋಕಕ್ಕೆ ಬಿತ್ತರಿಸುತ್ತ ಅವಿಚ್ಛಿನ್ನವಾಗಿ ಸಾಗುತ್ತಲಿದೆ. ಅದರ ಏಕಮುಖವಾದ ತತ್ವಗಳನ್ನು ಸಮಸ್ತ ಮಾನವರು ತತ್ವಶಃ ಪಾಲಿಸಿ ನಿಜಾಂಶದಿಂದ ಕೂಡಿ ಧನ್ಯರಾಗಲೆಂದು ಹಾರೈಸುತ್ತೇವೆ ಮತ್ತು ಜಗದಾದಿ ಜಗದ್ಗುರು ಪಂಚಾಚಾರ್ಯರು ಮಾನವಕೋಟಿಗೆ ನಿತ್ಯಮಂಗಲವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ನುಡಿ ಮುತ್ತುಗಳು

ಮನಸ್ಸನ್ನು ದೇವರಿಗೂ ದೇಹವನ್ನು ದುಡಿಮೆಗೂ ಅರ್ಪಿಸು.

ಇತರರನ್ನು ನೋಡಿ ನಗುವುದು ಮೂರ್ಖತನ; ಇತರರೊಡನೆ ನಗುವುದು ದೈವೀಗುಣ.

Better aid to Communication:

If you are looking for
Quality, Economy, Efficiency
and Durability.

You can RELY on the HOUSE of

KHODAY

for Equipment and
Stationery for Modern
Offices, Schools & Colleges

All processed by Skilled &
Expert hands to make
your Work more Meaningful
Elegant & Smart

Insist on

Khoday's

- Carbon Paper (*Typewriting/Pen/Pencil*)
- Typewriter Ribbons (*of all Kinds*)
- Stamp Pads
- Gem Clips
- Duplicating Ink
- Office Pins

Grams: 'KHODAY' Phone: 74122 & 74123

Specialists also in

All kinds of Flexible Packaging Materials

Enquiries solicited:

KHODAY INDUSTRIES PRIVATE LIMITED

10, Ist Main Road ★ Gandhinagar

BANGALORE-9.

ಶ್ರೀ ರಂಭಾಪುರಿ ಶ್ರೀ ಉಜ್ಜಯಿನಿ ಶ್ರೀ ಹಿಮವತ್ಕೇದಾರ ಶ್ರೀ ಶ್ರೀಶೈಲ ಶ್ರೀ ಕಾಶಿ
ಜಗದ್ಗುರು
ಪಂಚಪೀಠಾಧೀಶ್ವರರಿಗೆ ಮಹಾ ಶರಣು

★

ತೂಬಗೆರೆ ಮುದ್ದವೀರಪ್ಪ ಸನ್ಸ್ ಅಂಡ್
ಕೆ. ಎಚ್. ವೀರಣ್ಣ ಶೆಟ್ಟಿ
ಮಂಡಿ ಮರ್ಚೆಂಟ್ಸ್ ಅಂಡ್ ಕಮೀಷನ್ ಏಜೆಂಟ್ಸ್
ಹೊಸ ತರಗುಪೇಟೆ : ಬೆಂಗಳೂರು-2

ಫೋನ್: 23700
ತಂತಿ: 'ಸುಪಾರಿ'

ಶ್ರೀ ರಂಭಾಪುರಿ
ಶ್ರೀ ಉಜ್ಜಯಿನಿ
ಶ್ರೀ ಹಿಮವತ್ಕೇದಾರ
ಶ್ರೀ ಶ್ರೀಶೈಲಶ್ರೀಕಾಶಿ

ಪಂಚ ಜಗದ್ಗುರುಗಳಿಗೆ
ಸಾಷ್ಟಾಂಗ ಪ್ರಣಾಮಗಳು

ಆಶೀರ್ವಾದಾಕಾಂಕ್ಷಿಗಳು

ಎಂ. ಸಂಗಪ್ಪ ಅಂಡ್ ಸನ್ಸ್
ಮಂಡಿಪೇಟೆ : : ತುಮಕೂರು

ಫೋನ್: 462
ತಂತಿ: "ಮೋಹನ್"

ಶಿವಾದ್ವೈತಮತ ಹಾಗೂ ಮತಾಚಾರ್ಯರು



ಶ್ರೀ ಷ॥ ಬ್ರ॥ ಪಂ॥ ಡಾ॥ ರೇಣುಕಶಿವಾಚಾರ್ಯ
ಪಟ್ಟಾಧ್ಯಕ್ಷರು, ಬೃಹನ್ಮತ ಸಂಸ್ಥಾನ, ಇಂಚಗೇರಿ

ಈ ಲೇಖಕರು ಕಾವ್ಯ, ಸಾಹಿತ್ಯ, ಶಕ್ತಿವಿಶಿಷ್ಟಾದ್ವೈತ, ವೇದಾಂತ ವಿದ್ವತ್ ಪರೀಕ್ಷೆಗಳನ್ನು ಪಾಸುಮಾಡಿದ್ದಾರೆ. ಶ್ರೀಯವರು ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಧಾರ್ಮಿಕ ಉಪನ್ಯಾಸಮಾಡಿ ಜನಜೀವನವನ್ನು ಧಾರ್ಮಿಕ ಮಾರ್ಗದತ್ತ ಸೆಳೆದು "ಉಪನ್ಯಾಸ ಪ್ರವೀಣ" ಎಂಬ ಪ್ರಶಸ್ತಿಯನ್ನು ಹಾಗೂ ಪ್ರಪಂಚ, ಕರ್ಮವೀರ, ಉದಯ, ಪಂಚಾಚಾರ್ಯ ಪ್ರಭಾ, ಸಂಯುಕ್ತ ಕರ್ನಾಟಕ, ಸಾವಧಾನ ಮೊದಲಾದ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಬರೆದು ಜನಾನುರಾಗವನ್ನು ಗಳಿಸಿದ್ದಾರೆ.

__ಸತ್ಯಂ__ಶಿವಂ__ಸುಂದರಂ__ಮಂಗಲಂ__ಶುಭಂ__

ವಿಶಾಲ ವಿಶ್ವದಲ್ಲಿ ಭಾರತ ತನ್ನದೇ ಆದ ಧರ್ಮ ಸಂಸ್ಕೃತಿಗಳ ಮೇಲ್ಮೆಯಿಂದ ಗಣ್ಯಸ್ಥಾನವನ್ನು ಪಡೆದು ಪೂಜಿಸಿಕೊಳ್ಳುತ್ತಿದೆ.

ಈ ಆರ್ಯಾವರ್ತದಲ್ಲಿ (ಭರತ ಖಂಡದಲ್ಲಿ) ಮತಾಚಾರ್ಯರು, ಮಹಾತ್ಮರು, ಸತ್ಪುರುಷರು, ದಾರ್ಶನಿಕರು, ಕಾರುಣಿಕ ಯೋಗಿಗಳು, ಶಿವಶರಣ–ಶರಣೆಯರು, ಪುರಂದರದಾಸರು, ಕನಕದಾಸರೇ ಮೊದಲಾದ ಮಹಾಮಹಿಮರು ಜನ್ಮ ತಾಳಿ ತಮ್ಮ ಜನ್ಮಭೂಮಿಯನ್ನು ಪಾವನಗೊಳಿಸಿದ್ದನ್ನು ನಾವೆಂದಿಗೂ ಮರೆಯುವ ಹಾಗಿಲ್ಲ.

ಅಂತಹ ಮಹಾನ್ ವ್ಯಕ್ತಿಗಳಲ್ಲಿ ನಾಲ್ವರನ್ನಂತೂ ಭಾರತೀಯರಾದ ನಾವು ಎಂದಿಗೂ ಮರೆಯುವ ಹಾಗಿಲ್ಲ. ಅವರೇ ಶಂಕರಾಚಾರ್ಯರು. ರಾಮಾನುಜಾಚಾರ್ಯರು, ಮಧ್ವಾಚಾರ್ಯರು. ಹಾಗೂ ರೇಣುಕಾದಿ ಪಂಚಾಚಾರ್ಯರು. ಇಂತಹ ಮತಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಮತಗಳೇ ಅದ್ವೈತ, ದ್ವೈತ, ಶಿವಾದ್ವೈತ ಅರ್ಥಾತ್ ಶಕ್ತಿ ವಿಶಿಷ್ಟಾದ್ವೈತವೆಂದು ವಿಶ್ವ ವಿಖ್ಯಾತಿಯನ್ನು ಪಡೆದಿವೆ. ಈ ಚತುರ್ಮತಗಳಲ್ಲಿ ತನ್ನದೇ ಆದ ವೈಶಿಷ್ಟ್ಯದಿಂದ ಸೂರ್ಯ ಪ್ರಕಾಶದಂತೆ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವ ಮತವೇ "ಶಿವಾದ್ವೈತಮತ"ವೆಂದು ಪ್ರಸಿದ್ಧ ಲೇಖಕರು, ಬರಹಗಾರರು, ದಾರ್ಶನಿಕರು, ಪಂಡಿತರು ಶಾಸ್ತ್ರ ಕೋವಿದರು, ಇತಿಹಾಸ ತಜ್ಞರು, ವಿಮರ್ಶಕರು ಒಪ್ಪಿಕೊಂಡಿದ್ದಾರೆ. ಅದು ಸೂರ್ಯಪ್ರಕಾಶದಷ್ಟು ಸತ್ಯ, ಸತ್ಯಕ್ಕೆ ಸತ್ಯ ಎನ್ನುವುದರಲ್ಲಿ ತಿಲ ಮಾತ್ರವೂ ಸಂದೇಹವಿಲ್ಲ.

"ಶಕ್ತಿ ವಿಶಿಷ್ಟಾದ್ವೈತ" ಎಂಬ ಪದವನ್ನು ಹೀಗೆ ಅರ್ಥೈಸಬಹುದು. "ಶಕ್ತಿಶ್ಚ ಶಕ್ತಿಶ್ಚ ಶಕ್ತೀ ತಾಭ್ಯಾಂ ವಿಶಿಷ್ಟೌ ಜೀವೇಶೌ, ತಯೋಃ ಅದ್ವೈತಂ ಶಕ್ತಿ ವಿಶಿಷ್ಟಾದ್ವೈತಂ" ಎಂಬುದಾಗಿ ನಿರ್ವಚನ ಮಾಡಿದ್ದಾರೆ.

ಎರಡು ವಿಧವಾದ ಶಕ್ತಿಗಳಿಂದ ಸಮ್ಮಿಲಿತವಾದ ಜೀವ ಬ್ರಹ್ಮರ ಅದ್ವೈತ ಅಥವಾ ಶಿವ–ಜೀವರ ಸಾಮರಸ್ಯವೇ ಶಕ್ತಿವಿಶಿಷ್ಟಾದ್ವೈತ ಎನಿಸಿಕೊಳ್ಳುವದು. ಮತ್ತೆ ಆ ಶಕ್ತಿಯನ್ನು ಎರಡು ವಿಧವಾಗಿ ವಿಂಗಡಿಸಬಹುದು; ಸ್ಥೂಲ ಹಾಗೂ ಸೂಕ್ಷ್ಮ ಎಂಬುದಾಗಿ. ಇವುಗಳಲ್ಲಿ ಪ್ರತಿಯೊಂದರಲ್ಲೂ ಎರಡು ಬಗೆಗಳಿವೆ. ಚಿತ್ ಶಕ್ತಿ–ಅಚಿತ್ ಶಕ್ತಿ ಎಂದು. ಇವೆರಡನ್ನೂ "ಸ್ಥೂಲ ಚಿದಚಿದಾತ್ಮಕ

ಶಕ್ತಿ" "ಸೂಕ್ಷ್ಮ ಚಿದಚಿದಾತ್ಮಕ ಶಕ್ತಿ" ಎಂಬುದಾಗಿ ಕರೆಸಿಕೊಂಡಿವೆ.

ಪರಮಶಿವ ಸೂಕ್ಷ್ಮ ಚಿದಚಿದಾತ್ಮಕ ಶಕ್ತಿ ವಿಶಿಷ್ಟನಾದವನು ಆದ ಪ್ರಯುಕ್ತ ಶಿವ ಸರ್ವಜ್ಞತಾ ಮತ್ತು ಸರ್ವಕರ್ತೃತ್ವತಾ ರೂಪ ಪಡೆದಿದ್ದಾನೆ. ಶಿವ–ಜೀವರಿಬ್ಬರೂ ಶಕ್ತಿ ಸಮನ್ವಿತರಾದರೂ ಆ ಶಕ್ತಿ ಸ್ವರೂಪದಲ್ಲಿ ಭೇದ ಕಾಣಬರುತ್ತದೆ. ಸ್ಥೂಲ ಶಕ್ತಿಯಿಂದ ಜೀವ ತನ್ನ ಮೂಲ ಸ್ವರೂಪವನ್ನು ಮರೆತು ತಾನು "ಅಲ್ಪಜ್ಞ" "ಅಲ್ಪ ಶಕ್ತ" ಎಂಬ ಸಂಕುಚಿತ ಮನೋಭಾವನೆಗೆ ಒಳಪಟ್ಟಿದ್ದಾನೆ. ಶಿವ ಜೀವರಲ್ಲಿ ಭೇದ ಮೂಲತಃ ಇರುವುದಿಲ್ಲ. ಇಲ್ಲಿ ಸ್ಥೂಲ ಎನ್ನುವುದಕ್ಕೆ ಅಶುದ್ಧ ಎಂಬ ಅರ್ಥವನ್ನು ಮಾಡಲಾಗಿದೆ. ಜೀವ ತನ್ನ ಅಶುದ್ಧತೆಯಿಂದ ಸೂಕ್ಷ್ಮ ಶಕ್ತಿ ವಿಶಿಷ್ಟ ಸಂಪರ್ಕವನ್ನು ಕಳೆದುಕೊಂಡಿದ್ದಾನೆ. ಸೃಷ್ಟಿಯ ಕಾರ್ಯದಲ್ಲಿ ಸಂಕೋಚ ಸ್ಥಿತಿಯನ್ನು ಹೊಂದಿ ಆಣವ-ಮಾಯಾ-ಕಾರ್ಮಿಕ ಮಲತ್ರಯಗಳಿಗೆ ಒಳಪಟ್ಟು ಶುದ್ಧ ಸ್ವರೂಪವನ್ನು ಕಳೆದುಕೊಂಡು ಅಶುದ್ಧ, ಅಪವಿತ್ರವಾಗುತ್ತಾನೆ ಜೀವ. ಸೂಕ್ಷ್ಮ ಶಕ್ತಿ ವಿಶಿಷ್ಟನಾದ ಶಿವನ ಒಂದಂಶವೇ ಜೀವರುಗಳಾಗಿ ಮಾರ್ಪಾಡಾಗಿ ಸ್ಥೂಲ ಶಕ್ತಿಯಿಂದ ಆವೃತವಾಗುತ್ತವೆ. ಈ ಸಂಕೋಚ ಸ್ಥಿತಿಯಿಂದ ಬಿಡುಗಡೆಯನ್ನು ಪಡೆದು, ಮೂಲ ಸ್ವರೂಪದ ಪರಿಪೂರ್ಣ ವಿಕಾಸ ಸ್ಥಿತಿಯನ್ನು ಪಡೆದಾಗ ಸೂಕ್ಷ್ಮ ಚಿದಚಿದಾತ್ಮಕ ಶಕ್ತಿ ವಿಶಿಷ್ಟವಾಗಿ ಪರಮ ಶಿವನೊಡನೆ ಅದ್ವೈತ ಭಾವವನ್ನು ಪಡೆಯುತ್ತವೆ. ಈ ಅರ್ಥವಿಟ್ಟುಕೊಂಡು ವೀರ ಶೈವ ದಾರ್ಶನಿಕರು "ಶಕ್ತಿ ವಿಶಿಷ್ಟಾದ್ವೈತ" ಎಂದು ಕರೆದಿದ್ದಾರೆ.

ಈ ಶಕ್ತಿ ವಿಶಿಷ್ಟಾದ್ವೈತವನ್ನು ದ್ವೈತಾದ್ವೈತ, ಶಿವಾದ್ವೈತ ಎಂಬುದಾಗಿಯೂ ಕರೆದಿದ್ದಾರೆ. ಶಿವಾದ್ವೈತ ವೇದಾಂತದಲ್ಲಿ ಪರಮಾತ್ಮನ ಸ್ವರೂಪ, ಶಕ್ತಿಯ ಸ್ವರೂಪ, ಜೀವಾತ್ಮನ ಸ್ವರೂಪ ಜಗತ್ಸ್ವರೂಪ, ಮುಕ್ತಿ ಸ್ವರೂಪ, ಮುಕ್ತ್ಯುಪಾಯಗಳ ವಿವೇಚನೆಗಳ ಗಂಗಾ ಪ್ರವಾಹ ಹರಿದಿದೆ.

ಎಲ್ಲ ವೇದಾಂತಗಳಂತೆ ಶಿವಾದ್ವೈತ ವೇದಾಂತದಲ್ಲೂ ದರ್ಶನ ಮತ್ತು ಸಂಪ್ರದಾಯವೆಂದು ಎರಡು ಬಗೆಯಾಗಿವೆ. ದರ್ಶನ ಸ್ವರೂಪವನ್ನು ಶಕ್ತಿವಿಶಿಷ್ಟವೆಂದೂ, ಸಂಪ್ರದಾಯವನ್ನು ಷಟ್‌ಸ್ಥಲ ಸಿದ್ಧಾಂತವೆಂಬುದಾಗಿಯೂ ವಿಂಗಡಿಸಿದ್ದಾರೆ.

ಪರಮಾತ್ಮನ ಮಂಗಳಮಯ ದರ್ಶನವನ್ನು ಜೀವನು ಹೇಗೆ ಪಡೆಯಲು ಸಾಧ್ಯ ಎಂಬುದನ್ನು ದರ್ಶನ ಭಾಗವು ಮನನ ಮಾಡಿಕೊಡುತ್ತದೆ. ಪರಮಾತ್ಮನು ಅದ್ವೈತ ಮತದಂತೆ ನಿರ್ವಿಶೇಷವೆನಿಸದೆ, ಶಕ್ತಿವಿಶಿಷ್ಟನಾಗಿರುವನು. ಇದೇ ಶಕ್ತಿಯ ಒಂದಂಶದಿಂದ ಪರಮಾತ್ಮನ ವಿನೋದಕ್ಕಾಗಿ ಜಡರೂಪದಿಂದ ಮಾಯಾ ಶಕ್ತಿ ಎನಿಸಿಕೊಂಡು ಜೀವನನ್ನಾವರಿಸಿರುವುದು. ಪರಾಶಕ್ತಿ ವಿಶಿಷ್ಟ ಪರಮಾತ್ಮನಲ್ಲಿ ಮಾಯಾಶಕ್ತಿ ವಿಶಿಷ್ಟನಾದ ಜೀವನು ಸಮರಸವಾಗಿ ಬೆರೆಯುವುದಕ್ಕೆ ಶಿವಾದ್ವೈತ ಅಥವಾ ಶಕ್ತಿವಿಶಿಷ್ಟಾದ್ವೈತವೆಂದು ಪ್ರಸಿದ್ಧಿ ಪಡೆದಿದೆ.

ಪರಮಾತ್ಮನು ಶಕ್ತಿ ವಿಶಿಷ್ಟನಾಗಿರುವನೆಂಬುದಕ್ಕೆ ಮಹಾಕವಿ ಕಾಳಿದಾಸನ ಮಾತಿನಲ್ಲಿಯೇ ಹೇಳುವುದಾದರೆ

ವಾಗರ್ಥಾವಿವ ಸಂಪೃಕ್ತೌ ವಾಗರ್ಥಃ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

ಈ ಮಂಗಳ ಶ್ಲೋಕದಲ್ಲಿ ಜಗನ್ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರ ಸಂಬಂಧ ವಾಕ್ ಮತ್ತು ಅರ್ಥದಂತೆ ಎಂದು ಹೇಳಿರುವ ಮಾತು ಪಾರ್ವತೀ ಪರಮೇಶ್ವರರ ಅವಿನಾಭಾವ ಸಂಬಂಧವನ್ನು ಎತ್ತಿ ತೋರಿಸುತ್ತದೆ,

ವೀರಶೈವಾನಂದ ಚಂದ್ರಿಕೆ ಕೂಡ ಶಿವ–ಶಕ್ತಿ ಸಂಬಂಧವಾಗಿ

ನ ಶಿವೇನ ವಿನಾ ಶಕ್ತಿಃ ನ ಶಕ್ತಿರಹಿತಃ ಶಿವಃ ।
ಪುಷ್ಪ ಗಂಧವದನ್ಯೋನ್ಯಂ ಮಾರುತಾಂಬರಯೋರಿವ ॥

ಶಿವನಿಲ್ಲದ ಶಕ್ತಿಯೂ ಶಕ್ತಿಯಿಲ್ಲದ ಶಿವನೂ ಒಂದರಗಳಿಗೆಯೂ ಇರಲು ಸಾಧ್ಯವೇ ಇಲ್ಲ. ಪುಷ್ಪವಿಲ್ಲದ ಗಂಧವೂ ವಾಯುವಿಲ್ಲದ ಬಯಲೂ ಎಲ್ಲಿಯೂ ಕಾಣುವಂತಿಲ್ಲ. ಚಂದ್ರನಲ್ಲಿರುವ ಚಂದ್ರಿಕೆಯಂತೆ, ಪುಷ್ಪದಲ್ಲಿರುವ ಸುವಾಸನೆಯಂತೆ, ಸಕ್ಕರೆಯಲ್ಲಡಗಿರುವ ಸವಿಯಂತೆ, ಹಾಲಿನಲ್ಲಿ ಹುದುಗಿರುವ ಘೃತದಂತೆ ಶಿವ ಶಕ್ತಿಯರ ಅವಿನಾಭಾವ ಸಂಬಂಧವನ್ನು ನಾವು ನಿತ್ಯ ವ್ಯವಹಾರದಲ್ಲಿಯೂ ಕಂಡಿದ್ದೇವೆ. ಹೀಗೆ ಶಿವಾದ್ವೈತ ಸಿದ್ಧಾಂತ ತನ್ನದೇ ಆದ ವಿಶಿಷ್ಟ ತತ್ವಗಳಿಂದ ಬೆಳಗುತ್ತಿದೆ. ಮಾನವ ಜನ್ಮದ ಸಾರ್ಥಕತೆಗೆ ಶಿವಾದ್ವೈತ ಸಿದ್ಧಾಂತ ತತ್ವ ದಾರಿದೀಪವಾಗಿದೆ. ಅಂತೆಯೇ 12ನೆಯ ಶತಮಾನದಲ್ಲಿದ್ದ ಹಲವು ಜಾತಿ–ಮತ–ಪಂಥ-ಪಂಗಡಗಳಲ್ಲಿದ್ದ ಜನ ವೀರಶೈವ ಮತದ ಶ್ರೇಷ್ಠತೆಯನ್ನು ಮನಗಂಡು ಶಿವಲಿಂಗ ದೀಕ್ಷೆ ಪಡೆದು ವೀರಶೈವ ಮತಾವಲಂಬಿಗಳಾಗಿ ಶಿವಶರಣ-ಶರಣೆಯರೆಂದು ಖ್ಯಾತಿ ಹೊಂದಿ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಂಡದ್ದನ್ನು ಇತಿಹಾಸ ಬಿಚ್ಚಿ ತೋರಿಸುತ್ತದೆ. ಜನ್ಮತಃ ಬ್ರಾಹ್ಮಣರಾಗಿದ್ದ ಬಸವಣ್ಣನವರು ವೀರಶೈವ ಧರ್ಮದ ಶ್ರೇಷ್ಠತೆಯನ್ನರಿತೇ ವೀರಶೈವ ದೀಕ್ಷೆ ಪಡೆದು ಭಕ್ತಿ ಭಾಂಡಾರಿ ಬಸವಣ್ಣನವರೆಂದು ಖ್ಯಾತಿ ಹೊಂದಿದ್ದು ವೀರಶೈವ ಧರ್ಮದ ಶ್ರೇಷ್ಠತೆಯ ಸಂಕೇತ ಎಂಬುದನ್ನು ಇಡೀ ಮಾನವ ಕುಲ ಮರೆಯುವ ಹಾಗಿಲ್ಲ. ಇಷ್ಟು ವಿಶ್ವ ಖ್ಯಾತಿಯನ್ನು ವಿಶ್ವ ಪ್ರೇಮವನ್ನು ಗಳಿಸಿದ ಮತಕ್ಕೆ ಆಚಾರ್ಯರಿರುವದು ಬೇಡವೆ? ಅವರು ಯಾರು ಎಂದು ವಿಚಾರ ಮಾಡುವುದು ಅತ್ಯವಶ್ಯಕ. ಪರಶಿವನ ಆಜ್ಞೆಯಂತೆ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸೋಮನಾಥಾದಿ

ಶಿವಲಿಂಗಗಳಿಂದ ಅವತರಿಸಿ "ಶಕ್ತಿ ವಿಶಿಷ್ಟಾದ್ವೈತ" ಮತವನ್ನು ಈ ಭೂಮಿಯಲ್ಲಿ ಸ್ಥಾಪಿಸಿದರು. ಹಾಗೂ ಪ್ರಪಂಚದ ಮೂಲೆ–ಮೂಲೆಗೂ ಸಂಚರಿಸಿ ಶಿವಾದ್ವೈತ ಮತವನ್ನು ಶಾಶ್ವತವಾಗಿ ನಿಲ್ಲುವಂತೆ ಪ್ರಚುರ ಪಡಿಸಿದರು; ಅಗಸ್ತ್ಯ ಮಹಾ ಮುನಿಗೆ ಶಿವ ಸಿದ್ಧಾಂತವನ್ನು ಉಪದೇಶಿಸಿದರು. ಅವರು ಏಳು ನೂರು ವರ್ಷ ಗುಪ್ತವಾಗಿಯೂ ಏಳು ನೂರು ವರ್ಷ ಪ್ರಕಟರೂಪದಿಂದಲೂ ಸಂಚರಿಸಿದರು ಎನ್ನುವದು ನಿರ್ವಿವಾದ ಸಂಗತಿ. ಹಾಗೂ ಅದಕ್ಕೆ ಐತಿಹ್ಯವೂ ಉಂಟು. ಶ್ರೀ ರೇವಣ ಸಿದ್ಧೇಶ್ವರ ಬೆಟ್ಟ, ಹೊರ್ತಿಯ ಸುಪ್ರಸಿದ್ಧ ರೇವಣಸಿದ್ಧೇಶ್ವರ ಮಂದಿರ, ಮಾಸನೂರ ರೇಣುಕಾಂಬೆಯ ಮಂದಿರ, ಇಂಗಳೇಶ್ವರ ರೇಣುಕಾಚಾರ್ಯ ತಪಸ್ಸು ಮಾಡಿದ ಗುಹೆ, ಶ್ರೀಮದ್ರಂಭಾಪುರಿ ಪೀಠ, ಕಾಶಿಯಲ್ಲಿರುವ "ರೇವಣ ತಲಾಬ,, ಮೊದಲಾದ ಸುಪ್ರಸಿದ್ಧ ಸುಕ್ಷೇತ್ರಗಳು ಬಹಳ ಕಾಲದಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬಂದಿರುವದು ಜನಜನಿತವಾಗಿದೆ. ಶಿವಾಗಮಗಳುಕೂಡ ಪಂಚಾಚಾರ್ಯರೇ ವೀರಶೈವ ಮತಸ್ಥಾಪಕರೆನ್ನುವದನ್ನು ಪ್ರತಿಪಾದಿಸಿದರೂ ಇತ್ತೀಚೆಗೆ ಅಂದರೆ ಅದರಲ್ಲೂ 20ನೇ ಶತಮಾನಬಲ್ಲಿ ಬಸವಣ್ಣನವರೇ ವೀರಶೈವ ಮತಸ್ಥಾಪಕರು ಎನ್ನುವ ಕೂಗು ಕೆಲವು ಕಡೆಯಿಂದ ಕೇಳಿಬರುತ್ತದೆ. ಬಸವಣ್ಣನವರು 12ನೇ ಶತಮಾನದಲ್ಲಿ ಅಂದರೆ ಈಗ್ಗೆ ಎಂಟುನೂರು ವರ್ಷಗಳ ಹಿಂದೆ ಇದ್ದರು. ಬಸವಣ್ಣನವರೇ ಮತಸ್ಥಾಪಕರು ಎಂದು ನಾವು ವಾದಿಸಿ ಸಾಧಿಸಲು ಹೊರಟರೆ ಅನ್ಯ ಮತದವರಾಗಲಿ, ವಿಮರ್ಶಕರಾಗಲಿ, ವೀರಶೈವ ಮತ ಪ್ರಾಚೀನ ಮತವಲ್ಲ ಎಂಟುನೂರು ವರ್ಷಗಳಿಂದೀಚೆಗೆ ಹುಟ್ಟಿ ಬೆಳೆದುದು ಎಂದು ತೀರ್ಮಾನಿಸುವ ಕಾಲ ಬಂದೀತು ಎನ್ನುವ ತಿಳಿವಳಿಕೆ– ಇರುವುದು ಬಹು ಆವಶ್ಯಕ. ಬಸವಣ್ಣನವರು ಸಾಮಾನ್ಯರಲ್ಲ. ಹಾಳಾಗುತ್ತಿದ್ದ ಧರ್ಮವನ್ನು ಎತ್ತಿ ಹಿಡಿದ ಮಹಾಪುರುಷರು. ಅವರು ಮತೋದ್ಧಾರಕರೇ ವಿನಃ ಮತಸ್ಥಾಪಕರಲ್ಲ. ವೀರಶೈವ ಧರ್ಮವು ಇತ್ತೀಚೆಗೆ ಹುಟ್ಟಿ ಬೆಳೆದ ಧರ್ಮವಲ್ಲ. ವೇದ ಪ್ರಪಂಚವು ಯಾವಾಗ ಹುಟ್ಟಿತೋ ಅಂದಿನಿಂದಲೇ ವೀರಶೈವ ಮತವು ಉಗಮವಾಗಿ ಹೆಮ್ಮರವಾಗಿ ಬೆಳೆದುಬಂದಿದೆ. ಆದ್ದರಿಂದ ಇದು ಪ್ರಾಚೀನ ಮತ ಹಾಗೂ ಪಂಚಾಚಾರ್ಯರೇ ಮತಸ್ಥಾಪಕರು ಎನ್ನುವುದನ್ನು ನಿರ್ದಾಕ್ಷಿಣ್ಯವಾಗಿ ಒಪ್ಪಿಕೊಂಡು ಸರ್ವರೂ ತಮ್ಮ ತಮ್ಮ ವೈಯಕ್ತಿಕ ಭೇದ–ಭಾವಗಳನ್ನು ಮರೆತು ಮತದ ಸಂಘಟನೆಗೆ ಸಹಾಯಕರಾಗಿ ಮತದ ಸರ್ವತೋಮುಖದ ಏಳ್ಗೆಗೆ ಶ್ರಮಿಸುವುದು ಪ್ರತಿಯೊಬ್ಬ ಮತಾವಲಂಬಿಯ ಆದ್ಯ ಕರ್ತವ್ಯ ಹಾಗೂ ವ್ಯಕ್ತಿಯು ತನ್ನ ಕೃತಜ್ಞತೆಯನ್ನು ತನ್ನ ಮತಕ್ಕೆ ಮತಾಚಾರ್ಯರಿಗೆ ಸಮರ್ಪಿಸುವದೂ ಪುಣ್ಯಪ್ರದವಾಗಿದೆ.

—ಸತ್ಯಂ—ಶಿವಂ—ಸುಂದರಂ — ಮಂಗಳಂ— ಶುಭಂ

OUR HEARTY WELCOME TO
PANCHA JAGADGURUS

A. P. Krishnappa & Sons
Merchants & Commission Agents
New Tharagupet : : BANGALORE-2

Grams : KISMAT
Phone Shop: 70587
Res : 24649

PIONEERS

IN HOSIERY

Dealers in:

Tempting Varieties of Woollen Hosiery, Pullovers, Coats, Kashmir Coats, Mufflers, Slipovers, Babyhoods, Babysets, Socks, Monkey Caps, Etc., Duckback Raincoats, Sunbrand, & Stagbrand Umbrellas, Travelling goods and Mosquito Nets and Ready Made Goods

Visit : *Phone: 74654*

ರಾಜೇಂದ್ರ ಕ್ಯಾಪ್ ಮಾರ್ಟ್

RAJENDRA CAP MART (REGD)

WHOLESALE & RETAIL MERCHANTS

CHICKPET :: BANGALORE-2A

ಪಂಚ ಜಗದ್ಗುರುಗಳ ಮಹೋತ್ಸವಕ್ಕೆ ಸುಸ್ವಾಗತ

ರಾಯಲ್ ಟೂರಿಸ್ಟ್

ಫೋನ್ : 79107
24385

ಆನಂದರಾವ್ ಸರ್ಕಲ್
ಬೆಂಗಳೂರು-9

ಪಂಚ ಜಗದ್ಗುರುಗಳ ಮಹೋತ್ಸವ
ವಿಶ್ವಶಾಂತಿಯ ಉದಯಕ್ಕೆ ಕಹಳೆ....

ಜಿ. ವಿ. ಎಸ್. ಮರುಳಯ್ಯ ಅಂಡ್ ಸನ್ಸ್
ಅಡಿಕೆ ಮಂಡಿ : ಶಿವಮೊಗ್ಗ

★

ಫೋನ್ : 571

ಮಾರ್ಕ್ : ಜಿ. ವಿ. ಎಂ.

Our

Salutations

to

Jagadguru

Pancha

Peethadhipatis

卐

Telephone { Office : 346
Resi ; 445

Telegram ; NAYAK

Harjivandas Mansukhram Nayak

MERCHANTS & COMMISSION AGENTS

UNJHA (N.Guj)

W. Rly.

Agents:

M/s. C. Veerabhadraiah & Sons

254, Old Tharagupet, BANGALORE - 2A

ದಿ ವೀರಶೈವ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ಅಕ್ಕಿಪೇಟೆ

ಸ್ಥಾಪನೆ 1943

ಬೆಂಗಳೂರು-2ಎ.

ಬ್ಯಾಂಕಿಂಗ್ ಶಾಖೆ ಫೋನ್
29100

ಹೋಲ್ ಸೇಲ್ ಶಾಖೆ ಫೋನ್
27866


ವೀರಶೈವ ಕೋ-ಆಪರೇಟಿವ್ ಸೊಸೈಟಿ ಲಿ.
VEERASAIVA CO OPERATIVE SOCIETY LTD.
1943

ಟೆಲಿಗ್ರಾಂ.
ವೀರಶೈವ

ರಿ. ನಂ. 49/ಡಿ. ಆರ್ 9/
11-9-1943

ಸಹಕಾರದಿಂದ ಸುಖ, ಸಂಪತ್ತು, ಸಮೃದ್ಧಿ

ಕಳೆದ ಇಪ್ಪತ್ತೆಂಟು ವರ್ಷಗಳಿಂದ ಸಹಕಾರ ಕ್ಷೇತ್ರದಲ್ಲಿ ಸಾರ್ವಜನಿಕರ ಅಖಂಡ ಸೇವೆಯನ್ನು ಸಲ್ಲಿಸಿ, ಇನ್ನೂ ಹಲವು ಕ್ಷೇತ್ರಗಳಿಗೆ ತನ್ನ ಸೇವೆಯನ್ನು ವಿಸ್ತರಿಸುತ್ತಾ ಸದಾ ಸಾರ್ವಜನಿಕರ ಸಹಕಾರವನ್ನು ಕೋರುತ್ತಾ ಪ್ರಗತಿಪರ ಇಪ್ಪತ್ತೊಂಬತ್ತನೆಯ ವರ್ಷಕ್ಕೆ ಕಾಲಿರಿಸಿರುವ ತಮ್ಮೆಲ್ಲರ ಅಭಿಮಾನದ ಸಹಕಾರ ಸಂಸ್ಥೆ

ದಿ ವೀರಶೈವ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ಸೆಂಟ್ರಲ್ ಕೋ-ಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್)
ಅಕ್ಕಿಪೇಟೆ, ಬೆಂಗಳೂರು-2ಎ

ಹೋಲ್‌ಸೇಲ್ ಶಾಖೆ: ಬಂಡಿ ಶೇಷಮ್ಮ ಛತ್ರ, ಕೆಂಪೇಗೌಡ ರಸ್ತೆ, ಬೆಂಗಳೂರು-9
,, ಹೊಸ ತರಗುಪೇಟೆ, ಬೆಂಗಳೂರು-2

ಇತರ ಶಾಖೆಗಳು: ಅಕ್ಕಿಪೇಟೆ ಶಾಖೆ, ಸ್ಟೇನ್‌ಲೆಸ್ ಸ್ಟೀಲ್ ಶಾಖೆ, ಓ.ಟಿ.ಸಿ ರೋಡ್ ಶಾಖೆ, ಗಾಂಧಿನಗರ ಶಾಖೆ, ಬ್ಯಾಂಕಿಂಗ್ ಶಾಖೆ.

ಷೇರು ಬಂಡವಾಳ	ರಿಜರ್ವ್ ಫಂಡು	ಇತರ ಫಂಡುಗಳು
ರೂ. 4,92,760=00	ರೂ. 1,12,150=00	ರೂ. 1,37,700=00
ಸ್ಥಿರ ಆಸ್ತಿಗಳು	ಇನ್‌ವೆಸ್ಟ್‌ಮೆಂಟುಗಳು	ಡಿಪಾಜಿಟ್ಟುಗಳು
ರೂ. 1,86,000=00	ರೂ. 61,200=00	ರೂ. 5,72,500=00

ಡಿಪಾಜಿಟ್ ದರಗಳು: ಫಿಕ್ಸೆಡ್ 6 ರಿಂದ 8% ಸೇವಿಂಗ್ಸ್ 5%
ಕರೆಂಟು 2% ಆರು ತಿಂಗಳಿಗೊಂದಾವರ್ತಿ ಬಡ್ಡಿ ಪಾವತಿ ಮಾಡಲಾಗುತ್ತೆ.

ಧರ್ಮ ಸಂಸ್ಥೆಗಳಿಗೂ ಮತ್ತು ಹತ್ತು ಸಾವಿರಕ್ಕೆ ಮೇಲ್ಪಟ್ಟು ಇಡುವ ಫಿಕ್ಸೆಡ್ ಡಿಪಾಜಿಟ್ಟುಗಳಿಗೂ ರಿಯಾಯಿತಿ ಬಡ್ಡಿದರ ಕೊಡಲಾಗುತ್ತದೆ. ತ್ರಿಫ್ಟ್ ಡಿಪಾಜಿಟ್ಟು ಲೆಕ್ಕ (ಮೆಂಬರುಗಳಿಗೆ ಮಾತ್ರ). ವಿವರ ಬ್ಯಾಂಕಿಂಗ್ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಕಾರ್ಯ ನಿರ್ವಾಹಕ ಮಂಡಲಿ

ಶ್ರೀಗಳಾದ ಎ. ಆರ್. ರೇವಣಸಿದ್ದಪ್ಪ (ಅಧ್ಯಕ್ಷರು) ಆರ್. ಗಂಗಪ್ಪ (ಉಪಾಧ್ಯಕ್ಷರು) ವೈ. ಟಿ. ಮಹದೇವಪ್ಪ (ಗೌ॥ ಕಾರ್ಯದರ್ಶಿ) ವೈ. ಸಿ. ಬಸಪ್ಪ (ಗೌ॥ ಸಹಕಾರ್ಯದರ್ಶಿ) ಟಿ. ಆರ್. ರಾಜಶೇಖರಯ್ಯ, ಬಳೇಪೇಟೆ (ಕೋಶಾಧಿಕಾರಿ) ಕೆ. ರಾಚಪ್ಪ, ಎಸ್. ಶ್ರೀಕಂಠಪ್ಪ, ಎಸ್. ರುದ್ರಾರಾಧ್ಯ, ಟಿ. ಆರ್. ರಾಜಶೇಖರಯ್ಯ (ಜಯನಗರ) ಎಂ. ಮಲ್ಲಪ್ಪ, ಎಸ್. ಆರ್. ಸಿದ್ಧರಾಜು, ಬಿ. ಬಸವರಾಜ್, ಕೆ. ಎಲ್. ಶಿವಪ್ಪ, ಎಂ. ಎಲ್. ಶ್ರೀಕಂಠಯ್ಯ ಮತ್ತು ಟಿ. ಸಿ. ಶ್ರೀಕಂಠಪ್ಪ.
ಜನರಲ್ ಮ್ಯಾನೇಜರ್:—**ಶ್ರೀ ಎಸ್. ಸಿ. ಶಿವಶಂಕರ ಶರ್ಮ** (ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್)

ವೀರಶೈವ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಪ್ರಸಕ್ತ ಸಾಲಿನ ಆಡಳಿತ ಮಂಡಳಿ



ಕುಳಿತಿರುವವರು : ಸರ್ವಶ್ರೀ ಕೆ. ಎಲ್. ಶಿವಪ್ಪ, ವೈ. ಸಿ. ಬಸಪ್ಪ (ಸಹ ಗೌ॥ ಕಾರ್ಯದರ್ಶಿ), ವೈ. ಟಿ. ಮಹಾದೇವಪ್ಪ (ಗೌ॥ ಕಾರ್ಯದರ್ಶಿ), ಎ. ಆರ್. ರೇವಣಸಿದ್ಧಪ್ಪ (ಅಧ್ಯಕ್ಷರು), ಆರ್. ಗಂಗಪ್ಪ (ಉಪಾಧ್ಯಕ್ಷರು), ಟಿ. ರ್. ರಾಜಶೇಖರಯ್ಯ (ಬಳೇಪೇಟೆ), ಎಂ. ಮಲ್ಲಪ್ಪ

ನಿಂತಿರುವವರು : ಸರ್ವಶ್ರೀ ಎಸ್. ರುದ್ರಾರಾಧ್ಯರು. ಎಸ್. ಆರ್. ಸಿದ್ಧರಾಜು, ಬಿ. ಬಸವರಾಜ್, ಟಿ. ಆರ್. ರಾಜಶೇಖರಯ್ಯ (ಜಯನಗರ), ಎಸ್. ಶ್ರೀಕಂಠಪ್ಪ, ಕೆ. ರಾಜಪ್ಪ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ



ಶ್ರೀ ಟಿ. ಬಿ. ಬಸವರಾಜಯ್ಯನವರು
ಬೆಂಗಳೂರು

ಕೊಲ್ಲಿಪಾಕ್ಯಾಭಿಧೇ ಪುರೇಸುವಿಮಲೇ
ಸೋಮೇಶ ಲಿಂಗಾಚ್ಛುಭಾತ್॥ ಆವಿರ್ಭೂಯ
ತತೋಗತೋಗಗನತೋ ಆಗಸ್ತ್ಯಾಶ್ರಮಂ ಪಾವಯನ್॥
ಯಸ್ತಸ್ಮೈವಿನತಾಯ ವೇದವಿಹಿತಂ
ಸಿದ್ಧಾಂತಮಾಬೋಧಯತ್॥ ಸ ಶ್ರೀ ರೇಣುಕ ಯೋಗಿ
ರಾಟ್ ವಿತನು ತಾಂ ಸಾನಂದಮುರ್ವೀತಲೇ॥

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಪರಮೇಶ್ವರನ ಅಪ್ಪಣೆಯಂತೆ, ಚತುರ್ಯುಗಗಳಲ್ಲೂ ಶ್ರೀ ಸೋಮನಾಥಾದಿ ಪಂಚಶಿವಲಿಂಗಗಳಿಂದ ಇಚ್ಛಾಮಾತ್ರದಲ್ಲಿ — ಅಂಬುಧಿಯಿಂದ ಪೂರ್ಣಚಂದ್ರೋದಯದಂತೆ ದಿವ್ಯದೇಹಧಾರಿಗಳಾಗಿ ಅವತರಿಸಿದರು. ಪಾಂಚಭೌತಿಕ ತತ್ವಕ್ಕೆ ಅತೀತರಾದುದರಿಂದ ಮಾಯೆಯು ಇವರನ್ನು ಕಾಡಿಸುವಂತಿಲ್ಲ. ॥ ನ ಭೂತ ಸಂಘ ಸಂಸ್ಥಾನೋ ದೇವಸ್ಯ ಪರಮಾತ್ಮನಃ॥ ರಾಗರಹಿತರು, ಉದಾರರು, ಶೈವಾಗಮಾಂಬುಜ ಭಾಸ್ಕರರು ಮತ್ತು ಇವರು ಅಯೋನಿಜರಾದುದರಿಂದ ಕರ್ಮಾತೀತರೆನಿಸಿರುವರು. ಸ್ವರ್ಗದಲ್ಲೂ ಮತ್ತು ಭುವಿಯಲ್ಲೂ, ಭುಕ್ತಿ ಮುಕ್ತಿಪ್ರದವಾದ ಭಕ್ತಿ ಮಾರ್ಗವನ್ನು ಅಖಂಡವಾಗಿ ದೇವ, ದಾನವ, ಮಾನವಾದಿಗಳಿಗೆ ಬೋಧಿಸಿ, ಧರ್ಮಗಳಲ್ಲೆಲ್ಲಾ ಪರಮೋತ್ಕೃಷ್ಟವಾದ ಹಾಗೂ ಆಗಮಾಮ್ನಾಯಾದಿಗಳಿಗೆ ಸಮ್ಮತವಾದ ಇಷ್ಟಲಿಂಗಾರಾಧನೆ, ಶಿವಪಂಚಾಕ್ಷರೀ ಮಹಾಮಂತ್ರದ ನಿತ್ಯಾನುಸಂಧಾನ, ಲಿಂಗಧಾರಣೆ ಮೊದಲಾದ ವಿಮಲ ಸನಾತನ ವೀರಶೈವಾಚಾರಗಳನ್ನು ಪ್ರಚುರಪಡಿಸಿದರು. ವಿಶ್ವಧರ್ಮಕ್ಕೆ ಅಂಗಭೂತವಾಗಿರುವ ಅಷ್ಟಾವರಣ, ಪಂಚಾಚಾರ ಮತ್ತು ಷಟ್ಸ್ಥಲಾತ್ಮಕವಾದ ಶಿವಾದ್ವೈತ ಸಿದ್ಧಾಂತವನ್ನು ಸರ್ವತ್ರ ಸಾರಿ ॥ ಧರ್ಮೋ ಲಿಂಗಾರ್ಚನಾತ್ಮಕಃ॥ ಅಂದರೆ, ಇಷ್ಟಲಿಂಗೋಪಾಸನೆಯೇ ನಿಜವಾದ ಧರ್ಮವೆಂದು ಪ್ರತಿಪಾದಿಸಿರುವರು. ಜಗತ್ರಯಗಳಲ್ಲೂ ಇದಕ್ಕೆ ಸಮಾನವಾದ ಧರ್ಮ ಮತ್ತೊಂದಿಲ್ಲವೆಂದು ಸ್ಪಷ್ಟಪಡಿಸಿ, ಹರಿಬ್ರಹ್ಮೇಂದ್ರಾದಿ ಅಖಿಲರೂ ಶಿವಪೂಜಾ ಪರಾಯಣರಾಗಿ ನಿತ್ಯಾನಂದವನ್ನು ಪಡೆಯುತ್ತಲಿರುವರೆಂದು ಶಿಷ್ಯಕೋಟಿಗೆ ಹಾಗೂ ವಿಶ್ವಕ್ಕೆ ಬೋಧಿಸಿರುವುದರಿಂದ ಜ॥ ಶ್ರೀ ಪಂಚಾಚಾರ್ಯರು ವಿಶ್ವವಂದ್ಯರಾಗಿ ವಿಶ್ವಾಚಾರ್ಯರೆನಿಸಿರುವರು. ಶಿವಸರ್ವೋತ್ತಮತ್ವವನ್ನು ಸರ್ವತ್ರ ಎತ್ತಿ ಹಿಡಿದು ಚತುರ್ಯುಗಗಳಿಂದಲೂ ಶಿವಾದ್ವೈತ ಸಿದ್ಧಾಂತ

ಶ್ರೀ ಬಸವರಾಜಯ್ಯನವರು ಇಂಗ್ಲಿಷ್, ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಸಾಕಾದಷ್ಟು ಪರಿಶ್ರಮವುಳ್ಳವರು. ಈಗಾಗಲೇ ಇವರು ವೀರಶೈವ ತತ್ತ್ವವನ್ನೊಳಗೊಂಡ ಬೃಹದ್ಗ್ರಂಥವೊಂದನ್ನು ಇಂಗ್ಲಿಷಿನಲ್ಲಿ ಪ್ರಕಟಿಸಿ ಸಮಾಜಕ್ಕೆ ಮಹೋಪಕಾರ ಮಾಡಿರುತ್ತಾರೆ. ಇವರು ಸದಾಕಾಲವೂ ಆಧ್ಯಾತ್ಮಿಕ ವಿಚಾರಗಳಲ್ಲಿಯೇ ನಿರತರಾಗಿರುತ್ತಾರೆ. ಹಸನ್ಮುಖಿಗಳು, ನಿರಾಡಂಬರ ಮೂರ್ತಿಗಳು.

ವನ್ನು ಸ್ಥಾಪಿಸಿದ ಪ್ರಪ್ರಥಮಾಚಾರ್ಯರೆಂದರೆ, ಭಗವತ್ಪಾದ ಶ್ರೀಮದ್ ಜಗದ್ಗುರು ರೇಣುಕಾದಿ ಪಂಚಾಚಾರ್ಯರೇ ಆಗಿರುವರು.

ಏತೇಯುಗ ಚತುಷ್ಕೇತು। ಪಂಚಾರಾಧ್ಯಾಯಥಾವಿಧಿಃ॥
ಮಮಲಿಂಗ ಮುಖೋದ್ಭೂತಾಃ। ಲೋಕವಿಶೃತ ಕೀರ್ತಯಃ॥

ಎಂಬ ಶಿವಾಗಮೋಕ್ತಿ ಸರ್ವಶೃತವೇಯಿರುತ್ತೆ.

ಶಿವನ ತತ್ಪುರುಷ ಮುಖ ಕಮಲದಿಂದ ಹೊರಹೊಮ್ಮಿದ 34 ಶಿವಾಗಮಗಳಲ್ಲಿ ಪ್ರಧಾನವಾದ ವೀರಾಗಮ, ವಿಜಯಾಗಮ, ಸುಪ್ರಭೇದಾಗಮ, ಸ್ವಾಯಂಭುವಾಗಮ ಮೊದಲಾದವುಗಳಲ್ಲಿ ಮಹಾಚಾರ್ಯರೈವರು ಶಿವಲಿಂಗ ಮುಖಗಳಿಂದ, ಲೀಲಾಜಾಲವಾಗಿ ಜಾಜ್ವಲ್ಯಮಾನರಾಗಿ ಅವತರಿಸಿದ ವಿಷಯ ಸುಸ್ಪಷ್ಟವಾಗಿ ಉಲ್ಲೇಖಿತವಾಗಿರುವುದು ಜಗತ್ಪ್ರಸಿದ್ಧವಿರುತ್ತೆ. ಜ॥ ಶ್ರೀ ರೇಣುಕಾದಿ ಪಂಚಾಚಾರ್ಯರು ದುಷ್ಟ ನಿಗ್ರಹ ಶಿಷ್ಟ ರಕ್ಷಣೆ ಮತ್ತು ಸನಾತನವಾದ ಸದ್ಧರ್ಮ ಸಂಸ್ಥಾಪನೆಗಾಗಿ ಜಗದಾದ್ಯಂತ ಶಿವಯೋಗ ಶಕ್ತಿಯಿಂದ ವ್ಯೋಮ ಮಾರ್ಗದಲ್ಲಿ ಸಂಚರಿಸಿ ಮಹರ್ಷಿ ಕುಲತಿಲಕರಾದ ಆದಿ ಶ್ರೀ ಅಗಸ್ತ್ಯ, ದಧೀಚಿ, ಸಾನಂದ, ವ್ಯಾಸ, ದೂರ್ವಾಸಾದಿ ಮಹರ್ಷಿಗಳನ್ನೂ ಮತ್ತು ಪ್ರಸ್ಥಾನತ್ರಯ ಭಾಷ್ಯಕರ್ತರಾದ ಶ್ರೀ ಶೃಂಗೇರಿ ಮಹೋಜ್ವಲ ಜಗದ್ಗುರು ಆದಿ ಶಂಕರಾಚಾರ್ಯರಂಥಾ ಮಹಿಮಾ ಸಂಪನ್ನರನ್ನೂ ಹಾಗೂ ರಾಜಮಹಾರಾಜರನ್ನೂ, ಲಂಕಾಧಿಪತಿಯಾದ, ದಶಕಂಠ ರಾವಣಾನುಜ, ಧರ್ಮಜ್ಞನೂ, ಕೃತಜ್ಞನೂ, ಸತ್ಯಸಂಧನೂ ಆದ ವಿಭೀಷಣ ಚಕ್ರವರ್ತಿಯನ್ನೂ, ಇನ್ನೂ ಸಹಸ್ರ ಭಕ್ತರನ್ನೂ ಅನುಗ್ರಹಿಸಿ, ಪವಾಡಪುರುಷರಾಗಿ ಮೆರೆದಿರುವರು. ತಪಃಸಿದ್ಧರಾದ ಆದಿ ಶ್ರೀ ಅಗಸ್ತ್ಯಮಹರ್ಷಿಗಳಿಗೆ ವಿಶ್ವಧರ್ಮವೆನಿಸಿದ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿ ತನ್ಮೂಲಕ ಜಗತ್ತಿನ ಆಸ್ತಿಕ ವೃಂದಕ್ಕೆ ಭಕ್ತಿ, ಕ್ರಿಯಾ, ವೈರಾಗ್ಯಾದಿ ಆತ್ಮಜ್ಞಾನದ ಶಾಶ್ವತ ಭಂಡಾರವನ್ನು ತೆರೆದಿಟ್ಟಿರುವರು. ಇವರು—

ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥

ಎಂಬ ಭಗವದ್ವಾಣಿಯಂತೆ, ಯುಗ ಪ್ರತಿಯುಗಂಗಳಲ್ಲೂ ಪಂಚ ಶಿವಲಿಂಗ ಮುಖಗಳಿಂದ ಈಶಾಜ್ಞೆಯಂತೆ ಅವತರಿಸಿ, ಧರ್ಮಗ್ಲಾನಿಯನ್ನು ನಿವಾರಿಸಿ, ಜನಸ್ತೋಮಕ್ಕೆ ಕೀಳು ಮೇಲೆಂಬ ಭೇದ ಭಾವವಿಲ್ಲದೆ, ಅಹಿಂಸೆ, ಸತ್ಯ, ದಯ, ಧರ್ಮ, ಸಹೋದರ ಭಾವ, ತೇಜಸ್ಸು, ವೀರ್ಯ, ಈಶ್ವರಾರಾಧನೆ, ಏಕೇಶ್ವರ ವಾದ, ಸೇವೆ, ಮೊದಲಾದ ದೈವೀ ಯೋಗದ ಸಂಪತ್ತನ್ನು ಜನತೆಯಲ್ಲಿ ವೃದ್ಧಿಪಡಿಸುವುದರಲ್ಲಿ ಯಶಸ್ವಿಗಳಾದ ಮಹಾಚಾರ್ಯರುಗಳಾಗಿ ಕಂಗೊಳಿಸಿದರು.

ಜಗದ್ಗುರು ಶ್ರೀ ರೇಣುಕಾದಿ ಪಂಚಾಚಾರ್ಯರ ಅವತಾರದ ವಿಷಯದಲ್ಲಿ ಅವರು ಪರಶಿವನ ಚಿತ್ಕಳಾ ಸ್ವರೂಪರೆಂಬ ಬಗ್ಗೆ ॥ ಸಸರ್ಜಾತ್ಮ ಸಮಪ್ರಖ್ಯಾನ್ ಸರ್ವಜ್ಞಾನ್ ಸರ್ವಶಕ್ತಿ ಮಾನ್॥ ಎಂದು ಶ್ರೀ ಸಿದ್ಧಾಂತ ಶಿಖಾಮಣಿ ಪ್ರತಿಪಾದಿಸುತ್ತಲಿರುವುದು. ಜ॥ ಪಂಚಾಚಾರ್ಯರು ಸರ್ವ ವಿಧದಿಂದಲೂ ಕೈಲಾಸಪತಿಯಾದ ಶ್ರೀ ಪರಮೇಶ್ವರನ ಸದೃಶರಾದ ಪ್ರಯುಕ್ತ, ಅವರು ನಿಜಕ್ಕೂ ॥ ಗುರೂಣಾಂ ಗುರುಃ ॥ ಎಂಬ ಗುರುತರವಾದ ಬಿರುದಾಂಕಿತರಾಗಿ ॥ ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ॥ ಎಂಬಂತೆ ಅಖಿಲರಿಗೂ ಪರಮಾಚಾರ್ಯರೆನಿಸಿರುವರು. ಮೇಲಿನ ಈ ಅಂಶವನ್ನು ಸ್ಫುಟಪಡಿಸುವಂತೆ ಮಹಾಚಾರ್ಯರ ಸ್ತೋತ್ರರತ್ನ ಮಾಲಿಕೆಯಲ್ಲಿ :—

॥ ಶ್ರೀಕಂಠಾನನವಾರಿಜನ್ಮ ಜನಿತಾನ್ ಶ್ರೀಕಂಠದೇಹೋಪಮಾನ್॥

ಎಂದು ಸ್ತುತಿಸಿರುವುದು ಸರ್ವದಾ ಸಂಸ್ಮರಣೀಯವಾಗಿರುವುದು.

ಯಜುರ್ವೇದಾಂತರ್ಗತವಾದ ವೀರಲೈಂಗ್ಯೋಪನಿಷತ್ತಿನಲ್ಲಿ

॥ ಸದ್ಯೋ ಜಾತಮುಖಮಾಸೀತ್॥
ಶ್ರೀ ರೇಣುಕಾಚಾರ್ಯಾರಾಧ್ಯ ಉದ್ಭವತಿ॥

ಎಂದು ತಿಳಿಸಲ್ಪಟ್ಟಿದೆ. ಸದ್ಯೋಜಾತ ಮುಖವು ಶಿವಪಂಚಾಕ್ಷರೀ ಮಹಾ ಮಂತ್ರದ “ನ” ಕಾರ ಬೀಜಾಕ್ಷರಮಯವೆನಿಸಿ, ಋಗ್ವೇದಕ್ಕೆ ಆವಾಸಸ್ಥಾನವೆನಿಸಿ, ಕಾಮಿಕಾಗಮದ ರಸಾಸ್ವಾದನೆಯಂತೆ ವಿರಾಜಿಸುತ್ತಲಿರುವುದು. ಗಮನಾರ್ಹವಾದ ಮತ್ತೊಂದಂಶವೆಂದರೆ ಪೃಥ್ವೀ ಲಿಂಗವು ಶಿವಪಂಚಾಕ್ಷರಿಯ ‘ನ’ ಕಾರ ಬೀಜಾಕ್ಷರಮಯವಾಗಿದ್ದು ಭಗವತ್ಪಾದ ಜ॥ ಶ್ರೀ ರೇಣುಕಾಚಾರ್ಯರ ಆವಿರ್ಭಾವಕ್ಕೆ ಕೊಲನುಪಾಕಿ ಕ್ಷೇತ್ರ ಪ್ರವಿರಾಜಮಾನ ಶ್ರೀ ಸೋಮನಾಥ ಲಿಂಗವು ‘ನ’ಕಾರ ಬೀಜಾಕ್ಷರ ಪೃಥ್ವೀ ಲಿಂಗವಾದುದರಿಂದ ಶ್ರೀ ಸೋಮನಾಥೇಶ್ವರ ಲಿಂಗ ಸಂಭವರಾದ ಭಗವತ್ಪಾದ ಜ॥ ರೇಣುಕರು ಅಖಿಲ ಲೋಕಗಳಿಗೆ ಜ॥ ಸಾರ್ವಭೌಮರೆಂದು ಜಗದಾದಿಯಿಂದಲೂ ಆಗಮಾಮ್ನಾಯಾದಿಗಳಲ್ಲಿ ಸ್ತುತ್ಯರಿರುವರು. ಅಂದ ಬಳಿಕ, ವೇದಾಗಮಗಳ ಕಾಲಕ್ಕಿಂತಲೂ ಪೂರ್ವಜರು, ಜ॥ ಶ್ರೀ ಪಂಚಾಚಾರ್ಯರು ಎಂಬುದು ಭಾನುಕೋಟಿ ಪ್ರಕಾಶಮಾನವಾಗಿ ಬೆಳಗುವ ಸತ್ಯಾಂಶವೆನಿಸಿರುವುದು. ಜ॥ ಶ್ರೀ ಪಂಚಾಚಾರ್ಯರು ಪಂಚಭೂತಗಳಿಗೆ ಆಧಿಪತಿಗಳೆನಿಸಿ, ಶಿವಪಂಚಾಕ್ಷರೀ ಮಹಾ ಮಂತ್ರದ ಬೀಜಾಕ್ಷರ ಸ್ವರೂಪಿಗಳಾದ್ದರಿಂದ, ಇವರು ಸ್ವಯಂ ಜ॥ ಸಾರ್ವಭೌಮರೆನಿಸಿ, ಸರ್ವತಂತ್ರ ಸ್ವತಂತ್ರರಾಗಿ ವಿರಾಜಿಸಿ ಅಯೋನಿಜರಾಗಿರುವುದರಿಂದ, ಶಿವನು ಸುಪ್ರಭೇದಾಗಮದಲ್ಲಿ “ಮದಾದಿ ಸರ್ವಲೋಕಾನಾಂ ಜಗದ್ಗುರು ವರೋತ್ತಮಾಃ” ಎಂದು ಗಿರಿಜೆ, ಷಣ್ಮುಖರಿಗೆ ಅರುಹಿರುವನು.

ಭುವಿಯಲ್ಲಿ ಶ್ರೀ ರೇಣುಕಾಚಾರ್ಯರು

ಶಿವನು ಕೈಲಾಸದಲ್ಲಿ ಜ॥ ಶ್ರೀ ರೇಣುಕರನ್ನುದ್ದೇಶಿಸಿ, ಶ್ರೀಶೈಲಕ್ಕೆ ಉತ್ತರದಲ್ಲಿ ವಿರಾಜಿಸುವ ತ್ರಿಲಿಂಗ ದೇಶದಲ್ಲಿ ಕುಲ್ಯಪಾಕವೆಂಬ ಸುಕ್ಷೇತ್ರದಲ್ಲಿ ತಾನು, "ಸೋಮೇಶ್ವರಾಭಿದಾನಸ್ಯ ತತ್ರವಾಸವತೋಮಮ। ಅಸ್ಪೃಶನ್ಮಾನುಷಂ ಭಾವಂ ಲಿಂಗಾತ್ ಪ್ರಾದುರ್ಭವಿಷ್ಯಸಿ" ಆ ಶಿವಕ್ಷೇತ್ರದ ಶ್ರೀ ಸೋಮನಾಥ ಲಿಂಗದಲ್ಲಿ ಸುಪ್ರಸನ್ನನಾಗಿರುವುದಾಗಿಯೂ, ಮತ್ತು ಆ ಶಿವಲಿಂಗಮುಖದಿಂದ ಆವಿರ್ಭವಿಸಿ, ವೇದ ವೇದಾಂತಸಮ್ಮತವಾದ ಶಿವಾದ್ವೈತ ಸಿದ್ಧಾಂತವನ್ನು

॥ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಂ॥

ಎಲ್ಲಾ ಮಾನವ ಕೋಟಿಗೆ ಹಿತವನ್ನುಂಟುಮಾಡುವ ವಿಶಾಲ ಧರ್ಮವನ್ನು ಬೋಧಿಸಿ ಉದ್ಧರಿಸೆಂದು ಆಜ್ಞಾಪಿಸಿರುವುದಾಗಿ, ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತ ಶ್ರೀ ಸಿದ್ಧಾಂತ ಶಿಖಾಮಣಿಯಿಂದ ವೇದ್ಯವೇಯಿರುತ್ತೆ. ತದನುಸಾರವಾಗಿ ಶ್ರೀ ರೇಣುಕ ಭಗವತ್ಪಾದರು—

॥ ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾ ತ್ರಿಲಿಂಗಜಾಃ॥
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿ ತೇಜಸಂ॥
ಭಸ್ಮೋದ್ಧೂಲಿತ ಸರ್ವಾಂಗು ಸಾರ ರುದ್ರಾಕ್ಷ ಭೂಷಣಂ॥
ಜಟಾಮುಕುಟ ಸಂಯುಕ್ತಂ ತ್ರಿಪುಂಡ್ರಾಂಕಿತ ಮಸ್ತಕಂ॥

ಕೈಲಾಸಪತಿಯ ಅಂಶಸಂಭೂತರಾದ ಜ॥ ಶ್ರೀ ರೇಣುಕಾಚಾರ್ಯರು ಶ್ರೀ ಸೋಮನಾಥ ಲಿಂಗದಿಂದ ಜಟಾಮುಕುಟ ತ್ರಿಪುಂಡ್ರಧಾರಿಗಳಾಗಿ, ಕಾವಿ ಕಮಂಡಲ ಹಸುರು ಕಂಥಾ ಅಶ್ವತ್ಥ ದಂಡದೊಡನೆ, ಮಸ್ತಕದಲ್ಲಿ ಇಷ್ಟಲಿಂಗವು ವಿರಾಜಿತವಾದ ದಿವ್ಯ ದೇಹಧಾರಿಗಳಾಗಿ ಸ್ವೇಚ್ಛೆಯಿಂದ ಅವತರಿಸಲು, ಸುತ್ತಲೂ ಅನಂತ ಕೋಟಿ ಭಾನುಗಳುದಯಿಸಿದಂಥ ಸ್ವಪ್ರಕಾಶದ ತೇಜಸ್ಸಿಗೆ ಮೂರ್ಛಿತರಾದ, ನೆರೆದಿದ್ದ ಭಕ್ತಸ್ತೋಮ, ಶಿವಾನುಗ್ರಹದಿಂದ ಎಚ್ಚೆತ್ತು, ಮಹಾದೇವನೇ ಧರ್ಮಸಂಸ್ಥಾಪನೆಯಿಂದ ಜಗತ್ತನ್ನು ಉದ್ಧರಿಸಲು ಮಹಾಚಾರ್ಯನಾಗಿ ಅವತರಿಸಿದನೆಂದು, ಶ್ರೀ ರೇಣುಕರನ್ನು ಸ್ತುತಿಸಿ, ಪೂಜಿಸಿ, ವಂದಿಸಿ, ಅಸದೃಶವಾದ ಭಕ್ತಿಭಾವದಿಂದ ಕೊಂಡಾಡಿದರು.

ಶಿವಲಿಂಗದಲ್ಲಿ ಮಹಾಚಾರ್ಯರು ಉದಯವಾದುದು ಹೇಗೆ ?

ಸಮಗ್ರ ಶಕ್ತಿಯುತನಾದ ಹಾಗೂ ಮಹಾ ಮಹಿಮನಾದ ಭಗವಂತನು ತನ್ನ ಸಂಕಲ್ಪದಿಂದ, ಸ್ವೇಚ್ಛಾವಿಗ್ರಹರಾಜಿತನಾಗಿ ಶಿವಲಿಂಗದಿಂದ ದಿವ್ಯ ದೇಹಧಾರಿಯಾಗಿ ಅವತರಿಸಿದನೆಂದೇ ಶಾಸ್ತ್ರಪ್ರಮಾಣವಿರುತ್ತೆ.

॥ ಸ್ಥಾಪಕಾಯಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ॥
ಅವತಾರ ವರಿಷ್ಠಾಯ ಶ್ರೀ ರೇಣುಕಾಚಾರ್ಯಯತೇ ನಮಃ॥

ಅಂದರೆ, ಸರ್ವಧರ್ಮ ಸ್ವರೂಪಿಯಾದ ಭಗವಂತನು ಸದ್ಧರ್ಮಸಂಸ್ಥಾಪನೆಗಾಗಿ ಶಿವಲಿಂಗಮುಖದಿಂದ, ಸಂಕಲ್ಪಮಾತ್ರೇಣ ಆವಿರ್ಭವಿಸಿದನೆಂದೇ ಸಿದ್ಧಾಂತ. ದೈವರಹಸ್ಯವನ್ನು ಅಲ್ಪಜ್ಞನಾದ ಮಾನವನು ಪೂರ್ಣ ಅರಿಯಲು ಸರ್ವಥಾ ಅಸಮರ್ಥನಿರುವನು. ಆದ್ದರಿಂದ ನಂಬಿ ಕೃತಕೃತ್ಯನಾಗಬೇಕು.

ಶ್ರೀ ಮಾರ್ಕಂಡೇಯನನ್ನುದ್ಧರಿಸಲು ಸ್ವಾಮಿ ಶಿವಲಿಂಗದಿಂದ ಆವಿರ್ಭವಿಸಿದ ವಿಷಯ ಲೋಕ ಪ್ರಸಿದ್ಧವೇ ಇರುತ್ತೆ. ಭಕ್ತನಾದ ಬೇಡರ ಕಣ್ಣಪ್ಪನನ್ನು ಕಟಾಕ್ಷಿಸಲು, ಶಿವನು ಶಿವಲಿಂಗದಿಂದ ಅವತರಿಸಿರುವುದು ಹಾಗೂ ಕೋಳೂರು ಕೊಡಗೂಸಿನ ಭಕ್ತಿಗೆ ಶಿವನು ಲಿಂಗದಿಂದ ಮೈದೋರಿರುವುದು ಪ್ರಸಿದ್ಧವಿದೆ. ಶ್ರೀ ಮಹಾವಿಷ್ಣುವು ಶ್ರೀ ಪ್ರಹ್ಲಾದನ ಕೋರಿಕೆಯಂತೆ ಕಲ್ಲುಕಂಬದೀದ ನೃಸಿಂಹಾವತಾರವನ್ನು ತಾಳಿರುವನು. ಒಮ್ಮೆ ಬಾಲಕ ಚಂದ್ರಹಾಸನ ದವಡೆಯಲ್ಲಿದ್ದ ಸಾಲಿಗ್ರಾಮದಲ್ಲೂ ವಿಷ್ಣು ನೃಸಿಂಹ ರೂಪವನ್ನು ದುಷ್ಟಬುದ್ಧಿಯ ಚಾರರಿಗೆ ಪ್ರಕಟಗೊಳಿಸಿರುವನೆಂಬುದೂ ಸಹ ಶ್ರೀ ಮಹಾ ಭಾಗವತದೀದ ವೇದ್ಯವೇ ಇರುತ್ತೆ. ಇದರಿಂದಾಗಿ ಭಗವಂತನೊಲಿದರೆ ಏನುತಾನೇ ಆಗಲಾರದು.

॥ ನೀವೊಲಿದರೆ ಕೊರಡು ಕೊನರುವುದಯ್ಯಾ ॥
ನೀವೊಲಿದರೆ ಬರಡು ಹಯನಹುದಯ್ಯಾ॥
ನೀವೊಲಿದರೆ ವಿಷವಮೃತವಹುದಯ್ಯಾ॥
ನೀವೊಲಿದರೆ ಸಕಲ ಪಡಿಪದಾರ್ಥ ಇದಿರಲ್ಲಿಪ್ಪವಯ್ಯಾ
ಕೂಡಲ ಸಂಗಮ ದೇವಾ ॥

ಎಂಬ ಮಹಾನುಭಾವರಾದ ಶ್ರೀ ಬಸವಣ್ಣನವರ ವಚನ ಮೇಲ್ಕಂಡ ಪ್ರತಿಪಾದನೆಗೆ ಪೂರಕವೆನಿಸಿರುವುದು. ಸತ್ಯಾರ್ಥ ಪ್ರಕಾಶಿತವಾದ ಈ ಪವಿತ್ರ ವಿಷಯಗಳನ್ನು ನಿರ್ಮಲ ಹೃದಯದಿಂದ ಪೂರ್ಣ ನಂಬಿ ಜ॥ ಶ್ರೀ ರೇಣುಕಾದಿ ಪಂಚಾಚಾರ್ಯರ ಕೃಪಾಶೀರ್ವಾದಗಳಿಂದ ಧನ್ಯರಾಗಿ ಮಾನವರು ಕೃತಕೃತ್ಯರೆನಿಸಬೇಕು. ಈ ಸಂದರ್ಭದಲ್ಲಿ "ಶಿವಪಥವನರಿಯಲು ಗುರುಪಥವೇ ಮೊದಲು" ಎಂದು ಜಗತ್ತಿಗೆ ಸಾರಿದ ಮಹಾತ್ಮ ಶ್ರೀ ಬಸವಣ್ಣನವರ ವಚನಾಮೃತ ಶಿವಾಗಮೋಕ್ತಿಗೆ ಅನುಸಾರವಾಗಿಯೇ ಇರುತ್ತೆ.

Our
Salutations
to
Pancha
Peetadhi
Pathis

Phone:
2135

Mulagunda
Industries

Renuka Extension DAVANGERE

Our Pranamams to the Holy
Jagadgurus of Pancha Peetas

SHREE
KAMAL
Dall Mill

Phone : 104
Grams : JAYSHREE

GAWALIPARA DURG (M. P.)

Manufacturers of:
ALL KINDS OF
QUALITY DALL

★

Agents:

M|s C. VEERABHADRAIAH & SONS

OLD THARAGUPET, BANGALORE - 2A

OUR SALUTATIONS TO

V. S. Ramachandraj

Kirti Hasan

H. S. Veerabhadrappa

Partners

Sri Raghurama Agencies

MANDY MERCHANTS

AND

COMMISSION AGENTS

No. 16/12, Mysore Road, N. T. Pet

BANGALORE-2

Pancha Jagadgurus

ಶ್ರೀ ಉಜ್ಜಯಿನಿ ಜಗದ್ಗುರು ಮರುಳಾರಾಧ್ಯರವರ ಸಂಕ್ಷಿಪ್ತ ಜೀವನಚರಿತ್ರೆ



ಜ್ಯೋತಿರ್ಭೂಷಣ
ಶ್ರೀ ಕೆ. ಎಸ್. ಶಿವರುದ್ರಸ್ವಾಮಿಗಳು, ಮೈಸೂರು.

ಶ್ರೀ ಕೆ. ಎಸ್. ಶಿವರುದ್ರಸ್ವಾಮಿಯವರು ಪ್ರಸಿದ್ಧ ಜ್ಯೋತಿಷಜ್ಞರು. ಶ್ರೀಯುತರು ದೇವಿ ಉಪಾಸನೆಯಲ್ಲಿ ನಿಷ್ಣಾತರು. ಶ್ರೀ ಉಜ್ಜಯಿನಿ ಪೀಠದ ಬಗ್ಗೆ ಆಳವಾಗಿ ಅಭ್ಯಾಸ ಮಾಡಿರುವ ಶ್ರೀಯುತರು ಶ್ರೀ ಉಜ್ಜಯಿನಿ ಜಗದ್ಗುರು ಮರುಳಾರಾಧ್ಯರ ಜೀವನ ಚರಿತ್ರೆಯನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ.

ಶ್ರೀಮದ್ವೇದ ವೇದಾಂತ ಸಿದ್ಧಾಂತ ಪುರಾಣಾಗಮೇತಿಹಾಸ ಸಕಲ ಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಜಗದ್ಗುರು ಪಂಚಾಚಾರ್ಯರು ಜ್ಯೋತಿ ಸ್ವರೂಪವಾದಪರಾಶಕ್ತಿಯಿಂದಕೂಡಿದಪರಂಜ್ಯೋತಿಯಾದಪರಮೇಶ್ವರನ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಎಂಬ ಪಂಚಮುಖಗಳಿಂದ ಅವತರಿಸಿ ಪರಮೇಶ್ವರನ ಅಪ್ಪಣೆಯ ಪ್ರಕಾರ ಶಿವಲಿಂಗಗಳಿಂದ ಉದ್ಭವವಾದರೆಂದು ಶಿವಾಗಮಗಳಲ್ಲಿ ಘಂಟಾಘೋಷವಾಗಿ ತಿಳಿಸಿರುತ್ತದೆ.

ಪಂಚಾಚಾರ್ಯರಲ್ಲೊಬ್ಬರಾದ ಮರುಳಾರಾಧ್ಯರು

ಪರಮೇಶ್ವರನ ಪಂಚ ಮುಖಗಳಲ್ಲೊಂದಾದ ವಾಮದೇವ ಮುಖದಿಂದವತರಿಸಿ ಕೃತಯುಗದಲ್ಲಿ ದ್ವ್ಯಕ್ಷರ, ತ್ರೇತಾಯುಗದಲ್ಲಿ ದ್ವಿವಕ್ತ್ರ, ದ್ವಾಪರಯುಗದಲ್ಲಿ ದಾರುಕ ಎಂಬ ನಾಮಾಂಕಿತದಿಂದವತರಿಸಿ, ದಧೀಚಿ ಮಹಾ ಋಷಿಗಳಿಗೆ ಶಿವತತ್ವೋಪದೇಶವನ್ನು ಮಾಡಿ ಶಿವನೇ ಸರ್ವೋತ್ತಮನೆಂದು ಸ್ಥಿರಪಡಿಸಿ, ಇನ್ನೂ ಅನೇಕ ಮಹಾಋಷಿಗಳಿಗೂ ಮತ್ತು ಇತರರಿಗೂ ಸಹ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೋಧಿಸಿ ಶಿವ ಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡಿ ಇವರುಗಳಿಗೆಲ್ಲಾ ಮೋಕ್ಷಮಾರ್ಗವನ್ನು ತೋರಿಸಿದರು—

ಈ ಕಲಿಯುಗದಲ್ಲಿ ಮಾಳವ ದೇಶದ ರಾಜಧಾನಿಯಲ್ಲಿ ಮಹಾರಾಜನಾದ ಶೌತ್ರಪಾಲನು ಮತ್ತು ಭಾನುಮತಿ ಎಂಬ ರಾಜದಂಪತಿಗಳು ಸಕಲಗುಣ ಸಂಪನ್ನರಾಗಿದ್ದರೂ ಸಹ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ, ಗೋಹತ್ಯ, ಸ್ತ್ರೀಹತ್ಯ, ಶಿಶುಹತ್ಯ ಇತ್ಯಾದಿಗಳ ಮೂಲಕ ಯಜ್ಞ ಯಾಗಾದಿಗಳನ್ನು ಆಚರಿಸುತ್ತಿದ್ದರು. ಏತನ್ಮಧ್ಯೆ ಈ ರಾಜದಂಪತಿಗಳಿಗೆ ಅನುಭವಿಸಲು ಅಸಾಧ್ಯವಾದ ತೊಂದರೆಗಳು ಒದಗಿ ವ್ಯಥೆಪಡುತ್ತಿದ್ದರು.

ಈ ರಾಜಧಾನಿಯಲ್ಲಿ ಮತ್ತೊಂದುಕಡೆ ಸರ್ವರನ್ನು ಪರಮಾಶ್ಚರ್ಯಗೊಳಿಸುವ ವಟವೃಕ್ಷದ ಬುಡದಲ್ಲಿ ಮಹಾಕಾಳೇಶ್ವರ ಎಂಬ ಒಂದು ಶಿವಲಿಂಗವು ಮತ್ತು ಮಹಾಕಾಳಿ ಎಂಬ ಒಂದು ಶಕ್ತಿ ವಿಗ್ರಹವು ಬಹಳ ಶೋಭಾಯಮಾನವಾಗಿ ಸಕಲರಿಂದ ಪೂಜಿಸಿಕೊಳ್ಳುತ್ತಾ ಅವರವರ ಇಷ್ಟದಂತೆ ಅವರವರಿಗೆ ಸಿದ್ಧಿಯಾಗುತ್ತಿದ್ದ ಕಾರಣ ಸಿದ್ಧೇಶ್ವರ ಎಂಬ ಹೆಸರು ದೇಶಾದ್ಯಂತ ಪ್ರಸಿದ್ಧಿಯಾಗಿದ್ದಿತು.

ಈ ವಿಚಾರವನ್ನು ಶೌತ್ರಪಾಲ, ಭಾನುಮತಿ ಎಂಬ ರಾಜ ದಂಪತಿಗಳು ಅರಿತವರಾಗಿ ವಟವೃಕ್ಷದಡಿಯಲ್ಲಿ ಶೋಭಿಸುತ್ತಿರುವ ಸಿದ್ಧೇಶ್ವರ ಲಿಂಗಕ್ಕೆ ಷೋಡಶೋಪಚಾರಗಳಿಂದ ಪೂಜಿಸಿ ಭಯ ಭಕ್ತಿಯಿಂದ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಾ ಇರುತ್ತಿರಲು ಆ ಸಮಯಕ್ಕೆ ಸರಿಯಾಗಿ ಪರಮೇಶ್ವರನ ಅಪ್ಪಣೆಯ ಪ್ರಕಾರ ದಾರುಕಾಚಾರ್ಯರು ವೀರಶೈವ ಮತವನ್ನು ಸ್ಥಾಪಿಸುವುದಕ್ಕೋಸುಗ ಮೇಲ್ಕಂಡ ಶ್ರೀ ಸಿದ್ಧೇಶ್ವರಲಿಂಗದಿಂದುದ್ಭವಿಸಿ– ಎಲ್ಲೈ ರಾಜದಂಪತಿಗಳಿರಾ! ಭಯಪಡಬೇಡಿ. ನಾನು ದಾರುಕಾಚಾರ್ಯನೆಂಬ ಬಿರುದಾಂತ ಗಣವರನು. ಈ ಕಲಿಯುಗದಲ್ಲಿ ಪರಮೇಶ್ವರನ ಅಪ್ಪಣೆಯ ಪ್ರಕಾರ ವೀರಶೈವ ಮತ ಸ್ಥಾಪನೆಯನ್ನು ಮಾಡಿ ವೇದಾಗಮೋಪನಿಷತ್ತುಗಳಿಗನುಸಾರವಾಗಿ ಅಹಿಂಸಾತ್ಮಕ ರೂಪವಾದ ಯಜ್ಞ ಯಾಗಾದಿಗಳನ್ನು ಮತ್ತು ಅಷ್ಟಾವರ್ಣ ಪಂಚಾಚಾರಾದಿ ವೈದಿಕ ಕರ್ಮಮಾರ್ಗಗಳನ್ನು ಮಾನವರು ಆಚರಿಸಿ ಧನ್ಯರಾಗಲೆಂಬ ಅಭಿಲಾಷೆಯಿಂದ ಈ ಲಿಂಗಮುಖದಿಂದ ಮರುಳಾರಾಧ್ಯನೆಂಬ ನಾಮಾಂಕಿತದಿಂದ ಉದ್ಭವಿಸಿರುತ್ತೇನೆ.

ನೀವು ಹೆದರಬೇಡಿ, ನೀವೀರ್ವರೂ ನಿಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹಿಂಸಾತ್ಮಕವಾಗಿ ಆಚರಿಸುತ್ತಿದ್ದ ಯಜ್ಞ ಯಾಗಾದಿ ಇನ್ನಿತರ ಕರ್ಮಗಳನ್ನೆಲ್ಲಾ ನಿಲ್ಲಿಸಿ “ಇನ್ನು ಮುಂದೆ ನೀವು ಶುದ್ಧ ವೈದಿಕ ಮಾರ್ಗಸ್ಥರಾಗಿ ಅಹಿಂಸಾತ್ಮಕವಾದ ಯಜ್ಞ ಯಾಗಾದಿಗಳನ್ನು ಆಚರಿಸುತ್ತಾ ಶಿವನೇ ಸರ್ವೋತ್ತಮನೆಂದು ಅರಿತು ಅಷ್ಟಾವರಣ ಪಂಚಾಚಾರಗಳಿಗೆ ಅನುಸಾರವಾಗಿ ಆಚರಿಸಿ. ನಿಮ್ಮಗಳ ಕಷ್ಟ ಪರಿಹಾರವಾಗುತ್ತದೆ” ಎಂದು ಹೇಳಿ, ಆ ರಾಜ ದಂಪತಿಗಳಿಗೂ ಮತ್ತು ಆ ರಾಜ್ಯದಲ್ಲಿದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರಿಗೂ ಶಿಲಾಮಯವಾದ ಶಿವಲಿಂಗಧಾರಣೆಯನ್ನು ಮಾಡಿ ಶಿವ ಪಂಚಾಕ್ಷರೀ ಮಹಾ ಮಂತ್ರೋಪದೇಶವನ್ನು ಮಾಡಿ ಸರ್ವರಿಗೂ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೋಧಿಸಿ ಮೋಕ್ಷ ಮಾರ್ಗವನ್ನು ತೋರಿಸಿ ಪ್ರಖ್ಯಾತರಾದರು.

ಅನಂತರ, ವೀರಶೈವ ಮತಸ್ಥಾಪನೆಯ ಕಾರ್ಯವನ್ನು ಕೈಗೊಳ್ಳಲು ಉಜ್ಜಯಿನಿ ರಾಜಧಾನಿಯಲ್ಲಿ ಒಂದು ಧರ್ಮ ಪೀಠವನ್ನು ಸ್ಥಾಪಿಸಿ ಮೂರು-ನಾಲ್ಕು ನೂರು ವರ್ಷಗಳ ಕಾಲ ಜೀವಂತರಾಗಿ ಆಸೇತು ಹಿಮಾಲಯ ಪರ್ಯಂತ ಶಾಖಾ ಮಠಗಳನ್ನು ಸ್ಥಾಪಿಸಿ ಶಿವತತ್ತ್ವೋಪದೇಶ ಮಾಡಿ, ಶಿವಾಗಮಾನುಸಾರ ಅಹಿಂಸಾತ್ಮಕವಾದ ಯಜ್ಞ ಯಾಗಾದಿ ವೈದಿಕ ಕರ್ಮಗಳನ್ನೆಲ್ಲಾ ಬೋಧಿಸಿ ಸರ್ವರಿಗೂ ಶಿಲಾಮಯವಾದ ಶಿವಲಿಂಗಧಾರಣೆಯನ್ನು ಮಾಡಿ ಶಿವಪಂಚಾಕ್ಷರಿ ಮಹಾ ಮಂತ್ರದೊಡನೆ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೋಧಿಸಿ ನಾಸ್ತಿಕರನ್ನೆಲ್ಲಾ ಆಸ್ತಿಕರನ್ನಾಗಿ ಮಾಡಿದರು.

ಕೊಲ್ಲಾಪುರ ಮಹಾಕ್ಷೇತ್ರದಲ್ಲಿ ವಿರಾಜಿಸುತ್ತಿದ್ದ ಮಹಾಮಾಯಾ ಎಂಬ ಶಕ್ತಿ ದೇವತೆಯು ಲೋಕಕಂಟಕಳಾಗಿ ಸರ್ವರಿಗೂ ಅನೇಕ ತರಹೆಯ ತೊಂದರೆಗಳನ್ನು ಕೊಡುತ್ತಾ ಅಹಂಕಾರದಿಂದ ಮೆರೆಯುತ್ತಿದ್ದಳು.

ಮರುಳಾರಾಧ್ಯರಾದ ಈ ಮಹಾತ್ಮರು ತಮ್ಮ ತಪೋಬಲದಿಂದ ಈ ಮಹಾಮಾಯೆಯ ಅಹಂಕಾರವನ್ನು ನಾಶಪಡಿಸಿ ಲೋಕವಿಖ್ಯಾತರಾಗಿ ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನಾದಿ ಕಾರ್ಯಗಳನ್ನು ಮಾಡಿದರು. ಶಕ್ತಿವಿಶಿಷ್ಟಾದ್ವೈತವನ್ನು ಬೋಧಿಸುತ್ತಾ ಶಿವನೇ ಸರ್ವೋತ್ತಮನೆಂದು ಸಾರಿ ಶಿವದೀಕ್ಷಾದಿ ವೈದಿಕ ಕರ್ಮಮಾರ್ಗಗಳನ್ನೂ ಸಹ ವಿಧಿವತ್ತಾಗಿ ಆಚರಿಸಲೇಬೇಕೆಂದು ಬೋಧಿಸಿ ಅಂತ್ಯದಲ್ಲಿ ತಾವು ಅವತರಿಸಿದ್ದ ವಟವೃಕ್ಷ ಶ್ರೀ ಸಿದ್ಧೇಶ್ವರ ಲಿಂಗದಲ್ಲಿ ದಿವ್ಯ ದೇಹಧಾರಿಗಳಾಗಿ ಅಡಗಿ ಲೋಕವಿಖ್ಯಾತರಾದರು.

ಮಾಳವ ದೇಶದ ಅವಂತಿ ಪಟ್ಟಣವು ಉಜ್ಜಯಿನಿಯ ಶತ್ರುಗಳ ಕೈವಶವಾಗಿ ಹಾಳಾದ ನಂತರ ಆ ತಕ್ಷಣ ಆ ಕಾಲದ ರಾಜ ಮಹಾರಾಜರುಗಳಿಗೆ ಒದಗಿದ್ದ ವಿಪತ್ತುಗಳನ್ನೆಲ್ಲಾ ಈ ಪೀಠಾಧೀಶ್ವರರು ಬಗೆಹರಿಸಿ ಅವರಿಂದ ಆ ಸದ್ಧರ್ಮ ಪೀಠವನ್ನು ಜೀರ್ಣೋದ್ಧಾರ ಮಾಡಿಕೊಂಡು ಬಂದಿರುವುದಕ್ಕೆ ಸಾಕ್ಷಿಯಾಗಿ ಈಗ ಆ ಸಿಂಹಾಸನ ಮಠವು ಬಳ್ಳಾರಿ ಜಿಲ್ಲೆಯ ಕೂಡಲಿಗಿ ತಾಲ್ಲೋಕು ಉಜ್ಜಯಿನಿ ಗ್ರಾಮದಲ್ಲಿ ಪರಿಶೋಭಿಸುತ್ತಿದೆ.

ಶ್ರೀ ಜಗದ್ಗುರು ಮರುಳಾರಾಧ್ಯರ ಕಾಲದಿಂದೀಚೆಗೆ 108 ಮಂದಿ ಪೀಠಾಚಾರ್ಯರು ಶ್ರೀ ಸದ್ಧರ್ಮ ಪೀಠವನ್ನು ಕಾಪಾಡಿಕೊಂಡು ಬಂದಿರುತ್ತಾರೆ. ಹಾಲಿ ಈ ಪೀಠದ ಜಗದ್ಗುರುಗಳವರಾದ ಶ್ರೀ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಪೂರ್ವಾಚಾರ ಪದ್ಧತಿಯಂತೆ ಆಚಾರ ವಿಚಾರಗಳನ್ನು ಕ್ರಮಪಡಿಸುತ್ತ ಜಗತ್ಕಲ್ಯಾಣಕ್ಕೋಸುಗ ಶಿವಲಿಂಗಾರ್ಚನಾದಿ ತಪೋನಿಷ್ಠರಾಗಿ ಪರಿಶೋಭಿಸುತ್ತಿರುವುದು ಶ್ರೀಮದ್ವೀರಶೈವರ ಪೂರ್ವಪುಣ್ಯ ಪ್ರಭಾವವೇ ಎಂದು ಭಾವಿಸಬೇಕಾಗಿರುತ್ತದೆ.

Our Salutations to
Jagadguru Pancha Peethadhipatis

M. NARASIMIAH
PROPRIETOR

S. L. N. Motor Service
SRIRAMAPURAM
BANGALORE-21



Our Salutations to Jagadguru Panchacharyas

Grams: **HARUNDI**

Phones: Offi 72429
79269
Res. 26079

H. S. BASAPPA
Engineering Contractor

Representative for India & Life Member of World Tennis, New York. Life Member of International Recreation Centre, New York

No. 130-3, Nehrunagar Railwayline Road,
BANGALORE - 20
'Kamala Mansion' 143, Infantry Road, BANGALORE-1

ಪಂಚ ಜಗದ್ಗುರುಗಳ ಸಮಾವೇಶ :
ಜಗತ್ ಕಲ್ಯಾಣಕ್ಕೆ ಮಹಾ ಸಾಧಕ
ಈ ಶುಭ ಸಂದರ್ಭಕ್ಕೆ ನಮ್ಮ ಪ್ರಣಾಮ

ವಿಜಯ ಪಿಕ್ಚರ್ಸ್ ಸರ್ಕ್ಯೂಟ್

★

ಗಾಂಧಿನಗರ
ಬೆಂಗಳೂರು - 9

"ಭಕ್ತಿ ಭಾಗೀಥೀ" "ಕವಿತಾ ಚತುರೆ"

S.U. ಶಾಮಲಾದೇವಿ G.S. ಉಮಾಪತಿಯವರು

ತಿಪಟೂರು

ಶ್ರೀ ಜಗದ್ಗುರು ಪಂಚಾಚಾರ್ಯರು ಪರಶಿವನ ಪಂಚ ಮುಖಗಳಿಂದ ಭೂಮಂಡಲದಲ್ಲಿ ಅವತರಿಸಿ ವೀರಶೈವಮತವನ್ನು ಸ್ಥಾಪನೆಮಾಡಿ ಋಷಿಪುಂಗವರಿಗೆ ವೇದವೇದಾಂತಸಿದ್ಧಾಂತಗಳನ್ನು ಉಪದೇಶಮಾಡಿ, ಇಂದಿಗೂ ಮಾನವ ಕೋಟಿಯ ಅಭ್ಯುದಯಕ್ಕೆ ಮಾರ್ಗದರ್ಶಕರಾಗಿದ್ದಾರೆ.

1. ಶ್ರೀ ರಂಭಾಪುರಿ ಕ್ಷೇತ್ರವು ಅಗಸ್ತ್ಯಾದಿ ಋಷಿಗಳಿಗೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಉಪದೇಶಮಾಡಿ, ತನ್ಮೂಲಕ ವೀರಶೈವ ಸಿದ್ಧಾಂತವನ್ನು ಹೊರಹೊಮ್ಮಿಸಿ, ಜೀವಾತ್ಮನನ್ನು ಪರಮಾತ್ಮನನ್ನಾಗಿ ಮಾಡುವ ಪಾವನ ಕಾರ್ಯದಲ್ಲಿ ಪ್ರಸಿದ್ಧವಾಗಿದೆ. 'ಮಾನವ ಧರ್ಮಕ್ಕೆ ಜಯವಾಗಲಿ' 'ವಿಶ್ವಕ್ಕೆ ಶಾಂತಿ ದೊರಕಲಿ' ಎನ್ನುವ ಸೂತ್ರಗಳನ್ನು ಈಗಲೂ ಶ್ರೀ ಕ್ಷೇತ್ರವು ಘೋಷಿಸುತ್ತಿದೆ. ಮಾನವನನ್ನು ಸಾಧಕನನ್ನಾಗಿ ಪರಿವರ್ತಿಸುತ್ತಿದೆ.

2. ಶ್ರೀ ಉಜ್ಜಯಿನಿಯ ಸದ್ಧರ್ಮ ಕ್ಷೇತ್ರವು ಜನತೆಗೆ ತತ್ವಬೋಧೆಯ ಮೂಲಕ ಧರ್ಮಪರಿಚಯವನ್ನು ಉಂಟುಮಾಡಿಕೊಡುತ್ತ ಮಾನವನ ಉದ್ಧಾರ ಕಾರ್ಯದಲ್ಲಿ ಪ್ರಸಿದ್ಧವಾಗಿದೆ.

ಪಂಚ ಕ್ಷೇತ್ರಗಳು ಮತ್ತು ಗುರು ಸ್ವರೂಪ

3. ಶ್ರೀ ಕೇದಾರ ಕ್ಷೇತ್ರವು ಭಾರತದ ಶಿರೋಭಾಗವಾದ ಹಿಮಾಲಯ ಪರ್ವತದ ತಪ್ಪಲಲ್ಲಿದ್ದು ಪರಮ ವೈರಾಗ್ಯ ಮೂರ್ತಿಗಳ ತಪೋಸ್ಥಾನವಾಗಿದೆ. ಮುಮುಕ್ಷುಗಳಿಗೆ ಸಾಧನ ಕೇಂದ್ರವಾಗಿ ಪ್ರಜ್ವಲಿಸುತ್ತಿದೆ.

4. ಶ್ರೀಶೈಲ ಕ್ಷೇತ್ರವು ಶಿವಶರಣರ ಆವಾಸಸ್ಥಾನವಾಗಿ ಸಮಸ್ತ ಮಾನವರಿಗೆ ಮೋಕ್ಷದಾಯಕವಾಗಿ ಕಂಗೊಳಿಸುತ್ತಿದೆ. ಅಲ್ಲದೆ, ಭವರೋಗವೈದ್ಯನಾದ ಶ್ರೀಗಿರಿಯ ಮಲ್ಲಿಕಾರ್ಜುನನು ಈ ಕ್ಷೇತ್ರದಲ್ಲಿ ಅನೇಕ ಔಷಧಿಯ ಮೂಲಿಕೆಗಳನ್ನು ಸೃಜಿಸಿ ಭಕ್ತರ ಭವವನ್ನು ಹಾಗೂ ದೈಹಿಕ ರೋಗರುಜಿನಾದಿಗಳನ್ನು ನಿವಾರಣೆ ಮಾಡುವುದರ ಮೂಲಕ ಭಕ್ತರನ್ನು ತನ್ನೆಡೆಗೆ ಬರಮಾಡಿಕೊಳ್ಳುತ್ತಿದ್ದಾನೆ.

5. ಶ್ರೀ ಕಾಶೀ ಕ್ಷೇತ್ರವು ಸಕಲ ಭಾರತೀಯರಿಗೂ ಪರಮ ಪವಿತ್ರ ಸ್ಥಾನವಾಗಿ, ವಿದ್ಯಾ ಸಂಪತ್ತಿಗೆ ಲೋಕಪ್ರಸಿದ್ಧವಾಗಿ, ಮಾನವರ ಸರ್ವಪಾಪಗಳನ್ನು ನಿವಾರಣೆ ಮಾಡಿ ವಿಶ್ವದಲ್ಲಿ ಧರ್ಮಸ್ಥಾಪನೆಗೆ ಅವಿರಳವಾಗಿ ಶ್ರಮಿಸುತ್ತಿದೆ. ಇಂದಿಗೂ

ಶ್ರೀಮತಿ ಶಾಮಲಾದೇವಿ ಉಮಾಪತಿಯವರು ಗುರುಪೀಠಗಳ ವಿಚಾರದಲ್ಲಿ ಅತ್ಯಂತ ಶ್ರದ್ಧಾ ಭಕ್ತಿಗಳಿಂದ ನಡೆದುಕೊಳ್ಳತಕ್ಕವರು. ಇವರು ಲೇಖಕಿಯೂ ಆಗಿರುವುದು ಸುವರ್ಣಕ್ಕೆ ಸುವಾಸನೆ ಮೂಡಿದಂತಿದೆ. ಇವರು ತಮ್ಮ ಲೇಖನದಲ್ಲಿ ಗುರುತತ್ತ್ವವನ್ನು ಸಪ್ರಮಾಣವಾಗಿ ನಿರೂಪಿಸಿರುತ್ತಾರೆ.

ಕಾಶಿಯ ಹಿಂದೂ ವಿಶ್ವವಿದ್ಯಾನಿಲಯವು ವಿದ್ಯಾಸಂಸ್ಥೆಗಳಲ್ಲಿ ಅಗ್ರಸ್ಥಾನವನ್ನು ಗಳಿಸಿದೆ. ಹೀಗೆ ಪಂಚ ಪೀಠಾಚಾರ್ಯರ ಕ್ಷೇತ್ರಗಳು ಜಗತ್ತಿನ ಶಾಂತಿಗೆ ಸೋಪಾನಗಳಾದ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಜನತೆಯಲ್ಲಿ ಮೂಡಿಸುತ್ತಿವೆ. ಈ ಪವಿತ್ರ ಕ್ಷೇತ್ರಗಳಿಂದ ತನ್ನನ್ನು ತಾನು ಅರಿಯುವ ವಿಧಾನವೂ ಜೀವನು ಶಿವನಾಗುವ ಸಿದ್ಧಾಂತವೂ ಹೊರಹೊಮ್ಮಿ ಪ್ರಕಾಶಕ್ಕೆ ಬರುತ್ತಿವೆ.

ಸತ್ಯ ಅಹಿಂಸೆ ಸುಖ ಶಾಂತಿ- ಎಂಬ ತತ್ವಗಳನ್ನು ಕುರಿತು ವಿಚಾರ ಮಥನ ನಡೆಸಿ ಇವುಗಳ ಬಗೆಗೆ ಸಾಮಾನ್ಯ ಜನರಿಗೆ ದಾರಿ ತೋರಿಸಿ ಸಕಲಾತ್ಮರಿಗೂ ಲೇಸನೇ ಬಯಸುವುದು, ಮಹಾತ್ಮರುಗಳಿಗೆ ಮಾತ್ರ ಸಾಧ್ಯ, ಇಂತಹ ಮಹಾತ್ಮರುಗಳಿರುವ ಸ್ಥಾನವೇ ಪವಿತ್ರ ಕ್ಷೇತ್ರ. ಈ ಪವಿತ್ರ ಕ್ಷೇತ್ರಗಳೇ ಪಂಚ ಪೀಠಗಳು.

ಗುರು ಸ್ವರೂಪ

ಸಮಸ್ತ ದುಃಖದೋಷಗಳನ್ನು ನಾಶಮಾಡಬಲ್ಲ ಎಲ್ಲಾ ವಿಧವಾದ ಮೂರ್ತಿಗಳ ರಹಸ್ಯವನ್ನು ಬಿಚ್ಚಿ ತೋರಿಸಬಲ್ಲ ಮಹಾತ್ಮನಾದ ಗುರುದೇವನನ್ನು ನಮಸ್ಕರಿಸುತ್ತೇನೆ. ಶ್ರದ್ಧೆಯಿಂದ ಭಕ್ತಿಯಿಂದ ಗುರುವನ್ನು ದೇವಭಾವದಿಂದ ಪೂಜಿಸಿ ಆತನ ಅನುಗ್ರಹವನ್ನು ಸಂಪಾದಿಸಿಕೊಳ್ಳುವುದು ಗುರುಭಕ್ತನ ಕರ್ತವ್ಯವು.

ಗುರುವಿಲ್ಲದೆ ಜ್ಞಾನವಿಲ್ಲ, ಮುಕ್ತಿಯಿಲ್ಲ, ಸದ್ಗುರುವನ್ನು ಬ್ರಹ್ಮ, ವಿಷ್ಣು, ಮಹೇಶ್ವರ, ರೂಪವೆಂದು ತಿಳಿಯಬೇಕು. ಕರಚರಣಾದಿ ಅವಯವಗಳಿಂದೊಡಗೂಡಿ ಪರಬ್ರಹ್ಮನೇ ಗುರುರೂಪದಿಂದಿಳಿದು ಬಂದಿರುವನೆಂದು ತಿಳಿಯಬೇಕು. ಶಿಲೆಯಲ್ಲಿ, ಮಣ್ಣಿನಲ್ಲಿ, ಮರದಲ್ಲಿ, ಮಾಡಿದ ದೇವಮೂರ್ತಿಗಳನ್ನು ನೋಡುತ್ತಿದ್ದೇವೆ. ಪುರಾಣದಲ್ಲಿ ಹೇಳಿರುವ ಶಿವ, ವಿಷ್ಣು, ದೇವಿ, ಗಣಪತಿ, ಮುಂತಾದವರ ವರ್ಣನೆಯನ್ನನುಸರಿಸಿ ಸಿದ್ಧವಾದ ಮೂರ್ತಿಗಳು ಶಾಸ್ತ್ರೋಕ್ತವಾಗಿ ಪ್ರತಿಷ್ಠೆ ಮಾಡಲ್ಪಟ್ಟಿವೆ. ಗುರುದೇವನು ಹಾಗಲ್ಲ. ಶ್ರೇಷ್ಠವಾದ ನರಜನ್ಮ ರೂಪಿ ದೇವಾಲಯದಲ್ಲಿ ಸೃಷ್ಟಿಕರ್ತನಿಂದಲೇ ಪ್ರತಿಷ್ಠಿತವಾದ ಚೈತನ್ಯಮೂರ್ತಿ.

ಯಾವನು ಗುರುವೋ ಅವನೇ ಶಿವನು, ಯಾವನು ಶಿವನೋ ಅವನೇ ಗುರುವು, ಶಿವನಿಗೂ ಗುರುವಿಗೂ ಬೇಧವಿಲ್ಲೆಂದು ಶಾಸ್ತ್ರವು ಬೋಧಿಸುವುದು. "ಮುಕ್ತಿಮೂಲಂ ಗುರೋಃ ಕೃಪಾ ॥ ಎಂಬ ಗುರು ಗೀತಾವಾಕ್ಯದಂತೆ, ಮುಕ್ತಿಗೆ ಗುರುವೇ ಮೂಲ ಕಾರಣನಾಗಿರುವನು. ಪರಶಿವಬ್ರಹ್ಮವನ್ನು ತಿಳಿಯಲಿಚ್ಛಿಸುವವನು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಗುರುವನ್ನು ಆಶ್ರಯಿಸಬೇಕೆಂದು "ಮುಂಡಕೋಪನಿಷತ್ತು" ಬೋಧಿಸುತ್ತದೆ.

ಕೋಟೀಶ್ವರನೇ ಆಗಲಿ, ಮಹಾತಪಸ್ವಿಯೇ ಆಗಲಿ ಷಟ್ ಶಾಸ್ತ್ರ ಸಂಪನ್ನನಾಗಲಿ, ಸರ್ವೋತ್ಕೃಷ್ಟ ವಂಶ ಸಂಜಾತನೇ ಆಗಲಿ ಶ್ರೀ ಗುರುವಿನ ಸನ್ನಿಧಿಯಲ್ಲಿ ನಿರಭಿಮಾನಿಯಾಗಿ ದೀರ್ಘದಂಡ ನಮಸ್ಕಾರವನ್ನು ಮಾಡಬೇಕೆಂದು ಧರ್ಮಗ್ರಂಥಗಳು ಗುರುವಿನ ಶ್ರೇಷ್ಠತೆಯನ್ನು ಬಣ್ಣಿಸುತ್ತವೆ, ಮತ್ತು "ಆಚಾರ್ಯವಾನ್ ಪುರುಷೋವೇದ" "ಆಚಾರ್ಯದೇವೋ ಭವ" "ನಗುರೋರಧಿಕಂ" ಇತ್ಯಾದಿ ಶ್ರುತಿವಾಕ್ಯಗಳು ಗುರುವಿನ ಸರ್ವೋತ್ಕೃಷ್ಟತೆಯನ್ನು ಮುಕ್ತಕಂಠದಿಂದ ಸಾರುತ್ತಿರುವುವು. "ಗುರುರುಪಾಯಃ" ಎಂಬ ಶಿವ ಸೂತ್ರವೂ ಸಹ ಗುರುವೇ ಮೋಕ್ಷಕ್ಕೆ ಮೂಲ ಕಾರಣನೆಂದು ಬೋಧಿಸಿರುವುದು. "ಶ್ರೀಗುರು ವಚನದಿಂದಧಿಕ ಸುಧೆಯುಂಟೆ" ಎಂದು ಶ್ರೀಮನ್ನಿಜಗುಣ ಶಿವಯೋಗಿಗಳು ಗುರುವಿನ ಆಧಿಕ್ಯವನ್ನು ಹೊಗಳಿರುವರು. ಶಿಷ್ಯನ ಹೃದಯವನ್ನು ವ್ಯಾಪಿಸಿರುವ ಅಜ್ಞಾನರೂಪವಾದ ಕತ್ತಲೆಯನ್ನು ನಾಶಮಾಡಿ ಸುಜ್ಞಾನ ಸೂರ್ಯ ಪ್ರಭೆಯನ್ನು ಬೆಳಗಿಸತಕ್ಕ ಪಾರಮಾರ್ಥಿಕ ಮಾರ್ಗವನ್ನು ಸದ್ಗುರುವಿನ ಹೊರತಾಗಿ ಆರೂ ಅರಿಯರು. ಜಗತ್ತಿನಲ್ಲಿ ತತ್ವಜ್ಞಾನಬೋಧಕ ಗ್ರಂಥಗಳು ಅನೇಕವಿದ್ದರೂ, ಮನುಷ್ಯನಿಗೆ ಈಶ್ವರದತ್ತವಾದ ಜ್ಞಾನವಿದ್ದರೂ. ಆ ಗ್ರಂಥಗಳ ಯಥಾರ್ಥವಾದ ಸಾರವನ್ನು ಗ್ರಹಣಮಾಡುವ ಒಂದು ವಿಲಕ್ಷಣ ಶಕ್ತಿಯು ಬರಬೇಕಾದರೆ, ಗುರುವಿನಿಂದಲೇ ಸಾಧ್ಯ. ಹೇಗೆಂದರೆ, ಕಣ್ಣಿದ್ದರೂ, ಅಂಜನ ಸಹಾಯವಿಲ್ಲದೆ ನಿಧಿಯು ಹೇಗೆ ಕಾಣಿಸುವುದಿಲ್ಲವೋ ಕಟ್ಟಿಗೆಯಲ್ಲಿ ಅಗ್ನಿಯಿದ್ದರೂ ಅದನ್ನು ಘರ್ಷಿಸಿ ತೆಗೆಯುವವರಿಲ್ಲದಿದ್ದರೆ, ತನ್ನಿಂದ ತಾನೇ ಹೇಗೆ ವ್ಯಕ್ತವಾಗುವುದಿಲ್ಲವೋ ಹಾಗೆ ತನ್ನಲ್ಲಿದ್ದ ಶಿವಕಲೆಯು ಗುರುವಿಲ್ಲದೆ ವ್ಯಕ್ತವಾಗದು. ಆದ್ದರಿಂದ ಸದ್ಗುರುವಿನ ಅನುಗ್ರಹವನ್ನು ಪಡೆದುಕೊಳ್ಳಲೇ ಬೇಕು. ಶುಕಮುನಿಗಳು ಸಾಮಾನ್ಯರೇನು? ವೇದಾಂತವನ್ನು ಪ್ರಚಾರಪಡಿಸಿದ ವ್ಯಾಸಮಹರ್ಷಿಗಳ ಮಕ್ಕಳಾಗಿದ್ದು ಅನೇಕ ಶಾಸ್ತ್ರಾಧ್ಯಯನವನ್ನು ಮಾಡಿದ ವೈರಾಗ್ಯ ಶಿಖಾಮಣಿಗಳು, ಆದರೂ ತತ್ವಜ್ಞಾನ ಪ್ರಾಪ್ತಿಗಾಗಿ ಜನಕ ಮಹಾರಾಜನ ಬಳಿಗೆ ಹೋಗಬೇಕಾಯಿತು. ಮತ್ತು ನಾರದರು ಅರವತ್ತು ನಾಲ್ಕು ವಿದ್ಯೆಗಳಲ್ಲಿ ಬಲ್ಲಿದರಾಗಿದ್ದರೂ ಅವರು ಆತ್ಮಜ್ಞಾನಕ್ಕಾಗಿ ಸನತ್ಕುಮಾರರ ಬಳಿಗೆ ಹೋಗಿ ವೇದಾಂತ ಶ್ರವಣದಿಂದ ತಮ್ಮ ದುಃಖವನ್ನು ಕಳೆದುಕೊಂಡರೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ.

ಇಷ್ಟೆಲ್ಲಾ ಶಾಸ್ತ್ರವನ್ನು ಓದಿದ ನಾರದರಿಗೇ ಆತ್ಮಜ್ಞಾನವಾಗಲಿಲ್ಲವೆಂದಮೇಲೆ, ಸದ್ಗ್ರಂಥಗಳನ್ನು ಓದಿದಮಾತ್ರಕ್ಕೆ ಆತ್ಮಜ್ಞಾನವಾಗುವುದೇ? ಪರಬ್ರಹ್ಮವಸ್ತುವು ಓದಿಗೆ ಸಿಕ್ಕುವಂಥದಲ್ಲ. "ನಾಯಮಾತ್ಮಾ ಪ್ರವಚೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ"ಅಂದರೆ, ಬಹಳವಾದ ಪ್ರವಚನವೂ ಬುದ್ಧಿಯೂ ಆತ್ಮ ಜ್ಞಾನವನ್ನು ದೊರಕಿಸಿಕೊಡಲಾರದೆಂದು ಶ್ರುತಿಯೇ ಹೇಳುತ್ತದೆ. ಆದಕಾರಣ ಗುರುವಿಲ್ಲದ ವಿದ್ಯೆ ವ್ಯರ್ಥ. "ಗುರುವೇ ಅರಿವು" ಎಂದು ಜ್ಞಾನಿಗಳು ಹೇಳಿದ್ದಾರೆ. ಅಲ್ಲದೆ ಶ್ರೀ ಗುರುವಿನ

ವಿಷಯವಾಗಿ ಶಿವರಹಸ್ಯದಲ್ಲಿ “ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮ ಮಾಯಯಾ, ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿ ಸಿದ್ಧಯೇ” ಎಂದು ಹೇಳಿರುವುದು. ಸದ್ಗುರು ಕೃಪಾಕಟಾಕ್ಷದ ಒಂದು ಕಿರಣವು ನಮ್ಮ ಹೃದಯವೆಂಬ ಗುಹೆಯ ಮುಂದೆ ಹರಿದುಹೋದರೆ ಸಾಕು ಅಜ್ಞಾನವೆಂಬ ಕತ್ತಲೆಯು ಮಾಯವಾಗುವುದು.

ಆದ್ದರಿಂದ ಪುರೋಭಿವೃದ್ಧಿಯನ್ನು ಬಯಸತಕ್ಕವರು ಇಂತಹ ಸದ್ಗುರು ಮೂರ್ತಿಯನ್ನು ಆಶ್ರಯಿಸಬೇಕು. ನಮಗೆ ಶಿಲಾ ಮೂರ್ತಿಗಳಲ್ಲಿ ದೇವನನ್ನು ನೋಡುವ ಅಭ್ಯಾಸವು ಬಂದು ಹೋಗಿದೆ. ನಮ್ಮಂತೆ ಹುಟ್ಟಿ ಬೆಳೆದು ನುಡಿಯುತ್ತಿರುವ ಮನುಷ್ಯ ದೇಹದೊಳಗಿರುವ ಚೈತನ್ಯಮೂರ್ತಿಯನ್ನು ಪೂಜಿಸುವ ಅಭ್ಯಾಸವನ್ನರಿಯೆವು. “ಮನುಷ್ಯ ದೇಹವನ್ನು ಹೊಂದಿರುವ, ದೇವದೇವನಾದ ನನ್ನ ಪರಮೇಶ್ವರತ್ವವನ್ನು ತಿಳಿಯದೆ ಮೂಢರು ಮೋಸ ಹೋಗುವರು” ಎಂದು ಗೀತಾಚಾರ್ಯನೇ ಹೇಳಿದ್ದಾನೆ. ಗುರುವನ್ನು ಮನುಷ್ಯನನ್ನಾಗಿ ತಿಳಿದರೆ ಅಲಕ್ಷ್ಯ ಭಾವವು ಹುಟ್ಟುವುದು. ಮನುಷ್ಯನಲ್ಲಿರುವ ಜಗದ್ಗುರುವನ್ನು ಗುರುತಂ ಮಾಡಿದರೆ, ಭಯ, ಭಕ್ತಿ, ಗೌರವಗಳು ಪ್ರಕಟವಾಗುತ್ತವೆ. ಎಲ್ಲವೂ ಭಾವವನ್ನವಲಂಬಿಸಿದೆ. ಪತಿಯನ್ನು ದೇವನೆಂದು ತಿಳಿದು, ಆ ಭಾವದಿಂದ ಪತಿಸೇವೆ ಮಾಡಿದರೆ, ಪತಿಯ ದೇಹದ ಆಧಾರದಿಂದ ಜಗತ್ಪತಿಯ ಸೇವೆ ಮಾಡುತ್ತಿರುವೆನೆಂಬ ಭಾವವು ಅಳವಟ್ಟರೆ, ಪತ್ನಿಯು ಸಾಮಾನ್ಯ ಹೆಂಗಸಿನ ಮಟ್ಟದಿಂದ ಮೇಲಕ್ಕೇರುವಳು, ಜಗತ್ಪೂಜ್ಯಳಾದ ದೇವತೆಯಾಗುವಳು. ಅವಳ ಪವಿತ್ರ ಭಾವದಿಂದ ಪರಿಪುಷ್ಟವಾದ ಅಂತಃಕರಣದಲ್ಲಿ ಸಿದ್ಧಿ-ಶಕ್ತಿಗಳು ಪ್ರಕಟವಾಗುವುವು. ಅದರಂತೆಯೇ, ಗುರುವಿನ ದೇಹದ ಮೂಲಕ ಜಗದ್ಗುರುವಾದ ಪರಮೇಶ್ವರನನ್ನು (ಆದಿ ಗುರುವನ್ನು) ಸೇವೆಮಾಡುತ್ತಿರುವೆನೆಂಬ ಭಾವವು ಅಳವಟ್ಟರೆ, ಶಿಷ್ಯನ ಅಂತಃಕರಣವು ದೇವಭಾವದಿಂದ ಪರಿಪುಷ್ಟವಾಗುವುದು. ಆತನ ದೃಷ್ಟಿಯು ಜಗದ್ಗುರುವನ್ನೇ ನೋಡುತ್ತಿರುವುದು. ಭಾವವು, ಪ್ರೇಮವು, ಪವಿತ್ರವಾಗುವುದು. ನಿರ್ಗುಣ ನಿರಾಕಾರ ಚೈತನ್ಯವೇ ಸಗುಣ ಸಾಕಾರ ರೂಪಿನಿಂದ ನನ್ನನ್ನು ಉದ್ಧರಿಸುತ್ತಿರುವುದೆಂಬ ಶ್ರದ್ಧೆಯು ಹುಟ್ಟುವುದು.

“ದೇಹಬುದ್ಧಿಯಿಂದ ನಾನು ನಿನ್ನ ದಾಸ, ಜೀವಬುದ್ಧಿಯಿಂದ ನಿನ್ನ ಅಂಶ, ಆತ್ಮಬುದ್ಧಿಯಿಂದ, ನಮ್ಮಿಬ್ಬರಿಗೂ ಭೇದವಿಲ್ಲ” ಎಂಬ ನಿಯಮಕ್ಕೆ ಅನುಸಾರವಾಗಿ ನಮ್ಮ ಸಾಧನೆಯು ರೂಪುಗೊಳ್ಳಬೇಕು. ಅಂದರೆ, ಸ್ಥೂಲ ದೇಹದ ಅಭಿಮಾನ ನಾಶಕ್ಕೆ ಗುರುಸೇವೆಯೇ ದಿವ್ಯೌಷಧಿ. ಸೂಕ್ಷ್ಮ ದೇಹ ನಾಶಕ್ಕೆ ವಾಸನಾಕ್ಷಯವಾದ ಧ್ಯಾನವೇ ಮದ್ದು. ಆದುದರಿಂದ, ಗುರುಭಕ್ತನಿಗೆ ಗುರುವನ್ನು ಬಿಟ್ಟರೆ ಬೇರೆ ದೇವನೇ ಇಲ್ಲ. ಶ್ರೀ ಗುರುವಿನ ಆದೇಶದಂತೆ ಸಾಧನೆಮಾಡಿದ ಶಿಷ್ಯನು ತನ್ನ ಸಾಧನೆಯ ಕೊನೆಯ ಹಂತದಲ್ಲಿ ಸಮುದ್ರಕ್ಕೆ ನದಿಯು ಸೇರುವಾಗ, ಹೇಗೆ ನೀರು ನೀರೊಳಗೆ ಬೆರೆತುಕೊಳ್ಳುವುದೋ ಗಡಿಗೆಯು ಒಡೆದರೆ ಆಕಾಶವು ಆಕಾಶದೊಳಗೆ ಹೇಗೆ ಬೆರೆತುಕೊಳ್ಳುವುದೋ, ಹಾಗೆ ಜೀವಾತ್ಮನು ಪರಮಾತ್ಮನೊಳಗೆ ಬೆರೆತುಕೊಳ್ಳುತ್ತಾನೆ. ಆದ್ದರಿಂದ, ಸರ್ವ ಪ್ರಯತ್ನಮಾಡಿ ಗುರುಭಕ್ತಿಯನ್ನು ಮಾಡಬೇಕು. ಆತನ ಕೃಪೆಯಿಂದಲೇ ಮುಕ್ತಿ ಸಿಗುವುದು.

ಜ್ಞಾನ, ಆನಂದವನ್ನು ಕೊಡುವವನೂ, ಉಪನಿಷತ್ತುಗಳಿಂದ ತಿಳಿಯಲ್ಪಡುವವನೂ, ಅಜ್ಞಾನವನ್ನು ನಾಶಮಾಡುವುದರಲ್ಲಿ ಸೂರ್ಯನಂತಿರುವವನೂ, ಯಾವ ಬಂಧನಕ್ಕೂ ಒಳಗಾಗದವನೂ, ಭಕ್ತರಿಗೆ ಮಾತ್ರ ಅಧೀನನೂ, ಜ್ಞಾನಿಗಳಿಗೆ ಜ್ಞಾನ ಸ್ವರೂಪನೂ. ಆದ ಸದ್ಗುರು ದೇವಾ, ಎಲ್ಲೆಲ್ಲಿಯೂ ನಮಿಸುತ್ತೇನೆ. ನನಗೆ ಜ್ಞಾನವೆಂಬ ಬೆಳಕನ್ನು ಕೊಟ್ಟು ಅನುಗ್ರಹಿಸು; ನಿನ್ನ ಪಾದ ಕಮಲಗಳಲ್ಲಿ ಶರಣು ಬಂದಿರುತ್ತೇನೆ.

With the best compliments from:

TELEGRAM: DEALER PHONE: 16

S. V. MATHIAH & CO.
POTATES, ONION MERCHANTS

METHPALAYAM (Nilgiries)

Our Pranamams to

Pancha Jagadgurus

Grams ; SUBHODAYAM
Phone ; SHOP 73766
RESI. 27622

SHANKAR TRADING COMPANY

(*Prop:* C. P. SUBBARAJU SETTY)
Rice & General Merchants & Commission Agents
59, 3rd Main Road, New Tharagupet
BANGALORE-2

Our Maha Pranamams to

Jagadguru Pancha Peethadhipatis

Phone : 24873
Res. : 73909
Grams: "Truthful'

A. K. MUDDURAMAIAH SETTY & SONS

MANDY MERCHANTS & COMMISSION AGENTS

Proprietor:
A. K. MUDDURAMAIAH SETTY

W-104, OLD THARAGUPET
BANGALORE-2

Rajendra Timber Traders

UNDER BRIDGE ROAD,
KADUR

Available of all Kinds of:

TIMBER (TEAK, ROSEWOOD, SILVER NANDI MATTU HONNE LOGS & CUT SIZES)

Manufacturers of:

SLATE FRAMES & PACKING CASES

VISIT once and be Satisfied

For RAJENDRA SAW MILL

Enjoy the Best - Travel by

Phone: 24253, 23309

PRAKASH TRAVELS (P.) LTD.

OUR CONDUCTED TOURS ARE AS FOLLOWS:

Mysore Sight Seeing including illuminated Brindavan Gardens Every Day

Bangalore Local Sight Seeing Every Day Except Sunday

Full Bussen of all varieties available at Competitive Rates

For Further Particulars Contact

PRAKASH TRAVELS (P.) LTD.

5th Main Road, Gandhinagar,
BANGALORE-9

With the best compliments of:

Phones: 29755
79163

VEERABHADRASWAMY TOURIST

Prop: M. V. JAYAKAR

★

TOURIST CAR OPERATORS
AND TRAVEL AGENTS
7/12. Albert Victor Road, Chamrajpet,
BANGALORE-18

With best compliments from:

Phones { Office: 24069
Res. : 70148

Tel. 'SUDHATRADE'

SUDHA TRADERS

MANDY MERCHANTS & COMMISSION AGENTS

43, NEW THARAGUPET, BANGALORE-2



ಶ್ರೀ ಬಿ. ಎಸ್. ಮರಿಯಪ್ಪನವರು

ನಹಿ ಜ್ಞಾನೇನ ಸದೃಶಂ

ಜ್ಞಾನಕ್ಕಿಂತಲೂ ಮಿಗಿಲಾದ ವಸ್ತು ಬೇರೊಂದಿಲ್ಲ. ದೇಹಕ್ಕೆ ಕಣ್ಣುಗಳಿದ್ದಂತೆ ಬದುಕಿಗೆ ಜ್ಞಾನವೇ ಆಸರೆ.

ಜ್ಞಾನ ಎಂದರೇನು? ಇದನ್ನು ಗಳಿಸುವ ಬಗೆ ಹೇಗೆ? ಇವು ತುಂಬಾ ಮುಖ್ಯವಾದ ಪ್ರಶ್ನೆಗಳು.

ಜ್ಞಾನವೆಂಬುದು ಅಂಗಡಿಯಲ್ಲಿ ಬಿಕರಿಗೆ ಇರುವ ವಸ್ತುವಲ್ಲ; ಅದಕ್ಕೆ ಬೆಲೆ ಕಟ್ಟಲು ಸಾಧ್ಯವೂ ಇಲ್ಲ. ಬೆಲೆ ಕಟ್ಟಿಕೊಂಡು ಕೊಳ್ಳುವಂತೆಯೂ ಇಲ್ಲ.

ಜ್ಞಾನಕ್ಕೆ ಪರಿಪೂರ್ಣವಾದ ಅರ್ಥವಿವರಣೆಯನ್ನು ಕೊಡುವುದು ಕಷ್ಟದ ಕೆಲಸ. ವಿದ್ಯಾರ್ಜನೆಯಿಂದ, ದೇಶಪರ್ಯಟನೆಯಿಂದ, ನಿರಂತರ ಅಧ್ಯಯನದಿಂದ ಜ್ಞಾನ ಲಭಿಸುತ್ತದೆ.

ಧರ್ಮ ನಾಸ್ತಿಯ ನಮ್ಮ ಶಿಕ್ಷಣ ಕ್ರಮ

'ಶಾರದ ಎಜುಕೇಷನ್ ಸೊಸೈಟಿ' ಎಂಬ ವಿದ್ಯಾಸಂಸ್ಥೆಯ ಮೂಲಕ ವಿದ್ಯಾಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ. ಎಸ್. ಮರಿಯಪ್ಪನವರು ಭಾರತದ ಇಂದಿನ ಶಿಕ್ಷಣ ಪದ್ಧತಿ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಭಾರತೀಯ ಧರ್ಮಸ್ವರೂಪವಿಲ್ಲದ ಶಿಕ್ಷಣ ಕ್ರಮ ಭಾರತಕ್ಕೆ ಬೇಕಿಲ್ಲವೆಂಬ ಅವರ ವಾದ ಸಾಧುವಾಗಿದೆ. ಸಮಾಜದ ಪ್ರತಿಷ್ಠಿತರೂ, ರಾಜಕಾರಣಿಗಳೂ, ಉತ್ಸಾಹಿ ಕಾರ್ಯಕರ್ತರೂ ಆದ ಶ್ರೀಯುತರು ಸದಾ ಸೇವಾ ನಿರತರಾಗಿರುತ್ತಾರೆ. ಶ್ರೀಯುತರು ವಿವಿಧ ಸಂಘ ಸಂಸ್ಥೆಗಳೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದಾರೆ. ಸಮಾಜ ಇವರಿಂದ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದಾಗಿದೆ.

"ಸಮಾಜಕ್ಕೆ ಭಾರವಾಗದೆ, ಮಾನವ್ಯಕ್ಕೆ ಮುಳುವಾಗದೆ, ಧರ್ಮಕ್ಕೆ ಬೆನ್ನು ತಿರುಗಿಸದೆ, ಸಮೂಹಕ್ಕೆ ಕಂಟಕವಾಗದೆ" ಬದುಕುವ ಪರಿಯನ್ನು ಜ್ಞಾನವು ನಿರ್ದೇಶಿಸುತ್ತದೆ.

ಭಾರತದ ಪ್ರಾಚೀನ ಗುರುಕುಲಗಳು, ಗುರುಪೀಠಗಳು ಜ್ಞಾನದ ಕೇಂದ್ರಗಳಾಗಿದ್ದವು. ಅವು ವಿದ್ಯಾನಿಕೇತನಗಳಾಗಿದ್ದವು. ಅಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಸ್ನಾತಕನಾಗಿ ಹೊರಬರುತ್ತಿದ್ದ ವಿದ್ಯಾರ್ಥಿ ಜ್ಞಾನಿಯಾಗಿರುತ್ತಿದ್ದ.

ವಿದ್ಯಾಭ್ಯಾಸದಿಂದ ವಿದ್ಯಾರ್ಥಿಗೆ ಕಡೆಯಲ್ಲಿ ಪ್ರಾಪ್ತವಾಗುವುದೇ ಜ್ಞಾನ. ಈ ಜ್ಞಾನ ಇತರರಿಗೆ ಹಂಚುವಂತಿರಬೇಕು. ನೆಮ್ಮದಿಯ ಬದುಕಿಗೆ ಸಾಧಕವಾಗಿರಬೇಕು. ಸಮಾಜದ ವಿಕಾಸಕ್ಕೆ ಸೋಪಾನವಾಗಿರಬೇಕು. ಶಾಂತಿಯುತ ಸಹಬಾಳ್ವೆಗೆ ಸಹಕಾರಿಯಾಗಿರಬೇಕು.

ಪ್ರಶ್ನೆಗಳ ಸುರಿಮಳೆ

ಜ್ಞಾನದ ದೃಷ್ಟಿಕೋನದಿಂದ, ನಮ್ಮ ಇಂದಿನ ಶಿಕ್ಷಣ ಪದ್ಧತಿಯನ್ನು ಪರಿಶೀಲಿಸಿದಲ್ಲಿ, ನಮ್ಮ ಮುಂದೆ ಸಾಲುಸಾಲಿನ ಪ್ರಶ್ನೆಗಳು ಬಂದು ನಿಲ್ಲುತ್ತವೆ.

ನಮ್ಮ ಇಂದಿನ ಶಿಕ್ಷಣ ಕ್ರಮದಿಂದ ಕೊನೆಯಲ್ಲಿ ನಿಜವಾದ ಜ್ಞಾನ ಲಭಿಸುತ್ತದೆಯೇ? ಉದರಂಭರಣದ ಉದ್ಯೋಗಕ್ಕಾಗಿಯೇ ರೂಪಿಸಲ್ಪಟ್ಟಂತೆ ಇದೆಯಲ್ಲವೆ ಇಂದಿನ ಶಿಕ್ಷಣ ಸೂತ್ರ? ಸ್ವಾತಂತ್ರ್ಯಾನಂತರ ಎಚ್ಚೆತ್ತ ಭಾರತದಲ್ಲಿ ಶಿಕ್ಷಣದ ಗತಿ ಪ್ರಗತಿ ಪರವಾಗಿದೆಯೇ? ನಮ್ಮ ಶಿಕ್ಷಣ ನಮ್ಮ ಸಂಸ್ಕೃತಿಗೆ, ನಮ್ಮ ಧಾರ್ಮಿಕ ಪರಂಪರೆಗೆ ಅನುಗುಣವಾಗಿದೆಯೇ? ನಮ್ಮ ಕಾಲೇಜುಗಳು ಪದವೀಧರರನ್ನು ತಯಾರಿಸುತ್ತಿರುವ ಕಾರ್ಖಾನೆಗಳಲ್ಲವೆ? ನಮ್ಮ ಶಿಕ್ಷಣ ಸೂತ್ರದಲ್ಲಿ ಧರ್ಮ ಶಾಸ್ತ್ರಕ್ಕೆ ನೀತಿ ಶಾಸ್ತ್ರಕ್ಕೆ ಮನ್ನಣೆಯೇ ಬೇಡವೆ? ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಪ್ರಗತಿಗೆ ಸಾಕಷ್ಟು ಕ್ರಮ ಕೈಗೊಳ್ಳಲಾಗಿದೆಯೆ? ವಿದ್ಯೆ ಇಲ್ಲದವ ಪಶು ಸಮಾನ ಎಂದು ಹೇಳುವ ಪರಿಣತರು, ರಾಷ್ಟ್ರದ ಎಲ್ಲರೂ ವಿದ್ಯಾವಂತರಾಗುವಂತೆ ಮಾಡಲು ಏನಾದರೂ ಪರಿಪೂರ್ಣವಾದ ಕ್ರಮವನ್ನು ಕೈಗೊಂಡಿದ್ದಾರೆಯೆ?

ಹೊರಗಿನ ದೃಷ್ಟಿಗೆ ಸಾಧಾರಣವಾಗಿ ಕಾಣಬಹುದಾದರೂ ಈ ಪ್ರಶ್ನೆಗಳು ತುಂಬಾ ಗಂಭೀರವಾದವುಗಳು. ಈ ಪ್ರಶ್ನೆಗಳಿಗೆ ಪರಿಹಾರ ದೊರಕದೇ ಹೋದಲ್ಲಿ, ಇವು ಕ್ಯಾನ್ಸರ್ ರೋಗದಂತೆ ವ್ಯಾಪಿಸಿ, ಶಿಕ್ಷಣಪದ್ಧತಿಯ ಅಂಗಾಂಗಗಳನ್ನೆಲ್ಲಾ ಅಲುಗಾಡಿಸದೆ ಇರವು.

ಭಾರತದ ಶಿಕ್ಷಣ ಪದ್ಧತಿಯು ಭಾರತೀಯ ಸಂಸ್ಕೃತಿಗೆ, ಧರ್ಮಕ್ಕೆ ಅನುಗುಣವಾಗಿದೆಯೆ ಎಂಬುದು ತುಂಬಾ ಮಹತ್ವದ ಪ್ರಶ್ನೆ. ಇದನ್ನು ಪ್ರಾಜ್ಞರೆಲ್ಲರೂ ಪರಿಶೀಲಿಸಬೇಕಾಗಿದೆ.

ಭಾರತದ ಶಿಕ್ಷಣ ಪದ್ಧತಿಯ ಸಿದ್ಧಾಂತವು ಸ್ವತಂತ್ರ ಬುನಾದಿಯ ಮೇಲೆ ರೂಪಿತವಾಗಿಲ್ಲ. ಐರೋಪ್ಯ ರಾಷ್ಟ್ರಗಳ ಶಿಕ್ಷಣ ಸ್ವರೂಪ ನಮ್ಮ ಶಿಕ್ಷಣ ಸಿದ್ಧಾಂತದಲ್ಲೂ ಪ್ರತಿಬಿಂಬಿತವಾಗಿದೆ. ಇದು ಏಕೆ ಬೇಕು? ಭಾರತದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿ ವಿದೇಶಕ್ಕೆ ಹೋಗಿ ನೆಲಸಿ, ಜೀವಿಸುವನೆ? ಭಾರತೀಯ ವಿದ್ಯಾರ್ಥಿಗೆ ಅಂತಹ ಶಿಕ್ಷಣ ಏಕೆ ಬೇಕು?

ನಮ್ಮ ವಿದ್ಯಾರ್ಥಿಗಳು ತಾವು ಭಾರತೀಯರು, ತಮ್ಮದು ಭಾರತೀಯ ಪುಣ್ಯ ಸಂಸ್ಕೃತಿ, ತಮ್ಮ ಧರ್ಮ ಲೋಕಪೂಜ್ಯವಾದುದೆಂಬುದನ್ನು ಮನನಮಾಡಿಕೊಂಡು, ಭಾರತೀಯರಾಗಿಯೇ ಉಳಿದು ಬಾಳುವಂತಹ ತತ್ವದ ಬುನಾದಿಯ ಮೇಲೆ ನಮ್ಮ ಶಿಕ್ಷಣ ಪದ್ಧತಿ ರೂಪಿತವಾಗಬೇಕು. ಶಿಕ್ಷಣದ ಅವಧಿಯಲ್ಲೇ ನಮ್ಮ ವಿದ್ಯಾರ್ಥಿಗಳಿಗೆ ನಮ್ಮ ಧರ್ಮದ ಅರಿವು ಮೂಡಬೇಕು. ಅಂದರೆ ಆಧುನಿಕ ಭಾರತದ ವಿದ್ಯಾಭ್ಯಾಸ ಕ್ರಮದಲ್ಲಿ ಧರ್ಮಪ್ರಚಾರ ಅತ್ಯಗತ್ಯ ಹಾಗೂ ಅನಿವಾರ್ಯ.

ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳು ನಮಗೇ ಬೇಡವಾದಲ್ಲಿ ಇನ್ನು ಯಾರಿಗೆ ಅದು ಬೇಕಾದೀತು? ಹೆತ್ತ ತಾಯಿಗೇ ಬೇಡವಾದ ಕಂದನನ್ನು ಎತ್ತಿ ಮುದ್ದಾಡುವವರಾದರೂ ಯಾರು? ನಮ್ಮ ವಿದ್ಯಾರ್ಥಿಗಳು ಇಂಗ್ಲೀಷಿನ ವ್ಯಾಮೋಹದಿಂದ ಭಾರತೀಯ ಭಾಷೆಯನ್ನು ವರ್ಜ್ಯ ಮಾಡುವಂತಾಗಬಾರದು. ಇಂಗ್ಲೀಷನ್ನು ಬಿಟ್ಟು ಬೇರೆ ಭಾಷೆಯ ಮೂಲಕ ಜ್ಞಾನ ಸಂಪಾದನೆ ಸಾಧ್ಯವೇ ಇಲ್ಲವೆಂಬ ತಪ್ಪು ಕಲ್ಪನೆ ಮೂಡಬಾರದು. ವೇದಗಳನ್ನು ಬರೆದ ನಮ್ಮ ಮಹರ್ಷಿಗಳು ಯಾವ ಇಂಗ್ಲೀಷ್ ವಿಶ್ವವಿದ್ಯಾನಿಲಯಗಳ ಪದವೀಧರರು? ಗುರುಪೀಠಗಳನ್ನು ಸ್ಥಾಪಿಸಿ ಅವನ್ನೇ ಶಾರದಾ ನಿಕೇತನವನ್ನಾಗಿ ಮಾಡಿದ ನಮ್ಮ ಮಠಾಧಿಪತಿಗಳು ಇಂಗ್ಲೀಷಿಗೇ ಶರಣು ಹೋಗಿದ್ದರೆ? ಶಾಕುಂತಲ ನಾಟಕವನ್ನು ಬರೆದ ಕಾಳಿದಾಸ, ಬೇಲೂರು ಹಳೇಬೀಡುಗಳನ್ನು ನಿರ್ಮಿಸಿದ ನಮ್ಮ ಶಿಲ್ಪಿಗಳು ಇಂಗ್ಲೀಷ್ ಭಾಷೆಯ ಮೂಲಕವೇ ತಮ್ಮ ಪ್ರೌಢ ಜ್ಞಾನವನ್ನು ಗಳಿಸಿ ಬಳಸಿಕೊಂಡರೆ?

ಸ್ವಾತಂತ್ರ್ಯನಂತರ ಸಾಕ್ಷರತಾ ಚಳುವಳಿ ಬಿರುಸಾಗಿ ನಡೆದಿದೆ. ಪ್ರಾಥಮಿಕದಿಂದ ಆರಂಭವಾಗುವ ಶಿಕ್ಷಣವಲ್ಲದೆ, ನಿರಕ್ಷರಸ್ಥ ವಯಸ್ಕರಿಗೂ ಶಿಕ್ಷಣ ನೀಡುವ ಪರಿಪರಿಯ ಯೋಜನೆಗಳು ತಯಾರಾಗಿವೆ. ಆದರೆ ನಮ್ಮ ಶಿಕ್ಷಣಪದ್ಧತಿಗೆ ಧರ್ಮದ ಸ್ವರೂಪ ಕೊಡದಿರುವುದು ಒಂದು ಲೋಪ. ನಮ್ಮ ಶಿಕ್ಷಣ ಪದ್ಧತಿ ಧರ್ಮದ ಆಧಾರದ ಮೇಲೆ ರೂಪಿಸಲ್ಪಡಬೇಕು.

ಶಿಕ್ಷಣ ಪಂಡಿತರು, ಶಿಕ್ಷಣವೇತ್ತರು ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಶೀಲಿಸಿ ಶಿಕ್ಷಣ ಸೂತ್ರವನ್ನು ತಯಾರಿಸದಿದ್ದರೆ, ಭಾರತೀಯರು ಸ್ವದೇಶದಲ್ಲಿಯೇ ವಿದೇಶಿಯರಾಗಿ ಬಾಳಬೇಕಾಗುವುದಲ್ಲದೆ ಇಂದು ನಿರ್ಲಕ್ಷಿಸಲ್ಪಟ್ಟಿರುವ ನಮ್ಮ ಧರ್ಮವು ನಿರ್ನಾಮವಾದರೂ ಆಗಬಹುದು.

ನಮ್ಮ ಶಿಕ್ಷಣ ಕ್ರಮದಲ್ಲಿ ಧರ್ಮದ ಬುನಾದಿ ಇರಬೇಕೆಂಬ ಸೂಚನೆ ನಮ್ಮದು. ಇದರ ಅನುಷ್ಠಾನ ಸಂಬಂಧಿಸಿದವರಿಗೆ ಸೇರಿದ್ದು, ಆದ್ದರಿಂದ ಈಗಲಾದರೂ ಸಮಾಜ ಹಾಗೂ ಸರ್ಕಾರ ಎಚ್ಚೆತ್ತು ಮಾಧ್ಯಮಿಕ ಶಾಲೆಗಳಲ್ಲೇ ಧರ್ಮ, ಹಾಗೂ ನೀತಿ ಬೋಧಕ ಪುಸ್ತಕಗಳನ್ನು, ಪಠ್ಯಪುಸ್ತಕಗಳನ್ನಾಗಿ ಶಾಲೆಗಳಲ್ಲಿ ಬೋಧಿಸಬೇಕೆಂದು ಪ್ರಾರ್ಥಿಸುತ್ತೇನೆ.

BELLAD AND COMPANY NEHRU MARKET DHARWAR I

ಬೆಲ್ಲದ ಆ್ಯಂಡ ಕಂಪನಿ

ಆಫೀಸ
ಮಾರ್ಕೆಟ ಧಾರವಾಡ-೧
Phone : **8516**
Gram : **Co. BALLAD**

ಸೇಲ್ಸ ಮತ್ತು ಸರ್ವಿಸ್
ವಿದ್ಯಾನಗರ, ಹುಬ್ಬಳ್ಳಿ-೨೧
Phone : **2625**

[ಅಧಿಕೃತ ಮಾರಾಟಗಾರರು]

- “ಸುಫಲಾ” ರಾಸಾಯನಿಕ ಗೊಬ್ಬರಗಳು
- “ಮಹಿಕೊ” ಹೈಬ್ರಿಡ ಬೀಜಗಳು
- “ಬಾಯರ್ಸ” ಕ್ರಿಮಿನಾಶಕಗಳು
- “ಅಸ್ಪಿ” ಯವರ ಸ್ಪ್ರೇಯರ್ಸ ಮತ್ತು ಡಸ್ಟರುಗಳು (A. S. & P. W.)
- “ಕೃಷಿ” ಪಾವರ ಟಿಲ್ಲರ್ಸ ಮತ್ತು ಪಂಪುಸಟ್ಟು
- ಎಸ್. ಜಿ. ಇ. ಎಫ್. ಮತ್ತು “ಬೀಕೋ” ಎಲೆಕ್ಟ್ರಿಕ್ ಮೋಟಾರ್ಸ್ ಪಂಪುಸೆಟ್ಟುಗಳು
- “ಎಚ್. ಕೆ. ಎಸ್.” ಸ್ಟಾರ್ಟರ್ಸ್ ಮತ್ತು ಸ್ವಿಚ್ ಗೇರ್ಸ್‌ಗಳು
- “ಎಲ್. ಸಿ. ಟಿ.” ಒಕ್ಕುವ ಯಂತ್ರ. ಕಬ್ಬಿನ ಗಾಣ ಮತ್ತು ಒಕ್ಕಲುತನದ ಉಪಕರಣಗಳು
- “ರೋಹಿತ” ಟರಬಾಯಿನ್ ಪಂಪುಸೆಟ್ಟುಗಳು
- “ನೈಕಾನ” ಟ್ರ್ಯಾಕ್ಟರ ಉಪಕರಣಗಳು
- “ವಿಕ್ಕಿ” ಮೋಪೆಡ್ (ಮೋಟಾರ ಸಾಯಕಲ್)
- “ಬಾಕೋ” ಹ್ಯಾಂಡ ಟೂಲ್ಸ
- “ವಿಕ್ಟೋರಿಯಾ” “ಬ್ಲೂ” ಆಲ್ಟ್ರಾಮೆರಿನ್ ಮತ್ತು ಪಿಗಮೆಂಟ
- “ಗರವಾರೆ” ಪ್ಲಾಸ್ಟಿಕ್ ಪ್ರೊಡಕ್ಟ್ಸಗಳು.

With best compliments from.

Tel 'GIN'
Phone { Office : 24051
Res. : 73497

S. THIMMAPPA

Mandy Merchant & Commission Agent

41, New Tharagupet : : BANGALORE-2

ಎಸ್. ತಿಮ್ಮಪ್ಪ, ಮಂಡಿ ಮರ್ಚೆಂಟ್ ಮತ್ತು ಕಮೀಷನ್ ಏಜೆಂಟ್,
ಹೊಸತರಗುಪೇಟೆ, ಬೆಂಗಳೂರು-೨

Visit

Phone : 23600

SREE GANAPATHI VILAS

SILK CLOTH MERCHANTS

No. 208 CHICKPET BANGALORE-2-A

★

F
O
R

KANJEEVARAM
DHARMAVARAM
ARNI LATEST DESIGN SAREES

Our Special:

REVERSABLE BADLA AND
MEENA BROCADE BANARAS
EMBOSS, GEORGETTE, CUTWORK,
SILVER & GOLD BUTTA SAREES &
BLOUSE MATERIALS

With the best Compliments of :

Grams : JAJUCO
Phone ; 73916

S. BADRINARAYAN JAJU
GRAIN MERCHANTS & COMMISSION AGENTS
Old Tharagupet,
BANGALORE-2 A

M/s. JAJU & Co.,
Old Tharagupet
BANGALORE-2A

With best compliments from:

For

QUICK–PROMPT–AND EFFICIENT SERVICE
Please Contact, Phone 74984 of

SRI VIJAYALAKSHMI TEMPO SERVICE

(*Prop:* **M. RAGHAVA RAO**)

◆

TEMPO HIRERS, FLEET OWNERS,
CLEARING AND FORWARDING
AGENTS

No. 4, 1ST CROSS, NEHRU NAGAR
BANGALORE-20

◆

"Service Round the Clock"

Phone: 74984

ESTD : 1911. **GOLDEN JUBILEE - 1965.** *Telephone :* 28.

Mundgod Dodda Pramanada Prathamika Pattina Vyavasaya Sahakari Sangh Niyamita?

MUNDGOD (N. KANARA.)

AS ON 30th JUNE 1971.

No. of Members	857.
Share Captial.	2,23,365-00.
Reserve Fund	27,371-00.
Other Reserves	23,030-00.
Deposits	55,985-00.
Working Captial	6,71,100-00.

M. B. NAIK
Secretary

C. S. KOLLANAVAR.
Chairman

ವೀರಶೈವ ಸಂಸ್ಕೃತಿಯ ಸಂದೇಶ



ಶ್ರೀ ಹೆಚ್. ಜಿ. ಶಿವಣ್ಣ
ಬೆಂಗಳೂರು

ಮನುಷ್ಯ ಎಷ್ಟು ಕಾಲ ಬದುಕಿರುತ್ತಾನೆ
—ಅದು ಮುಖ್ಯವಲ್ಲ.

ಅವನು ಬದುಕಿರುವಷ್ಟು ಕಾಲ ಹೇಗಿರುತ್ತಾನೆ?
—ಅದೇ ಮುಖ್ಯ

ನಾವು ನಾಗರಿಕತೆಯನ್ನು, ಸಂಸ್ಕೃತಿಯನ್ನು ಈ ಅಳತೆಗೋಲಿನಿಂದ ನೋಡಬೇಕು. ನಮ್ಮ ಬದುಕನ್ನು ಈ ಮಾನದಂಡದಿಂದ ಅಳೆಯಬೇಕು. ನಾವು ಎಷ್ಟು ಕಾಲ ಬದುಕಿರುತ್ತೇವೆಂಬುದು ಖಂಡಿತ ಮುಖ್ಯವಾದುದಲ್ಲ; ಬದುಕಿರುವಷ್ಟು ಕಾಲ "ಹೇಗೆ" ಬದುಕಿದ್ದೆವು ಎಂಬುದೇ ಮುಖ್ಯ. 'ಹೇಗೆ' ಬದುಕಿದ್ದೆವು, 'ಹೇಗೆ' ಬದುಕಬೇಕು ಎಂಬುದೇ ನಮ್ಮ ಸಂಸ್ಕೃತಿಯಾಗಬೇಕು. ಅದೇ ನಮ್ಮ ನಾಗರಿಕತೆಗೆ ಆಧಾರವಾಗಬೇಕು.

ಮಾನವನು ಜೀವಿತಾವಧಿಯಲ್ಲಿ ಹೇಗೆ ಬದುಕಿರಬೇಕು, ಹೇಗೆ ಬದುಕಿ ಸುಸಂಸ್ಕೃತನೆಂದೆನಿಸಿಕೊಂಡು, ಸಮಾಜಕ್ಕೆ ನೆರವಾಗಬೇಕು, ನಾಲಗೆ ಇರುವ ನರಜನ್ಮವನ್ನು ಹೇಗೆ ಸಾರ್ಥಕ ಪಡಿಸಿಕೊಳ್ಳಬೇಕೆಂಬುದನ್ನು ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳು ಸುಲಭ ಸೂತ್ರಗಳಲ್ಲಿ ಸಾರಿ ಹೇಳುತ್ತಿವೆ.

ಮಾನವನು, ಪೂರ್ಣ ಮಾನವನಾಗಿ ಬಾಳಬೇಕು, ಪದಾರ್ಥವನ್ನೇ ಪ್ರಸಾದವನ್ನಾಗಿ ಮಾಡಿಕೊಂಡು, ಆಡುವ ಮಾತಿಗೇ ಮಂತ್ರದ ಶಕ್ತಿ ಬರುವಂತೆ ನಡೆದು, ತನ್ನ ನಿವಾಸವನ್ನೇ ಕೈಲಾಸವನ್ನಾಗಿ ಪರಿವರ್ತಿಸಿಕೊಂಡು 'ಶಿವಾನಂದ'ವನ್ನು ಪಡೆವ ಸಂಸ್ಕಾರವನ್ನು ಸಾಧಿಸಬೇಕು. ಉನ್ನತ ವಿಚಾರ, ಉತ್ತಮ ವಿಹಾರದಲ್ಲಿ ನಿರತನಾಗಬೇಕು. ಶಿವ ಕೊಟ್ಟ ಜನ್ಮವನ್ನು ಶಿವಭಕ್ತಿಯಲ್ಲಿ ಕಳೆದು ಶಿವ ಪಾದ ಸೇರುವ ಸನ್ನಾಹ ಮಾಡಬೇಕು. ಇದು ವೀರಶೈವ ಪೀಠಗಳ, ಪೀಠಾಧಿಪತಿಗಳ ಸತತ ಸಂದೇಶ.

ವೀರಶೈವ ಮತಸ್ಥಾಪಕರುಗಳ, ವೀರಶೈವ ಪೀಠಗಳ ತತ್ವ ಮತ್ತು ಬೋಧನೆ ವಿಶ್ವಸಿದ್ಧಾಂತದ ಸ್ಥಾನದಲ್ಲಿವೆ. ಅವುಗಳಿಗೆ ಗಗನದಷ್ಟು ಎತ್ತರವಾದ, ಸಾಗರದಷ್ಟು ಆಳವಾದ, ವಾಯುಮಂಡಲದಷ್ಟು ವಿಸ್ತಾರವಾದ ಅರ್ಥವನ್ನು ಕಲ್ಪಿಸಬಹುದು. ಅವು ಅಕ್ಷಯ ತತ್ವಗಳು; ಅವಿನಾಶ ಸಿದ್ಧಾಂತಗಳು.

ವೀರಶೈವ ಸಂಸ್ಕೃತಿಯ ಬಗ್ಗೆ ಅಪಾರ ಆದರವನ್ನಿಟ್ಟುಕೊಂಡಿರುವ, ಈ ಲೇಖನದ ಬರಹಗಾರ ಶ್ರೀ ಹೆಚ್. ಜಿ. ಶಿವಣ್ಣನವರು ಗಮುಡನಗಿರಿ ಪಾಳೆಯ ಪಟ್ಟಣ 'ಕಿಸ್ತಿ'ನ ಕಾಯಕದ ಮಠಸ್ಥರು; ಹೀಚನೂರಿನ ಪರಮ ದೈವಭಕ್ತ ಶ್ರೀ ದೊಡ್ಡನಂಜುಂಡಶೆಟ್ಟರ ಪುತ್ರರು. ಕಾಲೇಜು ಕಲಿತಿರುವ ವಿದ್ಯಾವಂತರು. ವಿದ್ಯಾಕ್ಷೇತ್ರ ಹಾಗೂ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಬಯಸುತ್ತಿರುವ ಸಮಾಜ ಸುಧಾರಕರು. ಗುಬ್ಬಿ ತೋಟದಪ್ಪನವರ ಛತ್ರದ ವ್ಯವಸ್ಥಾಪಕರಾಗಿ ಶ್ರೀಯುತರು ಸಮಾಜಕ್ಕೆ ಹೆಚ್ಚಿನ ಸೇವೆ ಸಲ್ಲಿಸುತ್ತಿದ್ದಾರೆ.

ಪರಿಣತರು, ಪ್ರಾಜ್ಞರು ಅವುಗಳನ್ನು ಆಳವಾಗಿ, ವಿಸ್ತಾರವಾಗಿ ಒಳಹೊಕ್ಕು ವಿವೇಚಿಸಬಲ್ಲರು. ಆ ಶಕ್ತಿ, ಸಂಯಮಗಳು ಸಕಲರಿಗೂ ಸಾಧ್ಯವೇ? ಎಂತಲೇ ವೀರಶೈವ ಸಿದ್ಧಾಂತ, ಸಂಸ್ಕೃತಿಗಳ 'ಕೆನೆ' ಯಂತಿರುವ ಸುಲಭ ಸೂತ್ರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸಾಕು. ನಿಜವಾದ 'ವೀರ-ಶೈವ' ನಾಗಬಹುದು; ನೈಜ ಭಾರತೀಯನಾಗಬಹುದು; ಪರಿಪೂರ್ಣ ವ್ಯಕ್ತಿಯಾಗಿ ಬಾಳಬಹುದು. 'ಹೇಗೆ' ಬದುಕಬೇಕು ಎಂಬುದನ್ನು ಆದರ್ಶ ಪ್ರಾಯವಾಗಿ ತೋರಿಸಿ ಕೊಡಬಹುದು.

ಶಾಂತಿಯುತ ಸಹ ಬಾಳ್ವೆ ಸಮಾಜ ಸಂಸ್ಕೃತಿಯ ಮೊದಲ ಸೋಪಾನ. ದ್ವೇಷ, ಎಂದಿಗೂ ದೂಷಿತವಾದುದು; ದ್ವೇಷಿಸುವವನು ದುಶ್ಚರಿತ, ಪರದ್ವೇಷ ಪತನದ ಹೆಬ್ಬಾಗಿಲು.

ಗುರುಭಕ್ತಿ ಇಲ್ಲದವನಿಗೆ ಶಿವಭಕ್ತಿ ಸಮನಿಸುವುದಿಲ್ಲ. ಎಂತಲೇ ಶಿವನಲ್ಲಿರುವಂತೆಯೇ ಗುರುವಿನಲ್ಲಿಯೂ ಭಕ್ತಿ ಇರಬೇಕು. ಗುರುಮುಖದಿಂದ ಶಿವದರ್ಶನ ಸಾಧ್ಯ.

ದೇಹದ ಸುಖಕ್ಕಾಗಿ, ಅದರ ಪೋಷಣೆಗಾಗಿ ಮಾತ್ರ ಬಾಳುವುದು, ಸರಿಯಾದ ಬದುಕೆನಿಸುವುದಿಲ್ಲ. ಆತ್ಮನಿಗಾಗಿಯೂ, ಅದರ ಉತ್ಕರ್ಷಕ್ಕಾಗಿಯೂ ಬಾಳುವುದನ್ನು ಕಲಿಯಬೇಕು. ಇಲ್ಲವಾದರೆ ಈ ಜೀವನ ಮಹತ್ವಪೂರ್ಣವಾಗುವುದಿಲ್ಲ.

ಮಿತ್ರರಿಗೆ ಆದರ, ಶತ್ರುವಿಗೆ ಅನಾದರಣೆ ತೋರುವುದು ಋಜು ಪ್ರವೃತ್ತಿಯಲ್ಲ. ಇದರಿಂದ ಮನಃಶಾಂತಿ ಸಾಧ್ಯವಿಲ್ಲ. ಮಾನಸಿಕ ಹೊಯ್ದಾಟಕ್ಕೆ ಇದೇ ಕಾರಣವಾಗುತ್ತದೆ. ಸಮಾನ ದೃಷ್ಟಿ, ಶಾಂತಿಯ ದಾಹ, ನೆಮ್ಮದಿಯ ಕೋರಿಕೆ ಇವು ಮನದ ಪ್ರಸನ್ನತೆಗೆ ಮೂಲವಾದವುಗಳು. ಇದೇ ಶಿವಚಿಂತನೆಗೂ ದಾರಿದೀಪ.

ಹಗೆತನದಿಂದ ಹೃದಯ ನಂಜಿನ ಹುತ್ತವಾಗುತ್ತದೆ. ಇನ್ನೊಬ್ಬರ ತಪ್ಪನ್ನು ಗುರುತಿಸಲು ನಾವೇ ತಪ್ಪನ್ನು ಮಾಡಬೇಕಾಗುತ್ತದೆ. ಇದರಿಂದ ಬೆಳೆಯುವ ದ್ವೇಷಕ್ಕೆ ನೂರು ಮುಖ ಮೂಡುತ್ತದೆ. ಅಂತರಂಗದಲ್ಲಿ ಮಹಾ ವಿಪ್ಲವವುಂಟಾಗಿ ಬಗೆಗೆಡುತ್ತದೆ. ಬಗೆಗೆಟ್ಟವನ ಬಳಿ ನೆಮ್ಮದಿ ಎಲ್ಲಿ ಸಾಧ್ಯ?

ವಿಶ್ವದ ಯಾವುದೇ ಧರ್ಮದ ಮುಂದೆಯಾದರೂ ಸರಿಸಮವಾಗಿ ನಿಲ್ಲಬಲ್ಲ ವೀರಶೈವ ಮತ ಮತ್ತು ಸಂಸ್ಕೃತಿಗಳು ಮಾನವನ ಸಂಭಾವಿತ ಬದುಕಿಗೆ ಸುಲಭ ಸೂತ್ರಗಳನ್ನು ಒದಗಿಸಿ ಕೊಟ್ಟಿವೆ. ಇವುಗಳನ್ನು 'ವೀರಶೈವ ಧರ್ಮ' 'ವೀರಶೈವ ಸಂಸ್ಕೃತಿ' 'ವೀರ ಶೈವರ ನಾಗರೀಕತೆ' 'ವೀರಶೈವ ಸಿದ್ಧಾಂತ' ಎಂಬ ಏನೇ ಹೆಸರಿನಿಂದ ಕರೆದರೂ, ಇವು ಜಾತಿ ಮತ ಪಂಥಗಳ ತಾರತಮ್ಯವಿಲ್ಲದೆ ಸಕಲ ಮಾನವಕುಲದ ಉದ್ಧಾರಕ್ಕೆ ಸಂದೇಶ ನೀಡಿರುವುದನ್ನು ಬಲ್ಲವರಾರೂ ವಿರೋಧಿಸಲಾರರು.

ಪಂಚ ಪೀಠಾಧೀಶ್ವರರಿಗೆ ನಮನ

ಫೋನ್ : 11

ಮಹಾಲಕ್ಷ್ಮಿ ಸಾ ಮಿಲ್ಸ್
ಟಿಂಬರ್ ವರ್ತಕರು
ಅಂಡರ್ ಬ್ರಿಡ್ಜ್ ರೋಡು
ಕಡೂರು
ಚಿಕ್ಕಮಗಳೂರು ಜಿಲ್ಲೆ
ಮೈಸೂರು ರಾಜ್ಯ

Coca-Cola
Coca-Cola

Have friends, have Coca-Cola. Enjoy its crisp, lively taste. Feel the lift it gives your mood. Always ask for Coca-Cola. Always ask for it ice-cold. Yes, Coca-Cola refreshes you best.

things go better with Coca-Cola

Coca-Cola

Coca-Cola is the registered Trademark of The Coca-Cola Company

Authorised Bottler: BANGALORE SOFT DRINKS PRIVATE LTD., BANGALORE

CMCC-9-203

With Best Compliments from :

Telegrams: "PARKASH"
Telephone: 84553

THE PIONEER (MADRAS) PRIVATE LTD.,

AUTOMOBIL SPECIALISTS
POST BOX 379

23, MOUNT ROAD, MADRAS-2.

Our respects to
Jagadguru
Pancha
Peethadhipatis

❁

STOCKISTS TOMCO PRODUCTS
AND CONSIGNEE
DISTRIBUTORS FOR
O. K. VANASPATY AND
REFINED OIL

B. K. NANJUNDIAH & SON

GRAINS MERCHANTS & COMMISSION AGENTS
26, Old Tharagupet,
BANGALORE-2 A

Phone : 27119



ಶ್ರೀ ಕೆ. ಎಸ್. ವಿರೂಪಾಕ್ಷಯ್ಯನವರು

“ನಮಃಶಿವಾಯ’ ಎಂಬ ಪಂಚಾಕ್ಷರೀ ಮಹಾ ಮಂತ್ರ ಬೀಜಾಕ್ಷರಗಳು ಪಂಚಾನನನಾದ ಪರಶಿವನ ಪಂಚಮುಖ ಪದ್ಮಗಳು. ಜನನ ಮರಣಾದಿ ಭಯವನ್ನು ನಾಶಮಾಡಿ ಶಾಶ್ವತ ಸುಖವನ್ನು ಕರುಣಿಸುವ ಸತ್ಯನಾದ ಶಿವನನ್ನು ಈ ಮಹಾ ಮಂತ್ರದಿಂದ ಸರ್ವದಾ ನುತಿಸಿ ಸ್ಮರಿಸಿ ಪೂಜಿಸಬೇಕು. ಶಿವಪಂಚಾಕ್ಷರೀ ಮಹಾ ಮಂತ್ರವು ಸಪ್ತಕೋಟಿ ಶಿವ ಮಂತ್ರಗಳಲ್ಲಿ ಪ್ರಪ್ರಥಮ ಸ್ಥಾನವನ್ನು ಪಡೆದಿರುತ್ತದೆ. ಇಂತಹ ಮಹಾ ಮಂತ್ರದ ಪಂಚ ಬೀಜಾಕ್ಷರಗಳಲ್ಲಿ ‘ನ’ಕಾರಾಕ್ಷರವು ಪರಮೇಶ್ವರನ ಪೂರ್ವದಿಕ್ಕಿನ ಸದ್ಯೋಜಾತ ಮುಖವನ್ನೂ ಮಕಾರಾಕ್ಷರವು ದಕ್ಷಿಣ ದಿಕ್ಕಿನ ವಾಮದೇವ ಮುಖವನ್ನೂ ಶಕಾರವು ಪಶ್ಚಿಮ ದಿಕ್ಕಿನ ಅಘೋರಮುಖವನ್ನೂ ‘ವಾ’ ಕಾರಾಕ್ಷರವು ಉತ್ತರ ದಿಕ್ಕಿನ ತತ್ಪುರುಷ ಮುಖವನ್ನೂ ‘ಯ’ಕಾರಾಕ್ಷರವು ಊರ್ಧ್ವದಿಕ್ಕಿನ ಈಶಾನ ಮುಖವನ್ನೂ ಪ್ರತಿಪಾದಿಸುವ ಸೂಚಕಾಕ್ಷರಗಳಾಗಿರುತ್ತವೆ. ಪಂಚಬೀಜಾಕ್ಷರಗಳ ನಿಗೂಢ ನೈಜ ಸ್ವರೂಪವೇ ಪಂಚಮುಖ ಪದ್ಮಭೂಷಣನಾದ ಪರಶಿವನ ಸತ್ಯಸ್ವರೂಪವು.

ಪಂಚಮುಖ ಪದ್ಮಭೂಷಣನಾದ ಪರಶಿವನ ಪಂಚಾಕ್ಷರಿ ಮಂತ್ರದ ಸತ್ಯ ಸ್ವರೂಪ

ಸುಸಂಸ್ಕೃತ ಮನೆತನಕ್ಕೆ ಸೇರಿದವರಾದ ಶ್ರೀ ಕೆ. ಎಸ್. ವೀರೂಪಾಕ್ಷಯ್ಯನವರು ಬೆಂಗಳೂರು ನಗರಸಭೆಯ ಆರೋಗ್ಯ ಖಾತೆಯಲ್ಲಿದ್ದಾರೆ. ದೈವಭಕ್ತರೂ, ಸಾಹಿತ್ಯಾಭಿಮಾನಿಗಳೂ ಆದ ಶ್ರೀಯುತರು ಈ ಲೇಖನದಲ್ಲಿ ಪಂಚಾಕ್ಷರಿ ಮಂತ್ರದ ಸತ್ಯ ಸ್ವರೂಪವನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

ಈ ಪಂಚ ಬೀಜಾಕ್ಷರಗಳ ಒಡೆಯನಾದ ಪರಶಿವನು ಯುಗಯುಗಾಂತರಗಳಲ್ಲಿಯೂ ಧರ್ಮಸಂಸ್ಥಾಪನೆ ಹಾಗೂ ಮಾನವ ಧರ್ಮ ಜಾಗೃತಿಗಾಗಿ “ಸಂಭವಾಮಿ ಯುಗೇ ಯುಗೇ” ಎಂಬ ಭಗದ್ವಾಣಿಯಂತೆ ಮಾನವರೂಪ ಧರಿಸಿ ಅವತರಿಸುತ್ತಾನೆ, ಅಂತೆಯೇ ಕೃತಯುಗದಲ್ಲಿ ಪರಶಿವನು ಏಕಾಕ್ಷರ ಶಿವಾಚಾರ್ಯ, ದ್ವ್ಯಕ್ಷರ ಶಿವಾಚಾರ್ಯ, ತ್ರ್ಯಕ್ಷರ ಶಿವಾಚಾರ್ಯ, ಚತುರಕ್ಷರ ಶಿವಾಚಾರ್ಯ ಪಂಚಾಕ್ಷರ ಶಿವಾಚಾರ್ಯನೆಂದೂ, ತ್ರೇತಾಯುಗದಲ್ಲಿ ಏಕವಕ್ತ್ರ ಶಿವಾಚಾರ್ಯ ದ್ವಿವಕ್ತ್ರ ಶಿವಾಚಾರ್ಯ ತ್ರಿವಕ್ತ್ರ ಶಿವಾಚಾರ್ಯ ಚತುರ್ವಕ್ತ್ರಶಿವಾಚಾರ್ಯ ಮತ್ತು ಪಂಚವಕ್ತ್ರ ಶಿವಾಚಾರ್ಯನೆಂಬ ಪವಿತ್ರ ಪಂಚ ನಾಮಗಳಿಂದ ಭೂಲೋಕದಲ್ಲಿ ಅವತರಿಸಿ ವಿರಾಜಿಸಿದರು. ದ್ವಾಪರ ಯುಗದಲ್ಲಿಯೂ ಪರಮೇಶ್ವರನು ಮಾನವ ದಿವ್ಯ ದೇಹಧಾರಿಯಾಗಿ ಪಂಚಭೂತ ತತ್ವಗಳ ಸಂಘವಿಲ್ಲದೆಯೇ ಕೊಲ್ಲಿಪಾಕ ಕ್ಷೇತ್ರದಲ್ಲಿ ಶ್ರೀ ಸೋಮೇಶ್ವರ ಲಿಂಗಮುಖದಿಂದ ಶ್ರೀಮದ್ರೇಣುಕಾಚಾರ್ಯನೆಂದೂ, ವಟಕ್ಷೇತ್ರದ ಶ್ರೀಶಿದ್ಧೇಶ್ವರ ಲಿಂಗಮುಖದಿಂದ ಶ್ರೀಮದ್ದಾರುಕ ಶಿವಾಚಾರ್ಯನೆಂದೂ ದ್ರಾಕ್ಷಾರಾಮಕ್ಷೇತ್ರದ ಶ್ರೀರಾಮನಾಥ ಲಿಂಗಮುಖದಿಂದ ಶ್ರೀಮದ್ಘಂಟಾಕರ್ಣ ಶಿವಾಚಾರ್ಯನೆಂದೂ ಸುಧಾಕುಂಡ ಕ್ಷೇತ್ರದ ಶ್ರೀ ಮಲ್ಲಿಕಾರ್ಜುನ ಲಿಂಗಮುಖದಿಂದ ಶ್ರೀಮದ್ಧೇನುಕರ್ಣ

ಶಿವಾಚಾರ್ಯನೆಂದೂ ಶ್ರೀ ಕಾಶೀಕ್ಷೇತ್ರದ ಶ್ರೀವಿಶ್ವನಾಥ ಲಿಂಗಮುಖದಿಂದ ಶ್ರೀ ಮಧ್ವಿಸ್ವಾರಾಧ್ಯ ಶಿವಾಚಾರ್ಯನೆಂದೂ ಅವತರಿಸಿ ಪ್ರವಿರಾಜಮಾನನಾಗಿರುತ್ತಾನೆ.

ಈ ರೀತಿ ಪಂಚಲಿಂಗೋದ್ಭವರಾದ ಪಂಚ ಶಿವಾಚಾರ್ಯರಲ್ಲಿ ಶ್ರೀಮದ್ ರೇಣುಕಾಚಾರ್ಯರು, ಋಗ್ವೇದಸಾರ ಸರ್ವಸ್ವರೂಪರಾಗಿ ಪರಿವಿಡಿ ಮಹಾಸೂತ್ರದ, ವೀರಗೋತ್ರದ ರೇಣುಕ ಶಾಖೆಯನ್ನು ಬೆಳೆಸಿ ಶ್ರೀಮದ್ರಂಭಾಪುರಿಯಲ್ಲಿ ನೆಲೆಯಾಗಿ ನಿಂತು ಪೃಥ್ವೀ ತತ್ವದ ವೀರಸಿಂಹಾಸನವನ್ನು ಸ್ಥಾಪಿಸಿದರು. ಶ್ರೀಮದ್ದಾರುಕ ಶಿವಾಚಾರ್ಯರು ಯಜುರ್ವೇದ ಸಾರಸ್ವರೂಪರಾಗಿ ದೃಷ್ಟಿ ಮಹಾಸೂತ್ರದ ನಂದೀ ಗೋತ್ರದ ದಾರುಕ ಶಾಖೆಯನ್ನು ಉಜ್ಜಯಿನಿಯಲ್ಲಿ ಬೆಳೆಸಿ ಆ ತತ್ವದ ಸದ್ಧರ್ಮ ಸಿಂಹಾಸನವನ್ನು ಸ್ಥಾಪಿಸಿದರು. ಸಾಮವೇದ ಸ್ವರೂಪಿಗಳಾದ ಶ್ರೀಮದ್‌ಘಂಟಾಕರ್ಣ ಶಿವಾಚಾರ್ಯರು ಲಂಬನ ಮಹಾಸೂತ್ರದ ಹಾಗೂ ಭೃಂಗ ಗೋತ್ರದ ತಮ್ಮ ಘಂಟಾಕರ್ಣ ಶಾಖೆಯನ್ನು ಹಿಮತ್ಕೇದಾರದಲ್ಲಿ ಪ್ರಾರಂಭಿಸಿ ಸ್ಥಿರವಾದ ಅಗ್ನಿತತ್ವದ ಪರಮ ವೈರಾಗ್ಯ ಸಿಂಹಾಸನವನ್ನು ಸ್ಥಾಪಿಸಿದರು. ಶ್ರೀಮದ್ಧೇನುಕರ್ಣ ಶಿವಾಚಾರ್ಯರು ಅಥರ್ವಣವೇದಸ್ವರೂಪಿಗಳಾಗಿದ್ದು ಮುಕ್ತಾಗುಚ್ಛಮಹಾಸೂತ್ರದ ಮತ್ತು ವೃಷಭಗೋತ್ರದ ಧೇನುಕರ್ಣ ಶಾಖೆಯನ್ನು ಶ್ರೀಶೈಲದಲ್ಲಿ ಬೆಳೆಸಿ ವಾಯುತತ್ವದ ಸೂರ್ಯ ಸಿಂಹಾಸನವನ್ನು ಸ್ಥಾಪಿಸಿದರು. ಅಂತೆಯೇ ಅಜಪವೇದದ ಸಾರಸರ್ವಸ್ವರೂಪರೆನಿಸಿದ ಶ್ರೀ ಮದ್ವಿಶ್ವಾರಾಧ್ಯ ಶಿವಾಚಾರ್ಯರು ಪಂಚವರ್ಣ ಮಹಾಸೂತ್ರದ ಹಾಗೂ ಸ್ಕಂದಗೋತ್ರದ ತಮ್ಮ ವಿಶ್ವಾರಾಧ್ಯ ಶಾಖೆಯನ್ನು ಶ್ರೀಕಾಶಿಯಲ್ಲಿ ಬೆಳಸಿ, ಆಕಾಶ ತತ್ವದ ಜ್ಞಾನ ಸಿಂಹಾಸನವನ್ನು ಸ್ಥಾಪಿಸಿದರು. ಈ ರೀತಿ ವೀರಶೈವ ಮತದ ಮೂಲ ಪಂಚ ಧರ್ಮ ಸಿಂಹಾಸನಾಧೀಶ್ವರರಾದ ಶ್ರೀಮದ್ರೇಣುಕಾದಿ ಪಂಚಾಚಾರ್ಯರು ಪಂಚ ಮುಖ ಪದ್ಮಧರನಾದ ಪರಶಿವನ ಪಂಚಾಕ್ಷರೀ ಮಹಾಮಂತ್ರ ಬೀಜಾಕ್ಷರಗಳ ಸಾಕ್ಷಾತ್ ಪ್ರತಿರೂಪರೆಂದು ಉಲ್ಲೇಖಿತವಾಗಿರುತ್ತದೆ.

ಮೂಲಸ್ತಂಭಾಯ ಮಾನದಿಂದ ಪರಶಿವನ ಚಿತ್ಕಳಾ ಸ್ವರೂಪರೆಂದೆನಿಸಿದ ಶ್ರೀಮದ್ರೇಣುಕಾದಿ ಪಂಚಾಚಾರ್ಯರು ತಮ್ಮ ವಿಭೂತಿಯೋಗದೈಶ್ವರ್ಯ ಪ್ರಭಾವದಿಂದ, ಶ್ರೀಮತ್ಕಲಿಯುಗದಲ್ಲಿ ಮತ್ತೆ ಮಾನವ ರೂಪ ಧರಿಸಿ ಶ್ರೀಮದ್ರೇವಣಸಿದ್ಧ, ಮರುಳ ಸಿದ್ಧ, ಏಕೋರಾಮ, ಪಂಡಿತಾರಾಧ್ಯ, ವಿಶ್ವಾರಾಧ್ಯರೆಂಬ ಪುಣ್ಯಾಭಿಧಾನದಿಂದ ಆವಿರ್ಭವಿಸಿ ಗುರುಸಾಕ್ಷಾತ್ ಪರಬ್ರಹ್ಮರಾಗಿ ಭಕ್ತ ಮಾಹೇಶ್ವರರ ಅಂತರಂಗವನ್ನರಿತು, ಸತ್ಯಶುದ್ಧವಾದ ಕಾಯಕ ಹೊತ್ತು, ಮಾನವೀಯ ಮಂದಾರವಾಗಿ ಬೆಳಗಿ, ಸಮತೆಯೇ ಭಸ್ಮ ಸದ್ಭಾವವೇ ದಂಡ, ವೈರಾಗ್ಯವೇ ಕಪ್ಪರ ಸುಜ್ಞಾನವೇ ಕಂತೆ ಎಂಬ ಪರತತ್ವ ಸದ್ಭಾವನೆಯ ಬುನಾದಿಯ ಮೇಲೆ ಸ್ಥಾಪಿತವಾದ ವೀರಶೈವ ಧರ್ಮದ ಸಿದ್ಧಾಂತ ಶೀರ್ಷಿಕೆಯಲ್ಲಿ ಪ್ರವಿರಾಜಮಾನರಾಗಿ “ಗುರೂಣಾಂಗುರುಃ” ಎಂಬ ಬಿರುದಾಂಕಿತರಾದ ಜಗದ್ಗುರು ಸಾರ್ವಭೌಮರೆನಿಸಿ ಜಗದ್ವಂದ್ಯರಾದರು.

Our Hearty Welcome to

PANCHA JAGADGURUS

Phone : Office : 24985
Res : 24710

C. R. Revanna
Gurusiddappa

Dealers in : IRON HARDWARE & CEMENT

Approved Dealers by : JOINT PLANT COMMITTEE

Stockists: THE MYSORE IRON & STEEL LTD., BHADRAVATI

THE INDIA CEMENTS LTD., MADRAS

No. 1, GODOWN STREET. BANGALORE-2.

ಸ್ಥಾಪನೆ: 1911 ಸುವರ್ಣ ಮಹೋತ್ಸವ : 1965 ಫೋನ್ ನಂ. : 28

ಮುಂಡಗೋಡ ದೊಡ್ಡ ಪ್ರಮಾಣದ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘ ನಿಯಮಿತ, ಮುಂಡಗೋಡ (ಉ. ಕ.)

ತಾರೀಖು : 30 ಜೂನ್ 1971ಕ್ಕೆ ಇದ್ದಂತೆ

ಮೆಂಬರರ ಸಂಖ್ಯೆ	...	857
ಶೇಅರ ಭಂಡವಲು	...	2,23.365/-
ರಿಝರ್ವ ಫಂಡ	...	27.371/-
ಇತರ ನಿಧಿಗಳು	...	23,030/-
ಠೇವುಗಳು	...	55,985/-
ದುಡಿಯುವ ಭಂಡವಲು	...	6,71,100/-

ಎಮ್. ಬಿ. ನಾಯ್ಕ
ಸೆಕ್ರೆಟರಿ

ಸಿ. ಎಸ್. ಕೊಳ್ಯಾನವರ
ಚೇರಮನ್

ಫೋನ್ ನಂ. 23600

ಶ್ರೀ ಪಂಚಾಚಾರ್ಯಾಃ ಪ್ರಸೀದಂತು

ಮದುವೆ ಮತ್ತು ವಿಶೇಷ ಶುಭ ಸಮಾರಂಭಗಳಿಗೆ
ಬೇಕಾಗುವ ಆಕರ್ಷಣೀಯವಾದ ನಿಮ್ಮ ಅಂದದ ಸೀರೆಗಳಿಗೆ

"ಶ್ರೀ ಗಣಪತಿ ವಿಲಾಸ್"

ರೇಷ್ಮೆ ಜವುಳಿ ಅಂಗಡಿ
ನಂ. 208, ಚಿಕ್ಕಪೇಟೆ, ಬೆಂಗಳೂರು-2A

ಇವರಲ್ಲಿಗೆ ಭೇಟಿಕೊಡಿ.

** ಪ್ರಸಿದ್ಧವಾದ ಬೆನಾರಸ್ ಬ್ರೋಕೇಡ್ ಮತ್ತು ಜಾರ್ಜೆಟ್, ಕಾಶ್ಮೀರ್ **
** ಸಿಲ್ವರ್ ಮತ್ತು ಗೋಲ್ಡ್ ಬುಟ್ಟಾ ಸೀರೆಗಳು ಮತ್ತು ಧರ್ಮಾವರಂ, **
** ಕಾಂಜೀವರಂ, ಆರಣಿ, ಬೆಂಗಳೂರು, ರಿವರ್ಸಬಲ್ ಸೀರೆಗಳು ಮುಂತಾದ **
** ನವೀನ ಮಾದರಿಯ ರೇಷ್ಮೆ ಸೀರೆಗಳು ಈಗತಾನೆ ಹೊಸದಾಗಿ ಬಂದಿವೆ. **

Our Salutations to
Jagadguru Pancha
Peethadhipatis

Phone: 23792

THE INDUSTRIAL EQUIPMENT CO.,

DIAGANAL ROAD, VISWESWARAPURAM,
BANGALORE-4.

Manufacturers of:
HEATING EQUIPMENTS FOR
HOTELS AND RESTAURANTS

ಮುಕ್ತಿಮಂದಿರದ ಮಹರ್ಷಿ



ಶ್ರೀ ಸೋಮುಕುಮಾರ ಲಕ್ಷ್ಮೇಶ್ವರ ಅವರು

ವಂದೇ ಶ್ರೀ ವೀರ ಗಂಗಾಧರ ದೇವಂ॥
ಮಹಿಮಾನ್ವಿತಂ ಮಾನಿನಂ॥
ಅಘಟಿತ ಘಟನಾಯುಕ್ತಂ॥
ಮುಕ್ತಿ-ಮಂದಿರ ನಿವಾಸಿನಂ॥
ಭಕ್ತೇಷು ಕರುಣಾವಿಷ್ಟಂ॥
ಜ್ಞಾನ ವೈರಾಗ್ಯ ಸಂಯುತಂ॥

ಆಧ್ಯಾತ್ಮದ ತವರು, ಋಷಿ ಮುನಿಗಳ ಬೀಡು, ವಿಶ್ವವ್ಯಾಪಿಯಾಗಿ ಯುಗಯುಗಾಂತರಗಳಿಂದ ಬಾಳಿ ಬೆಳಗುತ್ತಿರುವ ಮತಸ್ಥಾಪಕರ ನೆಲೆವೀಡು; ಮತಾಚಾರ್ಯರ ದಿವ್ಯ ತತ್ವೋಪದೇಶಗಳಲ್ಲಡಗಿರುವ ಭಕ್ತಿ, ವೈರಾಗ್ಯ, ಜ್ಞಾನಪ್ರಸಾರಕ್ಕೆ ಜನ್ಮಭೂಮಿ, ಈ ಭರತ ಭೂಮಿ! ಭಾರತ ಭೂಮಿಯ ದಕ್ಷಿಣ ತಟದಲ್ಲಿ, ದಕ್ಷಿಣ ಕಾಶಿಯೆಂದು ಪ್ರತೀತಿ ಪಡೆದ ಪುಲಿಗೆರೆಯ (ಲಕ್ಷ್ಮೇಶ್ವರದ) ಸಮೀಪದಲ್ಲಿಯೇ ಸುಮಾರು ಮೂವತ್ತು ವರ್ಷಗಳ ಹಿಂದೆ ಸ್ಥಾಪಿತವಾಗಿ ಸರ್ವಧರ್ಮದವರ ಶಾಂತಿಯ ನೆಲೆಯಾಗಿ ನಿಂತು ಮಾನವ ಧರ್ಮದ ಉದ್ಧಾರಕ್ಕಾಗಿ ಕೈಮಾಡಿ ಕರೆಯುತ್ತಲಿದೆ ಮುಕ್ತಿ ಮಂದಿರ! ಮುಕ್ತಿಮಂದಿರ ಶಬ್ದದ ಅರ್ಥ ಮಾರ್ಮಿಕವಾಗಿದೆ, ಅದರ ಕಾರ್ಯ ಇಹಪರ ಸೌಖ್ಯ, ವಿಶ್ವ ಕಲ್ಯಾಣದ ಶಾಂತಿಗಾಗಿಯೇ ಮೀಸಲಾಗಿದೆ. ಅಲ್ಲಿ ವಾದವಿವಾದಗಳಿಗೆ ಎಡೆಯಿಲ್ಲ; ಎಲ್ಲವೂ ಬೋಧಪ್ರದವೇ ಆಗಿದೆ!

ಬೆಂಗಳೂರು ಮಹಂತರ ಮಠದ ಪಟ್ಟಾಧ್ಯಕ್ಷ, ಪಾಲಿಕೊಪ್ಪದ ಮಠಾಧ್ಯಕ್ಷ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯರು ಧರ್ಮಜಾಗೃತಿಗಾಗಿ ಧಾರವಾಡ ಜಿಲ್ಲೆಯ ಸಂಚಾರ ಕೈಕೊಂಡಿದ್ದರು. ಅದು ಭರತ ಖಂಡದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾಲ; ಮಹಾತ್ಮಾ ಗಾಂಧಿಯವರ ಅಸ್ಪೃಶ್ಯತಾ ನಿವಾರಣೆಯ ಆಂದೋಲನದ ಪರ್ವಕಾಲ. ಜನಸಾಮಾನ್ಯರಿಗೆ ಚಳುವಳಿ, ಸತ್ಯಾಗ್ರಹ, ಸ್ವಾತಂತ್ರ್ಯಗಳ ಸವಿಕನಸುಗಳೇ ಕಾಣುತ್ತಿದ್ದವು. ಧರ್ಮ, ದೇವರು, ಆಚಾರ ವಿಚಾರಗಳತ್ತ ಗಮನವಿಲ್ಲ. ಆದರೆ ಗುರುಮನೆಯ ಕೃಪೆ ಇಲ್ಲದೆ ಅರಮನೆಯ ಏಳಿಗೆ ಎಂದು? ಎಂತು? ಅಂತೆಯೇ ಅಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯರು ವೀರಶೈವ ಧರ್ಮ ಜಾಗೃತಿಗಾಗಿ ಸಕಲ

‘ಮುಕ್ತಿಮಂದಿರ ಮಹರ್ಷಿ’ ಲೇಖನವನ್ನು ಬರೆದಿರುವ ಶ್ರೀ ಸೋಮಕುಮಾರ ಲಕ್ಷ್ಮೇಶ್ವರ ಅವರು ಪ್ರಗತಿಶೀಲ ಪತ್ರಕರ್ತರು. ವೀರಶೈವ ಸಿದ್ಧಾಂತದಲ್ಲಿ ಹೆಚ್ಚಿನ ಚಿಂತನೆ ನಡೆಸಿರುವ ಶ್ರೀಯುತರು ‘ಶ್ರೀ ವಿಶ್ವಶಕ್ತಿ ಪ್ರಕಾಶನ’ ಎಂಬ ವಿಶ್ವರೂಪಿ ಪ್ರಗತಿಶೀಲ ಮಾಸಪತ್ರಿಕೆಯ (ಹುಬ್ಬಳ್ಳಿ) ಸಂಪಾದಕರಾಗಿ ಸಾಹಿತ್ಯಸೇವೆ ಮಾಡುತ್ತಿದ್ದಾರೆ.

ಮಾನವರ ಲೇಸಿಗಾಗಿ, ಪ್ರವಚನ, ಮಹಾಶಿವ ಪೂಜೆಗಳ ಮೂಲಕ ಧರ್ಮಬೋಧೆಯ ಭಾರ ಹೊತ್ತು ನಡೆದರು; ಧರ್ಮಧ್ವಜ ಹಾರಿಸಲು ಸನ್ನದ್ಧರಾದರು.

ಧಾರವಾಡ ಜಿಲ್ಲೆಯ ಸಂಚಾರದಲ್ಲಿ ಜಿಲ್ಲೆಯ ಸಮಸ್ತ ಮತ ಬಾಂಧವರೂ ಶ್ರೀಗಳವರು ಸದುಪದೇಶ, ಶಿವಪೂಜೆ, ಶಿಷ್ಯೋದ್ಧಾರದ ಸತ್ಸಂಕಲ್ಪ. ಆ ಸಂಕಲ್ಪಕ್ಕಾಗಿ ಅಲ್ಪಾಹಾರ, ಬೇವಿನ ರಸಪಾನಾದಿಗಳನ್ನು ಕಂಡ ಶಿಷ್ಯವೃಂದ ಭಕ್ತಿ ಪರವಶವಾಯಿತು ಅನಿಶ್ಚಿತವಾದ ಲೌಕಿಕ ಭೋಗಭಾಗ್ಯಾದಿಗಳನ್ನೆಲ್ಲ ಧರ್ಮಕಾರ್ಯಕ್ಕಾಗಿಯೇ ಧರ್ಮವೀರ ಶ್ರೀ ಗುರುವಿನ ಪಾದಕ್ಕೆ ಅರ್ಪಿಸಲು ಸಿದ್ಧವಾಯಿತು. ಹರಲಾಪೂರ ಗ್ರಾಮದಲ್ಲಿ ವಾಸ್ತವ್ಯ ಮಾಡಿದ್ದ ಶ್ರೀಗಳು ಒಮ್ಮೆ ಗ್ರಾಮದ ಹಿರಿಯ ಹಾಗೂ ತಮ್ಮ ಆತ್ಮೀಯ ಶಿಷ್ಯನಾದ ಲಿಂಗೈಕ್ಯ ಶ್ರೀ ಕೊರಡೂರ ಕಲ್ಲಪ್ಪನವರೊಂದಿಗೆ ಸಾಯಂಕಾಲದ ವಾಯುವಿಹಾರಕ್ಕೆಂದು ಹೊರಟರು. ದಾರಿಯಲ್ಲಿಯೂ ಧರ್ಮ ಜಾಗೃತಿ, ಧರ್ಮೋದ್ಧಾರದ ಮಾತು ಕತೆಗಳೇ ಸಾಗಿ ಕೊನೆಗೆ ಕೊರಡೂರವರ ಕಾಡುಭೂಮಿ ಸುಡುಗಾಡ ಸಿದ್ಧನ ಅಡವಿ ಎಂದು ಹೆಸರಾದ ಪ್ರದೇಶಕ್ಕೆ ತಲುಪಿದರು. ಹಿಂದೆ ಅದೇ ಅಡವಿಯಲ್ಲಿ ಪವಾಡ ಪುರುಷರೆಂದು ಪ್ರತೀತಿ ಪಡೆದ ಶಿಶುನಾಳ ಶರೀಫರೂ, ಗುರುಗೋವಿಂದರೂ "ಪಂಚಾಚಾರ್ಯರ ಉದಯವಾಗುತಲಿ! ಪಂಚಾನನ ಪ್ರಭೆ ಬೆಳಗುವದಿಲ್ಲಿ" ಎಂದು ಭವಿಷ್ಯತ್ ಪದ್ಯ ಹಾಡಿದ್ದರು. ಸುತ್ತಲೂ ಕಾಡು, ಮೇಡು, ಗಿರಿ ಗಹ್ವರ; ಎಲ್ಲೆಲ್ಲೂ ಗಂಭೀರ ಮೌನ. ತಪಃಸಿದ್ಧಿಗೆ ಸಿದ್ಧಸ್ಥಾನ! ಕೊರಡೂರವರ ಮನದಲ್ಲಿ ಸುವಿಚಾರವೊಂದು ಸುಳಿಯಿತು. ಶ್ರೀಗಳಲ್ಲಿ ಅರಿಕೆ ಮಾಡಿಕೊಂಡೇ ಬಿಟ್ಟರು. ಅದೇನು? ವೀರ ತಪಸ್ವಿಯ ಪವಿತ್ರ ಪಾದಕ್ಕೆ ತಮ್ಮ ಐಹಿಕ ಪಾಲಿನ ಆ ಕಾಡು ಭೂಮಿಯನ್ನರ್ಪಿಸುವುದು. ಆದರೆ ಮೊದಲು ಕೊರಡೂರರಿಗೆ ನಿರಾಶೆಯೇ ಕಾದಿತ್ತು. ಕರುಣಾಳುವಾದ ಗುರುವು ಆ ಶಿಷ್ಯನ ಪ್ರಾರ್ಥನೆಯಂತೆ ಕಾಡಿನಲ್ಲಿ ಉಳಿಯಲು ನಿರ್ಧರಿಸಿದರು. ಆ ಕಾಡೇ ಇಂದು ನಾಡಿಗೆಲ್ಲ ದೇಶಕ್ಕೆಲ್ಲ, ವಿಶ್ವಕ್ಕೆಲ್ಲ ಬೋಧೆ ನೀಡುವ ವಿಶ್ವಶಾಂತಿಯ ನೆಲೆವೀಡಾದ, ವಿಶ್ವಕಲ್ಯಾಣ ಯೋಗೀಶ್ವರರ ಬೀಡಾದ, ಶ್ರೀ ಮುಕ್ತಿಮಂದಿರ!

ಶ್ರೀ ಮುಕ್ತಮಂದಿರ ಸ್ಥಾಪನೆಯಾಗುವದೆಂಬ ಸುದ್ದಿ ಜಗದಗಲ, ಮುಗಿಲಗಲ ಪಸರಿಸಿತು. ವೀರಶೈವರಾದಿಯಾಗಿ ಸರ್ವ ಮತಾನುಯಾಯಿಗಳೂ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯರಲ್ಲಿಗೆ ಧಾವಿಸಿ ಸೇವಾಸನ್ನದ್ಧರಾದರು. ಅಂತೂ ಒಂದು ದಿನ ಶುಭಗಳಿಗೆಯಲ್ಲಿ ಧರ್ಮರ್ಷಿಗಳ, ಮುಕ್ತಿ ಮಂದಿರ ಮಹರ್ಷಿಗಳ ಸತ್ಸಂಕಲ್ಪದಂತೆ " ಶ್ರೀ ಮುಕ್ತಿ ಮಂದಿರ" ದ ಉದಯಃವಾಯಿತು.

ಶ್ರೀಗಳು ಶ್ರೀ ಮುಕ್ತಿ ಮಂದಿರದಲ್ಲಿ ಕೈಕೊಂಡ ಆ ತಪಸ್ಸಿನ ಫಲವೋ, ಕನ್ನಡಿಗರ, ವೀರಶೈವರ, ಪುಣ್ಯದ ಪ್ರಭಾವವೋ ಎಂಬಂತೆ ಕೆಲದಿನಗಳನಂತರ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯರು ಶ್ರೀಮದ್ರಂಭಾಪುರಿ ವೀರ ಸಿಂಹಾಸನದ ಜಗದು ರು ಪೀಠವನ್ನೇರಿದರು.

ಶ್ರೀ ಮುಕ್ತಿಮಂದಿರದಲ್ಲಿ ಧರ್ಮಜಾಗೃತಿಗಾಗಿ, ವಿಶ್ವ ಕಲ್ಯಾಣಕ್ಕಾಗಿ, ವಿಶ್ವದಲ್ಲಿ ಹಿಂದೂ, ಮುಂದೂ, ಎಂದೂ ನಡೆಯದ ಕಾರ್ಯಗಳು ನಡೆದಿವೆ, ನಡೆಯುತ್ತಲಿವೆ. ಲಕ್ಷ ಲಕ್ಷ, ದೀಪೋತ್ಸವ, ಸಹಸ್ರು ಕುಂಭಾಭಿಷೇಕ ಮಹೋತ್ಸವ, ೧೦೦೮ ಪಲ್ಲಕ್ಕಿ ಮಹೋತ್ಸವ, ೧೦೦೮ ಮಂಟಪ ಪೂಜಾ ಮಹೋತ್ಸವ, ಶ್ರೀ ಜ॥ ಪಂಚಪೀಠಾಧೀಶ್ವರರ ಸಮ್ಮೇಳನೋತ್ಸವ, ಸರ್ವಧರ್ಮ ಸಮ್ಮೇಳನೋತ್ಸವ, ಏಕೋತ್ತರ ಸ್ಥಳಕಟ್ಟಿನ ಸ್ಮರಣಾರ್ಥ ಏಕೋತ್ತರ ವಿಜಯ ರಥೋತ್ಸವ, ಒಂದೇ, ಎರಡೇ, ಆದಿಶೇಷನಿಗೂ ಅಸಾಧ್ಯ ಅವುಗಳ ವರ್ಣನೆ ಮಾಡುವುದು; ಅಲ್ಲಿ ನಡೆಯುವ ಕಾರ್ಯಗಳೆಲ್ಲವೂ ಧರ್ಮ ಜಾಗೃತಿಗಾಗಿ. ವಿಶ್ವ ಮಾನವರ ಕಲ್ಯಾಣಕ್ಕಾಗಿ. ಶ್ರೀಹಿಮವತ್ ಕೇದಾರ ಪೀಠದ ಉದ್ಧಾರಕ್ಕಾಗಿ ಶ್ರೀ. ಜ॥ ಮಹಾಸನ್ನಿಧಿಯವರು ಕಲ್ಲುಹೊತ್ತು ನಿಂತದ್ದೂ ಅಲ್ಲಿಯೇ; ಅಷ್ಟಗ್ರಹ ಪೀಡಾ ಪರಿಹಾರಾರ್ಥ, ಅಹರ್ನಿಶಿ ಅನ್ನೋದಕ ತೊರೆದು ನಿಂತಿದ್ದೂ ಅಲ್ಲಿಯೇ. "ಸಕಲ ಮಾನವರ ಉದ್ಧಾರಕ್ಕಾಗಿ" ಮಾನವ ಧರ್ಮಕ್ಕೆ ಜಯವಾಗಲಿ! ಧರ್ಮದಿಂದಲೇ ವಿಶ್ವಕ್ಕೆ ಶಾಂತಿ!! ಎಂದು ವೀರ ಘರ್ಜನೆ ಘರ್ಜಿಸಿದ್ದೂ ಅಲ್ಲಿಯೇ! ಅಲ್ಲಿ ಎಲ್ಲರಿಗೂ ಸ್ಥಾನವುಂಟು. ಮತ, ಮಂದಿರ, ಮಸೀದೆ, ಚರ್ಚು, ಗೋಶಾಲೆ, ಗಜಾಶ್ವಶಾಲೆ,! ಪಾಠಶಾಲೆ, ಪಾಕಶಾಲೆ, ಸೋಮಸಾಗರ, ಕುಮಾರ ಸಾಗರ, ಕಲ್ಯಾಣ ಮಂದಿರ-ಎಲ್ಲವೂ ಉಂಟು.!

ಓ! ಮತ್ತೆ ಪ್ರಸನ್ನ ರೇಣುಕರು, ಪ್ರಳಯ ಭೈರವನಿಗೆ ಮಾನವ ಕುಲಕೋಟಿ ತುತ್ತಾಗುವ ಮೊದಲೇ ಮೂರು ಕೋಟಿ ಶಿವಲಿಂಗ ದರ್ಶನ, ಹನ್ನೆರಡು ಸಾವಿರ ಮಂಟಪ ಪೂಜನ, ವಿಶ್ವಶಕ್ತಿಗೆ, ವಿಶ್ವಶಾಂತಿಗಾಗಿ ಸರ್ವ ಮತೀಯರಿಂದ ಲಕ್ಷ ಕುಂಭಾಭಿಷೇಕ ದಂತಹ "ನಭೂತೋ ನಭವಿಷ್ಯತಿ" ಕಾರ್ಯ ಕೈಕೊಳ್ಳುವ ಸತ್ಸಂಕಲ್ಪ ಮಾಡಿದ್ದಾರೆ. ಧರ್ಮ ಜಾಗೃತಿಯ ಪರ್ವಕಾಲವನ್ನು ಬರಮಾಡಿದ್ದಾರೆ. ಬನ್ನಿ ಶ್ರೀ ಮುಕ್ತಿ ಮಂದಿರದ ಮಹರ್ಷಿ, ವಿಶ್ವಕಲ್ಯಾಣ ಯೋಗೀಶ್ವರ, ವೀರ ತಪಸ್ವಿ, ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರ ಗಂಗಾಧರ ದೇಶಿಕ ಮಹಾರಾಜೇಂದ್ರ ಭಗವತ್ಪಾದರ ದರ್ಶನ ಪಡೆಯುವಾ!

卐

ಶ್ರೀ

ಜಗದ್ಗುರು

ಪಂಚಪೀಠಾಧೀಶ್ವರರಿಗೆ

ಪ್ರಣಾಮಗಳು

卐

D.M.M.
MALLIC
BATHI

High Class
Perfumers

M. MUDDANNA & SONS,
39, COTTONPET,
BANGALORE-2A

Tele
Phone : 22300
Grams : 'CARSPARES'

OUR RESPECTS TO
PANCHA JAGADGURUS

Bangalore Stores

PROP : **K. M. NANJAPPA**

Dealers in
MOTOR TYRES
ACCESSORIES ETC.

No. 63
Narasimharaja Road
BANGALORE-2

ವೀರಶೈವ ಸಮಾಜ ಸಂಘಟನೆ



ಶ್ರೀ ರೇಣುಕದೇವರು ಶ್ರೀ ಶಿಲಾಮಠ
ತಾವರೆಕೆರೆ

ಶ್ರೀ ರೇಣುಕದೇವರು ಉತ್ಸಾಹಿ ತರುಣರು, ಸಮಾಜ ಸಂಘಟನೆಯಲ್ಲಿ ಬಹಳ ಆಸಕ್ತಿಯುಳ್ಳವರು. ಇಂತಹ ಕೆಲಸ ಕಾರ್ಯಗಳಲ್ಲಿ ಇವರಿಂದ ಸಮಾಜಕ್ಕೆ ಹೆಚ್ಚು ನೆರವು ದೊರೆಯುವುದೆಂದು ನಿರೀಕ್ಷಿಸಲಾಗಿದೆ.

ವೀರಶೈವ ಸಮಾಜ ಸಂಘಟನೆಯಲ್ಲಿ ಮಠಗಳ ಪಾತ್ರ ಬಹು ಮಹತ್ವದ್ದಾಗಿದೆ. ಆದಿಯಿಂದ ಇಂದಿನವರೆಗೂ ಬಂದ ವಿಪತ್ತುಗಳನ್ನೆಲ್ಲಾ ಎದುರಿಸಿ ಸಮಾಜವನ್ನು ಉಳಿಸಿ, ಬೆಳಸಿಕೊಂಡು ಬಂದು, ಘನತರವಾದ ಕಾರ್ಯವನ್ನು ವೀರಶೈವ ಮಠಗಳು ಮಾಡಿವೆ. ಪೂರ್ವದಲ್ಲಿ ಈ ಮಠಾಧಿಪತಿಗಳು ಮಹಾ ತಪಸ್ವಿಗಳೂ ಸಮಾಜ ಹಿತಚಿಂತಕರೂ ಜನತಾಸೇವಾನಿರತರೂ ಆಗಿರುತ್ತಿದ್ದರು. ಆದುದರಿಂದ ವೀರಶೈವರಷ್ಟೇ ಅಲ್ಲ, ಇತರ ಮತೀಯರು ಕೂಡ ಈ ಮಠಾಧಿಪತಿಗಳನ್ನು ಒಳ್ಳೆಯ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಕಾಣುತ್ತಿದ್ದರು. ಬರುಬರುತ್ತಾ ಹಲಕೆಲವು ಮಠಾಧಿಪತಿಗಳು ತಮ್ಮ ಕರ್ತವ್ಯವನ್ನು ಮರೆತುದರಿಂದ ಮಠಗಳ ವರ್ಚಸ್ಸು ಕಡಿಮೆಯಾಗಹತ್ತಿತು. ಮಠಾಧಿಪತಿಗಳಿಗೂ ಸಮಾಜಕ್ಕೂ ಇರುವ ಪರಸ್ಪರ ಸಂಬಂಧ ಶಿಥಿಲವಾಯಿತು. ಸಮಾಜದಲ್ಲಿ ಮಠಗಳಿಂದ ಆಗಬೇಕಾದ ಕಾರ್ಯ ಇನ್ನೂ ಬಹಳವಿದೆ. ಮಠಮಂದಿರಗಳೂ ಧಾರ್ಮಿಕ ಸಂಸ್ಥೆಗಳೂ ಹೆಚ್ಚುಹೆಚ್ಚು ಬೆಳೆದು, ಈಗಿನ ಕಾಲಮಾನ ಪರಿಸ್ಥಿತಿಗನುಸರಿಸಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಬೇಕು. ಕ್ರೈಸ್ತ ಮಿಶನ್ ಮತ್ತು ರಾಮಕೃಷ್ಣ ಮಿಶನ್ ಮುಂತಾದ ಸಂಸ್ಥೆಗಳಲ್ಲಿ ಧರ್ಮ, ತತ್ವ, ಜ್ಞಾನವನ್ನು ಪ್ರಚಾರಮಾಡುವ ಕಾರ್ಯ ನಡೆದಂತೆ ವೀರಶೈವರಲ್ಲಿ ನಡೆಯಬೇಕು.

ತಾತ್ವಿಕವಾಗಿ ವೀರಶೈವ ಸಮಾಜದಲ್ಲಿ ಗುರುಸ್ಥಲದವರು ವಿರಕ್ತರು ಮುಂತಾಗಿ ಯಾವ ಪಕ್ಷಪಂಗಡಗಳಿಗೂ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು. ಜಗದ್ಗುರು ಪಂಚಾಚಾರ್ಯ ಸಂಪ್ರದಾಯದವರೂ ವಿರಕ್ತ ಸಂಪ್ರದಾಯದವರೂ ಕೂಡಿಯೇ ದುಡಿದು ವೀರಶೈವ ಸಮಾಜದ ಏಳ್ಗೆ ಸಾಧಿಸಿದ್ದನ್ನು ಇತಿಹಾಸ ಹೇಳುತ್ತದೆ. ಜಗದ್ಗುರು ರೇಣುಕಾಚಾರ್ಯರು ವೀರಶೈವ ಮತವನ್ನು ಸ್ಥಾಪಿಸಿ ವೀರಶೈವ ಸಮಾಜಕ್ಕಾಗಿ ಮಾಡಿದ ಕಾರ್ಯ ಅದ್ಭುತವಾದುದು. ಅದರಂತೆ ಮಹಾತ್ಮ ಬಸವಣ್ಣನವರೂ ತೋಂಟದ ಯತೀಶ್ವರರೂ ಸಾಧಿಸಿದ ಕಾರ್ಯವೂ ಅಗಾಧವಾದುದು. ಗುರುವಿರಕ್ತರಿಬ್ಬರೂ ಸಮಾಜವನ್ನು ಎತ್ತಿಹಿಡಿದು ಪ್ರಕಾಶಕ್ಕೆ ತಂದರು. ಚೈತನ್ಯವನ್ನೂ ಜ್ಞಾನವನ್ನೂ ಉಂಟುಮಾಡಿದರು. ವೀರಶೈವ ಸಾಹಿತ್ಯವನ್ನು ನಿರೀಕ್ಷಿಸಿದರೆ

ನಮಗೆ ಈ ಮಾತು ಸ್ಪಷ್ಟವಾಗಿ ಹಾಗೂ ಕೂಲಂಕಷವಾಗಿ ತಿಳಿಯುವುದು.

ಸಮಾಜದ ದುರ್ದೈವದಿಂದ ಸುಮಾರು ವರುಷಗಳ ಹಿಂದೆ ಗುರು ವಿರಕ್ತರಲ್ಲಿ ಭಿನ್ನಭಾವವುಂಟಾಗಿ ಸಮಾಜವು ಹದಗೆಟ್ಟಿತು. ಪರಸ್ಪರ ದ್ವೇಷಾಸೂಯೆಗಳು ಬೆಳೆದವು. ಇಷ್ಟೇ ಏಕೆ? ಉಭಯ ಪಂಗಡಗಳವರೂ ಪರಸ್ಪರ ಮನ ಬಂದಂತೆ ಧಿಕ್ಕರಿಸಿ ನುಡಿದು ಸಮಾಜದ ಐಕ್ಯಕ್ಕೆ ಭಂಗಬರುವಂತೆ ಮಾಡಿದರು. ಸಮಾಜವನ್ನು ಅವಹೇಳನೆಗೆ ಗುರಿಮಾಡಿದರು. ಸಮಾಜವು ಮಾತ್ರ ಕಟ್ಟು ಹರಿದ ಕಣಿಕೆಯ ಪೆಂಡಿಯಂತಾಯಿತು. ಒಳಪಂಗಡಗಳೂ ಪಕ್ಷಗಳೂ ಸಮಯ ಭೇದಗಳೂ ಉಂಟಾದವು. ಇದು ಅತೀವ ದುರ್ದೈವದ ಸಂಗತಿ. ಈ ಭೇದಭಾವಗಳನ್ನು ತೊಡೆದುಹಾಕಿ ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡಲು ಇತ್ತೀಚೆಗೆ ಧಾರವಾಡ ಜಿಲ್ಲಾದಲ್ಲಿ ನವಿಲಗುಂದ (ಗವಿ ಮಠ) ವಿರಕ್ತಮಠದ ಶ್ರೀಶ್ರೀಗಳು ಸೂಕ್ತವಾದ ಕಾರ್ಯವನ್ನು ಕೈಗೊಂಡ ವಿಚಾರವು ಸಾಮಾನ್ಯವಾಗಿ ಎಲ್ಲಾ ಮಠಾಧಿಕಾರಿಗಳಿಗೂ ತಿಳಿದ ವಿಷಯವಾಗಿದೆ. ಅಲ್ಲಿ ಅವರು ಗುರು-ವಿರಕ್ತರನ್ನು ಕಲೆಹಾಕಿ ಈಗಿನ ಸಮಾಜದ ಒಡಕಿಗೆ ಕಾರಣಭೂತವಾದ ಹಲವು ಅಂಶಗಳನ್ನು ಚರ್ಚಿಸಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ವೀರಶೈವ ಮತಸ್ಥಾಪಕರು ಹಾಗೂ ಶ್ರೀ ಬಸವಾದಿ ಪ್ರಮಥರು ವೀರಶೈವ ಮತೋದ್ಧಾರಕರು ಎಂಬ ನಿರ್ಣಯವನ್ನು ಅಂಗೀಕರಿಸಿದರು. ಇದು ದಿಟ್ಟತನದಿಂದ ಬಿಚ್ಚುಮನಸ್ಸಿನಿಂದ ಸತ್ಯದ ದೃಷ್ಟಿಯಿಂದ ನಡೆಸಿದ ಮಹತ್ಕಾರ್ಯವಾಗಿದೆ. ಈ ನಿರ್ಣಯದ ಸೂತ್ರವನ್ನು ಇಲ್ಲಿಗೇ ಬಿಡದೆ ಇದನ್ನು ಹಿಡಿದುಕೊಂಡು ಸಮಾಜ ಬಾಂಧವರು ಅನ್ಯೋನ್ಯ ದೃಷ್ಟಿಯಿಂದ ಸಮಾಜದಲ್ಲಿ ಹಿತಕರವಾದ ವಾತಾವರಣವನ್ನು ಕಲ್ಪಿಸುವ ಮಾರ್ಗದಲ್ಲಿ ಶ್ರಮಿಸಿದರೆ ಸಮಾಜವು ಇನ್ನೂ ಹೆಚ್ಚು ಬಲಿಷ್ಠವಾಗುತ್ತದೆ. ಅಂತಹ ದಿಸೆಯಲ್ಲಿ ಎಲ್ಲ ಸಮಾಜ ಪ್ರೇಮಿಗಳು ಹೆಜ್ಜೆ ಇಡುವರೆಂದು ಆಶಿಸೋಣ. ಐಕ್ಯವಿಲ್ಲದೆ ಸಮಾಜದ ಏಳ್ಗೆಯಾಗಲಾರದು. ಆದುದರಿಂದ ವೀರಶೈವರಲ್ಲಿ ತೋರಿಬರುತ್ತಿರುವ ಭಿನ್ನಭಾವಗಳನ್ನು ಹೋಗಲಾಡಿಸಿ, ಎಲ್ಲರನ್ನೂ ಒಂದುಗೂಡಿಸಿ, ಸಮಾಜವನ್ನು ತೇಜಸ್ವಿಯನ್ನಾಗಿ ಮಾಡುವುದು ಅತ್ಯಗತ್ಯ. ಈ ದಿಸೆಯಲ್ಲಿ ಕಾರ್ಯ ಮಾಡಲು ಎಲ್ಲ ಸಿಂಹಾಸನಾಧಿಪತಿಗಳೂ ಗ್ರಾಮಾಂತರಗಳಲ್ಲಿಯ ಮಠಾಧಿಪತಿಗಳೂ ಮುಂದಾಗಬೇಕು.

ಪ್ರತಿಯೊಬ್ಬ ವೀರಶೈವನೂ, ಅವನು ಯಾವ ವರ್ಗಕ್ಕೇ ಸೇರಿರಲಿ, ತನ್ನ ಸ್ವಪ್ರತಿಷ್ಠೆ ಸ್ವಾರ್ಥಗಳನ್ನು ಬದಿಗಿರಿಸಿ, ಈ ದಿಶೆಯಲ್ಲಿ ದುಡಿಯಲು ಮಠಾಧಿಪತಿಗಳಿಗೆ ಸಹಾಯ ಸಲಹೆಗಳನ್ನೀಯಬೇಕು. ಗುರು ವಿರಕ್ತರಲ್ಲಿ ಐಕ್ಯವುಂಟಾಗಿ ಇಬ್ಬರೂ ಹೆಗಲಿಗೆ ಹೆಗಲು ಹಚ್ಚಿ ಸಮಾಜದ ಏಳ್ಗೆಗಾಗಿ ದುಡಿಯಲು ಮುಂದೆ ಬಂದ ದಿನವೇ ನಮ್ಮ ಸಮಾಜಕ್ಕೆ ಸುದಿನ. ಅನೇಕ ವರ್ಷಗಳಿಂದ ಬೆಳೆದುಬಂದ ವೈಷಮ್ಯಗಳನ್ನು ಕಿತ್ತೊಗೆದು ಅವರು ಒಮ್ಮತದಿಂದ ಸಮಾಜದ ಏಳ್ಗೆಯ ಕಾರ್ಯದಲ್ಲಿ ಶ್ರಮಿಸುವುದಾಗಿ ಇಂದಿನ ಸಮಾಜ ನಂಬಿಕೊಂಡಿದೆ. ಅಲ್ಲದೆ, ಬೆಂಗಳೂರು ಮಹಾನಗರದಲ್ಲಿ ಪ್ರಥಮವಾಗಿ ಪಂಚಪೀಠಾಧೀಶ್ವರರು ಕೂಡುವುದು ಸಮಾಜದ ಐಕ್ಯತೆಗೆ ನಾಂದಿ, ಇದು ಶುಭ ಚಿಹ್ನೆ ಸಂತೋಷದ ಸಂಗತಿ!

ಹಿಂದಿನ ಮಠಾಧಿಪತಿಗಳು ಜನಾಂಗದ ಆಧ್ಯಾತ್ಮಿಕ ಏಳ್ಗೆಗೆ ಪ್ರಯತ್ನಪಡುತ್ತಿದ್ದಂತೆ ಅವರ ಭೌತಿಕ ಅಭಿವೃದ್ಧಿಗೂ ನೆರವಾಗುತ್ತಿದ್ದರು. ಸಮಾಜದ ಗುರುವರ್ಗದವರಾಗಲಿ ವಿರಕ್ತರಾಗಲಿ ಗ್ರಾಮಾಂತರ ಜನಗಳಿಗೆ ಗುರುವಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಅವರು ಎಲ್ಲ ದೃಷ್ಟಿಯಿಂದಲೂ ದೇವರ ಪ್ರತೀಕವೇ ಆಗಿದ್ದರು. ಆದ್ದರಿಂದಲೇ ಸಮಾಜ ಅವರನ್ನು (ಗುರು-ವಿರಕ್ತರನ್ನು) ಗೌರವಿಸುತ್ತಿತ್ತು, ಇಂದಿಗೂ ಗೌರವಿಸುತ್ತಿದೆ.

ಇಂದಿನ ಕಾಲದಲ್ಲಿ ಪುನಃ ಅಂತಹ ಪರಿಸ್ಥಿತಿಯನ್ನು ತಂದುಕೊಳ್ಳುವುದು ಸಾಧ್ಯವಿದೆ. ಭಾವೀ ಮಠಾಧಿಪತಿಗಳಿಗೆ ಸರಿಯಾದ ರೀತಿಯಲ್ಲಿ ತರಬೇತಿ ಕೊಟ್ಟರೆ ಇದು ಸಹಜವಾಗಿಯೇ ಸಾಧ್ಯವಾಗುತ್ತದೆ. ಹೀಗೆ ಮಾಡಿದರೆ ಮಠಾಧಿಪತಿಗಳು ಜನತೆಗೆ ಸರಿಯಾದ ಮಾರ್ಗವನ್ನು ತೋರಿಸಬಲ್ಲರು. ಸಮಾಜ ತಮ್ಮತಮ್ಮಲ್ಲಿ ಜಗಳವಾಡಿ ಬಡಿದಾಡುವುದನ್ನು ನಿಲ್ಲಿಸಿ ಯಾವುದಾದರೊಂದು ರಚನಾತ್ಮಕ ಕಾರ್ಯವನ್ನು ಕೈಕೊಳ್ಳುವಂತೆ ಮಾಡಬಲ್ಲರು. ಮಠಾಧಿಪತಿಗಳು ಗ್ರಾಮಾಂತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ರೀತಿಯನ್ನೂ ಜನತೆಯ ಜೀವನದ ಮಟ್ಟವನ್ನು ಮೇಲಕ್ಕೊಯ್ಯುವ ಬಗೆಯನ್ನೂ ಅರಿತುಕೊಳ್ಳಬೇಕು. ಇದು ಅವರು (ಮಠಾಧಿಪತಿಗಳು) ಮಾಡಬೇಕಾದ ಕಾರ್ಯವಾಗಿದೆ. ನಮ್ಮ ಸಮಾಜವನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡುಹೋಗುವುದು ಅತ್ಯಾವಶ್ಯಕವೆಂಬುದನ್ನು ಮತ್ತೆ ಮತ್ತೆ ಜೀವನದಲ್ಲಿ ನೆನಪುಮಾಡಿಕೊಳ್ಳಬೇಕು. ಸಮಾಜವನ್ನು ಸಂಘಟಿಸುವುದೆಂದರೆ ಮಠಗಳನ್ನು ಸಂಘಟಿಸುವದೆಂದು ನಾವು ಹೇಳಬಹುದು. ಸಮಾಜದ ಆಧ್ಯಾತ್ಮಿಕ ಉನ್ನತಿಯೂ ನೈತಿಕ ಅಭಿವೃದ್ಧಿಯೂ ಹೆಚ್ಚಾಗಿ ಮಠಾಧೀಶ್ವರರನ್ನೇ ಅವಲಂಬಿಸಿದೆ.

ಮಠಾಧೀಶ್ವರರು ಮಠಗಳಿಗೆ ಮರಿಗಳನ್ನು ಆಯ್ಕೆ ಮಾಡುವಾಗ ಅವರ ಶೀಲ ಸ್ವಭಾವಗಳಿಗೆ ಆದ್ಯತೆ ನೀಡಬೇಕು, ಹಾಗೂ ಸಮಂಜಸವಾದ ಒಂದು ಯೋಗ್ಯತಾ ಪರೀಕ್ಷೆಯನ್ನು ಏರ್ಪಡಿಸುವುದು ಅಗತ್ಯವಾಗಿದೆ. ಇದರಿಂದ ಅವರ ಆಧ್ಯಾತ್ಮಿಕ ತೇಜಸ್ಸು ವ್ಯಾವಹಾರಿಕ ಹಾಗೂ ಆಡಳಿತೆಯ ಕುಶಲತೆ, ವಿದ್ವತ್ತು ನೀತಿ ಮುಂತಾದವುಗಳನ್ನು ಪರೀಕ್ಷಿಸಲು ಅನುಕೂಲವಾಗುತ್ತದೆ. ◆

OUR PRANAMAMS TO
PANCHA PEETHADHI PATIS

C.M.S. SASTRY

PARTNER

JANATHA AGENCIES

Distributors : **I. O. C.**

B. H. ROAD, SHIMOGA Phone : 664

PROPRIETOR

JANATHA ENGINEERING WORKS

RATHNAGIRI ROAD, CHIKMAGALUR

Phone : 476 & 233

Estd : 1926 PHONE : 25721 Audit : "A" Class

TOTAL RESOURCES NEARLY 60 LAKHS

Attractive Rates of Interest on Deposits

From 91 days to below 6 months 5½%
From 6 months to „ 1 year 6½%
From 1 year to „ 2 years 7%
From 2 years to „ 3 years 7½%
From 3 years to „ 5 years 8%
From 5 years and above 8½%

HALF A PER CENT EXTRA FOR CHARITABLE, RELIGIOUS AND EDUCATIONAL INSTITUTIONS

ON SAVINGS BANK ACCOUNT 4½%

BOARD OF DIRECTORS

President
Sri K. V. Lakshminarayanan
Vice-President
Sri H. Gangadhara Setty
Hon. Secretaries
Sri S. N. Krishna Murthy
Sri P. S. Krishna Murthy
Directors
Sri P. N. Radhakrishna Setty
Sri B. P. Rangaiah Setty
Sri N. Gowrishankar
Sri V. N. Sathyanarayana Gupta
Sri K. S. Chandrashekara Gupta
Sri P. K. Pandurangam
Sri Gundaiah Setty, B.A. (Hon.), B.L.
ADMINISTRATOR
Sri K. R. Aswathanarayana, B.com.

THE VYSYA CO-OPERATIVE BANK LTD.

AVENUE ROAD—(H.O.)—BANGALORE-2

WITH THE BEST COMPLIMENTS FROM

P. RAMA RAJU & SONS
57, Tent House, II Main Road
Palace Guttahalli
BANGALORE-3
Phone : 74344

RAJU TENT HOUSE
No. 35, II Main Road
Vyalikaval
BANGALORE-3
Phone : 29048

SUPPLIERS OF NEW SHAMIANAS FURNITURE, CROCKERY, LINEN, ETC., FOR WEDDINGS, PARTIES, CONFERENCES

ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ

ಬೆಂಗಳೂರು - ೯



ಮೈಸೂರು ಸಂಸ್ಥಾನದಲ್ಲಿಯೇ ಮೊದಲನೇ ಖಾಸಗಿ ವಿದ್ಯಾಸಂಸ್ಥೆಯಾಗಿ 1945ರಲ್ಲಿ ಜನ್ಮತಳೆದ ಶ್ರೀ ರೇಣುಕಾಚಾರ್ಯ ವಿದ್ಯಾಸಂಸ್ಥೆಯು ಅಂದಿಗೆ ವಿದ್ಯಾರ್ಜನೆಗೆ ಇದ್ದ ಅಡಚಣೆಗಳ ಭಾರವನ್ನು ಹೊರಲು ಸರಕಾರದೊಂದಿಗೆ ತನ್ನ ಸಹಕಾರವನ್ನು ವ್ಯಕ್ತಪಡಿಸಿತು. ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಕೈಲಾಸವಾಸಿ ಪಿ. ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಮಹಾದಾನಿಗಳಾದ ಕೈಲಾಸವಾಸಿ ಷರಾಫ್ ಬಿ. ಬಸಪ್ಪನವರೇ ಮೊದಲಾದ ಆಗರ್ಭ ಶ್ರೀಮಂತರ ಉದಾರ ಧನ ಸಹಾಯದಿಂದ "ಬಸಪ್ಪ ಇಂಟರ್‌ಮೀಡಿಯೆಟ್" ಕಾಲೇಜಾಗಿ ವಿದ್ಯಾ ಸೇವೆ ಸಲ್ಲಿಸಲು ಆರಂಭಿಸಿತು. ಆಗ್ಗೆ ಎಪ್ಪತ್ತು ಜನ ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ದಾಖಲಾಗಿದ್ದರು.

1958 ರಲ್ಲಿ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಕೃಪೆತೋರಿ ದಯಪಾಲಿಸಿದ ಈ ನಿವೇಶನದಲ್ಲಿ ಈ ಸಂಸ್ಥೆಯು ಪ್ರಥಮದರ್ಜೆ ಕಾಲೇಜಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ ಕಾಲೇಜು ಎಂದು ಹೆಸರುತಳೆದು ಬೆಳೆಯಿತು. ಈಗ ಈ ಕಾಲೇಜಿನ ಪ್ರಿನ್ಸಿಪಾಲರಾಗಿ ಪ್ರೊ॥ ಎಸ್. ಮಹಲಿಂಗಪ್ಪನವರು ಸೇವೆಸಲ್ಲಿಸುತ್ತಿದ್ದಾರೆ.

1961 ರಲ್ಲಿ ಈ ಕಾಲೇಜಿನಲ್ಲಿ ಪ್ರಕೃತಿ ವಿಜ್ಞಾನ ಶಾಖೆಯನ್ನು ಆರಂಭಿಸಲಾಯಿತು. ಬೃಹತ್ತಾಗಿ ಬೆಳೆಯುತ್ತಿದ್ದ ಈ ವಿದ್ಯಾಸಂಸ್ಥೆಗೆ ಖ್ಯಾತ ಶಿಕ್ಷಣ ತಜ್ಞರೂ, ಸಮಾಜ ಸೇವಾಧುರೀಣರೂ ಆದ ಪ್ರೊಫೆಸರ್ ಪಿ. ಶಿವಶಂಕರ್‌ರವರು 1962ರಲ್ಲಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಶ್ರೀಯುತರ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾನೂನು ವಿದ್ಯಾಲಯ (ಲಾ ಕಾಲೇಜು) (1963) ಆರಂಭವಾಗಿ ದಿನೇ ದಿನೇ ಬೃಹತ್ತಾಗಿ ಬೆಳೆದು ಬಂದಿದೆ. ಈ ವಿದ್ಯಾಲಯದ ಪ್ರಿನ್ಸಿಪಾಲರಾಗಿ ಪ್ರೊಫೆಸರ್ ಪಿ. ಶಿವಶಂಕರ್‌ರವರೇ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಶ್ರಮ ಮತ್ತು ಮಾರ್ಗದರ್ಶನದ ಫಲವಾಗಿ ಪ್ರಸಕ್ತ ವರ್ಷದಲ್ಲಿ ಎಂ. ಎಲ್. ತರಗತಿಗಳು ಆರಂಭವಾಗಿವೆ.

1965 ರಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯ ಸಂಜೆ ವಾಣಿಜ್ಯ ವಿದ್ಯಾಸಂಸ್ಥೆ ಆರಂಭವಾಗಿ ಅನೇಕ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ವಿದ್ಯಾಮಟ್ಟವನ್ನು ಹೆಚ್ಚಿಸಿಕೊಳ್ಳಲು ಅವಕಾಶಕೊಟ್ಟಿದೆ. ಈ ವಿದ್ಯಾಲಯದ ಪ್ರಿನ್ಸಿಪಾಲರಾಗಿ ಶ್ರೀ ಹೆಚ್. ಹೆಚ್. ಬಸವರಾಜ್‌ರವರು ಸೇವೆ ಸಲ್ಲಿಸುತ್ತಿದ್ದಾರೆ.

1970 ರಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ ಕಾಲೇಜಿನಲ್ಲಿ ಕಲಾ ಶಾಖೆಯನ್ನು ಆರಂಭಿಸಲಾಯಿತು. ಪ್ರಸ್ತುತ ವರ್ಷದಲ್ಲಿ ಬಿ. ಎ. ತರಗತಿಯಲ್ಲಿ 120 ವಿದ್ಯಾರ್ಥಿಗಳಿದ್ದಾರೆ. 1971ರಲ್ಲಿ ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಪ್ರೀ-ಯುನಿವರ್ಸಿಟಿ ಪರೀಕ್ಷೆಗಳಲ್ಲಿ 5ನೇ ಮತ್ತು 8ನೇ ರ್‍ಯಾಂಕುಗಳು ನಮ್ಮ ಕಾಲೇಜಿನವಾಗಿವೆ.

ಕ್ರೀಡಾರಂಗದಲ್ಲೂ ನಮ್ಮ ವಿದ್ಯಾರ್ಥಿಗಳು ಅನೇಕ ಪ್ರಶಸ್ತಿಗಳನ್ನು ಗಳಿಸಿರುವರಲ್ಲದೆ ಪ್ರೇಕ್ಷಕರ ಮೆಚ್ಚುಗೆಯನ್ನೂ ಗಳಿಸಿದ್ದಾರೆ.

ಪ್ರಪ್ರಥಮವಾಗಿ ಬೆಂಗಳೂರಿಗೆ ಆಗಮಿಸುವ ಶ್ರೀ ಶ್ರೀ ಶ್ರೀ ಪಂಚಾಚಾರ್ಯರಿಗೆ
ಬೆಂಗಳೂರು ಹಳೇತರಗುಪೇಟೆಯ ಶ್ರೀ ಶಾರದ ಪ್ರಾವಿಷನ್ ಸ್ಟೋರ್ಸ್‌ನ ಮಾಲಿಕರಾದ
ಶ್ರೀ ಟಿ. ಆರ್. ರಾಜಶೇಖರಯ್ಯ, L.C.E. ರವರ ಶಿರಸಾಷ್ಟಾಂಗ ನಮಸ್ಕಾರಗಳು



ಸಮಾಜ ಬಾಂಧವರ ಸೇವೆಯೇ ದೇವರ ಸೇವೆ !

ರಾಷ್ಟ್ರಪ್ರಜೆಗಳ ನಿತ್ಯಬಳಕೆಯ ಆಹಾರ ಸಾಮಗ್ರಿಯಗಳನ್ನು ಸತತವಾಗಿ
ಅವರ ಮನ ಮೆಚ್ಚುವಂತೆ ಒದಗಿಸಿ ಕೊಡುವುದೇ ರಾಷ್ಟ್ರಸೇವೆ !!
ನಿಮ್ಮ ನಿತ್ಯ ಬಳಕೆಯ ಆಹಾರ ಸಾಮಗ್ರಿಯಗಳಿಗೆ ಬೆಂಗಳೂರಿನಲ್ಲಿ ಅಗ್ರಸ್ಥಾನವಾದ
ಹಾಗೂ ದೊಡ್ಡ ಪ್ರಮಾಣದ ನಮ್ಮ ಅಂಗಡಿಗೆ ಭೇಟಿನೀಡಿ

Visit and have your daily provision articles from :

SRI SHARADA PROVISION STORES

(*Prop :* T. R. Rajasekharaiah)
276, Old Tharagupet, Bangalore-2A

Residence : 592, 21st Main Road, IV T Block, Jayanagar, B-11

ತಮ್ಮ ಸುಖಾಗಮನವನ್ನು ಬಯಸುವ:
ಶ್ರೀಮತಿ ಸಿ.ಬಿ. ಗೌರಮ್ಮ ರಾಜಶೇಖರಯ್ಯ, ಕುಮಾರ ಟಿ. ಆರ್. ದಯಾನಂದ, ಕುಮಾರ ಟಿ. ಆರ್. ಷಡಾಕ್ಷರಯ್ಯ,
ಕುಮಾರ ಟಿ. ಆರ್. ಪಂಚಾಕ್ಷರಯ್ಯ ಹಾಗೂ ಕುಮಾರಿ ಟಿ. ಆರ್. ವನಜಾಕ್ಷಮ್ಮ

ಪರಿಮಳ ಭರಿತ,
ಆರೋಗ್ಯದಾಯಕ
ಮೈಸೂರು
ಸ್ಯಾಂಡಲ್
ಸೋಪ್

ಮೈಸೂರು ಸ್ಯಾಂಡಲ್ ಸೋಪಿನಲ್ಲಿರುವ ಅತ್ಯುತ್ತಮ ಗಂಧದ ಎಣ್ಣೆ ನಿಮ್ಮ ಚರ್ಮವನ್ನು ರಕ್ಷಿಸುತ್ತದೆ. ಆರೋಗ್ಯವಾಗಿಡುತ್ತದೆ. ನಿಮ್ಮ ಮುಖಕಾಂತಿಯನ್ನು ಹೆಚ್ಚಿಸುತ್ತದೆ. ಅದರ ಪರಿಮಳವಂತೂ ಆಹ್ಲಾದಕರ! ಆನಂದಮಯ!

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು-12
(ಮೈಸೂರು ಸರ್ಕಾರದ ಉದ್ಯಮ)

GOVT. SOAP FACTORY
BANGALORE

B. Dattaram-GSF-5

Mysore Silk

in the captivating traditions of a beautiful Mysore!

Matching the scenic splendour and the exquisite sculptures of Mysore...comes Mysore Silk... genuine from cocoon to finished product...in fascinating colours and designs, petal-soft and tenderly caressing. They last longer, too.

MYSORE GOVERNMENT
SILK WEAVING FACTORY,
Mysore.

B. Dattaram-D'



ಪಂಚ ಜಗದ್ಗುರುಗಳಿಗೆ ಮಹಾಪ್ರಣಾಮಗಳು

ಶ್ರೀ ಎಂ. ಬಿ. ಮಾದಪ್ಪ

'ರಾಜೇಶ್ವರಿ ನಿಲಯ'

ರಾಜಾಜಿನಗರ ಬೆಂಗಳೂರು - 10

ಪಂಚ ಜಗದ್ಗುರುಗಳಿಗೆ ಮಹಾ ಶರಣು

ಅಮೃತ್ತಿ ರಂಗಯ್ಯ ನಾಯ್ಕರ್

ಚಿಕ್ಕಮಗಳೂರು ಜಿಲ್ಲೆ

ಪಂಚಾಚಾರ್ಯರ ಫೋಟೋಗಳು
ಒಟ್ಟಾಗಿಯೂ ಚಿಲ್ಲರೆಯಾಗಿಯೂ
ದೊರೆಯುವ ಸ್ಥಳ

ಪ್ರಕಾಶ್ ಆರ್ಟ್ಸ್
ಅತ್ಯುತ್ತಮ ಕ್ಯಾಲೆಂಡರು ತಯಾರಕರು
52, ಟ್ಯಾಂಕ್ ರೋಡು, ಕಾಟನ್‌ಪೇಟೆ.
ಬೆಂಗಳೂರು - 2ಎ


Sri Shanmugananda
Soap-nut Works
Reg No. 1820 Trade Mark
Gundopanth St. Bangalore City
Proprietor: R. Sreenivasa Setty
Shanmugananda Soapnut Powder

ಪರಿಶುದ್ಧವಾದ ನಮ್ಮ ಷಣ್ಮುಗಾನಂದ ಸೀಗೇ ಪುಡಿಯಿಂದ ನಿಮ್ಮ ಕೂದಲನ್ನು ನಯವಾಗಿಯೂ ಹೊಳೆಯುವಂತೆಯೂ ಮಾಡಿಕೊಳ್ಳಿ. ಶ್ರಮಜೀವಿಗಳ ಶಕ್ತಿ ಹೇಗೆಮುಖ್ಯವೋ ಆರೋಗ್ಯವೂ ಹಾಗೆಯೇ ಮುಖ್ಯ.
ನಿಮ್ಮ ಅಭ್ಯಂಜನವನ್ನು ನಮ್ಮ ಷಣ್ಮುಗಾನಂದ ಸೀಗೇಪುಡಿಯಿಂದ ತೆಗೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಿ.

Phone : Shop: 73983
Resi : 26653

Sri Shanmugananda
Soap-nut Works
Prop : R. Srinivasa Setty
GUNDOPANTH STREET, BANGALORE-2

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯದೇಶಿಕೇಂದ್ರ ಮಹಾಸ್ವಾಮಿಯವರಿಂದ ಸ್ಥಾಪಿತವಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜ್ ಭವನ

ನಮ್ಮ ಈ ಭರತಖಂಡದ ಪ್ರಾಚೀನ ಮತ ಧರ್ಮಗಳಲ್ಲಿ ಒಂದಾದ ಶಿವಾದ್ವೈತ ಪ್ರತಿಪಾದಿತವಾದ ವೀರಶೈವ ಮತವು ಪಂಚ ಮಹಾಪೀಠಾಚಾರ್ಯರಿಂದ ಸ್ಥಾಪಿಸಲ್ಪಟ್ಟಿತು. ಈ ಪಂಚ ಪೀಠಾಧೀಶ್ವರರಲ್ಲಿ ಒಬ್ಬರಾದ ಲಿಂಗೈಕ್ಯ ಪರಮ ಪೂಜ್ಯ ಶ್ರೀ ಜಗದ್ಗುರು ಶಿವಾನಂದ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಭಕ್ತಮಂಡಳಿಗೆ ಧರ್ಮೋಪದೇಶ ನೀಡುವುದರ ಸಲುವಾಗಿ ದೇಶದಲ್ಲೆಲ್ಲ ಸಂಚಾರಮಾಡಿ ಕ್ರಿ. ಶ, 1934ರಲ್ಲಿ ಈ ಬೆಂಗಳೂರು ನಗರಕ್ಕೆ ದಯಮಾಡಿಸಿದ್ದರು. ಆಗ ಈ ನಗರದ ಪುರಪ್ರಮುಖರು ಭಕ್ತಿಪುರಸ್ಸರ ಪೂರ್ವಕವಾಗಿ ಈ ಮಹಾಸ್ವಾಮಿಗಳವರನ್ನು ವೈಭವ ಪೂರ್ಣವಾದ ಸಕಲ ರಾಜ ಮರ್ಯಾದೆಗಳೊಡನೆ ಸಕಲ ಮತೀಯರ ಸಹಕಾರದಿಂದ ಅಡ್ಡಪಲ್ಲಕ್ಕಿ ಮಹೋತ್ಸವದೊಂದಿಗೆ ಬಿಜಯಂಗೈಸಿಕೊಂಡರು.

ಶ್ರೀ ಮಹಾಸನ್ನಿಧಿಯವರು ಅವಿಚ್ಛಿನ್ನವಾಗಿ ಒಂದು ಮಾಸ ಪರ್ಯಂತರ ಈ ನಗರದಲ್ಲಿ ಮೊಕ್ಕಾಂ ಮಾಡಿ ಭಕ್ತಕೋಟಿಗೆ ಧರ್ಮೋಪದೇಶ ಮಾಡಿ ತಮ್ಮ ವಿದ್ವದ್ವಾಣಿಯಿಂದ ಕೂಡಿದ ಅನುಭವಾಮೃತವನ್ನು ಭಕ್ತಮಂಡಳಿಯವರಿಗೆ ಅನುಗ್ರಹಿಸಿದರು. ಇದರಿಂದ ತೃಪ್ತರಾದ ವೀರಶೈವ ಸಮಾಜದ ಪ್ರಮುಖರು ಸಭೆ ಸೇರಿ ಇದರ ಜ್ಞಾಪಕಾರ್ಥವಾಗಿ ಏನಾದರು ಒಂದು ಕಾರ್ಯವನ್ನು ನಡೆಸಲು ಚರ್ಚಿಸಿ ಇವರ ಪೂಜ್ಯ ಪೀಠದ ನಾಮಾಂಕಿತದಲ್ಲಿ ಒಂದು ವಿದ್ಯಾಭವನವನ್ನು ನಿರ್ಮಿಸಬೇಕೆಂದು ತೀರ್ಮಾನ ಮಾಡಿದರು. ಇದರಂತೆ ಸ್ವಲ್ಪಕಾಲದ ಮೇಲೆ ಈಗ ಸದ್ಯ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜನ್ನೂ ನೂರಾರು ಗಜಗಳು ಸುತ್ತಳತೆಯುಳ್ಳ ಒಂದು ಚಿಕ್ಕ ಕಟ್ಟಡದಿಂದ ಕೂಡಿದ್ದ ವಿಶಾಲ ಪ್ರದೇಶವನ್ನೂ ಶ್ರೀ ಮಹಾಸನ್ನಿಧಿಯವರ ಹೆಸರಿಗೆ ಕ್ರಯಕ್ಕೆ ಪಡೆದರು. ಆ ಕಾಲಕ್ಕೆ ವೀರಶೈವ ಸಮಾಜದ ಅಭಿವೃದ್ಧಿಗೆ ಮತ್ತು ನಗರದ ಯುವ ಜನಾಂಗದ ವಿದ್ಯಾಭಿವೃದ್ಧಿಗೆ ಅನುಕೂಲತೆಗಳು ಸಾಕಷ್ಟು ಇಲ್ಲದ್ದರಿಂದ ವಿದ್ಯಾಭಿವೃದ್ಧಿ ಪ್ರೋತ್ಸಾಹವೇ ಸರಿಯಾದ್ದೆಂದು ಮನಗಂಡು ಮೇಲ್ಕಂಡ ಮುಖಂಡರಲ್ಲಿ ಗಣ್ಯವರ್ತಕರಾಗಿದ್ದ ದಿ॥ ಷರಾಪ್ ಬಿ. ಬಸಪ್ಪನವರು ಈ ಪುಣ್ಯಕಾರ್ಯ ನಡೆಸುವುದಾದರೆ ತಾವು ಈ ಕಾರ್ಯಕ್ಕೆ 60 ಸಹಸ್ರ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಡಲು ಒಪ್ಪಿದರು.

ನಂತರ ಮೈಸೂರು ಸರ್ಕಾರದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ದಿ॥ ರಾಜಮಂತ್ರ ಪ್ರವೀಣ ಪಿ. ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಈ ನಗರದ ವೀರಶೈವ ಸಮಾಜದ ಪ್ರಮುಖರು ಸಭೆ ಸೇರಿ ಈ ಸಭಿಕರಲ್ಲಿ ಕೆಲವರು ಅಂದರೆ ದಿ॥ ಧರ್ಮಪ್ರಕಾಶ ಎನ್. ರುದ್ರಯ್ಯನವರು, ದಿ॥ ಬಿ. ರುದ್ರಶೆಟ್ಟರವರು, ಯಜಮಾನ್ ಕೆಂಚಪ್ಪನವರು, ದಿ॥ ಕಂಟ್ರಾಕ್ಟರ್ ನಂಜುಂಡಪ್ಪನವರು, ದಿ॥ ಅಯ್ಯಣ್ಣಶೆಟ್ಟರವರು ಮತ್ತು ದಿ॥ ಆರ್. ಬಿ. ಲಿಂಗಾರಾಧ್ಯರು ಇನ್ನೂ ಮುಂತಾದವರು ಸಾವಿರಾರು ರೂಪಾಯಿಗಳನ್ನು ಈ ಕಾರ್ಯಕ್ಕೆ ಕೊಡಲು ಮುಂದೆ ಬಂದರು. ಆಗಸಭಿಕರೆಲ್ಲ, ಈ ಕಟ್ಟಡದಲ್ಲಿ ಕಾಲೇಜು ವಿದ್ಯಾಭ್ಯಾಸ ನಡೆಸಬೇಕೆಂದು ತೀರ್ಮಾನಿಸಿ ಈ ಕಾಲೇಜನ್ನು "ಷರಾಫ್ ಬಿ. ಬಸಪ್ಪ ಇಂಟರ್‌ಮೀಡಿಯೆಟ್ ಕಾಲೇಜು" ಎಂದು ನಾಮಕರಣ ಮಾಡಿ ಕಾರ್ಯವನ್ನು ಆರಂಭಿಸಿದರು.

ಈ ಮಹಾಸನ್ನಿಧಿಯವರ ಕಟ್ಟಡದಲ್ಲಿ ಷರಾಪ್ ಬಿ. ಬಸಪ್ಪ ಇಂಟರ್‌ಮೀಡಿಯೆಟ್ ಕಾಲೇಜು ಎಂಬುದಾಗಿ ಹತ್ತಾರು ವರ್ಷಗಳು ನಡೆದು ಅಭಿವೃದ್ಧಿಗೆ ಬಂದಿತು. ಇದರ ಮೇಲ್ವಿಚಾರಣೆಯು ದಿ॥ ಪಿ. ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಮಹಾಸನ್ನಿಧಿಯವರಿಂದ ಒಂದು ಟ್ರಸ್ಟ್ ಕಮಿಟಿಯು ರೂಪಿಸಲ್ಪಟ್ಟು ಈ ಸಂಸ್ಥೆಯಿಂದ ಕಾಲೇಜು ನಡೆಸಲ್ಪಡುತ್ತಿತ್ತು. ಈ ಟ್ರಸ್ಟ್ ಕಮಿಟಿಯ ಮೇಲ್ವಿಚಾರಣೆಯು ಸಹಾ ಸನ್ನಿಧಿಯವರು ಲಿಂಗೈಕ್ಯರಾದ ನಂತರ ಇವರಿಂದ ಅಧಿಕಾರ ಅನುಗ್ರಹಿಸಲ್ಪಟ್ಟ ಈಗ ಈ ಶ್ರೀಪೀಠವನ್ನು ಅಲಂಕರಿಸಿರುವ ಪರಮ ಪೂಜ್ಯಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸನ್ನಿಧಿಯವರ ಆಡಳಿತಕ್ಕೆ ಒಳಪಟ್ಟಿತು.

ವರ್ಷಂಪ್ರತಿ ಈ ಕಾಲೇಜು ಅಭಿವೃದ್ಧಿಗೆ ಬಂದಂತೆಲ್ಲ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಲಾಗಿ ಪೂರ್ತಾ ಡಿಗ್ರಿ ಕಾಲೇಜನ್ನು ಸ್ಥಾಪಿಸಲು ಮಹಾ ಸನ್ನಿಧಿಯವರು ಅಪ್ಪಣೆ ಕೊಡಿಸಿದರು. ಈ ರೀತಿ ಈ ಕಾಲೇಜು ನಡೆಸಬೇಕಾದಲ್ಲಿ ಸಾಕಾದಷ್ಟು ಸ್ವಂತ ಕಟ್ಟಡ ಇರಬೇಕೆಂದು ಸರ್ಕಾರದಿಂದ ಕಾನೂನು ರಚಿಸಲ್ಪಟ್ಟಿತ್ತು. ಇದಕ್ಕಾಗಿ ಈ ಕಾಲೇಜು ಸಂಸ್ಥೆಯವರು ಈ ವಿಷಯವನ್ನು ಮಹಾ ಸನ್ನಿಧಿಯಲ್ಲಿ ಬಿನ್ನವಿಸಿಕೊಳ್ಳಲಾಗಿ ಮುಂದಿನ ಯುವಜನಾಂಗವು ವಿದ್ಯಾವಂತರಾಗಲೆಂದು ಆಗಿನ ಕಾಲಕ್ಕೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಈ ಪೂರಾ ಕಟ್ಟಡದ ಸ್ವತ್ತನ್ನು ಸದರಿ ಸಂಸ್ಥೆಗೆ ಮಹಾಸನ್ನಿಧಿಯವರು ದಾನರೂಪವಾಗಿ ಅನುಗ್ರಹಿಸಿದರು. ಆಗ ಟ್ರಸ್ಟ್ ಕಮಿಟಿಯವರು ಈ ಕಾಲೇಜನ್ನು ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜು ಎಂಬ ನಾಮಕರಣದಿಂದ ನಡೆಸಿಕೊಂಡು ಬರುತ್ತಿದ್ದಾರೆ. ಈ ಕಮಿಟಿಯ ಮೇಲ್ವಿಚಾರಣೆಯು ಮಹಾ ಸ್ವಾಮಿಯವರ ಆಶ್ರಯದಲ್ಲಿ ಕಾರ್ಯಭಾರ ನಡೆಸುತ್ತಲಿದೆ.

ಕ್ರಮೇಣ ಈ ಕಾಲೇಜು ಅಭಿವೃದ್ಧಿಗೆ ಬಂದು ಹಾಲಿ ಸೈನ್ಸ್ ಕಾಲೇಜು, ಕಾಮರ್ಸ್ ಕಾಲೇಜು, ಆರ್ಟ್ಸ್ ಕಾಲೇಜು ಮತ್ತು ಲಾಕಾಲೇಜು ಎಂಬ ನಾಲ್ಕು ಪ್ರೌಢ ವಿದ್ಯಾ ವ್ಯಾಸಂಗವು ದಿನಪೂರ್ತಿ ನಡೆಸಲ್ಪಡುತ್ತ ಸುಮಾರು ನಾಲ್ಕು ಸಹಸ್ರ ವಿದ್ಯಾರ್ಥಿಗಳಿಂದ ಕೂಡಿರುತ್ತದೆ. ಈ ಕಾಲೇಜು ನಮ್ಮ ವೀರಶೈವ ಸಮಾಜಕ್ಕೆ ಮಾತ್ರವೇ ಅಲ್ಲದೆ ನಮ್ಮ ಬೆಂಗಳೂರು ನಗರಕ್ಕೆ ಕೀರ್ತಿಶಾಲಿಯಾಗಿ ನಿಂತಿದೆ.

ಸಿ. ವೀರಭದ್ರಯ್ಯ.
ಬಿ. ಎಸ್. ಮರಿಯಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯರ ಸನ್ನಿಧಾನಂಗಳಲ್ಲಿ
ಭಕ್ತಿಪೂರಿತವಾದ ನಮಸ್ಕಾರಗಳನ್ನು ಅರ್ಪಿಸಿ
ಈ ಸುಸಂದರ್ಭದಲ್ಲಿ ನಮ್ಮನ್ನು
ಆಶೀರ್ವದಿಸಬೇಕೆಂದು ಕೋರುವ

ಎಸ್. ರುದ್ರಾರಾಧ್ಯ ಅಂಡ್ ಕಂಪನಿ
14/1, ಎಂ. ಸಿ. ಎಂ. ಲೇನ್, ಸಿಲ್ವರ್ ಜ್ಯುಬಿಲಿ ಪಾರ್ಕ್ ರೋಡ್, ಬೆಂಗಳೂರು-2

ಕಿರ್ಲೋಸ್ಕರ್ ಡಿಸ್ಟ್ರಿಬ್ಯೂಟರ್ಸ್
ಕಿರ್ಲೋಸ್ಕರ್ ಮೋಟಾರುಗಳು, ಪಂಪುಗಳು, ಸ್ಟಾರ್ಟರುಗಳು
ಟ್ರಾನ್ಸ್‌ಫಾರ್ಮರುಗಳು ಮತ್ತು ಜನರೇಟಿಂಗ್ ಸೆಟ್ಟುಗಳು.

ಆರ್. ಬಿ. ಲಿಂಗಾರಾಧ್ಯ ಅಂಡ್ ಕಂಪನಿ
ಅಡಿಕೆ ವ್ಯಾಪಾರಿಗಳು ಮತ್ತು ಕಮಿಷನ್ ಏಜಂಟ್
ನಂ. 306, ಆರ್. ಪಿ. ಸಿ. ಬಿಲ್ಡಿಂಗ್, ಹಳೇ ತರಗುಪೇಟೆ, ಬೆಂಗಳೂರು-2 ಎ.

ESTD: 1957
PHONE: 70865

BANGALORE URBAN INDUSTRIAL CO-OPERATIVE SOCIETY LTD.,
T. B. RAJU BUILDING, 5TH MAIN ROAD, GANDHINAGAR, BANGALORE-9

President :
B. A. Arasakumar

Vice-President :
Allagi Ghouse Khan

Board of Directors :
D. Appa Singh
M. V. Gurubasappa Setty
P. R. Venkatesh
B. S. Krishna Raju
T. Varadaraju
T. S. Siddalingaih
P. Arasappa

Development Aid for Small Industries

Entertains Shares from Small Industrialists

Official Directors :
Asst. Director of Industries and Commerce
Asst. Director of Registrar of Co-operative Societies
Rep : Bangalore City District Industrial Co-operative Bank



ಶಿವಕವಿ : ಉಭಯ ಕವಿತಾ ವಿಶಾರದ
ಶ್ರೀ ವೈ. ಎಂ : ಶ್ರೀಕಂಠಯ ನವರು

ಓ ತಾಯಿ ತ್ರಿಶೂಲಿ ಕಾಪಾಲಿ

1. ಶಿವ ಶಿವಾ ಕಾಪಾಡು ಧೃತಿ ನೀಡು ಕೃಪೆ ಮಾಡು
ಭವಬಂಧು ಪಾಕ್-ಪಾಪಿ ಕೊಲ್ಲಾಟ ನಡೆಸಿಹನು

2. ಯಾರಿಹರು ನಮ್ಮವರು ಬಲ್ಲಿದರು ಬಲ್ಲವರು
ಕಾರಿರುಳ ಕತ್ತಲಲಿ ಕೈಹಿಡಿದು ನಡೆಸುವರು?

3. ಬಡವ-ಭಾಗ್ಯರು ಎಲ್ಲ ಕೆಣ ಕೆಣಕಿ ತಿಣುಕುವರು
ಕಡುಕಷ್ಟ ಪಾಶ್ಚಾತ್ಯ ಪೌರ್ವಾತ್ಯ ಸಂಬಂಧ

4. ದಂಷ್ಟ್ರನಖ ವ್ಯಾಘ್ರ ಪಾಶ್ಚಾತ್ಯ ಪಂಡಿತರು
ಶಿಷ್ಟ-ಸಖ ಭಾರತಿಯ ಎಲ್ಲವರು ನಿಮ್ಮವರು

5. ಇಂದಿರೆಯೆ ಭಾರತಿಯು ಕಂದರನು ರಕ್ಷಿಪಳು
ಸುಂದರೆಯು ಭೈರವಿಯು ಭವಿತವ್ಯ ಭಾರ್ಗವಿಯು

6. ಕಷ್ಟದಲಿ ಒಂದಾಗಿ ತನುಮನವು ಶಿವೆಗಾಗಿ
ಇಷ್ಟವನು ಸಲಿಪೆ ಓ ತಾಯಿ ತ್ರಿಶೂಲಿ— ಕಾಪಾಲಿ

7. ವಿಷಹಲ್ಲು ಮುರಿದಿರಲು ಸರಸಕ್ಕೆ ಲೇಸಲ್ತೆ!
ಕಸವಾದ್ದು ರಸವಾಗೆ ನೈವೇದ್ಯ ತಾನಲ್ತೆ!

8. ಶಿವ-ಶಕ್ತಿ ಸಮ್ಮಿಳಿತ ಸಜ್ಜನರು ಸನ್ನುತರು
ಶಿವಭಕ್ತಿ ಕಾರುಣ್ಯ ತಾರುಣ್ಯ ತಳೆದಿರಲಿ !!!

ವಿಸೂ. ಬಡವ-ಭಾಗ್ಯರು: 1 ಅಮೇರಿಕ , ಚೈನ (2) ಪಾಶಾತ್ಯ ಪಂಡಿತರು ವಿಶ್ವರಾಷ್ಟ್ರ ಸಂಸ್ಥೆ (3) ಶಿಷ್ಟ ಬಾಂಗ್ಲಾದೇಶ (ತ್ರಿಶೂಲಿ ರಷ್ಯ, ಬ್ರಿಟನ್, ಫ್ರಾನ್ಸ್ (4) ಕಾಪಾಲಿ: ಪಾಪಿಗಳ, ಕಾಪಾಲ ಲೀಲಾ ಲೋಲೆ. ಇಂದಿರೆ: ಭಾರತರತ್ನ ಇಂದಿರಾಗಾಂಧಿ (ಇಂದು ಇರಿ, ಇಂದು ಇರೆ)

ಪಂಚ ಜಗದ್ಗುರುಗಳಿಗೆ ನಮ್ಮ ಪ್ರಣಾಮ

★

ಭವಾನಿ ಟಿಂಬರ್ ಕಂಪನಿ

[ಮರದ ದಿಮ್ಮಿಗಳು ಹಾಗೂ ಕತ್ತರಿಸಿದ ವಿವಿಧ ಪ್ರಮಾಣದ ಮರಗಳ ಸರಬರಾಜುಗಾರರು]

ಅಂಡರ್ ಬ್ರಿಡ್ಜ್ ರಸ್ತೆ, ಕಡೂರು

[ಚಿಕ್ಕಮಗಳೂರುಜಿಲ್ಲೆ]

With Best Compliments from :

elegram : "STEELWIND"

Telephone : 3719

Raja Mechanical Engineering Co.

194, Palace Guttahalli

BANGALORE - 3

★

Manufacturers of :

Steel Windows & Doors I. S. I. (Approved) and Steel Structures of all Discription

ಶ್ರೀಮತಿ ಬಿ. ಎಸ್. ಚಂದ್ರಕಲಾ

ಸಮರ್ಪಣೆ

1

ನಿನ್ನ ದರ್ಶನಕ್ಕೆ ಬರಲು
ಅರ್ಹನಾಗಲಿಕ್ಕೆ ಮೊದಲು
ಎನ್ನಲ್ಲೇನು ಇಹುದು ದೇವ?
ನೀಡೆ ಪಾತ್ರ ಬರಿದು ಜೀವ

2

ಪಟ್ಟೆ ಸರಿಗೆ ಮಕುಟ ಕಿರಿಗೆ
ಮುತ್ತು ರತ್ನ ಮುಕುಟ ಮಾಲೆ
ಹೊತ್ತು ಚಿನ್ನ ಬೆಳ್ಳಿ ರನ್ನ
ಗಂಟಿನರಕೆ ಹಾಕಿ ಭಿನ್ನ

3

ಪುಷ್ಪ ಫಲವ ಬೊಗಸೆ ಕೋಡಿ
ದೀಪ ಧೂಪ ಹರಿಸಿ ಕೋಡಿ
ಪರಮ ಪಂಚ ಭಕ್ಷ್ಯ ಗಳ
ಹಾಲ ಜೇನ ಎಡೆಯ ಪಾನ!

4

ಹಾಡು-ಕವಿತೆ-ಕುಣಿತ ಕಟ್ಟಿ
ತಪಿಸಿ ಜಪಿಸಿ ಮಂತ್ರ ಭಜಿಸಿ
ಹಲವು ತೆರದರ್ಘ್ಯ ನೀಡಿ
ಅರ್ಚಿಸಿಹರು ಭಕ್ತರವರು

5

ಎಲ್ಲಿಗೆಲ್ಲಿ ಪೋಟ-ಪೋಟಿ?!
"ರಿಕ್ತ" ಎನ್ನಲ್ಲೇನಿಹುದು?
ಶುದ್ಧ "ಭಕ್ತಿ-ರಕ್ತಿ-" ಭಾವ
ಅದುವೆ ಸಮರ್ಪಿಸಿಹೆ ದೇವ

ಪಂಚ ಜಗದ್ಗುರುಗಳಿಗೆ ಪ್ರಣಾಮಗಳು

◆

ಸಿ. ಸುಬ್ಬರಾವ್

ಅತ್ತಿಕೊಡುಗೆ

ಚಿಕ್ಕಮಗಳೂರು ಜಿಲ್ಲೆ



ಸಮಾಜವಾದ ಏಕೆ ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ
ವಿಸರ್ಜಿತ ವಿಧಾನಸಭಾ ಸದಸ್ಯ

ಸಮಾಜವಾದಿ ತತ್ವಕ್ಕಾಗಿ ಶ್ರಮಿಸುತ್ತಿರುವ ಹುಟ್ಟು ಹೋರಾಟಗಾರ ಶ್ರೀ ಸಿ. ಎಂ. ಎಸ್. ಶಾಸ್ತ್ರಿಗಳು ರಾಜಕೀಯ ರಂಗದಲ್ಲಿ ತುಂಬಾ ಜನಪ್ರಿಯರಾಗಿದ್ದಾರೆ. ಜನಸೇವಕರು, ಸ್ನೇಹಶೀಲರು, ಸದಾ ಹಸನ್ಮುಖಿಗಳೂ ಆದ ಶ್ರೀ ಶಾಸ್ತ್ರಿಗಳು ಸಮಾಜವಾದ ಸಿದ್ಧಾಂತದ ಬಗ್ಗೆ ಅಪಾರ ಅಧ್ಯಯನ ನಡೆಸಿದ್ದಾರೆ. ಬರವಣಿಗೆ ಭಾಷಣ ಎರಡರಲ್ಲೂ ನಿಪುಣರು.

ಮನುಷ್ಯ ಸಮೂಹ ಜೀವಿ, ಇದು ಅವನ ಸ್ವಭಾವ. ಆತ ಉಪವಾಸವಿದ್ದಾನೆಯೇ ವಿನಾ ಸಮೂಹದಿಂದ ದೂರವಿರಲಾರ. ಕೂಡಿ ಬಾಳುವುದು ಅವನ ಹುಟ್ಟು ಪ್ರವೃತ್ತಿ.

ಮಾನವನ ಈ ಪ್ರವೃತ್ತಿಯೇ ಸಮಾಜದದ ವಿಕಾಸಕ್ಕೆ ನಾಂದಿ. ಶಾಂತಿ,ಸಹಬಾಳ್ವೆ, ಸಮಾನ ಅವಕಾಶದ ನವ ಸಮಾಜದ ನಿರ್ಮಾಣವೇಕೆ ಇನ್ನೂ ವಿಳಂಬವಾಗಿದೆ. ಈ ತತ್ವದ ಮೇಲೆ ಸಮತಾವಾದದ ನವ ಸಮಾಜವೇಕೆ ಇನ್ನೂ ನಿರ್ಮಾಣವಾಗಿಲ್ಲ. ಇಂದು ಈ ಪ್ರಶ್ನೆಗಳು ಸಮಾಜವಾದಿ ಪ್ರಾಜ್ಞರನ್ನು ಅಪ್ಪಳಿಸುತ್ತಿವೆ.

ಸಮಾಜದ ತಾರತಮ್ಯ ಅಳಿದು, ಸಮಸ್ತರಿಗೂ ಶಿಕ್ಷಣ, ಉದ್ಯೋಗ, ನೆಮ್ಮದಿಯ ಬದುಕು ದೊರಕುವಂತಾಗಬೇಕು. ಸಂಪತ್ತು ಒಂದೇ ಕಡೇ ಕೇಂದ್ರೀಕೃತವಾದರೆ, ಉದ್ಯಮಗಳು ದೇಶದ ಕೆಲವೇ ಮಂದಿ ಕುಬೇರರ ಕೈವಶದಲ್ಲಿದ್ದರೆ, ಉನ್ನತ ಶಿಕ್ಷಣ ಸೌಲಭ್ಯವು ಶ್ರೀಮಂತ ಪುತ್ರರಿಗೇ ಮೀಸಲಾದರೆ ಗಾಂಧೀಜಿ ಕನಸಿನ ರಾಮರಾಜ್ಯ ರಚನೆ ಈ ಕಲಿಯುಗದಲ್ಲಂತೂ ಸಾಧ್ಯವಾಗದು. ಈ ಪಟ್ಟಭದ್ರ ಹಿತಗಳ ಸಂಹಾರವಾಗದೆ ಬೇರೆ ಗತ್ಯಂತರವೇ ಇಲ್ಲ.

ದೇಶದ ಸಂಪದ ಎಲ್ಲ ಪ್ರಜೆಗಳ ಹಕ್ಕು; ರಾಷ್ಟ್ರದ ಸಂಪನ್ಮೂಲಗಳು ಪ್ರತಿ ಪ್ರಜೆಯ ಪ್ರಗತಿಗೆ ಸಾಧಕವಾಗಬೇಕೇ ಹೊರತು, ಬಂಡವಾಳಷಾಹಿಗಳ ಭಂಡಾರವನ್ನು ಅಧಿಕಗೊಳಿಸುವ ಅಸ್ತ್ರವಾಗಬಾರದು. ಅಗತ್ಯಕ್ಕಿಂತ ಅತಿಯಾಗಿ ಹೋದುವುದು ಅಕ್ಷಮ್ಯ ಅಪರಾಧ. ಲಕ್ಷಾಂತರ ಮಂದಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿಕೊಡಲು ಅನುವಾಗುವ ಬಂಗಾರ, ಅಲಂಕಾರದ ಆಭರಣಗಳಾಗಿ ಶ್ರೀಮಂತ ಮಾನಿನಿಯರ ಮೈಮೇಲೆ ಮೆರೆಯುವುದು ಸಮಾಜವಾದದ ದೃಷ್ಟಿಯಲ್ಲಿ ಹೇಯವಾದುದು.

ಅನ್ನ, ಅರಿವೆ, ಆಶ್ರಯ, ಜ್ಞಾನ, ನೆಮ್ಮದಿಯ ಬಾಳ್ವೆ ದೇಶದ ಪ್ರತಿಪ್ರಜೆಯ ಆಜನ್ಮಸಿದ್ಧ ಹಕ್ಕು. ಇದನ್ನು ಒದಗಿಸಿಕೊಡದ, ಈಡೇರಿಸಿಕೊಡದ ಸರ್ಕಾರಕ್ಕೆ ಅಧಿಕಾರದಲ್ಲಿರಲು ಯೋಗ್ಯತೆ ಇರುವುದಿಲ್ಲ; ಜನತೆಯ ಈ ಮೂಲಭೂತ ಅಗತ್ಯಗಳನ್ನು ನಡೆಸಿಕೊಡಲು ಕಂಕಣ ಕಟ್ಟದ, ಪ್ರಯತ್ನಶೀಲನಾಗದ ರಾಜಕಾರಣಿಯ ಸೇವೆಯ ಸೋಗು ಹಾಸ್ಯಾಸ್ಪದ; ಸ್ವಜನ ದ್ರೋಹ. ಆತ ಸಮಾಜ ಸೇವಕನಲ್ಲ; ಸಮಾಜಕ್ಕೆ ಮಾರಕ. ನಮಗೆ ಅಂತಹ ಸರ್ಕಾರ, ಅಂತಹ ರಾಜಕಾರಣಿ ಬೇಕಿಲ್ಲ. ಅದು ಪ್ರಜಾ ಸರ್ಕಾರವೂ ಆಗಲಾರದು; ಆತ ಪ್ರಜಾ ಪ್ರತಿನಿಧಿಯೂ ಆಗಲಾರ.

ಇಂದು ದೇಶದಲ್ಲಿ ಶುಭೋದಯದ ಚಿಹ್ನೆಗಳು ಮೂಡಿವೆ. ಸಮಾಜವಾದದ ನಿರ್ಮಾಣಕ್ಕೆ ಭೂಮಿಕೆ ಸಿದ್ಧವಾಗಿ, ಆ ದಿಸೆಯಲ್ಲಿ ಕೆಲವು ಯತ್ನಗಳೂ ನಡೆದಿರುವುದು ಶುಭ ಶಕುನ.

ಸಮಾಜವಾದಿ ಸಮಾಜ ರಚನೆಯಾಗದೆ ಭಾರತದ ಅಭ್ಯುದಯ ಅಸಾಧ್ಯ. ದೇಶಕ್ಕಾಗಿ ಬಲಿದಾನ ಮಾಡಿದ ರಾಷ್ಟ್ರ ನಾಯಕರ ಅಂದಿನ ಕಲ್ಪನೆಯ 'ಸ್ವರಾಜ್ಯ, ಸ್ಥಾಪಿಸಿ, ಭಾರತದಲ್ಲಿ ಭೂಸ್ವರ್ಗ ಸ್ಥಾಪಿಸಲು ಜನತೆ ಸಮಾಜವಾದಿ ಶಕ್ತಿಗಳಿಗೆ, ತತ್ವಗಳಿಗೆ ಬೆಂಬಲವಾಗಿ ನಿಲ್ಲುವುದು ಇಂದು ಅಗತ್ಯವಾಗಿದೆ.

ಪಂಚ ಜಗದ್ಗುರುಗಳಿಗೆ ನಮ್ಮ ಶರಣು

ಸಿ. ಎಂ. ಕೇನ್

ಪ್ಲಾಂಟರ್
ಚಿಕ್ಕಮಗಳೂರು ಜಿಲ್ಲೆ

ಪಂಚ ಪೀಠಾಧೀಶ್ವರರಿಗೆ ಪ್ರಣಾಮಗಳು

ಆಲಗೇಶ್ವರ ಎಸ್ಟೇಟ್ (ಲಿ)

ಜಯಪುರ ಪೋಸ್ಟ್, ಚಿಕ್ಕಮಗಳೂರು

Our SALUTATIONS

to Pancha Jagadgurus

G. K. Chikanarasimhaih & Bros.

Old Tharagupet
BANGALORE-2

Our Pranamams
to
Pancha Peethadhipatis

A. KUPPA RAJU

Engineering
Contractors

R. V. Layout
Kumara Park West
BANGALORE-20

ಶ್ರೀ ಉಜ್ಜಯಿನೀ ಸದ್ಧರ್ಮ ಪೀಠ

ಶಕ್ತಿವಿಶಿಷ್ಟಾದ್ವೈತ ವಿದ್ವಾನ್
ಪಟ್ಟದ ಷ॥ ಬ್ರ॥
ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು
ಮೈಸೂರು ಅರಮನೆ ಜಪದಕಟ್ಟೆ ಮಠ

◆

"ಉಜ್ಜಯಿನಿ ಸದ್ಧರ್ಮ ಪೀಠ" ಲೇಖನದ ಕರ್ತೃಗಳಾದ ಶ್ರೀ ಪಟ್ಟದ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು ಶಕ್ತಿವಿಶಿಷ್ಟಾದ್ವೈತದಲ್ಲಿ ವಿದ್ವಾಂಸರು. "ಸದ್ಧರ್ಮ ಪ್ರಭಾ" ಎಂಬ ಧಾರ್ಮಿಕ ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಸ್ವಾಮಿಗಳು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ರಾಜ್ಯದ ನಾನಾ ಕಡೆ ಸಂಸ್ಕೃತ ಶಾಲೆಗಳನ್ನು ನಡೆಸುತ್ತಿರುವರಲ್ಲದೆ ಸಮಾಜ ಮತ್ತು ಧರ್ಮದ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ.

ಶ್ರೀ ಉಜ್ಜಯಿನೀ ಸದ್ಧರ್ಮ ಪೀಠವು ವೀರಶೈವ ಮಹಾಮಠ ಸ್ಥಾಪನಾಚಾರ್ಯ ಶ್ರೀ ಜಗದ್ಗುರು ದಾರುಕಾಚಾರ್ಯ ಪರಂಪರಾಗತ ಪೀಠವಾಗಿದೆ. ಮಧ್ಯಭಾರತ ಪ್ರಾಂತದಲ್ಲಿರುವ ಕ್ಷಿಪ್ರಾನದೀ ತೀರದ ಉಜ್ಜಯಿನೀ ಮಹಾಶಿವಕ್ಷೇತ್ರದಲ್ಲಿರುವ ಶ್ರೀ ವಟಸಿದ್ಧೇಶ್ವರ ಮಹಾ ಜ್ಯೋತಿರ್ಲಿಂಗದಿಂದ ಶ್ರೀ ಜ॥ ದಾರುಕಾಚಾರ್ಯರು ಅವತರಿಸಿ ಕರ್ನಾಟಕ ಪ್ರಾಂತ ತುಂಗಭದ್ರಾತೀರದ ಪಂಪಾಕ್ಷೇತ್ರ ಪ್ರದೇಶದ ಉಜ್ಜಯಿನಿಯಲ್ಲಿ ಸದ್ಧರ್ಮಪೀಠ ಸ್ಥಾಪನೆ ಮಾಡಿದ್ದಾರೆ.

ಈ ಪೀಠದ ಪ್ರಥಮಾಚಾರ್ಯರ ನಾಮವು ಶಿವಪುರಾಣದ ಒಂಬತ್ತನೆಯ ಅಧ್ಯಾಯದ ಅಷ್ಟವಿಂಶತಿ ಯೋಗಾಚಾರ್ಯ ಪಾಶುಪತ ಮಠಾಚಾರ್ಯ ಪರಂಪರೆಯ ವಿಚಾರದ ಸಂದರ್ಭದಲ್ಲಿ ಉಪಮನ್ಯು-ಶ್ರೀಕೃಷ್ಣ ಸಂವಾದದಲ್ಲಿ ಈ ಪ್ರಕಾರ ವಿವರಿಸಲ್ಪಟ್ಟಿದೆ. ಶ್ವೇತ, ಸುತಾರ, ಮದನ ಸುಹೋತ್ರ, ಕಂಕ. ಲೌಗುಷಿ. ಮಹಾಮಾಯ. ಜೈಗೀಷವ್ಯ, ದಧಿವಾಹ. ಋಷಭ ಮುನಿ. ಗೋಕರ್ಣ, ಗುಹಾವಾಸಿ. ಶಿಖಂಡಿ. ಜಟಾಮಾಲಿ. ಅಟ್ಟಹಾಸ, ದಾರುಕ ಲಾಂಗುಲಿ. ಮಹಾಕಾಲ. ಶೂಲದಂಡಿ, ಮುಂಡೀಶ, ಸಹಿಷ್ಣು ಸೋಮ, ಮತ್ತು ನಕುಲೀಶ್ವರ ಈ ಅಷ್ಟವಿಂಶತಿ ಯೋಗಾಚಾರ್ಯರು ವರಾಹಕಲ್ಪದ ಸಪ್ತಮ ಮನ್ವಂತರದಲ್ಲಿ ಯುಗ ಕ್ರಮದಿಂದ ಹೇಳಲ್ಪಟ್ಟಿರುತ್ತಾರೆ. ಅಷ್ಟವಿಶಂತಿ ಯೋಗಾಚಾರ್ಯರಿಗೆ ಕ್ರಮಶಃ ೧೧೨ ಜನ ಶಿಷ್ಯರಿದ್ದಾರೆ. ಇವರನ್ನು ನಮಸ್ಕರಿಸಿ ಯಾರು ಶಿವಾರ್ಚನೆ ಮಾಡುವರೋ ಅವರು ಶಿವಸಾಯುಜ್ಯವನ್ನು ನಿಶ್ಚಯವಾಗಿ ಪಡೆಯುತ್ತಾರೆ. ಈ ವಿಚಾರ ಲಿಂಗಪುರಾಣ ಸುಪ್ರಭೇದ, ಸ್ವಯಂಭುವಾಗಮಗಳು, ಶ್ರೀಕರಭಾಷ್ಯ, ವಿವೇಕ ಚಿಂತಾಮಣಿ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಕಲಿಯುಗದಲ್ಲಿ ಶ್ರೀ ಮರುಳಸಿದ್ಧ ನಾಮಾಚಾರ್ಯರು ಈ ಪೀಠದ ಆಚಾರ್ಯರೆಂದು ಆಗಮಗಳಲ್ಲಿ ಈ ರೀತಿ ಪ್ರತಿಪಾದಿತವಾಗಿದೆ.

> ತದ್ವನ್ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ ।
> ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ ॥
> ನಂದಿಗೋತ್ರಾಧಿನಾಥಸ್ಯ ಸಿಂಹಾಸನಪತಿಶ್ಚ ಯಃ ।
> ಮರುಳಾರಾಧ್ಯ ಸನ್ನಾಮಾ ಜಗದ್ಗುರುತಮಸ್ಸಃ ॥

ಬಳ್ಳಾರಿ ಜಿಲ್ಲಾ ಉಜ್ಜಯಿನೀ ಕ್ಷೇತ್ರವು ಮರುಳಸಿದ್ಧೇಶ್ವರ ದೇವಾಲಯದಿಂದ ಪರಿಶೋಭಿಸುತ್ತದೆ. "ಹಂಪೆ ಹೊರನೋಡು ಉಜ್ಜನೀ ಒಳನೋಡು" ಎಂಬ ಗಾದೆಯಂತೆ ದೇವಾಲಯದ ಮಧ್ಯೆ ನಂದಿ ಮಂಟಪದ ಮುಂದೆ ಮೇಲು ಭಾಗದಲ್ಲಿ ಸಹಸ್ರದಳ ಕಮಲ ಶಿವಯೋಗಿಗಳ ಮೂರ್ತಿಯೊಡನೆ ಸುಂದರವಾಗಿದೆ. ಉತ್ತರದ್ವಾರದ ಮುಂದೆ ಬಲಭಾಗದಲ್ಲಿ ಸ್ವರ್ಣ ನಂದಿ ಮಂದಿರವಿದೆ. ಪಶ್ಚಿಮ ದ್ವಾರದಲ್ಲಿ ಶಿಲಾಶಾಸನಗಳಿವೆ. ದೇವಾಲಯದ ಸುತ್ತಲೂ ನಾಲ್ಕು ತೀರ್ಥಕುಂಡಗಳಿವೆ. ಮಹಾಶಕ್ತಿ ಗೌರೀ ದೇವಾಲಯವಿದೆ. ಉತ್ತರಕ್ಕೆ ಐದು ಅಂತಸ್ತಿನ ಮಹಾದ್ವಾರವಿದೆ. ದೇವಾಲಯದ ಪಶ್ಚಿಮಕ್ಕೆ ಸದ್ಧರ್ಮ ಪೀಠ ವಿರಾಜಮಾನವಾಗಿದೆ.—

ಶ್ರೀ ಮಹಾಮರುಳಸಿದ್ಧೇಶ್ವರ ಗೋಪುರದ ಮುಂಭಾಗದಲ್ಲಿ ನಿಂತಿರುವ ನಂದಿ ಮೂರ್ತಿಯಿದೆ. ಈ ಸದ್ಧರ್ಮಪೀಠಕ್ಕೆ ನಂದಿ ಗೋತ್ರಪುರುಷನಾಗಿದ್ದಾನೆ. "ಧರ್ಮರೂಪೋ ವೃಷಭಃ" ಎಂಬಂತೆ ಕ್ರಿಯಾಪಾದ, ಜ್ಞಾನಪಾದ, ಯೋಗಪಾದ, ಚರ್ಯಾಪಾದ ಎಂಬ ಧರ್ಮದ ನಾಲ್ಕು ಪಾದಗಳನ್ನೂರಿ ಧರ್ಮದ ಸ್ವರೂಪವಾಗಿ ಧರ್ಮವನ್ನು ತೋರುವ ಬಸವನೆಂದು ಪ್ರಸಿದ್ಧಿ ಪಡೆದಿದೆ.

ಶ್ರೀ ಮರುಳಸಿದ್ಧೇಶ್ವರ ಲಿಂಗಕ್ಕೆ ಪ್ರತಿದಿವಸ ಪ್ರಾತಃಕಾಲ ಕಿರೀಟ ಕವಚ ಪೂಜೆ, ಮಧ್ಯಾಹ್ನ ಶ್ರೀ ಗುರುಗಳಿಂದ ಭೋಗ ಪೂಜೆ, ಸಾಯಂಕಾಲ ಸಂಕ್ಷಿಪ್ತ ಕವಚಪೂಜೆ, ಮಧ್ಯೆ ರಾತ್ರಿ ಭಸಿತ ರುದ್ರಾಕ್ಷಿಗಳಿಂದ ಅಲಂಕೃತವಾದ ಏಕಾಂತ ಪೂಜೆಗಳು ಸಕ್ರಮವಾಗಿ ನಡೆಸಲ್ಪಡುತ್ತಿವೆ. ಪ್ರಾಚೀನ ಕಾಲದಿಂದಲೂ ಸದ್ಧರ್ಮ ಪೀಠವನ್ನು ಆರೋಹಣ ಮಾಡಿದ ಜಗದ್ಗುರು ಭಗವತ್ಪಾದರು ದೀಕ್ಷಾ, ಶಿಕ್ಷಾ ಮೋಕ್ಷಗಳೆಂಬ ಗುರುತ್ವಾಧಿಕಾರವುಳ್ಳವರಾಗಿದ್ದಾರೆ. ಮತ್ತು ವೀರಶೈವ ಸಾಮ್ರಾಜ್ಯವನ್ನು ಪಾಲಿಸುತ್ತ ಬಂದಿದ್ದಾರೆ.

ಈ ಸದ್ಧರ್ಮ ಪೀಠದ ಕಟ್ಟಡವು ಬಹು ಪ್ರಾಚೀನವಾದುದು. ಪ್ರತಿ ವರ್ಷ ವೈಶಾಖ ಮಾಸದ ಶುದ್ಧ ಪಂಚಮೀ ದಿನ ಶ್ರೀ ದಾರುಕ ಜಯಂತಿ, ಷಷ್ಠಿದಿನ ಶಿಖರಕ್ಕೆ ತೈಲಾಭಿಷೇಕ. ಪೀಠಕ್ಕೆ ಶಿಷ್ಯರಾಗಿರುವ ಜರ್ಮೆಲಿರಾಜರ ತೈಲ ಕುಂಭಾಭಿಷೇಕದೊಡನೆ ಪ್ರಾರಂಭವಾಗುತ್ತದೆ. ಈ ಪದ್ಧತಿ ಭಾರತದಲ್ಲಿ ಎಲ್ಲಿಯೂ ಇದ್ದಂತೆ ಕಾಣುವುದಿಲ್ಲ. ಈ ಸಂದರ್ಭದಲ್ಲಿ ಮಹಾ ಪೀಠಾಚಾರ್ಯರಿಂದ ದೀಕ್ಷಾ ಕಾರ್ಯಗಳೂ ಧರ್ಮೋಪದೇಶವೂ ನಡೆಯುತ್ತವೆ.

ಶ್ರೀ ಜಗದ್ಗುರು ಮರುಳಸಿದ್ಧ ಮಹಾಚಾರ್ಯರು ಒಮ್ಮೆ ಧರ್ಮ ರಕ್ಷಣೆಗಾಗಿ ಕೊಲ್ಲಾಪುರಕ್ಕೆ ದಯಮಾಡಿಸಿದರು. ಅಲ್ಲಿರುವ ಮಾಯಾದೇವಿಯ ದುಷ್ಟ ಶಕ್ತಿಯನ್ನು ನಿರ್ಮೂಲ ಮಾಡಿ ಸದುಪದೇಶ ಮಾಡಿದರು. ಆ ಭಾಗದಲ್ಲಿರುವ ಸಿದ್ಧಗಿರಿ ಮುಂತಾದ ಪುಣ್ಯ ಕ್ಷೇತ್ರಗಳಲ್ಲಿ ತಮ್ಮ ತಪೋನುಷ್ಠಾನಗಳನ್ನು ನೆರವೇರಿಸಿ ಲೋಕಪಾವನಗೈದರು. ಅಲ್ಲಿಂದ ಶಿವಗಂಗಾ ಕ್ಷೇತ್ರಕ್ಕೆ ದಯಮಾಡಿಸಿದರು. ಶಿವಗಂಗಾ ಕ್ಷೇತ್ರದಲ್ಲಿ ಸ್ವರ್ಣಾಂಬಾ ದೇವಿಯ ಉಗ್ರ ಸ್ವರೂಪದಿಂದ ತನ್ನ ದೃಷ್ಟಿಗೆ ಬಿದ್ದ ಪ್ರಾಣಿಗಳ ಶಕ್ತಿ ಹೀರಿ ತೊಂದರೆ ಕೊಡುತ್ತಿದ್ದಳು. ಆ ದೇವಿಯನ್ನು ತಮ್ಮ ಕಮಂಡಲು ಮಂತ್ರೋದಕದಿಂದ ಶಾಂತಸ್ವರೂಪಳನ್ನಾಗಿ ಮಾಡಿದರು. ಪೂಜ್ಯರ ಉಪದೇಶದಿಂದ ಆಕೆಯು ಪುನೀತಳಾದಳು. ಈ ಸ್ಥಳದಲ್ಲಿ ಶಿವಗಂಗೆ ಕಂಬಾಳು ಮಠದಲ್ಲಿ ಶ್ರೀ ಮರುಳಸಿದ್ಧರ ಮೂರ್ತಿಯಿದೆ.

ಶಿವಗಂಗಾ ಕ್ಷೇತ್ರದಿಂದ ಶ್ರೀ ಮರುಳಸಿದ್ಧರು ಧರ್ಮಪೀಠವಾದ ಉಜ್ಜಯಿನಿಗೆ ದಯಮಾಡಿಸಿದರು. ಉಚ್ಚಂಗಿ ಪಾಂಡ್ಯ ದೇಶದ ರಾಜನು ದೇಶ ಮಧ್ಯದಲ್ಲಿ ಕ್ಷೇತ್ರಯಾತ್ರೆಗೆ ಹೊರಟಿದ್ದು ಅವನಿಗೆ ಮಾರ್ಗದಲ್ಲಿ ಶ್ರೀ ಜಗದ್ಗುರುಗಳ ದರ್ಶನವಾಯಿತು. ಪರಸ್ಪರ ಕುಶಲ ಸಮಾಚಾರದ ನಂತರ ರಾಜನು "ಮಹಾ ಗುರುವೇ! ಸಕಲ ಸಂಪತ್ತು ಪ್ರಾಪ್ತವಾದರೂ ಪುತ್ರಸಂತಾನವಿಲ್ಲದೆ ಚಿಂತಾಕ್ರಾಂತನಾಗಿದ್ದೇನೆ" ಎಂದು ಅರಿಕೆ ಮಾಡಿಕೊಂಡನು. ಅದಕ್ಕೆ ಗುರುಗಳು ವರ್ಷ ತುಂಬುವುದರಲ್ಲಿ ಪುತ್ರ ಸಂತಾನವಾಗುವುದೆಂದು ಫಲವನ್ನು ಆಶೀರ್ವದಿಸಿದರು. ರಾಜನ ಇಷ್ಟಾರ್ಥ ಸಿದ್ಧಿಯಾಯಿತು. ಅನಂತರ ಗುರುಪೂಜೆಯನ್ನು ಮಾಡಿ ಪೀಠಕ್ಕೆ ಅನೇಕ ರೀತಿಯ ಸೇವೆಯನ್ನು ಸಲ್ಲಿಸಿದ್ದಾನೆ. ಜರ್ಮೇಲಿ ಪಾಳೆಯಗಾರನು ಬೇಟೆಯಾಡುತ್ತ ಬರಲು ಅವನಿಗೆ ಜಗದ್ಗುರು ಮರುಳಸಿದ್ಧೇಶ್ವರರ ದರ್ಶನವಾಯಿತು. ಪೂಜ್ಯರು ಸೇವಿಸಿದ ಮಾವಿನ ಹಣ್ಣಿನ ಓಟೆಯನ್ನೇ ಭಕ್ತಿಯಿಂದ ಪೂಜಿಸಿದ್ದರಿಂದ ಇವನ ಶ್ರದ್ಧಾಭಕ್ತಿಯನ್ನು ನೋಡಿ ದೇಶದ ರಾಜನಾಗೆಂದು ಆಶೀರ್ವದಿಸಿದರು. ಅದು ಇವರ ಅರಮನೆಯಲ್ಲಿ ಈಗಲೂ ಇದೆ. ಅನಂತರ ಜರ್ಮೇಲಿ ರಾಜನು ಶ್ರೀ ಸಿದ್ಧೇಶ್ವರರು ಲೀಲೆಗೈದ ಒಂಬತು ಸ್ಥಳಗಳನ್ನೂ ಪೀಠವನ್ನೂ ಜೀರ್ಣೋದ್ಧಾರ ಮಾಡಿದನು.

ಈ ಕ್ಷೇತ್ರದಲ್ಲಿ ಪವಿತ್ರವಾದ ತೀರ್ಥಗಳಿವೆ. (1) ಗುರುತೀರ್ಥ (2)ಗೋಪ್ಯ ನಂದಿ ತೀರ್ಥ (3) ಸಿದ್ಧೇಶಕಾಲ್ಯತೀರ್ಥ (4) ಧ್ಯಾನ ಮಂಟಪ ಶುದ್ಧ ತೀರ್ಥ (5) ದಾರುಕ ತೀರ್ಥ (6) ಸಿದ್ಧೇಶ್ವರ ಮಜ್ಜನ ತೀರ್ಥ (7) ಗೌರೀ ಮಜ್ಜನ ತೀರ್ಥ (8) ಗೋಗಿರಿ ಸಿದ್ಧೇಶ ತೀರ್ಥ (9) ಮೇಗವಟಿ ತೀರ್ಥ ಎಂಬುದಾಗಿ ಈಗಲೂ ಪ್ರಸಿದ್ಧಿ ಪಡೆದಿವೆ.

ಶ್ರೀ ಜಗದ್ಗುರು ಮರುಳಸಿದ್ಧ ಮಹಾಚಾರ್ಯರ ನಂತರ ಶ್ರೀ ಜಗದ್ಗುರು ಮಳೆ ಮಲ್ಲಿಕಾರ್ಜುನ ಶಿವಾಚಾರ್ಯರು ಸದ್ಧರ್ಮ ಪೀಠವನ್ನು ಆರೋಹಣ ಮಾಡಿದರು. ಒಮ್ಮೆ ದೇಶದಲ್ಲಿ ಬರಗಾಲ ತಲೆದೋರಲು ಆ ದೇಶದ ರಾಜನು ಕೆಲವು ಮಂದಿ ಪ್ರಜೆಗಳ ಸಹಿತವಾಗಿ ಗುರುಸನ್ನಿಧಿಗೆ ಬಂದು ಪ್ರಣಾಮ ಪೂರ್ವಕವಾಗಿ ಪ್ರಾರ್ಥಿಸಿದನು. 'ಭೋ! ಗುರು ದೇವ, ಮಳೆಯು ಬರದೆ ಭೂಮಿ

ಯಲ್ಲಿ ಯಾವ ಪ್ರಾಣಿಯೂ ಉಳಿಯದಂತಾಗಿದೆ' ಎಂದು ತಿಳಿಸಿದನು. ಆಗ ಅವನ ಪ್ರಾರ್ಥನೆಯಂತೆ ಗುರುಗಳ ಕಾರುಣ್ಯದಿಂದ ವಿಶೇಷ ಮಳೆ ಬಂದು ಆ ಪ್ರದೇಶವೆಲ್ಲವೂ ಜಲಮಯವಾಯಿತು. ಅನೇಕ ದಿವಸಗಳವರೆಗೆ ಬಂದ ಮಳೆಯು ನಿಲ್ಲಲಿಲ್ಲ. ನದಿ ನೆಲಗಳೆಂಬ ಕುರುಹು ಕೂಡ ತಿಳಿಯದಂತಾಯಿತು. ಇದೊಂದು ಪ್ರಳಯ ಕಾಲವೇ ಬಂದುದೋ ಎನ್ನುವಂತಾಯಿತು. ಹೊರಗಡೆ ಪ್ರಾಣಿಗಳ ಸುಳಿವೇ ಇಲ್ಲವಾಯಿತು. ಆಗ ರಾಜನು ಭಯಭೀತನಾಗಿ ಗುರು ನಿರೂಪಿಸಿದಂತೆ ವಾಕ್ಯವನ್ನು ಸ್ಮರಿಸಿಕೊಂಡು ಪರಿವಾರಸಮೇತ ಕಷ್ಟದಿಂದ ಗುರು ಸನ್ನಿಧಿಗೆ ಬಂದು ಅಲ್ಲಿ ಮಳೆ ಇಲ್ಲದಿದ್ದುದನ್ನು ನೋಡಿ ಆಶ್ಚರ್ಯ ಪಟ್ಟು, ಗುರುಪಾದಕ್ಕೆ ನಮಿಸಿ ಅವರ ಅನುಗ್ರಹಕ್ಕೆ ಪಾತ್ರನಾದನು. ಅಂದಿನಿಂದ ಈ ಪೂಜ್ಯರು ಮಳೆ ಮಲ್ಲಿಕಾರ್ಜುನ ಸ್ವಾಮಿಗಳೆಂಬುದಾಗಿ ಪ್ರಸಿದ್ಧಿಗೆ ಬಂದಿದ್ದಾರೆ.

ಈ ಮಹನೀಯರಲ್ಲಿ ಎಲ್ಲರೂ ಭಯಭಕ್ತಿಗಳಿಂದ ನಡೆದುಕೊಳ್ಳುವುದಾಯಿತು. ಈ ಮಹಾಸ್ವಾಮಿಗಳು ದೇಶಮಧ್ಯದಲ್ಲಿ ವೀರಶೈವ ಮತವನ್ನು ಅಭಿವೃದ್ಧಿಗೊಳಿಸಿದರು. ಆ ಪೂಜ್ಯರಿಂದಲೇ ಈ ಪೀಠವು ಸಹ ಊರ್ಜಿತ ಸ್ಥಿತಿಗೆ ಬಂದಿತು. ಅಲ್ಲದೆ, ಇವರ ಸದ್ಬೋಧೆಯಿಂದ ಇವರ ಶಿಷ್ಯಸಂತತಿಯು ವಿಪುಲವಾಗಿ ಬೆಳೆಯಿತು. ಆ ಸಂತತಿಯವರೆಲ್ಲರೂ ಮಳೆ ಬಗೆಯವರೆಂದು ಹೇಳುತ್ತಾ ಬಂದರು. ಈ ಪೂಜ್ಯ ಜಗದ್ಗುರುಗಳವರ ಶಿಲಾ ವಿಗ್ರಹವು ಮರುಳ ಸಿದ್ಧ ದೇವಾಲಯದಲ್ಲಿದೆ. ಇವರು ತಮ್ಮ ಯೋಗಸಿದ್ಧಿಯಿಂದ ಬಹು ಕಾಲ ಬಾಳಿದರೆಂದು ಪ್ರತೀತಿಯಿದೆ. ಇತ್ತೀಚೆಗೆ ನಾಯಕನ ಹಟ್ಟಿ ಹಿರೇ ಮಠದ ಚನ್ನವೃಷಭ ದೇಶಿಕೇಂದ್ರ ಸ್ವಾಮಿಗಳು ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು. ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಹಹಾತಪಸ್ವಿಗಳಾಗಿ ಧರ್ಮೋದ್ಧಾರ ಕಾರ್ಯಗಳನ್ನು ಮಾಡಿದ್ದಾರೆ. ಇತ್ತೀಚೆಗೆ ಮಹಾ ಶಿವಾನುಭವಿಗಳಾದ ಮರುಳಸಿದ್ಧ ಶಿವಾಚಾರ್ಯ ಮಹಾ ಸ್ವಾಮಿಗಳು "ಶಿವಾನುಭವ" "ಶಿಷ್ಯ ಸಂತಾಪ ಹರಣ" ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಇವರ ತರುವಾಯ, ಚಿತ್ರದುರ್ಗ ಜಿಲ್ಲಾ ಬಂಗಾರನಾಯ್ಕನ ಹಳ್ಳಿಯಲ್ಲಿ ಜನ್ಮ ವೆತ್ತಿದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಪೀಠಾರೋಹಣ ಮಾಡಿದರು. ಈ ಪೂಜ್ಯ ಜಗದ್ಗುರುಗಳವರು ಮಹಾ ಶಿವಯೋಗಿಗಳಾಗಿ ಪಂಚಪೀಠಗಳನ್ನು ಪ್ರಸಿದ್ಧಿಗೆ ತಂದು ಪೀಠದ ಕಟ್ಟಡದ ಕೆಲವು ಭಾಗಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಮತ್ತು ಅನೇಕ ಪ್ರಾಚೀನ ಧರ್ಮಗ್ರಂಥಗಳನ್ನು ಪ್ರಸಿದ್ಧಪಡಿಸಿ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಬಹುಮುಖವಾದ ಉನ್ನತಿಯನ್ನು ಸಾಧಿಸಿದ್ದಾರೆ. ಸದ್ಯ ಪೀಠದಲ್ಲಿ ವಿರಾಜಮಾನರಾಗಿರುವ ಶ್ರೀ ಜಗದ್ಗುರು ಶ್ರೀ ಸಿದ್ಧೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಹಿಂದಿನ ಜಗದ್ಗುರುಗಳಿಂದ ಅರ್ಧಕ್ಕೆ ನಿಲ್ಲಿಸಲ್ಪಟ್ಟಿದ್ದ ಕಟ್ಟಡಗಳನ್ನು ಪೂರ್ಣಗೊಳಿಸಿದ್ದಾರೆ ಮತ್ತು ಶ್ರೀ ಜ್ಞಾನ ಗುರು ವಿದ್ಯಾ ಪೀಠವನ್ನು ಸ್ಥಾಪಿಸಿ ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಶ್ರೀಶೈಲ, ಕೇದಾರ ಪೀಠಗಳ ಉನ್ನತಿಗೆ ಶ್ರಮಿಸಿದ್ದಾರೆ. ಸನಾತನ ಧರ್ಮತತ್ತ್ವ ಪ್ರೇಮಿಗಳಾಗಿದ್ದಾರೆ. ಒಟ್ಟಿನಲ್ಲಿ ಈವರೆಗೆ ಈ ಪೀಠದಲ್ಲಿ 110 ಜನ ಜಗದ್ಗುರುಗಳವರು ವಿರಾಜಮಾನರಾಗಿದ್ದಾರೆಂದು ಮಠದ ಚರಿತ್ರೆಯಿಂದ ತಿಳಿಯಬಹುದಾಗಿದೆ.

ಸ್ವಾಗತ ಸಮಿತಿ ಕಾರ್ಯಾಲಯದ ಸಹಾಯಕ



ಚಿ॥ ನಾಗರಾಜ

WITH BEST COMPLIMENTS

FROM

SRI BALAKRISHNA FLOUR MILLS

Manufacturers of

"TORCH" Brand Wheat Products

OLD THARAGUPET, P.B. No. 7714
BANGALORE-2A

Phone
Mills : 24834
Resi : 23001

Allied Concerns

KOMARLA AGENCIES
OLD THARAGUPET
BANGALORE-2A
Phone : 71305

★

KOMARLA TRADERS
A. S. STREET
BANGALORE-2A

KOMARLA POULTRY FARM
CHICKKAKALLASANDRA
BANGALORE SOUTH TALUK
Phone : 4483

★

KOMARLA EXHIBITORS
OLD THARAGUPET
BANGALORE-2A

ವೀರಶೈವ ಧರ್ಮವು —ವಿಶ್ವಧರ್ಮವೆ?

— ಲೇಖಕರು : ಶ್ರೀ ಟಿ. ಆರ್. ಚನ್ನಪ್ಪನವರು. —

ವೀರಶೈವ ಧರ್ಮವು ಎಲ್ಲರ ಕಲ್ಯಾಣಕ್ಕಾಗಿ ಅಗತ್ಯವಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಪತ್ತನ್ನು ಪಡೆದ ಆಗರವಾಗಿದೆ. ಇಷ್ಟಾದರೂ ಈ ಅಮೂಲ್ಯ ಸಂಪತ್ತು ಸರ್ವಸಾಮಾನ್ಯರ ಉಪಯೋಗಕ್ಕೆ ಬಂದು ವೀರಶೈವ ಧರ್ಮವು ವಿಶ್ವಧರ್ಮವಾಗಿ ಎಲ್ಲರ ಪ್ರೀತಿ ವಿಶ್ವಾಸಗಳನ್ನು ಗಳಿಸುವುದಕ್ಕೆ ಬದಲಾಗಿ ಮತದ್ವೇಷಿಗಳ ಕುತಂತ್ರಪೂರಿತ ಆಘಾತಕ್ಕೆ ಈಡಾಗುವಂತಾಗಿರುವುದೇಕೆ? ಎಂಬ ಪ್ರಶ್ನೆಯನ್ನು ವೀರಶೈವರೆಂದು ಹೇಳಿಕೊಳ್ಳುವ ನಮ್ಮಲ್ಲಿ ಬಹು ಜನರು ಹಾಕಿಕೊಳ್ಳುವ ಗೋಜಿಗೆ ಹೋಗದೆ ಇರುವುದೇ ಮಹತ್ತರ ಅಡ್ಡಿಯಾಗಿ, ವೀರಶೈವಧರ್ಮವು ವಿಶ್ವಧರ್ಮವಾಗದೆ ಕೇವಲ ಓಣಿಯ ಧರ್ಮವಾಗಿ ಉಳಿದುಕೊಳ್ಳುವಂತಾಗಿದೆ ಎಂದರೆ ಸುಳ್ಳಲ್ಲ.

ರೇಣುಕಾದಿ ಆಚಾರ್ಯರು, ಸಂತ ಬಸವೇಶ್ವರರು, ಧಾರ್ಮಿಕ ಸಂಕೋಲೆಗಳಿಗೆ ಸಿಕ್ಕಿ ಜಾರಿಕೊಳ್ಳುವ ಶಕ್ತಿಯಿಲ್ಲದೆ ಮೂಕ ವೇದನೆ ಅನುಭವಿಸುತ್ತಿದ್ದ ಜನತೆಗೆ ಕಠಿಣವಾಗಿದ್ದ ಶೈವಧರ್ಮದ ಸಾರಸರ್ವಸ್ವವನ್ನು ಕಾಲಕ್ಕೆ ತಕ್ಕಂತೆ ಆಧುನೀಕರಿಸಿ ನಾಡ ಜನರ ಆಡುವ ಭಾಷೆಯಲ್ಲಿ ತಿಳಿ ಸಾರದ ಪಾನಕವನ್ನು ಮಾಡಿ ಉಣಬಡಿಸಿ ಧಾರ್ಮಿಕ ದಾಂಧಲೆಯ ಜಂಝೂವಾತಕ್ಕೆ ಸಿಕ್ಕಿದ್ದ ಪಾಮರ ಜನತೆಯ ಬೇಗೆಯ ದಣಿವನ್ನು ಅಡಗಿಸಿ ಉದ್ಧರಿಸಿ ಶೈವಧರ್ಮಕ್ಕೆ ಅರ್ಹಮೌಲ್ಯವನ್ನು ಕಲ್ಪಿಸಿದರು ಬೆಳಗಿಸಿದರು. ಶರಣ ಸಂದಣಿಯ ತಪಸ್ಸಿನ ಸರ್ವ ಪ್ರಭಾವವನ್ನು ಬೆಳೆಸಿ ಶಿವಧರ್ಮವನ್ನು ಉಜ್ವಲಗೊಳಿಸಿ ವೀರಶೈವ ಧರ್ಮವಾಗಿ ಪರಿವರ್ತಿಸಿದರು. ಸಾಹಿತ್ಯದೇವಿಗೆ ನೂತನ ಆಭರಣಗಳನ್ನು ರಾಶಿ ರಾಶಿಯಾಗಿ ಮಾಡಿಸಿ ಭಂಡಾರಕ್ಕೆ ಸೇರಿಸಿ ಅನ್ಯರನ್ನು ಬೆರಗಾಗಿಸಿದರು. ಅಂದು ಪ್ರಾರಂಭಿಸಲ್ಪಟ್ಟ ಆಧುನೀಕರಣ ಯತ್ನದ ಕುಡಿ ಮುಂದೆ ಸಾಗದೆ ನಿಂತುಹೋಗಿದೆ. ಅಂದಿನಿಂದ ಇಂದಿನವರೆಗೆ. ಯುವಜನತೆಯನ್ನು ವೀರಶೈವ ಧರ್ಮದ ಕಡೆಗೆ ಆಕರ್ಷಿಸುವ ಯತ್ನ ಸಾಗಿಯೇ ಇಲ್ಲವೆಂದರೆ ತಪ್ಪಲ್ಲ. ಅಂದರೆ ಕಾಲಕ್ಕೆ ತಕ್ಕಂತೆ, ಅಭಿರುಚಿಗೆ ತಕ್ಕಂತೆ, ಧರ್ಮ ಪ್ರಸಾರದ ನವೀಕರಣವಾಗಿಲ್ಲ. ಈ ಕಾರ್ಯ ಯಾರಿಂದ ಆಗಬೇಕಿತ್ತು, ಈ ಶಕ್ತಿ ಯಾರಲ್ಲಿತ್ತು ಎಂದಾಗ ಗುರುಗಳು, ಜಂಗಮರು, ಮಠಾಧಿಪತಿಗಳು . ಸಾಮಾನ್ಯರಲ್ಲಿ ಬೆರತು ಸರ್ವ ಮಾನ್ಯ ವಿಧಾನವನ್ನು ಕಂಡುಕೊಳ್ಳಬೇಕಿತ್ತು. ಇದು ನಡೆದಿಲ್ಲ. ಪ್ರತಿಯಾಗಿ ಧರ್ಮದ ರಥವನ್ನು ವಣಿಕಮಾರ್ಗದಲ್ಲಿ ನಡೆಯಿಸುವ ಯತ್ನ ಕೆಲವು ಕಡೆ ನಡೆದಾಗ, ಸಾಮಾನ್ಯ ಜನತೆ ಧರ್ಮದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾರೆ. ಅನ್ಯ ಧರ್ಮೀಯರಿಗೆ ಈ ಧರ್ಮದ ಅವಹೇಳನಮಾಡುವ ಅವಕಾಶ ಉಂಟಾಗುತ್ತದೆ. ಆಗ ಈ ಧರ್ಮವು ತನ್ನೆಲ್ಲಾ ಸಾತ್ವಿಕ ಸಂಪತ್ತಿಕೆಯೊಂದಿಗೆ ವಿಶ್ವಧರ್ಮವಾಗದೆ ಓಣಿಯ ಧರ್ಮವಾಗಲು ಅವಕಾಶವಾಗುತ್ತದೆ. ಅದುವೇ ಇಂದು ಕರ್ಣಾಟಕದಲ್ಲಿ ವೀರಶೈವರೆನಿಸಿದವರು ಪಡುತ್ತಿರುವ ಸಾಮಾನ್ಯ ಅನುಭವ.

ಯಾವುದೇ ಸಾಮಾಜಿಕ ಪವಾಡ ಯಶಸ್ವಿಯಾಗಬೇಕಾದಲ್ಲಿ ಆ ಸಮಾಜದ ಯುವಕ ಶಕ್ತಿ ಅವರಲ್ಲಿ ತೊಡಗಬೇಕು ಅಥವಾ ತೊಡಗಿಸುವ ರೀತಿ ಪ್ರಚೋದನಾತ್ಮಕ ಪ್ರಯತ್ನ ಸಮಾಜದ ಪ್ರಭಾವಶಾಲಿ ವರ್ಗದಿಂದ ಆಗಬೇಕು. ಅಣು ಯುಗಕ್ಕೆ ಹೊಂದುವ ವೈಜ್ಞಾನಿಕ ಭಾಷೆಯಲ್ಲಿ ಧಾರ್ಮಿಕ ಭಾವನೆಯು ಬೆರತು ಯುವಕರಿಂದ ಅದು ಬಳಸಲ್ಪಡಬೇಕು. ಅದಕ್ಕೆ ಅಗತ್ಯವಾದ ಸಾಹಿತ್ಯಸೃಷ್ಟಿ ಪ್ರಚಾರಸಾಧನಗಳ ಮೂಲಕ ಈ ಪ್ರಯತ್ನ ಮಾಡಬೇಕು. ಸಂಶೋಧನೆಯಾಗಬೇಕು. ಹಾಗಾದಾಗ ಮಾತ್ರ ಅವರ ನಿಜವಾದ ಬೆಲೆ ಅವಕ್ಕೆ ಸಂದಾಯವಾಗುತ್ತದೆ. ವೀರಶೈವಧರ್ಮ ವಿಶ್ವಧರ್ಮವಾಗುತ್ತದೆ. ಇನ್ನಾದರೂ ಧರ್ಮಾಧಿಕಾರಿಗಳು ಈ ಕಡೆ ಲಕ್ಷ್ಯ ಹರಿಸಲಿ. ಇಲ್ಲವೆ ಯುವಜನತೆ ಆ ರೀತಿ ಮಾಡಲು ಅವರ ಮೇಲೆ ಒತ್ತಾಯ ತರಲಿ. ಅವಕ್ಕೆ ಅಗತ್ಯವಾದ ಕೃಷಿ ಪ್ರತಿ ಮನೆಯಲ್ಲೂ ಸಾಗಲಿ ಎಂದು ಹಾರೈಸೋಣ. ●

With the best compliments from :

Omsun Soap Works

Shankarmutt Road, Bangalore-4

Phone : 71912

With best compliments from :

SATYA ENGINEERING ENTERPRISES

ENGINEERS & FOUNDERS

Manufacturers of :

FERROUS AND NON-FERROUS ALLOY CASTING
AND MACHINE TOOL

A-66, INDUSTRIAL ESTATE, RAJAJINAGAR, BANGALORE-10.

Phone : 8415

To Welcome Sri Jagadgurus

With the best compliments from

DEEPAK INSULATED CABLE CORPORATION LTD.,

Regd. Office: **Coffee Board Building 1, Vidhana Veedhi,**
BANGALORE - 1

Manufacturers of:

SUPER ENAMELLED COPPER WINDING WIRES, AND MULTILAYER PAPER COVERED COPPER WIRES AND STRIPS TO ANY SPECIFICATION

FOR OUR PATRONS AND WELL-WISHERS

THE BANGALORE DAIRY

Are happy to introduce the sale of
PASTEURISED WHOLE MILK IN 200 ml ($\frac{1}{5}$ lire) Bottles

The nutritious contents with 3.8% Fats and 8.5% solid Nonfat **are Priced at just Rs. 0.28 per Bottle** & are marked at our 300 retail sale centres allover the city

Bangalore dairy's pasteurised whole Milk
is rich in proteins and valuable as a food

Please insist on our Pasteurised Milk and Milk Products at your Home

THE BANGALORE DAIRY

HOSUR ROAD : : BANGALORE—29

ಪಂಚಪೀಠಾಧೀಶ್ವರರ
ಪಾದಾರವಿಂದಗಳಿಗೆ
ಪ್ರಣಾಮಗಳು

ರುದ್ರ ಇಂಡಸ್ಟ್ರೀಸ್
ಜಾಲಹಳ್ಳಿ ರೋಡು :: ಬೆಂಗಳೂರು-೧೩

ಸಂಸ್ಥಾಪಕರು :
ಬಿ. ರುದ್ರಶೆಟ್ಟರು

ಶ್ರೀಶೈಲಕ್ಷೇತ್ರ ಮತ್ತು ಶ್ರೀಶೈಲ ಜಗದ್ಗುರು ಪೀಠ

ಸುಣ್ಣತಕಲ್ಲು ಬಿದರೆ ಆರಾಧ್ಯಮಠದ ಪ|| ಚಂದ್ರಶೇಖರಶಾಸ್ತ್ರೀ ಕಾವ್ಯತೀರ್ಥ ದಾವಣಗೆರೆ

ಸುಣ್ಣಕಲ್ಲು ಬಿದರೆ ಆರಾಧ್ಯ ಮಠದ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಬಳ್ಳಿಯ ಶಾಸ್ತ್ರಜ್ಞರು. ಇವರು ಶ್ರೀಶೈಲ ಪೀಠದ ವಿಷಯದಲ್ಲಿ ಉತ್ತಮವಾದ ಲೇಖನವನ್ನು ಬರೆದಿರುತ್ತಾರೆ. ಇದರಲ್ಲಿ ಸಾರಭೂತವಾದ ವಿಷಯಗಳು ಅಡಗಿವೆ.

ಭಾರತದ ಪ್ರಾಚೀನತಮ ಪುಣ್ಯ ಕ್ಷೇತ್ರಗಳಲ್ಲಿ ಶ್ರೀಶೈಲ ಮಹಾ ಕ್ಷೇತ್ರವು ಒಂದಾಗಿದೆ. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಮಲ್ಲಿಕಾರ್ಜುನ ಮಹಾಲಿಂಗವು ಈ ಪುಣ್ಯ ಕ್ಷೇತ್ರದಲ್ಲಿ ವಿರಾಜಮಾನವಾಗಿದೆ. ವೀರಶೈವ ಮತ ಸ್ಥಾಪನಾಚಾರ್ಯರಾದ ರೇಣುಕಾದಿ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಜಗದ್ಗುರು ಪಂಡಿತಾರಾಧ್ಯರು ಯುಗಯುಗಾದಿಯಲ್ಲಿ ಮಲ್ಲಿಕಾರ್ಜುನ ಮಹಾಲಿಂಗದಿಂದ ಅವತರಿಸಿ ಶ್ರೀಶೈಲ ಮಹಾಕ್ಷೇತ್ರದಲ್ಲಿ ಶ್ರೀಮದ್ಗಿರಿರಾಜ ಸೂರ್ಯ ಸಿಂಹಾಸನ ಮಹಾಪೀಠವನ್ನು ಸಂಸ್ಥಾಪಿಸಿದರು. ಇದಕ್ಕೆ ಹಿಂದೆ ಕೃತ ಯುಗದಲ್ಲಿ ಚತುರಕ್ಷರ ಶಿವಾಚಾರ್ಯರೂ ತ್ರೇತಾಯುಗದಲ್ಲಿ ಚತುರ್ಮುಖ ಶಿವಾಚಾರ್ಯರೂ ದ್ವಾಪರಯುಗದಲ್ಲಿ ಧೇನು ಕರ್ಣ ಶಿವಾಚಾರ್ಯರೂ ಇದೇ ಶ್ರೀಶೈಲ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿ ಜಗದ್ಗುರುಗಳಾಗಿದ್ದರೆಂದು ಸುಪ್ರಭೇದಾಗಮವು ಸ್ಪಷ್ಟಪಡಿಸಿದೆ. ಶ್ರೀಶೈಲ ಕ್ಷೇತ್ರದ ಮಹಿಮೆ ಐತಿಹಾಸಿಕವಾಗಿ ಹೇರಳವಾಗಿದೆಯಲ್ಲದೆ, ವೇದಾಗಮೋಪನಿಷತ್ತುಗಳಲ್ಲಿ ಸಹ ಆ ಕ್ಷೇತ್ರದ ವರ್ಣನೆ ವಿಪುಲವಾಗಿದೆ.

ಸುಧಾ ಕುಂಡಾಖ್ಯ ಸುಕ್ಷೇತ್ರೇ । ಮಲ್ಲಿಕಾರ್ಜುನ ಲಿಂಗತಃ॥
ಜನನಂ ಪಂಡಿತಾರ್ಯಸ್ಯ। ನಿವಾಸಃ ಶ್ರೀಗಿರೌ ಶಿವೇ॥

ಎಂಬ ಸುಪ್ರಭೇದಾಗಮ ಪ್ರಮಾಣದಿಂದ ಪೂರ್ವದಲ್ಲಿ ಸುಧಾಕುಂಡ ಸುಕ್ಷೇತ್ರವೆಂದು ಪ್ರಸಿದ್ಧವಾಗಿದ್ದ ಶ್ರೀಶೈಲ ಮಹಾ ಕ್ಷೇತ್ರದಲ್ಲಿ ಮಲ್ಲಿಕಾರ್ಜುನ ಮಹಾಲಿಂಗದಿಂದ ಶ್ರೀ ಜಗದ್ಗುರು ಪಂಡಿತಾರಾಧ್ಯರ ಅವತಾರವಾಯಿತೆಂದೂ ಮತ್ತು ಆ ಕಾಲದಲ್ಲಿಯೇ ಶ್ರೀಗಿರಿ ಎಂದು ಪ್ರಖ್ಯಾತವಾಗಿದ್ದ ಆ ಪುಣ್ಯ ಕ್ಷೇತ್ರದಲ್ಲಿಯೇ ಶ್ರೀ ಜಗದ್ಗುರು ಪಂಡಿತಾರಾಧ್ಯರು ತಮ್ಮ ಪೀಠವನ್ನು ಸಂಸ್ಥಾಪಿಸಿದರೆಂದೂ ತಿಳಿದು ಬರುತ್ತದೆ. ಶಿವಪ್ರಣೀತಗಳಾದ ಶಿವಾಗಮಗಳಲ್ಲಿ ಶ್ರೀಶೈಲ ಮಹಾಕ್ಷೇತ್ರದ ವರ್ಣನೆ ಸಿಗುವುದರಿಂದ ಶ್ರೀಶೈಲವು ಶಿವನಷ್ಟೇ ಪ್ರಾಚೀನವಾದುದೆಂದು ಸಿದ್ಧವಾಗುತ್ತದೆ.

"ಶ್ರೀಶೈಲ ದರ್ಶನಾನ್ಮುಕ್ತಿಃ" ಎಂದು ಉಪನಿಷತ್ತು ಸಾರಿರುವುದರಿಂದ ಈ ಕ್ಷೇತ್ರದ ಮಹಿಮೆಯು ಉಪನಿಷತ್ಕಾಲದಲ್ಲಿಯೇ ಅಪಾರವಾಗಿತ್ತೆಂದು ಗೊತ್ತಾಗುತ್ತದೆ.
ವ್ಯಾಸಕೃತ ಸ್ಕಾಂದ ಪುರಾಣದಲ್ಲಿ

ತಸ್ಮಿನ್ ಶ್ರೀಪರ್ವತೇ ರಮ್ಯೇ । ಸಂಸಾರಾಮಯ ಭೇಷಜೇ॥
ಆಸ್ತೇ ಲಿಂಗಾಂಗ ಸಂಬಂಧೀ । ಸದಾನಂದಾಹ್ವಯೋ ಮುನಿಃ ॥

ಎಂದು ಶ್ರೀಶೈಲ ಜಗದ್ಗುರು ಸದಾನಂದ ಮುನಿಗಳು ಜಗದ್ಗುರು ಧೇನುಕರ್ಣ ಶಿವಾಚಾರ್ಯರ ನಂತರ ಶ್ರೀಶೈಲ ಮಹಾ ಕ್ಷೇತ್ರದಲ್ಲಿ ಮಹಿಮಾನ್ವಿತರಾಗಿದ್ದುದನ್ನು ವರ್ಣಿಸಲಾಗಿದೆ.

ಶ್ರೀಶೈಲೇ ಶಿಖರೇ ದೃಷ್ಟೇ । ಪುನರ್ಜನ್ಮನ ವಿದ್ಯತೇ ॥

ಎಂದು ಶ್ರೀಶೈಲ ಕ್ಷೇತ್ರ ಮಹಿಮೆಯನ್ನು ವ್ಯಾಸರು ತಮ್ಮ ಸ್ಕಾಂದ ಪುರಾಣದಲ್ಲಿ ಕೊಂಡಾಡಿರುವುದರಿಂದ ಶ್ರೀಶೈಲವು ಪುರಾಣ ಪ್ರಸಿದ್ಧವೂ ಆಗಿತ್ತೆಂದು ಸ್ಪಷ್ಟವಾಗುತ್ತದೆ.

ಸ್ಥಳಪುರಾಣದಲ್ಲಿ ದೊರೆಯುವ ಆಧಾರದ ಪ್ರಕಾರ ಶ್ರೀಶೈಲವು ಸಾಕ್ಷಾತ್ ಕೈಲಾಸವೇ ಆಗಿರುತ್ತದೆ. ಅನಾದಿ ಕಾಲದಲ್ಲಿ ಶಿಲಾದ ಮಹರ್ಷಿಯ ವರಪುತ್ರರಾದ ನಂದಿ ಮತ್ತು ಪರ್ವತರು ತಪಸ್ಸನ್ನಾಚರಿಸಿ ಶಿವನನ್ನು ಲಿಂಗ ರೂಪದಲ್ಲಿ ಅವತರಿಸುವಂತೆ ಮಾಡಿದರು. ಹೀಗೆ ಶಿವನು ಲಿಂಗರೂಪನಾಗಿ ಶ್ರೀಶೈಲದಲ್ಲಿ ನೆಲೆಸಿರುವುದರಿಂದ ಆ ಕ್ಷೇತ್ರದ ಮಹಿಮೆ ಅಪಾರವಾಗಿದೆ.

ಆಂಧ್ರದ ಪ್ರಥಮ ಕವಿ ನನ್ನಚೋಡ ಮಹಾರಾಜನು ಹತ್ತನೆಯ ಶತಮಾನದಲ್ಲಿ ರಚಿಸಿದ "ಕುಮಾರ ಸಂಭವ" ಗ್ರಂಥವನ್ನು ಅಂದು ಶ್ರೀಶೈಲದಲ್ಲಿ ಜಗದ್ಗುರುಗಳಾಗಿದ್ದ ಜಂಗಮಮಲ್ಲಿಕಾರ್ಜುನರಿಗೆ ಸಮರ್ಪಿಸಿರುವುದರಿಂದ ಆ ಕಾಲದಲ್ಲಿ ಶ್ರೀಶೈಲ ಕ್ಷೇತ್ರವೂ ಆ ಕ್ಷೇತ್ರಾಧಿಪತಿಗಳಾಗಿದ್ದ ಜಗದ್ಗುರು ಜಂಗಮ ಮಲ್ಲಿಕಾರ್ಜುನರೂ ಸುಪ್ರಸಿದ್ಧರಾಗಿದ್ದರೆಂದು ಗೊತ್ತಾಗುತ್ತದೆ.

ಹನ್ನೊಂದನೆಯ ಶತಮಾನದಲ್ಲಿ ಸುಪ್ರಸಿದ್ಧರಾಗಿದ್ದ ಶ್ರೀಪತಿ ಪಂಡಿತಾರಾಧ್ಯರು ಶ್ರೀಶೈಲ ಪೀಠಾಧಿಪತಿಗಳಾಗಿ ಅನೇಕ ಪವಾಡಗಳನ್ನು ಮಾಡಿ ತೋರಿಸಿದುದಲ್ಲದೆ ಶ್ರೀಕರ ಭಾಷ್ಯದಂತಹ ಉದ್ಗ್ರಂಥವನ್ನು ರಚಿಸಿ ಶ್ರೀಶೈಲ ಪೀಠಾಧಿಪತಿಗಳ ಪಾಂಡಿತ್ಯ ಪ್ರಭೆಯನ್ನು ಬೆಳಗಿಸಿದ್ದಾರೆ.

ಹದಿಮೂರನೆಯ ಶತಮಾನದಲ್ಲಿ ಪಾಲ್ಕುರಿಕೆ ಸೋಮನಾಥ ಕವಿಯು ರಚಿಸಿದ ಪಂಡಿತಾರಾಧ್ಯ ಚರಿತೆಯಲ್ಲಿ ಜಗದ್ಗುರು ಮಲ್ಲಿಕಾರ್ಜುನ ಪಂಡಿತಾರಾಧ್ಯರವರ ಮಹಿಮಾತಿಶಯಗಳ ಜೊತೆಗೆ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದ ಅತಿ ಸಮೀಪದಲ್ಲಿ ರಾಜಾಧಿರಾಜರಿಂದ ಮಾನ್ಯವಾದ ಶ್ರೀಶೈಲ ಜಗದ್ಗುರು ಪೀಠದ ಅಸ್ತಿತ್ವವೂ ಪ್ರತಿಪಾದಿಸಲ್ಪಟ್ಟಿದೆ.

ಹದಿನಾಲ್ಕನೆಯ ಶತಮಾನದಲ್ಲಿ ಆಗಿಹೋದ ಕಾಕತೀಯ ಪ್ರಭು ಪ್ರತಾಪರುದ್ರನ ದಾನಶಾಸನದಿಂದ ಆಗ್ಗೆ ಶ್ರೀಶೈಲ ಪೀಠಾಧಿಪತಿಗಳಾಗಿದ್ದ ಜಗದ್ಗುರು ಈಶ್ವರ ಶಿವಾಚಾರ್ಯರಿಗೆ ಎಪ್ಪತ್ತು ಗ್ರಾಮಗಳ ಉಂಬಳಿ ದೊರೆತಿತ್ತೆಂದೂ, ಮಲ್ಲಿಕಾರ್ಜುನ ಸ್ವಾಮಿಯ ನಿತ್ಯ ಪೂಜಾ ನೈವೇದ್ಯ ದೀಪಾರಾಧನೆ ಇತ್ಯಾದಿ ಎಲ್ಲ ವ್ಯವಸ್ಥೆಗಳು ಶ್ರೀಶೈಲ ಪೀಠಾಧಿಪತಿಗಳಿಂದಲೇ ನಡೆಯಿಸಲ್ಪಡುತ್ತಿದ್ದವೆಂದೂ ತಿಳಿದುಬರುತ್ತದೆ.

ಹದಿನೇಳನೆಯ ಶತಮಾನದ ಪೆನಗೊಂಡ ಪುರವರಾಧೀಶ್ವರ ಕಾಚಕ್ಷಿಪಾಲನಿಂದ ದತ್ತವಾಗಿರುವ ತಾಂಬ್ರ ಶಾಸನದಿಂದ ಆಗ್ಗೆ ಶ್ರೀಶೈಲ ಸೂರ್ಯ ಸಿಂಹಾಸನದಲ್ಲಿ ಮಂಡಿಸಿದ್ದ ಜಗದ್ಗುರು ಪ್ರಮಥೇಶ್ವರದೇವರು ಅತ್ಯಂತ ಪ್ರಭಾವಶಾಲಿಗಳಾಗಿದ್ದರೆಂದು ಸ್ಪಷ್ಟವಾಗುತ್ತದೆ.

ಅತಿ ಪ್ರಾಚೀನವಾದ ಶ್ರೀಶೈಲ ದೇವಸ್ಥಾನದ ಕೋಟೆ ಗೋಡೆಯ ಮೇಲೆ ಶಿಲೆಯಲ್ಲಿ ಕೆತ್ತಲ್ಪಟ್ಟಿರುವ ದಂಡ ಕಮಂಡಲಧಾರಿಗಳಾದ ಪಂಚಾಚಾರ್ಯರ ವಿಗ್ರಹಗಳು ಆ ಕಾಲದಲ್ಲಿಯೇ ಪಂಚಾಚಾರ್ಯರು ಸುಪ್ರಸಿದ್ಧರಾಗಿದ್ದರೆನ್ನುವುದನ್ನು ಎತ್ತಿ ತೋರಿಸುತ್ತವೆ. ದಕ್ಷಿಣ ಭಾಗದ ಕೋಟೆ ಗೋಡೆಯ ಮೇಲೆ ಪಂಚಾಚಾರ್ಯರು ಪಾತಾಳ ಗಂಗಾ ಸ್ನಾನಕ್ಕೆ ಜೊತೆ ಜೊತೆಯಾಗಿ ಹೋಗುತ್ತಿರುವಂತೆ ಕೆತ್ತಲ್ಪಟ್ಟಿದೆ. ಮತ್ತು ಉತ್ತರದ ಗೋಡೆಯ ಮೇಲೆ ಪಂಚಾಚಾರ್ಯರು ವಾದ್ಯ ವೈಭವದೊಡನೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಭ್ರಮರಾಂಬೆಯರ ದರ್ಶನಕ್ಕೆ ಹೊರಟಿರುವಂತೆ ಕೆತ್ತಲ್ಪಟ್ಟಿದೆ. ಈ ಶಿಲ್ಪಿಗಳಿಂದ ಪಂಚಾಚಾರ್ಯರು ಶ್ರೀಶೈಲದಲ್ಲಿ ಸಮ್ಮಿಲಿತರಾಗಿ ತಪೋನುಷ್ಠಾನಗಳನ್ನು ನಡೆಯಿಸುತ್ತಿದ್ದರೆಂದು ವ್ಯಕ್ತವಾಗುತ್ತದೆ. ಪಂಚಾಚಾರ್ಯರು ಬಗೆಗೆ ಅಪರೂಪವಾಗಿ ದೊರೆತಿರುವ ಈ ಶಿಲ್ಪಸಾಹಿತ್ಯವನ್ನು ಸೂಕ್ಷ್ಮವಾಗಿ ಅಭ್ಯಸಿಸಿ, ಇನ್ನೂ ಹೆಚ್ಚಿನ ಇತಿಹಾಸವನ್ನು ಬೆಳಕಿಗೆ ತರಬಹುದಾಗಿದೆ. ಶಿಲ್ಪ ಶಾಸ್ತ್ರ ಪ್ರವೀಣರು ಈ ಬಗ್ಗೆ ಶ್ರದ್ಧೆ ವಹಿಸಿ ಅಧ್ಯಯನ ನಡೆಯಿಸುವರೆಂದು ನಂಬಿದ್ದೇವೆ. ಶ್ರೀಶೈಲದಲ್ಲಿ ಶಿಥಿಲಾವಸ್ಥೆಯಲ್ಲಿರುವ ಪಂಚ ಮಠಗಳು ಪಂಚಾಚಾರ್ಯರು ಕಾಲಕಾಲಕ್ಕೆ ಅಲ್ಲಿ ಸಮ್ಮಿಲಿತರಾಗುತ್ತಿದ್ದರೆನ್ನುವ ವಾದವನ್ನು ಎತ್ತಿ ಹಿಡಿಯುತ್ತಿವೆ.

ಶ್ರೀಶೈಲಕ್ಷೇತ್ರದ ಮಹಿಮೆ ಋಷಿಪುಂಗವರನ್ನೂ ಆಚಾರ್ಯವರ್ಯರನ್ನೂ ಶಿವಶರಣ-ಶರಣೆಯರನ್ನೂ, ರಾಜ ಮಹಾರಾಜರನ್ನೂ ತನ್ನೆಡೆಗೆ ಆಕರ್ಷಿಸುತ್ತಲೇ ಬಂದಿದೆ. ತ್ರೇತಾಯುಗದಲ್ಲಿ ರಾಮಚಂದ್ರನೂ, ದ್ವಾಪರದಲ್ಲಿ ಪಾಂಡವರೂ ಶ್ರೀಶೈಲಕ್ಕೆ ಬಂದು ರಾಮ ಸಹಸ್ರಲಿಂಗ, ಪಾಂಡವರ ಪಂಚಲಿಂಗಗಳನ್ನೂ ಸ್ಥಾಪಿಸಿ ಶ್ರೀಗಿರಿಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಅರ್ಜುನನಂತೂ ಶ್ರೀ ಪರ್ವತಲಿಂಗವನ್ನು ಮಲ್ಲಿಕಾ ಪುಷ್ಪಗಳಿಂದ ಪೂಜಿಸಿ ಅದಕ್ಕೆ ಮಲ್ಲಿಕಾರ್ಜುನನೆಂಬ ಹೆಸರನ್ನೇ ತಂದು ಕೊಟ್ಟಿದ್ದಾನೆ. ಛತ್ರಪತಿ ಶಿವಾಜಿಯು ಶ್ರೀಶೈಲಕ್ಕೆ ಬಂದು ಭ್ರಮರಾಂಬೆಯನ್ನು ಪೂಜಿಸಿ ಅಂಬಾತಲವಾರನ್ನು ಪಡೆದುಕೊಂಡಿರುವುದು ಇತಿಹಾಸ ಪ್ರಸಿದ್ಧವಾಗಿದೆ. ಬಹು ಪೂರ್ವ ಕಾಲದ ಬಲ್ಲಾಹು ಮಹಾರಾಜನು ಧರ್ಮಪತ್ನಿ ಸಮೇತನಾಗಿ ಶ್ರೀಶೈಲಕ್ಕೆ ಬಂದು ಪಂಡಿತಾರಾಧ್ಯ ಪೀಠಕ್ಕೆ ನಗನಾಣ್ಯ ಗಜಾಶ್ವಾದಿಗಳನ್ನು ವಿಪುಲವಾಗಿ ದಾನಮಾಡಿ ಶ್ರೀಪೀಠವನ್ನು ಉದ್ಧಾರ ಮಾಡಿದಂತೆ ಪಾಲ್ಕುರಿಕೆ ಸೋಮನಾಥ ಕೃತ ಪಂಡಿತಾರಾಧ್ಯ ಚರಿತೆಯಲ್ಲಿ ಐತಿಹ್ಯ ದೊರೆಯುತ್ತಿದೆ. ಚಂದ್ರಗುಪ್ತ ಮಹಾರಾಜ, ಕಾಕತೀಯ ಪ್ರಭು, ಪ್ರತಾಪ ರುದ್ರ, ವಿಜಯ ನಗರದ ಪ್ರೌಢದೇವರಾಯ, ಕೃಷ್ಣದೇವರಾಯ ಪ್ರಭುಗಳು ಶ್ರೀಶೈಲದಲ್ಲಿ ತಮ್ಮ ಸೇವೆಯನ್ನು ವಿವಿಧ ರೀತಿಯಲ್ಲಿ ಸಲ್ಲಿಸುತ್ತ ಬಂದಿರುತ್ತಾರೆ. ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಶಿವಶರಣ ಶರಣೆಯರು ಶ್ರೀಶೈಲಕ್ಕೆ ಧಾವಿಸಿ ಬಂದು ಮಲ್ಲಿಕಾರ್ಜುನನನ್ನು ಪೂಜಿಸಿ ಒಲಿಸಿಕೊಂಡು ಅಲ್ಲಿಯ ಕದಳೀ ವನದಲ್ಲಿ ಐಕ್ಯರಾಗಿ ಶ್ರೀಶೈಲವು ಸಿದ್ಧಿಕ್ಷೇತ್ರವೆನ್ನುವುದನ್ನು ಸಿದ್ಧಮಾಡಿ ತೋರಿಸಿದ್ದಾರೆ.

ಹೇಮರೆಡ್ಡಿ ಮಲ್ಲಮ್ಮನ ಭಕ್ತಿಗೆ ಒಲಿದು ಶ್ರೀಶೈಲ ಮಲ್ಲಿಕಾರ್ಜುನನು ಅವಳ ಕೈಯ ಕೆಲಸಗಳನ್ನು ತಾನೇ ಮಾಡಿ ಆಕೆಯನ್ನು ಉದ್ಧರಿಸುವ ಮೂಲಕ ಭಕ್ತಪ್ರೇಮಿಯೆನ್ನುವ ಬಿರುದನ್ನು ಸಾರ್ಥಕಗೊಳಿಸಿದ್ದಾನೆ. ಸೊನ್ನಲಿಗೆಯ ಸಿದ್ಧರಾಮನು ಶ್ರೀಶೈಲ ಮಲ್ಲೇಶನನ್ನು ಪ್ರತ್ಯಕ್ಷ ಮಾಡಿಕೊಂಡು, ಮೂರನೆಯ ಕಣ್ಣನ್ನು ಪಡೆದು ಅವನನ್ನು ಸೊನ್ನಲಿಗೆಗೇ ಕರೆದೊಯ್ದನೆಂದ ಮೇಲೆ ಶ್ರೀಶೈಲ ಮಲ್ಲಿಕಾರ್ಜುನನ ಮಹಿಮೆ ಮನೆಮನೆಯನ್ನು ತುಂಬಿತ್ತೆಂದರೆ ಅತಿಶಯೋಕ್ತಿಯಾಗಲಾರದು.

ಹೀಗೆ ಶ್ರೀ ಗಿರಿ ಮಲ್ಲಿನಾಥನನ್ನು ಮನಸಾ ಸೇವಿಸಿ ಇಷ್ಟಾರ್ಥ ಸಿದ್ಧಿಯನ್ನು ಪಡೆಯದೇ ಇರುವವರು ವಿರಳವೆಂದೇ ಹೇಳಬೇಕಾಗಿದೆ. ಇಂತಹ ಸರ್ವಸಿದ್ಧಿಪ್ರದವಾದ ಜ್ಯೋತಿರ್ಲಿಂಗದಿಂದ ಅವತರಿಸಿದ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮಹಿಮೆ ಮತ್ತು ಅವರಿಂದ ಪ್ರತಿಷ್ಠಿತವಾದ ಸೂರ್ಯ ಸಿಂಹಾಸನ ಪೀಠದ ಪ್ರಭಾವ ಅವರ್ಣನೀಯವೆಂಬುದು ಸಕಲರಿಗೂ ಅನುಭವ ವೇದ್ಯವಾಗಿದೆ. ಶಿಲಾದಪುತ್ರಪರ್ವತನೇ ಶಿವನನ್ನು ಲಿಂಗ ರೂಪದಲ್ಲಿ ಧರಿಸಿ ನಿಲ್ಲಲು ಪರ್ವತರೂಪನಾದಾಗ ಶ್ರೀಗಿರಿಯ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಆಗಿದೆ. ಇಂತಹ ಶ್ರೀಗಿರಿಯಲ್ಲಿ ಅನಂತಾನಂತ ಋಷಿ ಮುನಿಗಳು ತಪಸ್ಸನ್ನಾಚರಿಸಿ ಅದನ್ನು ಇನ್ನೂ ಪವಿತ್ರಗೊಳಿಸಿರುತ್ತಾರೆ. ಆದುದರಿಂದಲೇ ಶ್ರೀಶೈಲದ ದರ್ಶನ ಮಾತ್ರದಿಂದಲೇ ಮೋಕ್ಷವುಂಟಾಗುತ್ತದೆಂದು ಸಾರಿರುವ ಉಪನಿಷದ್ವಾಕ್ಯ ಇಂದಿಗೂ ಸಾರ್ಥಕವಾಗಿದೆ.

ಯುಗಾಂತರ ಕಾಲದಿಂದ ಪ್ರಸಿದ್ಧವಾದುದರಿಂದ ಅತ್ಯಂತ ಪ್ರಾಚೀನವಾದ ಶ್ರೀಶೈಲ ಕ್ಷೇತ್ರದ ಜಗದ್ಗುರು ಪೀಠದ ಗುರು ಪರಂಪರೆಯನ್ನು ಸಕ್ರಮವಾಗಿ ಸಂಗ್ರಹಿಸಿ ವಿವರಿಸುವುದು ಕಷ್ಟ ಸಾಧ್ಯ. ಆದರೂ ಉಪಲಬ್ಧವಿರುವ ಶಿವಾಗಮ ಶಾಸನ ಮತ್ತು ಇತರ ಪ್ರಾಚೀನ ಗ್ರಂಥಾಧಾರಗಳಿಂದ ಈ ಮಹಾ ಪೀಠದ ಗುರುಪರಂಪರೆಯಲ್ಲಿ ಪ್ರಮುಖರಾದ ಪೀಠಾಧಿಪತಿಗಳ ಪಟ್ಟಿಯನ್ನು ಮಾತ್ರ ಇಲ್ಲಿ ಕೊಡಲಾಗಿದೆ.

1. ಚತುರಕ್ಷರ ಶಿವಾಚಾರ್ಯ
2. ಚತುರ್ಮುಖ ಶಿವಾಚಾರ್ಯ
3. ಧೇನುಕರ್ಣ ಶಿವಾಚಾರ್ಯ
4. ಪಂಡಿತಾರಾಧ್ಯ ಶಿವಾಚಾರ್ಯ
5. ಜಗದ್ಗುರು ಸದಾನಂದ ಯೋಗಿ
6. ಜಗದ್ಗುರು ಜಂಗಮ ಮಲ್ಲಿಕಾರ್ಜುನ
7. ಶಂಕರ ಶಿವಾಚಾರ್ಯ
8. ಶ್ರೀಪತಿ ಪಂಡಿತಾರಾಧ್ಯ
9. ಗಜಕರ್ಣ ಶಿವಾಚಾರ್ಯ
10. ಸಂಗಮ ಶಿವಾಚಾರ್ಯ
11. ತ್ರಿರಂಗುಷ್ಟ ಶಿವಾಚಾರ್ಯ
12. ಅವ್ಯಯ ಶಿವಾಚಾರ್ಯ
13. ಕಲ್ಯಾಣ ಪಂಡಿತ ಶಿವಾಚಾರ್ಯ
14. ಮಾಧವ ಶಿವಾಚಾರ್ಯ
15. ಪ್ರಭು ಶಿವಾಚಾರ್ಯ
16. ಗೋಕರ್ಣ ಶಿವಾಚಾರ್ಯ
17. ಮಂಚಣ ಪಂಡಿತಾರಾಧ್ಯ
18. ಸುಕೇಶ ಶಿವಾಚಾರ್ಯ
19. ಮಲ್ಲಿಕಾರ್ಜುನ ಶಿವಾಚಾರ್ಯ
20. ಮಲ್ಲಿಕಾರ್ಜುನ ಪಂಡಿತಾರಾಧ್ಯ
21. ಈಶ್ವರ ಶಿವಾಚಾರ್ಯ
22. ಪಟ್ಟದ ಪ್ರಮಥೇಶ್ವರ ದೇವರು
23. ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ

ಇಂತಹ ಸುಪ್ರಸಿದ್ಧವಾದ ಶ್ರೀಶೈಲ ಸೂರ್ಯಸಿಂಹಾಸನಕ್ಕೆ 1940ನೇ ಇಸ್ವಿಯಲ್ಲಿ ಶ್ರೀ ಜಗದ್ಗುರು ನಾಗಲೂಟಿ ಭಿಕ್ಷಾವೃತ್ತಿ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಶ್ರೀಶೈಲ ಜಗದ್ಗುರು ಪಟ್ಟಾಧಿಕಾರವೂ ಪೀಠಾಧಿಪತ್ಯವೂ ಅನುಗ್ರಹಿಸಲ್ಪಟ್ಟವು. ಅಂದಿನಿಂದ ಇಂದಿನವರೆಗೆ ಮುವತ್ತೆರಡು ವರ್ಷಗಳ ಕಾಲ ಅಖಂಡವಾಗಿ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀಶೈಲ ಕ್ಷೇತ್ರ ಹಾಗೂ ಶ್ರೀಶೈಲ ಜಗದ್ಗುರು ಪೀಠಗಳ ಸರ್ವತೋಮುಖ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಶ್ರೀ ಮಹಾ ಸನ್ನಿಧಿಯವರ ಕಾಲದಲ್ಲಿಯೇ 1956ರಲ್ಲಿ ಶ್ರೀಗಳವರ ವಿಶೇಷ ಪ್ರಯತ್ನದ ಫಲವಾಗಿ ಶ್ರೀಶೈಲಕ್ಕೆ ರಾಜ ಮಾರ್ಗ ಹಾಕಲ್ಪಟ್ಟಿತು. ಅಲ್ಲಿಂದ ಮುಂದೆ ಶ್ರೀಶೈಲದಲ್ಲಿ ಅನೇಕ ಪ್ರವಾಸಿ ಮಂದಿರಗಳು, ಅನ್ನ ಛತ್ರಗಳು ನಿರ್ಮಿಸಲ್ಪಟ್ಟು ಸದ್ಯಃ ಶ್ರೀಶೈಲವು ನಗರವೇ ಆಗಿ ಮಾರ್ಪಟ್ಟಿದೆ. ಶ್ರೀಶೈಲ ಜಲವಿದ್ಯುದ್ಯೋಜನೆಯಿಂದ ಇಡೀ ಆಂಧ್ರ ಪ್ರದೇಶವು ಬೆಳಗಲಿದೆ. ಬಹುಕಾಲದಿಂದ ಖಿಲವಾಗಿದ್ದ ಪಂಡಿತಾರಾಧ್ಯ ಪೀಠದ ಜೀರ್ಣೋದ್ಧಾರ ಕಾರ್ಯವು ಶ್ರೀಗಳವರ ಪ್ರೀತಿಯ ಶಿಷ್ಯರಾದ ಬೆಂಗಳೂರಿನ ಕೈ. ಡಿ. ಯಂ. ಮಲ್ಲಿಕಾರ್ಜುನಪ್ಪನವರ ಮುಖಂಡತ್ವದಲ್ಲಿ ಬೆಂಗಳೂರಿನ ಭಕ್ತಾದಿಗಳಿಂದ ಶ್ರೀ ಮಹಾಸನ್ನಿಧಿಯವರ ಕೃಪಾಶೀರ್ವಾದದಿಂದ ಸಾಂಗಮಂಗಲವಾಗಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಶ್ರೀ ಪೀಠದ ಅಸ್ತಿತ್ವದ ಬಗ್ಗೆ ಸಂದೇಹಗ್ರಸ್ತವಾಗಿದ್ದ ಆಂಧ್ರ ಪ್ರಭುತ್ವವು ಕರ್ನೂಲ್ ಜಿಲ್ಲಾ ನ್ಯಾಯಾಲಯದಲ್ಲಿ ರಾಜೀ ಡಿಕ್ರಿ ಪಡೆಯುವ ಮೂಲಕ ಅನಾದಿಯಿಂದ ಬಂದ ಪಂಡಿತಾರಾಧ್ಯ ಪೀಠದ ಅಸ್ತಿತ್ವವನ್ನು ಒಪ್ಪಿಕೊಂಡು ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಪೀಠಾಧಿಪತ್ಯವನ್ನು ಮಾನ್ಯಮಾಡಿತು. ಹೀಗೆ ಖಿಲವಾಗಿ ಹೋಗಿದ್ದ ಶ್ರೀಶೈಲ ಪೀಠವನ್ನು ಸಂಪೂರ್ಣವಾಗಿ ಉದ್ಧರಿಸಿ ಶಾಶ್ವತಗೊಳಿಸಿದ ಕೀರ್ತಿ ಶ್ರೀ ಮಹಾ ಸನ್ನಿಧಿಯವರ ಮಹಾ ಪಾದಕ್ಕೆ ಸಲ್ಲಬೇಕಾಗಿದೆ. ಅಲ್ಲದೆ ಶ್ರೀಗಳವರು ಶ್ರೀಶೈಲಕ್ಕೆ ನಿತ್ಯವೂ ಬರುವ ಯಾತ್ರಾರ್ಥಿಗಳಿಗೆ ವಸತಿ ಹಾಗೂ ಪ್ರಸಾದ ಸೌಕರ್ಯಕ್ಕಾಗಿ ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ " ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ನಿತ್ಯಾನ್ನದಾನ ಮಂದಿರ " ವನ್ನು ನಿರ್ಮಿಸಿರುತ್ತಾರೆ. ಐದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ " ಶ್ರೀಶೈಲ ಜಗದ್ಗುರು ಯಾತ್ರಾ ನಿವಾಸ "ದ ನಿರ್ಮಾಣ ಕಾರ್ಯ ಭರದಿಂದ ನಡೆಯುತ್ತಿದೆ. ಇದೇ ಪ್ರಕಾರ ಆತ್ಮಕೂರಿನಲ್ಲಿ ಒಂದು ಲಕ್ಷ ರೂಪಾಯಿ ಬೆಲೆಬಾಳುವ ಯಾತ್ರಾ ನಿವಾಸವನ್ನು ಕಟ್ಟಿಸಿ ಯಾತ್ರಾರ್ಥಿಗಳಿಗೆ ಅನುಕೂಲ ಮಾಡಿಸಿರುತ್ತಾರೆ. ಗುಂತಕಲ್ಲಿನಲ್ಲಿ ಖಿಲವಾಗಿದ್ದ ಸಂಸ್ಥಾನ ಮಠವನ್ನು ಒಂದೂವರೆ ಲಕ್ಷ ರೂಪಾಯಿ ವ್ಯಯಮಾಡಿ ಜೀರ್ಣೋದ್ಧಾರಗೊಳಿಸಿದ್ದಾರೆ.

ಸನ್ನಿಧಿಯವರು ವರ ಕವಿಗಳೂ, ಶ್ರೇಷ್ಠ ಲೇಖಕರೂ, ಬಹು ಭಾಷಾ ವಿಶಾರದರೂ ಮತ್ತು ಸಕಲ ಶಾಸ್ತ್ರಗಳಲ್ಲಿ ಪ್ರಕಾಂಡ ಪಾಂಡಿತ್ಯವುಳ್ಳವರೂ ಆಗಿದ್ದಾರೆ. ಶ್ರೀ ಸನ್ನಿಧಿಯವರು ಕರ್ನಾಟಕಾಂಧ್ರ ಮಹಾರಾಷ್ಟ್ರಗಳಲ್ಲಿ ಅವಿಶ್ರಾಂತವಾಗಿ ಸಂಚರಿಸಿ ಧರ್ಮ

ಘೋಷಣೆಯಿಂದ ಶಿಷ್ಯಕೋಟಿಯನ್ನು ಉದ್ಧರಿಸಿದುದಲ್ಲದೆ ಅಲ್ಲಲ್ಲಿ ವಿದ್ಯಾ ಕೇಂದ್ರಗಳನ್ನು ಪ್ರಾರಂಭಿಸಿ, ಜನತೆಯಲ್ಲಿ ವಿದ್ಯಾ ಪ್ರಸಾರವಾಗಲು ಅವಕಾಶ ಕಲ್ಪಿಸಿಕೊಟ್ಟಿರುತ್ತಾರೆ. ಈಗಾಗಲೇ ಶ್ರೀ ಸನ್ನಿಧಿಯವರಿಂದ ಸ್ಥಾಪಿತವಾಗಿರುವ ಗುಂತಕಲ್ಲು ಶ್ರೀ ಜಗದ್ಗುರು ಪಂಡಿತಾರಾಧ್ಯ ಹೈಯರ್ ಸೆಕೆಂಡರಿ ಸ್ಕೂಲು. ಶಿವಮೊಗ್ಗ ಜಿಲ್ಲೆಯ ಸಂತೆಬೆನ್ನೂರು ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಹೈಸ್ಕೂಲು, ಶಿರಾಳ ಕೊಪ್ಪದಲ್ಲಿ ಶ್ರೀಶೈಲ ಜಗದ್ಗುರು ಪಂಚ ಮಠದ ಹಾಸ್ಟಲ್, ಹರಿಹರ ಕ್ಷೇತ್ರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ ಹಾಗೂ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕಾಲೇಜುಗಳು ಚೆನ್ನಾಗಿ ನಡೆಯುತ್ತಿವೆ. ಶ್ರೀಗಳವರು ಹೈದರಾಬಾದಿನಲ್ಲಿ ಅಖಿಲಾಂಧ್ರ ವೀರಶೈವ ಮಹಾ ಸಭೆಯ ಅಧ್ಯಕ್ಷರಾಗಿ ಸಭೆ ಸಮ್ಮೇಲನಗಳನ್ನು ನಡೆಯಿಸಿ ಆಂಧ್ರ ವೀರಶೈವರಲ್ಲಿ ಜಾಗೃತಿಯನ್ನುಂಟುಮಾಡಿದರು..

ತಮ್ಮ ಪಟ್ಟಾಧಿಕಾರದ ರಜತ ಮಹೋತ್ಸವದ ಸಂದರ್ಭದಲ್ಲಿ ಪಂಚಾಚಾರ್ಯ ಸಮ್ಮೇಲನವನ್ನು ಸೇರಿಸಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಸಾಹಿತ್ಯ ಗೋಷ್ಠಿಗಳನ್ನು ಜರುಗಿಸಿ ಭಾಷಾ ಸೌಹಾರ್ದಕ್ಕೆ ಎಡೆಮಾಡಿಕೊಟ್ಟಿರುತ್ತಾರೆ. ಪ್ರತಿ ವರ್ಷವೂ ಶ್ರೀಶೈಲದಲ್ಲಿ ಶ್ರೀಶೈಲ ವೀರಶೈವ ಮಹಾ ಸಭೆಯನ್ನು ನಡೆಯಿಸಿ ಶಿಷ್ಯೋದ್ಧಾರ ಕಾರ್ಯವನ್ನು ಮಾಡುತ್ತಿದ್ದಾರೆ. ಹೀಗೆ ಪ್ರತಿಭಾಸಂಪನ್ನರೂ, ಪ್ರಕಾಂಡ ಪಂಡಿತರೂ, ಅತ್ಯಂತ ದಕ್ಷರೂ ಆದ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಮಹಾ ಸ್ವಾಮಿಗಳನ್ನು ಪಡೆದು ಶ್ರೀಶೈಲ ಪಂಡಿತಾರಾಧ್ಯ ಮಹಾ ಪೀಠವು ಹೆಮ್ಮೆಯಿಂದ ಮೆರೆಯುತ್ತಿದೆ. ಶ್ರೀ ಮಹಾ ಸನ್ನಿಧಿಯವರ ಕಾಲದಲ್ಲಿ ಶ್ರೀಶೈಲ ಪೀಠವು ಇನ್ನೂ ಹೆಚ್ಚಿನ ವೈಭವಾತಿಶಯಗಳನ್ನು ಹೊಂದಿ ಮೆರೆಯಲೆಂದು ಶ್ರೀ ಗಿರಿ ಮಲ್ಲಿನಾಥನಲ್ಲಿ ಪ್ರಾರ್ಥನೆ ಸಲ್ಲಿಸೋಣ!

JAGADGURU VISHWARADHYA
ANA SIMHASAN JNANAMANDIR
LIBRARY
Jangamawadi Math, Varanasi
Acc. No. 7842

ಕರ್ನಾಟಕ ವಿಭೂಷಣ ಆಸ್ಥಾನ ವಿದ್ವಾನ್, ಪಂಡಿತರತ್ನಂ,
ವಿದ್ಯಾವಾರಿಧಿ, ಪದ್ಮಶ್ರೀ

ಬಿ. ಶಿವಮೂರ್ತಿಶಾಸ್ತ್ರಿಗಳಿಂದ

ಸ್ವತಂತ್ರ ಕರ್ನಾಟಕ ಮುದ್ರಣಾಲಯ ಮತ್ತು
ಶರಣ ಸಾಹಿತ್ಯ ಕಾರ್ಯಾಲಯದ ಪರವಾಗಿ

ಜಗದ್ಗುರು ಪಂಚಪೀಠಾಧೀಶ್ವರರ ಮಹೋತ್ಸವಕ್ಕೆ
ನಮ್ಮ ಹಾರ್ದಿಕ ಪ್ರಣಾಮಗಳು

ಶಿವಂಭೂಯಾತ್

ವಿಳಾಸ:
141, ರಂಗಸ್ವಾಮಿಗುಡಿ ಬೀದಿ
ಬೆಂಗಳೂರು 2

ಫೋನ್ 22734

With best compliments from :

RAVISH SYNTHETIC TWINES & ROPES (P) LIMITED

B-70, INDUSTRIAL ESTATE, RAJAJINAGAR, BANGALORE-44

Manufacturers of :

**Twines and Ropes out of High Density Polythelene.
under Japanese Technical know-how.**

Telegram : FIBREROPES *Telephone :* 8301

ಪಂಚ ಪೀಠಾಧೀಶ್ವರರಿಗೆ ನಮ್ಮ ಪ್ರಣಾಮಗಳು

ಜಿ. ಎಸ್. ರಾಜು ಬೀಡೀಸ್ (ರಿ.)

ಕ್ರಿಶ್ಚಿಯನ್ ಸ್ಟ್ರೀಟ್ : : ತುಮಕೂರು

(ಮೈಸೂರು ರಾಜ್ಯ)

If it's really leakproof it must be Crompton's

ANNOUNCEMENT

WE HAVE BEEN APPOINTED AS STOCKISTS FOR 'CROMPTON'S ALL PURPOSE DRY CELL BATTRIES' FOR BANGALORE.

M\s. C. J. SHETH & CO.
(BANGALORE)

J-33, AVENUE ROAD CROSS, BANGALORE-2A

PHONES : OFFICE : 70218
RESIDENCE : 72917

Our Pranamams to Pancha Peethadhipatis

*

B. L. S. MURTHY
T. C. NAGAPPA CHETTIAR

ONION, GARLIC, POTATO MERCHANTS & COMMISSION AGENTS

●

76, 2nd MAIN ROAD, NEW THARAGUPET, BANGALORE-2

GRAMS : YERRAGADDA

PHONE : OFFICE : 24831
RESI. : 52808

Our Regards to
Jagadguru Pancha Peethadhipatis
Who Invoke Peace and Prosperity to the
Suffering Humanity.

Quality Printers and Suppliers of Display
Boards, Banners & Other Publicity requisites,
Plastic Files, Folders etc.

Phones : 22965

BRINDAVAN PRINTERS AND PUBLISHERS (P.) LIMITED

12/13, Lalbagh Fort Road, BANGALORE-4

ಪ್ರಾತಃಸ್ಮರಣೀಯರಾದ ಪಂಚಪೀಠಾಧೀಶ್ವರರಿಗೆ
ಪ್ರಣಾಮಗಳು

ಪ್ರೈವೇಟಿನಲ್ಲಿ ಪರೀಕ್ಷೆಗಳು

ಎಸ್. ಎಸ್. ಎಲ್. ಸಿ.

18 ವರ್ಷ ತುಂಬಿರುವ ಸ್ತ್ರೀ ಪುರುಷರೆಲ್ಲ
ಈಗ ಪ್ರೈವೇಟಿನಲ್ಲಿ S. S. L. C.
ಪರೀಕ್ಷೆಗೆ ಕುಳಿತುಕೊಳ್ಳಬಹುದು.
ಅಂಚೆ ಮೂಲಕವೂ ಶಿಕ್ಷಣ
ವಿವರಣಾ ಪತ್ರಕ್ಕೆ ರೂ. 1-25
M. O. ಮಾಡಿ



ಡಾ. ಶಿವಕುಮಾರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ 1969ರಲ್ಲಿ ಮುಖ್ಯಮಂತ್ರಿ ಶ್ರೀ. ವೀರೇಂದ್ರ ಪಾಟೀಲರು I.A.S. ತರಬೇತಿ ತರಗತಿಗಳನ್ನು ಆರಂಭಿಸಿದಾಗ ತೆಗೆದ ಚಿತ್ರ.

ಬೆಸ್ಟ್ ಇನ್‌ಸ್ಟಿಟ್ಯೂಟ್

ರಾಜ್ಯದ ಕನ್ನಡ ಹೆಸರಾಂತ ಟ್ಯುಟೋರಿಯಲ್ ಕಾಲೇಜು

S.S.I..C. ಇಂದ ಪದವಿ ಪರೀಕ್ಷೆಗಳು. A.M.I.E. ಡಿಪ್ಲೊಮಾ B.A., M.A.. External ತರಗತಿಗಳು.
I.A.S., I.P.S.ಗೆ ತರಪೇತಿ ನೀಡಲಾಗುವುದು. ಪ್ರತಿ ಪ್ರಾಸ್‌ಪೆಕ್ಟಸ್‌ಗೂ ರೂ. 2 M.O. ಮಾಡಿ.

'S.S.L.C. ವಿಜಯ' ರಾಜ್ಯದ S.S.L.C. ವಿದ್ಯಾರ್ಥಿಗಳ ಪತ್ರಿಕೆ
ಕನ್ನಡ ಇಂಗ್ಲೀಷ್ ಮಾಧ್ಯಮದಲ್ಲಿ ಪ್ರಕಟಣೆ --- ವಾರ್ಷಿಕ ಚಂದಾ ರೂ. 15 ಮಾತ್ರ

ಚಂದಾದಾರರೆಲ್ಲರೂ ರೂ. 1.000 ರೂ.ಗಳ ವಿವಿಧ ಮೊತ್ತದ ಬಹುಮಾನ ಯೋಜನೆಗೆ ಅರ್ಹರು

ಪ್ರಿನ್ಸಿಪಾಲ್
ಎಂ. ವಿ. ಗುರುಬಸಪ್ಪ ಶೆಟ್ಟಿ

ನಂ. 2634,
ಪ್ರಶಾಂತ ಕೃಪ
ಸೌತ್‌ಎಂಡ್ ರಸ್ತೆ,
ಬೆಂಗಳೂರು–20
ಫೋನ್ : 70236

ಅಧ್ಯಕ್ಷರು : ಕರ್ನಾಟಕ ಸಣ್ಣ ಪತ್ರಿಕೆಗಳ ಸಂಘ [ರಿ.]
ಡೈರೆಕ್ಟರ್ : ಬೆಂಗಳೂರು ಅರ್ಬನ್ ಕೈಗಾರಿಕಾ ಸಹಕಾರ ಸಂಘ ಲಿ.
,, : ಈಶ್ವರ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.
ಕಾರ್ಯದರ್ಶಿ : ನಳಂದ ವಿದ್ಯಾಸಂಸ್ಥೆ [ರಿ.]
ಪ್ರೊಪ್ರೈಟರ್ : ಮಲ್ನಾಡ್ ಪ್ರಿಂಟರ್ಸ್, ಬೆಂಗಳೂರು.

ಸ್ಥಾಪನೆ: 1927 ರಿ. ನಂ. 1468 ಫೋನ್: 22230

ದಿ ಗ್ರೈನ್ ಮರ್ಚೆಂಟ್ಸ್ ಕೊ-ಆಪರೇಟೀವ್ ಬ್ಯಾಂಕ್ ಲಿಮಿಟೆಡ್

ರಿ. ಆಫೀಸ್
ಪಂಪಮಹಾಕವಿ ರಸ್ತೆ,
ಬೆಂಗಳೂರು-18

ಬ್ರಾಂಚ್ ಆಫೀಸ್
254, ಅಕ್ಕಿಂ ಬಿಲ್ಡಿಂಗ್ಸ್, ಹಳೇ ತರಗುಪೇಟೆ,
ಬೆಂಗಳೂರು-2

ತಾರೀಖು 6-12-1971ರಲ್ಲಿಇದ್ದಂತೆ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿ ವಿವರ,

ಷೇರು ಬಂಡವಾಳ	ರೂ. 25,00,000	ಡಿಪಾಸಿಟ್‌ಗಳು	ರೂ. 44.46.503
ವಸೂಲಾಗಿರುವ ಷೇರು ಮತ್ತು ಮೊಬಲಗು	ರೂ. 7,77,320	ಬರಬೇಕಾದ ಸಾಲಗಳು	ರೂ. 48.97.460
ಇನ್‌ವೆಸ್ಟ್‌ಮೆಂಟ್‌ಗಳು	ರೂ. 13,63,430	ವ್ಯವಹಾರದಲ್ಲಿರುವ ಮೊಬಲಗು	ರೂ. 66.54.623
ರಿಜರ್ವ್‌ಫಂಡು	ರೂ, 8,37,682	ನಿವ್ವಳ ನಫೆ (70-71)	ರೂ. 1.06.5

ಫಿಕ್ಸೆಡ್ ಡಿಪಾಜಿಟ್‌ಗಳಮೇಲೆ 90 ದಿನಗಳಿಂದ 8 ವರ್ಷಗಳ ಅವಧಿವರೆಗೆ ಶೇಕಡ 5½ ಯಿಂದ ಶೇ 8 ರವರೆಗೂ ಮತ್ತು ಈ ದರಗಳಮೇಲೆ, ಮೈನರ್‌ಡಿಪಾಜಿಟ್ ಮತ್ತು ಧರ್ಮಸಂಸ್ಥೆಗಳ ಡಿಪಾಜಿಟ್‌ಗಳ ಮೇಲೆ ಹೆಚ್ಚುವರಿ ಶೇ. 1% ಬಡ್ಡಿ ಸಹಕೊಡಲಾಗುತ್ತದೆ.

ಇತರ ಷೆಡ್ಯೂಲ್ ಮತ್ತು ಜಾಯಿಂಟ್‌ಸ್ಟಾಕ್ ಬ್ಯಾಂಕುಗಳ ರೀತಿಯಲ್ಲಿ ಎಲ್ಲಾ ಬ್ಯಾಂಕಿಂಗ್ ಸೌಲಭ್ಯಗಳು ದೊರೆಯುತ್ತವೆ. ಈ ಬ್ಯಾಂಕಿನಲ್ಲಿ ಸೇವಿಂಗ್ಸ್, ಕರೆಂಟ್, ಫಿಕ್ಸೆಡ್ ಮತ್ತು ಗ್ರೈನ್ ಡಿಪಾಜಿಟ್‌ಗಳ ಇನ್‌ಷೂರೆನ್ಸ್ ಪ್ರಿಮಿಯಂ ಸ್ಕೀಮ್, ಮತ್ತು ಸೇಫ್‌ಲಾಕರ್ಸ್ ಸೌಲಭ್ಯಗಳು ಇವೆ.

ಮೆಂಬರುಗಳ ಸೌಕರ್ಯಕ್ಕಾಗಿ ವಿಶೇಷ ಆಕರ್ಷಣಾಪೂರ್ವಕ ತ್ರಿಫ್ಟ್ ಡಿಪಾಜಿಟ್ ಯೋಜನೆ ಜಾರಿಯಲ್ಲಿರುತ್ತೆ.

ಹೆಚ್ಚಿನ ವಿವರಗಳನ್ನು ಬ್ಯಾಂಕಿನ ಕಛೇರಿಯಲ್ಲಿ ತಿಳಿದುಕೊಳ್ಳಬಹುದು

ಯಂ. ಕಸ್ತೂರಿರಂಗಶೆಟ್ಟಿಯವರು
ಅಧ್ಯಕ್ಷರು
ಬಿ. ಎಸ್. ಕೃಷ್ಣಮೂರ್ತಿಯವರು
ಮ್ಯಾನೇಜರು
ಬಿ. ಎಲ್. ಯೋಗಾನರಸಿಂಹಯ್ಯನವರು
ಬ್ರಾಂಚ್ ಮ್ಯಾನೇಜರ್

ಕೆ. ಗಂಗಶೆಟ್ಟಿಯವರು
ಉಪಾಧ್ಯಕ್ಷರು
ವಿ. ಅಯೋಧ್ಯರಾಮನ್‌ರವರು
ಎನ್. ಸಿ. ಸಿದ್ದಲಿಂಗಪ್ಪನವರು
ಗೌ॥ ಕಾರ್ಯದರ್ಶಿಗಳು
ಎ. ಆರ್. ಶಿವಣ್ಣನವರು
ಗೌ॥ ಖಜಾಂಚಿಗಳು

ಬೋರ್ಡ್ ಆಫ್ ಡೈರೆಕ್ಟರ್ಸ

1. ಯಂ. ಕಸ್ತೂರಿರಂಗಶೆಟ್ಟಿಯವರು
2. ಕೆ. ಗಂಗಶೆಟ್ಟಿಯವರು
3. ವಿ. ಅಯೋಧ್ಯರಾಮನ್‌ರವರು
4. ಎನ್. ಸಿ. ಸಿದ್ದಲಿಂಗಪ್ಪನವರು
5. ಎ. ಆರ್. ಶಿವಣ್ಣನವರು
6. ಯಂ. ರಾಮರೆಡ್ಡಿಯವರು
7. ಬಿ. ಪಿ. ನಂಜಪ್ಪನವರು
8. ಟಿ. ಎಂ. ಶಿವಣ್ಣನವರು
9. ಆರ್. ಅಚ್ಯುತರಾವ್‌ಸಿಂಧೆಯವರು
10. ಎನ್. ವೆಂಕಟೇಶಯ್ಯನವರು
11. ಜಿ. ಆರ್. ಶ್ರೀಕಂಠಪ್ಪನವರು
12. ಎಂ. ವೆಂಕಟಸ್ವಾಮಿರೆಡ್ಡಿಯವರು
13. ಎನ್. ಆರ್. ರೇಣುಕಾರಾಧ್ಯರವರು
14. ಬಿ. ಆರ್. ರೇಣುಕಾರವರು
15. ಎಂ. ಆರ್. ತಿರುವೆಂಗಡತ್ತಾನ್‌ಚೆಟ್ಟಿಯವರು

built for enduring service...
by BANGALORE BODY BUILDERS

LIGHT STURDY BUSES
WAGONS AND VANS

Bangalore Body Builders have the finest bus-body building facilities in Bangalore... have supplied a wide variety of vehicles to transport undertakings, government departments, institutions and hospitals. Buses are extremely light, have easier manoeuvrability... mean extra passenger comfort.

BANGALORE BODY BUILDERS
ಬೆಂಗಳೂರು ಬಾಡಿ ಬಿಲ್ಡರ್ಸ್
1ST MAIN ROAD, CHAMARAJAPET,
BANGALORE-18 PHONE: 24062

BBB

SPECIALISTS IN·LUXURY
BUS BODY BUILDING



Edited and Published by M. V. Gurubasappa Setty on behalf of Sri Jagadguru Pancha Peethadhipatis Addapalaki Mahothsava Reception Committee and Printed by Sri M. H. Kaujalgi at Brindavan Printers & Publishers Private Limited, Bangalore-4